ಅಲಕ್ಷಿತರ ಮಠಗಳ ಸಂಕಥನ

(ಕನ್ನಡ ವಿಶ್ವವಿದ್ಯಾಲಯ, ಹಂಪಿ, ಜಾನಪದ ಅಧ್ಯಯನ ವಿಭಾಗಕ್ಕೆ ಪಿಎಚ್.ಡಿ.
ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕ
ಕೆ. ಹನುಮಂತಪ್ಪ

ಮಾರ್ಗದರ್ಶಕರು
ಡಾ. ಮಂಜುನಾಥ ಬೇವಿನಕಟ್ಟಿ
ಪ್ರಾಧ್ಯಾಪಕರು ಹಾಗೂ ಡೀನ್
ಸಮಾಜ ವಿಜ್ಞಾನಗಳ ನಿಕಾಯ
ಜಾನಪದ ಅಧ್ಯಯನ ವಿಭಾಗ

ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೬

ಅಲಕ್ಷಿತರ ಮಠಗಳ ಸಂಕಥನ

(ಕನ್ನಡ ವಿಶ್ವವಿದ್ಯಾಲಯ, ಹಂಪಿ, ಜಾನಪದ ಅಧ್ಯಯನ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕ
ಕೆ. ಹನುಮಂತಪ್ಪ

ಮಾರ್ಗದರ್ಶಕರು
ಡಾ. ಮಂಜುನಾಥ ಬೇವಿನಕಟ್ಟಿ
ಪ್ರಾಧ್ಯಾಪಕರು ಹಾಗೂ ಡೀನ್
ಸಮಾಜ ವಿಜ್ಞಾನಗಳ ನಿಕಾಯ
ಜಾನಪದ ಅಧ್ಯಯನ ವಿಭಾಗ

ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬
2016

ಮಾರ್ಗದರ್ಶಕರ ದೃಢೀಕರಣ ಪತ್ರ

ಕೆ. ಹನುಮಂತಪ್ಪ ಇವರು ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ **'ಅಲಕ್ಷಿತರ ಮಠಗಳ ಸಂಕಥನ'** ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಜಾನಪದ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ.

ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿ ಹಾಗೂ ಇತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

(ಡಾ.ಮಂಜುನಾಥ ಬೇವಿನಕಟ್ಟಿ)
ಪ್ರಾಧ್ಯಾಪಕರು ಹಾಗೂ ಡೀನ್
ಸಮಾಜ ವಿಜ್ಞಾನಗಳ ನಿಕಾಯ
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩೨೭೬

ದಿನಾಂಕ: 12-೧೦-೨೦೧೬
ಸ್ಥಳ: ವಿದ್ಯಾರಣ್ಯ

ಸಂಶೋಧಕರ ಪ್ರಮಾಣ ಪತ್ರ

'ಅಲಕ್ಷಿತರ ಮತಗಳ ಸಂಕಥನ' ಎಂಬ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಜಾನಪದ ಅಧ್ಯಯನ ವಿಭಾಗದ ಪ್ರಾಧ್ಯಾಪಕರು ಹಾಗೂ ಸಮಾಜ ವಿಜ್ಞಾನಗಳ ನಿಕಾಯದ ಡೀನರೂ ಆದ ಡಾ. ಮಂಜುನಾಥ ಬೇವಿನಕಟ್ಟಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ.

ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿ ಮತ್ತು ಇತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸಂಶೋಧಕ

(ಕೆ. ಹನುಮಂತಪ್ಪ)
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

ದಿನಾಂಕ: ೬-೧೦-೨೦೧೬
ಸ್ಥಳ: ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ: ಒಂದು ೧-೧೫

೧. ಪೀಠಿಕೆ

೨. ಅಧ್ಯಯನದ ಉದ್ದೇಶ

೩. ಅಧ್ಯಯನದ ಮಹತ್ವ

೪. ಅಧ್ಯಯನದ ವಿಧಾನ ಮತ್ತು ವ್ಯಾಪ್ತಿ

೫. ಅಧ್ಯಯನದ ಸ್ವರೂಪ

ಅಧ್ಯಾಯ: ಎರಡು ೧೬-೫೯

ಅಲಕ್ಷಿತರು

೧. ಪ್ರಸ್ತಾವನೆ

೨. ಭಾರತೀಯ ವರ್ಣ ವ್ಯವಸ್ಥೆ ಸ್ವರೂಪ

೩. ಅಲಕ್ಷಿತರು; ಪರಿಕಲ್ಪನೆ ಮತ್ತು ವಿಶ್ಲೇಷಣೆ

೪. ಅಲಕ್ಷಿತರ ಸಮುದಾಯಗಳು: ಸಮಸ್ಯೆ-ಸವಾಲುಗಳು

೫. ಅಲಕ್ಷಿತರ ಸಮುದಾಯಗಳು ಮತ್ತು ಸಾಮಾಜಿಕ ಚಿಂತನೆ

ಅಧ್ಯಾಯ: ಮೂರು ೬೦-೮೧

ಮಠಗಳು: ಸಾಂಸ್ಕೃತಿಕ ಪರಂಪರೆ

೧. ಮಠಗಳ ಪ್ರಾಚೀನತೆ

೨. ಮಠಗಳ ಸ್ವರೂಪ

೩. ಮಠಗಳ ಕರ್ತವ್ಯ

ಅಧ್ಯಾಯ: ನಾಲ್ಕು ೮೨-೯೫

ಅಲಕ್ಷಿತರ ಮಠಗಳ ಸ್ಥಾಪನಾ ಪ್ರೇರಕಗಳು

ಅಧ್ಯಾಯ: ಐದು ೯೬-೧೫೧

ಅಲಕ್ಷಿತರ ಮಠಗಳು: ಒಂದು ನೋಟ

೧. ವಾಲ್ಮೀಕಿ ಪೀಠ

೨. ಬಂಜಾರ ಮಹಾಸಂಸ್ಥಾನ

೩. ಮಾದಾರ ಚನ್ನಯ್ಯ ಮಠ
೪. ಆದಿಜಾಂಬವ ಮಠ
೫. ಶ್ರೀಕೃಷ್ಣಯಾದವಾನಂದ ಮಠ
೬. ಸಿದ್ಧರಾಮೇಶ್ವರ ಭೋವಿ ಗುರುಪೀಠ
೭. ಛಲವಾದಿ ಪೀಠ
೮. ಶರಣ ಹರಳಯ್ಯ ಗುರುಪೀಠ
೯. ಚಿನ್ಮೂಲಾದ್ರಿ ಶಿಲಾಪುರಿ ಮಹಾಸಂಸ್ಥಾನ, ಭಗೀರಥ ಪೀಠ
೧೦. ಕನಕ ಗುರು ಪೀಠ

ಅಧ್ಯಾಯ ಆರು ೧೫೨-೧೬೮

ಜನಪದರು ಮತ್ತು ಮಠಗಳು

ಅಧ್ಯಾಯ: ಏಳು ೧೬೯-೧೯೮

ಅಲಕ್ಷಿತರ ಮಠಗಳ ಮುಂದಿನ ಸಮಸ್ಯೆ, ಸವಾಲು ಹಾಗೂ ಮುಂದೇನು
೧. ಅಸ್ತಿತ್ವದ ಸಮಸ್ಯೆ ಮತ್ತು ಅಸ್ತಿತ್ವದ ಪ್ರಶ್ನೆ
೨. ಉನ್ನತ ವರ್ಗಗಳ ಮಠಗಳೊಂದಿಗೆ ಪೈಪೋಟಿ
೩. ಆರ್ಥಿಕ ಸಮಸ್ಯೆ ಅಥವಾ ಆದಾಯದ ಮೂಲಗಳ ಕೊರತೆ
೪. ಮೂಲ ಸಾಂಸ್ಕೃತಿಕ ಪರಂಪರೆ ಮತ್ತು ಮಠದೊಂದಿಗಿನ ಸಂಘರ್ಷ
೫. ಮಠಾಧಿಪತಿಗಳ ಐಷಾರಾಮಿ ಜೀವನ ಕ್ರಮ
೬. ಮೂಲಭೂತವಾದಿ ನೆಲೆ ಹಾಗೂ ಸಂಘ ಪರಿವಾರಗಳಿಂದ ಬಿಡುಗಡೆಗೊಳ್ಳಬೇಕಾದ ಅಗತ್ಯತೆ
೭. ಮುಂದೇನು

ಅಧ್ಯಾಯ: ಎಂಟು ೧೯೯-೨೦೭

ಸಮಾರೋಪ

ಅನುಬಂಧಗಳು ೨೦೮-೨೧೬

ಪರಾಮರ್ಶನ ಗ್ರಂಥಗಳು
ವಕ್ತೃ ವಿವರಗಳು

ಅಧ್ಯಾಯ: ಒಂದು

೧. ಪೀಠಿಕೆ
೨. ಅಧ್ಯಯನದ ಉದ್ದೇಶ
೩. ಅಧ್ಯಯನದ ಮಹತ್ವ
೪. ಅಧ್ಯಯನದ ವಿಧಾನ ಮತ್ತು ವ್ಯಾಪ್ತಿ
೫. ಅಧ್ಯಯನದ ಸ್ವರೂಪ
೬. ಅಧ್ಯಯನದ ಸಮೀಕ್ಷೆ

ಅಧ್ಯಾಯ: ಒಂದು

ಅಧ್ಯಯನದ ಉದ್ದೇಶ, ಮಹತ್ವ, ವಿಧಾನ ಮತ್ತು ವ್ಯಾಪ್ತಿ

೧. ಪೀಠಿಕೆ

ಜೀವಿಯ ವಿಕಾಸಕ್ಕೆ ತಕ್ಕ ಪರಿಸರ ಅವಶ್ಯಕ. ತಕ್ಕ ಪರಿಸರದ ಕಾರಣದಿಂದಾಗಿ ಹಲವು ಕೋಟಿ ವರ್ಷಗಳ ಹಿಂದೆಯೇ ಈ ಭೂಮಿಯ ಮೇಲೆ ಜೀವಿಗಳ ವಿಕಸನದ ವಾತಾವರಣ ನಿರ್ಮಾಣಗೊಂಡಿತು. ಇಂತಹ ಪರಿಸರದಿಂದಾಗಿ ಜೀವಿಗಳು ಜನ್ಮತಾಳಿ ಪರಿಸರಕ್ಕೆ ತಕ್ಕಂತೆ ವಿಕಸಿಸುತ್ತ ನಡೆದವು. ಭೂಮಿ, ಗಾಳಿ, ಬೆಳಕು, ನೀರು ಇತ್ಯಾದಿಗಳನ್ನು ಅವಲಂಬಿತ ಜೀವ ಜಂತುಗಳು, ಕ್ರಿಮಿಕೀಟಗಳು, ಅವುಗಳನ್ನು ಆವಲಂಬಿತ ಪ್ರಾಣಿ ಪಕ್ಷಿಗಳು ಹುಟ್ಟಿಕೊಂಡವು. ಒಂದು ಇನ್ನೊಂದಕ್ಕಾಗಿ ಹುಟ್ಟಿತ್ತು ಅಥವಾ ಒಂದು ಇನ್ನೊಂದನ್ನು ಪರಸ್ಪರ ಅವಲಂಬಿಸಿತು ಎನ್ನಬಹುದು. ಯಾವುದೇ ಒಂದು ಸಸ್ಯ, ಕ್ರಿಮಿಕೀಟವು, ಪ್ರಾಣಿಪಕ್ಷಿ ಇತ್ಯಾದಿಗಳು ಜೀವತಳೆದು ಅಭಿವೃದ್ಧಿ ಹೊಂದಬೇಕಾದರೆ ಅದರ ಬದುಕಿಗೆ ಬೇಕಾಗಿರುವ ಉತ್ತಮ ಪರಿಸರ ಮತ್ತು ಆಹಾರ ಮೊದಲೆ ಸೃಷ್ಟಿಗೊಂಡಿರಲೇಬೇಕು. ಮಾನವ ಬದುಕಿಗೆ ಬೇಕಾದ ವಾತಾವರಣ ನಿರ್ಮಾಣವಾದ ಮೇಲೆಯೇ ಮಾನವನ ವಿಕಾಸವಾಗಿದೆ. ಇಂತಹ ಜೀವ ವಿಕಸನದ ಪಥದಲ್ಲಿ ಹಲವು ಕೋಟಿ ವರ್ಷಗಳ ನಡಿಗೆಯ ಫಲಿತವೇ ಮಾನವನ ಪೂರ್ಣ ಶುದ್ಧ ಭೌತಿಕ ದೇಹದ ಆಕೃತಿಯ ನಿರ್ಮಾಣ. ಅಲ್ಲಿಂದ ಮಾನವನ ಭೌತಿಕ ಸೂಕ್ಷ್ಮ ಬದಲಾವಣೆಯೂ ಆದದ್ದು ವಿಸ್ಮಯ.

ಆದಿಮಾನವರು ಹಣ್ಣು ಹಂಪಲು ಮತ್ತು ಪಕ್ಷಿಗಳ ಮೊಟ್ಟೆಗಳನ್ನು ಸಂಗ್ರಹಿಸುತ್ತಿದ್ದರು. ಗೆಡ್ಡೆ ಗೆಣಸುಗಳನ್ನು ತಿನ್ನುವ ಮೂಲಕ, ಗಿಡಗಳ ಮತ್ತು ಕಲ್ಲು ಬಂಡೆಗಳ ಆಶ್ರಯದಲ್ಲಿ ಬದುಕುತ್ತಿದ್ದರು. ಸಣ್ಣ ಪ್ರಾಣಿಗಳನ್ನು ಕೋಲುಗಳಿಂದ ಮತ್ತು ಕೈಗೊಡ್ಲಿಗಳ ಸಹಾಯದಿಂದ ಕೊಲ್ಲುವ ಮೂಲಕವೂ ಆಹಾರವನ್ನು ಸಂಗ್ರಹಿಸುತ್ತಿದ್ದರು. ಕಾಲಕಾಲಕ್ಕೆ ಸಿಗುವ ಹಣ್ಣು ಹಂಪಲು, ಗೆಡ್ಡೆ ಗೆಣಸು, ಪ್ರಾಣಿ, ಪಕ್ಷಿಗಳನ್ನು ತಿನ್ನುತ್ತ ಕಾಲಕ್ಕೆ ತಕ್ಕಂತೆ ಜೀವನ ರೂಢಿಸಿಕೊಂಡ. ಅತಿವೃಷ್ಟಿ, ಅನಾವೃಷ್ಟಿ

ಇತ್ಯಾದಿ ಪ್ರಕೃತಿ ವಿಕೋಪಗಳಿಂದ ತಪ್ಪಿಸಿಕೊಳ್ಳಲು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ವಲಸೆ ಹೋಗಿ ಅಲ್ಲಿಯ ಪ್ರಕೃತಿಗೆ ತಕ್ಕಂತೆ ಬದುಕಿದ. ಜೊತೆಗೆ ಆದಿಮಾನವನು ಬೇಟೆಯಾಡಲು ಹಲವಾರು ತಂತ್ರಗಳನ್ನು ಕಂಡುಕೊಂಡನು. ಆದಿಮಾನವನಿಗೆ ಬೇಟೆಗಾರಿಕೆಯೇ ಜೀವನೋಪಾಯವಾಗಿತ್ತು. ಅದುವೆ ಆತನ ಮೂಲ ಕಸುಬಾಗಿತ್ತು.

ಬೇಟೆಗಾಗಿಯೇ ಇಡೀ ಜೀವನ ಸವೆಸುತ್ತಿದ್ದ. ಕೆಲವೊಮ್ಮೆ ಕ್ರೂರ ಪ್ರಾಣಿಗಳಿಗೆ ಬಲಿಯಾಗುತ್ತಿದ್ದ, ಕೊನೆಗೂ ಆತ ಸಾಕು ಪ್ರಾಣಿಗಳನ್ನು ಕಂಡುಕೊಂಡು, ಅವುಗಳನ್ನು ಪಳಗಿಸಿ, ಸಾಕುವ ಮೂಲಕ ಪಶುಪಾಲಕನಾದ. ಪಶುಪಾಲನೆ ಅವನ ಎರಡನೇ ಕಸುಬಾಯಿತು. ಈ ಪ್ರಾಣಿಗಳ ಪಶುಪಾಲನೆ ಸರಳ ಹಾಗೂ ಹೆಚ್ಚಿನ ಲಾಭದಾಯಕವಾಗಿತ್ತು. ಆದಿಮಾನವ ಹಲವಾರು ವರ್ಷಗಳ ಕಾಲ ಈ ಹಂತದಲ್ಲಿಯೇ ಮುಂದುವರಿದ.

ಪಶುಪಾಲನೆಯ ಮುಂದಿನ ಹಂತವೇ ಕೃಷಿ. ಪಶುಪಾಲನೆಯಲ್ಲಿಯ ತೊಡಕುಗಳನ್ನು ಕೃಷಿಯಲ್ಲಿ ಪರಿಹರಿಸಿಕೊಂಡರು. ಮುಂದೆ ಪಶುಪಾಲಕರಲ್ಲಿಯ ಹಲವರು ಕೃಷಿಕರಾದರು. ಕೃಷಿಗೆ ಮೂಲ ಭೂಮಿ. ಅದು ಚಲನಶೀಲವಲ್ಲ. ಪಶುಪಾಲನೆಯಿಂದ ಕೃಷಿಗೆ ಕೂಡಿಕೊಂಡ ನಂತರ ಅಲೆಮಾರಿತನವು ಅಲ್ಲಿಗೆ ಸ್ಥಗಿತಗೊಂಡಿತು. ಕೃಷಿಗಾಗಿ ಕೃಷಿ ಭೂಮಿಯ ಹತ್ತಿರವೇ ನೆಲೆ ಊರಿದರು. ಮೂಲ ಸ್ವರೂಪದ ಅಲೆಮಾರಿ ಜೀವನಕ್ಕೆ ವಿದಾಯ ಹೇಳಿದರು. ನೆಲೆ ಊರಿದ ಸ್ಥಳಗಳು ಊರುಗಳಾದವು. ಊರು ಅಥವಾ ಗ್ರಾಮ ಸ್ವಯಂ ಪರಿಪೂರ್ಣ ಘಟಕಗಳಾಗಲು, ಕೃಷಿಗೆ ಬೇಕಾದ ಎಲ್ಲಾ ಪೂರಕ ಸಾಧನ ಅಂಶಗಳನ್ನು ಪೂರೈಸಲು ಕುಶಲಕರ್ಮಿಗಳು ಬೇಕಾದರು. ತಮಗೆ ಯೋಗ್ಯವೆನಿಸಿದನ್ನು ಮತ್ತು ಸಾಧ್ಯವಾಗಿರುವುದನ್ನು ತಯಾರಿಸಲಾರಂಭಿಸಿದರು. ಅವರ ಕುಟುಂಬ ಅದೇ ಕಸುಬನ್ನು ಮುಂದುವರೆಸಿದಂತೆ ಅದರಲ್ಲಿ ಕುಶಲತೆ ಕಂಡುಕೊಂಡರು.

ಇಂತಹ ಜೀವ ವಿಕಸನದ ಪಥದಲ್ಲಿ ಹಲವು ಕೋಟಿ ವರ್ಷಗಳ ನಡಿಗೆಯ ಫಲಿತವೇ ಮಾನವನ ಪೂರ್ಣಶುದ್ಧ ಭೌತಿಕ ದೇಹದ ಆಕೃತಿಯ ನಿರ್ಮಾಣ. ಅಲ್ಲಿಂದ ಮಾನವನಲ್ಲಿರುವ ಕುಶಲತೆಯಿಂದಾಗಿ ಭೌತಿಕಸೂಕ್ಷ್ಮ ಬದಲಾವಣೆಯ ಜೊತೆಗೆ ಬೌದ್ಧಿಕ ಬದಲಾವಣೆ ಆದದ್ದು ವಿಸ್ಮಯ. ಕಾಲಾನಂತರದಲ್ಲಿ ನಾಗರಿಕನಾಗುತ್ತಾ ಸಾಗಿದ ಮಾನವನಿಗೆ ಈ ಸಾಮಾಜಿಕ ಬದುಕಿನ ಸುಖ ಮತ್ತು ನೆಮ್ಮದಿ ಪ್ರಮುಖವೆನಿಸುತ್ತವೆ. ಇಂತಹ ಸುಖವನ್ನು ಲಭ್ಯವಿರುವ ಸೌಲಭ್ಯಗಳನ್ನು ಬಳಸಿಕೊಂಡು ಭೋಗಿಸಿ ಪಡೆಯುವುದಾದರೆ, ನೆಮ್ಮದಿ ಸಂಬಂಧಗಳಿಂದ ಸೃಷ್ಟಿಯಾಗುವ ಯಾದೃಚ್ಛಿಕ ಅನುಭವವಾಗಿದೆ. ಮಾನವನು ತನ್ನ ಬದುಕನ್ನು ಕಟ್ಟಿಕೊಳ್ಳುವ

ಮತ್ತು ಅನುಭವಿಸುವ ಸಾಮಾಜಿಕ ಕೌಶಲ್ಯದಿಂದಾಗಿ ನೆಮ್ಮದಿಯನ್ನು ಕಂಡುಕೊಳ್ಳತೊಡಗಿದ. ಇಲ್ಲಿ ಕೌಟುಂಬಿಕ ಸಂಬಂಧಗಳಲ್ಲಿ ದೇವರು, ದೈವ, ಆಚರಣೆಗಳು, ನಂಬಿಕೆ ಮತ್ತು ನಿಷೇಧಗಳು ಈತನ ಇಡೀ ಬದುಕಿಗೆ ಒಂದು ಸೈದ್ಧಾಂತಿಕ ಚೌಕಟ್ಟನ್ನು ನಿರ್ಮಿಸಿದವು. ಇಂತಹ ಬದುಕಿನ ಚೌಕಟ್ಟಿನಾಚೆ ತಮ್ಮನ್ನು ವಿಸ್ತರಿಸಿಕೊಂಡು ಹೆಚ್ಚಿನ ನೆಮ್ಮದಿ ಮತ್ತು ಸಾಮಾಜಿಕ ಸ್ಥಾನ ಹಾಗೂ ಸಂರಕ್ಷಣೆಯನ್ನು ಪಡೆಯಲು ಅಪೇಕ್ಷಿಸಿದ. ಈ ಅಪೇಕ್ಷಿತ ಪಯಣದ ಒಂದು ಹಂತವಾಗಿ ಹಿಂದೂಗಳ ಆಧ್ಯಾತ್ಮದ ಇತ್ತೀಚಿನ ಅತ್ಯಂತ ಉದಾತ್ತ ಬೆಳವಣಿಗೆಯಾದ ಸಂಸ್ಥೆಯೇ ಆಶ್ರಮ-ಸಂನ್ಯಾಸಿಗಳ ತಾಣ. ಪ್ರಾಪಂಚಿಕ ಆಸೆಗಳನ್ನು ತ್ಯಜಿಸಿ ದೈವ ಸಾಕ್ಷಾತ್ಕಾರಕ್ಕಾಗಿ ತಮ್ಮನ್ನು ಸಮರ್ಪಿಸಿಕೊಂಡ ಸಂನ್ಯಾಸಿಗಳ ತಾಣವೇ ಮಠ. ಇದು ತಪಸ್ಸಿನ ಜ್ಞಾನಾನ್ವೇಷಣೆಯ ಧಾರ್ಮಿಕ ಕೇಂದ್ರ. ಕ್ರಮೇಣ ಆಶ್ರಮ, ಗುರುಮನೆ, ಗುರುಕುಲಗಳಾಗಿ ಕಾಲ ಕಳೆದಂತೆ ಇದು ವಿದ್ಯಾಪ್ರಸಾರ, ಜ್ಞಾನಪ್ರಸಾರ, ಮತ ಪ್ರಸಾರ ಕೇಂದ್ರಗಳಾಗಿ ಬೆಳೆದಿವೆ. ಪ್ರಾಚೀನ ಕಾಲದಿಂದಲೂ ವಿದ್ಯಾಭ್ಯಾಸಕ್ಕೂ ಮತ್ತು ಗುರುಕುಲಗಳಿಗೂ ನಿಕಟ ಸಂಬಂಧವಿರುವುದನ್ನು ಪುರಾಣೇತಿಹಾಸ ಕಾಲದಿಂದ ಕಾಣುತ್ತಾ ಬಂದಿದ್ದೇವೆ. ಗುರುಕುಲಗಳ ಅಗ್ರಹಾರ, ಘಟಿಕಾಸ್ಥಾನ ಹಾಗೂ ಬ್ರಹ್ಮಪುರಿ ಮುಂತಾದವುಗಳ ಬಗೆಗೆ ಶಾಸನಗಳಲ್ಲಿ ಉಲ್ಲೇಖಗಳಿರುವುದನ್ನು ಗಮನಿಸಬಹುದಾಗಿದೆ. ಗುರುಕುಲ ಪದ್ಧತಿ ವಿದ್ಯಾಭ್ಯಾಸ ವೈದಿಕ ಕಾಲ ಹಾಗೂ ರಾಮಾಯಣ, ಮಹಾಭಾರತ, ಪುರಾಣಗಳಲ್ಲಿ ಇದ್ದುದು ಮುಂದುವರೆದು ಇತ್ತೀಚಿನ ದಿನಗಳಲ್ಲೂ ಇನ್ನೂ ಅಸ್ತಿತ್ವದಲ್ಲಿರುವುದನ್ನು ಕಾಣುತ್ತೇವೆ.

ವೈದಿಕ, ಜೈನ, ಶೈವ ಈ ಪ್ರಮುಖ ಧರ್ಮಗಳು ಧರ್ಮಾಚರಣೆಗಾಗಿ ಮಠಗಳನ್ನು ಕಟ್ಟಿದವು. ಮಠಗಳನ್ನು ಹೋಲುವ ಧರ್ಮಛತ್ರ, ವಿದ್ಯಾಕೇಂದ್ರ, ಆಧ್ಯಾತ್ಮಿಕ ಕೇಂದ್ರ, ವಿಹಾರ, ದೇವಾಲಯ ಮುಂತಾದವುಗಳು ವಿವಿಧ ಧರ್ಮಗಳಲ್ಲಿ ಹುಟ್ಟಿಕೊಂಡವು. ಅವುಗಳ ಮುಖ್ಯಸ್ಥರಾಗಿ ಧರ್ಮಗುರುಗಳು ನೈತಿಕ ಜೀವನವನ್ನು ನಡೆಸುತ್ತಾ ಆಯಾ ಧರ್ಮದ ಅನುಯಾಯಿಗಳಿಗೆ ಪಾರಮಾರ್ಥಿಕ ಮಾರ್ಗದರ್ಶನ ಮಾಡುತ್ತಲಿದ್ದರು. ಈ ಮಠಗಳು ಪ್ರಾಚೀನ ಕಾಲದಿಂದ ಇಂದಿನವರೆಗೂ ನಡೆದುಕೊಂಡು ಮಹತ್ತರ ಸಾಧನೆ ಮಾಡಿರುವುದನ್ನು ಕಾಣಬಹುದು.

ರಾಮಾಯಣದಲ್ಲಿ ಕರ್ನಾಟಕದ ನಾನಾ ಸ್ಥಳಗಳಲ್ಲಿ ಋಷಿಮುನಿಗಳು ತಪಸ್ಸು ಮಾಡಿಕೊಂಡಿದ್ದರೆಂದು ತಿಳಿದುಬರುತ್ತದೆ. ಇವುಗಳ ಜೊತೆಗೆ ಬೌದ್ಧವಿಹಾರಗಳು, ಸಂಘರಾಮಗಳು, ಜೈನ ವಸತಿ(ಬಸದಿ-ಬಸ್ತಿ)ಗಳು ಇದ್ದವು. ಬೌದ್ಧ ಮತ್ತು ಜೈನರ ವಿಹಾರಗಳು ಸುಮಾರು ಇಂದಿನ ಮಠದ ಸ್ವರೂಪವನ್ನೇ ಹೊಂದಿದ್ದವು. ಕ್ರಿಸ್ತಶಕ ಆರಂಭದ ಆಸುಪಾಸಿನ ಶತಮಾನಗಳಲ್ಲಿ ಶ್ರವಣಬೆಳಗೊಳ ಜೈನಧಾರ್ಮಿಕ ಕೇಂದ್ರವಾಗಿತ್ತೆಂದು ಜೈನ ಗ್ರಂಥಗಳಿಂದಲೂ, ಕ್ರಿ.ಪೂ.೩ನೆಯ

ಶತಮಾನದಲ್ಲಿಯೇ ಅಶೋಕ ಮಹಿಷಮಂಡಲಕ್ಕೆ ಧರ್ಮ ಪ್ರಚಾರಕರನ್ನು ಕಳುಹಿಸಿದ್ದನೆಂದು ಬೌದ್ಧ ಮೂಲಗಳಿಂದಲೂ ತಿಳಿದುಬರುತ್ತದೆ. ಆದ್ದರಿಂದ, ಆ ಕಾಲದಲ್ಲಿ ಅವರ ವಿಹಾರ ಮಠಗಳು ಇದ್ದಿರಬೇಕೆಂದು ಊಹಿಸಬಹುದು.

ಎಂಟನೆಯ ಶತಮಾನದ ಕೊನೆಯವರೆಗೂ ಜೈನ, ಬೌದ್ಧ ಸಂನ್ಯಾಸಿಗಳಲ್ಲದೆ, ಕಾಳಾಮುಖರು, ಕಾಪಾಲಿಕರು, ಪಾಶುಪತರು ಶಿವಾಲಯಗಳಲ್ಲಿ ವಾಸಿಸುತ್ತಿದ್ದರು. ಆದರೆ ಮಠಗಳ ಅಗತ್ಯವನ್ನು ಗ್ರಹಿಸಿ ದೇಶದ ನಾಲ್ಕು ದಿಕ್ಕುಗಳಲ್ಲಿಯೂ ಮಠಗಳನ್ನು ಸ್ಥಾಪಿಸಿದ ಯಶಸ್ಸು ಶ್ರೀಶಂಕರಾಚಾರ್ಯರಿಗೆ ಹೋಗುತ್ತದೆ. ಹಿಂದೂ ಧರ್ಮದ ತತ್ತ್ವಗಳನ್ನು ಜನರಿಗೆ ತಿಳಿಸಲು ಅನೇಕ ಸ್ಥಳಗಳಲ್ಲಿ ಮಠಗಳು ಸ್ಥಾಪಿತವಾದವು.

ವೀರಶೈವ ಧಾರ್ಮಿಕ ಕ್ರಾಂತಿ, ರಾಜಕೀಯ ಆಂದೋಲನಕ್ಕೆ ಕಾರಣವಾಗಿ ಅನೇಕ ಶರಣರು ಕಲ್ಯಾಣವನ್ನು ಬಿಟ್ಟರು. ಇಂಥ ಮೂರು ಸಾವಿರ ಶರಣರು ಮಾಡಿಕೊಂಡ ಧಾರ್ಮಿಕ ಕೇಂದ್ರ ಈಗಿನ ಹುಬ್ಬಳ್ಳಿಯ ಮೂರುಸಾವಿರ ಮಠವಾಯಿತೆನ್ನಲಾಗಿದೆ.

ಅಧ್ಯಯನದ ಉದ್ದೇಶ

ಪ್ರಸ್ತುತ ಸಂಶೋಧನೆಯು ವಿಷಯಕ್ಕೆ ಸಂಬಂಧಿಸಿದಂತೆ ಅಲಕ್ಷಿತ ಮಠಗಳ ಸಂಕಥನವಾಗಿದೆ. ಅಧ್ಯಯನದ ಮುಖ್ಯ ಉದ್ದೇಶಗಳು ಇಂತಿವೆ.

೧. ಅಲಕ್ಷಿತರೆಂದರೆ ಯಾರು? ಮಠಗಳು ಎಂದರೆ ಏನು, ಅವುಗಳ ಸಾಂಸ್ಕೃತಿಕ ಮಹತ್ವ, ಪರಂಪರೆ ಮುಂತಾದವುಗಳನ್ನು ಸೈದ್ಧಾಂತಿಕವಾಗಿ ವಿವರಿಸುವುದು

೨. ಜನಪದರು ಮತ್ತು ಮಠಗಳ ಸಂಬಂಧಗಳ ಕುರಿತು ಅಧ್ಯಯನ ಮಾಡುವುದು.

೩. ಅಲಕ್ಷಿತರ ಮಠಗಳ ಸ್ಥಾಪನೆಗೆ ಕಾರಣ ಹಾಗೂ ಪ್ರೇರಕಗಳೇನು ಎಂಬುದನ್ನು ಚರ್ಚಿಸುವುದು.

೪. ಅಲಕ್ಷಿತರ ಮಠಗಳು ಬೆಳೆದು ಬಂದ ಸಂದರ್ಭಗಳನ್ನು ಗ್ರಹಿಸಿ ದಾಖಲಿಸುವ ಉದ್ದೇಶವನ್ನು ಹೊಂದಿದೆ. ಹಾಗೂ ಕರ್ನಾಟಕದಲ್ಲಿ ಅಸ್ತಿತ್ವದಲ್ಲಿರುವ ಅಲಕ್ಷಿತರ ಮಠಗಳ ಸಂಕ್ಷಿಪ್ತ ಪರಿಚಯವನ್ನು ನೀಡುತ್ತ ಆಯ್ದ ಕೆಲವು ಸಮುದಾಯದ ಮಠಗಳ ಚರಿತ್ರೆ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಅಧ್ಯಯನವನ್ನು ಮಾಡುವುದು.

೫. ಸ್ಥಾಪಿತವಾಗಿರುವ ಈ ಅಲಕ್ಷಿತ ಮಠಗಳು ಮುಂದೆ ತಮ್ಮ ತಮ್ಮ ಸಮುದಾಯಗಳ ಸಾಮಾಜಿಕ ಐಕ್ಯತೆ, ಅಭಿವೃದ್ಧಿ, ರಾಜಕೀಯ ಜೀವನ, ಸಮುದಾಯದ ಸಾಂಸ್ಕೃತಿಕ

ಅನನ್ಯತೆಯನ್ನು ಈ ಜಾಗತೀಕರಣದ ಸಂದರ್ಭದಲ್ಲಿ ಹೇಗೆ ಕಾಪಾಡಿಕೊಳ್ಳಬೇಕು, ಸಮಾಜದಲ್ಲಿರುವ ಸಮುದಾಯಕ್ಕೆ ಅವಮಾನಕಾರಿಯಾಗಿರುವ ಹಾಗೂ ಅಭಿವೃದ್ಧಿಗೆ ಮಾರಕವಾಗಿರುವ ಆಚರಣೆ-ಸಂಪ್ರದಾಯಗಳ ವಿರುದ್ಧ ಜನರಿಗೆ ತಿಳಿಹೇಳುವ ಅಂಶಗಳ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಹೇಗೆ ಮಾಡುತ್ತಿವೆ ಎಂಬುದರ ಕುರಿತು ದೀರ್ಘವಾಗಿ ಚರ್ಚಿಸುವುದು.

ಇಂದು ಈ ಸಮಾಜದ ಬಹುತೇಕ ಅಲಕ್ಷಿತ ಸಮುದಾಯಗಳು ತಮ್ಮ ಸಮುದಾಯದ ಮಠಗಳನ್ನು ಸ್ಥಾಪಿಸಿಕೊಳ್ಳುತ್ತಿರುವುದು ಒಂದು ರೀತಿಯಲ್ಲಿ ಈ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯ ಪುನಶ್ಚೇತನವೆಂದು ಪರಿಭಾವಿಸಲಾಗಿದೆ. ಆದರೆ ಅಲಕ್ಷಿತ ಜನರ ಮುಗ್ಧತೆಯನ್ನು ಬಳಕೆಮಾಡಿಕೊಳ್ಳುವ ಚಾಣಾಕ್ಷತೆಯನ್ನು ಕೆಲವು ಮುಂದುವರಿದ ಸಮುದಾಯಗಳ ಮಠಗಳು ಮತ್ತು ಧಾರ್ಮಿಕ ಕೇಂದ್ರಗಳು ಮಾಡುತ್ತಿರುವುದನ್ನು ಅಸ್ತಿತ್ವಕ್ಕೆ ಬರುತ್ತಿರುವ ಅಲಕ್ಷಿತರ ಮಠಗಳು ಇಂದು ನಿಯಂತ್ರಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಅಸ್ತಿತ್ವಕ್ಕೆ ಬರುತ್ತಿರುವ ಇಂತಹ ಮಠಗಳ ಸ್ಥಿತಿ-ಗತಿಗಳನ್ನು ಮತ್ತು ಅವುಗಳ ಅಸ್ತಿತ್ವದ ಉದ್ದೇಶಗಳನ್ನು ಸಂಶೋಧನೆಗೊಳಪಡಿಸುವುದು ಮತ್ತು ಈ ಮಠಗಳ ಮಠಾಧೀಶರು ಹೊಂದಿರುವ ಸಮುದಾಯ ಕೇಂದ್ರಿತ ಅಭಿವೃದ್ಧಿ ಮತ್ತು ಉದ್ದೇಶಗಳನ್ನು ಗ್ರಹಿಸಿ ದಾಖಲಿಸುವುದು ಹಾಗೂ ವಿಶ್ಲೇಷಿಸುವುದು ಸಹ ಈ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ.

ಅಧ್ಯಯನದ ಮಹತ್ವ

ಒಂದು ಕಾಲದಲ್ಲಿ ಕೆಲವು ಸಮುದಾಯಗಳು ತಮ್ಮ ಧಾರ್ಮಿಕ ಮತ್ತು ಸಾಂಸ್ಕೃತಿಕ ಅಸ್ಮಿತೆಗಾಗಿ ಸ್ಥಾಪಿಸಿಕೊಂಡ ಧಾರ್ಮಿಕ ಕೇಂದ್ರಗಳೆಲ್ಲವೂ ಮಠಗಳಾಗಲಾರವು. ಅವು ಮಠಗಳಾಗಿದ್ದರೆ, ಈ ಮಠಗಳೂ ಸಹ ಇತರೆ ಮಠಮಾನ್ಯಗಳಂತೆ ಕೇವಲ ಪೂಜೆ, ಯಜ್ಞಯಾಗಗಳನ್ನು ನಡೆಸುವ ಕೇಂದ್ರವಾಗದೇ, ಸಮುದಾಯವನ್ನು ಇಂದಿನ ಸ್ಪರ್ಧಾತ್ಮಕ ಜಗತ್ತನ್ನು ಎದುರಿಸಿ ನಿಲ್ಲುವ ಸದೃಢರನ್ನಾಗಿ ನಿರ್ಮಿಸುವ ತರಬೇತಿ ಕೇಂದ್ರಗಳಾಗಿ ಬೆಳೆಯಬೇಕಾಗಿದೆ. ಇದಕ್ಕೆ ಬಹುಮುಖ್ಯವಾಗಿ ಬೇಕಾದ ಶಿಕ್ಷಣವನ್ನು ತನ್ನ ಸಮುದಾಯಕ್ಕೆ ಕೊಡಿಸುವ ಜ್ಞಾನಕೇಂದ್ರಗಳಾಗಿ ಮಠಗಳು ರೂಪುಗೊಳ್ಳಬೇಕಿದೆ. ಈ ಅಲಕ್ಷಿತರ ಪಾರಂಪರಿಕ ಕಲೆ ಮತ್ತು ಕುಲಕಸುಬುಗಳನ್ನು ಪ್ರಸ್ತುತ ಸಂದರ್ಭ ಮತ್ತು ಗ್ರಾಹಕನ ಅಭಿರುಚಿಗೆ ತಕ್ಕಂತೆ ಪರಿವರ್ತಿಸಿಕೊಂಡು ಪಾರಂಪರಿಕ ಕಸುಬಿನ ಪೇಟೆಂಟ್ ಹಕ್ಕನ್ನು ತನ್ನದಾಗಿಸಿಕೊಳ್ಳುವ ಉದ್ಯಮಶೀಲತೆಯನ್ನು ಬೆಳೆಸಿಕೊಳ್ಳಬೇಕಿದೆ. ಈ ಸಮಾಜದಲ್ಲಿ ಉತ್ತಮ ಸ್ಥಾನದ ಪದಗ್ರಹಣಕ್ಕೆ

ಸಜ್ಜಾಗುವ ಅಲಕ್ಷಿತ, ತನ್ನ ಸಮುದಾಯದಲ್ಲಿ ರೂಢಿಯಲ್ಲಿರುವ ಅನಿಷ್ಟ ಪದ್ಧತಿಗಳಿಂದ ಮುಕ್ತನಾಗುವ ಸಂಕಲ್ಪವನ್ನು ಮಾಡಬೇಕಿದೆ. ವರ್ತಮಾನದ ಶಕ್ತಿ ರಾಜಕಾರಣದ ಭಾಗವಾಗಿ ಅಪವ್ಯಯವಾಗುವ ಅಲಕ್ಷಿತರ ಶಕ್ತಿಯ ಬಳಕೆ ನಿಲ್ಲಬೇಕಿದೆ. ಅಲಕ್ಷಿತರೇ ರಾಜಕಾರಣದ ಶಕ್ತಿಯಾಗಿ ರೂಪುಗೊಳ್ಳುವುದು ಅವಶ್ಯವಿದೆ. ಜಾಗತೀಕರಣದ ಪ್ರಭಾವ ಅಲಕ್ಷಿತರ ದೈವಾರಾಧನೆ ಮತ್ತು ಆಹಾರ ಸಂಸ್ಕೃತಿಯ ಮೇಲಾಗುತ್ತಿರುವುದನ್ನು ಅಸ್ಮಿತೆಯ ದೃಷ್ಟಿಯಿಂದ ಉಳಿಸಿಕೊಳ್ಳಬೇಕಿದೆ. ಮೌಢ್ಯತೆಯಿಂದ ಯಾವುದೋ ಭ್ರಮೆಗೊಳಗಾಗಿ ಅಲಕ್ಷಿತ ಸಮುದಾಯಗಳ ಅನೇಕ ಕುಟುಂಬಗಳು ಮತಾಂತರ ಹೊಂದುವುದನ್ನು ನಿಯಂತ್ರಿಸುವುದು ಅಲಕ್ಷಿತರ ಈ ಮಠಗಳ ಬಹುದೊಡ್ಡ ಜವಾಬ್ದಾರಿಯಾಗಿದೆ. ತನ್ನ ಸಮುದಾಯ ಮುಂದೊಂದು ಕಾಲದಲ್ಲಿ ಮತ್ತೆ ಮತ್ತೆ ಒಳಸಮುದಾಯಗಳ ಮಠಗಳಾಗಿ ಛಿದ್ರವಾಗುವಿಕೆಯ ಅಪಾಯವನ್ನು ಯೋಚಿಸಿ ಆ ಕುರಿತು ಇಂದೇ ಈ ಭಿನ್ನತೆಯನ್ನು ಹೋಗಲಾಡಿಸುವ, ಪರಿಹಾರವನ್ನು ಕಂಡುಕೊಂಡು ಇಡೀ ಸಮುದಾಯವನ್ನು ಏಕೀಕರಣಗೊಳಿಸಿ ಕಟ್ಟಬೇಕಾದ ಜವಾಬ್ದಾರಿ ಈ ಮಠಗಳದ್ದಾಗಿದೆ. ತನ್ನ ಸಮುದಾಯದ ಸಾಂಸ್ಕೃತಿಕ ವೀರರ ಮತ್ತು ಮಹಾಪುರುಷರ ಜನ್ಮದಿನಾಚರಣೆ, ಜಾತ್ರೆ ಉತ್ಸವಗಳನ್ನು ಆಚರಿಸುವುದರಿಂದ ಮಾತ್ರ ಸಮುದಾಯದವರನ್ನು ಮಠಗಳೆಡೆಗೆ ಸೆಳೆದುಕೊಳ್ಳುವುದು ಸಾಧ್ಯವಾಗದು. ನೂರಾರು ವರ್ಷಗಳಿಂದ ತನ್ನದಲ್ಲದ ಮಠಗಳೊಂದಿಗೆ ಧಾರ್ಮಿಕ ಸಂಬಂಧವನ್ನಿರಿಸಿಕೊಂಡವರನ್ನು ತನ್ನ ವಾಹಿನಿಗೆ ಕರೆತರುವ ಸೂಕ್ಷ್ಮ ಜವಾಬ್ದಾರಿ ಮಠಗಳದ್ದಾಗಿದೆ. ಹಾಗಾಗಿ ಆತ್ಮವಿಶ್ವಾಸ ಮತ್ತು ನಂಬಿಕೆಯಿಂದ ಸಮುದಾಯದೊಂದಿಗೆ ತನ್ನ ಮಠ ಸಂಬಂಧವನ್ನು ಮುರಿದು ಕಟ್ಟುವ ಹರಿಕಾರನಾಗಿ ಅಲಕ್ಷಿತ ಸಮುದಾಯಗಳ ಮಠಾಧೀಶರು ನಿಲ್ಲಬೇಕಾಗಿದೆ. ಅಲಕ್ಷಿತ ಸಮುದಾಯದ ಎಲ್ಲಾ ಮಠಾಧೀಶರು ತಮ್ಮ ತಮ್ಮಲ್ಲಿಯೇ ಧಾರ್ಮಿಕ ಅಂತಸ್ತನ್ನು ಮರೆಯದೇ ತಾವೆಲ್ಲರೂ ಒಂದೆಂಬ ಭಾವನೆಯನ್ನು ತಾಳಿ ಇಡೀ ಅಲಕ್ಷಿತ ತಳಸಮುದಾಯಗಳನ್ನು ಒಂದುಗೂಡಿಸುವ ಮತ್ತು ಅವುಗಳ ಸಮಗ್ರ ಅಭಿವೃದ್ಧಿಯನ್ನು ಕುರಿತು ಅಧ್ಯಯನ ಮಾಡಲಾಗಿದೆ.

ಅಧ್ಯಯನದ ವಿಧಾನ ಮತ್ತು ವ್ಯಾಪ್ತಿ

ಸಂಶೋಧನೆಯ ವಿಷಯದ ಆಯ್ಕೆಯ ಉದ್ದೇಶ ಮತ್ತು ಮಹತ್ವವನ್ನು ಗಮನಿಸಿ ಅಧ್ಯಯನದ ಅವಶ್ಯಕತೆಯನ್ನು ಕುರಿತು ಮಾಹಿತಿಯನ್ನು ಸಂಗ್ರಹಿಸಿ ಅದರ ಪ್ರಭಾವದ ವಲಯಗಳನ್ನು ಗುರುತಿಸಿ ಆಧಾರಗಳ ಸಮೇತವಾಗಿ ವಿವರಣೆ ನೀಡಲಾಗಿದೆ. ಅಧ್ಯಯನದ ವ್ಯಾಪ್ತಿಯನ್ನು ಕರ್ನಾಟಕದ ಅಲಕ್ಷಿತರ ಮಠಗಳಿಗೆ ನಿಗದಿಪಡಿಸಿಕೊಳ್ಳಲಾಗಿದೆ. ಅಧ್ಯಯನದ ವಿಧಾನವನ್ನು ಕುರಿತಾಗಿ ಸಂಶೋಧನೆಗೆ ಅವಶ್ಯವಾದ ಮಾಹಿತಿಯನ್ನು ಪ್ರೈಮರಿ ಮತ್ತು ಸೆಕೆಂಡರಿ ವಿಧಾನಗಳ ಮೂಲಕ ಸಂಗ್ರಹಿಸಿ ದಾಖಲಿಸಲಾಗಿದೆ. ಮಾಹಿತಿಯನ್ನು ಅಲ್ಲಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಇಲ್ಲಿ ಮಾಹಿತಿ ಸಂಗ್ರಹಣೆಯನ್ನು ವೈಯಕ್ತಿಕವಾಗಿ ಅಸ್ತಿತ್ವದಲ್ಲಿರುವ ಅಲಕ್ಷಿತರ ಮಠಗಳಿಗೆ ಭೇಟಿ ಕೊಟ್ಟು ಅವುಗಳ ಸ್ಥಿತಿಗತಿ ಮತ್ತು ಅವುಗಳ ಮುಂದಿನ ಸವಾಲುಗಳನ್ನು ಕುರಿತಾಗಿ ಮಠಾಧೀಶರುಗಳಲ್ಲಿ ಚರ್ಚಿಸಲಾಗಿದೆ.

ಅಧ್ಯಯನಕ್ಕೆ ಸಂಬಂಧಿಸಿದಂತೆ ಕ್ಷೇತ್ರಕಾರ್ಯದಲ್ಲಿ ಮುಖ್ಯವಾಗಿ ಮಠಾದೀಶರು ಹಾಗೂ ಅಲಕ್ಷಿತ ಮಠಗಳ ಸ್ಥಾಪನೆಗೆ ಕಾರಣವಾದ ಪ್ರಮುಖರು ಸಂಬಂಧಿಸಿದ ಸಮುದಾಯದವರುಗಳನ್ನು ಅವಲೋಕನ, ಪ್ರಶ್ನಾವಳಿ ಹಾಗೂ ಸಂದರ್ಶಿಸಿ ಅವರಿಂದ ಮಾಹಿತಿ ಪಡೆಯಲಾಗಿದೆ.

ಅವಲೋಕನ ವಿಧಾನ

ಈ ವಿಧಾನದಲ್ಲಿ ಮುಖ್ಯವಾಗಿ ಅಲಕ್ಷಿತ ಮಠಗಳ ವಾತಾವರಣವನ್ನು ಅಮೂಲಾಗ್ರವಾಗಿ ವೀಕ್ಷಣೆ ಮಾಡಲಾಗಿದೆ. ವೀಕ್ಷಣೆಯಲ್ಲಿ ಮಠಗಳ ಕಟ್ಟಡಗಳು, ಮಠಗಳು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳು, ಮಠದಲ್ಲಿ ಜರುಗುತ್ತಿರುವ ಕಾರ್ಯಕ್ರಮಗಳು ಮುಂತಾದವುಗಳನ್ನು ವೀಕ್ಷಣೆ ಮಾಡುವ ಮೂಲಕ ಮಾಹಿತಿಗಳನ್ನು ಪಡೆಯಲಾಗಿದೆ.

ಸಂದರ್ಶನ ವಿಧಾನ

ಈ ವಿಧಾನದಲ್ಲಿ ಮುಖ್ಯವಾಗಿ ಮಠಾಧೀಶರು, ಅಲಕ್ಷಿತ ಸಮುದಾಯಗಳ ಮುಖಂಡರುಗಳು ಹಾಗೂ ಜನಸಾಮಾನ್ಯರನ್ನು ಕಂಡು ಅವರೊಂದಿಗೆ ಮಠಗಳ ಕುರಿತು ಚರ್ಚಿಸುವ ಮೂಲಕ ಸಂದರ್ಶಿಸಿ ಮಾಹಿತಿಗಳನ್ನು ಪಡೆಯಲಾಗಿದೆ.

ಪ್ರಶ್ನಾವಳಿ

ನಿರ್ಧಿಷ್ಟವಾದ ಯಾವುದೇ ಪ್ರಶ್ನಾವಳಿಯನ್ನು ಸಿದ್ಧಪಡಿಸಿಕೊಂಡಿರುವುದಿಲ್ಲ. ಆದರೆ ಮಠಗಳ ಹುಟ್ಟು, ಬೆಳವಣಿಗೆ, ಬರುವ ದೇಣಿಗೆಗಳು, ಜನಸಾಮಾನ್ಯರು ಮತ್ತು ಮಠಗಳ ಸಂಬಂಧ ಹೀಗೆ ಹತ್ತಾರು ವಿಷಯಗಳನ್ನು ಪ್ರಶ್ನೆ ಮಾಡುವ ಮೂಲಕ ಮಾಹಿತಿ ಪಡೆಯಲಾಗಿದೆ.

ಅಧ್ಯಯನಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಅಲಕ್ಷಿತ ಮಠಗಳನ್ನು ಆಯ್ದುಕೊಳ್ಳಲಾಗಿದೆ.

೧. ವಾಲ್ಮೀಕಿ ಪೀಠ

೨. ಬಂಜಾರ ಮಹಾಸಂಸ್ಥಾನ

೩. ಶ್ರೀ ಮಾದಾರ ಚನ್ನಯ್ಯ ಮಹಾಸಂಸ್ಥಾನ

೪. ಆದಿಜಾಂಬವ ಮಠ

೫. ಶ್ರೀಕೃಷ್ಣಯಾದವಾನಂದ ಮಠ

೬. ಸಿದ್ದರಾಮೇಶ್ವರ ಭೋವಿ ಗುರುಪೀಠ

೭. ಛಲವಾದಿ ಗುರುಪೀಠ

೮. ಶರಣ ಹರಳಯ್ಯ ಗುರುಪೀಠ

೯. ಉಪ್ಪಾರ/ಭಗೀರಥ ಪೀಠ

೧೦. ಕನಕ ಗುರುಪೀಠ

ಪಾರಂಪರಿಕ ಮಠಗಳು ಬೆಳೆದು ಬಂದಿರುವ ಹಿನ್ನೆಲೆಯನ್ನಿಟ್ಟುಕೊಂಡು ಅಲಕ್ಷಿತರ ಮಠಗಳ ಅರ್ಥವನ್ನು ವಿವಿಧ ನೆಲೆಗಟ್ಟಿನಲ್ಲಿ ವಿವರಿಸುತ್ತಾ ಮಠಗಳ ಸಾಂಪ್ರದಾಯಿಕ ಮತ್ತು ಆಧುನಿಕ ಪರಿಕಲ್ಪನೆಗಳನ್ನು ಕುರಿತು ಸಮುದಾಯಗಳ ಸರ್ವತೋಮುಖ ಅಭಿವೃದ್ಧಿಯ ಹಿನ್ನೆಲೆಯಲ್ಲಿ ವಿವರಿಸಲಾಗಿದೆ. ಮಠಗಳ ಸ್ಥಾಪನೆಗೆ ಸಾಂಸ್ಕೃತಿಕ, ಸಾಮಾಜಿಕ, ರಾಜಕೀಯದ ವಿವಿಧ ಕಾರಣಗಳನ್ನು ಕುರಿತು ಚರ್ಚಿಸಲಾಗಿದೆ. ವಿವಿಧ ಉದ್ದೇಶಗಳ ಹಿನ್ನೆಲೆಯಲ್ಲಿ ಅಸ್ತಿತ್ವಕ್ಕೆ ಬಂದ ಮಠಗಳ ಸಾರ್ಥಕತೆಯನ್ನು ಕುರಿತಾಗಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಅನನ್ಯತೆಯ ಬಗ್ಗೆ ಸಂಬಂಧಿಸಿದ ಮಠದ ಧರ್ಮ ಗುರುಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ.

ಅಲಕ್ಷಿತೇತರ ಮಠಗಳು ವಾಸ್ತವದಲ್ಲಿ ಧಾರ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರಗಳಾಗಿ ಬೆಳೆಯುವುದರ ಜೊತೆಗೆ ಅವುಗಳು ರಾಜಕೀಯ ಪ್ರಭುತ್ವದ ಹಿಡಿತವನ್ನು ಸಾಧಿಸುವ ಮತ್ತು ತನ್ನವರಿಗೆ ಅಧಿಕಾರ ಹಾಗೂ ರಾಜಕೀಯ ಸ್ಥಾನಮಾನಗಳನ್ನು ಒದಗಿಸಿಕೊಡುವ ಕೇಂದ್ರಗಳಾಗಿ ಪರಿವರ್ತನೆಯಾಗುತ್ತಿರುವ ಸಂದರ್ಭದಲ್ಲಿ ಅಲಕ್ಷಿತರ ಈ ಮಠಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಜವಾಬ್ದಾರಿಗಳನ್ನು ಕುರಿತು ಚರ್ಚಿಸಲಾಗಿದೆ.

ಭಾರತದಂತಹ ವಿವಿಧ ಸಂಸ್ಕೃತಿಯ ಈ ನೆಲೆನಾಡಿನಲ್ಲಿ ಶತಶತಮಾನಗಳಿಂದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಧಾರ್ಮಿಕವಾಗಿ ತುಳಿತಕ್ಕೊಳಗಾಗಿರುವ ಅನೇಕ ಸಮುದಾಯಗಳು ತನ್ನದೆಂದು ಭಾವಿಸಿ ಕಟ್ಟಿ ಬೆಳೆಸಿದ ಮಡಿವಂತರ ಮಠಗಳಲ್ಲಿ ತಾನು ನಿರ್ಲಕ್ಷ್ಯಗೊಳಪಟ್ಟು ತನ್ನದೇ ಸಮುದಾಯದ ಧರ್ಮಗುರುವನ್ನು ಹೊಂದಿದ ಮಠಗಳನ್ನು ಸಂಸ್ಥಾಪಿಸುವ ಹಿನ್ನೆಲೆಯಲ್ಲಿ ನಡೆದ ಹೆಜ್ಜೆಗಳನ್ನು ಕುರಿತು ಚರ್ಚಿಸುತ್ತಾ, ಆದಿಮದಿಂದಲೂ ಸ್ವಯಂಘೋಷಿತ ಮಠಗಳಿಂದಾದಿಯಾಗಿ ಇಂದು ಅಸ್ತಿತ್ವದಲ್ಲಿರುವ ಬೇಡ, ಬೆಸ್ತ, ಮಡಿವಾಳ, ಗೊಲ್ಲ, ಬೋವಿ, ಮಾದಿಗ, ಕುರುಬ ಇತ್ಯಾದಿ ಸಮುದಾಯಗಳ ಮಠಗಳ ಧಾರ್ಮಿಕ ನೆಲೆಗಳನ್ನು ಗುರುತಿಸಿ ಪ್ರತ್ಯಕ್ಷವಾಗಿ ಕ್ಷೇತ್ರಕಾರ್ಯವನ್ನು ಕೈಗೊಂಡು ಮಾಹಿತಿಯನ್ನು ಸಂಗ್ರಹಿಸಿ ವಿಶ್ಲೇಷಣೆ ಸಮೇತ ಪ್ರಸ್ತುತಪಡಿಸಲಾಗಿದೆ.

ಪ್ರಸ್ತುತದಲ್ಲಿ ಅಸ್ತಿತ್ವಕ್ಕೆ ಬಂದಿರುವ ಅನೇಕ ಅಲಕ್ಷಿತ ಸಮುದಾಯಗಳ ಮಠಗಳನ್ನೊಳಗೊಂಡಂತೆ ಈ ಸಮುದಾಯಗಳು ಪ್ರತಿನಿತ್ಯ ಒಂದಿಲ್ಲೊಂದು ಸಾಂಸ್ಕೃತಿಕ ಸಂಘರ್ಷಗಳನ್ನು ಎದುರಿಸುತ್ತಿವೆ. ಈ ಸಂಘರ್ಷಗಳು ತನ್ನ ಪಾರಂಪರಿಕ ಅನನ್ಯತೆಯನ್ನು ಉಳಿಸಿ ಬೆಳೆಸಿಕೊಂಡು ಬರುವ ಸಾಂಸ್ಕೃತಿಕ ಜವಾಬ್ದಾರಿ ಒಂದೆಡೆ ಇದ್ದರೆ, ಇನ್ನೊಂದೆಡೆ ಈ ಬೆಳವಣಿಗೆಯನ್ನು ಸಹಿಸಿಕೊಳ್ಳಲಾಗದ ಸಹ ಮಠಗಳ ಸಂಘರ್ಷಗಳನ್ನು ಎದುರಿಸುವುದು ಒಂದು ಸವಾಲಾಗಿದೆ. ಮೇಲ್ವರ್ಗದ ಸಾಂಸ್ಕೃತಿಕ ಆಚರಣೆಗಳ ಅಬ್ಬರದಲ್ಲಿ ತನ್ನ ಅನನ್ಯತೆಯನ್ನು ಕಳೆದುಕೊಳ್ಳುತ್ತಿರುವ ಅನೇಕ ಕೆಳಸ್ಥರದ ಸಮುದಾಯಗಳು ಇಂದು ಈ ಮಠಗಳ ಮಾರ್ಗದರ್ಶನದಲ್ಲಿ ತನ್ನ ಪಾರಂಪರಿಕ ಆಚರಣೆಗಳನ್ನು ಮತ್ತು ನಂಬಿಕೆಯ ದೈವಗಳನ್ನು ಯಥಾಸ್ಥಿತಿಯಲ್ಲಿ ಉಳಿಸಿಕೊಳ್ಳುವುದು ಅವಶ್ಯ ಮತ್ತು ಅನಿವಾರ್ಯವಾಗಿದೆ. ಇಲ್ಲವಾದಲ್ಲಿ ಪ್ರಸ್ತುತ ಸಂದರ್ಭದಲ್ಲಿ ಮತಾಂತರದ ಗಾಳಿಯನ್ನು ಎಬ್ಬಿಸುತ್ತಿರುವ ಕ್ರಿಶ್ಚಿಯನ್ ಮತ್ತು ಇಸ್ಲಾಂ ಸಮುದಾಯಗಳು ಧರ್ಮಗಳ ಸುಳಿಗೆ ಅಲಕ್ಷಿತ ಸಮುದಾಯಗಳು ಮತಾಂತರ ಹೊಂದಿ ತನ್ನ ಪಿತ್ರಾರ್ಜಿತ ಪಾರಂಪರಿಕ ಸಂಸ್ಕೃತಿಯನ್ನು ಬಲಿಕೊಟ್ಟು ಮುಂದಿನ ಸಮುದಾಯಕ್ಕೆ ಅನ್ಯಧರ್ಮಿಯರ ಗುಲಾಮಗಿರಿಯಲ್ಲಿ ಬದುಕುವ ಕಾರಾಗೃಹದ ಪರಿಸರವನ್ನು ನಿರ್ಮಿಸಬಹುದಾಗಿದೆ. ಈ ಹಿನ್ನೆಲೆಯಲ್ಲಿ ಸಹ ಚರ್ಚೆ ಮಾಡಲಾಗಿದೆ.

ಕೊನೆಯದಾಗಿ ಸಂಶೋಧನೆಯ ಸಮಾರೋಪ ಚಿತ್ರಣವನ್ನು ವಿವರಿಸುತ್ತಾ ಈ ಸಂಶೋಧನೆಯ ಫಲಿತಗಳನ್ನು ವಿವರಿಸಲಾಗಿದೆ. ಅನುಬಂಧದಲ್ಲಿ ಸಂಬಂಧಿಸಿದ ಗ್ರಂಥಸೂಚಿ ಹಾಗೂ ವಕ್ತೃ ವಿವರಗಳನ್ನು ಕೊಡಲಾಗಿದೆ.

ಅಧ್ಯಯನದ ಸ್ವರೂಪ

ಪ್ರಸ್ತುತ ಸಂಶೋಧನ ವಿಷಯವಾಗಿರುವ 'ಅಲಕ್ಷಿತ ಮಠಗಳ ಸಂಕಥನ' ಎಂಬ ವಿಷಯವನ್ನು ಕುರಿತು ನಿಗದಿತ ಸ್ವರೂಪವನ್ನು ನಾವು ಈ ಮುಂದಿನಂತೆ ಗುರುತಿಸಬಹುದಾಗಿದೆ. ಪ್ರಸ್ತುತ ಸಂಶೋಧನೆಯಲ್ಲಿ ಅಧ್ಯಯನ ದೃಷ್ಟಿಯಿಂದ ಇದರ ಒಂದನೇ ಅಧ್ಯಾಯದಲ್ಲಿ, ಅಧ್ಯಯನದ ಉದ್ದೇಶ ಮಹತ್ವ, ವಿಧಾನ, ವ್ಯಾಪ್ತಿ ಹಾಗೂ ಸ್ವರೂಪವನ್ನು ಕುರಿತಾಗಿ ಚರ್ಚೆಗೆ ಒಳಪಡಿಸಲಾಗಿದೆ. ಇಲ್ಲಿ ಪ್ರಸ್ತುತ ಅಧ್ಯಯನದ ಪ್ರಮುಖ ಉದ್ದೇಶಗಳನ್ನು ವರ್ತಮಾನದ ತಲ್ಲಣಗಳೊಂದಿಗೆ ಸಮೀಕರಿಸಿಕೊಂಡು ಇಂದು ಸ್ಥಾಪನೆಯಾಗಿರುವ ಹಾಗೂ ಸ್ಥಾಪಿತಗೊಂಡು ಅಸ್ತಿತ್ವದಲ್ಲಿರುವ ಅಲಕ್ಷಿತ ಮಠಗಳ ಕಾರ್ಯವಿಧಾನವನ್ನು ಗುರುತಿಸುವುದು ಇಲ್ಲಿಯ ಪ್ರಮುಖ ಉದ್ದೇಶವಾಗಿದೆ. ಹಾಗೆಯೇ ಈ ಅಧ್ಯಯನವು ಸಮಕಾಲೀನ ಸಂದರ್ಭದಲ್ಲಿ ಕಾರ್ಯಪ್ರವೃತ್ತವಾಗಿರುವ ಅಲಕ್ಷಿತ ಮಠಗಳಿಂದ ತಳಸಮುದಾಯದ ಜನತೆಗೆ ಹೇಗೆ ಸ್ಪಂದಿಸುತ್ತಿವೆ ಎಂಬುದನ್ನು ಗುರುತಿಸುವುದು

ಇಂದಿಗೆ ಮಹತ್ವವೆಂದು ಭಾವಿಸಿಕೊಂಡು ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿರುತ್ತದೆ. ಹಾಗೆಯೇ ಇಲ್ಲಿ ಬಳಸಿಕೊಂಡಿರುವ ವಿಧಾನವು ಕೇವಲ ಪ್ರಕಟಿತ ಗ್ರಂಥಗಳಿಂದ ಮಾಹಿತಿಯನ್ನು ಸಂಗ್ರಹಿಸದೆ, ಅಲಕ್ಷಿತ ಮಠಗಳ ಪೀಠಾಧ್ಯಕ್ಷರನ್ನು ಅಲಕ್ಷಿತ ಸಮುದಾಯದ ಮುಖಂಡರನ್ನು ಮಠಗಳ ಬಗೆಗೆ ಕಾಳಜಿ ಇರುವವರನ್ನು ಸಂದರ್ಶನ ಮಾಡುವ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಇಷ್ಟೇ ಅಲ್ಲದೆ ಅಲಕ್ಷಿತ ಸಮಾಜದ ಜನತೆಯ ಜೀವನ ಮಟ್ಟವನ್ನು ತೌಲನಿಕವಾಗಿ ಅಧ್ಯಯನಕ್ಕೆ ಬಳಸಿಕೊಂಡು ಪ್ರಸ್ತುತ ಅಧ್ಯಯನ ವಿಧಾನವನ್ನು ವಿವಿಧ ನೆಲೆಯಲ್ಲಿ ಗುರುತಿಸಿಕೊಳ್ಳಲಾಗಿದೆ. ಪ್ರಸ್ತುತ ಅಧ್ಯಯನವು ಅಧ್ಯಯನದ ದೃಷ್ಟಿಯಿಂದ ನಿರ್ದಿಷ್ಟವಾದ ವ್ಯಾಪ್ತಿಯನ್ನು ಒಳಗೊಂಡಿದೆ. ಆದ್ದರಿಂದ ಇದರ ವ್ಯಾಪ್ತಿಯು ಅಲಕ್ಷಿತ ಸಮುದಾಯಗಳನ್ನು ಪ್ರತಿನಿಧಿಸುವ ಮಠಗಳನ್ನು ಕೇಂದ್ರವಾಗಿಟ್ಟುಕೊಂಡು ಅಧ್ಯಯನವನ್ನು ಮುಂದುವರೆಸಿಕೊಂಡು ಬರಲಾಗಿದೆ.

ಪ್ರಸ್ತುತ ಸಂಶೋಧನಾ ವಿಷಯಕ್ಕೆ ಸಂಬಂಧಿಸಿದ ಎರಡನೇ ಅಧ್ಯಾಯವು 'ಅಲಕ್ಷಿತರು' ಎಂಬ ಭಾಗದಲ್ಲಿ ಅಲಕ್ಷಿತ ಪದ ಕುರಿತಾದ ಅರ್ಥವಿವರಣೆಯನ್ನು ಗುರುತಿಸಲಾಗಿದೆ. ಈ ಅಲಕ್ಷಿತ ಸಮುದಾಯದ ಸಾಮಾಜಿಕ ಸ್ಥಿತಿಗತಿಗಳು ಹಾಗೂ ಅಲಕ್ಷಿತ ಸಮುದಾಯದ ಪ್ರಗತಿಗೆ ಸಂಬಂಧಿಸಿದಂತಹ ವಿವಿಧ ಸಾಮಾಜಿಕ ಹೋರಾಟದ ಸ್ವರೂಪವನ್ನು ಪ್ರಸ್ತುತ ಅಧ್ಯಾಯದಲ್ಲಿ ಗುರುತಿಸುವ ಪ್ರಯತ್ನವನ್ನು ಕೈಗೊಳ್ಳಲಾಗಿದೆ.

'ಮಠಗಳು: ಸಾಂಸ್ಕೃತಿಕ ಪರಂಪರೆ' ಎಂಬ ಮೂರನೆಯ ಅಧ್ಯಾಯದಲ್ಲಿ ಮಠಗಳ ಪರಂಪರೆಯು ಭಾರತದಲ್ಲಿ ವಿವಿಧ ನೆಲೆಗಳಿಂದ ಬೆಳೆದುಬಂದಿರುವ ಬಗೆಯನ್ನು ಗುರುತಿಸಲಾಗಿದೆ. ಈ ಅಧ್ಯಯನದಲ್ಲಿ ಒಟ್ಟಾರೆಯಾಗಿ ಪ್ರತಿಯೊಂದು ಸಮುದಾಯದಲ್ಲಿ ಬೆಳೆದು ಬಂದಿರುವ ವಿವಿಧ ಮಠಗಳನ್ನು ಕೇಂದ್ರವಾಗಿಟ್ಟುಕೊಂಡು ಅಧ್ಯಯನ ಕೈಗೊಳ್ಳಲಾಗಿದೆ. ಇದರಿಂದಾಗಿ ಪ್ರಸ್ತುತ ಸಂದರ್ಭದಲ್ಲಿ ಮಠಗಳ ಅರ್ಥ, ಮಠಗಳ ಪ್ರಾಚೀನತೆ ಹಾಗೂ ಮಠಗಳ ಕರ್ತವ್ಯಗಳನ್ನು ಕುರಿತು ಪ್ರಸ್ತುತ ಅಧ್ಯಾಯದಲ್ಲಿ ಚರ್ಚೆಯನ್ನು ಕೈಗೊಳ್ಳಲಾಗಿದೆ.

'ಅಲಕ್ಷಿತರ ಮಠಗಳ ಸ್ಥಾಪನಾ ಪ್ರೇರಕಗಳು' ಎಂಬ ನಾಲ್ಕನೆಯ ಅಧ್ಯಾಯದಲ್ಲಿ ಈ ಮಠಗಳ ಸ್ಥಾಪನೆಗೆ ಕಾರಣ ಹಾಗೂ ಇವುಗಳ ಸ್ಥಾಪನೆಗೆ ಪ್ರೇರಕವಾದ ಪ್ರಮುಖ ಅಂಶಗಳನ್ನು ಗುರುತಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ನಮ್ಮ ಸಮಾಜದಲ್ಲಿ ಕಂಡುಬರುವಂತಹ ಪ್ರತಿಯೊಂದು ಮಠಗಳು ಕೂಡ ತನ್ನದೇ ಆದ ಗುರಿ ಮತ್ತು ಉದ್ದೇಶಗಳನ್ನು ಆಧಾರವಾಗಿಟ್ಟುಕೊಂಡು ಜನಸಮುದಾಯದ ನಡುವೆ ಬೆಳೆದುಬಂದಿರುವುದು ಕಂಡುಬರುತ್ತದೆ.

ಆದ್ದರಿಂದ ಇವುಗಳ ಬೆಳವಣಿಗೆಗೆ ಕಾರಣವಾದ ಅಂಶಗಳನ್ನು ನಿರ್ಧಿಷ್ಟವಾಗಿ ಗುರುತಿಸುವ ಪ್ರಯತ್ನವನ್ನು ಪ್ರಸ್ತುತ ಅಧ್ಯಯನದಲ್ಲಿ ಕೈಗೊಳ್ಳಲಾಗಿದೆ.

'ಅಲಕ್ಷಿತರ ಮಠಗಳು: ಒಂದು ನೋಟ' ಎಂಬುದು ಐದನೆಯ ಅಧ್ಯಾಯವಾಗಿದೆ. ಪ್ರಸ್ತುತ ಅಧ್ಯಾಯದಲ್ಲಿ ಕರ್ನಾಟಕದಲ್ಲಿ ಕಂಡುಬರುವಂತಹ ಅಲಕ್ಷಿತ ಮಠಗಳನ್ನು ಗುರುತಿಸಿಕೊಂಡು ಅವುಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸಲಾಗಿದೆ. ಇಲ್ಲಿ ಕಂಡುಬರುವಂತಹ ಪ್ರಮುಖ ಅಲಕ್ಷಿತ ಮಠಗಳಾದ ಮಾದಿಗ ಸಮುದಾಯವನ್ನು ಪ್ರತಿನಿಧಿಸುವ ಶ್ರೀ ಮಾದಾರ ಚನ್ನಯ್ಯ ಗುರುಪೀಠ, ಮಡಿವಾಳ ಸಮುದಾಯವನ್ನು ಪ್ರತಿನಿಧಿಸುವ ಶ್ರೀ ಮಾಚಿದೇವ ಗುರುಪೀಠ, ಗೊಲ್ಲ ಸಮುದಾಯವನ್ನು ಪ್ರತಿನಿಧಿಸುವ ಶ್ರೀಯಾದವ ಗುರುಪೀಠ, ನಾಯಕ ಸಮುದಾಯವನ್ನು ಪ್ರತಿನಿಧಿಸುವ ಶ್ರೀ ವಾಲ್ಮೀಕಿ ಗುರುಪೀಠ, ಉಪ್ಪಾರ ಸಮುದಾಯವನ್ನು ಪ್ರತಿನಿಧಿಸುವ ಶ್ರೀ ಭಗೀರಥ ಗುರುಪೀಠ, ಲಂಬಾಣಿ ಸಮುದಾಯವನ್ನು ಪ್ರತಿನಿಧಿಸುವ ಶ್ರೀ ಸೇವಾಲಾಲ ಗುರುಪೀಠ ಹಾಗೂ ಇತರೆ ಅಲಕ್ಷಿತ ಗುರುಪೀಠಗಳ ಮಠಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ಪರಿಚಯಾತ್ಮಕವಾಗಿ ಗುರುತಿಸುವ ಪ್ರಯತ್ನವನ್ನು ಕೈಗೊಳ್ಳಲಾಗಿದೆ.

'ಜನಪದರು ಮತ್ತು ಮಠಗಳು' ಎಂಬ ಆರನೆಯ ಅಧ್ಯಾಯದಲ್ಲಿ ಮಠದ ಪರಿಕಲ್ಪನೆಯ ಬಗ್ಗೆ ಜನಪದರು ಹೊಂದಿರುವ ನಂಬಿಕೆಗಳನ್ನು ಪ್ರಸ್ತುತ ಅಧ್ಯಯನದಲ್ಲಿ ವಿಶ್ಲೇಷಣೆಗೆ ಒಳಪಡಿಸಿಲಾಗಿದೆ. ಹಾಗೆಯೇ ಮಠಗಳನ್ನು ಕುರಿತು ಜನಪದರು ಸೃಷ್ಟಿಸಿರುವ ಜನಪದ ಗೀತೆ, ಒಗಟುಗಳಲ್ಲಿ ಕಂಡುಬರುವ ತಾತ್ವಿಕ ದೃಷ್ಟಿಕೋನಗಳನ್ನು ಇಲ್ಲಿನ ಸಂಶೋಧನಾ ವಿಷಯಕ್ಕೆ ಪೂರಕವಾದ ನೆಲೆಯಲ್ಲಿ ಬಳಸಿಕೊಳ್ಳಲಾಗಿದೆ. ಜನಪದರ ಬದುಕು ಮತ್ತು ಮಠಗಳ ನಡುವಿನ ಸಂಬಂಧವನ್ನು ಪ್ರಸ್ತುತ ಅಧ್ಯಾಯದಲ್ಲಿ ಚರ್ಚೆಗೆ ಒಳಪಡಿಸುವ ಪ್ರಯತ್ನವನ್ನು ಮಾಡಲಾಗಿದೆ.

ಏಳನೇ ಅಧ್ಯಾಯದಲ್ಲಿ 'ಅಲಕ್ಷಿತರ ಮಠಗಳು: ಸಮಸ್ಯೆ, ಸವಾಲು ಹಾಗೂ ಮುಂದೇನು' ಎಂಬುದಾಗಿದ್ದು ಇಲ್ಲಿ ಪ್ರಸ್ತುತ ದಿನಮಾನಗಳಲ್ಲಿ ಅಲಕ್ಷಿತ ಸಮುದಾಯಗಳನ್ನು ಪ್ರತಿನಿಧಿಸುವ ನೆಲೆಯಲ್ಲಿ ರೂಪ ತಳೆದಿರುವ ಅಲಕ್ಷಿತ ಮಠಗಳು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಸವಾಲುಗಳನ್ನು ಕುರಿತು ಇಲ್ಲಿ ಚರ್ಚೆಗೆ ಗುರಿಪಡಿಸಲಾಗಿದೆ. ಈ ಸಂದರ್ಭದಲ್ಲಿ ಈ ಪೀಠಾಧ್ಯಕ್ಷರು ಬೆಳೆದು ಬಂದಿರುವ ಹಾಗೂ ಅವರನ್ನು ಸಿದ್ಧಗೊಳಿಸುವ ಹಿಂದಿನ ಮನೋಧೋರಣೆಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಈ ಗುರುಪೀಠದ ಕಾರ್ಯವೈಖರಿಗಳು ಅಲಕ್ಷಿತ ಸಮುದಾಯದ ಜನತೆಗೆ ಹೇಗೆ ಸ್ಪಂದಿಸುತ್ತಿವೆ, ಇದರಿಂದ ಜನತೆಗೆ ಯಾವ ರೀತಿಯ ಪ್ರಯೋಜನಗಳಾಗುತ್ತಿವೆ ಎಂಬ ಅಂಶಗಳನ್ನು ವಿಶ್ಲೇಷಣೆಗೆ

ಒಳಪಡಿಸಲಾಗಿದೆ. ಹಾಗೆಯೇ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ಸಮುದಾಯವನ್ನು ನಂಬಿಕೊಂಡು ಸ್ಥಾಪನೆಯಾಗಿರುವ ಈ ಅಲಕ್ಷಿತ ಮಠಗಳು ಎದುರಿಸುತ್ತಿರುವ ಸಮಸ್ಯೆ ಮತ್ತು ಸವಾಲುಗಳ ಕುರಿತಾಗಿ ಪ್ರಸ್ತುತ ಅಧ್ಯಾಯದಲ್ಲಿ ವಿವರವಾದ ಮಾಹಿತಿಯನ್ನು ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಹಾಗೆಯೇ ಇತ್ತೀಚೆಗೆ ಸ್ಥಾಪನೆಯಾಗಿರುವ ಈ ಅಲಕ್ಷಿತ ಮಠಗಳು ಮುಂದೆ ಕೈಗೊಳ್ಳಬೇಕಾಗಿರುವ ಕೆಲವು ಮಾಹಿತಿಗಳನ್ನು ಇಲ್ಲಿ ಗುರುತಿಸಲಾಗಿದೆ. ಈ ಮುಂದಿನ ನಡೆಯು ಜನತೆಯ ಆಶಯ ಮತ್ತು ಪ್ರಗತಿಗೆ ಪೂರಕವಾಗಿದ್ದು, ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ವಲಯಗಳಿಗೆ ಪೂರಕವಾದ ನೆಲೆಯಲ್ಲಿರುವುದಾಗಿದೆ.

ಅಧ್ಯಾಯ ಎಂಟು ಸಮಾರೋಪವಾಗಿರುತ್ತದೆ. ಈ ಅಧ್ಯಾಯದಲ್ಲಿ ಇದುವರೆಗಿನ ಅಧ್ಯಾಯದಲ್ಲಿ ಕಂಡುಕೊಂಡ ಫಲಿತಗಳನ್ನು ಗುರುತಿಸಲಾಗಿದೆ. ನಂತರದಲ್ಲಿ ಪ್ರಸ್ತುತ ಅಧ್ಯಯನಕ್ಕೆ ಸೂಕ್ತವಾದ ಮಾಹಿತಿಯನ್ನು ನೀಡಿದ ಪೀಠಾಧ್ಯಕ್ಷರು ಹಾಗೂ ಇನ್ನಿತರೆ ವಕ್ತೃಗಳ ವಿವರವನ್ನು ದಾಖಲಿಸಲಾಗಿದೆ. ಕೊನೆಯದಾಗಿ ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಂಡಿರುವ ಪರಾಮರ್ಶನ ಗ್ರಂಥಗಳನ್ನು ಅಕಾರಾದಿಯಾಗಿ ಗುರುತಿಸಲಾಗಿದೆ.

ಇಂತಹ ಒಂದು ಅಧ್ಯಯನದಿಂದ ಈ ರಾಜ್ಯದ ಅಲಕ್ಷಿತ ಸಮುದಾಯಗಳ ಸಾಂಸ್ಕೃತಿಕ ಮತ್ತು ಧಾರ್ಮಿಕ ಹಾಗೂ ಸಾಂಪ್ರದಾಯಿಕ ಅನನ್ಯತೆಯ ಜೊತೆಗೆ ಅವುಗಳ ಸಂರಕ್ಷಣೆಯನ್ನು ಕುರಿತಾಗಿ ಸಮುದಾಯ ಮತ್ತು ಮಠಾಧೀಶ್ವರ ಕರ್ತವ್ಯ ಹಾಗೂ ಜವಾಬ್ದಾರಿಗಳ ಮೇಲೆ ಬೆಳಕು ಚೆಲ್ಲಿದಂತಾಗುತ್ತದೆ. ಇದು ಅಲಕ್ಷಿತ ಸಮುದಾಯಗಳ ಸಾಮುದಾಯಿಕ ಅಭಿವೃದ್ಧಿಗೆ ಹಿಡಿದ ಒಂದು ದೀವಟಿಗೆಯಾಗುವುದೆಂದು ಪರಿಭಾವಿಸಲಾಗಿದೆ.

ಅಧ್ಯಯನದ ಸಮೀಕ್ಷೆ

ಕರ್ನಾಟಕದ ಮಠಗಳು ಮತ್ತು ಕನ್ನಡ ಸಾಹಿತ್ಯ

ಈ ಕೃತಿಯು ಕೆ.ರವೀಂದ್ರನಾಥ ಅವರು ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ೧೯೯೫ರಲ್ಲಿ ಸಲ್ಲಿಸಿದ ಈ ಮಹಾಪ್ರಬಂಧ ೨೦೦೭ರಲ್ಲಿ ಮುದ್ರಣಕಂಡದ್ದಾಗಿದೆ.

ಕನ್ನಡ ಸಾಹಿತ್ಯ ನಿಂತ ನೀರಾಗದೆ ಹರಿಯುವ ಜಲವಾಗಿ ಪಸರಿಸಲು ಮತ್ತು ಕನ್ನಡ ಸಾಹಿತ್ಯ ಪೋಷಣೆಗೊಂಡು ತನ್ನ ವಿಸ್ತರತೆಯನ್ನು ಬಲಿಷ್ಠವಾಗಿಸಿಕೊಳ್ಳಲು ಕನ್ನಡ ನಾಡಿನ ಮಠಗಳು ತುಂಬಾ ಮಹತ್ವದ್ದಾಗಿವೆ. ಇಂತಹ ಮಹತ್ವತೆಯನ್ನು ಒಟ್ಟಾಗಿ ಕಟ್ಟಿಕೊಡುವಲ್ಲಿ ಈ ಮಹಾಪ್ರಬಂಧದ ಮುನ್ನೆಲೆಯಾಗಿ ನಿಂತದ್ದು ತಲಸ್ಪರ್ಶಿ ವಿವೇಚನೆಯ ದಾಪುಗಾಲಾಗಿದೆ. ಪ್ರಬಂಧದ ಅಧ್ಯಾಯಗಳಾಗಿ ಮಠಗಳು ಮತ್ತು ಕನ್ನಡ ಸಾಹಿತ್ಯ, ವೀರಶೈವ ಮಠಗಳು

ಮತ್ತು ಸ್ಥಿತಿಗತಿ-ಬೆಳವಣಿಗೆಗಳು, ಮೂರನೆಯದಾಗಿ ವೈದಿಕ ಮಠಗಳು ಮತ್ತು ಕನ್ನಡ ಸಾಹಿತ್ಯ, ಕ್ರೈಸ್ತಮಠಗಳು ಮತ್ತು ಕನ್ನಡ ಸಾಹಿತ್ಯ ವಿಷಯಾದಿಗಳಾಗಿ ಕರ್ನಾಟಕದಲ್ಲಿನ ಪ್ರಾಚೀನ ಕಾಲದ ಮಠಮಾನ್ಯಗಳ ವಿಚಾರಾದಿಗಳಿಂದ ಆಧುನಿಕ ವಿದ್ಯಾಕೇಂದ್ರಗಳಾಗಿ ನೆಲೆಗೊಂಡು ಪ್ರಸ್ತುತ ಸಂದರ್ಭದಲ್ಲಿನ ವಸ್ತುವಿಚಾರಗಳನ್ನು ಕೃತಿ ಉದ್ದಕ್ಕೂ ಚರ್ಚಿಸಿದ್ದು ಆರೋಗ್ಯಪೂರ್ಣ ಸಮಾಜದ ಸುಸ್ಥಿತೆಗೆ ಮಠಮಾನ್ಯಗಳೂ ಒಂದು ರೀತಿ ಮಾರ್ಗದರ್ಶಕಗಳಾಗಿವೆ ಎಂದು ಒಟ್ಟಾರೆ ಕೃತಿಯಿಂದ ತಿಳಿಯಬಹುದಾಗಿದೆ.

ಇಲ್ಲಿ ಬಿತ್ತರಗೊಂಡ ವಿಚಾರಗಳು ಬದಲಾಗುತ್ತಿರುವ ಸಮಾಜಕ್ಕೂ ಕನ್ನಡಿಯಾಗಿಸಿಕೊಂಡು ಎಲ್ಲ ಕಾಲಕ್ಕೂ ಹಿತಕಾಯುವ ಸಾಂಸ್ಕೃತಿಕ ಪರಂಪರೆಯನ್ನು ಮನಗಾಣಬಹುದಾಗಿದೆ.

ಮಹಾಮಹತ್ತಿನ ಮಠಗಳು ಒಂದು ಅಧ್ಯಯನ

ಮರುಳಸಿದ್ದೇಶ್ವರ ವೀರಶೈವ ಅಧ್ಯಯನ ಕೇಂದ್ರ-ಕವಲೆದುರ್ಗ, ಶಿವಮೊಗ್ಗದಿಂದ ಪ್ರಕಟವಾದ ಈ ಐತಿಹಾಸಿಕ ಪ್ರಬಂಧಗಳ ಗುಚ್ಛ-ಜಯದೇವಪ್ಪ ಜೈನಕೇರಿ, ಡಾ.ಜಗದೀಶ್ ಅವರಿಂದ ಸಂಪಾದಿತಗೊಂಡು ೨೦೦೮ರಲ್ಲಿ ಪ್ರಕಟಗೊಂಡದ್ದಾಗಿದೆ.

ಡಾ.ಅ.ಸುಂದರ, ಡಾ.ಬಿ.ರಾಜಶೇಖರಪ್ಪ, ಡಾ.ಬಿ.ನಂಜುಂಡಸ್ವಾಮಿ, ಡಾ.ಎಸ್.ವಿದ್ಯಾಶಂಕರ್ ಗಳಾದಿಯಾಗಿ ೨೧ ವಿದ್ವಾಂಸರಿಂದ ದಿನಾಂಕ ೪ ಮತ್ತು ೫ ಮಾರ್ಚ್ ೨೦೦೬ರಂದು ಕೌಲೇದುರ್ಗ ಮಹಾಮಹತ್ತಿನ ಮಠದಲ್ಲಿ ನಡೆದ ವಿಚಾರ ಸಂಕಿರಣದ ಪ್ರಬುದ್ಧಮಾನವಾದ ಪ್ರಬಂಧಗಳಿಂದ ಆವೃತವಾದ ಕೃತಿ ಇದಾಗಿದೆ.

ಕರ್ನಾಟಕದ ಸಂಸ್ಕೃತಿಯನ್ನು ಉಳಿಸಿ-ಬೆಳೆಸಿ ಉಜ್ವಲಗೊಳಿಸಲು ಮಠಮಾನ್ಯಗಳ ಪಾತ್ರ ಅಪಾರವಾದದ್ದಾಗಿದ್ದು, ಇದರಡಿಯಲ್ಲಿ ಬೆಳೆದುಬಂದಂತಹ ರಾಜಮನೆತನಗಳು, ಸಾವಿರಾರು, ಸಂತ ಶರಣರು, ಕನ್ನಡ ನಾಡಿನ ಬೂಷ್ಟತೆಯನ್ನು ಹೆಚ್ಚಿಸಿದವರುಗಳು ಉಳಿಯಲಿ ಎಂಬ ಬೀಜಮಂತ್ರದೊಂದಿಗೆ ಧರ್ಮ ಜಾಗೃತಿಗೊಳಿಸುವಲ್ಲಿ ಸಕ್ರಿಯ ಪಾತ್ರ ವಹಿಸಿದ್ದವು. ಕೆಳದಿ, ಇಕ್ಕೇರಿ, ಬಿದನೂರು, ಭುವನ ಗಿರಿದುರ್ಗದ ಮಠಗಳು, ಕೆಳದಿ ಅರಸರ ಕಾಲಘಟ್ಟದ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರ ಉತ್ತುಂಗಕ್ಕೇರಲು ಕೆಳದಿ ರಾಜಗುರು ಮಹಾಮಹತ್ತಿನ ಸಂಸ್ಥಾನಾದೀಶ ಮಠವು ಅಂದಿನಿಂದ ಇಂದಿನ ಪ್ರಸ್ತುತತೆವರೆಗೆ ಸಮಾಜದ ಸೇವಾ ಕೈಂಕರ್ಯವನ್ನು ಮುನ್ನಡೆಸಿಕೊಂಡು ಬಂದಿರುವುದನ್ನು ಕೃತಿಯ ಅಧ್ಯಯನ ಪೂರಕವಾಗಿ ತಿಳಿದು ಬರುವ ಮಹತ್ವದ ಅಂಶವಾಗಿದೆ. ಅಲ್ಲದೆ ಕೃತಿ ಉದ್ದಕ್ಕೂ ಬಿತ್ತರಗೊಂಡ ಮಹಾಮತ್ತಿನ ಮಠ ವಿಚಾರಾಂಶಗಳಾದ, ಬಹುಭಾಗ ನೆಲೆಯಲ್ಲಿ ಮಹತ್ತಿನ ಮಠಗಳ ಸ್ಥಿತಿಗತಿಗಳು,

ಮಧ್ಯಕರ್ನಾಟಕದಲ್ಲಿನ ಮಠಗಳ ಸ್ಥಿತಿಗತಿಗಳು, ಕೆಳದಿ ಅರಸರ ಈ ಮಠಮಾನ್ಯಗಳಿಗೆ ಬೆಳವಣಿಗೆಗೆ ಕಾರಣವಾದ ವಿಧಾನಗಳು, ಮಹತ್ತಿನ ಮಠಗಳ ಸಾಂಸ್ಕೃತಿಕ, ಸಾಹಿತ್ಯಿಕ ಚಹರೆಗಳು, ಮಹಾಮತ್ತಿನ ವಿಚಾರವಾಗಿ ಜನಪದರ ವಿಚಾರ, ಕಲ್ಪನೆಗಳು, ಶಾಸನಗಳಲ್ಲಿ ಮಹತ್ತಿನ ಮಠಗಳ ಉಲ್ಲೇಖ ಕುರಿತ ಚರ್ಚೆಗಳು ಈ ಮಹತ್ತಿನ ಮಠಗಳಿಂದಾದ ಸಾಮಾಜಿಕ, ಸಾಹಿತ್ಯಿಕ, ಶೈಕ್ಷಣಿಕ ಪ್ರೇರಣೆ ಪ್ರಭಾವಗಳು ಮತ್ತು ಮಠ ಸಂಸ್ಕೃತಿ, ದಾನದತ್ತಿ ವಿಚಾರಗಳು, ಆರ್ಥಿಕ ನಿರ್ವಹಣೆ ವಿಚಾರವಾಗಿ ಮಹತ್ತಿನ ಮಠಗಳು ತಳೆದ(ರೂಪಿಸಿಕೊಂಡಿದ್ದ) ಧೋರಣೆಗಳು, ಸಮಕಾಲೀನ ವೀರಶೈವ ಮಠಗಳು ಮತ್ತು ಮಹತ್ತಿನ ಮಠಗಳೊಂದಿಗಿನ ತೌಲನಿಕ ನೋಟ ಇತ್ಯಾದಿ ಸಾಂದರ್ಭಿಕಪೂರಿತ ವಿಚಾರಗಳನ್ನು ಕೃತಿ ಉದ್ದಕ್ಕೂ ಕಾಣಬಹುದಾಗಿದೆ.

ಕರ್ನಾಟಕದ ಸಾಂಸ್ಕೃತಿಕ ಕೇಂದ್ರಗಳೆನಿಸಿದ ಮಠಗಳು ಇಂದು ಶೈಕ್ಷಣಿಕ, ಸಾಮಾಜಿಕ, ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಹಾಗೂ ಇತರೆ ನೆಲೆಗಳ ಮೂಲಕ ತನ್ನ ಬಲಿಷ್ಠತೆಯನ್ನು ಆಧುನಿಕತೆಗೆ ತೆರೆದುಕೊಂಡದ್ದಾಗಿದೆ.

ಶಿಷ್ಟ ಮಠಗಳ ಕುರಿತಂತೆ ಅಲಕ್ಷಿತ ಮಠಗಳ ಕುರಿತು ಅಧ್ಯಯನಗಳು ಆಗಿರುವುದನ್ನು ಕಾಣಬಹುದು. ಆದರೆ ಅಲಕ್ಷಿತ ಮಠಗಳ ಕುರಿತಂತೆ ಇದುವರೆಗೂ ಯಾವುದೇ ರೀತಿಯ ಅಧ್ಯಯನಗಳು ಆಗಿರುವುದಿಲ್ಲ. ಆದರೆ ಅಲ್ಲಲ್ಲಿ ಅಲಕ್ಷಿತ ಮಠಗಳ ಕುರಿತಂತೆ ಒಂದೆರಡು ಬಿಡಿ ಲೇಖನಗಳು ಬಂದಿರುವುದನ್ನು ಕಾಣಬಹುದು.

ಅಧ್ಯಾಯ: ಎರಡು

ಅಲಕ್ಷಿತರು

೧. ಪ್ರಸ್ತಾವನೆ

೨. ಭಾರತೀಯ ವರ್ಣ ವ್ಯವಸ್ಥೆ ಸ್ವರೂಪ

೩. ಅಲಕ್ಷಿತರು; ಪರಿಕಲ್ಪನೆ ಮತ್ತು ವಿಶ್ಲೇಷಣೆ

೪. ಅಲಕ್ಷಿತರ ಸಮುದಾಯಗಳು: ಸಮಸ್ಯೆ-ಸವಾಲುಗಳು

೫. ಅಲಕ್ಷಿತರ ಸಮುದಾಯಗಳು ಮತ್ತು ಸಾಮಾಜಿಕ ಚಿಂತನೆ

ಅಧ್ಯಾಯ: ಎರಡು

ಅಲಕ್ಷಿತರು

೧. ಪ್ರಸ್ತಾವನೆ

Might is right ಎಂಬ ಕಾಲವೊಂದಿತ್ತು. ಅಲ್ಲಿ ನ್ಯಾಯ ಅನ್ಯಾಯಗಳ ಪರಿವೆ ಇರಲಿಲ್ಲ. ಬಲಿಷ್ಟವಾದವು ಬದುಕುತಿದ್ದವು. ಅಶಕ್ತ ಜೀವಿಗಳಿಗೆ ಉಳಿಗಾಲವಿರಲಿಲ್ಲ. ಒಂದು ಇನ್ನೊಂದನ್ನು ತಿಂದು ಬದುಕುವುದು ಸಹಜವಾಗಿತ್ತು. ಅದು ಭಯಾನಕವಾದಾಗ ತಮ್ಮ ಸಂತತಿಯ ಉಳಿವಿಗಾಗಿ ನೀತಿ ನಿಯಮಗಳನ್ನು ರೂಪಿಸಿಕೊಂಡು ತಾನು ಬದುಕಿ ಇತರರನ್ನು ಬದುಕುಳಿಯುವಂತೆ ಮಾಡಿಕೊಂಡ ಪ್ರಾಣಿಯಲ್ಲಿ ಮಾನವ ಮೊದಲಿಗ. ಹೀಗಾಗಿ ಮಾನವ ಸಾಮಾಜಿಕ ಪ್ರಾಣಿಯಾದ. ಇತರೆ ಜೀವಿಗಳು ಜೀವಿಗಳಾಗಿಯೇ, ಪ್ರಾಣಿಗಳು ಪ್ರಾಣಿಗಳಾಗಿಯೇ ಉಳಿದವು.

ಅಂತೆಯೇ ಡಾರ್ವಿನ್‌ನ ವಿಕಾಸವಾದ ತತ್ವದಲ್ಲಿ ಪ್ರಬಲವಾದ ಜೀವಿಗಳು ಭೂಮಿಯ ಮೇಲೆ ತಮ್ಮ ಅಸ್ತಿತ್ವ ಉಳಿಸಿಕೊಂಡರೆ, ದುರ್ಬಲವಾದ ಹಲವಾರು ಜೀವಿಗಳು ನಶಿಸಿ ಹೋದವು. ಮನುಷ್ಯ ಜೀವಿ ಪರಿಸರದ ಅನೇಕ ಸವಾಲುಗಳ ನಡುವೆಯೂ ತನ್ನ ಪ್ರಬಲ ಅಸ್ತಿತ್ವ ಉಳಿಸಿಕೊಂಡು ಜೀವಿಸತೊಡಗಿದ. ಆರಂಭದಲ್ಲಿ ಅಲೆಮಾರಿಯಾಗಿದ್ದ ಮನುಷ್ಯ ಪ್ರಾಣಿ ಪಕ್ಷಿಗಳನ್ನು ಬೇಟೆಯಾಡಿ ಹಾಗೂ ಕಾಡು–ಮೇಡಿನಲ್ಲಿ ಸಿಕ್ಕ ಗಡ್ಡೆ ಗೆಣಸನ್ನು ತಿಂದು ಜೀವನ ಕಳೆಯುತ್ತಿದ್ದವನು ಮುಂದೆ ಕೃಷಿಯನ್ನು ಕಂಡುಕೊಂಡ ಮೇಲೆ ಒಂದೆಡೆ ನೆಲೆನಿಂತು ಜೀವನ ಸಾಗಿಸತೊಡಗಿದನು. ಕಾಲಾಂತರದಲ್ಲಿ ಕೃಷಿಯಲ್ಲಿ ನೈಪುಣ್ಯತೆಯನ್ನು ಪಡೆದ ನಂತರ ಅದಕ್ಕೆ ಬೇಕಾದ ಸಲಕರಣೆಗಳ ತಯಾರಿಕೆಗೆ ಮನುಷ್ಯ ಮುಂದಾದ. ಆಗ ಕೃಷಿಯೊಟ್ಟಿಗೆ ಅನೇಕ ಕಸುಬುಗಳು ನಿರ್ಮಾಣಗೊಂಡವು. ವಿವಿಧ ವೃತ್ತಿ ಬದುಕಿನೊಂದಿಗೆ ಜೀವಿಸುತ್ತಿದ್ದ ಮನುಜ ಸಮಾಜದೊಟ್ಟಿಗೆ ಬದುಕಲಾರಂಭಿಸಿದ. ಮುಂದೆ ಸಮಾಜದಲ್ಲಿ ವೃತ್ತಿ ಬದುಕಿನ ಆಧಾರದ ಮೇಲೆ ಕುಲಗಳು–ಸಮುದಾಯಗಳು ನಿರ್ಮಾಣಗೊಂಡವು. ಆರಂಭದಲ್ಲಿ ವೃತ್ತಿಯ ಹೆಸರಿನಲ್ಲಿ ಸಮುದಾಯಗಳನ್ನು ಗುರುತಿಸುವ ಮತ್ತು ಕರೆಯುವ ರೂಢಿ ಬೆಳೆದು ಬಂತು.

ಮುಂದೆ ಅವೇ ಕುಲಗಳಾಗಿ ರೂಪಗೊಂಡವು. ನೇಗಿಲು ತಯಾರಕ ಬಡಿಗ, ಕುಂಭ ತಯಾರಿಕರಿಗೆ ಕುಂಬಾರ, ಮೆಟ್ಟು ತಯಾರಿಕ ಮೋಚಿ, ಬಳೆಮಾರುವವರಿಗೆ ಬಳೆಗಾರ, ಕ್ಷೌರ ಮಾಡುವವರಿಗೆ ಕ್ಷೌರಿಕ, ನೇಯುವ ನೇಕಾರ, ಬಣ್ಣ ಹಾಕುವ ಬಣ್ಣಗಾರ, ಸುಣ್ಣದ ಕೆಲಸ ಮಾಡುವವರಿಗೆ ಸುಣ್ಣಗಾರ, ಬಹುರೂಪಗಳನ್ನು ಧರಿಸಿ ಮನೋರಂಜನೆ ಮಾಡುವ ಬಹುರೂಪಿ, ದನಗಳನ್ನು ಕಾಯುವ ದನಗಾರ, ಕುರಿಗಳನ್ನು ಕಾಯುವ ಕುರಿಗಾರ ಇತ್ಯಾದಿಯಾಗಿ ಕಸುಬುಗಳ ಆಧಾರದ ಮೇಲೆ ಕುಲಗಳು ಹುಟ್ಟಿಕೊಂಡವು.

'ಬೇಟೆಯಾಡಿ ಜೀವಿಸುತ್ತಿದ್ದ ಮಾನವನ ವ್ಯವಸ್ಥಿತ ಬದುಕಿನ ಮೂಲಭೂತ ಸಂಗತಿಗಳಾಗಿ ನೀರು, ಬೆಂಕಿ, ಭೂಮಿಯ ಶೋಧಗಳನ್ನು ಗುರುತಿಸಬಹುದಾಗಿದೆ. ಹಾಗಾಗಿ ಬಹುಪಾಲು ನಾಗರಿಕತೆಗಳು ನೀರಿನ ದಡದಲ್ಲಿ ಹುಟ್ಟಿಕೊಂಡಿರುವುದು ಸಾಕಷ್ಟು ಉಲ್ಲೇಖಗಳು ಇತಿಹಾಸದಲ್ಲಿ ದೊರೆಯುತ್ತವೆ. ಗುಂಪುಗಳಾಗಿ ಬದುಕಲು ಮನುಜ ಪ್ರಯತ್ನಿಸಿದ ನಾಗರಿಕ ಬದುಕಿನ ಹೊಸ್ತಿಲುಗಳು. ಮಾನವ ಕಾಡು ತೊರೆದು, ಒಂದು ನಿರ್ಧಿಷ್ಟ ಭೂ ಪ್ರದೇಶವನ್ನು ಆಯ್ದುಕೊಂಡು, ಸ್ಥಿರವಾಗಿ ನೆಲೆಸಿ, ವ್ಯವಸ್ಥಿತ ಬದುಕನ್ನು ಕಟ್ಟಿಕೊಂಡಿದ್ದನ್ನು ತಿಳಿಯಲು ಶಿಲಾಯುಗ ಮತ್ತು ಲೋಹಯುಗಗಳಲ್ಲಿ ಮಾನವನು ಅಂದು ಬಳಸುತ್ತಿದ್ದ ಪ್ರಾಚೀನ ಉಪಕರಣಗಳ ಕುರುಹುಗಳೇ ಬದುಕು ಇಂತಹ ಪ್ರಯತ್ನಗಳಿಗೆ ಸಾಕ್ಷಿಗಳಾಗಿವೆ. ಮಾನವನ ಉದಯದ ಸಹಸ್ರಾರು ವರ್ಷಗಳ ನಂತರ ಬದಲಾದ ಅವನ ಜೀವನಕ್ರಮ, ಆಹಾರ ಪದ್ಧತಿ, ವ್ಯವಸಾಯ, ಉಡುಗೆ-ತೊಡುಗೆ, ಆಯುಧಗಳ ಆವಿಷ್ಕಾರ ಮೊದಲಾದವು ವ್ಯವಸ್ಥಿತ ಬದುಕಿಗೆ ನಾಂದಿಹಾಡಿದವು'[೨](ಮಂಜುನಾಥ ಬೇವಿನಕಟ್ಟಿ, ೨೦೧೬).

ಪ್ರಕೃತಿಯ ಜೊತೆಗೆ ನಿರಂತರ ಸಂಘರ್ಷಗಳೇರ್ಪಟ್ಟಾಗ ಅದರೊಂದಿಗೆ ಸೆಣಸುತ್ತಾ, ಪರಿಹಾರಗಳನ್ನು ಹುಡುಕಿಕೊಳ್ಳುವ ಪ್ರಯತ್ನಗಳ ಮೂಲಕ ಸ್ಥಿರವಾದ ನೆಲೆ, ತೀವ್ರವಾದ ಬದಲಾವಣೆಗಳಿಗೆ ಕಾರಣವಾದವು. ಹಾಗೂ ಸಹಕಾರ ಮತ್ತು ಸಹಬಾಳ್ವೆಯನ್ನು ಹೊಂದಿದ ವ್ಯವಸ್ಥಿತ ಸಮಾಜದ ನಿರ್ಮಾಣಕ್ಕೆ ನಾಂದಿ ಹಾಡಿದವು.

೨. ಭಾರತೀಯ ವರ್ಣ ವ್ಯವಸ್ಥೆ ಸ್ವರೂಪ

ಭಾರತದಲ್ಲಿ ಮೊದಲು ವರ್ಣವ್ಯವಸ್ಥೆ ರೂಢಿಯಲ್ಲಿತ್ತು. ಇದು ಯಾವಾಗ ಯಾವ ಕಾರಣಗಳಿಂದ ಆರಂಭಗೊಂಡಿತೆಂದು ಹೇಳುವುದು ಕಷ್ಟ. ಏಕೆಂದರೆ ಯಾವುದೇ ಸಾಮಾಜಿಕ ವ್ಯವಸ್ಥೆಯ ಉಗಮದ ಬಗ್ಗೆ ಖಚಿತವಾಗಿ ಹೇಳಲು ಸಾಧ್ಯವಿಲ್ಲದಿದ್ದರೂ, ವೇದಗಳ ಕಾಲದಲ್ಲಿ ಆರಂಭವಾದ ವೇದಗಳಲ್ಲೇ ಕಂಡುಬರುವ ವರ್ಣವ್ಯವಸ್ಥೆ ಮುಂದೆ ಸಮುದಾಯಗಳಿಗೆ ಎಡೆಮಾಡಿಕೊಟ್ಟಿತು ಎಂಬುದು ಸಾಮಾನ್ಯವಾಗಿ ಎಲ್ಲಾ ವಿದ್ವಾಂಸರ ಅಭಿಪ್ರಾಯ. ವರ್ಣದ ಪರಿಕಲ್ಪನೆಯನ್ನು ವಿವೇಚಿಸಿದಾಗ

ಕೆಲವು ಅಂಶಗಳು ಗೋಚರವಾಗುತ್ತವೆ. **'ಚಾತುರ್ವರ್ಣ'** ಎಂಬುದು ಹಿಂದೂ ಧರ್ಮದ ಒಂದು ರೀತಿಯ ಸಾಮಾಜಿಕ ವಿಭಜನಾ ವ್ಯವಸ್ಥೆ. ಇದು ಪ್ರಾಚೀನ ಸಮಾಜದಲ್ಲಿ ಶ್ರಮವಿಭಜನೆಯ ತತ್ವದಡಿಯಲ್ಲಿ ರೂಪಿತವಾಗಿದೆ. ಬ್ರಾಹ್ಮಣ-ಅಧ್ಯಯನ, ಅಧ್ಯಾಪನ, ಯಜ್ಞಯಾಗಾದಿಗಳಲ್ಲಿಯೂ, ಕ್ಷತ್ರಿಯನು-ರಾಜ್ಯ ಆಡಳಿತದಲ್ಲಿಯೂ, ವೈಶ್ಯ-ವ್ಯಾಪಾರ, ವ್ಯವಹಾರದಲ್ಲಿಯೂ, ಮತ್ತು ಶೂದ್ರ-ಕೃಷಿ-ಕೂಲಿಕಾರರಾಗಿಯೂ ಕಾರ್ಯ ನಿರ್ವಹಿಸುತ್ತಾ ಬಂದಿರುವುದನ್ನು ಕಾಣುತ್ತೇವೆ. ಶೂದ್ರರಿಗಿಂತ ಕೆಳಗಿನವರಾದ ಅಂತ್ಯಜರ ಪರಿಸ್ಥಿತಿಯಂತೂ ಅವರು ಮನುಷ್ಯರೇ ಅಲ್ಲವೇನೋ ಎನಿಸುವಂತಿತ್ತು. ಅವರಿಗೆ ಚಾತುರ್ವರ್ಣದ ಚೌಕಟ್ಟಿನೊಳಗೂ ಜಾಗ ಕೊಟ್ಟಿರಲಿಲ್ಲ. ಅವರ ಸ್ಥಾನ ಎಷ್ಟು ನಿಕೃಷ್ಟವಾಗಿತ್ತೆಂದರೆ ಕೆಲವೊಮ್ಮೆ ಅವರನ್ನು ಪಶುಗಳಿಗಿಂತಲೂ ಕೀಳಾಗಿ ಕಾಣುತ್ತಿದ್ದರು ಎಂದು ಖ್ಯಾತ ಮಾರ್ಕ್ಸ್‌ವಾದಿ ಚಿಂತಕ ಎಸ್.ಜಿ.ಸರದೇಸಾಯಿ ಹೇಳುತ್ತಾರೆ. "ಸಾಮಾಜಿಕ ಮತ್ತು ಆರ್ಥಿಕ ಜೀವನವು ಹೆಚ್ಚು ಹೆಚ್ಚು ವಿಕಾಸಗೊಂಡಂತೆ ಬ್ರಾಹ್ಮಣರು, ಕ್ಷತ್ರಿಯರು ಮತ್ತು ವೈಶ್ಯರೊಡನೆ ಹಂಚಲ್ಪಡುವ ಹೆಚ್ಚುವರಿ ಉತ್ಪಾದನೆಯ ಪ್ರಮಾಣ ಬೆಳೆಯುತ್ತಾ ಅದನ್ನು ಉತ್ಪಾದಿಸುವುದರಿಂದ ಶೂದ್ರ ಸಮುದಾಯದವರ ಶ್ರಮಭಾರವೂ ಬಹುಮುಖವಾಗಿ ಬೆಳೆದಾಗ ಸಮುದಾಯಗಳ ಸಂಖ್ಯೆಯೂ ಅವುಗಳ ನಡುವೆ ಅಸಮಾನತೆಯೂ ಹೆಚ್ಚಾಯಿತು"[೨] ಎಂದು ಇ **ಎಂ ನಂಬೂದಿರಿಪಾಡ್** ಹೇಳುತ್ತಾರೆ. ಒಟ್ಟಾರೆ ಎಲ್ಲಾ ಸಮುದಾಯಗಳ ಉದಯಕ್ಕೆ ವರ್ಣವೇ ಮೂಲವಾಗಿದೆ(ಪಾರ್ವತಮ್ಮ, ೧೯೮೪, ೫೬).

ಅಸ್ಪೃಶ್ಯತೆ ವರ್ಣವ್ಯವಸ್ಥೆಯ ಹುಟ್ಟಿನೊಂದಿಗೆ ಅಸ್ತಿತ್ವವನ್ನು ಪಡೆದುಕೊಂಡಿದೆ ಎಂಬುದು ವಿದ್ವಾಂಸರ ಅಭಿಪ್ರಾಯ. ಸ್ಪೃಶ್ಯ ಮತ್ತು ಅಸ್ಪೃಶ್ಯ ಭಾವನೆ ಮುಖ್ಯವಾಗಿ ಶುದ್ಧತೆ ಅಶುದ್ಧತೆಗಳಿಗೆ ಸಂಬಂಧಿಸಿದರೆ, ಅಸ್ಪೃಶ್ಯ ಎಂಬುದು ಮುಟ್ಟಬಾರದ, ಮುಟ್ಟಲಾಗದ ಎಂಬ ಅರ್ಥದಲ್ಲಿ ಬಳಕೆಯಾಗಿದೆ. ಅಸ್ಪೃಶ್ಯತೆಯ ಪರಿಕಲ್ಪನೆ ಮೊದಲು ಮಾನಸಿಕವಾಗಿ ಉದ್ಭವಗೊಂಡು ಕ್ರಮೇಣ ಬ್ರಹ್ಮರಾಕ್ಷಸನ ರೀತಿಯಲ್ಲಿ ರೂಪ ತಾಳಿದೆ. ಅಸ್ಪೃಶ್ಯತೆಯ ಬಗೆಗೆ ಆಧುನಿಕ ಯುಗದಲ್ಲಿ **ಗಾಂಧೀಜಿ**ಯವರಷ್ಟು ಆಲೋಚಿಸಿದವರು ಮತ್ತೊಬ್ಬರಿಲ್ಲ. 'ಅಸ್ಪೃಶ್ಯತೆ' ಎನ್ನುವುದು ಬರೀ ಹರಿಜನರ ಮಟ್ಟಿಗೆ ಮಾತ್ರ ಸೇರಿದ್ದಲ್ಲ. ಎಲ್ಲಿಯವರೆಗೆ ಸಮುದಾಯ ಪ್ರಶ್ನೆ ಜೀವಂತವಾಗಿರುತ್ತದೆಯೋ ಅಲ್ಲಿಯವರೆಗೂ ಅಸ್ಪೃಶ್ಯತೆ ಇರುತ್ತದೆ. ಪ್ರತಿಯೊಬ್ಬ ಮೇಲು ಸಮುದಾಯದವನಿಗೂ ಅವನ ಕೆಳ ಸಮುದಾಯದವನು ಅಸ್ಪೃಶ್ಯನೇ ಆಗಿರುತ್ತಾನೆ. ಒಟ್ಟಾರೆ ಸಮುದಾಯ ಪದ್ಧತಿ ಮತ್ತು ಅಸ್ಪೃಶ್ಯತೆಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ.

ಅಲಕ್ಷೀಕರಣವು ಒಂದು ಪ್ರಕ್ರಿಯೆಯಾಗಿದ್ದು, ವಿವಿಧ ತೆರನಾದ ಅಸಮಾನತೆ, ವಂಚಿತತೆ ಮತ್ತು ಹಿಂದುಳಿದಿರುವಿಕೆ ಮತ್ತು ಬಡತನ ಸಂಬಂಧಿತ ಪ್ರತ್ಯೇಕತೆಯಿಂದ ಬಳಲುತ್ತಾ ಹೋಗುತ್ತದೆ. ಸಮಾಜದಲ್ಲಿ ಇವುಗಳ ಪ್ರಮಾಣ ತೀವ್ರಗೊಳ್ಳುತ್ತಾ ಹೋದಂತೆ ಅಲಕ್ಷೀಕರಣವು ತನ್ನ ವ್ಯಾಪ್ತಿಯನ್ನು

ವಿಸ್ತರಿಸಿಕೊಳ್ಳುತ್ತಾ ಹೋಗುತ್ತದೆ. ಕೊನೆಗೆ ಸಮಾಜವನ್ನು ನುಂಗಿ ನೀರು ಕುಡಿಯುತ್ತದೆ. ಅಂದರೆ ಎಲ್ಲಿಯವರೆಗೆ ಸಮಾಜದಲ್ಲಿ ತಾರತಮ್ಯ, ಅಸಮಾನತೆ, ಬಡತನ, ಅನಕ್ಷರತೆ, ಸಮುದಾಯ-ವರ್ಗದ ಕಂದಕಗಳಿರುತ್ತವೆಯೋ ಅಲ್ಲಿಯವರೆಗೆ ಅಲಕ್ಷೀಕರಣ ಪ್ರಕ್ರಿಯೆ ಇರುತ್ತದೆ. ಅಲಕ್ಷೀಕರಣಕ್ಕೆ ಒಳಗಾಗುವ ವ್ಯಕ್ತಿಗಳಿಗೆ ಮತ್ತು ಗುಂಪುಗಳಿಗೆ ಅದು ಒಂದು ಶಾಪವಾಗಿ ಪರಿಣಮಿಸುತ್ತದೆ.

ಇಷ್ಟಾಗಿಯೂ ವರ್ಣ ಪದ್ಧತಿಯ ಅಸ್ತಿತ್ವ ಎಂಬುದು ಕಲ್ಪನೆ ಮಾತ್ರ. ಇಂದು ಸಮುದಾಯ ಪದ್ಧತಿ ಭಾರತೀಯ ಸಮಾಜದ ವಾಸ್ತವವಾಗಿದೆ(Caste is reality of Indian society). ಸಮುದಾಯ ಪದ್ಧತಿಯು ಅಲಕ್ಷೀಕರಣಕ್ಕೆ ಮುಖ್ಯವಾದ ಕಾರಣವಾಗಿದೆ. ಸಮುದಾಯ ಪದ್ಧತಿ ಒಂದು ಏಕತೆರನಾದ (Homogenious) ಗುಂಪಾಗಿರದೆ, ಹಲವಾರು ಸಾಂಸ್ಕೃತಿಕ ವೈವಿಧ್ಯತೆಗಳನ್ನು ಹೊಂದಿದೆ. ಇಂತಹ ಸಮುದಾಯ ಸಾಂಸ್ಕೃತಿಕ ವೈರುಧ್ಯಗಳನ್ನು ಪ್ರಪಂಚದ ಯಾವುದೇ ಭಾಗದಲ್ಲಿಯೂ ನೋಡಲು ಸಾಧ್ಯವಿಲ್ಲ. ಸಮುದಾಯ ಸಾಂಸ್ಕೃತಿಕ ಭಿನ್ನತೆಗಳಿಂದಾಗಿಯೇ ಇಲ್ಲಿಯ ಸಾಮಾಜಿಕ ಗುಂಪುಗಳು ಒಡೆದು ಹೋಗಿವೆ. ಸಾಂಸ್ಕೃತಿಕ ಭಿನ್ನತೆಯಿಂದಾಗಿಯೇ ಅಲಕ್ಷೀಕರಣದ ಪ್ರಕ್ರಿಯೆ ವಿಸ್ತಾರವಾಗುತ್ತಾ ಹೋಗಿ ಕೆಲವು ಸಮುದಾಯದಲ್ಲಿ ತನ್ನ ತೆಕ್ಕೆಯೊಳಕ್ಕೆ ಹಾಕಿಕೊಳ್ಳುತ್ತದೆ. ಭಾರತೀಯ ಸಮಾಜದಲ್ಲಿ ಒಂದೊಂದು ಸಮುದಾಯದ ಒಂದೊಂದು ದೇವರು, ಧರ್ಮ, ಸಂಪ್ರದಾಯ, ಕಟ್ಟುಪಾಡು, ನೀತಿ, ಸಾಹಿತ್ಯ, ಊಟೋಪಚಾರ, ವೃತ್ತಿಗಳಿವೆ. ಇಂತಹ ಭಿನ್ನ ಭಿನ್ನ ಸಂಸ್ಕೃತಿಗಳಲ್ಲಿ ಹುಟ್ಟಿ ಬೆಳೆದ ವ್ಯಕ್ತಿಗಳು ಸಹಜವಾಗಿಯೇ ಆಯಾ ಸಂಸ್ಕೃತಿಯ ಅಂಶಗಳನ್ನು ಮೈಗೂಡಿಸಿಕೊಂಡು ಸಾಮಾಜೀಕರಣಗೊಂಡು ಬೆಳೆಯುತ್ತಾರೆ. ಈ ರೀತಿಯ ವಿಭಿನ್ನ ಸಂಸ್ಕೃತಿಗಳಲ್ಲಿ ಕೆಲವನ್ನು ಕೀಳರಿಮೆಯ ಸಂಸ್ಕೃತಿಗಳೆಂದು ಮತ್ತು ಅಧೀನ ಸಂಸ್ಕೃತಿಗಳೆಂದು ಬಿಂಬಿತವಾಗುತ್ತವೆ.

೩. ಅಲಕ್ಷಿತರು; ಪರಿಕಲ್ಪನೆ ಮತ್ತು ವಿಶ್ಲೇಷಣೆ

ಆದಿಮದಿಂದಲೂ ಇಂದಿನ ಜಾಗತೀಕರಣ ಪ್ರಪಂಚದವರೆಗೂ ನಾವು ತುಲನೆಮಾಡಿ ನೋಡಿದಾಗ ಅಖಂಡ ಭಾರತದಲ್ಲಿ ಇಂದಿಗೂ ಅಲಕ್ಷಿತರು ಕಾಣಸಿಗುತ್ತಾರೆಂದರೆ ಆಶ್ಚರ್ಯಪಡಬೇಕಾಗಿಲ್ಲ. ಹಾಗಿದ್ದರೆ ಇಲ್ಲಿ ಅಲಕ್ಷಿತರು ಎಂದರೆ ಯಾರು ಎಂಬ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳುತ್ತಾ ಹೋದಂತೆಲ್ಲಾ ನಮಗೆ ಕಾಣಸಿಗುವುದು; "ಯಾರು ಸಮಾಜದಲ್ಲಿ ಅಂಚಿನ ಸಮುದಾಯದವರಾಗಿದ್ದು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ, ರಾಜಕೀಯ ಮತ್ತು ಸಾಂಸ್ಕೃತಿಕವಾಗಿ ಹಿಂದುಳಿದು ದಮನಕ್ಕೆ, ಶೋಷಣೆಗೆ ಒಳಗಾಗಿದ್ದಾರೋ ಮತ್ತು ಯಾವೊಂದು ಶಿಸ್ತಿನ ಸೌಲಭ್ಯ ಸೌಕರ್ಯಗಳಿಂದ ವಂಚಿತರಾಗಿದ್ದಾರೋ ಮತ್ತು ಮಡಿ ಎನ್ನುವಂತಹ ಧಾರ್ಮಿಕ ಕ್ಷೇತ್ರಕಾರ್ಯಗಳಲ್ಲಿ ಬಹುದೂರ ಉಳಿದು ಬಂದಿರುವರೋ ಅವರೇ ಅಲಕ್ಷಿತ ಸಮುದಾಯದವರು"[೩].

ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರು ಈ ಅಂಚಿನ ಸಮುದಾಯಗಳ, ನಿರ್ಲಕ್ಷಿತರ ಕುರಿತಾಗಿ, ಅವರನ್ನು ವ್ಯವಸ್ಥಿತರನ್ನಾಗಿಸಲು, ಸಮಾನತೆ ಕಲ್ಪಿಸಲು ಮತ್ತು ಕೋಮು, ಅಸಹಕಾರ ತೊಲಗಿಸಲು ಏನೆಲ್ಲಾ ಪ್ರತಿಭಟನೆ, ಹೋರಾಟ ಮತ್ತು ತಮ್ಮ ಬರೆಹಗಳಲ್ಲಿ ಚರ್ಚಿಸಿದ್ದಾರೆ. ಹಾಗೆಯೇ ಸಂವಿಧಾನ ರಚನೆ ಮಾಡುವ ಸಂದರ್ಭದಲ್ಲಿ ಅನುಚ್ಛೇದದಲ್ಲಿಯೂ ಸಹ ಉಲ್ಲೇಖಿಸಿ, ಆ ಅಂಚಿನ ಸಮುದಾಯಗಳ ಅಭ್ಯುದಯಕ್ಕೆ ಶ್ರಮಿಸಿದ್ದಾರೆ. ಆದ್ದರಿಂದ ಈಗ ಸಮುದಾಯಗಳು ಆರ್ಥಿಕವಾಗಿ, ಶೈಕ್ಷಣಿಕವಾಗಿ ಸಬಲಗೊಂಡಿವೆಯಾದರೂ, ಸಾಮಾಜಿಕವಾದ ಸಮುದಾಯ ಶ್ರೇಣೀಕರಣದ ಮನೋಭಾವ ಬದಲಾಗಿಲ್ಲ ಎಂಬುದು ವಾಸ್ತವವಾದುದು. ಸಮಾಜದಲ್ಲಿ ಮೇಲ್ವರ್ಗ–ಕೆಳವರ್ಗ(ಮೇಲು–ಕೀಳು) ಎಂಬ ನೆಲೆಗಟ್ಟಿನಲ್ಲಿ ಬೆಳೆದು ಬಂದಂತಹ ಸಮುದಾಯಗಳನ್ನು ನೋಡಿದಾಗ ಸಮಾನತೆ ಎನ್ನುವ ಪದದ ಪರಿಭಾಷೆಯ ಬಗ್ಗೆ ಮತ್ತು ಅದನ್ನು ಸಾತ್ವಿಕಗೊಳಿಸಬಲ್ಲ ಬಗ್ಗೆ ನಾವಿನ್ನೂ ತುಂಬಾ ಗಂಭೀರವಾಗಿ ಆಲೋಚಿಸುವ ಅಗತ್ಯತೆ ಹಿಂದೆಂದಿಗಿಂತಲೂ ಹೆಚ್ಚಾಗಿಯೇ ಇದೆ ಎಂಬುದು ಸ್ಪಷ್ಟವಾಗುತ್ತದೆ.

ಸಮಾನತೆ ಎನ್ನುವ ಪದದ ಪರಿಭಾಷೆಯನ್ನು ಮೊದಲು ಅರ್ಥೈಸಿಕೊಳ್ಳಬೇಕಾದವರು ನಮ್ಮನ್ನು ಆಳುವ ಸರ್ಕಾರ, ಸರ್ಕಾರದ ಪ್ರತಿನಿಧಿಗಳು ಮತ್ತು ಪ್ರಭಾವಶಾಲಿ ಧಾರ್ಮಿಕ ಕ್ಷೇತ್ರದ ಗುರುಗಳು ಹಾಗೂ ಖ್ಯಾತ ವಿದ್ವಾಂಸರು. ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರು ಹಾಕಿ ಕೊಟ್ಟಂತಹ ಸಂವಿಧಾನದ ಅನುಚ್ಛೇದಗಳನ್ನು ತಿದ್ದುಪಡಿಗೊಳಿಸಿ, ಸಮಾನತೆ–ಸಹೋದರತೆ, ಭ್ರಾತೃತ್ವದಂತಹ ವ್ಯವಸ್ಥೆಗಾಗಿ ವಿಧೇಯಕಗಳನ್ನು ಮಂಡಿಸಿ ಅವಿಷ್ಕಾರಗೊಳಿಸುವುದು. ಮುಂದುವರಿದಂತೆ ಅನ್ನ–ನೀರು, ಬಟ್ಟೆ ಒಂದು ಹೊತ್ತಿಗೂ ಸಹ ಊಟಕ್ಕೆ ಗತಿಯಿಲ್ಲದೆ ಪರದಾಡುವ ಜನ ಸಮುದಾಯಗಳನ್ನು ಮುಖ್ಯವಾಹಿನಿಯತ್ತ ತರುವುದರ ಮುಖೇನ ತಕ್ಕಮಟ್ಟಿಗಾದರೂ ಸಮಾಜವನ್ನು ಸುಧಾರಿಸಬಹುದು. ಆದರೆ ಅಂಥ ಕೆಲಸ ಮಾಡುವವರು ಇಲ್ಲದಿರುವುದು ಅಲಕ್ಷಿತರ ಕುರಿತು ಸುಧಾರಣೆಗೆ ಹಿನ್ನಡೆಯಾಗಿದೆ.

ಕರ್ನಾಟಕದಲ್ಲಿ ಅಲಕ್ಷಿತ ಸಮುದಾಯಗಳೆಂದು ಬೇಡ, ಗೊಲ್ಲ, ಬೋವಿ, ಮಡಿವಾಳ, ಮಾದಿಗ, ಬೆಸ್ತ(ಅಂಬಿಗ) ಇನ್ನಿತರ ಸಮುದಾಯಗಳನ್ನು ಗುರುತಿಸಬಹುದು. ಇವು ಈ ಎಲ್ಲಾ ಸಮುದಾಯಗಳು ೧೨ನೆಯ ಶತಮಾನದಲ್ಲಿ ವಿಶ್ವ ಮಾನವ ಬಸವಣ್ಣನವರು ಹೇಳಿದ ಹಾಗೆ ಕಸುಬುಗಳಿಂದ ಕುಲಗಳಾಗಿಲ್ಲ. ಕುಲಗಳಿಂದ ಆಯಾ ಪಂಗಡದವರು ಕಸುಬನ್ನು ಮಾಡುತ್ತಿದ್ದುದು ಎಂದು ತಿಳಿದುಬಂದಿದೆ.

'ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ, ಹಾಸನಿಕ್ಕಿ ಹಾಸಿಗನಾದ, ಓದಿ ಹಾರವನಾದ' ಈ ರೀತಿಯಾಗಿ ಬಸವಾದಿ ಪ್ರಥಮರ ಕಾಲದಲ್ಲಿ ಕುಲಗಳನ್ನು ಅಂದರೆ ಕಸಬುಗಳಿಂದ ಕುಲಗಳಾಗಿಲ್ಲ, ಕುಲಗಳಿಂದ ಕಸುಬುಗಳಾಗಿವೆ ಎನ್ನುವುದನ್ನು ಗುರುತಿಸಬಹುದು. ಆದರೆ ಆ ನಂತರದಲ್ಲಿ ಮೇಲ್ವರ್ಗದವರ ಅತೀ ಪ್ರಾಬಲ್ಯ, ಶ್ರೇಷ್ಠತೆ, ಪುರೋಹಿತರ ಪ್ರಭುತ್ವ ವೇದಾಗಮನಗಳ ಜೊತೆಗೆ ಮನುವಾದಿಗಳಿಂದ ಅನೇಕ ವಿಚಾರಗಳ ಹೇರಿಕೆಯಿಂದ ಶೂದ್ರರಿಗಿದ್ದ ಸಾಮಾಜಿಕ ಸ್ಥಾನಮಾನಗಳು ಅಧೋಗತಿಗೆ ಇಳಿದಿವೆ. ಮನುಷ್ಯ ದೇಹದ ಅಂಗಾಂಗಳಲ್ಲಿಯೇ ಬಲಭಾಗ ಶ್ರೇಷ್ಠ, ಎಡಭಾಗ ಕನಿಷ್ಠ ಎಂದು ಹೇಳುವುದೇ ಅವೈಜ್ಞಾನಿಕವಾದುದು. ಅದಕ್ಕೆ ಇಂಬು ಕೊಡುವಂತೆ ಬ್ರಾಹ್ಮಣ ಮುಖದಿಂದ ಹುಟ್ಟಿದ, ಕ್ಷತ್ರಿಯ ತೋಳುಗಳಿಂದ ಹುಟ್ಟಿದ, ವೈಶ್ಯ ತೊಡೆಗಳಿಂದ ಹುಟ್ಟಿದ, ಶೂದ್ರ ಪಾದದಿಂದ ಹುಟ್ಟಿದ ಎಂಬ ಪೌರಾಣಿಕ ಕಥೆಯೊಂದು ಸೃಷ್ಟಿಯಾಗಿದೆ. ಹೀಗೆ ಯಾವುದೋ ಪರಿಕಲ್ಪನೆಯ ಹಿನ್ನೆಲೆಯಲ್ಲಿ ನಿರ್ಮಿತವಾದ ಸಮುದಾಯ ಆಧಾರಿತ ಸಾಮಾಜಿಕ ಸ್ಥಾನಿಕ ವ್ಯವಸ್ಥೆ ನಾಗರಿಕ ಮಾನವನನ್ನು ಕುಬ್ಜನನ್ನಾಗಿಸಿದೆ. ಅಂದರೇ ಒಂದು ಕಾಲಕ್ಕೆ ಹುಟ್ಟಿನಿಂದ ಸಮುದಾಯ ನಿರ್ಧರಿತವಾಗದೇ ಅವನ ಸಂಸ್ಕಾರಗಳಿಂದ ಬ್ರಾಹ್ಮಣತ್ವ ಪಡೆಯುವ ಮಾರ್ಗವು ಆಗಮ, ಸ್ಮೃತಿಗಳ ಕಾಲ ನಂತರದಲ್ಲಿ ಜಾತಿ ಸ್ವರೂಪ ಪಡೆದು ಹುಟ್ಟು ಜಾತಿ ನಿರ್ಧಾರಕ ಅಂಶವಾಗುವ ಮುಖೇನ ಸಮಾಜವನ್ನು ನಾವು ಮತ್ತು ನಮ್ಮವರು ಎನ್ನುವ ವಿಶಾಲ ಪರಿಭಾವನೆಗೆ ಬದಲಾಗಿ ನಾನು ಮತ್ತು ನನ್ನದು ಎನ್ನುವ ಕುಬ್ಜತೆಯೆಡೆಗೆ ವೇಗವಾಗಿ ನಡೆಸಿತು. ಇದಕ್ಕೆ ಕಾರಣ ಈ ದೇಶದ ಕಸುಬು ಆಧಾರಿತ ಸಮುದಾಯ ಪದ್ಧತಿ ಎಂದರೆ ತಪ್ಪಾಗಲಾರದು.

ಆದರೆ ಇಂದು ಪರಿಸ್ಥಿತಿ ಬದಲಾಗುತ್ತಿದೆ. ಒಂದೇ ಕುಟುಂಬದಲ್ಲಿ ಹಲವಾರು ಕಸುಬುಗಳನ್ನು ಹೊಂದಿರುವ ಸದಸ್ಯರನ್ನು ನೋಡಬಹುದು. ಒಂದೇ ಕುಟುಂಬದಲ್ಲಿ ಒಬ್ಬ ದನಗಾಹಿಯಾಗಿದ್ದರೆ ಆತನನ್ನು ದನಗರ ಕುಲದವನೆಂದು; ಒಕ್ಕಲಿಗನಾಗಿದ್ದರೆ ಒಕ್ಕಲಿಗ ಕುಲದವನೆಂದು; ಬೇಟೆಗಾರನಾಗಿದ್ದರೆ ಬೇಡ ಕುಲದವನೆಂದು; ಶ್ರಮಜೀವಿಯಾಗಿದ್ದರೆ ಅಸ್ಪß ೃಶ್ಯ ಕುಲದವನೆಂದು... ಹೀಗೆ ಕರೆಯಲಾಗದು. ಒಂದೇ ಕುಲದ ಕುಟುಂಬದಲ್ಲಿ ಬಹುಮುಖ ಪ್ರತಿಭೆಗಳೆಂದು ಕರೆಯಬಹುದಷ್ಟೆ. ಇಂದು ಕುಲಗಳನ್ನು ಬಳಿಗಳ, ರಕ್ತಸಂಬಂಧಿಗಳ ಆಧಾರದ ಮೇಲೆ ಮತ್ತು ಸಂಪ್ರದಾಯ, ನಂಬಿಕೆ, ಆಚರಣೆಗಳ ಆಧಾರದ ಮೂಲಕ ಪತ್ತೆಹಚ್ಚಲಾಗುತ್ತದೆ. ಹೀಗಾಗಿ ಬೇಟೆಗಾರರಲ್ಲಿ ಪಶುಪಾಲಕರು ಹಾಗೂ ಕೃಷಿಕರನ್ನೂ, ಪಶುಪಾಲಕರಲ್ಲಿ ಬೇಟೆಗಾರರು ಮತ್ತು ಕೃಷಿಕರಿರುವಂತೆಯೇ, ಕೃಷಿಕರಲ್ಲಿಯೂ ಹಲವರು ಬೇಟೆಗಾರರು, ಪಶುಪಾಲಕರು ಕಂಡುಬರುತ್ತಾರೆ. ಆಧುನಿಕ ವಿಜ್ಞಾನ ತಂತ್ರಜ್ಞಾನಗಳು ಕುಲ ಕಸುಬುಗಳನ್ನು ಕಸಿದುಕೊಂಡಿವೆ. ಸಂಸ್ಕೃತೀಕರಣ ಪಾಶ್ಚಾತ್ತೀಕರಣ ತಾಂತ್ರೀಕರಣಗಳ ಪ್ರಭಾವದಿಂದ

ಮಾನವ ದೇಶಿ ಕಸುಬುಗಳನ್ನು ತೊರೆದು ಅತಂತ್ರನಾಗಿ ತನಗೆ ತೋರಿದ ಕೆಲಸಗಳಿಗೆ ತನ್ನನ್ನು ತಾನು ತೊಡಗಿಸಿಕೊಳ್ಳುತ್ತಿದ್ದಾನೆ.

ಎಮಿಲಿ ಡರ್ಕೀಂರವರು 'ಶ್ರಮ ವಿಭಜನೆಯ ವಿಚಾರವನ್ನು ವಿಕಾಸವಾದ ತತ್ವದ ಬೆಳಕಿನಲ್ಲಿ ಅಂದರೇ ಕೇವಲ ಆರ್ಥಿಕ ಇಲ್ಲವೆ ಇತರ ಅಂಶಗಳಿಗೆ ಹೆಚ್ಚಿನ ಆದ್ಯತೆ ಕೊಡದೆ ಸಮಾಜಶಾಸ್ತ್ರೀಯ ನೆಲೆಗಟ್ಟಿನ ಮೇಲೆ ವ್ಯವಸ್ಥಿತವಾಗಿ ವಿಶ್ಲೇಷಿಸಿದರು. ಅವರ ಪ್ರಕಾರ ಶ್ರಮ ವಿಭಜನೆಯು "ಸಮಾಜದ ಉಗಮದ ಹಂತದಿಂದಲೂ ಜೊತೆ ಜೊತೆಯಾಗಿ ಸಾಗಿ ಬರುತ್ತಿದ್ದು ಸಮಾಜವು ಸಂಕೀರ್ಣಗೊಂಡಂತೆಲ್ಲಾ ತಾನೂ ಸಂಕೀರ್ಣಗೊಳ್ಳುತ್ತಾ ಸಾಗಿರುವುದು. ಸಮಾಜದ ಸಂಕೀರ್ಣತೆಯಿಂದಾಗಿ ಹೆಚ್ಚಿನ ಪ್ರಮಾಣದ ಶ್ರಮ ವಿಭಜನೆ ಹಾಗೂ ಕಾರ್ಯ ನೈಪುಣ್ಯತೆಗಳು ಅಗತ್ಯವಾಗಿರುವುದು. ಸಮಾಜದಲ್ಲಿ ಜನಸಂಖ್ಯೆ ಅಧಿಕಗೊಂಡಂತೆ ಶ್ರಮವಿಭಜನೆಯೂ ವ್ಯಾಪಕವಾಗಿ ವಿಸ್ತಾರಗೊಳ್ಳುತ್ತಾ ಹೋಗುವುದು. ಅವರು ಶ್ರಮ ವಿಭಜನೆಯು ಆದಿವಾಸಿ ಸಮಾಜದಲ್ಲಿ 'ಯಾಂತ್ರಿಕ ಐಕ್ಯತೆ' (Mechanical Solidarity)ಯನ್ನುಂಟು ಮಾಡಿದರೆ, ಆಧುನಿಕ ಸಮಾಜದಲ್ಲಿ 'ಜೈವಿಕ ಐಕ್ಯತೆ' (Organic Solidarity)ಯನ್ನು ಬೆಳೆಸುತ್ತದೆ ಎಂದು ಅಭಿಪ್ರಾಯ ಪಟ್ಟಿರುವರು" (ಭೈರಪ್ಪ ಕೆ. ೧೯೯೪ : ೧೨೬-೧೨೭) .

ಕಾರ್ಯ ನೈಪುಣ್ಯತೆ ಹೆಚ್ಚಿದಂತೆ ಶ್ರಮವು ವಿಭಜನೆಗೊಂಡು, ಪ್ರತ್ಯೇಕತೆಯು ಹೆಚ್ಚುತ್ತದೆ. ಕಾಲಾನಂತರದಲ್ಲಿ ವಿಭಜಿತ ಶ್ರಮದ ನೈಪುಣ್ಯತೆಯನ್ನು ಪ್ರತಿನಿಧಿಸುವ ಶಾಖೆ ಉಗಮವಾಗುತ್ತದೆ. ಈ ಶಾಖೆಗಳೇ ಹಿಂದೆ ಶ್ರಮ ಆಧಾರಿತ ಕುಲಗಳಾಗಿದ್ದವು. ಶ್ರಮ ವಿಭಜನೆಯ ನೈಪುಣ್ಯತೆಗಳನ್ನು ತಾರತಮ್ಯ ಮಾಡುವ ವರ್ಣ ವ್ಯವಸ್ಥೆಯೂ ಸಮುದಾಯ ವ್ಯವಸ್ಥೆಯ ಹುಟ್ಟಿಗೆ ಕಾರಣವಾಯಿತು. ವರ್ಣವ್ಯವಸ್ಥೆಯ ಮೂಲ ಆಶಯ ದಿಕ್ಕು ತಪ್ಪಿದಾಗ ಸಾಮಾಜಿಕ ಅಸಮಾನತೆ ತಲೆದೋರಿತು. ಗುಣಕರ್ಮಗಳಾಧಾರಿತ ಚಾತುರ್ವರ್ಣಗಳು, ಕಾಲಾನಂತರದಲ್ಲಿ ಮೇಲ್ವರ್ಣಗಳು ಕೆಳವರ್ಣಗಳಾದವು. ಸೃಷ್ಟಿಕರ್ತ ಬ್ರಹ್ಮನಿಂದ ವರ್ಣಗಳು ಹುಟ್ಟಿದವು ಎಂದು ನಂಬಿಸಿದರು. ಬ್ರಹ್ಮನ ಬಾಯಿಯಿಂದ ಬ್ರಾಹ್ಮಣ, ಭುಜಗಳಿಂದ ಕ್ಷತ್ರಿಯ, ಉದರದಿಂದ ವೈಶ್ಯ ಮತ್ತು ಪಾದದಿಂದ ಶೂದ್ರ ಹುಟ್ಟಿದನೆಂದು ಮನುಸ್ಮೃತಿಯೂ ಸಾರಿತು. ಮೂಲ ಆಧ್ಯಾತ್ಮಿಕ ಅರ್ಥವು ಅನರ್ಥವಾದಾಗ ವರ್ಣ ವ್ಯವಸ್ಥೆ ಮನು ಕುಲಕ್ಕೆ ಕಂಟಕವಾಯಿತು. ಮೂಲತಃ ಬ್ರಾಹ್ಮಣ (ಬುದ್ಧಿ, ತಲೆ), ಕ್ಷತ್ರಿಯ (ರಕ್ಷಣೆ-ಬಾಹುಭುಜ), ವೈಶ್ಯ (ವ್ಯಾಪಾರ, ಉದರ) ಮತ್ತು ಶೂದ್ರ (ಸೇವೆ, ಕಾಲುಗಳು) ಇವು ಪ್ರತಿಯೊಬ್ಬ ವ್ಯಕ್ತಿಯ ಜೀವನದ ಅಂಗಗಳು. ಮಾನವನ ಬದುಕಿಗೆ ಅಗತ್ಯವಾಗಿ ಬೇಕಾದವುಗಳು. ಯಾವುದೇ ಅಂಗವಿಲ್ಲದಿದ್ದರೂ ಬದುಕು ದುಸ್ತರವೆ. ಬುದ್ಧಿಯ ಚಟುವಟಿಕೆ ತಲೆ (ಬಾಯಿ) ಭಾಗದಿಂದ ಹೊರಹೊಮ್ಮುವುದರಿಂದ ಅದನ್ನು ಬ್ರಾಹ್ಮಣ(ಬುದ್ಧಿ)ನೆಂದು, ರಕ್ಷಣೆಯ ಕ್ರಿಯೆ ಬಾಹುಭುಜಗಳಿಂದ

ಸಾಗುವುದರಿಂದ ಅದನ್ನು ಕ್ಷತ್ರಿಯ(ರಕ್ಷಣೆ)ನೆಂದು, ವ್ಯವಹಾರವು ಉದರಕ್ಕಾಗಿರುವುದರಿಂದ ಅದನ್ನು ವೈಶ್ಯ(ಉದರ)ನೆಂದು ಮತ್ತು ಸೇವೆಯು ಜೀವನಕ್ಕಾಗಿ ಸಾಗಿಸುವುದರಿಂದ ಅದನ್ನು ಶೂದ್ರ(ಪಾದ)ನೆಂದು ಮಾನವನ ಅಂಗಗಳನ್ನೇ ಈ ಪರ್ಯಾಯ ನಾಮಗಳಿಂದ ಕರೆದರು.

'ಈ ಹಿನ್ನೆಲೆಯಲ್ಲಿ ಇಂಡಿಯಾದ ಸಾಂಸ್ಕೃತಿಕ ಚರಿತ್ರೆಯನ್ನು ಗಮನಿಸಿದರೆ, ಹಿಂದೂ ಧರ್ಮದ ಮನುಸ್ಮೃತಿಯ ವರ್ಣಾಶ್ರಮದಿಂದ, ಸಮುದಾಯ ಪದ್ಧತಿಯಿಂದ ಜನತೆ ಸಾವಿರಾರು ಸಮುದಾಯಗಳಾಗಿ ಹೋಳಾಗಿದೆ. ಈ ಹೋಳಾಗುವಿಕೆಯಿಂದಾಗಿ ದೇಶವು ಪರಕೀಯರ ಆಳ್ವಿಕೆಗೆ ಒಳಗಾಗಿ ಗುಲಾಮಗಿರಿಯಿಂದ ಕುಸಿದಿರುವುದು ಕಂಡುಬರುತ್ತದೆ. ನಾಗರಿಕತೆಯ ಹುಟ್ಟಿನಿಂದಲೂ ದೇಶವನ್ನು ಹಲವಾರು ಪ್ರಬಲ ರಾಜರುಗಳು ಆಳಿದ್ದಾರೆ. ವರ್ಣವ್ಯವಸ್ಥೆ ಕಾಲದಿಂದಲೂ ಇಂದಿನ ಸಮುದಾಯ ಪದ್ಧತಿಯವರೆಗೆ ಉನ್ನತ ವರ್ಗದವರು ಅಥವಾ ಬಹುಸಂಖ್ಯಾತರೇ ಉನ್ನತ ಅಧಿಕಾರಗಳನ್ನು ವಹಿಸಿಕೊಳ್ಳುತ್ತ ಬಂದಿದ್ದಾರೆ. ವ್ಯವಸ್ಥೆಯಲ್ಲಿ ಮೇಲು ಸಮುದಾಯದವರು ಶ್ರೇಷ್ಠರು, ಪವಿತ್ರರು ಹಾಗೆಯೇ ಕೆಳ ಅಥವಾ ಅಲಕ್ಷಿತ ಸಮುದಾಯದವರು ಕನಿಷ್ಠರು, ಅಪವಿತ್ರರು, ಅಸ್ಪೃಶ್ಯರು ಎಂಬ ನಂಬಿಕೆ ಇದೆ. ಈ ಕಾರಣದಿಂದಾಗಿ ಉನ್ನತ ವರ್ಗದವರು ಅಲಕ್ಷಿತ ವರ್ಗದವರನ್ನು ಹಿಂದಿನ ಕಾಲದಿಂದಲೂ ಶೋಷಿಸುತ್ತಾ ಬಂದಿದ್ದಾರೆ. ಅಲಕ್ಷಿತ ವರ್ಗದವರಿಗೆ ಅನಿಷ್ಟ ವೃತ್ತಿಗಳಾದ ಬೀದಿ ಗುಡಿಸುವುದು, ಚರಂಡಿ ತೊಳೆಯುವುದು, ಶೌಚಾಲಯಗಳನ್ನು ತೊಳೆಯುವುದು, ಸತ್ತ ಪ್ರಾಣಿಗಳನ್ನು ಹೊತ್ತು ಹೊರ ಹಾಕುವುದು ಇತ್ಯಾದಿ ಕೆಲಸಗಳನ್ನು ಮೀಸಲಿಟ್ಟರು. ಒಟ್ಟಾರೆ ಸಾಮಾಜಿಕ, ಆರ್ಥಿಕ ಅಸಮಾನತೆ ಉಲ್ಬಣಗೊಂಡು, ಅಸ್ಪೃಶ್ಯತೆ ಆಚರಣೆಯಿಂದ ದುರ್ಬಲ ಜನತೆಯು ಶೋಷಣೆಯಾಗಿದೆ'[೫](ಮಂಜುನಾಥ ಬೇವಿನಕಟ್ಟಿ, ೨೦೧೬, ೧೮೧).

ಈ ಒಂದು ಅಸಮಾನ ಅಧಿಕಾರದ ಹಂಚಿಕೆಯ ಪ್ರಕ್ರಿಯೆ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಸಾಂಪ್ರದಾಯಿಕ ಮೌಲ್ಯಗಳು ಮತ್ತು ಆದರ್ಶ ತತ್ವಗಳ ಜೊತೆಗೆ ಇತರೆ ವೈಚಾರಿಕ, ಸಮಾಜದ ನ್ಯಾಯ ರಚನೆಯಿಂದ ಸಮ್ಮತಿಸಲ್ಪಟ್ಟಿದೆ. ಅಸಮಾನ ಅಧಿಕಾರದ ಹಂಚಿಕೆ ಮತ್ತು ಅಸಮಾನ ಪಾಲು ಪದ್ಧತಿ ನ್ಯಾಯ ಸಮ್ಮತಿಯನ್ನು ಪಡೆದುದರ ಜೊತೆಗೆ, ಬಹುಸಂಖ್ಯಾತ ಜನರು ತಮ್ಮ ಇರುವಿಕೆಯನ್ನು ಅಂದರೆ ಅಧೀನತೆ(subordination)ಯನ್ನು ಸಹಜ ಎಂದು ಒಪ್ಪಿಕೊಳ್ಳುವಂತೆ ಸಮರ್ಥನೆ ಅಥವಾ ಸಮಜಾಯಿಷಿಯನ್ನು ನೀಡಿದೆ. ಇದಲ್ಲದೆ ಈ ರೀತಿಯ ಸರ್ವ ವಿಧದ ಅಸಮಾನತೆಯನ್ನು ಪುನರ್ ನಿರೂಪಿಸಿ, ವಿಸ್ತರಿಸಿ, ಜೀವಂತವಾಗಿರಿಸಲು ಮತ್ತು ಅಲಕ್ಷೀಕರಣದ ಸಾಮಾಜಿಕ ನಿರ್ಮಾಣಕ್ಕೆ (Social Construction of Marginalization) ಅಸಮಾನತೆಯನ್ನು ಸಮರ್ಥಿಸುವ ಕೊಡುಗೆ ನೀಡಿದೆ. ಅಸಮಾನತೆಯ ಪ್ರಸ್ತುತತೆಯ ಮಹತ್ವವನ್ನು ಸಮರ್ಥಿಸಿ

ಜೀವಂತವಾಗಿರಿಸಿದುದರಿಂದಾಗಿಯೇ ಸಮಾಜದಲ್ಲಿ ಅಲಕ್ಷೀಕರಣ ನಿರ್ಮಾಣವಾಗಲು ಸಾಧ್ಯವಾಗಿದೆ. ಅಸಮಾನತೆಗೆ ಕಾರಣವಾದ, ಸಾಂಪ್ರದಾಯಿಕ ಮೌಲ್ಯಗಳು ವೈಚಾರಿಕವಾದವುಗಳೆಂದು ಭ್ರಮಿಸುವ ಮನಸ್ಸುಗಳು, ಸಿದ್ಧಾಂತಗಳನ್ನು ರೂಪಿಸುವುದರ ಜೊತೆಗೆ ಅದಕ್ಕೆ ಕೆಲವು ಸಮರ್ಥನೆಗಳನ್ನು ನೀಡಿ ಸಮಾಜದಲ್ಲಿ ಕಂದಕವನ್ನು ಇನ್ನಷ್ಟು ಹೆಚ್ಚಿಸಿದ್ದಾರೆ. ಸಾಮಾಜಿಕ ಗುಂಪುಗಳ ಮುಖೇನ ಎಂದೂ ಒಂದುಗೂಡದ ಹಾಗೆ ಮಾಡಿ, ಈ ಗುಂಪುಗಳ ಅಥವಾ ಸಂಸ್ಕೃತಿಗಳ ಮಧ್ಯೆ ಗೆರೆ ಅಥವಾ ಅಂಚನ್ನು ನಿರ್ಮಾಣ ಮಾಡಿ ಅವುಗಳು ಭದ್ರವಾಗುವಂತೆ ಮಾಡಿದೆ. ಗೆರೆ ಅಥವಾ ಅಂಚನ್ನು ದಾಟುವಾಗ ವ್ಯಕ್ತಿಗಳು ಅಥವಾ ಗುಂಪುಗಳು ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಅಸಮಾನತೆಯಿಂದ ಕೂಡಿದ ಎಲ್ಲಾ ತರಹದ ಅಧಿಕಾರವನ್ನು ಸಮರ್ಥಿಸುವ ಸಾಂಪ್ರದಾಯಿಕ ಸಮರ್ಥನೆ ಸಮಾಜದಲ್ಲಿ ಅಂಚನ್ನು ಅಥವಾ ಗೆರೆಯನ್ನು ಜೀವಂತವಾಗಿರಿಸಿ ಶಾಶ್ವತಪಡಿಸಲು ಯಾವಾಗಲೂ ಪ್ರಯತ್ನಿಸುತ್ತಿರುತ್ತದೆ. ಜೊತೆಗೆ ಅಲಕ್ಷೀಕರಣ ಒಂದು ಸಹಜ ಪ್ರಕ್ರಿಯೆ ಎಂದು ತನ್ನ ಆದರ್ಶವಾದದ ಮೂಲಕ ಪ್ರಚುರಪಡಿಸುತ್ತದೆ. ಇದರಿಂದಾಗಿ ಸಮಾಜದಲ್ಲಿ ವಿಭಿನ್ನ ಸಾಂಸ್ಕೃತಿಕ ಹಿನ್ನಲೆಯುಳ್ಳ ಸಾಮಾಜಿಕ ಗುಂಪುಗಳು ಸಮಾಜದ ಅಂಚಿನಿಂದ ಹೊರಗೆ ಇರಬೇಕಾದ ಸಂದಿಗ್ಧ ಪರಿಸ್ಥಿತಿ ಉಂಟಾಗುತ್ತದೆ. ಯಾವುದೇ ಒಂದು ಸಮಾಜದ ಇತಿಹಾಸವನ್ನು ಬಗೆದು ನೋಡಿದರೆ ಅಸಮಾನತೆಯಿಂದ ಕೂಡಿದ ವ್ಯವಸ್ಥೆ ಕಂಡುಬರುತ್ತದೆ. ಅದಕ್ಕೆ ಜ್ವಲಂತ ನಿದರ್ಶನವೆಂದರೆ ಭಾರತಿಯ ಸಮಾಜದ ಸಮುದಾಯ ಪದ್ಧತಿ.

ಅಸ್ಪೃಶ್ಯತೆ ಮತ್ತು ವರ್ಣಭೇದಗಳು ಪ್ರಪಂಚದ ಎರಡು ಅಮಾನವೀಯ ಕ್ರೌರ್ಯಗಳು. ಇವುಗಳ ವಿರುದ್ಧ ಹೋರಾಟ ಮಾನವೀಯತೆ ಪರವಾದ ಹೋರಾಟವಾಗಿದೆ. ಭಾರತದಲ್ಲಿ ಇಂತಹ ಹೋರಾಟದ ಮುಂಚೂಣಿಯಲ್ಲಿದ್ದ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರು ಅಸ್ಪೃಶ್ಯರಾಗಿ ಜನಿಸಿ, ಸ್ವಪ್ರಯತ್ನದಿಂದ ಜ್ಞಾನ ನಿಧಿಯಾಗಿ, ವಿದ್ವಾಂಸರಾಗಿ, ವಿದ್ವತ್ಪೂರ್ಣ ಲೇಖನ-ಬರಹಗಳಿಂದ ಹಿಂದೂ ಸಮಾಜದ ಅಸಮಾನತೆಯ ವಿರುದ್ಧ ಅಹಿಂಸಾತ್ಮಕವಾದ ಪ್ರತಿಭಟನಾ ಚಳವಳಿಗಳನ್ನು ಹೂಡಿದರು. ಚಳವಳಿಯನ್ನು ತೀವ್ರಗೊಳಿಸಲು ವ್ಯಾಪಕ ಪ್ರಚಾರಗೊಳಿಸಲು ತಮ್ಮ ಸಿದ್ಧಾಂತಗಳನ್ನು ಪತ್ರಿಕೆ ಮತ್ತು ಅಧ್ಯಯನಗಳ ಮುಖೇನ ಪ್ರಚುರಪಡಿಸಿ ಹರಿತವಾದ ವಿಮರ್ಶೆಯಿಂದ ಸಮಕಾಲೀನರನ್ನು ದಂಗುಬಡಿಸಿ, ಶೋಷಿತ ಜನರು, ಸಾಮಾನ್ಯ ಅಸ್ಪೃಶ್ಯತೆಯ ವಿರುದ್ಧ ಸೆಟೆದು ನಿಲ್ಲುವಂತೆ ಮಾಡಿದರು.

ಆ ಮೂಲಕವಾಗಿ ಹಿಂದಿನಿಂದಲೂ ಸಹಿಸಿಕೊಂಡು ಬಂದಿದ್ದ ಜನರು ತಾಳ್ಮೆಯಿಂದ ತಮ್ಮ ಮೇಲಾಗಿರುವುದು ದೌರ್ಜನ್ಯವೆಂದು ಧ್ವನಿ ಎತ್ತುವಂತೆ ಮಾಡುವಲ್ಲಿ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಚಿಂತನೆಗಳು ಪ್ರಭಾವಬೀರಿವೆ. ಈ ಪ್ರಭಾವವೇ ಮುಂದೆ ಅಲಕ್ಷಿತ ಸಮುದಾಯದ ಮತಗಳು ಹುಟ್ಟಿಕೊಳ್ಳಲಿಕ್ಕೆ ಕಾರಣವಾದವು. ನಂತರ ಈ ಮತಗಳು ಒಂದೆಡೆ ಸಂಘಟನೆಗೊಂಡು ಪ್ರಬಲ

ಮತಗಳ ಜೊತೆ ಪೈಪೋಟಿ ನಡೆಸುವಂತಹ ಶಕ್ತಿಯನ್ನು ಪಡೆದುಕೊಂಡು ತಮ್ಮದೇಯಾದ ಸಿದ್ಧಾಂತ ರೂಪಿಸಿಕೊಂಡು ಸಮಾಜದ ಮೌಢ್ಯವನ್ನು ತೊಳೆಯಲು ಪ್ರಯತ್ನಿಸುತ್ತಿವೆ. ಆದರೂ ಆ ಕೆಲಸ ಇನ್ನಷ್ಟು ತೀವ್ರತರದಲ್ಲಿ ಆಗಬೇಕಿದೆ. ಅದಕ್ಕೆ ಈ ಶೋಷಿತ ಸಮುದಾಯಗಳು ತಮ್ಮ ತಮ್ಮಲ್ಲಿಯೇ ಕಿತ್ತಾಡದೇ ಒಂದಾಗಬೇಕಾದ ಜರೂರತ್ತು ಮುಖ್ಯವಾಗಿದೆ.

"ಸಮಾಜದ ಒಂದು ಗುಂಪು ಯಾವುದಾದರೂ ಕಾರಣಗಳಿಂದಾಗಿ ಸಮಾಜದ ಅಂಚಿಗೆ ತಳ್ಳಲ್ಪಡುವ ಸಂದರ್ಭವನ್ನು ಅಲಕ್ಷೀಕರಣ ಎಂದು ಕರೆಯಬಹುದು"[4]. ವ್ಯಕ್ತಿಗಳ ಗುಣಾತ್ಮಕ ಬದುಕಿನ ಎಲ್ಲಾ ವಿಷಯಗಳಲ್ಲಿ ಅಲಕ್ಷೀಕರಣವು ಒಂದು ದುರಂತವಾಗಿ ಬಂದು ಅಪ್ಪಳಿಸುತ್ತದೆ. ಅಲಕ್ಷೀಕರಣವು ವಿವಿಧ ಸಮುದಾಯಗಳ ನಡುವೆ ಸಾಮಾಜಿಕ ಕಂದಕವನ್ನುಂಟು ಮಾಡಿ ಸಾಮಾಜಿಕ ಐಕ್ಯತೆಗೆ ಧಕ್ಕೆ ತರುತ್ತದೆ. ಇದರಿಂದಾಗಿ ಸಾಮಾಜಿಕ ಸಮಗ್ರತೆಗೆ ಧಕ್ಕೆಯುಂಟಾಗುತ್ತದೆ. ಪರಿಣಾಮವಾಗಿ ಸಮುದಾಯಗಳು ಪರಸ್ಪರ ಸಹಕರಿಸದೆ ವಿರುದ್ಧ ದಿಕ್ಕಿನಲ್ಲಿ ಪ್ರತಿಕ್ರಿಯಿಸುತ್ತವೆ. ಇದರಿಂದಾಗಿ ಮಾನವ ಹಕ್ಕುಗಳ ಉಲ್ಲಂಘನೆಯಾದಂತಾಗಿ ಅವರ ಹಕ್ಕುಗಳನ್ನು ತೃಪ್ತಿಕರವಾಗಿ ಗೌರವಿಸಿದಂತಾಗುವುದಿಲ್ಲ. ಜೊತೆಗೆ ಸಮಾನತೆಯ ಅಸ್ಥಿತ್ವಕ್ಕೆ ಧಕ್ಕೆ ಬಂದು ಸಮಾಜ ಒಡೆದು ಚೂರು ಚೂರಾಗುವ ಸಂಭವವಿದ್ದು, ಜನರು ಬಡತನ ಮತ್ತು ಅಭದ್ರತೆಯಿಂದ ಬಳಲುವ ಸಂದರ್ಭವನ್ನು ಅಲಕ್ಷೀಕರಣದ ಜೊತೆ ಗುರುತಿಸಲಾಗಿದೆ.

ಅಲಕ್ಷೀಕರಣವು ಒಂದು ಸಾಮಾಜಿಕ ಪ್ರಕ್ರಿಯೆಯಾಗಿದೆ. ಇದು ಐತಿಹಾಸಿಕ ತಪ್ಪುಗಳಿಂದ ಉಂಟಾದ ಒಂದು ವಿದ್ಯಮಾನವಾಗಿದೆ. ಅಲಕ್ಷೀಕರಣದ ಪ್ರಕ್ರಿಯೆಯನ್ನು ಹೆಚ್ಚಿನದಾಗಿ ಅಸಮಾನತೆಗಳಿಂದ ಕೂಡಿದ ಸಮಾಜಗಳಲ್ಲಿ ನೋಡುತ್ತೇವೆ. ಇಂತಹ ಅಸಮಾನತೆಗಳಿಂದ ಕೂಡಿದ ಸಮಾಜವು ಏಣಿ ಶ್ರೇಣಿಯ ಸಾಮಾಜಿಕ ಗುಂಪುಗಳನ್ನು ಕಡಿದಾದ ಅಥವಾ ತುಂಬಾ ಆಳವಾದ ರಚನೆಯಲ್ಲಿ ಜನರನ್ನು ಒಡೆದು, ಶಕ್ತರು ಮತ್ತು ಅಶಕ್ತರು ಎಂಬುದಾಗಿ ವಿಭಾಗಿಸುತ್ತದೆ. ಕಡಿಮೆ ಸಂಖ್ಯೆಯಲ್ಲಿರುವ ಶಕ್ತರು ತಮ್ಮ ಸರ್ವ ವಿಧದ ಬಲದಿಂದಾಗಿ ಮುಖ್ಯವಾಹಿನಿಯ ಅಥವಾ ಮುಖ್ಯ ಸಮಾಜದ ರಾಜಕೀಯ ಮತ್ತು ಆರ್ಥಿಕತೆಯನ್ನು ನಿರ್ಧರಿಸುತ್ತಾರೆ. ಇನ್ನೊಂದೆಡೆ ಇದೇ ರಚನೆ ಅಥವಾ ಏಣಿ ಶ್ರೇಣಿಯ ಅತ್ಯಂತ ಕೆಳಸ್ಥರದಲ್ಲಿ ಬರುವ ಬಹುಸಂಖ್ಯಾತ ಅಧಿಕಾರ ವಂಚಿತರು, ಅಶಕ್ತರಾಗಿಯೇ ಸಾಮಾಜಿಕ ಮತ್ತು ಆರ್ಥಿಕವಾಗಿ ಕೆಳಸ್ಥರದಲ್ಲೇ ಉಳಿದುಬಿಡುತ್ತಾರೆ. ಸಾಮಾಜಿಕ ಕ್ರಮದ ಅಥವಾ ಶ್ರೇಣಿಯ ಅಂಚಿನಲ್ಲಿ ಬದುಕುಳಿದ ಇವರು ಸಹಜವಾಗಿ ಬದುಕಲು ಹರಸಾಹಸ ಮಾಡುತ್ತಾರೆ.

ಅಧೀನತೆಯ ರಚನೆ (Structure of Subordination)ಯನ್ನು ನ್ಯಾಯ ಸಮ್ಮತಗೊಳಿಸುವ ಪ್ರಯತ್ನಗಳು ಒಂದೆಡೆಯಾದರೆ, ಇನ್ನೊಂದೆಡೆ ಅಂಚಿನಲ್ಲಿರುವ ಗುಂಪುಗಳು ತಾವೇ ಆ ರಚನೆಯನ್ನು

ನಾಶ ಮಾಡುವಂತೆ ಪ್ರೇರೇಪಿಸುವಂತಹ ಪ್ರಯತ್ನಗಳು. ಈ ಪ್ರಯತ್ನಗಳು ಕೆಲವೊಮ್ಮೆ ಬೃಹತ್ ಸಾಮಾಜಿಕ ಚಳುವಳಿಗಳಾಗಿ ಮಾರ್ಪಟ್ಟಿವೆ. ಸಾಮಾಜಿಕ ಚಳುವಳಿಗಳು ದಮನಕಾರಿ ಸಾಂಸ್ಥಿಕ ರಚನೆ ಮತ್ತು ಅಧೀನತೆಯ ರಚನೆಯನ್ನು ಸಮರ್ಥಿಸುವ ಪ್ರಯತ್ನ ಮಾಡಿವೆ. ಈ ಚಳುವಳಿಗಳು ತಲಾತಲಾಂತರದಿಂದ ಬಂದ ಸ್ಥಾಪಿತ ಹಿತಾಸಕ್ತಿಗಳು ಮತ್ತು ಅಸಮಾನತೆಯನ್ನು ಜೀವಂತವಾಗಿರಿಸಲು ಪ್ರಯತ್ನಿಸುವ ಶಕ್ತಿಗಳ ಹುಟ್ಟಡಗಿಸಲು ಪ್ರಯತ್ನಿಸಿವೆ. ಆದರೆ ಐತಿಹಾಸಿಕವಾಗಿ ಕೆಲವು ಸಾಮಾಜಿಕ ಗುಂಪುಗಳು ಅಸಮಾನತೆಯನ್ನು, ಪ್ರತಿಪಾದಿಸಿಕೊಂಡು, ಅಸಮಾನತೆ ಇಲ್ಲದಿದ್ದರೆ ಸಮಾಜವೇ ಬದುಕುಳಿಯುವುದಿಲ್ಲವೆಂಬ ಕುಟಿಲೋಪಾಯದ ತಂತ್ರದಿಂದ ಬದುಕುತ್ತಿವೆ. ಇಂತಹ ಸಾಮಾಜಿಕ ಗುಂಪುಗಳೇ ಇಂದಿಗೂ ಸಮಾಜದಲ್ಲಿ ಬಿರುಕುಗಳನ್ನು ಸೃಷ್ಟಿಸಿ ಸಮಾಜ ಛಿದ್ರ ಛಿದ್ರವಾಗಲು ಕಾರಣವಾಗಿ ಸಮಾಜದಲ್ಲಿ ಅಂಚುಗಳನ್ನು ಸೃಷ್ಟಿಸಿವೆ. ಯಾವಾಗಲೂ ಇಂತಹ ಅಧಿಕಾರಸ್ಥ ಶಕ್ತ ಗುಂಪುಗಳು ಸಮಾನತೆಗೋಸ್ಕರ ಹೋರಾಡುವ ಗುಂಪುಗಳನ್ನು, ತಮ್ಮ ಎಲ್ಲಾ ಅಧಿಕಾರ ಶಕ್ತಿಗಳನ್ನು ಬಳಸಿಕೊಂಡು ದಮನ ಮಾಡಿ ಅಂತಹ ಗುಂಪುಗಳು ಶಾಶ್ವತವಾಗಿ ಸಮಾಜದ ಅಂಚಿನಲ್ಲಿರುವಂತೆ ಮಾಡಿವೆ. ಸಮಾನತೆಯಿಂದ ಕೂಡಿರುವ ಸಮಾಜವನ್ನು ನಿರ್ಮಾಣ ಮಾಡಲು ಆಸಕ್ತ ಗುಂಪುಗಳು ಸಾಮಾಜಿಕ ಚಳುವಳಿಗಳ ಮೂಲಕ ಪ್ರಯತ್ನಪಡುತ್ತಿರುತ್ತವೆ. ಇಂತಹ ಪ್ರಯತ್ನಗಳನ್ನು ಕೆಲವು ಸ್ಥಾಪಿತ ಹಿತಾಸಕ್ತಿಗಳು ಅಥವಾ ಯಾವಾಗಲೂ ಅಧೀನತೆಯನ್ನು ಪ್ರತಿಪಾದಿಸುವ ಗುಂಪುಗಳು ನಾಶಪಡಿಸುತ್ತವೆ. ಏಕೆಂದರೆ ಇಂತಹ ಗುಂಪುಗಳಿಗೆ ಅಧೀನ ಗುಂಪುಗಳು ಇಲ್ಲದೆ ಬದುಕು ಸಾಧ್ಯವಿಲ್ಲ, ತಮ್ಮ ಉಳಿವಿಗೋಸ್ಕರ ಕಪಟ ತಂತ್ರದ ಮೂಲಕ ಹಿತಾಸಕ್ತರನ್ನು ರಕ್ಷಿಸಿಕೊಂಡೇ ಅಧೀನತೆಯ ರಚನೆಯನ್ನು ಮತ್ತು ಏಣಿ ಶ್ರೇಣಿಯ ಅಸ್ತಿತ್ವವನ್ನು ಉಳಿಸಿ, ಸಮಾಜದಲ್ಲಿ ಗೋಡೆಗಳನ್ನು ನಿರ್ಮಿಸುತ್ತವೆ. ಈ ಸಾಮಾಜಿಕ ಗೋಡೆಗಳೇ ಸಮಾಜದ ಅಂಚು(Margins of Society) ಗಳಾಗಿ ಉಳಿಯುತ್ತವೆ. ಇದರಿಂದ ಎರಡು ವಿಭಿನ್ನ ಸಂಸ್ಕೃತಿಗಳು ಮೈದಳೆದು, ಉಚ್ಚ ಸಂಸ್ಕೃತಿ, ನೀಚ ಅಥವಾ ಕೀಳರಿಮೆಯ ಸಂಸ್ಕೃತಿಗಳೆಂದು ಹೆಸರಿಸಲ್ಪಡುತ್ತವೆ. ಒಂದೇ ಸಮಾಜದಲ್ಲಿ ಈ ರೀತಿ ಕಂಡುಬರುವ ವಿಭಿನ್ನ ಸಂಸ್ಕೃತಿಗಳು ಅಭಿವೃದ್ಧಿ ಮತ್ತು ಸಮಾನತೆಯ ದೃಷ್ಟಿಯಿಂದ ತುಂಬಾ ಆತಂಕಕಾರಿಯಾದವುಗಳು. ಇವು ವ್ಯಕ್ತಿಗಳು ಮತ್ತು ಗುಂಪುಗಳನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳದೆ ತ್ರಿಶಂಕು ಸ್ಥಿತಿಯಲ್ಲಿಡುತ್ತವೆ.

ಅಲಕ್ಷೀಕರಣದ ಪ್ರಕ್ರಿಯೆಗೆ ಒಳಗಾದ ಅಥವಾ ಒಳಪಟ್ಟ ವ್ಯಕ್ತಿ ಮತ್ತು ಗುಂಪುಗಳು ಹಲವಾರು ಸವಾಲು ಮತ್ತು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಈ ಪ್ರಕ್ರಿಯೆ ವ್ಯಕ್ತಿ ಮತ್ತು ಗುಂಪುಗಳಿಗೆ ಒಂದು ವರದಾನವಾಗಿ ಪರಿಣಮಿಸದೆ ಒಂದು ಶಾಪವಾಗಿ ಪರಿಣಮಿಸುತ್ತದೆ. ಇದಕ್ಕೆ ಸಿಕ್ಕ ವ್ಯಕ್ತಿಗಳು ಮತ್ತು ಗುಂಪುಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡು, ಹಲವಾರು ಸಾಮಾಜಿಕ ರೋಗ

ರುಜಿನಗಳಿಗೆ ತುತ್ತಾಗಬೇಕಾಗುತ್ತದೆ. ಇವುಗಳು ಪಡುವ ಬವಣೆ ಅಂತಿಂತದ್ದಾಗಿರುವುದಿಲ್ಲ. ಬದಲಾಗಿ ಇದು ಗಂಪುಗಳನ್ನು ನಾಶದಂಚಿಗೆ ತಳ್ಳುತ್ತದೆ. ಕೆಲವೊಮ್ಮೆ ಅಲಕ್ಷೀಕರಣದಿಂದಾಗಿ, ವ್ಯಕ್ತಿಗಳು ಬದುಕಿನಲ್ಲಿ ಸಾಮಾಜಿಕ ಕಂಟಕವಾಗಿ, ಬುದ್ಧಿಮಾಂದ್ಯರಾಗಿ, ದೈಹಿಕವಾಗಿ ಹಲವು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ವ್ಯಕ್ತಿಯ ಆಯಸ್ಸು ಕಡಿಮೆಯಾಗಿ ನರಕಯಾತನೆಯನ್ನು ಅನುಭವಿಸಬೇಕಾಗುತ್ತದೆ. ಏಕೆಂದರೆ ಸಮಾಜದ ಬದಿಯಲ್ಲಿರುವ ಎರಡು ಸಂಸ್ಕೃತಿಗಳು ವ್ಯಕ್ತಿಯನ್ನು ಹಿಸುಕಿ (cursh) ಜೀವನದ ಮೇಲೆ ಅಗಾಧ ದುಷ್ಪರಿಣಾಮವನ್ನುಂಟು ಮಾಡುತ್ತವೆ. ಆದ್ದರಿಂದ ಅಲಕ್ಷೀಕರಣದ ಪ್ರಕ್ರಿಯೆ ಆಯಾ ಸಮಾಜದ ಐತಿಹಾಸಿಕ ಘಟನೆಗಳು, ಅಲ್ಲಿಯ ಸಾಮಾಜಿಕ ರಚನೆ, ಸಾಮಾಜಿಕ ಗುಂಪುಗಳು ಮಾನಸಿಕ ಸ್ವಭಾವ ಮತ್ತು ಅವಕಾಶಗಳ ಹಂಚಿಕೆಯನ್ನು ಅವಲಂಬಿಸಿರುತ್ತವೆ.

ಅಲಕ್ಷಿತರ ಪರಿಕಲ್ಪನೆ ಒಂದು ಸಂಕೀರ್ಣ ಮತ್ತು ಗಂಭೀರವಾದ ವಿದ್ಯಮಾನವಾಗಿದೆ. ಇದು ವ್ಯಕ್ತಿಗಳನ್ನು ಪರಿಣಾಮಕಾರಿಯಾಗಿ ಸಮಾಜದ ಅಂಚಿಗೆ ತಳ್ಳುವ ಸಾಮರ್ಥ್ಯವನ್ನು ಹೊಂದಿದೆ. ಇಂತಹ ಅಂಚಿನಲ್ಲಿರುವ ವ್ಯಕ್ತಿಗಳ ಜೀವನ ಮತ್ತು ಭದ್ರತೆ ತುಂಬಾ ಅಪಾಯದ ಸ್ಥಿತಿಯಲ್ಲಿರುತ್ತದೆ. ಅಲಕ್ಷೀಕರಣ ಎನ್ನುವುದು ಜನರಿಗೆ ಸಂಬಂಧಿಸಿದ್ದಾಗಿದ್ದು, ಒಂದು ದೇಶಕ್ಕೆ ಸೇರಿರುವ ಜನರೊಳಗೆ ಕಂಡುಬರುವ ಪ್ರಕ್ರಿಯೆಯಾಗಿದೆ. ಈ ಪ್ರಕ್ರಿಯೆಗೆ ಒಳಗಾಗುವ ವ್ಯಕ್ತಿಗಳಲ್ಲಿ ಕೀಳರಿಮೆ, ಅಭದ್ರತೆಯ ಭಾವನೆಗಳಿರುತ್ತವೆ. ಅಲಕ್ಷೀಕರಣದ ವಿದ್ಯಮಾನವು ಕೇವಲ ವ್ಯಕ್ತಿಗಳಿಗೆ ಸಂಬಂಧಿಸಿರದೆ ಒಂದು ನಿರ್ದಿಷ್ಟ ಸಮಾಜದ ಸಾಮಾಜಿಕ ಗುಂಪುಗಳಿಗೂ ಅನ್ವಯಿಸುತ್ತದೆ. ಅಂದರೆ ಸಮಾಜ ಸೃಷ್ಟಿಸಿರುವ ಈ ಅಂಚಿನಲ್ಲಿರುವ ವ್ಯಕ್ತಿಗಳು ಹುಟ್ಟಿದಂದಿನಿಂದಲೇ ಈ ಅಲಕ್ಷೀಕರಣ ಪ್ರಕ್ರಿಯೆಗೆ ಒಳಗಾಗುವುದಿಲ್ಲ. ಬೆಳೆಯುತ್ತಾ ಸಾಮಾಜಿಕ ಪರಿಸರದೊಂದಿಗೆ ಮಿಳಿತವಾಗುವ ಸಂದರ್ಭದಲ್ಲಿ ಅಲಕ್ಷೀಕರಣದ ಪ್ರಕ್ರಿಯೆಗೆ ಒಳಗಾಗುತ್ತಾರೆ.

೪. ಅಲಕ್ಷಿತರ ಸಮುದಾಯಗಳು: ಸಮಸ್ಯೆ–ಸವಾಲುಗಳು

ಅಲಕ್ಷೀಕರಣವು ವ್ಯಕ್ತಿಗಳಿಗೆ ಮತ್ತು ಗುಂಪುಗಳಿಗೆ ನೇತ್ಯಾತ್ಮಕ ಪರಿಣಾಮವನ್ನುಂಟು ಮಾಡುತ್ತದೆ. ಇದರ ಪ್ರಕ್ರಿಯೆಯಲ್ಲಿ ಸಿಲುಕಿದ ಮಾನವ ಇತ್ತ ತಾನು ಹುಟ್ಟಿ ಬೆಳೆದ ಸಂಸ್ಕೃತಿಯನ್ನು ಒಪ್ಪಿಕೊಳ್ಳದೆ, ಅತ್ತ ತಾನು ಹೆಜ್ಜೆ ಇಡುತ್ತಿರುವ ಅಥವಾ ಇನ್ನೊಂದು ಸಂಸ್ಕೃತಿಯಲ್ಲಿ ಮಿಳಿತವಾಗದೆ ಒಂದು ರೀತಿಯ ಸಂದಿಗ್ಧ ಅಥವಾ ಸಂಕಟ ಸ್ಥಿತಿಯನ್ನು ಅನುಭವಿಸುತ್ತಾ ಇರುತ್ತಾನೆ. ಇಂತಹ ಸಂದಿಗ್ಧದ ಅಥವಾ ಸಂಕಟ ಸ್ಥಿತಿಯನ್ನು ಅಂಚಿನ ಸಂದರ್ಭ ಎಂತಲೂ, ಅಂತಹ ಪ್ರಕ್ರಿಯೆಗೆ ಅಥವಾ ವಿದ್ಯಮಾನಕ್ಕೆ ಒಳಗಾಗುವ ವ್ಯಕ್ತಿಗಳಿಗೆ ಮತ್ತು ಗುಂಪುಗಳಿಗೆ ಅಂಚಿನ ಮಾನವ ಮತ್ತು ಅಂಚಿನ ಗುಂಪುಗಳೆಂತಲೂ ಕರೆಯುತ್ತಾರೆ. ಇಂತಹ ಸಂದರ್ಭವು ವ್ಯಕ್ತಿಗಳ ಮುಂದೆ ಹಲವಾರು ಸಮಸ್ಯೆಗಳನ್ನು ಸೃಷ್ಟಿಸುತ್ತದೆ.

ಭಾರತದಲ್ಲಿ ಅಲಕ್ಷೀಕರಣ ಪ್ರಕ್ರಿಯೆ ಇತಿಹಾಸದುದ್ದಕ್ಕೂ ನಡೆದಿದ್ದು, ಈ ಅಲಕ್ಷೀಕರಣ ಪ್ರಕ್ರಿಯೆಯನ್ನು ಪ್ರಪಂಚದ ಇತರೆ ಯಾವುದೇ ಸಮಾಜಕ್ಕೆ ಹೋಲಿಸಲಾಗುವುದಿಲ್ಲ. ಅಂದರೆ ಭಾರತದಲ್ಲಿ ವ್ಯಕ್ತಿಗಳ ಮತ್ತು ಸಾಮಾಜಿಕ ಗುಂಪುಗಳ ಮೇಲೆ ಅಲಕ್ಷೀಕರಣ ಪ್ರಕ್ರಿಯೆಯ ಪ್ರಭಾವ ಅಪಾರವಾದುದು. ಭಾರತೀಯ ಸಮಾಜದಲ್ಲಿ ನಾವು ವಿಭಿನ್ನ ಸಂಸ್ಕೃತಿಯನ್ನು ಕಾಣುತ್ತೇವೆ. ಗ್ರಾಮೀಣ ಮತ್ತು ನಗರ ಸಂಸ್ಕೃತಿಯೆಂಬ ಎರಡು ವಿಭಿನ್ನ ಸಂಸ್ಕೃತಿಯೊಂದಿಗೆ ಬುಡಕಟ್ಟು ಮತ್ತು ದಲಿತ ಸಮಾಜ ಅಥವಾ ಸಂಸ್ಕೃತಿಯನ್ನು ಪ್ರತ್ಯೇಕವಾಗಿ ಗುರುತಿಸುತ್ತೇವೆ. ಇದಕ್ಕಿಂತ ಮುಖ್ಯವಾಗಿ ಭಾರತೀಯ ಸಮಾಜದಲ್ಲಿ ಅಸಮಾನತೆಯಿಂದ ಕೂಡಿದ ಅನಿಷ್ಟ ಸಾಮಾಜಿಕ ರಚನಾ ಪದ್ಧತಿಯಾಗಿದ್ದು, ಇಲ್ಲಿನ ವರ್ಣ ಪದ್ಧತಿಯ ಕಲ್ಪನೆ ಮತ್ತು ಸಮುದಾಯ ಪದ್ಧತಿ ಪ್ರಪಂಚದ ಯಾವ ಭಾಗದಲ್ಲಿಯೂ ಕಂಡು ಬರದಂತಹ ಸಾಮಾಜಿಕ ಕ್ರಮವನ್ನು ಹೊಂದಿದೆ. ಇಲ್ಲಿನ ಸಾಮಾಜಿಕ ರಚನೆ ಸಮುದಾಯ ಪದ್ಧತಿಯಿಂದ ಕೂಡಿದುದಾಗಿದೆ. ಇಂತಹ ಒಂದು ಸಾಮಾಜಿಕ ಕ್ರಮ(social order)ದಲ್ಲಿ ನಾವು ಸಾಮಾಜಿಕ ಅಂಶಗಳನ್ನು ಗುರುತಿಸಬಹುದು. ಭಾರತೀಯ ಸಮಾಜದ ರಚನೆಯು ಅಥವಾ ಕ್ರಮ ಅಸಮಾನತೆಯಿಂದ ಕೂಡಿದ್ದು, ಬಲಿಷ್ಠ ಮತ್ತು ಅಧೀನ ಸಂರಚನೆಯಿಂದ ಕೂಡಿದೆ. ಇದಲ್ಲದೆ ಈ ರಚನೆಯಲ್ಲಿ ಏಣಿಶ್ರೇಣಿ(hierarchy)ಯ ಕ್ರಮವೂ ಕಂಡುಬರುತ್ತದೆ. ಇದು ಕೇವಲ ಒಂದು ಸರಳವಾದ ಏಣಿಶ್ರೇಣಿಯಾಗಿರದೆ, ಅಧಿಕಾರದ ಸಂಪತ್ತಿನ ಮತ್ತು ಸಾಮಾಜಿಕ ಪ್ರತಿಷ್ಠೆಯ ಅಸಮಾನ ಹಂಚಿಕೆಯ ಏಣಿಶ್ರೇಣಿಯಾಗಿದೆ. ಇಲ್ಲಿ ಈ ರೀತಿಯ ಅಸಮಾನ ಹಂಚಿಕೆಯ ಪದ್ಧತಿಯನ್ನು ನ್ಯಾಯ ಸಮ್ಮತವೆಂದು ಸಾಮಾಜಿಕ ಏಣಿಶ್ರೇಣಿಯಲ್ಲಿ ತುತ್ತ ತುದಿಯಲ್ಲಿ ಬರುವ ಸಾಮಾಜಿಕ ಗುಂಪು ಪ್ರತಿಪಾದಿಸುತ್ತದೆ. ಅಂದರೆ ನಾವು ಏಣಿಶ್ರೇಣಿ ರೀತಿಯ ಸಾಮಾಜಿಕ ರಚನೆಯನ್ನು ಕಾಣಬಹುದು. ಇಂತಹ ಏಣಿಶ್ರೇಣಿಯ ಅತ್ಯಂತ ತುದಿಯಲ್ಲಿ ಬ್ರಾಹ್ಮಣ ವರ್ಗವನ್ನು ಪ್ರತಿನಿಧಿಸುವ ಸಾಮಾಜಿಕ ಗುಂಪು ಕಂಡುಬಂದರೆ, ಅತ್ಯಂತ ಕೆಳಸ್ಥರದಲ್ಲಿ ಶೂದ್ರರು ಮತ್ತು ಅಸ್ಪೃಶ್ಯರು ಎಂಬ ಸಾಮಾಜಿಕ ಗುಂಪುಗಳು ಕಂಡುಬರುತ್ತವೆ. ಇವುಗಳ ಮಧ್ಯ ವೈಶ್ಯರು ಮತ್ತು ಕ್ಷತ್ರಿಯರು ಎಂಬ ಗುಂಪುಗಳನ್ನು ಸೃಷ್ಟಿಸಲಾಗಿದೆ. ಇಲ್ಲಿ ಅಲಕ್ಷೀಕರಣದ ಸಂದರ್ಭದಲ್ಲಿ ಮಧ್ಯಸ್ಥರದಲ್ಲಿ ಬರುವ ಕೆಲವು ಸಾಮಾಜಿಕ ಸಮೂಹಗಳು ಗೌಣವಾಗುತ್ತವೆ. ಆದರೆ ಎರಡು ತುದಿಯಲ್ಲಿ ಬರುವ ಸಾಮಾಜಿಕ ಗುಂಪುಗಳ ನಡುವೆ ಸಾಮಾಜಿಕ ಕಂದಕವಿರುತ್ತದೆ. ಈ ಎರಡು ಗುಂಪುಗಳ ನಡುವಿನ ವ್ಯತ್ಯಾಸದಿಂದಾಗಿಯೇ ಎರಡು ವಿಭಿನ್ನ ಸಂಸ್ಕೃತಿಗಳು ರೂಪುಗೊಂಡಿವೆ. ಯಾವುದೇ ಕಾರಣಕ್ಕೂ ಈ ಎರಡು ಸಂಸ್ಕೃತಿಗಳ ನಡುವೆ ಸ್ಪಂದನವಿರುವುದಿಲ್ಲ. ಉದಾಹರಣೆಗೆ, ಬ್ರಾಹ್ಮಣ ಸಂಸ್ಕೃತಿ ಮತ್ತು ಶೂದ್ರ ಸಂಸ್ಕೃತಿ, ಇವೆರಡು ಸಂಸ್ಕೃತಿಗಳ ನಡುವೆ ಇತಿಹಾಸದುದ್ದಕ್ಕೂ ತಿಕ್ಕಾಟ ನಡೆದಿದೆ. ಇದು ಕೇವಲ ಎರಡು ಸಂಸ್ಕೃತಿಗಳ ನಡುವಿನ ತಿಕ್ಕಾಟವಾಗಿರದೆ, ಸಾಂಪ್ರದಾಯಿಕ ಸಾಮಾಜಿಕ ರಚನೆಯನ್ನು

ಕೆಡವಿ ಹಾಕುವ ಮತ್ತು ಉಳಿಸಿಕೊಳ್ಳುವ ಮಹಾಯುದ್ಧವಾಗಿದೆ. ಶೂದ್ರ ಸಂಸ್ಕೃತಿ ಅಧೀನ ರಚನೆಯನ್ನು ನಾಶಪಡಿಸಲು ಸಾಮಾಜಿಕ ಚಳುವಳಿಗಳ ಮೂಲಕ ಪ್ರಯತ್ನ ನಡೆಸುತ್ತಲೇ ಬಂದಿದೆ. ಆದರೆ ಅಧೀನ ರಚನೆಯನ್ನು ಉಳಿಸಿಕೊಳ್ಳುವ ಹುನ್ನಾರವನ್ನು ಮೇಲ್‌ಸ್ಥರದ ಸಂಸ್ಕೃತಿ ಮಾಡುತ್ತಾ ಬಂದಿದೆ. ಇವೆರಡು ಸಂಸ್ಕೃತಿಗಳ ಬಹು ದೀರ್ಘಕಾಲದ ಭಿನ್ನತೆಗಳಿಂದಾಗಿ ಭಾರತೀಯ ಸಮಾಜದಲ್ಲಿ ಸಂದಿಗ್ಧತೆಯ ಸಂದರ್ಭಗಳು ಉಂಟುಮಾಡಿ ಅಂಚು ಸೃಷ್ಟಿಯಾಗಿದೆ.

ಬಡತನವು ಅಲಕ್ಷಿತರಲ್ಲಿ ಮುಖ್ಯವಾದುದು. ಇದು ವ್ಯಕ್ತಿಗಳ ಆರ್ಥಿಕ ಸ್ಥಾನಮಾನವನ್ನು ಸೂಚಿಸುತ್ತದೆ. ಬಡತನದಿಂದಾಗಿಯೇ ವ್ಯಕ್ತಿಗಳು ಎಲ್ಲಾ ರೀತಿಯ ಬವಣೆ ಮತ್ತು ಸಂಕಷ್ಟಗಳಿಗೆ ಒಳಗಾಗುತ್ತಾರೆ. ಬಡತನ ವ್ಯಕ್ತಿಗಳನ್ನು ಹಿಂದುಳಿದಿರುವಿಕೆಗೆ ತಳ್ಳುತ್ತದೆ. ಇದು ಸಾಮಾಜಿಕವಾಗಿ ಪರಿಣಾಮ ಬೀರುವಂತಹದು. ಬಡತನ, ಸಮಾಜ ಮತ್ತು ವ್ಯಕ್ತಿಗಳ ಎಲ್ಲಾ ಸಮಸ್ಯೆಗಳಿಗೆ ಮೂಲ ಕಾರಣವಾಗಿದೆ. ಇದು ವ್ಯಕ್ತಿಗಳನ್ನು ಸಮಾಜದ ಅಂಚಿಗೆ ತಳ್ಳಿ, ವ್ಯಕ್ತಿಗಳು ಅಲಕ್ಷಿತ ಗುಂಪುಗಳಾಗುವಂತೆ ಮಾಡುವ ಸಾಮರ್ಥ್ಯವನ್ನು ಹೊಂದಿದೆ. ಅಲಕ್ಷಿತ ಗುಂಪುಗಳಲ್ಲಿ ಬಡತನ ಅಧಿಕವಾಗಿದೆ ಎಂಬುದು ಸಾಮಾನ್ಯವಾಗಿ ತಿಳಿದು ಬರುವ ಸಂಗತಿಯಾಗಿದೆ. ಭಾರತದ ಅಲಕ್ಷಿತ ಗುಂಪುಗಳಿಗೆ ಬಡತನ ಒಂದು ಶಾಪವಾಗಿ ಪರಿಣಮಿಸಿ, ಬಡತನದಲ್ಲಿಯೇ ಹುಟ್ಟಿ, ಬೆಳೆದು, ಬಡತನದಲ್ಲಿ ಸಾಯುವಂತಾಗುತ್ತದೆ. ಬಡತನವನ್ನು ಹೋಗಲಾಡಿಸಲು ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳ ಮಟ್ಟದಲ್ಲಿ ಹಲವಾರು ಪ್ರಯತ್ನಗಳು ನಡೆಯುತ್ತಿದ್ದರೂ ಇದುವರೆಗೂ ಬಡತನವನ್ನು ಹೋಗಲಾಡಿಸಲು ಸಾಧ್ಯವಾಗಿಲ್ಲ. ಅದರಲ್ಲಿಯೂ ಗ್ರಾಮೀಣ ಪ್ರದೇಶದಲ್ಲಿ, ಅಲಕ್ಷಿತರ ಗುಂಪುಗಳಲ್ಲಿ ನಾವು ಹೆಚ್ಚಿನ ಬಡತನವನ್ನು ಕಾಣಬಹುದಾಗಿದೆ.

ಒಂದು ಗುಂಪನ್ನು ಇತರ ಗುಂಪಿನಿಂದ ಬೇರ್ಪಡಿಸುವುದು ಅಥವಾ ಒಬ್ಬ ವ್ಯಕ್ತಿಯನ್ನು ಆತನ ಪಂಗಡದಿಂದ ಬೇರ್ಪಡಿಸುವುದು ಅಲಕ್ಷಿತತೆಯಲ್ಲಿ ಮುಖ್ಯವಾದುದು. ಪ್ರತ್ಯೇಕತೆಯು ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ರಾಜಕೀಯ ಮತ್ತು ಸಾಂಪ್ರದಾಯಿಕವಾಗಿ ನಡೆಯಬಹುದು. ಸಂಬಂಧಿತ ಪ್ರತ್ಯೇಕತೆಯಿಂದಾಗಿಯೇ ಸಮುದಾಯಗಳು ಹಿಂದುಳಿದಿರುವುದು ಎಂದರೆ ತಪ್ಪಾಗಲಾರದು. ಇದರಿಂದಾಗಿ ವ್ಯಕ್ತಿ ಮತ್ತು ಗುಂಪುಗಳು ಸಮಾಜದ ಮುಖ್ಯವಾಹಿನಿಯಿಂದ ದೂರವಾಗಿ ಸಾಮಾಜಿಕ ಚಲನೆಯನ್ನು ಹೊಂದಲಾಗುವುದಿಲ್ಲ.

ಅಲಕ್ಷಿತರು ವಂಚಿತತೆಗೆ ಒಳಗಾಗುವುದು ಒಂದು ಮುಖ್ಯವಾದ ಅಂಶವಾಗಿದೆ. ಇದು ಬಡತನಕ್ಕಿಂತಲೂ ವ್ಯಾಪ್ತಿವುಳ್ಳದ್ದಾಗಿದೆ. ಇದು ಕೇವಲ ಸಂಪತ್ತು ಅಥವಾ ಹಣದ ಕೊರತೆಗೆ ಸೀಮಿತವಾಗಿರದೆ ಇತರೆ ಎಲ್ಲಾ ಸಾಮಾಜಿಕ, ಆರ್ಥಿಕ, ರಾಜಕೀಯ ಸೌಲಭ್ಯಗಳಿಗೂ ಅನ್ವಯಿಸುತ್ತದೆ. ಒಂದು ಸಮಾಜಕ್ಕೆ ಅಥವಾ ವ್ಯಕ್ತಿಗಳಿಗೆ ಮೂಲ ಅವಶ್ಯಕತೆ (basic needs)ಗಳು ಅತ್ಯವಶ್ಯಕವಾಗಿ

ಬೇಕಾಗುತ್ತವೆ. ಅಂದರೆ ಇವು ವ್ಯಕ್ತಿಗಳ ಅಗತ್ಯಗಳನ್ನು ಪೂರೈಸುತ್ತವೆ. ಮೂಲ ಅವಶ್ಯಕತೆಗಳೆಂದರೆ, ಶಿಕ್ಷಣ, ಮನೆ, ಉದ್ಯೋಗ ಮತ್ತು ಇತರ ಭೌತಿಕ ಸೌಲಭ್ಯಗಳು. ಇಂತಹ ಅವಶ್ಯಕತೆಗಳು ಕನಿಷ್ಠ ಪ್ರಮಾಣದಲ್ಲಿ ವ್ಯಕ್ತಿಗಳಿಗೆ ಮತ್ತು ಸಮುದಾಯಗಳಿಗೆ ಲಭಿಸಿದರೆ ಸಮುದಾಯಗಳು ಮತ್ತು ಸಮಾಜಗಳು ಬದುಕುಳಿಯಲು ಸಾಧ್ಯ ಮತ್ತು ಅಂತಹ ಸಮಾಜ ಶ್ರೇಯೋಭಿವೃದ್ಧಿಯಾಗಲು ಸಾಧ್ಯವಾಗುತ್ತದೆ. ಆದರೆ ದುರಂತವೆಂದರೆ ಇಂತಹ ಆಧುನಿಕ ಸಮಾಜದಲ್ಲಿ ಅದರಲ್ಲಿಯೂ ಭಾರತದಂತಹ ಹಿಂದುಳಿದ ದೇಶದಲ್ಲಿ ಮೂಲ ಸೌಕರ್ಯಗಳ ಅಭಿವೃದ್ಧಿ ತುಂಬಾ ನಿಕೃಷ್ಟವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಭಾರತೀಯ ಸಮಾಜದಲ್ಲಿ ಹಲವಾರು ಸಮುದಾಯಗಳಿದ್ದು, ಅವುಗಳಲ್ಲಿ ಅಲಕ್ಷಿತ ಸಮುದಾಯಗಳು ಎಲ್ಲಾ ರೀತಿಯ ಸೌಲಭ್ಯಗಳಿಂದ ವಂಚಿತ (deprived)ವಾಗಿವೆ. ಹಾಗಾಗಿಯೇ ಮೂಲ ಸೌಲಭ್ಯಗಳಿಂದ ವಂಚಿತರಾಗಿರುವ ಈ ಜನ ಸಮುದಾಯಗಳೇ ಅಲಕ್ಷಿತ ಗುಂಪುಗಳಾಗಿವೆ. ಅಲಕ್ಷಿತ ಅಭಿವೃದ್ಧಿಗೆ ಶಿಕ್ಷಣ ಮತ್ತು ಉದ್ಯೋಗ ಅತ್ಯವಶ್ಯಕ ಅಂಶಗಳಲ್ಲಿ ಮುಖ್ಯವಾದಂತಹವು. ಅದರಲ್ಲಿಯೂ ಶಿಕ್ಷಣ ಈಗಿನ ಸಾಮಾಜಿಕ ಸಂದರ್ಭದಲ್ಲಿ ಮುಖ್ಯವಾದ ಸಾಧನವಾಗಿದ್ದು, ಸಾಮಾಜಿಕ ಚಲನೆಗೆ ಮತ್ತು ಅಭಿವೃದ್ಧಿಗೆ ಅನುವು ಮಾಡಿಕೊಡುತ್ತದೆ. ಆದರೆ ದುರ್ದೈವದ ಸಂಗತಿಯೆಂದರೆ ಇಂದು ಅಲಕ್ಷಿತ ಗುಂಪುಗಳು ಭಾರತೀಯ ಸಮಾಜದಲ್ಲಿ ಶಿಕ್ಷಣದಿಂದ ವಂಚಿತವಾಗಿರುವ ಮುಖೇನ ಉದ್ಯೋಗಾವಕಾಶಗಳಿಲ್ಲದೆ ಅತಂತ್ರ ಸ್ಥಿತಿಯಲ್ಲಿ ಬದುಕುತ್ತಿವೆ.

ಭೂಮಿ, ಶಿಕ್ಷಣ, ಉದ್ಯೋಗ, ವಸತಿ, ನೀರು, ಆಹಾರ, ವೈದ್ಯಕೀಯ ಸೌಲಭ್ಯ ಹಾಗೂ ನಾಗರಿಕ ಸೌಲಭ್ಯಗಳಾದ, ರಸ್ತೆ, ಚರಂಡಿ, ಬೀದಿ ದೀಪದ ವ್ಯವಸ್ಥೆ ಇನ್ನೂ ಹತ್ತಾರು ಸೌಲಭ್ಯಗಳು ಇಂದಿಗೂ ಅಲಕ್ಷಿತ ಗುಂಪುಗಳಿಗೆ ದೊರಕುತ್ತಿಲ್ಲ. ಹಾಗಾಗಿಯೇ ಇವರನ್ನು ನೂರಕ್ಕೆ ನೂರರಷ್ಟು ಸೌಲಭ್ಯಗಳಿಂದ ವಂಚಿತರು ಎಂದು ಹೇಳಿದರೆ ತಪ್ಪಾಗಲಾರದು. ಈ ವಂಚಿತತೆ ಅಲಕ್ಷಿತರ ಗುಂಪುಗಳನ್ನು ಸಮಾಜದ ಅಂಚಿಗೆ ತಳ್ಳಿ ಹಿಂದುಳಿದವರಾಗಿ ಮಾಡಿ, ಸಮಸ್ಯೆಗಳಲ್ಲಿ ನರಳುವಂತೆ ಮಾಡುತ್ತದೆ.

ಅಲಕ್ಷಿತರು ಶೋಷಣೆಗೆ ಒಳಗಾಗಿದ್ದಾರೆ. ಇದು ತನ್ನಷ್ಟಕ್ಕೆ ತಾನೇ ಸಂಭವಿಸುವುದಿಲ್ಲ. ಇದಕ್ಕೆ ಕಾರಣವೆಂದರೆ ಸಾಮಾಜಿಕ ರಚನೆಯ ತಳಹದಿಯಲ್ಲಿಯೇ ಸಾಕಷ್ಟು ಸಮಸ್ಯೆಗಳು ಬೇರೂರಿವೆ. ಶೋಷಣೆ ವರ್ಗ ಆಧಾರಿತ ಸಮಾಜಗಳಲ್ಲಿ ನಡೆಯುವುದಕ್ಕಿಂತ, ಸಮುದಾಯ ಆಧಾರಿತ ಭಾರತೀಯ ಸಮಾಜದಲ್ಲಿಯೇ ಹೆಚ್ಚಾಗಿ ನಡೆಯುತ್ತಿದೆ. ಊಳಿಗಮಾನ್ಯ ಪದ್ಧತಿ, ಗುಲಾಮಗಿರಿ, ಸಮುದಾಯ ತಾರತಮ್ಯ ಅಥವಾ ವ್ಯತ್ಯಾಸಗಳು ಶೋಷಣೆಯ ವಿವಿಧ ಮುಖಗಳೇ ಆಗಿವೆ. ವರ್ಗದ ದೃಷ್ಟಿಕೋನದಿಂದ ಶೋಷಣೆಯನ್ನು ವಿವರಿಸುವುದಾದರೆ, ಯಾವಾಗಲೂ ಮೇಲ್ವರ್ಗಗಳು ಅಂದರೆ ಶ್ರೀಮಂತರು

ಬಡವರನ್ನು ಅಥವಾ ಭೂಮಾಲೀಕರು ಗೇಣಿದಾರರನ್ನು ಶೋಷಿಸಿರುವುದುಂಟು. ಇದಕ್ಕಿಂತ ಗಂಭೀರವಾದ ಪರಿಸ್ಥಿತಿಯೆಂದರೆ ಸಮುದಾಯದ ಏಣಿ ಶ್ರೇಣಿಯಲ್ಲಿ ಶೋಷಣೆಯ ಅಂಶಗಳು. ಉನ್ನತ ಸಮುದಾಯಗಳು ಕೆಳಸಮುದಾಯವರನ್ನು ಯಾವಾಗಲೂ ಶೋಷಣೆಗೊಳಪಡಿಸಿದ್ದನ್ನು ಭಾರತದ ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ. ಹಾಗಾಗಿಯೇ ಇಂದು ನಾವು ನೋಡುತ್ತಿರುವ ಸಾಮಾಜಿಕ ಅಸಮಾನತೆ ಸಮುದಾಯ ಆಧಾರಿತ ಶೋಷಣೆಯ ಒಂದು ಪರಿಣಾಮ ಎಂದು ಹೇಳಿದರೆ ಅತಿಶಯವಿರಲಾರದು. ಈ ಸಾಮಾಜಿಕ ಶೋಷಣೆ ಭಾರತದಲ್ಲಿ ನಡೆದಿರುವಷ್ಟು ಬೇರ ಎಲ್ಲಿಯೂ ನಡೆದಿಲ್ಲ. ಏಕೆಂದರೆ ಇಲ್ಲಿ ಶೋಷಣೆಯ ಮುಖಗಳು ನಾನಾ ತರಹದವು. ಪ್ರಾಚೀನ ಭಾರತೀಯ ಸಮಾಜವು ವರ್ಗಾಧಾರಿತವಾಗಿದ್ದು, ನಂತರದಲ್ಲಿ ಸಮುದಾಯ ಆಧಾರಿತವಾಗಿ ಎರಡು ಕವಲುಗಳಾಗಿರುವ ಸಾಮಾಜಿಕ ರಚನೆ ಮತ್ತು ಇದನ್ನು ಬೆಂಬಲಿಸುವ ವಿಚಾರಧಾರೆಗಳೇ ಇದಕ್ಕೆ ಪ್ರಮುಖ ಕಾರಣ.

ಭಾರತೀಯ ಸಮಾಜದಲ್ಲಿ ಅಲಕ್ಷಿತ ಸಮುದಾಯಗಳು ತಲತಲಾಂತರದಿಂದ ಶೋಷಣೆಗೆ ಒಳಗಾಗುತ್ತಲೇ ಬಂದಿವೆ. ಈ ಗುಂಪುಗಳಿಗೆ ಸಾಮಾಜಿಕ ಹೊಡೆತದ ಜೊತೆಗೆ ಸಾಂಸ್ಕೃತಿಕ ಶೋಷಣೆಯು ಒಳಗೊಂಡಂತೆ ಸಾಕಷ್ಟು ಸಮಸ್ಯೆಗಳು ಇವನ್ನು ಹಿಂದುಳಿದ, ದಲಿತ ಸಮುದಾಯಗಳಾಗಿಯೇ ಉಳಿಸಿವೆ. ಈ ಶೋಷಣೆಗೆ ಪ್ರಮುಖ ಕಾರಣಗಳೆಂದರೆ, ಸಮುದಾಯದ ಆರ್ಥಿಕ ಹಿಂದುಳಿದಿರುವಿಕೆ, ಉತ್ಪಾದನೆಯಲ್ಲಿನ ಕಡಿಮೆ ಅವಕಾಶಗಳ ಕೊರತೆ, ಶೋಷಣೆ ಕುರಿತಾಗಿ ಹಿಂದಿನಿಂದಲೂ ನಂಬಿಕೆಕೊಂಡು ಬಂದ ಮೇಲ್ವರ್ಗಗಳು ರೂಪಿಸಿದ್ದ ಆದರ್ಶಗಳು ಒಂದು ಕಡೆಯಾದರೆ ಪುರೋಹಿತಶಾಹಿ ಗುಂಪುಗಳ ಅಧಿಕಾರಯುಕ್ತ ಸ್ಥಾನಮಾನ, ಆರ್ಥಿಕ ಸಂಪತ್ತು, ಜನಸಂಖ್ಯೆ ಬೆಂಬಲ, ಮತ್ತು ಇತರೆ ಕಾರಣಗಳು ಇನ್ನೊಂದೆಡೆಯಾಗುತ್ತವೆ. ಇವುಗಳೆಲ್ಲವುಗಳಿಗಿಂತ ಶೋಷಣೆಗೆ ಬಹುಮುಖ್ಯ ಕಾರಣವೆಂದರೆ ಸಾಮಾಜಿಕ ಅಸಮಾನತೆಯೇ ಆಗಿದೆ.

ಸಮುದಾಯ ತಾರತಮ್ಯತೆ, ಲಿಂಗ ತಾರತಮ್ಯತೆ, ವರ್ಗ ತಾರತಮ್ಯತೆ, ಜನಾಂಗೀಯ ತಾರತಮ್ಯತೆ, ಧಾರ್ಮಿಕ ತಾರತಮ್ಯತೆ, ಪ್ರಾಂತೀಯ ತಾರತಮ್ಯತೆ, ಭಾಷಾ ತಾರತಮ್ಯತೆ ಇತ್ಯಾದಿಯಾಗಿ ತಾರತಮ್ಯತೆ ದಿನನಿತ್ಯ ಸಮಾಜದಲ್ಲಿ ನಡೆಯುತ್ತಿರುತ್ತವೆ. ವ್ಯಕ್ತಿಗಳು ಮತ್ತು ಸಮುದಾಯಗಳು ಒಂದಲ್ಲ ಒಂದು ರೀತಿಯಲ್ಲಿ ತಾರತಮ್ಯಕ್ಕೊಳಗಾಗುತ್ತಾರೆ. ಭಾರತೀಯ ಸಂದರ್ಭದಲ್ಲಿ ಹೇಳುವುದಾದರೆ ಎಲ್ಲಾ ತಾರತಮ್ಯಗಳಿಗಿಂತ ಸಮುದಾಯ ಆಧಾರಿತ ತಾರತಮ್ಯತೆಗಳು ಹೆಚ್ಚಿನದಾಗಿ ಕಂಡುಬರುತ್ತವೆ. ಸಮಾಜದ ಸೌಲಭ್ಯಗಳ ಮತ್ತು ಅವಕಾಶಗಳ ಹಂಚಿಕೆಯಲ್ಲಿ ಸಮುದಾಯ ತಾರತಮ್ಯತೆಯ ಪ್ರಭಾವ ಅಥವಾ ಅಂಶಗಳು ಕಂಡುಬರುತ್ತವೆ.

ಹಾಗಾಗಿಯೇ ಇವತ್ತಿನ ಎಲ್ಲಾ ರೀತಿಯ ಅಸಮಾನತೆಗೆ ಸಮುದಾಯದ ತಾರತಮ್ಯಗಳೇ ಮುಖ್ಯ ಕಾರಣವೆಂದು ನಿಖರವಾಗಿ ಹೇಳಬಹುದು. ಸಮುದಾಯ ತಾರತಮ್ಯತೆ ಭಾರತೀಯ ಸಮಾಜದಲ್ಲಿ ಸಾಮಾಜಿಕವಾಗಿ ಒಪ್ಪಿತವಾಗಿ ಅನುಮೋದನೆಗೊಂಡಿದೆ ಎಂದು ಭಾವಿಸುವಂತೆ ಮಾಡಲಾಗಿದೆ. ಆಧುನಿಕ ಸಮಾಜದಲ್ಲಿ ಹಲವು ತೆರನಾದ ಸಾಮಾಜಿಕ ಬದಲಾವಣೆಗಳು ಸಂಭವಿಸಿದ್ದರೂ ತಾರತಮ್ಯವನ್ನು ಹೋಗಲಾಡಿಸಲು ಸಾಧ್ಯವಾಗಿಲ್ಲ. ಕಾರಣವೆಂದರೆ ಆಳವಾಗಿ ಬೇರೂರಿರುವ ಸಮುದಾಯ ಪದ್ಧತಿ ಮತ್ತು ಸಂಪತ್ತಿನ ಅಸಮಾನ ಹಂಚಿಕೆ. ತಾರತಮ್ಯ ಕೇವಲ ಸಮುದಾಯ ವಿಷಯಕ್ಕೆ ಸೀಮಿತವಾಗಿರದೆ ಎಲ್ಲಾ ವಿಷಯಗಳಲ್ಲಿ ನಡೆಯುತ್ತಿರುತ್ತದೆ. ಇಂದಿಗೂ ಅಲಕ್ಷಿತ ಗುಂಪುಗಳಾದ ದಲಿತರು, ಬುಡಕಟ್ಟಿನ ಜನರು, ಮಹಿಳೆಯರು, ಹಿಂದುಳಿದ ವರ್ಗಗಳು, ಸಾಮಾಜಿಕ ತಾರತಮ್ಯಕ್ಕೆ ಒಳಪಟ್ಟು ಅತಂತ್ರ ಗುಂಪುಗಳಾಗಿಯೇ ಉಳಿದಿವೆ. ಇದರ ಪರಿಣಾಮವಾಗಿ ಶ್ರೀಮಂತರು ಇನ್ನೂ ಶ್ರೀಮಂತರಾಗಿರುತ್ತಾರೆ. ಬಡವರು ಮತ್ತೂ ಬಡವರಾಗುತ್ತಿದ್ದಾರೆ. ಇದಕ್ಕೆ ನಿಖರವಾಗಿ ಉತ್ತರಗಳನ್ನು ಹುಡುಕುವ ಪ್ರಯತ್ನಗಳು ಇಂದಿಗೂ ಸಾಧ್ಯವಾಗದಿರುವ ಕಾರಣಕ್ಕೆ ಭಾರತೀಯ ಸಮಾಜಕ್ಕೆ ಕಂಟಕವಾದ ಜ್ವಲಂತ ಸಮಸ್ಯೆಯಾಗಿದೆ.

ಹಿಂದುಳಿದಿರುವಿಕೆ ಎಲ್ಲಾ ಕ್ಷೇತ್ರಗಳಲ್ಲಿಯೂ ಹಾಸುಹೊಕ್ಕಾಗಿದ್ದು, ಅದು ತನ್ನ ಕಾರ್ಯಗಳನ್ನು ಮಾಡುತ್ತಲೇ ಬರುತ್ತಿದೆ. ಇದರಿಂದಾಗಿಯೇ ಕನಿಷ್ಠ ಪ್ರಮಾಣದ ಅವಶ್ಯಕತೆಗಳನ್ನು ದೊರಕಿಸಿಕೊಳ್ಳಲು ಅಸಾಧ್ಯವಾಗಿರುವ ಸಂದರ್ಭ ಅಥವಾ ಪರಿಸ್ಥಿತಿಯನ್ನು ಹಿಂದುಳಿದಿರುವಿಕೆ ಎನ್ನಬಹುದು. ವ್ಯಕ್ತಿಗಳಾಗಲಿ ಮತ್ತು ಸಮುದಾಯಗಳಾಗಲಿ ಸಾಮಾನ್ಯವಾಗಿ ಹಿಂದುಳಿದಿರುವಿಕೆಯ ಲಕ್ಷಣಗಳನ್ನು ಹೊಂದಿರುತ್ತವೆ. ಹಿಂದುಳಿದಿರುವಿಕೆ ಕೇವಲ ಒಂದು ಕ್ಷೇತ್ರಕ್ಕೆ ಸೀಮಿತವಾಗಿರದೆ ಎಲ್ಲಾ ರಂಗದಲ್ಲಿಯೂ ಕಂಡುಬರುತ್ತದೆ. ಹಿಂದುಳಿದಿರುವಿಕೆಯನ್ನು ಸಾಮಾನ್ಯವಾಗಿ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಪ್ರಮುಖವಾಗಿ ಗುರುತಿಸಬಹುದು. ಅದಕ್ಕೆ ಉದಾಹರಣೆ ಎಂಬಂತೆ ಇಂದಿಗೂ ಕಾರಣವಾಗಿ ಅಂಚಿನ ಗುಂಪುಗಳು ಈ ಎಲ್ಲಾ ಕ್ಷೇತ್ರಗಳಲ್ಲಿ ಹಿಂದುಳಿದಿರುವುದು ಕಂಡುಬರುತ್ತದೆ. ಸಾಮಾಜಿಕ ಹಿಂದುಳಿದಿರುವಿಕೆ ಅಂಚಿನ ಗುಂಪುಗಳ ಸಂದರ್ಭದಲ್ಲಿ ಹಲವಾರು ಸಮಸ್ಯೆಗಳನ್ನು ಸೃಷ್ಟಿಸುತ್ತದೆ. ಸಾಮಾಜಿಕ ಹಿಂದುಳಿದಿರುವಿಕೆಯಿಂದಾಗಿ, ವ್ಯಕ್ತಿಗಳು ಮತ್ತು ಸಾಮಾಜಿಕ ಗುಂಪುಗಳು ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿಯುತ್ತಾರೆ. ಇದರಿಂದಾಗಿ ತನ್ನಿಂತಾನೇ ಆರ್ಥಿಕ ಹಿಂದುಳಿದಿರುವಿಕೆಯು ಸಂಭವಿಸುತ್ತದೆ. ಭಾರತೀಯ ಸಮಾಜಕ್ಕೆ ಈ ಸಮುದಾಯಗಳು ಕಳಂಕವಾದವು ಎಂಬಂತೆ ಬಿಂಬಿಸುವ ಮುಖೇನ ಹಿಂದುಳಿದಿರುವಿಕೆ ವ್ಯಕ್ತಿಗಳನ್ನು ಸಮಾಜದ ಅಂಚಿಗೆ ತಳ್ಳಿ, ಸೌಲಭ್ಯಗಳಿಂದ ವಂಚಿತರನ್ನಾಗಿ ಮಾಡಿ, ಸಮಸ್ಯೆಗಳಿಂದ ನರಳುವಂತೆ ಮಾಡುತ್ತದೆ. ಇದು ಅಂಚಿನ ಗುಂಪುಗಳಿಗೆ

ಒಂದು ಶಾಪವಾಗಿ ಪರಿಣಮಿಸಿ ದೊಡ್ಡ ಆಘಾತವನ್ನುಂಟು ಮಾಡುತ್ತದೆ. ಇದರ ಪರಿಣಾಮವಾಗಿ ಸಮಾಜದಲ್ಲಿ ಉಳ್ಳವ ಮತ್ತು ಇಲ್ಲದವ, ಬಡವ-ಬಲ್ಲಿದ ಹೀಗೆ ಸ್ಥರ ವಿನ್ಯಾಸಗೊಂಡು, ಸ್ಥರ ವಿನ್ಯಾಸವು ಶಾಶ್ವತ ರೂಪ ಪಡೆಯುತ್ತದೆ. ಇದರಿಂದಾಗಿ ಸಮಾಜದ ಸಮಗ್ರತೆಗೆ ಧಕ್ಕೆ ಬಂದು ಮಾನವ ಹಕ್ಕುಗಳು ಉಲ್ಲಂಘನೆಯಾಗಿ ಸಾಮಾಜಿಕ ವಿಘಟನೆಯುಂಟಾಗುತ್ತದೆ. ಕೊನೆಗೆ ಸಮಾಜದ ಅಸ್ತಿತ್ವಕ್ಕೆ ಕೊಡಲಿ ಪೆಟ್ಟು ಬಿದ್ದು, ಸಂಘರ್ಷ, ಅಶಾಂತಿ, ಅಸಹಕಾರ ಮುಂತಾದ ಸಾಮಾಜಿಕ ಅವಘಡಗಳು ಸಂಭವಿಸಿ ಸಮಾಜ ಸರ್ವನಾಶವಾಗುತ್ತದೆ.

ಶಿಕ್ಷಣದ ಹಿಂದುಳಿದಿರುವಿಕೆಯು ಅಲಕ್ಷಿತ ಸಮುದಾಯಗಳಲ್ಲಿ ಪ್ರಮುಖವಾದುದು. ಇದು ಅಲಕ್ಷಿತ ಸಮುದಾಯಗಳ ಶಿಕ್ಷಣದ ಹಿಂದುಳಿದಿರುವಿಕೆಯ ಮಟ್ಟವನ್ನು ತೋರಿಸುತ್ತದೆ. ಸಾಮಾನ್ಯವಾಗಿ ಅಲಕ್ಷಿತ ಗುಂಪುಗಳು ಶಿಕ್ಷಣದಲ್ಲಿ ಹಿಂದುಳಿದಿದ್ದಾರೆ. ಇವರ ಸಾಕ್ಷರತೆಯ ಮಟ್ಟ ತಳಮಟ್ಟದಲ್ಲಿದೆ. ಅದರಲ್ಲಿಯೂ ಪ್ರಾಥಮಿಕ, ಮಾಧ್ಯಮಿಕ, ಪ್ರೌಢ ಶಿಕ್ಷಣದಲ್ಲಿಯೂ ಇವರ ಶೈಕ್ಷಣಿಕ ಪ್ರಗತಿ ಕಡಿಮೆ ಯಿರುವುದರಿಂದಾಗಿ ಉನ್ನತ ಶಿಕ್ಷಣದಲ್ಲಿ ಈ ಸಮುದಾಯದ ಜನರು ಅಷ್ಟೇನು ಪ್ರಗತಿ ಸಾಧಿಸಿಲ್ಲದಿರುವುದನ್ನು ಅಂಕಿ-ಸಂಖ್ಯೆಗಳು ಸೋದಾಹರಣವಾಗಿ ತೋರಿಸುತ್ತಿವೆ. ಈ ಶಿಕ್ಷಣದ ಹಿಂದುಳಿದಿರುವಿಕೆಯ ಮಟ್ಟವು ಇವರನ್ನು ಸಾಮಾಜಿಕವಾಗಿಇನ್ನೂ ಮೂಲೆಗುಂಪಾಗಿಸಿದ್ದನ್ನು ಸೂಚಿಸುತ್ತದೆ.

ಭಾರತೀಯ ಸಮಾಜದಲ್ಲಿ ಮುಖ್ಯವಾಗಿ ದಲಿತ, ಬುಡಕಟ್ಟು, ಅಲೆಮಾರಿ ಸಮುದಾಯಗಳು, ಹಿಂದುಳಿದ ಸಮುದಾಯಗಳು ಪ್ರಮುಖ ಅಲಕ್ಷಿತ ಸಮುದಾಯಗಳಾಗಿವೆ. ಈ ಸಮುದಾಯಗಳು ಸಾಮಾಜಿಕ, ರಾಜಕೀಯವಾಗಿ ಹಿಂದುಳಿದಿರುವುದರ ಜೊತೆಗೆ ಶಿಕ್ಷಣದಲ್ಲಿಯೂ ಹಿಂದುಳಿದಿರುವುದರಿಂದಾಗಿಯೇ ಇತರೆ ಸಮುದಾಯಗಳಿಗೆ ಹೋಲಿಸಿದರೆ ಆರ್ಥಿಕತೆ ಬೆಳೆಯಲು ಸಾಧ್ಯವಾಗುತ್ತಿಲ್ಲ. ಯಾವುದೇ ಸಮುದಾಯವಾದರೂ ಸಾಮಾಜಿಕ, ರಾಜಕೀಯ, ಶೈಕ್ಷಣಿಕವಾಗಿ ಪ್ರಗತಿ ಸಾಧಿಸಲು ಆರ್ಥಿಕತೆಯು ಮುಖ್ಯವಾಗುತ್ತದೆ.

ಸಾಮಾನ್ಯವಾಗಿ ಮೇಲೆ ಉಲ್ಲೇಖಿಸಿದ ರೀತಿಯಲ್ಲಿರುವ ಹಿಂದುಳಿದ ಸಮುದಾಯಗಳನ್ನು ದಲಿತ ಎಂದು ಕರೆಯುತ್ತೇವೆ. ಪರಿಶಿಷ್ಟ ಸಮುದಾಯ ಪಟ್ಟಿಯಲ್ಲಿ ಬರುವ ಎಲ್ಲಾ ಸಮುದಾಯಗಳು ಹೆಚ್ಚು-ಕಡಿಮೆ ದಲಿತ ಸಮುದಾಯಗಳೇ ಆಗುತ್ತವೆ. ದಲಿತ ಸಮುದಾಯ ಒಂದು ಪ್ರಮುಖ ಅಲಕ್ಷಿತ ಸಮುದಾಯವಾಗಿದೆ. ಇಂದು ದಲಿತ ಎಂಬ ಪದವು ಬೇರೆ ರೀತಿಯಲ್ಲಿಯೇ ಬಳಕೆಯಲ್ಲಿದೆ. ಶೋಷಿತ ಸಮುದಾಯಗಳೆಲ್ಲವೂ ಒಳಗೊಂಡಂತೆ ಈ ಸಮುದಾಯವು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯವಾಗಿ ಹಿಂದುಳಿದಿರುವುದರ ಜೊತೆಗೆ ಶೈಕ್ಷಣಿಕವಾಗಿಯೂ ಹಿಂದುಳಿದಿರುವಿಕೆಯನ್ನು

ನಾವು ನೋಡಬಹುದಾಗಿದೆ. ಶಿಕ್ಷಣದ ಹಿಂದುಳಿದಿರುವಿಕೆ ಎಂದರೆ, ಸಾಕ್ಷರತೆ, ಶಿಕ್ಷಣದ ಮಟ್ಟ ಅಂದರೆ ಔಪಚಾರಿಕ ಶಿಕ್ಷಣ, ಪ್ರಾಥಮಿಕ ಮಾಧ್ಯಮಿಕ ಮತ್ತು ಪ್ರೌಢ ಶಿಕ್ಷಣದ ಜೊತೆಗೆ ಉನ್ನತ ಶಿಕ್ಷಣದಲ್ಲಿಯೂ ಇವರು ಹಿಂದುಳಿದವರಾಗಿದ್ದಾರೆ. ದಲಿತರಲ್ಲಿ ಸಾಕ್ಷರತೆಯ ಮಟ್ಟ ರಾಷ್ಟ್ರೀಯ ಸರಾಸರಿ ಸಾಕ್ಷರತೆಗಿಂತ ಕಡಿಮೆ ಇದೆ ಎಂದು ಹೇಳಬಹುದು. ಅದರಲ್ಲಿಯೂ ಗ್ರಾಮೀಣ ಭಾಗದ ದಲಿತರು ಸಾಕ್ಷರತೆಯಲ್ಲಿ ಅತ್ಯಂತ ಹಿಂದುಳಿದಿರುವುದನ್ನು ಕಾಣಬಹುದು. ಇವರಲ್ಲಿ ಅನುತ್ತೀರ್ಣತೆ (Wastage) ಮತ್ತು ಅಪಮೌಲ್ಯ(Stagnation) ಅತೀ ಹೆಚ್ಚು ಎಂದು ಹೇಳಬಹುದು. ದಲಿತರಲ್ಲಿ ಮಹಿಳೆಯರ ಶಿಕ್ಷಣವಂತೂ ಹೇಳತೀರದು. ಇವರು ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸುವುದಿಲ್ಲ, ಕಳುಹಿಸಿದರೂ ಅರ್ಧಕ್ಕೆ ಶಾಲೆಯನ್ನು ಬಿಡಿಸುತ್ತಾರೆ. ಬಡತನ, ಸಾಮಾಜಿಕ ಕಳಕಳಿ ಇತ್ಯಾದಿಗಳು ಇವರ ಶಿಕ್ಷಣದ ಹಿಂದುಳಿದಿರುವಿಕೆಗೆ ಕಾರಣವಾದ ಅಂಶಗಳಾಗಿವೆ.

ದಲಿತ ಸಮುದಾಯದ ಹಾಗೆ ಬುಡಕಟ್ಟು ಸಮುದಾಯದವರು ಶಿಕ್ಷಣದಲ್ಲಿ ಹಿಂದುಳಿದಿರುವವರಾಗಿದ್ದಾರೆ. ಸಾಕ್ಷರತೆ ಮಟ್ಟದಲ್ಲಿಯೂ ರಾಷ್ಟ್ರೀಯ ಸರಾಸರಿಗಿಂತ ಬುಡಕಟ್ಟು ಸಮುದಾಯದ ಸಾಕ್ಷರತೆ ಮಟ್ಟ ಕಡಿಮೆ ಇದೆ. ೨೦೦೧ರ ಜನಗಣತಿಯ ಪ್ರಕಾರ ಬುಡಕಟ್ಟು ಸಮುದಾಯದ ಸಾಕ್ಷರತೆಯ ಪ್ರಮಾಣ ಪ್ರತಿಶತ ೩೦ ರಷ್ಟಿದೆ. ಔಪಚಾರಿಕ ಶಿಕ್ಷಣದಲ್ಲಿಯೂ ಬುಡಕಟ್ಟು ಜನರು ಹಿಂದುಳಿದಿದ್ದಾರೆ. ಉನ್ನತ ಶಿಕ್ಷಣದಲ್ಲಿ ಇವರ ಪಾಲ್ಗೊಳ್ಳುವಿಕೆ ಇಲ್ಲವೇ ಇಲ್ಲ ಎನ್ನಬಹುದು. ಶೇಕಡ ೧ಕ್ಕಿಂತ ಕಡಿಮೆಯಿದೆ. ಇವರಲ್ಲಿ ಮಹಿಳೆಯರ ಶಿಕ್ಷಣವಂತೂ ಒಂದು ಕನಸಿನ ಮಾತೆ ಆಗಿದೆ. ಅಷ್ಟರಮಟ್ಟಿಗೆ ಕಡಿಮೆಯಿರುವುದು ಕಂಡುಬರುತ್ತದೆ.

ಬುಡಕಟ್ಟು ಮಕ್ಕಳು ಶಾಲೆಯನ್ನು ಅರ್ಧ (Drop outs)ಕ್ಕೆ ಬಿಡುವವರ ಸಂಖ್ಯೆ ಹೆಚ್ಚು. ಏಕೆಂದರೆ ಬಡತನ, ಭೌಗೋಳಿಕ ಪ್ರತ್ಯೇಕತೆ, ಸಾಮಾಜಿಕ ಪ್ರತ್ಯೇಕತೆ, ನಾಗರಿಕ ಸಮಾಜದಿಂದ ದೂರವಿರುವುದು ಇತ್ಯಾದಿ ಅಂಶಗಳು ಇವರು ಶಾಲೆ ಮಧ್ಯಕ್ಕೆ ಬಿಡುವುದಕ್ಕೆ ಕಾರಣವಾದ ಅಂಶಗಳಾಗಿವೆ. ಇತ್ತೀಚೆಗೆ ಸರ್ಕಾರ ಮತ್ತು ಸಂವಿಧಾನಬದ್ಧ ಕಾರ್ಯಕ್ರಮಗಳಿಂದಾಗಿ ಶಿಕ್ಷಣ ಮತ್ತು ಸಾಕ್ಷರತೆಯ ಮಟ್ಟ ನಿಧಾನವಾಗಿ ಹೆಚ್ಚಿಗೆಯಾಗುತ್ತಿದೆಯಾದರೂ ಆ ಸಂಖ್ಯೆಯು ಅಭಿವೃದ್ಧಿ ದೃಷ್ಟಿಯಿಂದ ಕಡಿಮೆಯೆಂದೇ ಹೇಳಬೇಕು.

ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯಗಳು ಶಿಕ್ಷಣದಲ್ಲಿ ಅತ್ಯಂತ ಹಿಂದುಳಿದ ಸಮುದಾಯಗಳಾಗಿವೆ. ದಲಿತ ಮತ್ತು ಬುಡಕಟ್ಟು ಸಮುದಾಯಗಳಿಗಿಂತ ಅಲೆಮಾರಿ ಸಮುದಾಯಗಳು ಶಿಕ್ಷಣದಲ್ಲಿ ಅತ್ಯಂತ ಹಿಂದುಳಿದವರಾಗಿದ್ದಾರೆ. ಇವರಿಗೆ ಶಿಕ್ಷಣ ಎಂಬುದು ಮರೀಚಿಕೆಯಾಗಿದೆ. ಇವರಲ್ಲಿ ಅಕ್ಷರ ಸಂಸ್ಕೃತಿಯವರು ಇಲ್ಲವೇ ಇಲ್ಲ ಎಂದು ಹೇಳಬಹುದು. ಅಲೆಮಾರಿಗಳು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಉದ್ಯೋಗವನ್ನರಿಸಿ ವಲಸೆ ಹೋಗುವುದರಿಂದ ಇವರು

ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವುದಿಲ್ಲ. ಆದ್ದರಿಂದ ಇವರು ಶೈಕ್ಷಣಿಕವಾಗಿ ತುಂಬಾ ಹಿಂದುಳಿದ್ದಾರೆ. ಕಾರಣವಾಗಿ ಶೇಕಡ ೨ ಕ್ಕಿಂತಲೂ ಕಡಿಮೆ ಸಾಕ್ಷರತೆಯನ್ನಷ್ಟೇ ಸಾಧಿಸಲು ಸಾಧ್ಯವಾಗಿದೆ.

ಹಿಂದುಳಿದ ವರ್ಗಗಳಲ್ಲಿ ಅದರಲ್ಲಿಯೂ ಮಹಿಳೆಯರು ಶಿಕ್ಷಣದಲ್ಲಿ ಹಿಂದುಳಿದವರಾಗಿದ್ದಾರೆ. ಇವರ ಸಾಕ್ಷರತೆಯ ಮಟ್ಟ ರಾಷ್ಟ್ರದ ಸರಾಸರಿ ಸಾಕ್ಷರತೆಗಿಂತ ಕಡಿಮೆ ಇದೆ. ಔಪಚಾರಿಕ ಶಿಕ್ಷಣದಲ್ಲೂ ಇವರು ಹಿಂದುಳಿದಿದ್ದು ಶಾಲೆ ಬಿಡುವವರ ಪ್ರಮಾಣ ಅಧಿಕವಾಗಿದೆ. ಆದರೆ ಇತ್ತೀಚೆಗೆ ಸರ್ಕಾರದ ಕಾರ್ಯಕ್ರಮಗಳಿಂದಾಗಿ ಇವರ ಶಿಕ್ಷಣ ಮಟ್ಟ ಹೆಚ್ಚಾಗುತ್ತದೆ. ಆ ಕಾರ್ಯಗಳು ತ್ವರಿತಗತಿಯಲ್ಲಿ ಪ್ರಗತಿ ಸಾಧಿಸಲು ಸಾಧ್ಯವಾಗುವಲ್ಲಿ ವಿಫಲವಾಗುತ್ತಿರುವುದರಿಂದ ಅಲಕ್ಷಿತ ಗುಂಪುಗಳು ಶಿಕ್ಷಣದಲ್ಲೂ ಅತ್ಯಂತ ಹಿಂದುಳಿದಿದ್ದಾರೆ.

ಅಸಮಾನತೆ ಅಲಕ್ಷಿತರ ಮುಖ್ಯವಾದ ಸಾಮಾಜಿಕ ಲಕ್ಷಣವಾಗಿದ್ದು ರಾಜಕೀಯ, ಶೈಕ್ಷಣಿಕ, ಆರ್ಥಿಕವನ್ನು ಒಳಗೊಂಡಂತೆ ಎಲ್ಲ ಸಮಸ್ಯೆಗಳಿಗೆ ಮೂಲ ಕಾರಣವಾಗಿದೆ. ಅಸಮಾನತೆ ಎಂದರೆ ಸಮಾಜದ ಸಂಪತ್ತು ಮತ್ತು ಸೌಲಭ್ಯಗಳ ಅಸಮಾನ ಹಂಚಿಕೆ ಎಂದು ಹೇಳಿದಂತೆ. ಅಂದರೆ ಒಂದು ದೇಶ ಅಥವಾ ಸಮಾಜದ ಸಂಪತ್ತು ಕೆಲವೇ ವ್ಯಕ್ತಿಗಳಲ್ಲಿ ಹಂಚಿಕೆಯಾಗಿದ್ದು, ಬಹುಸಂಖ್ಯಾತರಲ್ಲಿ ಸಂಪತ್ತು ಹಂಚಿಕೆಯಾಗಿಲ್ಲ. ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಶೈಕ್ಷಣಿಕ ಅಸಮಾನತೆಯ ಆಯಾಮಗಳನ್ನು ಒಳಗೊಂಡಿದೆ. ಅಸಮಾನತೆಯು ಸಾಮಾಜಿಕ ಮತ್ತು ಐತಿಹಾಸಿಕ ತಪ್ಪುಗಳಿಂದುಂಟಾದ ಪ್ರಕ್ರಿಯೆಯಾಗಿದ್ದು, ಅದು ಸಮಾಜದಲ್ಲಿ ಆಳವಾಗಿ ಬೇರೂರಿದೆ. ಅಲಕ್ಷಿತ ಗುಂಪುಗಳು ಅಸಮಾನತೆಯ ರೂಪಕ್ಕೆ ಬಲಿಯಾಗಿ ಮುಖ್ಯವಾಹಿನಿಯಿಂದ ಬಹುದೂರ ಉಳಿದಿವೆ. ವ್ಯಕ್ತಿಗಳ ಅಲಕ್ಷಿತ ಪರಿಸ್ಥಿತಿಗೆ ಅಸಮಾನತೆಯೇ ಪ್ರಮುಖ ಕಾರಣವಾಗಿದೆ. ಇದು ವ್ಯಕ್ತಿಗಳು ಮತ್ತು ಸಮೂಹಗಳನ್ನು ಮುಖ್ಯ ಅವಕಾಶಗಳಿಂದ ವಂಚಿತರನ್ನಾಗಿ ಮಾಡಿ ಎಲ್ಲಾ ರಂಗದಲ್ಲಿಯೂ ಹಿಂದುಳಿಯುವಂತೆ ಮಾಡುತ್ತದೆ. ವಿವಿಧ ಕ್ಷೇತ್ರಗಳಲ್ಲಿ ನಾವು ಅಸಮಾನತೆಯನ್ನು ಗುರುತಿಸಬಹುದು. ಅಸಮಾನತೆಯಿಂದ ಕೂಡಿದ ಶಿಕ್ಷಣ, ಅಸಮಾನತೆಯಿಂದ ಕೂಡಿದ ನಾಗರಿಕ ಸೌಲಭ್ಯಗಳು, ಅಸಮಾನತೆಯಿಂದ ಕೂಡಿದ ಉದ್ಯೋಗಾವಕಾಶಗಳು, ಅಸಮಾನತೆಯಿಂದ ಕೂಡಿದ ರಾಜಕೀಯ ಅವಕಾಶಗಳು ಇತ್ಯಾದಿ. ಹೀಗೆ ಹಲವಾರು ರಂಗದಲ್ಲಿನ ಅಸಮಾನ ಅವಕಾಶಗಳು ವ್ಯಕ್ತಿಗಳನ್ನು ಅಶಕ್ತರನ್ನಾಗಿ ಮಾಡಿ ಸಮಸ್ಯೆಗಳಲ್ಲಿಯೇ ನರಳುವಂತೆ ಮಾಡುತ್ತವೆ. ಅಸಮಾನ ಅವಕಾಶಗಳಿಂದಾಗಿ, ವ್ಯಕ್ತಿಗಳ ಜೀವನ ನಿರ್ವಹಣೆ ಕಷ್ಟವಾಗಿ, ರೋಗ ರುಜಿನ, ಮರಣ ಪ್ರಮಾಣ ಅಧಿಕವಾಗುವಂತಹ ಸಮಸ್ಯೆಗಳು ಬಾಧಿಸುತ್ತವೆ. ಎಲ್ಲರಿಗೂ ಸಂಪತ್ತಿನ ಅಸಮಾನ ಹಂಚಿಕೆಯಾಗಿ ಸಮಾಜದಲ್ಲಿ ಸ್ಥರವಿನ್ಯಾಸವೇರ್ಪಟ್ಟು ಸಮಾಜದಲ್ಲಿ ಸಮಸ್ಯೆಗಳು ಅಧಿಕವಾಗುತ್ತಾ ಹೋಗಿವೆ. ಅಲಕ್ಷಿತ ಗುಂಪುಗಳು ಎಲ್ಲಾ ರೀತಿಯ ಅಸಮಾನತೆಗಳಿಗೆ ಗುರಿಯಾಗಿ ಮುಖ್ಯವಾಹಿನಿಯಿಂದ ದೂರ ಉಳಿಯುತ್ತವೆ.

ಅಲಕ್ಷಿತ ಸಮುದಾಯಗಳು ಭಾರತದ ಒಂದು ಪ್ರಮುಖ ಗುಂಪುಗಳಾಗಿದ್ದು, ಸಮಾಜದ ಅಂಚಿನಿಂದ ಹೊರತಳ್ಳಲ್ಪಟ್ಟಿವೆ. ಅಂದರೆ ಸಮಾಜದಿಂದ ಹೊರತಳ್ಳಲ್ಪಟ್ಟ ಗುಂಪಾಗಿದ್ದಾರೆ. ಸಾಮಾಜಿಕವಾಗಿ ಹೊರತಳ್ಳಲ್ಪಟ್ಟ ಅಲಕ್ಷಿತ ಗುಂಪುಗಳೆಂದರೆ ದಲಿತ, ಬುಡಕಟ್ಟು, ಅಲೆಮಾರಿ ಮತ್ತು ಹಿಂದುಳಿದ ಸಮುದಾಯಗಳು.

ಸಾಮಾಜಿಕ ಹೊರತಳ್ಳುವಿಕೆ (Social exclusion) ಎನ್ನುವ ಪದದ ಬಳಕೆ ಇತ್ತೀಚಿನದು. ಈ ಪದವನ್ನು ಮೊದಲು ಫ್ರಾನ್ಸಿನಲ್ಲಿ ಬಳಸಲಾಯಿತು. ಇದು ಒಂದು ಪ್ರಕ್ರಿಯೆಯಾಗಿದ್ದು, ಭಾಗವಹಿಸುವಿಕೆ, ಮತ್ತು ಐಕ್ಯತೆ ಕಡಿಮೆಯಾಗುತ್ತಾ ಹೋಗುತ್ತದೆ ಎಂದು ಹೇಳಬಹುದು. ಸಮಾಜದ ಮಟ್ಟಿಗೆ ಹೇಳುವುದಾದರೆ ಸಮಾಜದ ಸಮಗ್ರತೆಯ ಮೇಲೆ ನೇತ್ಯಾತ್ಮಕವಾಗಿ ಪರಿಣಾಮ ಬೀರುತ್ತದೆ. ವ್ಯಕ್ತಿಗಳ ಮಟ್ಟದಲ್ಲೂ ಇದು ಸಾಮಾಜಿಕ ಸಂಬಂಧಗಳನ್ನು ಕಟ್ಟುವಲ್ಲಿ ಮತ್ತು ನಿರೀಕ್ಷಿತ ಸಾಮಾಜಿಕ ಚಟುವಟಿಕೆಗಳಲ್ಲಿ ಸ್ವಾಭಾವಿಕವಾಗಿ ಭಾಗವಹಿಸಲು ಅಸಮರ್ಥತೆಯನ್ನು ತೋರಿಸುತ್ತಾರೆ.

ಉತ್ತರ ಐರ್ಲ್ಯಾಂಡಿನಲ್ಲಿ ಈ ಕೆಳಗಿನ ರೀತಿಯಲ್ಲಿ ಸಾಮಾಜಿಕ ಹೊರತಳ್ಳುವಿಕೆಯನ್ನು ವ್ಯಾಖ್ಯಾನಿಸಲಾಗಿದೆ. "Social exclusion ia a set of process, including within the labour market and the welfare system, by which individuals, households, communities of even whole social groups are pushed towords or kept to the morgins of society. It incompresses not only meterial replexation but also more broudly the demial of apportunities to participate fully in social and civil life."(Amartya Sen, 2004, 78).

ಇದರ ಅರ್ಥವೇನೆಂದರೆ ಸಾಮಾಜಿಕ ಹೊರತಳ್ಳುವಿಕೆ ಒಂದು ಪ್ರಕ್ರಿಯೆಯಾಗಿದ್ದು, ಕಾರ್ಮಿಕರ ಮಾರುಕಟ್ಟೆ ಮತ್ತು ಕಲ್ಯಾಣ ವ್ಯವಸ್ಥೆಯನ್ನು ಒಳಗೊಂಡಂತೆ ವ್ಯಕ್ತಿ, ಕುಟುಂಬಗಳು, ಸಮುದಾಯಗಳು, ಸಾಮಾಜಿಕ ಗುಂಪುಗಳು ಸಮಾಜದ ಅಂಚಿಗೆ ತಳ್ಳಲ್ಪಡುವುದು. ಇದು ಕೇವಲ ಭೌತಿಕ ವಂಚಿತತೆಯನ್ನು ಒಳಗೊಳ್ಳದೆ ಬಹು ಮುಖ್ಯವಾಗಿ ಸಮಾಜ ನಾಗರಿಕ ಜೀವನದ ಎಲ್ಲಾ ಅವಕಾಶಗಳನ್ನು ನಿರಾಕರಿಸುವುದೇ ಆಗಿದೆ ಎಂದೆನ್ನಬಹುದು.

ಫ್ರಾನ್ಸಿನ ರೇನ್ ಲೀನಿಯರ್ ಅವರು ಯಾವ ಯಾವ ಗುಂಪುಗಳು ಸಾಮಾಜಿಕವಾಗಿ ಹೊರತಳ್ಳಲ್ಪಟ್ಟ ಗುಂಪುಗಳಾಗಿವೆ ಎಂಬುದನ್ನು ಹೇಳುತ್ತ ಮಾನಸಿಕವಾಗಿ ಮತ್ತು ದೈಹಿಕವಾಗಿ ವಿಕಲಚೇತನರು, ಆತ್ಮಹತ್ಯೆಯ ಗುಂಪು, ವಯೋವೃದ್ಧರು, ಮನೆಬಿಟ್ಟ ಮಕ್ಕಳು, ಮದ್ಯವ್ಯಸನಿಗಳು, ಬಾಲಾಪರಾಧಿರಾಗಳು, ಏಕಪೋಷಕರು, ಬಹುಸಮಸ್ಯೆಗಳ ಕುಟುಂಬಗಳು, ಅಂಚಿನ ಗುಂಪುಗಳು, ಸಾಮಾಜಿಕ ಗುಂಪುಗಳು(Mentally and physically handicaped, social, aged individual, abused childred,

delinquants, single parents, multi problem households, Marginal groups social groups) ಹೀಗೆ ಸಾಮಾಜಿಕ ಹೊರತಳ್ಳುವಿಕೆಯು ವಿವಿಧ ನಮೂನೆಯಲ್ಲಿ ವಿವಿಧ ಆಯಾಮದಲ್ಲಿ ಅರ್ಥೈಸಲಾಗಿದೆ ಎಂದು ಹೇಳಿರುವರು(ಗುರುಲಿಂಗಯ್ಯ.ಎಂ., ೨೦೦೮, ೯೮).

ಅಲಕ್ಷಿತ ಸಮುದಾಯಗಳು ಸಾಮಾಜಿಕವಾಗಿ ಹೊರತಳ್ಳಲ್ಪಟ್ಟ ಗುಂಪುಗಳಾಗಿದ್ದು, ಸಮಾಜದ ಎಲ್ಲಾ ರೀತಿಯ ಭಾಗವಹಿಸುವಿಕೆಯಿಂದ ಹೊರಗುಳಿದವುಗಳಾಗಿವೆ. ಶಿಕ್ಷಣ, ಉದ್ಯೋಗ ಮತ್ತು ಇತರ ಸೌಲಭ್ಯಗಳಿಂದ ವಂಚಿತವಾಗಿವೆ.

೧. ಸಾಮಾಜಿಕ ಹೊರತಳ್ಳುವಿಕೆಯ ಸಂದರ್ಭವು ಹಲವು ರೀತಿಯಲ್ಲಿ ನಡೆಯುವುದನ್ನು ನಾವು ನೋಡಬಹುದಾಗಿದೆ.

೨. ಸಮಾಜವು ಪರಿವರ್ತನಶೀಲವಾದದ್ದು. ಸಾಮಾಜಿಕ ಸಂಬಂಧಗಳಲ್ಲಿ ಜನರ ಅಂತಃಸ್ತು, ಸಾಮಾಜಿಕ ನಿಯಂತ್ರಣದ ಸಾಧನಗಳಲ್ಲಿ ಬದಲಾವಣೆಗಳು ನಿರಂತರವಾಗಿ ಸಂಭವಿಸುತ್ತಲೇ ಇರುತ್ತವೆ. ಎಲ್ಲಿಯವರೆಗೆ ಇಂತಹ ಪರಿವರ್ತನೆಗಳೊಂದಿಗೆ ಜನರು ಗೊಂದಲಕ್ಕೆ ಒಳಗಾಗದೆ ಹೊಂದಿಕೊಂಡು ತಮ್ಮ ದೈನಂದಿನ ಜೀವನವನ್ನು ನಡೆಸಿಕೊಂಡು ಹೋಗುವರೋ, ಅಲ್ಲಿಯವರೆಗೆ ಅವು ಸಾಮಾಜಿಕವಾಗಿ ನಿರಾಕರಣೆಗೆ ಕಾರಣವಾಗುವುದಿಲ್ಲ. ಆದರೆ ಈ ತೆರನಾದ ಪರಿವರ್ತನೆಗಳಿಂದ ಜನರು ಸಾಮಾಜಿಕ ಜೀವನವನ್ನು ನಡೆಸಲು ಅಸಮರ್ಥರಾದರೆ ಆಗ ಸಮಾಜದ ನಿರಾಕರಣೆಗೆ ಒಳಗಾಗುವರು.

ವ್ಯಕ್ತಿಯ ವ್ಯಕ್ತಿಗತ ಜೀವನಕ್ಕೆ ಆದರ್ಶವಿರುವಂತೆ ಆತನ ಸಾಮಾಜಿಕ ಜೀವನಕ್ಕೂ ಆದರ್ಶಗಳಿವೆ. ವ್ಯಕ್ತಿಗತ ಸುಖಸಮೃದ್ಧಿ ಮಾತ್ರವಲ್ಲದೆ, ತನ್ನ ಸಾಮಾಜಿಕ ಬದ್ಧತೆಗಳ ಹಾಗೂ ಹೊಣೆಗಾರಿಕೆಗಳ ಬಗ್ಗೆಯೂ ಪೂರ್ಣ ಅರಿವಿರಬೇಕೆಂಬ ಪ್ರಜ್ಞೆ ಅಥವಾ ತಿಳುವಳಿಕೆ ವ್ಯಕ್ತಿಗಳಲ್ಲಿ ಸದಾ ಜಾಗೃತವಿದ್ದಾಗ ಸಾಮಾಜಿಕ ಜೀವನ ಸದೃಢವಾಗಿರುತ್ತದೆ. ಆದರೆ ಇಂತಹ ಆದರ್ಶದ ಬಗ್ಗೆ ವಿಮುಖವಾಗಿ ವ್ಯಕ್ತಿ ಸಾಮಾಜಿಕ ಹೊಣೆಗಾರಿಕೆಗಳನ್ನು ನಿಭಾಯಿಸಲು ಅಸಮರ್ಥನಾದಾಗ ಅಂತಹ ವ್ಯಕ್ತಿ ಸಾಮಾಜಿಕ ವ್ಯವಸ್ಥೆಯಿಂದ ದೂರ ಸರಿದು ಸಮೂಹದ/ಸಮಾಜದ ನಿರಾಕರಣೆಗೆ ಒಳಗಾಗುತ್ತಾನೆ.

ಸಾಮಾಜಿಕ ನಿರಾಕರಣೆಯೆಂಬುದು ಸಮಾಜದಲ್ಲಿ ವ್ಯಕ್ತಿಯು ಹೊಂದಿರುವ ಆದಾಯ ಮತ್ತು ಸಮಾಜದಲ್ಲಿ ನಿರ್ವಹಿಸುವ ಕಾರ್ಯದ ಮೇಲೆ ನಿರ್ಧರಿತವಾಗುತ್ತದೆ. ಸಮಾಜದಲ್ಲಿ ಬಹುತೇಕವಾಗಿ ಕಡಿಮೆ ತಲಾದಾಯ ಅಥವಾ ಬಡತನ ರೇಖೆಗಿಂತ ಕೆಳಗಿನ ಸಮೂಹದ ವ್ಯಕ್ತಿಗಳು ಸಾಮಾಜಿಕ ನಿರಾಕರಣೆಗೆ ಒಳಗಾಗುತ್ತಾರೆ. ಇಂದಿನ ಆಧುನಿಕ ಸ್ಪರ್ಧಾತ್ಮಕ ಯುಗದಲ್ಲಿ ಇಂತಹ ವ್ಯಕ್ತಿಗಳು ತಮ್ಮ ಸಾಮಾಜಿಕ ಜೀವನವನ್ನು ಹೇಗೆ ನಿರ್ವಹಿಸುತ್ತಾರೆ ಹಾಗೂ ಸಾಮಾಜಿಕ ಕಾರ್ಯಗಳನ್ನು(ಅಂದರೆ

ರಾಜಕೀಯ, ಸಾಮಾಜಿಕ, ಆರ್ಥಿಕ) ಹೇಗೆ ನಿರ್ವಹಿಸುತ್ತಾರೆ ಎಂಬುದರ ಮೇಲೆ ಸಾಮಾಜಿಕ ನಿರಾಕರಣೆಯು ನಿರ್ಧರಿತವಾಗುತ್ತದೆ.

ಸಮಾಜವು ಕಾರ್ಯಾತ್ಮಕವಾದದ್ದು ಮತ್ತು ಸಮೂಹಗಳಿಂದ ಕೂಡಿದ್ದು ಇಂತಹ ಸಮೂಹವು ಕೆಲವೊಂದು ನಿರೀಕ್ಷೆಗಳನ್ನು/ಧ್ಯೇಯಗಳನ್ನು ಹೊಂದಿರುತ್ತದೆ. ಮತ್ತು ಕೆಲವೊಂದು ನೀತಿ ನಿಯಮಗಳನ್ನು ಪಾಲಿಸಬೇಕೆಂತಲೂ ಸಮೂಹವು ನಿರೀಕ್ಷಿಸುತ್ತದೆ. ಆದರೆ ವ್ಯಕ್ತಿಯೂ ಸಮೂಹ ಸಮಾಜದ ಧ್ಯೇಯೋದ್ದೇಶಗಳಿಗೆ ವ್ಯವಸ್ಥಿತ ರೀತಿಯಲ್ಲಿ ವರ್ತಿಸದಿದ್ದಾಗ ಅವನು ಸಮಾಜದ/ಸಮೂಹದ ನಿರಾಕರಣೆಗೆ ಒಳಗಾಗುತ್ತಾನೆ.

ಸಮೂಹಗಳು, ಸಮುದಾಯಗಳು ಮತ್ತು ಸಮಾಜಗಳು ವ್ಯಕ್ತಿಗಳಿಂದ ರಚಿತವಾಗಿರುತ್ತವೆ. ಸಮಾಜವು ಪರಿವರ್ತನಾಶೀಲವಾದದ್ದು. ಸಮಾಜ ಬದಲಾದಂತೆ ವ್ಯಕ್ತಿಗಳು ನೂತನ ಪಾತ್ರಗಳನ್ನು ನಿರ್ವಹಿಸಬೇಕಾಗುವುದು. ಕಾರ್ಯಾತ್ಮಕದ ಮುಖಾಂತರ ಸಮಾಜದ ಧ್ಯೇಯೋದ್ದೇಶಗಳಿಗನುಗಣವಾಗಿ ವ್ಯಕ್ತಿ ತನ್ನ ಗುರಿಯನ್ನು ತಲುಪಲು ವಿಫಲವಾದಾಗ, ಆ ವ್ಯಕ್ತಿ ಸಾಮಾಜಿಕ ನಿರಾಕರಣೆಗೆ ಒಳಗಾಗುತ್ತಾನೆ.

ಸಾಮಾಜಿಕ ನಿರಾಕರಣೆಯೆಂಬುದು ಬಡತನ, ಆದಾಯ, ಅಸಮಾನತೆ, ಬಹಿಷ್ಕಾರ, ಉದ್ಯೋಗದ ಅಭಾವಗಳು ಮುಂತಾದ ಅಂಶಗಳ ಮೇಲೆ ನಿರ್ಧರಿತವಾಗುತ್ತದೆ. ಹಾಗೂ ಸಾಮಾಜಿಕ ನಿರಾಕರಣೆಗೆ ಒಳಗಾದ ವ್ಯಕ್ತಿಯು ಸಮೂಹದಿಂದ ಬಹಿಷ್ಕರಿಸಿ ಕುಟುಂಬ ಹಾಗೂ ಸಾಮಾಜಿಕ ಸಂಬಂಧಗಳನ್ನು ಕಳೆದುಕೊಳ್ಳುತ್ತಾನೆ. ಅಲ್ಲದೆ ಸಾಮಾಜಿಕ ಜೀವನದಿಂದ ದೂರ ಸರಿದು ನೈತಿಕ ಅವನತಿ ಹೊಂದುತ್ತಾನೆ.

ಬದಲಾಗುತ್ತಿರುವ ಸಮಾಜದಲ್ಲಿ ವ್ಯಕ್ತಿಯು ಸಮಾಜದ ಹಿತಾಸಕ್ತಿ ಮತ್ತು ನಿಯಮಗಳಿಗನುಸಾರವಾಗಿ ಸಾಮಾಜಿಕ ಜೀವನವನ್ನು ನಿರ್ವಹಿಸಿದರೆ ಅಂತಹ ವ್ಯಕ್ತಿಯು ಸಾಮಾಜಿಕ ವ್ಯಕ್ತಿಯಾಗಿ ರೂಪುಗೊಳ್ಳುತ್ತಾನೆ. ಆದರೆ ಇಂತಹ ಅಂಶಗಳಲ್ಲಿ ವ್ಯತ್ಯಾಸ ಉಂಟಾದರೆ ಸಮಾಜವು ವ್ಯಾಪ್ತಿಯಿಂದ ಹೊರದೂಡಲ್ಪಟ್ಟ ಸಾಮಾಜಿಕ ನಿರಾಕರಣೆಗೆ ಒಳಗಾಗುತ್ತಾನೆ.

ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಬಹಳ ಹಿಂದುಳಿದ ಅಲಕ್ಷಿತ ಸಮೂಹಗಳು ಎಂದರೆ ಪರಿಶಿಷ್ಟ ಸಮುದಾಯ, ಪರಿಶಿಷ್ಟ ಪಂಗಡಗಳು, ಅಲೆಮಾರಿ ಸಮುದಾಯಗಳು ಮತ್ತು ಮಹಿಳೆಯರು. ಈ ವರ್ಗಗಳ ಸಮಸ್ಯೆಗಳು ಇತರೆ ಸಮೂಹಗಳಿಗಿಂತ ವಿಶಿಷ್ಟ ಹಾಗೂ ವಿಭಿನ್ನವಾದವುಗಳು. ಭಾರತೀಯ ಸಮಾಜದಲ್ಲಿ ಈ ಎರಡು ವರ್ಗಗಳು ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ಧಾರ್ಮಿಕವಾಗಿ, ರಾಜಕೀಯವಾಗಿಯೂ ಅತ್ಯಂತ ಹಿಂದುಳಿದಿವೆ. ಹಿಂದಿನಿಂದಲೂ ಸಾಮಾಜಿಕವಾಗಿ ತುಳಿತಕ್ಕೊಳಗಾಗಿರುವ ಈ ವರ್ಗದ ಜನರು, ಬಡತನ ಹಾಗೂ ಅನಕ್ಷರತೆಯಿಂದ ಬಳಲುತ್ತಿದ್ದಾರೆ.

ವೇದಗಳ ಕಾಲದಿಂದ, ಇಂದಿನ ಆಧುನಿಕ ಕಾಲದವರೆಗೂ, ಹಲವು ಸಮಾಜ ಸುಧಾರಕರು, ಸಂಘ-ಸಂಸ್ಥೆಗಳು ವಿವಿಧ ಸಂಘಟನೆಗಳ ಮೂಲಕ ಈ ವರ್ಗದ ಜನರ ಸಮಸ್ಯೆಗಳನ್ನು ಅಭ್ಯಾಸಿಸಿ ಅವರ ಕಲ್ಯಾಣವನ್ನು ಸಾಧಿಸುವಲ್ಲಿ ಹಿಂದಿನಿಂದಲೂ ಪ್ರಯತ್ನಗಳನ್ನು ಮಾಡುತ್ತಾ ಬಂದಿದ್ದಾರೆ, ಬರುತ್ತಲಿದ್ದಾರೆ. ಆದರೂ ಆ ಕಾರ್ಯ ಸಾಧಿಸಲು ಸಾಧ್ಯವಾಗುತ್ತಿಲ್ಲ ಎಂಬುದು ಸ್ಪಷ್ಟವಾಗಿ ಗೋಚರಿಸುತ್ತದೆ.

"ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಲೋಹಿಯಾ, ಜ್ಯೋತಿಬಾಪುಲೆ, ಪೆರಿಯಾರ್ ಮುಂತಾದ ಮಹನೀಯರು ಇತಿಹಾಸದುದ್ದಕ್ಕೂ ಸಮುದಾಯ ಪದ್ಧತಿ ವಿರುದ್ಧ ಹೋರಾಡಿದ್ದಾರೆ. ಅಂದು ಸಂತ ಕವಿ ಕನಕದಾಸರು 'ಕುಲ ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯನ್ನೇನಾದರೂ ಬಲ್ಲಿರಾ? ಎಂದು ಸಮುದಾಯ ನೆಲೆಯನ್ನೇ ಪ್ರಶ್ನಿಸಿ ಸಮುದಾಯ ವಿನಾಶಕ್ಕೆ ನಾಂದಿ ಹಾಡಿದರು. ಅಂತೆಯೇ ಸಮುದಾಯ ವಿನಾಶವಾಗದೇ ದೇಶ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ. ಈ ದಿಕ್ಕಿನಲ್ಲಿ ಇಡುವ ಮೊದಲ ಹೆಜ್ಜೆ ಎಂದರೆ ಮುಂದುವರಿದ ಮತ್ತು ಅಲಕ್ಷಿತ ಸಮುದಾಯಗಳ ನಡುವಣ ಅಸಮಾನತೆಯನ್ನು ನಿವಾರಿಸುವುದು" ಆಗಿದೆ ಎಂದು ಮಂಜುನಾಥ ಅವರು ಅಭಿಪ್ರಾಯಪಡುತ್ತಾರೆ. ಅಂದರೆ ನಾವಿಂದು ವಾಸ್ತವಿಕ ಸಮಸ್ಯೆಗಳಿಗೆ ತಲಸ್ಪರ್ಶಿಯಾಗಿ ಪರಿಹಾರೋಪಾಯಗಳನ್ನು ಕಂಡುಕೊಳ್ಳಬೇಕಿದೆ(ಮಂಜುನಾಥ ಬೇವಿನಕಟ್ಟಿ, ೨೦೦೯, ೨೬೨).

ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಎಲ್ಲಾ ಕ್ಷೇತ್ರಗಳಲ್ಲೂ ಈ ಅಲಕ್ಷಿತ ಸಮುದಾಯಗಳು ಇಂದು ಒಂದು ಗೂಡುವುದು ಅನಿವಾರ್ಯವಾಗಿದೆ. ಹೀಗೆ ಒಂದುಗೂಡುವ ಮೂಲಕ ಸಮಾಜದಲ್ಲಿನ ಎಲ್ಲಾ ರೀತಿಯ ಹಕ್ಕು ಬಾಧ್ಯತೆಗಳನ್ನು ಅವರು ದೊರಕಿಸಿಕೊಳ್ಳಬೇಕಾಗಿದೆ. ಸಮಾನ ಅವಕಾಶಗಳು ಲಭ್ಯವಾಗಬೇಕಾದರೆ ಅವರ ಐಕ್ಯತೆ ಬಹಳ ಮುಖ್ಯವಾದುದು. ಆಸ್ತಿ ಮತ್ತು ಅಧಿಕಾರ ಎಲ್ಲಾ ಅಲಕ್ಷಿತ ಸಮುದಾಯಗಳಿಗೆ ಸಮಾನವಾಗಿ ಹಂಚಿಕೆಯಾಗದಿರುವ, ಹಾಗೆಯೇ ಅನಕ್ಷರತೆ ಮತ್ತು ಬಡತನ ಕಾರಣದಿಂದಲೂ ಅಸಮಾನತೆಗಳನ್ನು ಒಳಗೊಂಡಿರುವ ಸಮಾಜ ನಮ್ಮದು. ಸಮುದಾಯ ಆಧಾರಿತ ಆರ್ಥಿಕ ಹಾಗೂ ರಾಜಕೀಯ ಅಸಮಾನತೆಗಳ ವಿರುದ್ಧ ನಿರಂತರವಾಗಿ ಕಾಲಕಾಲಕ್ಕೆ ನಡೆಯುತ್ತಿದ್ದ ಹೋರಾಟಗಳಿಂದ ಅಸಮಾನತೆ, ಅನಕ್ಷರತೆ, ಬಡತನಗಳು ನಿರ್ಮೂಲನೆಯಾಗಿಲ್ಲ. ಹೀಗಾಗಿ ಲಿಂಗಾಧಾರಿತ ತಾರತಮ್ಯಕ್ಕೆ ಒಳಗಾದ ಸ್ತ್ರೀಯರು, ಆರ್ಥಿಕ ಮತ್ತು ಸಮುದಾಯ ಹೆಸರಿನಲ್ಲಿ ಅವಮಾನಿತರಾದವರು, ಆರ್ಥಿಕ ಮತ್ತು ರಾಜಕೀಯ ಅವಕಾಶಗಳಿಂದ ವಂಚಿತರಾದ ದುರ್ಬಲ ವರ್ಗದವರು ಮತ್ತು ಅಲ್ಪಸಂಖ್ಯಾತರು ಜೊತೆಯಾಗಿ ಸಾಮಾಜಿಕ ನ್ಯಾಯಕ್ಕಾಗಿ ಆಗ್ರಹಿಸುವುದು ಅವರ ಸಂವಿಧಾನಿಕ ಹಕ್ಕು. ಅದನ್ನು ಅವರಿಗೆ ಮನವರಿಕೆ ಮಾಡಿಕೊಡಬೇಕಿದೆ.

ಈ ಹಿನ್ನೆಲೆಯಲ್ಲಿ ಕ್ರಿಯಾಶೀಲರಾದವರಿಗೂ ಹಲವಾರು ಅಡೆತಡೆಗಳಿವೆ. ಬಹಳ ಮುಖ್ಯವಾಗಿ ಪುರೋಹಿತಶಾಹಿಯು ತನ್ನ ಜಾಣ್ಮೆಯಿಂದ ಮಿಕ್ಕೆಲ್ಲ ಸಮುದಾಯಗಳಲ್ಲಿ ಒಗ್ಗಟ್ಟಿಲ್ಲದಂತೆ ನೋಡಿಕೊಂಡು ತನ್ನ ಪ್ರತಿಷ್ಠೆಯನ್ನು ಮುಂದುವರೆಸಿಕೊಂಡು ಹೋಗುವುದಕ್ಕಾಗಿ ತನ್ನ ಕುಟಿಲತೆಯ ತಂತ್ರಗಳನ್ನು ಬಳಸಿ ಸಮುದಾಯ ಸಮುದಾಯಗಳಲ್ಲಿ ತಾರತಮ್ಯ ಭಾವನೆ ತೀವ್ರವಾಗಿ ಮಡುಗಟ್ಟಿ ನಿಲ್ಲುವಂತೆ ಮಾಡಿದೆ. ಇದರಿಂದಾಗಿ ಪರಸ್ಪರ ತಮ್ಮ ತಮ್ಮಲ್ಲಿಯೇ ತನ್ನ ಸಮುದಾಯ ಮೇಲು ಅವರ ಸಮುದಾಯ ಕೀಳು ಎಂಬ ಭಾವನೆಯಿಂದಾಗಿ ಪರಸ್ಪರ ದೂರವಾಗಿ ಉಳಿಯುವಂತೆ ಮಾಡುತ್ತ ಬರುತ್ತಲಿದ್ದಾರೆ. ಅದನ್ನು ಆ ಅಲಕ್ಷಿತ ಸಮುದಾಯಗಳು ಗ್ರಹಿಸಲು ಸಾಧ್ಯವಾಗದಿರುವುದು ಪ್ರಬಲವಾಗಿ ಹಿನ್ನಡೆಯನ್ನುಂಟು ಮಾಡಿದೆ.

'ಇದು ಒಂದು ರೀತಿಯಲ್ಲಿ ಪ್ರಬಲ ಸಮುದಾಯಗಳು ಹಾಗೂ ಹಣ ಬಲದ ರಾಜಕೀಯದ ಎದುರು ಇವತ್ತು ಅಲಕ್ಷಿತ ಸಮುದಾಯಗಳನ್ನು ಒಗ್ಗೂಡಿಸಲು ಸಾಧ್ಯವಿಲ್ಲದಂತಾಗಿದೆ. ಮೊದಲನೆಯದಾಗಿ ಈ ಐಕ್ಯತೆಯಲ್ಲಿ ಯಾವುದೇ ಒಂದು ಸಮುದಾಯದ ಪ್ರಬಲತೆ ಇಲ್ಲದಂತೆ ಗಮನಹರಿಸುವುದು ಮುಖ್ಯ ತಾತ್ವಿಕತೆಯಾಗಬೇಕು. ಅದಕ್ಕಾಗಿ ತುಳಿತಕ್ಕೊಳಗಾದ ಎಲ್ಲಾ ಸಮುದಾಯದವರಿಗೂ ಐಕ್ಯತೆಯಿಂದಾಗುವ ಪ್ರಯೋಜನ ಕುರಿತಂತೆ ವೈಚಾರಿಕ ನೆಲೆಗಟ್ಟಿನ ಶಿಕ್ಷಣ ಕೊಡುವುದು ಅಗತ್ಯವಾದುದು. ಸಮುದಾಯದ ಪ್ರತ್ಯೇಕತೆಯನ್ನು ಮಾನಸಿಕ ಮಟ್ಟದಲ್ಲಿ ಕಡಿಮೆಗೊಳಿಸುತ್ತಿರುವಾಗಲೇ ಎಲ್ಲಾ ಸಮುದಾಯಗಳನ್ನು ರಾಜಕೀಯವಾಗಿ, ಸಾಮಾಜಿಕವಾಗಿ ಒಗ್ಗೂಡಿಸುವ ಹಾಗೂ ಪ್ರಸ್ತುತದಲ್ಲಿರುವ ಸವಾಲುಗಳನ್ನು ಎದುರಿಸಲು ಬೇಕಾಗಿರುವ ಆರ್ಥಿಕ ಪ್ರಗತಿಯ ಕಾರ್ಯ ನೀತಿಗಳನ್ನು ರೂಪಿಸುವ ಅಗತ್ಯವಿದೆ'(ಮಂಜುನಾಥ ಬೇವಿನಕಟ್ಟಿ, ೨೦೦೯, ೨೬೩).

ವೈದಿಕರ ವರ್ಣ ವ್ಯವಸ್ಥೆ ಸಮುದಾಯ ವ್ಯವಸ್ಥೆಯಾಗಿ ಬದಲಾಯಿತು. ಸಮುದಾಯ ಪದ್ಧತಿ ಸಮಾಜವನ್ನು ಸಾವಿರಾರು ಹೋಳುಗಳನ್ನಾಗಿ ಒಡೆದುಹಾಕಿತು. ದಕ್ಷಿಣ ಭಾರತ, ಪುರೋಹಿತಶಾಹಿಯ ಹಿಡಿತಕ್ಕೆ ಸಿಕ್ಕ ತರುವಾಯ ಶ್ರೇಣೀಕರಣ ತತ್ವವನ್ನು ಪ್ರಭುತ್ವದ ಹಿತಕ್ಕನುಗುಣವಾಗಿ ಅನ್ವಯಿಸಬೇಕಾಯಿತು. ಅದರಿಂದಾಗಿ ಮುಂದೆ ಬಣ ಸಂಸ್ಕೃತಿಯ ಪ್ರವೇಶವಾಯಿತು. ಇದರಲ್ಲಿ ವ್ಯವಸಾಯ ವೃತ್ತಿಯಾಧಾರಿತ ಸಮುದಾಯಗಳು ಬಲಗೈ ಬಣಕ್ಕೆ ಸೇರಿಸಿದರೆ, ಕುಶಲಕರ್ಮಿ ಕಸುಬಾದಾರಿತ ಸಮುದಾಯಗಳನ್ನು ಎಡಗೈ ಬಣಕ್ಕೆ ಸೇರಿಸಲಾಯಿತು. ಅವುಗಳಾಚೆ ಬುಡಕಟ್ಟು ಸಮುದಾಯಗಳು ಅಸ್ಪೃಶ್ಯ ಸಮುದಾಯಗಳು ಆ ಎರಡೂ ಗುಂಪಿಗೆ ಸೇರದೆ ಪ್ರತ್ಯೇಕವಾಗಿಯೇ ಉಳಿಯುವಂತೆ ಮಾಡುವ ಮೂಲಕ ಮೇಲ್ವರ್ಗದ ಯಜಮಾನಿಕೆಯ ನೆರಳಿನಲ್ಲಿಯೇ ಜೀವಿಸುವಂತೆ ಮಾಡಿದವು.

ಇದರಿಂದಾಗಿಯೇ ಅಸ್ಪೃಶ್ಯತೆಗೆ ಒಳಗಾದ ದಲಿತ ಸಮುದಾಯಗಳ ಸ್ಥಿತಿ ಅತ್ಯಂತ ಶೋಚನೀಯವಾದುದು. ಸತ್ತ ಪ್ರಾಣಿಗಳ ಚರ್ಮದಿಂದ ಸಮಾಜೋಪಯೋಗಿ ವಸ್ತುಗಳನ್ನು ಮಾಡುವಂಥ, ವಾದ್ಯಗಳನ್ನು ನುಡಿಸುವ, ಸಮಾಜದಲ್ಲಿ ಕನಿಷ್ಟವೆಂದು ನಿರ್ಲಕ್ಷಿಸಿದ ಕೆಲಸಗಳನ್ನು ಮಾಡುವುದು ದಲಿತರ ಪಾಲಿಗೆ ದೊರೆಯಿತು.

ಭಾರತದಲ್ಲಿ ಇಂದು ಕನಿಷ್ಟ ೩೫೦೦ಕ್ಕೂ ಮೇಲ್ಪಟ್ಟು ಸಮುದಾಯಗಳಿವೆಯೆಂದು ಗುರುತಿಸಿದ್ದಾರೆ. ಅದರಲ್ಲಿ ಬಹುಪಾಲು ಅಲಕ್ಷಿತಸಮುದಾಯಗಳನ್ನು ಇನ್ನೂ ಗುರುತಿಸುವ ತಂಟೆಗೇ ಹೋಗಿಲ್ಲ. ಭಾರತದ ಒಟ್ಟು ಸಮುದಾಯಗಳಲ್ಲಿ ದಲಿತ ಮತ್ತು ಅಲಕ್ಷಿತ ಗುಂಪುಗಳ ಪ್ರಮಾಣವು ಶೇಕಡ ೫೦ಕ್ಕೂ ಮೇಲ್ಪಟ್ಟಿದೆಯಾದರೂ ಪ್ರಗತಿ ಮಾತ್ರ ಹೇಳಿಕೊಳ್ಳುವಷ್ಟು ಸುಧಾರಿಸಿಲ್ಲದಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ.

ಸಮುದಾಯಗಳ ನೇತ್ಯಾತ್ಮಕ ಗುಣ ಏಣಿಶ್ರೇಣಿ ವ್ಯವಸ್ಥೆಯಲ್ಲಿದೆ. ಸಮುದಾಯಗಳ ಅಸ್ತಿತ್ವವೇ ಅಸಮಾನತೆಯ ಆಧಾರದಲ್ಲಿರುವುದರಿಂದ ಮಾನವ ಹಕ್ಕು ಬಾಧ್ಯತೆಗಳಿಗೆ ಅದರ ನಾಶ ಅನಿವಾರ್ಯವಾಗಿದೆ. ಇಲ್ಲಿ ಹೊಲೆ ಮಾದಿಗರಾದಿಯಾಗಿ ಪಾರ್ಧಿ, ಚೆನ್ನದಾಸ, ಸಿಕ್ಕಲಿಗ, ದೋಹರ, ಡುಂಗ್ರಿಗರಾಸಿಯ, ಚಪ್ಪರಬಂಧ್, ದಕ್ಕಲಿಗರನ್ನು ಒಳಗೊಂಡಂತೆ ನೂರಾರು ಅಲಕ್ಷಿತ ಗುಂಪುಗಳನ್ನು ಕಾಣುತ್ತೇವೆ. ಅಲಕ್ಷಿತ ಸಮುದಾಯಗಳಿಗೆ ಸಮಾಜದಲ್ಲಿ ಮರ್ಯಾದೆಯುತ ಸಮಾನ ಸ್ಥಾನಗಳನ್ನು ಕಲ್ಪಿಸಬೇಕೆಂಬ ಉದ್ದೇಶದಿಂದ ಬಾಬಾ ಸಾಹೇಬ ಅಂಬೇಡ್ಕರರು ಸಂವಿಧಾನದಲ್ಲಿ ಮೀಸಲಾತಿ ಸೌಲಭ್ಯಗಳನ್ನು ಕಲ್ಪಿಸಿದರು. ಆದರೂ ಸಮುದಾಯ ವ್ಯವಸ್ಥೆ ಹಾಗೇ ಉಳಿಯಿತು. ಈ ಕಾರಣಕ್ಕಾಗಿಯೇ ಮಹಾರಾಷ್ಟ್ರದಲ್ಲಿ ದಲಿತ ಪ್ಯಾಂಥರ್ ಎನ್ನುವ ಸಂಘಟನೆ ಉದಯಿಸಿ ಸಮುದಾಯ ವ್ಯವಸ್ಥೆಯ ವಿರುದ್ಧ ಚಳುವಳಿಯನ್ನು ಹಮ್ಮಿಕೊಂಡಿತು. ಅದರ ಬೆನ್ನಲ್ಲೇ ಕರ್ನಾಟಕದಲ್ಲಿ ದಲಿತ ಸಂಘರ್ಷ ಸಮಿತಿ ಜನ್ಮ ತಾಳಿತು.

೫. ಅಲಕ್ಷಿತರ ಸಮುದಾಯಗಳು ಮತ್ತು ಸಾಮಾಜಿಕ ಚಿಂತನೆ

"ಇಂಡಿಯಾದ ಈ ಅಲಕ್ಷಿತ ಸಮುದಾಯಗಳಲ್ಲಿ ಹಾಗೂ ಮೇಲು ಸಮುದಾಯಗಳಲ್ಲಿ ತನಗಿಂತ ಕೆಳಗಿನ ಸಮುದಾಯದವರು ಬಳಸುವ ಯಾವುದೇ ಬಗೆಯ ಆಹಾರ ಹಾಗೂ ಅವರು ತಯಾರಿಸಿದ ಆಹಾರ ಅಪವಿತ್ರ, ಅದನ್ನು ಸೇವಿಸಬಾರದೆಂಬ ನಂಬಿಕೆ ತೀವ್ರವಾಗಿದೆ. ಎಸ್.ಎಂ.ಕೃಷ್ಣ ಅವರು ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದ ಅವಧಿಯಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಜಾರಿಗೆ ತಂದ ಬಿಸಿಯೂಟ ಯೋಜನೆ ಇದಕ್ಕೆ ಅತ್ಯುತ್ತಮ ಉದಾಹರಣೆ. ದಲಿತ ಮಹಿಳೆ ಅಡುಗೆ

ಮಾಡುತ್ತಾಳೆ ಎಂಬ ಕಾರಣಕ್ಕೆ ಮೇಲು ಸಮುದಾಯ ಭ್ರಮೆಯ ಜನರು ತಾವು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸದೇ ಇದ್ದರೂ ಪರವಾಗಿಲ್ಲ, ಶಾಲೆಯಲ್ಲಿ ಮಾತ್ರ ಅವರು ಊಟ ಮಾಡಬಾರದು ಎಂದೂ, ದಲಿತ ಮಹಿಳೆ ಅಡುಗೆ ಮಾಡಬಾರದು ಎಂಬುದಾಗಿ ಆಗ್ರಹಿಸಿದ್ದು ಅತ್ಯಂತ ಕ್ರೂರ ಹಾಗೂ ಅಮಾನವೀಯವಾದುದು. ಸಂವಿಧಾನಾತ್ಮಕವಾಗಿ ಅಸ್ಪೃಶ್ಯತೆ ನಿಷೇಧಿಸಲ್ಪಟ್ಟಿದ್ದರೂ ಜನಜೀವನದಲ್ಲಿ ಇನ್ನೂ ಹೇಗೆ ಹಾಸು ಹೊಕ್ಕಾಗಿದೆ ಎಂಬುದು ಇದರಿಂದ ಗೊತ್ತಾಗುತ್ತದೆ. ಜೊತೆಗೆ ಪೋಷಕರು ತಮ್ಮ ಮಕ್ಕಳಿಗೆ ಬಾಲ್ಯದಲ್ಲೇ ಹೇಗೆ ಅಸಮಾನತೆಯನ್ನು ಉಣ್ಣುವ ಆಹಾರದ ಮೇಲೂ ಆರೋಪಿಸಿರುವುದು. ಈ ಮನಸ್ಥಿತಿಯು ಮಕ್ಕಳ ಮೇಲೆ ಪರಿಣಾಮ ಬೀರುವಂತೆ ಮಾಡುತ್ತ ಬರುತ್ತಿರುವುದು ಗ್ರಾಮ ಜಗತ್ತು. ಇದರಿಂದ ತಲ್ಲಣಗೊಳಿಸಿತು ಇಡೀ ಕರ್ನಾಟಕದಾದ್ಯಂತ. ಆಹಾರದ ಅಪವಿತ್ರತೆ ಕೂಡ ಒಂದು ರೀತಿಯಲ್ಲಿ ಸಂಕುಚಿತ ಮನೋಭಾವವೇ ಆಗಿದೆ. ಏಕೆಂದರೆ ಆಹಾರ ಪದ್ಧತಿ ಒಂದು ಸಂಸ್ಕೃತಿಯ ಅಂಗವಾಗಿದ್ದು, ಆಯಾ ಪ್ರದೇಶ-ಪರಿಸರ-ಹವಾಗುಣಕ್ಕೆ ಅನುಗುಣವಾಗಿ ಅವರವರ ಅನುಕೂಲಕ್ಕೆ ತಕ್ಕಂತೆ, ಅವರವರ ದೇಹ ಹಾಗೂ ಶ್ರಮಕ್ಕೆ ಅನುಸಾರವಾಗಿ ಇರುತ್ತದೆ"(ಡಾ.ಮಂಜುನಾಥ ಬೇವಿನಕಟ್ಟಿ, ೨೦೦೯, ೨೬೪). ಆಹಾರದ ಬಗೆಗಿನ ಅಸ್ಪೃಶ್ಯತೆಯ ತಲ್ಲಣವನ್ನು ಬಸವಣ್ಣ ಎಂಟುನೂರು ವರ್ಷಗಳ ಹಿಂದೆಯೇ ಕಟ್ಟಿಕೊಟ್ಟಿರುವುದು ಹೀಗೆ.

ವೇದ ನಡುನಡುಗಿತ್ತು. ಶಾಸ್ತ್ರವಗಲಿ ಕೆಲಕ್ಕೆ ಸಾರಿದ್ದಿತಯ್ಯಾ
ತರ್ಕ ಹೆರತೊಲಗಿ, ಅಗಲಿದ್ದಿತಯ್ಯಾ
ನಮ್ಮ ಕೂಡಲ ಸಂಗಯ್ಯನು
ಮಾದಾರ ಚನ್ನಯ್ಯನ ಮನೆಯಲುಂಡ ಕಾರಣ।

ಸಸ್ಯಾಹಾರದಂತೆ ಮಾಂಸಾಹಾರದ ಸಂದರ್ಭದಲ್ಲಿಯೂ ಇಂತಹುದೇ ಅಸಮಾನತೆ ಇರುವುದನ್ನು ಕಾಣಬಹುದು. ಇದೇ ಕಾಲಘಟ್ಟದ ಶರಣ ಅಂಬಿಗರ ಚೌಡಯ್ಯ ಮಾಂಸಹಾರಿಗಳಲ್ಲಿ ಇರುವ ತಾರತಮ್ಯ ಕುರಿತು ಕಠೋರವಾಗಿ ವಿರೋಧಿಸಿರುವುದು ಹೀಗೆ:

ಕುರಿಕೋಳಿ ಕಿರುಮೀನ ತಿಂಬವರ ಊರೊಳಗೆ ಇರು ಎಂಬರು
ಅಮೃತಾನ್ನವ ಕರೆವ ಗೋವ ತಿಂಬವರ ಊರಿಂದ ಹೊರಗಿರುವ ಎಂಬರು.
ಆಕಳು ಹರಿಗೋಲಾಯಿತ್ತು. ಬೊಕ್ಕಣ, ಸಿದಿಕೆ, ಬಾರುಕೋಲು, ಪಾದರಕ್ಷೆಯಾಗಿತ್ತು.
ದೇವರ ಮುಂದೆ ಬಾರಿಸುವುದಕ್ಕೆ ಮದ್ದಳೆಯಾಗಿತ್ತು
ಈ ಬದ್ದಲಿಕೆಯೊಳಗಣ ತುಪ್ಪವ ಶುದ್ಧ ಮಾಡಿ ತಿಂಬವರ ಕಂಡಡೆ
ಉದ್ದನೆಯ ಚಮ್ಮಾಳಿಕೆಯ ತೆಕ್ಕೊಂಡು ಬಾಯಕೊಯ್ಯುವೆನು

ಅಂಬಿಗರ ಚೌಡಯ್ಯ

'ಈ ಆಹಾರ ಪದ್ಧತಿಯಾಗಲಿ, ಸಾಂಸ್ಕೃತಿಕ ಆಚರಣೆಗಳಾಗಲಿ, ದೇವರುಗಳ ಬಗೆಗಿರುವ ಮೇಲು ಕೀಳು ಎಂಬ ಮನೋಭಾವನೆಗಳಾಗಲೀ ಮೂಲತಃ ಆಯಾ ಕಾಲಘಟ್ಟದ ಪರಿಸರ, ಬೌದ್ಧಿಕತೆ, ಸ್ಥಳೀಯತೆ, ಭೌಗೋಳಿಕತೆ ಹಾಗೂ ಮನಸ್ಸಿನ ಸ್ಥಿತಿಗತಿಗಳ ಮೇಲಿಂದಾದುವೇ ಹೊರತು ನೈಸರ್ಗಿಕವಲ್ಲ. ಹಾಗಾಗಿ ಈ ಅಂಶಗಳನ್ನೇ ಮುಂದು ಮಾಡುತ್ತಾ ಪುರೋಹಿತಶಾಹಿ, ಅಲಕ್ಷಿತ ಸಮುದಾಯಗಳ ಮನಸ್ಸಿನಲ್ಲಿ ಎಂದಿಗೂ ಒಂದಾಗದಿರುವಂತಹ ಭಾವನೆಯನ್ನು ಹುಟ್ಟು ಹಾಕಿದೆ. ಹಾಗಾಗಿ ಸಮುದಾಯದವರಲ್ಲಿ ಈ ಮನೋಭಾವನೆಯನ್ನು ಹೊಡೆದು ಹಾಕುವಂತಹ ಶಿಕ್ಷಣ ಕೊಡುವ ಮೂಲಕ ಐಕ್ಯಗೊಳಿಸಬೇಕಾಗಿದೆ. ಈ ಮನೋಧೋರಣೆಯು ಇಂದಿಗೂ ಬಗೆಹರಿಯದಿರುವುದು ಅಷ್ಟೇ ಸ್ಪಷ್ಟವಾಗಿದೆ. ಇಂದಿಗೂ ಅಲ್ಲಲ್ಲಿ ಆಹಾರ ಕುರಿತಾಗಿ ಸಾಕಷ್ಟು ಗಲಭೆಗಳಾಗುವುದನ್ನು ದಿನನಿತ್ಯದಲ್ಲಿ ಕಾಣುತ್ತೇವೆ"(ಡಾ.ಮಂಜುನಾಥ ಬೇವಿನಕಟ್ಟಿ, ೨೦೦೬, ೨೬೫).

ಕೀರ್ತನೆಯೊಂದರಲ್ಲಿ ಕುಲದ, ಸಮುದಾಯ ಹೆಸರಿನಲ್ಲಿ ಇರುವ ಸಾಮಾಜಿಕ ತಾರತಮ್ಯವನ್ನು ಕೀರ್ತನಕಾರರು ಈ ರೀತಿಯಾಗಿ ಖಂಡಿಸಿದ್ದಾರೆ.

"ಹೊಲೆಯ ಬಂದನೆಂದು ಒಳಗೆ ದೇವರ ಮಾಡಿ
ಗಣ ಗಣ ಗಂಟೆಯ ಬಾರಿಸುವಿರಯ್ಯಾ
ತನುವಿನ ಕೋಪವು ಹೊಲೆಯಲ್ಲವೇ
ಪರಧನ ಪರಸತಿ ಹೊಲೆಯಲ್ಲವೇ
ಹೊರಗಿದ್ದ ಹೊಲೆಯನೆ ಒಳಗೆ ಬಚ್ಚಿಟ್ಟರೆ
ಇದಕೇನು ಮದ್ದೋ ಪುರಂದರ ವಿಠಲಾ॥"

ಎಂದು ಪುರಂದರ ದಾಸರು ಹೇಳಿದ್ದಾರೆ, ಕನಕದಾಸರು ಇನ್ನೂ ತೀವ್ರವಾಗಿ,

ಕುಲ ಕುಲವೆನ್ನುತಿಹರೊ
ಕುಲವಾವುದು ಸತ್ಯ ಸುಜನರಿಗೆ?
ಕೆಸರೊಳು ತಾವರೆ ಪುಟ್ಟಲು ಅದ ತಂದು
ಕುಸುಮನಾಭನಿಗಹೆ ಅರ್ಪಿಸರೇನಯ್ಯ?
ಪಶುವಿನ ಮಾಂಸದೊಳುತ್ಪತ್ತಿ ಕ್ಷೀರವ
ವಸುಧೆಯೊಳಗೆ ಭೂಸಲುರರುಣ್ಣರೇನಯ್ಯ?"

ಎಂದಿರುವುದಲ್ಲದೆ, ಇನ್ನೊಂದು ಕೀರ್ತನೆಯಲ್ಲಿ 'ಕುಲ, ಕುಲ, ಕುಲವೆಂದು ಬಡಿದಾಡುವವರಿಗೆ ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ?' ಎಂಬ ಸವಾಲನ್ನು ಹಾಕಿದ್ದಾರೆ.

ಹೀಗೆ ಕೀರ್ತನೆಯ ಉದ್ದೇಶ, ಧೋರಣೆ, ಭಾಷೆ, ಕಾವ್ಯ ಸೌಂದರ್ಯ, ಸಾಮಾಜಿಕ ಬದ್ಧತೆ, ಭಕ್ತಿ ಇತ್ಯಾದಿಗಳಲ್ಲಿ ಬಹುಮಟ್ಟಿಗೆ ಅದು ಹಿಂದಿನ ವಚನ ಚಳುವಳಿಯನ್ನೇ ಹೋಲುತ್ತವೆ.

ಅಂಬೇಡ್ಕರ್‌ರವರು ಹಿಂದೂ ಸಾಮಾಜಿಕ ವ್ಯವಸ್ಥೆಯ ಎರಡು ಮುಖ್ಯ ಗುಣಲಕ್ಷಣಗಳ ಮೇಲೆ ದಾಳಿ ಮಾಡಿದರು. ಅವುಗಳೆಂದರೆ ಬಲವಂತವಾಗಿ ಹೇರಲ್ಪಟ್ಟ ಸಾಂಸ್ಕೃತಿಕ ಅಸಮಾನತೆ, ಮತ್ತೊಂದು ಅಸಮಾನತೆ. ಅವರ ಜೀವಿತದ ಕಾಲಘಟ್ಟದಲ್ಲಿ ಅನೇಕ ಇಂತಹ ಸಾಮಾಜಿಕ ವಿಷಮತೆಗಳನ್ನು ತೊಲಗಿಸಲು ತಮ್ಮನ್ನು ತಾವು ತೊಡಗಿಸಿಕೊಂಡರು. ಅವುಗಳಲ್ಲಿ ಅಸ್ಪೃಶ್ಯರ ಶೈಕ್ಷಣಿಕ ಬೆಳವಣಿಗೆ ಮತ್ತು ಅವರ ರಾಜಕೀಯ ಸಂಚಲನೆ. ಅವರ ಮುಖ್ಯ ವಿಚಾರಧಾರೆಯೆಂದರೆ ಸಮುದಾಯ ಆಧಾರಿತ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸುವುದು. ಅವರ ಪ್ರಕಾರ ಸಾಮಾಜಿಕ, ಆರ್ಥಿಕ ಪರಿವರ್ತನೆಗೆ ಭಾರತವು ಸಂಸ್ಕೃತಿಯನ್ನು ಬಯಸುತ್ತದೆ. ಹಳೆಯ ಸಂಸ್ಕೃತಿಯನ್ನು ಹಾಳು ಮಾಡುವುದಾದರೆ ಅದರ ಜಾಗದಲ್ಲಿ ಹೊಸದಾದ ಮೌಲ್ಯವನ್ನು ಬೆಳೆಸುವ ಅವಶ್ಯಕತೆ ಇದೆ. ಡಾ ಅಂಬೇಡ್ಕರ್‌ರವರ ಮುಖ್ಯ ಉದ್ದೇಶ ಸಮುದಾಯ ಪದ್ಧತಿಯ ನಿರ್ಮೂಲನೆ ಮತ್ತು ಹಿಂದೂಧರ್ಮವು ನೀಡಿದ ಬ್ರಾಹ್ಮಣತ್ವದ ಪ್ರಧಾನ್ಯತೆಯನ್ನು ತೊಡೆದು ಹಾಕುವುದಾಗಿತ್ತು.

ಅವರು ಬುದ್ಧನ ತತ್ವಗಳನ್ನು ಒಳ್ಳೆಯ ಸಾಧನಗಳಾಗಿ ಸಮಾನತೆಯ ಸಮಾಜ ನಿರ್ಮಾಣಕ್ಕೆ ಬಳಸಿಕೊಂಡರು. ಅಂಬೇಡ್ಕರ್‌ರವರು ಬೌದ್ಧಧರ್ಮಕ್ಕೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡಿದರು. ಏಕೆಂದರೆ ವೈದಿಕ ಧರ್ಮ ಬ್ರಾಹ್ಮಣನಾಗಿ ಹುಟ್ಟಿದವನನ್ನು ಮಾತ್ರ ಅನುಸರಿಸುವ ಧರ್ಮವಾಗಿ, ಜೈನಧರ್ಮ ಬ್ರಾಹ್ಮಣರಿಗೆ ಮಾತ್ರ ಜೈನರಾಗಲು ಅವಕಾಶ ಕಲ್ಪಿಸಿತು. ೧೨ನೆಯ ಶತಮಾನದಲ್ಲಿ ಬಂದ ಲಿಂಗಾಯತ ಧರ್ಮ ಎಲ್ಲರನ್ನು ತನ್ನೊಳಗೆ ಬರಮಾಡಿಕೊಂಡಿತಾದರೂ ಬಸವಣ್ಣನ ನಂತರ ಅದರ ವ್ಯಾಪ್ತಿಯು ಸಮುದಾಯತೆಯನ್ನು ಮೀರುವಲ್ಲಿ ಎಡವಿತು. ಬೌದ್ಧಧರ್ಮ ಮಾತ್ರ ಎಲ್ಲರಿಗೂ ಮುಕ್ತ ಅವಕಾಶವನ್ನು ಒದಗಿಸುವ ಮುಖೇನ ತನ್ನ ತತ್ವಗಳನ್ನು ಸರಳವಾಗಿ ಎಲ್ಲರಿಗೂ ಅನ್ವಯಿಸುವಂತೆ ಮಾಡಿತ್ತು. ಹಾಗಾಗಿ ಅದು ಪ್ರಪಂಚದ ಇತರ ಕಡೆಯು ಪಸರಿಸಲು ಕಾರಣವಾಯಿತು. ಕಾರಣ ಬೌದ್ಧಧರ್ಮವು ಇತರ ಧರ್ಮಗಳು ಮಾಡದಂತಹ ತ್ರಿವಳಿಯ ಮೂರು ತತ್ವಗಳನ್ನು ಬೋಧಿಸಿತ್ತು. ಅವುಗಳೆಂದರೆ, ಪ್ರಜ್ಞೆ, ಕರುಣೆ, ಮತ್ತು ಸಮಾನತೆ. ಇವುಗಳನ್ನು ಉತ್ತಮ ಜೀವನಕ್ಕೆ ವ್ಯಕ್ತಿಗಳು ಆಯ್ಕೆ ಮಾಡಿಕೊಳ್ಳುತ್ತಾರೆ. ಒಂದು ಸಾಕ್ಷ್ಯಾಧಾರಗಳ ಮೇಲೆ ಹೊಸದಾದ ಬೌದ್ಧ ಧರ್ಮವನ್ನು ಅವರು ಪ್ರಚಾರ ಮಾಡಿದರು. ಅದನ್ನು ಅವರು ಹೊಸ ಬೌದ್ಧ ಧರ್ಮ ಅಥವಾ 'ನವಯಾನ' ಎಂದು ಕರೆದರು. ಹಿಂದುತ್ವವನ್ನು ಸಂಶಯವಿಲ್ಲದೆ ನಿರಾಕರಿಸಿದರು. ಅಂಬೇಡ್ಕರ್‌ರವರು ಸಮುದಾಯ ವ್ಯವಸ್ಥೆಯನ್ನು ಉಗ್ರವಾಗಿ ವಿರೋಧಿಸುತ್ತಿದ್ದರು. ಡಾ ಅಂಬೇಡ್ಕರ್‌ರವರ ಮುಖ್ಯ ಧ್ಯೇಯಗಳೆಂದರೆ ಸಮುದಾಯ ಮತ್ತು ಅಸ್ಪೃಶ್ಯತೆಯ ವಿರುದ್ಧ ಹೋರಾಡುವುದು.

ಅಂಬೇಡ್ಕರ್‌ರವರು ಗಾಂಧೀಜಿ ಮತ್ತು ಅವರ ಸಮುದಾಯ ಸುಧಾರಣೆಯನ್ನು ತೀವ್ರವಾಗಿ ವಿರೋಧಿಸುತ್ತಿದ್ದರು. ಗಾಂಧೀಜಿಯವರು ಮತ ಬೋಧಕರಾಗಿ ಪ್ರತಿನಿಧಿಸಿದರೆ, ಅಂಬೇಡ್ಕರ್‌ರವರು ಜಾತ್ಯಾತೀತವಾಗಿ ಪ್ರತಿನಿಧಿಸುತ್ತಾರೆ. ಗಾಂಧೀಜಿಯವರು ಅಸ್ಪೃಶ್ಯತೆ ಹಿಂದೂ ಧರ್ಮಕ್ಕೆ ಹೊಂದಿಕೊಂಡಿರುವ ಒಂದು ಶಾಪ ಎಂದು ಹೇಳಿದರು. ಹಿಂದೂ ಸಮುದಾಯ ಜನರು ಪ್ರಾಯಶ್ಚಿತಗೊಂಡು ಧರ್ಮ ಮತ್ತು ಜನತೆ ಶುದ್ಧಗೊಳ್ಳಬೇಕೆಂದರು. ಅಸ್ಪೃಶ್ಯರು ಶುಚಿತ್ವದ ಕೆಲಸ ಮಾಡಬೇಕು. ಈ ಸಮಸ್ಯೆಗೆ ಪರಿಹಾರವೆಂದರೆ ತಮ್ಮನ್ನು ತಾವು ವೈಯಕ್ತಿಕವಾಗಿ ತೊಡಗಿಸಿಕೊಳ್ಳುವುದು. ಇದಕ್ಕೆ ಯಾವುದೇ ನ್ಯಾಯಾಂಗ ತಿದ್ದುಪಡಿಯ ಅಗತ್ಯತೆ ಇಲ್ಲ. ಗಾಂಧೀಜಿಯವರು ಸಮುದಾಯ ಮತ್ತು ಅದರ ಆಧುನಿಕ ಪ್ರದರ್ಶನತೆಯನ್ನು ವಿರೋಧಿಸುತ್ತಾ ವರ್ಣಾಶ್ರಮ ವ್ಯವಸ್ಥೆಯನ್ನು ಒಪ್ಪಿಕೊಂಡು ಹುಟ್ಟಿನಿಂದಲೇ ಶ್ರಮವಿಭಜನೆ ಆರೋಗ್ಯದಾಯಕ ಎಂದು ತಿಳಿಸಿದರು. ಅಸ್ಪೃಶ್ಯತೆಯನ್ನು ನಿವಾರಿಸಲು ಶೂದ್ರ ಸಮುದಾಯದವರ ಹಕ್ಕೊತ್ತಾಯ ಉತ್ತಮವಾದುದು. ಆದರೆ ಸಮಾನಾಂತರ ಮತ್ತು ವೈಯಕ್ತಿಕವಲ್ಲದ ಸಮಾನ ವಿಭಜನೆಯು ವಂಶಪಾರಂಪರ್ಯವಾದ ಗುಣ. ಕೆಲವೊಂದು ಅಶುದ್ಧ ಗುಣಗಳನ್ನು ತೊಳೆದುಹಾಕಿ ಮತ್ತು ಸ್ವಂತ ನಿಬಂಧನೆಗಳನ್ನು ಹೇರಲ್ಪಟ್ಟ ಪರಸ್ಪರ ವ್ಯವಹಾರವಾದಂತಹ ಅನುಕೂಲಕರವಾದ ಮತ್ತು ತೃಪ್ತಿದಾಯಕ ಅಭಿವೃದ್ಧಿ ಬೇಕು ಎಂದು ಗಾಂಧೀಜಿಯವರು ವಾದಿಸಿದರು.

ಡಾ. ಬಾಬಾಸಾಹೇಬ್ ಅಂಬೇಡ್ಕರ್‌ರವರ ಪ್ರಕಾರ ಮೊದಲ ಆದ್ಯತೆಯು ಹಿಂದುತ್ವಕ್ಕಾಗಲಿ ಅಥವಾ ಭಾರತೀಯ ಸಮಾಜಕ್ಕಾಗಲಿ ಅಲ್ಲ. ಆದರೆ ಹೊಸದಾಗಿ ಕಂಗೊಳಿಸುವ ಹೊಸ ಕಟ್ಟಡ, ಸಮಾನ, ಮುಕ್ತ, ತೆರೆದ, ಏಣಿ ಶ್ರೇಣೀಕೃತವಲ್ಲದ ಆಧುನಿಕ ಭಾರತ ಅವರ ಕನಸ್ಸಾಗಿತ್ತು. ಸರ್ಕಾರವು ಅಸ್ಪೃಶ್ಯರನ್ನು ಮತ್ತು ಅವರ ಏಳಿಗೆಯನ್ನು ನಿರ್ದೇಶಿಸಿದರು. ಅವರ ಕಾರ್ಯ ಅಥವಾ ಸಮಾರಂಭಗಳು ಸಂಘರ್ಷಾತ್ಮಕ ಪ್ರವೃತ್ತಿಯನ್ನು ಮಧ್ಯೆ ಹಿಂದೂ ಸಮಾಜವನ್ನು ಸಮುದಾಯಕರಣಗೊಳಿಸಿ ಮತ್ತು ಪ್ರತ್ಯೇಕವಾಗಿಡಿ ಎನ್ನುತ್ತವೆ. ಆ ಮಾದರಿ ಬದುಕಿನ ಚಿಂತನೆಯನ್ನು ಡಾ.ಬಾಬಾ ಸಾಹೇಬ್ ಅಂಬೇಡ್ಕರ್‌ರವರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡರು.

ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರು ೨೦ನೆಯ ಶತಮಾನದ ಮಹಾನ್ ಸಾಮಾಜಿಕ ಹೋರಾಟಗಾರರು. ಜೀವನದುದ್ದಕ್ಕೂ ದಮನಕಾರಿ ಹಿಂದೂ ಸಂಸ್ಕೃತಿ ವ್ಯವಸ್ಥೆ, ಧರ್ಮ, ಆಚರಣೆಗಳು, ಕಂದಾಚಾರಗಳು, ಸಮುದಾಯ, ವರ್ಗ, ವರ್ಣ, ಅಸ್ಪೃಶ್ಯತೆ, ಲಿಂಗ ತಾರತಮ್ಯ ಇತ್ಯಾದಿಗಳನ್ನು ಖಂಡಿಸಿದರು. ಹಿಂದೂ ಸಿದ್ಧಾಂತದ ವಿರುದ್ಧ ಯುದ್ಧವನ್ನೇ ಸಾರಿ ಅದರ ತಾಯಿಬೇರನ್ನು ಅಲುಗಾಡಿಸಿದರು. ಅವರು ಕ್ರಾಂತಿಯ ಸಂಕೇತ-ಹೋರಾಟದ ಪ್ರತೀಕ. ಅಸ್ಪೃಶ್ಯರಲ್ಲಿ ಅರುಣೋದಯ ಅವರ ಬಾಳಿನಲ್ಲಿ ಆಶಾಕಿರಣವಾಗಿ ಭಾರತದ ಚರಿತ್ರೆಯಲ್ಲಿ ಸಂಘರ್ಷದ ಹೊಸ ಯುಗಕ್ಕೆ ನಾಂದಿಹಾಡಿದರು. ಹಿಂದು ಸಮಾಜದಲ್ಲಿ ಬದಲಾವಣೆಯ ಬಿರುಗಾಳಿಯನ್ನು ಎಬ್ಬಿಸಿದರು. ಈ

ಹಿನ್ನೆಲೆಯಲ್ಲಿ ಅಲಕ್ಷಿತ ಸಮುದಾಯದ ಜನ ಸಮುದಾಯಗಳು ಮಠ-ಸಂಸ್ಥಾನಗಳನ್ನು ಕಟ್ಟಿಕೊಳ್ಳುವ ಮೂಲಕ ಅವರನ್ನು ಸಂಘಟಿಸಲು ಪ್ರಯತ್ನಿಸಿದರು.

ಡಾ.ಬಾಬಾಸಾಹೇಬ್ ಅಂಬೇಡ್ಕರ್‌ರವರು ಸಮುದಾಯ ಮತ್ತು ಅಸ್ಪೃಶ್ಯತೆಯ ವಿರುದ್ಧ ಮತ್ತು ಅಸ್ಪೃಶ್ಯತಾ ಸಮುದಾಯಗಳ ಏಳಿಗೆಗಾಗಿ ಸಾಮಾಜಿಕ ಚಳುವಳಿಯನ್ನು ಆರಂಭಿಸಿದರು. ಆದರೆ ತದನಂತರದಲ್ಲಿ ಈ ಸಾಮಾಜಿಕ ಚಳುವಳಿಯು ರಾಜಕೀಯ ಸಂಘರ್ಷವಾಗಿ ಪರಿಣಮಿಸಿದುದನ್ನು ಡಾ.ಬಾಬಾ ಸಾಹೇಬ್ ಅಂಬೇಡ್ಕರ್‌ರವರು ತುಂಬಾ ವ್ಯಥೆ ಪಟ್ಟರು. ಹಿಂದೂ ಸಮಾಜದಲ್ಲಿ ಅಸ್ಪೃಶ್ಯರು ಸಮಾನತೆ ಸ್ಥಾನಮಾನ ಪಡೆಯಲು ಸಾಧ್ಯವಿಲ್ಲ. ಜೊತೆಗೆ ಗುಂಪು ಅಥವಾ ವೈಯಕ್ತಿಕ ಸಂಚಲನೆ ಕಷ್ಟ ಸಾಧ್ಯ ಎಂಬುದನ್ನು ತಿಳಿದಿದ್ದರು. ಇದರಿಂದಾಗಿ ಅಂಬೇಡ್ಕರ್‌ರವರು ಮುಖ್ಯವಾದ ಎರಡು ಸಾಧ್ಯತೆಗಳಿಗೆ ಬೆಂಬಲ ವ್ಯಕ್ತಪಡಿಸಿದರು. ಅಸ್ಪೃಶ್ಯರ ರಾಜಕೀಯ ಐಕ್ಯತೆ ಮತ್ತು ಗುಂಪು ಮತಾಂತರ ಸಾಮಾಜಿಕ ವಿಮೋಚನೆಗೆ ಸೂಕ್ತ. ಹಾಗಾಗಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಅಸ್ಪೃಶ್ಯತಾ ಸಮುದಾಯಗಳ ಜನರ ಐಕ್ಯತೆಗಾಗಿ ರಾಜಕೀಯ ಮತ್ತು ಧಾರ್ಮಿಕ ಅಂಶಗಳ ಆದರ್ಶಗಳನ್ನು ಅಭಿವೃದ್ಧಿಪಡಿಸಲು ಮುಂದಾದರು.

ಮಹಾತ್ಮಾ ಗಾಂಧೀಜಿಯವರು ಸಮುದಾಯ ವ್ಯವಸ್ಥೆಯ ಬಗ್ಗೆ ಅಸಮಾಧಾನ ಹೊಂದಿದ್ದರು. ಅವರೆಂದೂ ಸಹ ಸಮುದಾಯ ವ್ಯವಸ್ಥೆಯೊಳಗಿನ ದೋಷಗಳನ್ನು ಕಂಡಿರಲಿಲ್ಲ. ಬದಲಾಗಿ ಅವರು ಅಸ್ಪೃಶ್ಯತೆಯನ್ನು ಧರ್ಮ ಮತ್ತು ಧಾರ್ಮಿಕ ವಿಷಯವಾಗಿ ನೋಡುತ್ತಿದ್ದರು. ಆದರೆ ಡಾ.ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಉದ್ದೇಶ ಅಸ್ಪೃಶ್ಯರ ಮೂಲಭೂತ ಹಕ್ಕನ್ನು ಶಿಕ್ಷಣ, ಸಂಘಟನೆ ಮತ್ತು ಹೋರಾಟದ ಮೂಲಕ ಪಡೆಯುವುದಾಗಿತ್ತೇ ಹೊರತು ಪರೋಪಕಾರದಿಂದಲ್ಲ.

ಭಾರತದ ಸ್ವಾತಂತ್ರ್ಯನಂತರ ಡಾ.ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಮುಂಬೈನಲ್ಲಿ ಕಾಂಗ್ರೆಸ್ಸಿಗರ ಬೆಂಬಲದಿಂದ ಒಂದು ಸ್ಥಾನ ಪಡೆದುಕೊಂಡರು ಹಾಗೂ ಸಂವಿಧಾನ ಕರಡು ಸಮಿತಿಯ ಅಧ್ಯಕ್ಷರೂ ಆದರು. ಕಾಂಗ್ರೆಸ್ಸಿನವರು ಡಾ.ಬಾಬಾ ಸಾಹೇಬ್ ಅಂಬೇಡ್ಕರ್‌ರವರಿಗೆ ಸ್ವಾತಂತ್ರ್ಯಾನಂತರ ತಕ್ಷಣ ಕಾರ್ಯನಿರ್ವಹಿಸುವಂತೆ ತಿಳಿಸಿದರು. ಆದರೆ ಅಂಬೇಡ್ಕರ್‌ರವರಿಗೆ ಸ್ವಲ್ಪ ಕಾಲಾವಕಾಶದ ಅವಶ್ಯಕತೆ ಇತ್ತು. ಡಾ.ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಸ್ವತಂತ್ರ ಭಾರತದ ಕಾನೂನು ಮಂತ್ರಿಯಾಗಿ ಕ್ಯಾಬಿನೇಟ್ ಪ್ರವೇಶಿಸಿದರು ಮತ್ತು ಸಂವಿಧಾನ ಕರಡು ರಚನಾ ಸಮಿತಿಯ ಅಧ್ಯಕ್ಷರಾಗಿಯೂ ಮುಂದುವರೆದರು. ಅಂಬೇಡ್ಕರ್‌ರವರ ಕಾಲದಲ್ಲಿನ ಸಂವಿಧಾನ ಶಾಸನ ಸಭೆಯಲ್ಲಿ ಅವರ ಸಾಧನೆ ಮತ್ತು ಮಿತಿಗಳನ್ನು ಗುರುತಿಸಲಾಗಿದೆ.

ಡಾ.ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಸಂವಿಧಾನಾತ್ಮಕವಾಗಿ ತಮ್ಮದೇ ಆದ ನಿಲುವನ್ನು ತಳೆದಿದ್ದರು. ಅದು ಕರಡು, ಕಲಂಗಳನ್ನೊಳಗೊಂಡ ಸಂವಿಧಾನ. ಪಕ್ವವಾದ ವ್ಯಾಖ್ಯಾನಾತ್ಮಕ ಅಥವಾ ಸೃಷ್ಠಿಕರಣಾತ್ಮಕ ಮತ್ತು ಸಂಖ್ಯಾಂಶಗಳಿಂದ ಒಳಗೊಂಡಿತ್ತು. ಅದಷ್ಟೇ ಅಲ್ಲದೇ ಅದರಲ್ಲಿ ಪರಿಶಿಷ್ಟರ ಹಕ್ಕು ಮತ್ತು ವಿಶೇಷ ಅಧಿಕಾರ ಹಕ್ಕು ಮಾನ್ಯತೆಯ ಭಾಗವನ್ನು ಸಹ ಸೇರಿಸಿದರು. ಅದರ ಜೊತೆಗೆ ಅತಿಕ್ರಮಣವಾದ ಹಕ್ಕುಗಳಿಗೆ ತಕ್ಕ ಪರಿಹಾರಗಳನ್ನು ಸಹ ಸೂಚಿಸಿದರು. ಡಾ.ಬಾಬಾ ಸಾಹೇಬ್ ಅಂಬೇಡ್ಕರ್‌ರವರು ೧೯೩೧ರ ದುಂಡು ಮೇಜಿನ ಸಮ್ಮೇಳನಕ್ಕಿಂತ ಮುಂಚೆಯೇ ಈ ನಿಲುವನ್ನು ತಳೆದಿದ್ದರು. ನಿಗ್ರೋಗಳ ತಿದ್ದುಪಡಿಯನ್ನು ಸೇರಿಸುವಲ್ಲಿ ಅಮೇರಿಕಾ ಸಂವಿಧಾನವು ಪ್ರಮುಖ ಪ್ರಭಾವ ಬೀರಿತು. ಇಷ್ಟೆಲ್ಲಾ ಪ್ರಯತ್ನಗಳಿಂದ ಸಂವಿಧಾನವನ್ನು ರಚಿಸಿದ್ದರೂ ಅವರಿಗೆ ತೃಪ್ತಿಯಾಗಲಿಲ್ಲ. ಸಂವಿಧಾನವೂ ಅತ್ಯಂತ ಶ್ರೇಷ್ಠವಾದರೂ ಶಾಸನ ಸಭೆ ಅವರನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಆದ್ದರಿಂದ ಅದು ಅವರಿಂದ ತುಂಬಾ ದೂರ ಉಳಿಯಿತು. ಆದರೆ ೧೯೫೩ರಲ್ಲಿ ರಾಜ್ಯಸಭೆಯನ್ನು ಪ್ರವೇಶಿಸುವುದಕ್ಕಿಂತ ಮುಂಚೆ ಅವರು ತಯಾರಿಸಿದ ಸಂವಿಧಾನ ರಚನೆ ತಮ್ಮ ಇಷ್ಟಕ್ಕೆ ವಿರೋಧವಾಗಿ ಪರಿಣಮಿಸಿದರೆ ತಾವೇ ಸ್ವತಃ ರಚಿಸಿದ ಪ್ರತಿಯನ್ನು ಸುಟ್ಟು ಹಾಕುವುದರಲ್ಲಿ ನಾನೇ ಮೊದಲಿಗನು ಎಂದು ಹೇಳಿದರು.

ಡಾ.ಬಾಬಾ ಸಾಹೇಬ್ ಅಂಬೇಡ್ಕರ್‌ರವರು ತುಂಬಾ ಆಳವಾಗಿ ಶೋಷಿತ ವರ್ಗಗಳ ಆಸೆಗಳನ್ನು ಅರಿತಿದ್ದರು. ಕಾರಣ ಸಮುದಾಯ ವ್ಯವಸ್ಥೆಯ ಅಸ್ತಿತ್ವದಿಂದಾಗಿ ಅಸ್ಪೃಶ್ಯತೆಯನ್ನು ಹೋಗಲಾಡಿಸುವುದು ಅವರ ಮುಖ್ಯ ಧೋರಣೆಯಾಗಿತ್ತು. ಅವರ ವಿಚಾರಧಾರೆಗಳನ್ನು ಬೆಳೆಸುವುದಕ್ಕಾಗಿ ಅನೇಕ ವಿಧಾನಗಳನ್ನೂ ಸಹ ಅನುಸರಿಸಿದರು. ಅವುಗಳಲ್ಲಿ ವೇದಗಳನ್ನು ಶ್ರೇಷ್ಠ ಎಂಬುದನ್ನು ತಿರಸ್ಕರಿಸಿದ್ದು, ಒಂದು ಸಮುದಾಯದ ಆಶೋತ್ತರಗಳನ್ನು ಈಡೇರಿಸುವ ನೀತಿಯನ್ನು ಹೇಳುವ ಪುರಾಣ ಮತ್ತು ಶಾಸ್ತ್ರಗಳನ್ನು ವಿರೋಧಿಸಿದರು. ಪಾಶ್ಚಾತ್ಯ ಉದಾರ ಶಿಕ್ಷಣ ಅಸ್ಪೃಶ್ಯರಿಗೆ ಉದ್ಯೋಗ ಅವಕಾಶ ನೀಡುವುದಲ್ಲದೆ ಅಸ್ಪೃಶ್ಯರು ಮಾಡುವ ಸಾಂಪ್ರದಾಯಿಕ ಕೆಲಸಗಳಿಗಿಂತ ಅದು ಉಪಯುಕ್ತವಾದುದು ಎಂದು ಒಪ್ಪಿಕೊಂಡರು. ಜೊತೆಗೆ ಬೌದ್ಧಧರ್ಮವನ್ನು ಹಿಂದೂ ಧರ್ಮಕ್ಕಿಂತ ಶ್ರೇಷ್ಠ ಎಂದು ಒಪ್ಪಿಕೊಂಡರು. ಕಾರಣ ಬೌದ್ಧ ಧರ್ಮವು ಸಮಾನತೆಯ ಪ್ರತೀಕ, ಅಂತಿಮವಾಗಿ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಸಾಧನ. ಅವರು ಕಂಡ ಹಾಗೆ ಶೋಷಿತ ವರ್ಗದವರ ರಾಜಕೀಯ ಶಕ್ತಿ ಮತ್ತು ಸಂಚಲನೆಯ ಬದಲಾವಣೆಯ ಪ್ರತೀಕವಾಗಿ ಬೌದ್ಧ ಧರ್ಮವನ್ನು ನಂಬಿದ್ದರು. ರಾಜಕೀಯ ಸಂಚಲನೆಯ ಪ್ರಕ್ರಿಯೆಯ ಸಂರಕ್ಷಣೆ ಒಂದು ಕಡೆ, ಮತ್ತೊಂದು ಕಡೆಗೆ ರಾಜಕೀಯ ಚೌಕಾಸಿ ಪರಿಣಾಮವಾಗಿ ಅವರು ಗಳಿಸಿದ ಜಯ ಪರಿಶಿಷ್ಟ ಸಮುದಾಯಗಳು ರಾಜಕೀಯ ಶಕ್ತಿಯಾಗುವಲ್ಲಿ ಪ್ರೇರೇಪಿಸಿದವು. ರಾಜಕೀಯವಾಗಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಪರಿಶಿಷ್ಟರನ್ನು ಕತ್ತಲಿನಿಂದ ಬೆಳಕಿನೆಡೆಗೆ ಮೌನ ವಿರೋಧದೊಂದಿಗೆ ತಂದರು.

ಡಾ.ರಾಮ ಮನೋಹರ ಲೋಹಿಯಾರವರು ಅಲಕ್ಷಿತ ಸಮುದಾಯಗಳ ಅಧ್ಯಯನದಲ್ಲಿ ಅತ್ಯಂತ ಪ್ರಮುಖ ಪಾತ್ರವನ್ನು ವಹಿಸಿದರು. ಇವರು ಯುರೋಪು ಮೂಲದ ರಾಜಕೀಯ ಪರಿಕಲ್ಪನೆಯಾಗಿದ್ದ ಸಮಾಜವಾದವನ್ನು ಭಾರತದ ಸಾಂಸ್ಕೃತಿಕ ಚರಿತ್ರೆ ಮತ್ತು ಸಾಮಾಜಿಕ ಮತ್ತು ಆರ್ಥಿಕ ವಾಸ್ತವಗಳ ಹಿನ್ನಲೆಯಲ್ಲಿ ಪುನಃ ರೂಪಿಸಿದ ಅನನ್ಯ ರಾಜಕೀಯ ಚಿಂತಕ. ಭಾರತದ ಸಂದರ್ಭದಲ್ಲಿ ಸಮಾಜವಾದ ಎಂದರೆ ಲೋಹಿಯ ಅವರ ಚಿಂತನೆಗಳೇ ಆಗಿವೆ.

ಡಾ.ರಾಮಮನೋಹರ ಲೋಹಿಯಾರವರು ತಮ್ಮ ಸಮಾಜವಾದಿ ಸಿದ್ದಾಂತದ ಮೂಲಕ ಸಮಾಜದಲ್ಲಿ ಸಮತಾವಾದದ ಪ್ರತಿಪಾದಕರಾಗಿದ್ದರು. ದಲಿತ ಮತ್ತು ಹಿಂದುಳಿದ ಸಮುದಾಯಗಳು ಮುಖ್ಯವಾಹಿನಿಗೆ ಬರಬೇಕು ಎಂಬುದು ಅವರ ಚಿಂತನೆಯಾಗಿತ್ತು. ಡಾ.ರಾಮ ಮನೋಹರ ಲೋಹಿಯಾ ಅವರ ಚಿಂತನೆಗಳು ನೇರವಾಗಿ ಅಲಕ್ಷಿತ ಸಮುದಾಯಗಳ ಮೇಲೆ ನೇರ ಪ್ರಭಾವ ಬೀರದ್ದಿದ್ದರೂ, ಭೂ–ಸುಧಾರಣೆ, ರೈತರ ಬಗೆಗಿನ ಕಾಳಜಿ, ಕಾರ್ಮಿಕರ ಬಗೆಗಿನ ಚಿಂತನೆ, ಸಮಾನತೆಯ ಕಲ್ಪನೆಗಳು ಈ ಸಮುದಾಯದ ಮೇಲೆ ಪ್ರಭಾವ ಬೀರಿದವು ಎಂದರೆ ತಪ್ಪಾಗಲಾರದು. ಏಕೆಂದರೆ ಭಾರತದ ಸಂದರ್ಭದಲ್ಲಿ ಹೆಚ್ಚು ಕಡಿಮೆ ಗೇಣಿದಾರರು ಮತ್ತು ಕೂಲಿ ಕಾರ್ಮಿಕರು ದಲಿತ ಮತ್ತು ಅಲಕ್ಷಿತ ಸಮುದಾಯದವರೇ ಆಗಿದ್ದರು. ಇಂದಿಗೂ ಪ್ರತಿಶತ ೭೦ ರಷ್ಟು ದಲಿತ ಮತ್ತು ಬುಡಕಟ್ಟು ಸಮುದಾಯದವರು ಕೃಷಿ ಕಾರ್ಮಿಕರು, ಗೇಣಿದಾರರು, ಜೀತದಾಳುಗಳಾಗಿಯೇ ದುಡಿಯುತ್ತಿದ್ದಾರೆ. ಆಗಿದ್ದಾರೆ. ಈ ಕಾರಣದಿಂದ ಡಾ.ರಾಮ ಮನೋಹರ ಲೋಹಿಯಾರವರ ಸಮಾಜವಾದಿ ಸಿದ್ದಾಂತವು ಸಮಾನತೆಯನ್ನು ಪ್ರತಿಪಾದಿಸುವುದರಿಂದ ಸಮಾನತೆಯು ಅಲಕ್ಷಿತ ಸಮುದಾಯಗಳಿಗೆ ಅತ್ಯಗತ್ಯವಾಗಿರುವ ಆಯಾಮವನ್ನು ಒದಗಿಸುವ ವಿಷಯವಾಗಿದೆ.

ಡಾ.ರಾಮ ಮನೋಹರ ಲೋಹಿಯಾರವರ ಚಿಂತನೆಯು ಕರ್ನಾಟಕವೂ ಸೇರಿದಂತೆ ಇಂಡಿಯಾದಾದ್ಯಂತ ಅಲಕ್ಷಿತ ಸಮುದಾಯಗಳ ಹೋರಾಟಕ್ಕೆ ಒಂದು ಹೊಸ ರೂಪ ಮತ್ತು ದಿಕ್ಕನ್ನು ಕೊಟ್ಟಿರುವುದನ್ನು ನಾವು ನೋಡಬಹುದಾಗಿದೆ. ಈ ಹಿನ್ನಲೆಯಲ್ಲಿ ಡಾ. ರಾಮ ಮನೋಹರ ಲೋಹಿಯಾರವರ ವಿಚಾರಧಾರೆಯು ಅಲಕ್ಷಿತ ಸಮುದಾಯಗಳ ಅಧ್ಯಯನಕ್ಕೆ ಪ್ರಮುಖ ಕಾರಣವಾಗುವ ಆಕರವಾಗಿದೆ.

ಡಾ.ರಾಮ ಮನೋಹರ ಲೋಹಿಯಾರವರು ಜಾತಿ ಹಾಗೂ ಲಿಂಗಾಧಾರಿತ ಅಸಮಾನತೆಯ ವಿರುದ್ಧದ ವಿಚಾರ ಕ್ರಾಂತಿಗೆ ನಾಂದಿ ಹಾಡಿದರು. ಭಾರತದಲ್ಲಿ ಕೇವಲ ಅಧ್ಯಯನ ರೂಪದಲ್ಲಿ ಹೂತು ಹೋಗಿದ್ದ ಸಮುದಾಯ ಪದ್ದತಿಯ ವಿಶ್ಲೇಷಣೆಯ ದಿಕ್ಕನ್ನೇ ಬದಲಿಸಿದ ಡಾ.ರಾಮ ಮನೋಹರ ಲೋಹಿಯಾ ಭಾರತೀಯರ ವರ್ತನೆಯ ಮೂಲಗಳನ್ನು ಸಮುದಾಯ ಪದ್ಧತಿಯ

ಭಿತ್ತಿಯಲ್ಲಿ ಗ್ರಹಿಸಲೆತ್ನಿಸಿದರು. ದೊಡ್ಡ ದೊಡ್ಡ ಸಾಮಾಜಿಕ ಹಾಗೂ ಸಾಂಸ್ಕೃತಿಕ ಜಿಕ್ಕಟ್ಟುಗಳಿಂದ ಹಿಡಿದು ದೈನಂದಿನ ಸಣ್ಣಪುಟ್ಟ ವಿವರಗಳವರೆಗೂ ಹಬ್ಬಿರುವ ಸಮುದಾಯ ಪದ್ಧತಿಯ ವಿಷಯಗಳನ್ನು ಹೆಕ್ಕಿ ತೆಗೆಯುವ ಕೆಲಸ ಮಾಡಿದವರು ಲೋಹಿಯಾರವರು. ದ್ವಿಜ ಪರಂಪರೆಯ ವಿರೋಧಿಯಾಗಿದ್ದ ಲೋಹಿಯಾ ಅವರಿಗೆ ಭಾರತೀಯ ಸಮಾಜದಲ್ಲಿ ಬ್ರಾಹ್ಮಣರೂ ಸೇರಿದಂತೆ ಎಲ್ಲಾ ಸಮುದಾಯಗಳ ಜನರ ಅಸಹಾಯಕತೆಯೂ ತಿಳಿದಿತ್ತು.

ಹಿಂದೂ ಧರ್ಮದಲ್ಲಿನ ದೌರ್ಜನ್ಯ, ದಬ್ಬಾಳಿಕೆ, ಅಸ್ಪೃಶ್ಯತೆ ಆಚರಣೆಗಳಿಂದ ಮುಕ್ತಿಹೊಂದಲು ದಲಿತರು ಬೇರೆ ಧರ್ಮಕ್ಕೆ ಮತಾಂತರಗೊಂಡಿದ್ದಾರೆ ಹಾಗೂ ಮತಾಂತರಗೊಳ್ಳುತ್ತಿದ್ದಾರೆ. ಮತಾಂತರ ಪ್ರಕ್ರಿಯೆ ಇಂದು ನೆನ್ನೆಯದಲ್ಲ. ಅದು ೬ನೆಯ ಶತಮಾನದಿಂದಲೂ ನಡೆಯುತ್ತಿದೆ. ಮೊಘಲರ ಕಾಲದಲ್ಲಿ ದಲಿತರು ಭಯದಿಂದ ಇಸ್ಲಾಂಧರ್ಮಕ್ಕೆ ಮತಾಂತರಗೊಂಡರೆ, ಬ್ರಿಟಿಷರ ಕಾಲದಲ್ಲಿ ದಲಿತರು ಮತ್ತು ಬುಡಕಟ್ಟಿನ ಜನರಿಗೆ ಹಲವು ಆಮಿಷಗಳನ್ನು ನೀಡಿ ಕ್ರಿಶ್ಚಿಯನ್ ಧರ್ಮಕ್ಕೆ ಸಾಮೂಹಿಕವಾಗಿ ಮಂತಾಂತಗೊಳಿಸಿದರು. ಅದರ ಸಾಧಕ-ಬಾಧಕಗಳೇನೇ ಇದ್ದಾಗ್ಯೂ ಸಾಮೂಹಿಕವಾಗಿ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡ ಉತ್ತರ ಈಶಾನ್ಯ ವಲಯದ ಬುಡಕಟ್ಟುಗಳು ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಮುಂದುವರಿದಿದ್ದಾರೆ ಎಂಬುದು ಗಮನಿಸಬೇಕಾದ ಸಂಗತಿಯಾಗಿದೆ.

ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ದಲಿತರಿಗಷ್ಟೇ ಅಲ್ಲ. ಇಡೀ ವಿಶ್ವದ ಮಾನವ ಸಮುದಾಯಕ್ಕೆ ದಾರಿದೀಪವಾಗಿದ್ದಾರೆ. ಅವರ ಒಂದೊಂದು ಮಾತುಗಳು ಬಸವಣ್ಣನವರು ಹೇಳುವಂತೆ ರತ್ನದ ದೀಪ್ತಿಯಂತೆ ಹಾಗೂ ಸ್ಫಟಿಕದ ಸಲಾಕೆಯಂತಿವೆ. ಎಮರ್ಸನ್ ಹೇಳುವಂತೆ; ಬದುಕಿನುದ್ದಕ್ಕೂ ಸವರ್ಣಿಯ ಸಮುದಾಯದಿಂದ ನಾನಾ ಬಗೆಯ ಹಿಂಸೆ, ಅಪಮಾನ, ತಿರಸ್ಕಾರಗಳನ್ನು ಕಂಡುಂಡ ಅಂಬೇಡ್ಕರ್ ಅವರು ಕೆಳ ಸಮುದಾಯದ ಬಿಡುಗಡೆಗಾಗಿ ಸ್ವಾತಂತ್ರ್ಯ, ಸಮಾನತೆ, ಸೋದರತೆ, ಸಹಬಾಳ್ವೆ, ಪ್ರಜ್ಞೆ, ಕರುಣೆ ಬೆಳೆಸಲು ಮಾಡಿದ ಅವರ ಭಾಷಣಗಳು, ಅವರ ವಿಚಾರಗಳು ಪ್ರಮುಖವಾದವು. ಅವು ಇಡೀ ಮಾನವ ಸಮುದಾಯದ ಏಳಿಗೆಗಾಗಿ ಮತ್ತು ಬಡತನ, ಅಜ್ಞಾನ, ಮುಗ್ಧತೆಯನ್ನು ತೊರೆದು ತಮ್ಮ ಅಸ್ಮಿತೆಯ ಹುಡುಕಾಟಕ್ಕೆ ಹಚ್ಚಿದವು. ಅವರ ವಿಚಾರ ಕೇವಲ ಒಂದು ಸಮುದಾಯಕ್ಕೆ ಸೀಮಿತವಾಗದೆ ದಲಿತ, ಹಿಂದುಳಿದ ಸಮುದಾಯಗಳ ಉದ್ಧಾರಕ್ಕೆ ಮಾರ್ಗದರ್ಶಿಗಳಾದವು.

ಸಮುದಾಯ ಆಧಾರಿತ ಹಿಂದೂ ಸಮಾಜದಲ್ಲಿ ದಲಿತರಿಗೆ ಯಾವುದೇ ಸ್ಥಾನಮಾನಗಳು ದೊರೆಯುವುದಿಲ್ಲ. ಶೋಷಣೆ, ದಬ್ಬಾಳಿಕೆ, ಅಸ್ಪೃಶ್ಯತೆಗಳಿಂದ ಮುಕ್ತರಾಗಲು, ಶಾಂತಿಯಿಂದ ಬದುಕಲು

ಬೌದ್ಧಧರ್ಮಕ್ಕೆ ಮತಾಂತರಗೊಳ್ಳಬೇಕೆಂದು ದಲಿತರ ವಿಮೋಚನೆಯ ಹರಿಕಾರರಾದ ಡಾ. ಡಾ.ಬಾಬಾ ಸಾಹೇಬ್ ಅಂಬೇಡ್ಕರ್‌ರವರು ದಲಿತರಿಗೆ ಕರೆ ನೀಡಿದರು. ಅಂತೆಯೇ ಅವರು ಬೌದ್ಧಧರ್ಮಕ್ಕೆ ಮತಾಂತಗೊಂಡರು. ಸ್ವಾತಂತ್ರ್ಯ ಬಂದು ೬೦ ವರ್ಷಗಳಾದರೂ ದಲಿತರ ಮೇಲೆ ನಡೆಯುವ ದೌರ್ಜನ್ಯಗಳು ಕಡಿಮೆಯಾಗದಿರುವುದರಿಂದ ದೇಶದ ಅನೇಕ ಭಾಗಗಳಲ್ಲಿ ಇಂದಿಗೂ ಮತಾಂತರ ನಡೆಯುತ್ತಿದೆ. ೧೯೮೧ರಲ್ಲಿ ಮೀನಾಕ್ಷಿಪುರಂನಲ್ಲಿ ನಡೆದ ದಲಿತರ ಸಾಮೂಹಿಕ ಮತಾಂತರ ಇದಕ್ಕೆ ಒಂದು ಜ್ವಲಂತ ಉದಾಹರಣೆಯಾಗಿದೆ.

ದಲಿತರು ಮತ್ತು ಬುಡಕಟ್ಟಿನವರು ಬೌದ್ಧಧರ್ಮವಲ್ಲದೆ ಇಸ್ಲಾಂ, ಕ್ರಿಶ್ಚಿಯನ್, ಸಿಖ್ ಧರ್ಮಗಳಿಗೆ ಮತಾಂತರಗೊಂಡಿದ್ದಾರೆ. ಮತಾಂತರಗೊಂಡವರು ದಬ್ಬಾಳಿಕೆ, ದೌರ್ಜನ್ಯಗಳಿಂದ ಬಿಡುಗಡೆ ಹೊಂದಿದ್ದಾರೆ. ಆದರೆ ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಮೂಲಧರ್ಮದವರೆಂದು ಹೇಳಿಕೊಳ್ಳುತ್ತಿರುವವರು ಕೂಡ ಒಂದು ಕಾಲದಲ್ಲಿ ಹಿಂದೂಧರ್ಮದ ಅಲಕ್ಷಿತ ಸಮುದಾಯಗಳಿಂದ ಮತಾಂತರ ಹೊಂದಿದವರೇ. ಆದರೂ ಇತ್ತೀಚೆಗೆ ಮತಾಂತರಗೊಳ್ಳುತ್ತಿರುವ ದಲಿತರನ್ನು ಬೇರೆಯಾಗಿಯೇ ನೋಡುತ್ತಿದ್ದಾರೆ. ಅವರೊಡನೆ ಯಾವುದೇ ಸಾಮಾಜಿಕ ಸಂಬಂಧಗಳಾಗಲಿ ಅಥವಾ ವೈವಾಹಿಕ ಸಂಬಂಧಗಳನ್ನಾಗಲಿ ಬೆಳೆಸುತ್ತಿಲ್ಲ. ಹಾಗೆಯೇ ಮತಾಂತರಗೊಂಡ ದಲಿತರ ಆರ್ಥಿಕ ಸ್ಥಾನಮಾನಗಳಲ್ಲಿ ಯಾವುದೇ ಬದಲಾವಣೆಗಳಾಗಿಲ್ಲ.

ಅಲಕ್ಷಿತ ಗುಂಪುಗಳ ಜನರು ಗತಕಾಲದಿಂದಲೂ ಬಡತನವೆಂಬ ವಿಷವರ್ತುಲದಲ್ಲಿ ಜೀವಿಸುತ್ತಿದ್ದರೂ, ಗ್ರಾಮೀಣ ಗೃಹ ಕೈಗಾರಿಕೆಗಳಿಂದ ಸ್ವಲ್ಪವಾದರೂ ಉಸಿರಾಡುವಂತಿದ್ದರು. ಆದರೆ ಹೊಸ ತಂತ್ರಜ್ಞಾನದಿಂದಾಗಿ ಗ್ರಾಮೀಣ ಗೃಹ ಕೈಗಾರಿಕೆಗಳು ನಾಶಹೊಂದಿದವು. ಇವುಗಳನ್ನು ನಂಬಿಕೊಂಡಿದ್ದ ಈ ಸಮುದಾಯಗಳು ನಿರುದ್ಯೋಗಿಗಳಾಗಿ ಬೀದಿಗೆ ಬಂದವು. ಭೂರಹಿತ ದಲಿತ ಕೃಷಿಕಾರ್ಮಿಕರು, ಸಾಂಪ್ರದಾಯಿಕ ಕರಕುಶಲ ಕರ್ಮಿಗಳು ದಿನಗೂಲಿ ನೌಕರರು ಸುಧಾರಿತ ತಂತ್ರಜ್ಞಾನ ಮತ್ತು ಹೆಚ್ಚಿನ ಕೈಗಾರೀಕರಣದಿಂದಾಗಿ ತಮ್ಮ ಸಂಪ್ರದಾಯ ಹಾಗೂ ವೃತ್ತಿಪರ ಉದ್ಯೋಗಗಳನ್ನು ಕಳೆದುಕೊಂಡು ನಿರುದ್ಯೋಗಿಗಳಾಗಿದ್ದಾರೆ. ಅಂದರೆ ಸಮರ್ಪಕವಲ್ಲದ ಯೋಜನೆಗಳು ಮತ್ತು ಕೈಗಾರೀಕರಣವು ಈ ವರ್ಗಗಳಲ್ಲಿ ನಿರುದ್ಯೋಗವನ್ನು ಸೃಷ್ಠಿಮಾಡಿದೆ.

ಭಾರತದಲ್ಲಿ ಆರ್ಥಿಕ ಮತ್ತು ರಾಜಕೀಯ ಅಧಿಕಾರವು ಕೆಲವೇ ಜನರಲ್ಲಿ ಕೇಂದ್ರಿಕೃತ ವಾಗಿರುವುದರಿಂದ ಹಾಗೂ ಉದ್ಯೋಗಗಳನ್ನು ಆಯ್ಕೆಮಾಡಿಕೊಳ್ಳುವ ವೈಯಕ್ತಿಕ ಸ್ವಾತಂತ್ರ್ಯ ವಿಲ್ಲದಿರುವುದರಿಂದ ಗ್ರಾಮೀಣ ಪ್ರದೇಶಗಳಲ್ಲಿ ತಮ್ಮ ವೃತ್ತಿಪರ ಉದ್ಯೋಗಗಳನ್ನು ಕಳೆದುಕೊಂಡಿರುವ ಅಲಕ್ಷಿತ ಗುಂಪುಗಳ ಜನರು ಹೆಚ್ಚಿನ ಸಂಖ್ಯೆಯಲ್ಲಿ ನಿರುದ್ಯೋಗಿಗಳಾಗಿದ್ದಾರೆ. ನಮ್ಮ ಆರ್ಥಿಕ

ತಜ್ಞರಿಗೆ, ಸಮಾಜ ಕಾರ್ಯಕರ್ತರಿಗೆ, ಅಧಿಕಾರಿಗಳಿಗೆ ಹಾಗೂ ರಾಜಕೀಯ ವ್ಯಕ್ತಿಗಳಿಗೆ ಈ ವರ್ಗಗಳ ಹೀನಾಯ ಸ್ಥಿತಿ ಚೆನ್ನಾಗಿ ತಿಳಿದಿದೆಯಾದರೂ ಇವರಿಗೆ ಉದ್ಯೋಗ ಸೃಷ್ಠಿಮಾಡುವ ಯೋಜನೆಗಳ ಬಗ್ಗೆ ಗಮನಹರಿಸುತ್ತಿಲ್ಲ.

ಭೂರಹಿತ ಕೂಲಿ ಕಾರ್ಮಿಕರು, ನೇಕಾರರು, ಚಮ್ಮಾರರು ಮತ್ತು ಇನ್ನಿತರ ಕುಶಲಕರ್ಮಿಗಳು ಉದ್ಯೋಗವನ್ನರಿಸಿ ನಗರ ಪ್ರದೇಶಗಳಿಗೆ ವಲಸೆ ಬಂದಿದ್ದಾರೆ. ಗ್ರಾಮೀಣ ಆರ್ಥಿಕ ರಚನೆಯ ವಿಕೇಂದ್ರಿಕರಣವು ಅವನತಿ ಹೊಂದಿದ್ದರಿಂದ ಅಲ್ಲಿನ ಗ್ರಾಮೀಣ ವಾಸಿಗಳು ನಗರ ಪ್ರದೇಶಗಳಿಗೆ ವಲಸೆ ಬಂದಿದ್ದಾರೆ. ಆದರೆ ನಗರ ಪ್ರದೇಶದ ಆರ್ಥಿಕ ರಚನೆಯಲ್ಲಿ ಕಂಡುಬರುವ ಮುಖ್ಯ ಅಂಶವೆಂದರೆ ಗ್ರಾಮಗಳಲ್ಲಿ ಹೀನ ಅಥವಾ ಕೀಳುಮಟ್ಟದ ಉದ್ಯೋಗಗಳೆಂದು ಪರಿಗಣಿಸಲ್ಪಟ್ಟಿದ ಚರ್ಮಕೈಗಾರಿಕೆ, ಕ್ಷೌರಿಕವೃತ್ತಿ, ಹತ್ತಿಬಟ್ಟೆ ನೇಯುವ ವೃತ್ತಿ ಮುಂತಾದ ಉದ್ಯೋಗಗಳಿಗೆ ಹೊಸ ಹೆಸರುಗಳನ್ನು ನೀಡಿ ಆ ಉದ್ಯೋಗಗಳಲ್ಲೂ ಮೇಲು ಸಮುದಾಯದವರೇ ಕಾರ್ಯನಿರ್ವಹಿಸುತ್ತಿದ್ದಾರೆ. ಅಂದರೆ ಗ್ರಾಮೀಣ ಉದ್ಯೋಗಗಳಿಗೆ ಆಧುನಿಕ ತಂತ್ರಜ್ಞಾನದಿಂದ ಹೊಸ ರೂಪಾಂತರ ಮಾಡಿ ಆ ಉದ್ಯೋಗಗಳಲ್ಲಿಯೂ ಏಕಸ್ವಾಮ್ಯವನ್ನು ಸಾಧಿಸುತ್ತಿದ್ದಾರೆ. ಹೀಗೆ ನಗರ ಪ್ರದೇಶದ ಎಲ್ಲಾ ಉದ್ಯೋಗ ಮತ್ತು ಆರ್ಥಿಕ ಅಧಿಕಾರ ಮೇಲು ಸಮುದಾಯದವರಲ್ಲಿ ಕೇಂದ್ರಿಕೃತವಾಗಿದೆ. ಹಾಗೆ ನಗರ ಪ್ರದೇಶಗಳಲ್ಲಿ ಯಾವುದೇ ವ್ಯಕ್ತಿ ಯಾವುದೇ ಉದ್ಯೋಗವನ್ನು ಮಾಡಬಹುದೆಂಬ ವಾತಾವರಣ ನಿರ್ಮಾಣವಾಗುತ್ತಿದೆ. ಅಂದರೆ ವ್ಯಕ್ತಿಗಳು ತಮ್ಮ ಸಾಂಪ್ರದಾಯಿಕ ಉದ್ಯೋಗಗಳನ್ನು ಬಿಟ್ಟು ಯಾವುದೇ ಉದ್ಯೋಗಗಳನ್ನು ಆರಿಸಿಕೊಳ್ಳಬಹುದಾಗಿದೆಯಾದರೂ ಸಮುದಾಯ ವ್ಯವಸ್ಥೆ ಮತ್ತು ಅಸ್ಪೃಶ್ಯತೆ ಬದಲಾಗಿಲ್ಲ. ಅದು ಹುಟ್ಟಿನಿಂದಲೇ ಗುರುತಿಸುವುದೆಂದು ಮಾಡಿರುವುದರ ಹುನ್ನಾರಗಳಿಂದ ಹಿಂದೂ ಸಮಾಜದ ಅವಿಭಾಜ್ಯ ಅಂಗವಾಗಿಯೇ ಉಳಿದಿದೆ.

ಮೇಲು ಸಮುದಾಯವರು ಏಕೆ ದಲಿತರನ್ನು ಶೋಷಣೆಮಾಡುತ್ತಿದ್ದಾರೆಂದರೆ ಅವರಲ್ಲಿ ರಾಜಕೀಯ ಅಧಿಕಾರವಿದೆ. ರಾಜಕೀಯ ಅಧಿಕಾರದಿಂದ ವಂಚಿತರಾದ ಈ ದಲಿತರು ಎಲ್ಲಾ ರೀತಿಯ ಶೋಷಣೆ ದೌರ್ಜನ್ಯಗಳಿಗೀಡಾಗಿದ್ದಾರೆ ಎಂದು ವಿವರಿಸಿರುವ ಡಾ.ಬಾಬಾ ಸಾಹೇಬ್ ಅಂಬೇಡ್ಕರ್‌ರವರು, ರಾಜಕೀಯ ಅಧಿಕಾರವೆಂಬುದು ಮುಚ್ಚಿದ ಎಲ್ಲಾ ಬಾಗಿಲನ್ನು ತೆರೆಯುವ 'ಮಾಸ್ಟರ್ ಕೀ' ಎಂದು ತಿಳಿಸಿದ್ದಾರೆ. ಇದರಿಂದಾಗಿ ದಲಿತರು ಶಿಕ್ಷಣದ ಜೊತೆಗೆ ರಾಜಕೀಯ ಅಧಿಕಾರವನ್ನು ಪಡೆಯಬೇಕೆಂದು ಕರೆ ನೀಡಿದರು. ಹಾಗೆಯೇ ರಾಜಕೀಯ ಪ್ರವೇಶಿಸಲು ಸಂವಿಧಾನದಲ್ಲಿ ರಾಜಕೀಯ ಮೀಸಲಾತಿಯನ್ನು ಕಲ್ಪಿಸಿದರು. ದಲಿತ ರಾಜಕೀಯ ನಾಯಕರು ತಮ್ಮ ರಾಜಕೀಯ ಅಧಿಕಾರದಿಂದ ತಮ್ಮ ಸಮುದಾಯದ ಜನರಿಗೆ ಸಮಾನತೆ, ಸಾಮಾಜಿಕ ನ್ಯಾಯ, ರಕ್ಷಣೆಯನ್ನು ಒದಗಿಸಿ ಎಲ್ಲಾ ರೀತಿಯ ದೌರ್ಜನ್ಯದಿಂದ

ಮುಕ್ತರನ್ನಾಗಿಸುತ್ತಾರೆ ಎಂದು ನಂಬಲಾಗಿತ್ತು. ಆದರೆ ಈ ಸಮುದಾಯಗಳಿಂದ ಆಯ್ಕೆಯಾದ ರಾಜಕೀಯ ಪ್ರತಿನಿಧಿಗಳು ತಮ್ಮ ರಾಜಕೀಯ ಪಕ್ಷಗಳ ನಾಯಕರುಗಳ ಗುಲಾಮರಂತಾಗಿದ್ದಾರೆ. ತಮ್ಮ ಸಮುದಾಯದ ಜನರಿಗೆ ರಕ್ಷಣೆಯೊದಗಿಸುವುದಿರಲಿ, ಅವರ ಮೇಲೆ ದೌರ್ಜನ್ಯಗಳೇನಾದರೂ ನಡೆದರೆ ವಿಧಾನಸಭೆಗಳಲ್ಲಿ, ಲೋಕಸಭೆಯಲ್ಲಿ ಅಥವಾ ಸಾರ್ವಜನಿಕ ಸಭೆಗಳಲ್ಲಿ ಅದನ್ನು ಖಂಡಿಸಲು ಅಸಮರ್ಥರಾಗಿದ್ದಾರೆ. ಅವರಿಗೆ ವೈಯಕ್ತಿಕವಾಗಿ ಸಮಸ್ಯೆಗಳಾದಾಗ ಮಾತ್ರ ತಮ್ಮ ಸಮುದಾಯ ನೆನಪಿಗೆ ಬರುತ್ತದೆ. ನಾನು ದಲಿತನೆಂದು, ಹಿಂದುಳಿದವನೆಂದು ಈ ರೀತಿಯ ಆಪಾದನೆಗಳು ಬರುತ್ತಿವೆ ಎಂದು ಸಮುದಾಯಗಳ ಹತ್ತಿರ ಬರುವುದನ್ನು ಕಾಣಬಹುದು.

ಉದ್ಯೋಗಗಳನ್ನರಸಿ ಗ್ರಾಮೀಣ ಪ್ರದೇಶದಿಂದ ನಗರ ಪ್ರದೇಶಗಳಿಗೆ ವಲಸೆ ಬಂದ ಈ ದಮನಿತ ಗುಂಪುಗಳು ಅಸಂಘಟಿತ ಕ್ಷೇತ್ರದಲ್ಲಿ ದಿನಗೂಲಿ ನೌಕರರಾಗಿ ಕೆಲಸ ನಿರ್ವಹಿಸುತ್ತಿದ್ದು, ಅವರಲ್ಲಿ ಹೆಚ್ಚಿನ ಜನರು ಕೊಳಚೆ ಪ್ರದೇಶಗಳಲ್ಲಿ ವಾಸಮಾಡುತ್ತಿದ್ದಾರೆ. ಕೊಳಚೆ ಪ್ರದೇಶಗಳ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಸಿವಿಲ್ ಇಂಜಿನಿಯರ್ ಮತ್ತು ಗುತ್ತಿಗೆದಾರರು ಹಣ ಮಾಡುತ್ತಿದ್ದಾರೆ. ಪೊಲೀಸಿನವರು ಅಲ್ಲಿ ವಾಸ ಮಾಡುತ್ತಿರುವವರಿಂದ ರೋಲ್‌ಕಾಲ್ ಮೂಲಕ ಲಂಚ ಪಡೆಯುತ್ತಿದ್ದಾರೆ. ಅಲ್ಲಿ ಆಗಾಗ್ಗೆ ನಡೆಯುವ ಗಲಭೆಗಳು, ದಂಗೆಗಳನ್ನು ಹತ್ತಿಕ್ಕಲು ರಾಜಕಾರಣಿಗಳು ಕೊಳಚೆ ಪ್ರದೇಶಗಳಲ್ಲಿ ಸಾರಾಯಿ ಅಂಗಡಿಗಳನ್ನು ತೆರೆಯುತ್ತಿದ್ದಾರೆ. ಹೀಗೆ ಈ ಜನರನ್ನು ರಾಜಕಾರಿಣಿಗಳು ದಾರಿ ತಪ್ಪಿಸಿ ಅವರುಗಳನ್ನು ತಮಗೆ ಬೇಕಾದ ಹಾಗೆ ರೂಪಿಸಿಕೊಳ್ಳುವ ಮೂಲಕ ಅವರ ಅಮಾಯಕತೆಯನ್ನು ಓಟ್‌ಬ್ಯಾಂಕ್‌ನ್ನಾಗಿ ಮಾಡಿಕೊಳ್ಳುತ್ತಿದ್ದಾರೆ. ಈ ಅಲಕ್ಷಿತ ಸಮುದಾಯಗಳ ಸ್ಥಿತಿಗತಿಗಳನ್ನು ತಿಳಿಯಲು ಅವರ ಸಮಸ್ಯೆಗಳನ್ನು ಪರಿಹರಿಸಲು ಹಾಗೂ ಅವರ ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸಲು ಕೇಂದ್ರ ಮತ್ತು ರಾಜ್ಯ ಮಟ್ಟದಲ್ಲಿ ಅನೇಕ ಆಯೋಗಗಳನ್ನು ರಚಿಸಲಾಗಿದೆ. ಇವು ಕಾಲಕಾಲಕ್ಕೆ ಸಮೀಕ್ಷೆ ಮಾಡಿ ಸರ್ಕಾರಕ್ಕೆ ವರದಿ ಸಲ್ಲಿಸುತ್ತಿವೆ. ಈ ವರದಿಗಳು ನೀಡಿರುವ ಸಲಹೆಗಳು ಸಲಹೆಗಳಾಗಿಯೇ ಉಳಿಯುತ್ತಿವೆ. ಅವು ಕಾರ್ಯರೂಪಕ್ಕೆ ಬರದಿರುವುದು ನಮ್ಮ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ.

ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತದಲ್ಲಿ ಜನರ ನಡುವೆ ಇರುವ ಸಾಮಾಜಿಕ, ಆರ್ಥಿಕ ತಾರತಮ್ಯ ಹೋಗಲಾಡಿಸುವುದಕ್ಕಾಗಿ ಹಾಗೂ ಅಲಕ್ಷಿತ ಗುಂಪುಗಳು ಇತರ ಜನರಂತೆ ರಾಷ್ಟ್ರದ ಎಲ್ಲಾ ಕ್ಷೇತ್ರಗಳಲ್ಲೂ ಪ್ರತಿನಿಧಿಸುವಂತಾಗಲಿ ಎಂದು ಮೀಸಲಾತಿ ಸೌಲಭ್ಯವನ್ನು ಸಂವಿಧಾನಾತ್ಮಕವಾಗಿ ಜಾರಿಗೊಳಿಸಲಾಗಿದೆ. ಉದ್ಯೋಗದಲ್ಲಿ ಮೀಸಲಾತಿ ಜಾರಿಮಾಡಲಾಗಿದೆ ಎಂಬುದು ಅಲಕ್ಷಿತ ಗುಂಪುಗಳಿಗೆ ತಿಳಿದಿದೆಯಾದರೂ ಈ ಸೌಲಭ್ಯವು ಕೆಲವು ಜನರಿಗೆ ಮಾತ್ರ ತಲುಪಿದೆ. ಪೂರ್ಣ ಪ್ರಮಾಣದಲ್ಲಿ ಉದ್ಯೋಗಗಳು ಮೀಸಲಾತಿಯಡಿಯಲ್ಲಿ ಭರ್ತಿಯಾಗಿಲ್ಲ. ಕಾರಣ ಮೀಸಲಾತಿ

ನಿಯಮವನ್ನು ಜಾರಿಗೊಳಿಸುತ್ತಿರುವವರು ಮೇಲು ಸಮುದಾಯದವರೇ ಆಗಿದ್ದಾರೆ. ಸರ್ಕಾರದ ಎಲ್ಲಾ ಕ್ಷೇತ್ರಗಳಲ್ಲೂ, ಎಲ್ಲಾ ವಿಭಾಗಗಳಲ್ಲೂ, ಎಲ್ಲಾ ಹಂತಗಳಲ್ಲೂ ಈ ಮೀಸಲಾತಿಯನ್ನು ಸರಿಯಾಗಿ ಜಾರಿಗೊಳಿಸಿಲ್ಲದ ಕಾರಣ ಈ ಸಮುದಾಯದ ಪ್ರತಿನಿಧಿತ್ವವನ್ನು ಪಡೆಯುವುದು ಅಷ್ಟಾಗಿ ಆಗದಿರುವುದಕ್ಕೆ ನಿದರ್ಶನವಾಗಿದೆ.

ಜೊತೆಗೆ ಮೀಸಲಾತಿಯಡಿಯಲ್ಲಿ ಉದ್ಯೋಗಕ್ಕೆ ಸೇರಿದವರು ತಮ್ಮ ಕಾರ್ಯ ನಿರ್ವಹಿಸುವಲ್ಲಿ ಅಸಮರ್ಥರಾಗಿದ್ದಾರೆ ಎಂಬ ಹೇಳಿಕೆಗಳನ್ನು ಆಗಾಗ್ಗೆ ಮೇಲು ಸಮುದಾಯದ ಹುಟ್ಟುಹಾಕುತ್ತಿದ್ದಾರೆ.

ಉದ್ಯೋಗವಲ್ಲದೆ ಶಿಕ್ಷಣ ಸಂಸ್ಥೆಗಳಲ್ಲೂ ಈ ದಮನಿತ ಗುಂಪುಗಳಿಗೆ ಮೀಸಲಾತಿ ಸೌಲಭ್ಯವನ್ನು ನೀಡಲಾಗಿದೆ. ಆದರೆ ಕೆಲವು ವಿಶೇಷ ವೃತ್ತಿಪರ ಶಿಕ್ಷಣ ಸಂಸ್ಥೆಗಳಲ್ಲಿ ಮತ್ತು ಕೆಲವು ಪ್ರತಿಷ್ಠಿತ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಈ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವನ್ನು ನಿರಾಕರಿಸಲಾಗಿದೆ. ಶ್ರೇಷ್ಠತೆಯ ಆಧಾರದ ಮೇಲೆ ಈ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶಾವಕಾಶಗಳನ್ನು ಪಡೆದರೆ ಆ ವಿದ್ಯಾರ್ಥಿಗಳಿಗೆ ಮಾನಸಿಕ ಹಿಂಸೆ ನೀಡಿ ಆ ಶಿಕ್ಷಣ ಸಂಸ್ಥೆಗಳಿಂದ ಹೊರ ಬರುವಂತೆ ಮಾಡುವ ಹುನ್ನಾರಗಳನ್ನು ಆ ವ್ಯವಸ್ಥೆ ನೋಡಿಕೊಳ್ಳುತ್ತಿದೆ.

ಹಿಂದೂ ಧರ್ಮದಲ್ಲಿನ ಸಮುದಾಯ ವ್ಯವಸ್ಥೆ, ಅಸ್ಪೃಶ್ಯತೆ, ದೌರ್ಜನ್ಯ, ದಬ್ಬಾಳಿಕೆಗಳಿಂದ ಮುಕ್ತಿಹೊಂದಲು ಬೇರೆ ಧರ್ಮವನ್ನವಲಂಬಿಸಿದ ಈ ಅಲಕ್ಷಿತ ಸಮುದಾಯಗಳ ಕೆಲವು ಜನರ ಆರ್ಥಿಕ ಮತ್ತು ಸಾಮಾಜಿಕ ಅಂತಸ್ತಿನಲ್ಲಿ ಗುರುತರವಾದ ಬದಲಾವಣೆಗಳೇನಾಗಿಲ್ಲ. ಮತಾಂತರ ಹೊಂದಿದ ಧರ್ಮದವರಿಂದ ಪ್ರತ್ಯೇಕವಾಗಿಯೇ ಇದ್ದಾರೆ. ಅಂದರೆ ಮೂಲ ಧರ್ಮದವರೆಂದು ಹೇಳಿಕೊಳ್ಳುವವರ ಜೊತೆ ಮತಾಂತರ ಹೊಂದಿದ್ದ ಅಲಕ್ಷಿತ ಜನರು ಯಾವುದೇ ಸಾಮಾಜಿಕ ಸಂಬಂಧವನ್ನು ಹೊಂದದೇ ಪ್ರತ್ಯೇಕ ಸಮೂಹವಾಗಿದ್ದಾರೆ.

ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನಗಳಿಂದ ಹಸಿವು, ಬಡತನ, ಅನಕ್ಷರತೆ, ಅಜ್ಞಾನ, ಮೂಢನಂಬಿಕೆ, ಸೌಲಭ್ಯ ವಂಚಿತತೆ, ನಿರುದ್ಯೋಗ ಮುಂತಾದ ಪ್ರಮುಖ ಸಮಸ್ಯೆಗಳನ್ನು ಹೋಗಲಾಡಿಸಬಹುದು ಎಂದು ಯೋಜನಕಾರರು ತಿಳಿದಿದ್ದಾರೆ. ಆದರೆ ಇಂದಿಗೂ ಅಲಕ್ಷಿತ ಸಮುದಾಯಗಳ ಹಲವು ಜನರು ಈ ಸಮಸ್ಯೆಗಳಿಂದ ಮುಕ್ತರಾಗಿಲ್ಲ. ಅವರಲ್ಲಿ ಅನೇಕರಿಗೆ ತಮ್ಮ ಮೂಲಭೂತ ಹಕ್ಕುಗಳ ಬಗ್ಗೆ ಅರಿವೇ ಇಲ್ಲ. ಸರ್ಕಾರ ಕೈಗೊಂಡ ಹಲವು ಕಾರ್ಯಕ್ರಮಗಳಿಂದ ಈ ಸಮುದಾಯದ ಜನರು ಅಭಿವೃದ್ಧಿ ಹೊಂದಿದ್ದಾರೆ ಎಂದು ಸರ್ಕಾರ ತಾನು ಜಾರಿಗೊಳಿಸಿದ ಕಾರ್ಯಕ್ರಮಗಳ ಅಂಕಿ–ಅಂಶಗಳನ್ನು ಹಾಗೂ ಫಲಾನುಭವಿಗಳ ಸಂಖ್ಯೆಗಳನ್ನು ಪ್ರತಿ ವರ್ಷ ಪ್ರಕಟಿಸುತ್ತಿದೆ. ಆದರೆ ಈ ಅಂಕಿ–ಅಂಶಗಳಿಗೂ ಅವರ ಅಭಿವೃದ್ಧಿಯ ಪ್ರಮಾಣಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಒಬ್ಬ

ವ್ಯಕ್ತಿಯ ಅಭಿವೃದ್ಧಿಗೆ ಸರ್ಕಾರ ಒಂದು ರೂಪಾಯಿ ಖರ್ಚುಮಾಡಿದರೆ, ಅದು ಅಧಿಕಾರಿಗಳ ಮೂಲಕ ಫಲಾನುಭವಿಗೆ ತಲುಪುವುದು ಕೇವಲ ೧೫ ಪೈಸೆ ಎಂದು ಮಾಜಿ ಪ್ರಧಾನಿ ರಾಜೀವ್‌ಗಾಂಧಿ ಹೇಳಿರುವ ಮಾತು ನೂರಕ್ಕೆ ನೂರರಷ್ಟು ಸತ್ಯ.

'ಸಮುದಾಯ ವ್ಯವಸ್ಥೆಯನ್ನು ಬಾಯಿಮಾತಿನ ಹೊರತಾಗಿ ತಮ್ಮ ಮಿಕ್ಕೆಲ್ಲ ಚಟುವಟಿಕೆಗಳ ನೆಲೆಯಲ್ಲಿ ಒಪ್ಪಿಕೊಂಡಿರುವ(ಇದು ಎಲ್ಲಾ ಸಮುದಾಯಗಳಿಗೂ ಅನ್ವಯಿಸುತ್ತದೆ) ಬಹುದೊಡ್ಡ ಜನ ವರ್ಗವನ್ನು ಒಳಗೊಂಡಿರುವ ನಮ್ಮ ಸಮಾಜದಲ್ಲಿ ಅಸಮಾನತೆ ಅಂತರ್ಗತವಾಗಿದೆ. ಮೀಸಲಾತಿ ಈ ಅಸಮಾನತೆಯನ್ನು ತೊಡೆದು ಹಾಕಿ ಸಮಾಜವನ್ನು ಸಮುದಾಯ ವ್ಯವಸ್ಥೆಯ ಬಂಧನದಿಂದ ಬಿಡುಗಡೆಗೊಳಿಸುವ ಆಶಯ ಹೊಂದಿದೆ. ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಪರಿಶಿಷ್ಟ ಸಮುದಾಯ, ವರ್ಗ ಹಾಗೂ ಹಿಂದುಳಿದ ವರ್ಗಗಳಿಗೆ ಶಿಕ್ಷಣ ಕ್ಷೇತ್ರ ಮತ್ತು ಸರ್ಕಾರಿ ಸೇವೆಯ ಹುದ್ದೆಗಳಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಪ್ರಾತಿನಿಧ್ಯ ನೀಡುವಂತೆ ಮೀಸಲಾತಿ ತತ್ವವನ್ನು ಅಳವಡಿಸಿ ಸಾಮಾಜಿಕ ನ್ಯಾಯವನ್ನು ನೀಡುವುದು ಸರ್ಕಾರದ ಜವಾಬ್ದಾರಿ ಎಂಬ ವಿಧಿಯನ್ನು ಸೇರ್ಪಡೆ ಮಾಡಿದರು'(ಮಂಜುನಾಥ ಬೇವಿನಕಟ್ಟಿ, ೨೦೦೯, ೨೬೬).

'ಪುರೋಹಿತಶಾಹಿ ಮಾಡಿದ ಕುಟಿಲತೆಯು ಇಂದಿಗೂ ಸಮುದಾಯ ಪದ್ಧತಿ ಇರುವಂತೆ ಮಾಡಿದೆ. ಮಿಕ್ಕೆಲ್ಲ ಸಮುದಾಯಗಳಲ್ಲಿ ಒಗ್ಗಟ್ಟಿಲ್ಲದಂತೆ ನೋಡಿಕೊಂಡು ತನ್ನ ಪ್ರತಿಷ್ಠೆಯನ್ನು ಮುಂದುವರೆಸಿಕೊಂಡು ಹೋಗುವ ಪುರೋಹಿತಶಾಹಿಯ ಕುತಂತ್ರವೇ ಸಮುದಾಯಪದ್ಧತಿ. ಶೂದ್ರರಲ್ಲಿ ಹರಿಜನರನ್ನು ಮತ್ತು ಇತರ ಶೂದ್ರರನ್ನು ಒಡೆಯಲು ಹಾಗೂ ಡಾ.ಅಂಬೇಡ್ಕರ್‌ರ ಬೆಂಬಲ ಸಹಾನುಭೂತಿ ಪಡೆಯಲು ಮಾಡಿದ ಮೊದಲ ಕುತಂತ್ರ ಅವರಿಗೆ ಮಾತ್ರ ಮೀಸಲು ಸ್ಥಾನ ಕೊಟ್ಟಿದ್ದು. ಅನಂತರ ಈ ಗೊಂದಲದಿಂದ ತನ್ನ ವರ್ಗ ತಪ್ಪಿಸಿಕೊಂಡು ಹಾಯಾಗಿರಲು ಸಾಮರ್ಥ್ಯ ಕ್ಷೇತ್ರದ ಜಾಲವನ್ನು ಸೃಷ್ಟಿಸಿದ್ದು, ಆ ವರ್ಗದ ಎರಡನೇ ಕುತಂತ್ರ. ಇದಕ್ಕಿಂತ ಹೆಚ್ಚಿನ ಪರಿಣಾಮಕಾರಿಯಾದ ಕುತಂತ್ರವನ್ನು ಕೂಡ ಶ್ರೇಷ್ಠ ನ್ಯಾಯಾಲಯ ಮಾಡಿದೆ. ಇದೇನೆಂದರೆ ನಿಜವಾಗಿಯೂ ಹಿಂದುಳಿದ ವರ್ಗಗಳನ್ನು ಮುಂದುವರೆದ ವರ್ಗವೆಂದು ಪರಿಗಣಿಸುವಂತೆ ಅದು ಒತ್ತಾಯಿಸಿರುವುದು'(ಮಂಜುನಾಥ ಬೇವಿನಕಟ್ಟಿ, ೨೦೦೯, ೨೬೭).

ಖಾಸಗಿ ಉದ್ಯಮ(Private Sector)ಗಳೂ ಉತ್ತಮ ಸಮುದಾಯದವರ ಪೂರ್ಣ ಸ್ವಾಮ್ಯವಾಗಿರುವುದರ ಬಗ್ಗೆ ಕೂಡ ಹಿಂದುಳಿದ ವರ್ಗಗಳು ಎಚ್ಚರಗೊಳ್ಳಬೇಕು. ಕೇಂದ್ರ ಸೇವಾಕ್ಷೇತ್ರ ಹಾಗೂ ಖಾಸಗಿ ಕ್ಷೇತ್ರಗಳಲ್ಲೂ ಜನಸಂಖ್ಯಾ ಪ್ರಮಾಣದ ಮೀಸಲು ಸ್ಥಾನಕ್ಕೆ ಹೋರಾಡಬೇಕು.

ಮೇಲೆ ಹೇಳಿದ ವಿಷಯಗಳೆಲ್ಲ ಮೇಲ್ಮೈಯಲ್ಲಿ ಕಾಣುವ ಸತ್ಯಗಳು. ಇವುಗಳಿಗೆಲ್ಲ ಮೂಲಕಾರಣಗಳಾದ ಆರ್ಥಿಕ-ರಾಜಕೀಯ ವ್ಯವಸ್ಥೆ, ಸಮುದಾಯ ಪದ್ಧತಿಯನ್ನು ಬಿಗಿಯಾಗಿ

ಹಿಡಿದಿಟ್ಟುಕೊಂಡು ಅವಕಾಶಗಳನ್ನು ಸೀಮಿತಗೊಳಿಸುವ ಶಕ್ತಿಯಾಗಿದೆ. ವಿವರಿಸಿದಲ್ಲಿ ಇವು ಬಂಡವಾಳಶಾಹಿ, ಆಸ್ತಿ ಸಂಬಂಧಗಳು, ಜನರಿಗೆ ತಿಳಿಯದ ಭಾಷೆಯಲ್ಲಿ ರಾಜ್ಯ ವ್ಯವಹಾರ, ನಿರುದ್ಯೋಗ ಸೃಷ್ಟಿಸುವ ಬೃಹತ್ ಕೈಗಾರಿಕಾ ಯಂತ್ರಗಳು, ಬಹುಸಂಖ್ಯಾತರು ಮೇಲೇಳದಂತೆ ಮಾಡುವ ಕೃಷಿಕ್ಷೇತ್ರದ ನಿರ್ಲಕ್ಷ್ಯ, ಬಹುಸಂಖ್ಯಾತ ಕೃಷಿಕರು ಯಥಾಸ್ಥಿತಿಯಲ್ಲಿರುವಂತೆ ಮಾಡುವ ಬೆಲೆ ನೀತಿ, ಬಹುಸಂಖ್ಯಾತರನ್ನು ಕೇವಲ ಪ್ರೇಕ್ಷಕರನ್ನಾಗಿಸುವ ರಾಜಕೀಯ ಕೇಂದ್ರೀಕರಣ, ದೈಹಿಕಶ್ರಮ ಹಾಗೂ ಮಾನಸಿಕ ಶ್ರಮಕ್ಕಿರುವ ಮೌಲ್ಯದ ವ್ಯತ್ಯಾಸ ಕಾರಣಗಳು ಸಮುದಾಯಗಳು ಜಡವಾಗಿಯೇ ಇರುವಂತೆ ಹಾಗೂ ದೇಶ ಮುಂದೆ ಹೋಗದಂತೆ ಹಿಡಿದಿಟ್ಟವೆ. ಸಾಮಾಜಿಕ ಕ್ರಾಂತಿಗಾಗಿ ಹೋರಾಡುವವರು ಅದಕ್ಕೆ ಪೂರಕವಾದ ಆರ್ಥಿಕ-ರಾಜಕೀಯ ಕ್ರಾಂತಿಗೂ ಶ್ರಮಿಸದಿದ್ದಲ್ಲಿ ಐಕ್ಯತೆ ಸಾಧ್ಯವಿಲ್ಲ.

ಭಾರತದಲ್ಲಿ ವಸಾಹತುಶಾಹಿ ಸಂದರ್ಭದಿಂದಲೂ ಈ ಅಲಕ್ಷಿತ ಸಮುದಾಯಗಳ ಉದ್ಯೋಗದ ಮೇಲೆ ಗಧಾಪ್ರಹಾರ ನಡೆಯುತ್ತಲೇ ಇದೆ. ಇದರಿಂದಾಗಿ ತಳಸಮುದಾಯಗಳು ಇಂದಿಗೂ ತಮ್ಮ ದಿನದ ಹೊಟ್ಟೆಪಾಡಿಗಾಗಿ ಹೋರಾಟ ನಡೆಸುತ್ತಲೇ ಇದ್ದಾರೆ. ಹೀಗಿರುವಾಗ ಐಕ್ಯತೆಯ ಬಗೆಗೆ ಯೋಚಿಸುವುದು ಸಹ ಕಷ್ಟಕರವಾಗಿದೆ. ೧೮ನೆಯ ಶತಮಾನದಿಂದ ಪ್ರಾರಂಭವಾಗಿದ್ದ ವಸಾಹತುಶಾಹಿ ಆಕ್ರಮಣವು ನಂತರ ಇಡೀ ದೇಶವನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಂಡಿತ್ತು. ೧೯ನೆಯ ಶತಮಾನದ ಕೊನೆಯ ಹೊತ್ತಿಗೆ ಶ್ರೀಮಂತ ಬಂಡವಾಳಶಾಹಿ ದೇಶಗಳಲ್ಲಿನ ಬಂಡವಾಳವು ಇನ್ನಿತರ ದೇಶದೊಳಗೆ ಪ್ರವೇಶಿಸಿ ನಿಯಂತ್ರಣ ಮಾಡಲು ಪ್ರಾರಂಭಿಸಿತ್ತು. ಇದು ವಿಶ್ವದಾದ್ಯಂತ ಮಾರುಕಟ್ಟೆಗಾಗಿ ಎರಡು ಪ್ರಪಂಚ ಯುದ್ಧಗಳಿಗೂ ಕಾರಣವಾಯಿತು. ಈ ಸ್ವರೂಪದ ಬಂಡವಾಳಶಾಹಿಯನ್ನೇ ಸಾಮ್ರಾಜ್ಯಶಾಹಿ ಎನ್ನಲಾಗುತ್ತದೆ. ಈ ಸಾಮ್ರಾಜ್ಯಶಾಹಿಯ ಮೂರನೆಯ ಹಂತವೇ ೯೦ರ ದಶಕದಲ್ಲಿ ಪ್ರಾರಂಭವಾದ ಆಕ್ರಮಣದ ಜಾಗತೀಕರಣವಾಗಿದೆ.

'ಕಳೆದ ಎರಡು ದಶಕಗಳಲ್ಲಿ 'ಅಸ್ಮಿತೆ'ಯ ರಾಜಕೀಯ ಅತ್ಯಂತ ಪ್ರಚಲಿತಗೊಂಡಿರುವ ವಿದ್ಯಮಾನವಾಗಿದೆ. ಹಾಗೆ ನೋಡಿದರೆ ಈ 'ಅಸ್ಮಿತೆ'ಯ ರಾಜಕಾರಣದ ಆರಂಭವನ್ನು ಸ್ವಾತಂತ್ರ್ಯಪೂರ್ವದಲ್ಲೇ ಗುರುತಿಸಬಹುದು. ಡಾ.ಬಿ.ಆರ್.ಅಂಬೇಡ್ಕರ್ ಅವರು ಆರಂಭಿಸಿದ ದಲಿತ ಸಮಾನತೆಯ ಚಳುವಳಿಯಲ್ಲಿ ಇದರ ಮೊದಲ ಮೊಳಕೆಗಳನ್ನು ನಾವು ಕಾಣಬಹುದು. ಆವರೆಗೆ ಭಾರತೀಯ ಸಮಾಜದಲ್ಲಿ ಮುಖ್ಯ ಪ್ರವಾಹದಿಂದ ಹೊರಗುಳಿಸಲ್ಪಟ್ಟಿದ್ದ ಸಮುದಾಯಗಳನ್ನು ಸಂಘಟಿಸಿ, ಅವುಗಳಿಗೆ ಸಿಗಬೇಕಾದ ಸಾಮಾಜಿಕ, ರಾಜಕೀಯ ಮಾನ್ಯತೆಗಾಗಿ ಆಗ್ರ ಆಗ್ರಹಿಸಲಾಯಿತು'(ಮಂಜುನಾಥ ಬೇವಿನಕಟ್ಟಿ, ೨೦೦೯, ೨೬೯).

ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ರಾಜಕೀಯ ಸ್ವಾತಂತ್ರ್ಯ ಮೊದಲೋ ಅಥವಾ ಸಾಮಾಜಿಕ ಸಮಾನತೆ ಮೊದಲೋ ಎಂಬ ವಾದ ವಿವಾದಗಳೂ ಕೂಡ ಆ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿದ್ದವು. ಅಂತಿಮವಾಗಿ ಸಾಮಾಜಿಕ ಸಮಾನತೆಯನ್ನು ಸಾಧಿಸುವುದಕ್ಕಾಗಿ ರಾಜಕೀಯ ಸ್ವಾತಂತ್ರ್ಯವನ್ನು ಬಳಸಲಾಗುವುದು ಎಂಬ ಭರವಸೆಯೊಂದಿಗೆ ಭಾರತದ ಸ್ವಾತಂತ್ರ್ಯ ಚಳವಳಿ ಒಂದು ಹಂತವನ್ನು ತಲುಪಿತು. ಸಂವಿಧಾನದ ಕರಡು ರಚನೆಯ ಹೊಣೆಗಾರಿಕೆಯನ್ನು ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ವಹಿಸಿಕೊಟ್ಟದ್ದು ಈ ಅಂಶಗಳ ಈಡೇರಿಕೆಗಾಗಿ ಎಂಬುದನ್ನು ನಾವು ಊಹಿಸಿಕೊಳ್ಳಬಹುದು. ಅದಕ್ಕೆ ಪುರಾವೆಯೆಂಬಂತೆ ಭಾರತೀಯ ಸಮಾಜದಲ್ಲಿ ಅನುಚೂನವಾಗಿ ಜಾರಿಯಲ್ಲಿದ್ದ ಅಸ್ಪೃಶ್ಯತೆ ಸಂಬಂಧಿತ ಆಚರಣೆಗಳನ್ನು ಕಾನೂನು ಪ್ರಕಾರ ಅಮಾನ್ಯಗೊಳಿಸಲಾಯಿತು. ಅಸ್ಪೃಶ್ಯತೆ ಆಚರಣೆ ಹಾಗೂ ಅದಕ್ಕೆ ಸಂಬಂಧಪಟ್ಟ ನಡವಳಿಕೆಯನ್ನು ಶಿಕ್ಷಾರ್ಯ ಅಪರಾಧಗಳೆಂದು ಘೋಷಿಸಲಾಯಿತು. ಜನತೆಗೆ ಸಾಮಾಜಿಕವಾಗಿ ಅಸಮಾನತೆಯನ್ನು ಅನುಭವಿಸಿದ್ದ ಅಸ್ಪೃಶ್ಯ ಸಮುದಾಯ, ವರ್ಗ ಹಾಗೂ ಹಿಂದುಳಿದ ವರ್ಗಗಳ ಅಭ್ಯುದಯಕ್ಕಾಗಿ ಹಲವಾರು ಅವಕಾಶಗಳನ್ನು ಮೀಸಲಾತಿಯ ಮುಖಾಂತರ ಒದಗಿಸಲಾಯಿತು.

'ಅಸ್ಮಿತೆ' ನಿರ್ಮಾಣ ಹಾಗೂ ಅದರ ಮಹತ್ವದ ಪ್ರತಿಪಾದನೆಗಳು ಒಂದು ಹಂತದಲ್ಲಿ ಆಯಾ ಸಮುದಾಯಗಳು ಮೈಗೂಡಿಸಿಕೊಳ್ಳುತ್ತಿರುವ ಸಾಮಾಜಿಕ ಚೈತನ್ಯದ ಅಂಗವಾಗಿದ್ದರೆ, ಮತ್ತೊಂದು ಹಂತದಲ್ಲಿ ಅವು ನಿಜಕ್ಕೂ ಪಡೆಯಬಯಸುತ್ತಿರುವ ಸಾಮಾಜಿಕ ಪಾಲುದಾರಿಕೆಯ ಹಂಬಲಕ್ಕೆ ನಿದರ್ಶನವಾಗಿರುತ್ತವೆ. ಅದಕ್ಕೆ ಪೂರಕವಾಗಿ 'ಅಸ್ಮಿತೆ' ನಿರ್ಮಾಣದ ವಿವರಗಳು ದ್ವಿಮುಖ ಚಲನೆಯನ್ನು ಒಳಗೊಂಡಿರುತ್ತವೆ. ತನ್ನ ಸ್ವಾಭಿಮಾನವನ್ನು ಪ್ರಕಟಗೊಳಿಸಿಕೊಳ್ಳುವುದು ಒಂದು ಮುಖವಾದರೆ, ಸಮಾನತೆಗಾಗಿ ಆಗ್ರಹಿಸುವುದು ಇನ್ನೊಂದು ಮುಖ.

ಅಡಿ ಟಿಪ್ಪಣಿಗಳು

೧. ಉಮಾಪತಿ ಬಿ.ಇ., ೧೯೭೯, 'ಪರಿಶಿಷ್ಟ ಬುಡಕಟ್ಟುಗಳು, ಜಾತಿಗಳು'(ಇದರಲ್ಲಿ ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ(ಸಂ:ಡಾ.ಹಾ.ಮಾ.ನಾಯಕ) ಮೈಸೂರು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.

೨. ಭೈರಪ್ಪ ಕೆ., ೧೯೯೪, ಪಾಶ್ಚಿಮಾತ್ಯ ಹಾಗೂ ಭಾರತೀಯ ಚಿಂತನೆ, ಬೆಂಗಳೂರು, ಎಸ್.ಬಿ.ಎಸ್.ಡಿಸ್ಟ್ರಿಬ್ಯೂಟರ್ಸ್.

೩. ಕಿಕ್ಕೇರಿ ಹೊಯ್ಸಳಶರ್ಮ, ೧೯೮೭, ಸರಳಭಾರತ ಸಂವಿಧಾನ, ಬೆಂಗಳೂರು, ಶಾಸನವಾಣಿ ಪ್ರಕಾಶನ.

೪. ಗುರುಲಿಂಗಯ್ಯ ಎಂ., ೨೦೦೮, ಅಂಚಿನೀಕರಣ ಮತ್ತು ಅಂಚೀಕೃತ ಗುಂಪುಗಳು, ಮಂಗಳೂರು, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ.

೫. ಜವರಯ್ಯ ಮ.ನ., ವಚನವಾಹಿನಿ-೧, ಗದಗ ವೀರಶೈವ ಅಧ್ಯಯನ ಸಂಸ್ಥೆ.

೬. ನಾಗೇಗೌಡ ಎಚ್.ಎಲ್., ೧೯೭೯, ವೆರಿಯರ್ ಎಲ್ವಿನ್‌ರ ಗಿರಿಜನ ಪ್ರಪಂಚ, ಬೆಂಗಳೂರು, ಸಾಹಿತ್ಯ ಸದನ.

೭. ನಾಯಕ ಹಾ.ಮಾ.(ಸಂ), ೧೯೭೩, ಕನ್ನಡ ವಿಶ್ವಕೋಶ, ಸಂಪುಟ.೬, ಮೈಸೂರು. ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ.

೮. ನಿರಂಜನ(ಸಂ), ೧೯೭೦, ಜ್ಞಾನಗಂಗೋತ್ರಿ ಮನುಕುಲದ ಕಥೆ, ಬೆಂಗಳೂರು, ಕರ್ಣಾಟಕ ಸಹಕಾರಿ ಪ್ರಕಾಶನ ಮಂದಿರ.

೯. ಬಸವರಾಜು ಎಲ್., ಅಲ್ಲಮನ ವಚನಗಳು, ಮೈಸೂರು ಗೀತಾ ಬುಕ್ ಹೌಸ್.

೧೦. ಮುಗಳಿ ರಂ.ಶ್ರೀ, ಕನ್ನಡ ಸಾಹಿತ್ಯ ಚರಿತ್ರೆ

೧೧. ಮೇತ್ರಿ ಕೆ.ಎಂ., ೨೦೦೨, ಬುಡಕಟ್ಟು ಕುಲಕಸುಬುಗಳು, ವಿದ್ಯಾರಣ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೨. ಮಂಜುನಾಥ ಬೇವಿನಕಟ್ಟಿ, ೨೦೦೯, ವಾಲ್ಮೀಕಿ ಸಮುದಾಯ, ವಿದ್ಯಾರಣ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೩. ಮಂಜುನಾಥ ಬೇವಿನಕಟ್ಟಿ, ೨೦೦೯, ಸಾಂಸ್ಕೃತಿಕ ಅನನ್ಯತೆ ಮತ್ತು ಹಲಗಲಿ ಬಂಡಾಯ, ವಿದ್ಯಾರಣ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೪. ಮಂಜುನಾಥ ಬೇವಿನಕಟ್ಟಿ, ೨೦೧೬, ತಳಾದಿ, ಬೆಂಗಳೂರು, ಅರುಣ್ ಪ್ರಕಾಶನ.

೧೫. ಮಂಜುನಾಥ ಬೇವಿನಕಟ್ಟಿ, ೨೦೧೬, ಜನ ಜಾನಪದ, ಬೆಂಗಳೂರು, ಅರುಣ್ ಪ್ರಕಾಶನ.

೧೬. ರಾಮಚಂದ್ರರಾವ್ ದಾಸಸಾಹಿತ್ಯ ಮತ್ತು ಸಂಸ್ಕೃತಿ, ಬೆಂಗಳೂರು, ಬೆಂಗಳೂರು ವಿಶ್ವವಿದ್ಯಾಲಯ.

೧೭. ಲಕ್ಷ್ಮಣ್ ತೆಲಗಾವಿ, ೧೯೯೯, ಹಿಂದುಳಿದ ವರ್ಗಗಳು ಮತ್ತು ದಲಿತ ಚಳುವಳಿಗಳು, ವಿದ್ಯಾರಣ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೮. ವೆಂಕಟೇಶಮೂರ್ತಿ ಎಚ್.ಎಸ್., ಕೀರ್ತನ ಸಾಹಿತ್ಯ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

೧೯. ಸೂರ್ಯನಾಥ್.ಯು.ಕಾಮತ್(ಪ್ರ.ಸಂ), ೧೯೮೪, ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಬೆಂಗಳೂರು, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ.

20. Amartya Sen, 2004, Social Exclusion: Concept Application Security. New Delhi, Critical Quest.

21. Ambedkar B.R., 1947, Who are the sudras, how they come birth corner, in Hindu-Argons Society. Bombay. Thacker and co.

22. Basu Durga Das, 1999, Introduction to the Constitution of India, Nagpur, Washwa and company.

23. Debal K Singh Roy, 2001, Social-Development and Empowerment of marginalized Groyos, New Delhi, Sage Publishing House.

24. Engineer Arghar Ali, 1991, Mandal commission.

25. Koravakin F., 1985, History of Ancient worls, Moscow, Progress Publishers.

26. Mahendra Singh, 2003, Dalits in India, New Delhi, Reference Press.

27. Misra P.K., Rajalakshmi C.R., verghes 1, 1971, Nomads in the Mysore City, Calcutta. Anthropologycal Survey of India.

28. Parvathamma C., 1984, Now Scheduled Castes, New Delhi, Ashis Publications.

29. Giridhar Gomango, 1992, Constitutional Provisions for the scheduled castes and scheduled Tribes. Bombay. Himalaya.

30. Paravatamma C., 1999, Reservation, A Pie in sky Hunsur Deed.

31. Ram Nandu, 1988, The Mobile Scheduled caste-Rise of a New Middle class. Delhi Hindustan publishing Corporation.

32. Singh K.S., 1993, The Scheduled caste(People of India Series). New Delhi. A Nandi Publications.

33. Sukant K. Choudhary, 2004, Tribal Identuty, New Delhi Rawat publications.

34. Thurston E., 1906, Ethnographic Notes on southern India. Madras. Government press.

ಅಧ್ಯಾಯ: ಮೂರು

ಮತಗಳು: ಸಾಂಸ್ಕೃತಿಕ ಪರಂಪರೆ

೧. ಮತಗಳ ಪ್ರಾಚೀನತೆ

೨. ಮತಗಳ ಸ್ವರೂಪ

೩. ಮತಗಳ ಕರ್ತವ್ಯ

ಅಧ್ಯಾಯ: ಮೂರು

ಮಠಗಳು: ಸಾಂಸ್ಕೃತಿಕ ಪರಂಪರೆ

ಪ್ರಪಂಚದ ಬೇರಾವ ನಾಗರಿಕತೆ ಎಂದೂ ಸಾಧಿಸಿಲ್ಲವೆಂದು ಸಂಪ್ರದಾಯ ಶರಣರು ಇನ್ನೂ ವಾದಿಸುವ, ಹಿಂದೂ ಸೃಜನಶೀಲತೆಯ ಒಂದು ಭವ್ಯ ಕಲ್ಪನಾ ವಿಲಾಸದ, ತನ್ನ ಸಂತರು ಮತ್ತು ದೈವಾಂಶ ಸಂಭೂತರಿಂದ ಆರ್ಜಿಸಿದ ಶ್ರೇಷ್ಠತಮವಾದುದನ್ನು ಸಂಪೂರ್ಣ ಪರಿಶುದ್ಧತೆಯಲ್ಲಿ ಸಂರಕ್ಷಿಸಿರುವ ಸ್ಥಳವೆಂದು ಹೇಳುವ ಹಿಂದೂ ಆಧ್ಯಾತ್ಮದ ಇತ್ತೀಚಿನ ಅತ್ಯಂತ ಉದಾತ್ತ ಬೆಳವಣಿಗೆಯಾದ ಹಿಂದೂ ನಾಗರಿಕತೆಯ ಸಂಸ್ಥೆ ಎಂದರೆ ಆಶ್ರಮ–ಸನ್ಯಾಸಿಗಳ ಸಂಸ್ಥೆ. ಎಲ್ಲಾ ಪ್ರಾಪಂಚಿಕ ಆಸೆಗಳನ್ನೂ ತ್ಯಜಿಸಿ ದೈವ ಸಾಕ್ಷಾತ್ಕಾರಕ್ಕಾಗಿ ತಮ್ಮನ್ನು ಸಮರ್ಪಿಸಿಕೊಂಡ ಸನ್ಯಾಸಿಗಳ ತಾಣ ಮಠ. ಮಠ ಎಂಬ ಪದಕ್ಕೆ ಇರುವ ಮೂಲ ಅರ್ಥ ಸನ್ಯಾಸಿಗಳು ವಾಸಿಸುವ ಕುಟಿರ. ಇದು ತಪಸ್ಸಿನ ಜ್ಞಾನಾನ್ವೇಷಣೆಯ ಧಾರ್ಮಿಕ ಕೇಂದ್ರ. ಕ್ರಮೇಣ ಆಶ್ರಮ, ಗುರುಮನೆ, ಗುರುಕುಲಗಳಾಗಿ ಕಾಲ ಉರುಳಿದಂತೆ ಇವು ವಿದ್ಯಾಪ್ರಸಾರ. ಜ್ಞಾನಪ್ರಸಾರ, ಮತಪ್ರಸಾರ ಕೇಂದ್ರಗಳಾಗಿ ಬೆಳೆದಿವೆ.

ಮಠಗಳ ಅರ್ಥ

'ಮಠ' ಎಂಬ ಪದವನ್ನು ಮೂಲತಃ ಸಂಸ್ಕೃತದಿಂದ ಕನ್ನಡಕ್ಕೆ ತೆಗೆದುಕೊಳ್ಳಲಾಗಿದೆ. ಮಠ–ಮಠತಿ ಎಂದರೆ 'ವಾಸಿಸು' ಎಂದು ಅರ್ಥ. ಮಠವೆಂಬ ಪದಕ್ಕೆ ಮೂಲ ಅರ್ಥವು 'ವಾಸಸ್ಥಾನ' ಎಂದಿದೆ. ನಂತರ ಅದು ವಿದ್ಯಾರ್ಥಿಗಳ ಇಲ್ಲವೆ ಗುರುಗಳ ವಾಸಸ್ಥಾನ ಎಂದೇ ಬಳಕೆಯಾದಂತಿದೆ. ಆದುದರಿಂದಲೇ ಈ ಪದಕ್ಕೆ ಈ ಅರ್ಥದ ಮೇಲಿಂದ 'ಶಾಲೆ' 'ಕಾಲೇಜು' 'ವಿದ್ಯಾಕೇಂದ್ರ', 'ದೇವಾಲಯ' ಎಂಬ ಅರ್ಥಗಳೂ ಬಂದಿವೆ. ಅಲ್ಲದೆ, 'ಪಾವಿತ್ರ್ಯವನ್ನು ಕಾಪಾಡಿಕೊಂಡು ಬರುವ ಸ್ಥಳ' ಎಂದು ಅರ್ಥವನ್ನು ಹೇಳಬಹುದಾಗಿದೆ. "ವಿಶ್ವವಿದ್ಯಾಲಯವನ್ನು Temple of learning ಎಂದು ಕರೆದಿರುವುದು ಗಮನಾರ್ಹ"[೧](ಜವಳಿ ಬಿ.ಸಿ, ೧೯೭೩:೧೬೦). ಅಮರಕೋಶದ ಪ್ರಕಾರ 'ಮಠ ಛಾತ್ರಾಜಿನಿಯಃ' ಮತ್ತು 'ಮಠಂತಿ ಛಾತ್ರಾದಯಃ ಅತ್ರಮಠಃ' ಎಂದಿರುವುದರಿಂದ ವಿದ್ಯಾರ್ಥಿಗಳು ವಾಸಿಸುವ ಸ್ಥಳವೆಂದೂ ಮಠಕ್ಕೆ ಅರ್ಥೈಸಬಹುದಾಗಿದೆ.

ಮಠಪದಕ್ಕೆ ವಿವಿಧ ಅರ್ಥಕೋಶಗಳಲ್ಲಿ ಈ ಕೆಳಗಿನ ಅರ್ಥಗಳನ್ನು ಕೊಟ್ಟಿದ್ದಾರೆ. ಅವುಗಳು;

ಮಠ(ನಾ) 'ಮಠ' ವಾಸಿಸು ಎಂಬ ಅರ್ಥವನ್ನು ಕೊಡುತ್ತದೆ. ಮೂಲ ಅರ್ಥವಾಗಿ ವಾಸಸ್ಥಾನವೆಂದು ಮಠಕ್ಕೆ ಗುರುತು ನೀಡಿದ್ದನ್ನು ಕಾಣಬಹುದಾಗಿದೆ.

೧. ಸಂನ್ಯಾಸಿಗಳು ವಾಸಿಸುವ ಕುಟೀರ; ಸಂನ್ಯಾಸಿಗಳ ವಾಸಸ್ಥಾನ; ಆಶ್ರಮ:"ಬ್ರತಿಗಳಿರ್ಪನೆ ಮಠವೆಂಬುದು"(ಹಲಾಯು.೫೦-೦೪೩)[೨]. "ವ್ರತಿಗಳಹ ಠಾವದು ಮಠಂ"(ಮಂಗರಾ ೫-೭೬); ಸನ್ಯಾಸಿಗಳ ಮಠವೆಯ್ದೆ ಬೇಯಿತ್ತು(ಐಸಪು ೫೬-೩೫)[೩].

೨. ಧಾರ್ಮಿಕ ಬೋಧನೆ, ಪ್ರಸಾರ ಹಾಗೂ ವಿದ್ಯೆಯ ಬೋಧನೆ, ಪ್ರಸಾರಗಳನ್ನು ನಡೆಸುವ ಆಧ್ಯಾತ್ಮಿಕ ಸಂಸ್ಥೆ ಅಥವಾ ವಿದ್ಯಾಕೇಂದ್ರ; ವಿದ್ಯೆ, ಜ್ಞಾನ, ಮತ, ಧರ್ಮಗಳ ಪ್ರಸಾರ ಕಾರ್ಯವನ್ನು ನಡೆಸುವ ಸ್ಥಾನ; ಸಂಸ್ಥಾನ: "ಮಠಃ, ಛಾತ್ರಾದಿ ನಿಲಯಃ ಗುರುಗಳೂ, ಶಿಷ್ಯರೂ, ಸಂನ್ಯಾಸಿಗಳು, ಬ್ರಹ್ಮಚಾರಿಗಳೂ ಇಂಥವರು ವಾಸ ಮಾಡುವ ಸ್ಥಳ, ಮಠ, ಯತಿಸ್ಥಳ"(ಸಿದ್ದಾಂತಿ...); ಆ ಮಠ ಪುರಾಣ ಕಮಠನಂತೆ ಸಕಳ ಲೋಕಾಧಾರಮುಂ..... ಭವಾನೀ ಭವನದಂತೆ ಬ್ರಹ್ಮಚಾರಿಸದಾಚಾರ ಸಂಭಾವಿತಮುಂಮಾರ್ಗಿರ್ಪ್ಪುದು(ಎಕ.VII, ಶಿಕಾರಿ, ೧೦೨-೫೭:೧೧೫೬); ನಮ್ಮ ಪೂರ್ವಿಕರಲ್ಲಿ ಹಲವರು ಉತ್ತರಾಧಿಮಠದ ಸ್ವಾಮಿಗಳಾಗಿದ್ದರು(ಕೆಲನೆ.೨೯೪), 'ವಿಷ್ಣುತೀರ್ಥರು ಉಡುಪಿಯ ಅಷ್ಟ ಮಠಗಳ ಪೈಕಿ ಸ್ವಾದೀಮಠದ ಪೀಳಿಗೆಗೆ ಮೂಲಪುರುಷರಾದರು(ಕಭನಿ.೧೯೯)[೪].

೩. ಮಹಾ ವ್ಯಕ್ತಿಗಳು ದೇಹ ತ್ಯಜಿಸಿದ ಮೇಲೆ ಅವರ ಯಾವುದಾದರೂ ಕುರುಹನ್ನು ಪೂಜಿಸುವ ಸ್ಥಳ; ಕಾಲಕ್ರಮೇಣ ಬೆಳವಣಿಗೆ ಹೊಂದಿ ಸಾರ್ವಜನಿಕ ಸೇವೆ ಇತ್ಯಾದಿಯನ್ನು ನಡೆಸುವ ಸಂಘ-ಸಂಸ್ಥೆ: ಚಿತೆಯಿಂದ ಚೈತ್ಯ, ಸ್ತೂಪ, ಮಠಗಳು ಮಹಾ ವ್ಯಕ್ತಿಗಳ ಭಸ್ಮಾವಶೇಷವನ್ನೋ ಮತ್ತ್ಯಾವುದೇ ಅವರು ಬಳಸಿದ ಸಾಮಗ್ರಿಗಳನ್ನೋ ಇಟ್ಟು ಪೂಜಿಸುವ ಸ್ಥಳಗಳಾದವು(ಸೌಂದಸ.೧೨೦)[೫]; ಕಲ್ಕತ್ತಾದ ಮಹಾನಗರದಲ್ಲಿದ್ದ ಹಾಳು ಮನೆಯ ಮಠದ ಇಬ್ಬರು ತರುಣ ಸಂನ್ಯಾಸಿಗಳು.... ದಕ್ಷಿಣೇಶ್ವರದಲ್ಲಿ ಧ್ಯಾನ ಜಪ ತಪಗಳಲ್ಲಿ ಕಳೆಯಲೆಂದು ಭವತಾರಿಣಿಯ ಸನ್ನಿಧಿಗೆ ಬಂದಿದ್ದರು[೬](ಮಲೆಮ ೬೬೦).

೪. (ಯಾತ್ರಾತ್ರಿಗಳಿಗೆ, ಸಾಧಸಂತರಿಗೆ ನಿರಂತರವಾಗಿ ಅನ್ನದಾನ ನಡೆಸುವ ದೇವಸ್ಥಾನ ಅಥವಾ ಮಠಕ್ಕೆ ಸೇರಿದ) ಭೋಜನಶಾಲೆ; ಅನ್ನಚತ್ರ; ಆವಾರಿ ಸತ್ರವ ನಡೆಸುವಂತಾಗಿ ಲಕ್ಷ್ಮೀ ನಿಬಿವೆಂದ್ದು ತನ್ನ ಹೆಸರಲು ಮಠ xxx(ಮಾ) ಡಿಸಿ (ಎಇxxx ೩೭-೦೩; ೧೨೨೦); ಕಾಮದೇವ ನಾಯಕರು ಆಚಂದ್ರಾರ್ಕ್ಕ ಸ್ಥಾಯಿಯಾಗಿ ಪ್ರತಿದಿವಸವೂ

ಹಂಸಿರಡು ಪ್ರಜೆ ಬ್ರಾಹ್ಮಣ ಭೋಜನಕ್ಕೆಂದು ಕಟ್ಟಿಸ್ತ ಮಠದ ಚತುಸೀಮೆಯ ವಿವರ(ಸೌಇಇ VII, ೩೪೭-೦೩; ೧೩೮೭); ತುಟೀ ಕಟ್ಟಿದ ಮೇಲೆ ಮಠದ ಭೋಜನ ಯಾಕೆ?(ಗಾದೆ).

೫. ಗುಡಿ ದೇವಾಲಯ: ಶ್ರೀಕೃಷ್ಣಮಠ: ಉಡುಪಿಯ ಕೇಂದ್ರ ಆಕರ್ಷಣೆಯಾದ ಶ್ರೀಕೃಷ್ಣ ದೇವಾಯ ಸಣ್ಣದಾದರೂ ಅಚ್ಚುಕಟ್ಟು(ಕವಿಕೋ II, ೫೬೮)[೬]; ಗುರುವಾರ ರಾಯರ ಮಠದಲ್ಲಿ ವಿಶೇಷ ಪೂಜೆ ನಡೆಯುತ್ತದೆ(ರೂಡಿ).

೬. ನಿವಾಸ; ವಾಸಸ್ಥಾನ: ಭಕ್ತನ ಮಠವೆಂದು ಜಂಗಮ ನಡೆದು ಬಂದಲ್ಲಿ ಆ ಭಕ್ತನು... ತನು ಕರಗಿ ಮನ ಕರಗಿ ನೋಡಿ ಮಾಡುವುದು ಭಕ್ತಿ ಸ್ಥಲ(ಬಸವ ೮೬೪); ಸತ್ಯಸದ್‌ಭಕ್ತರ ಮಠವನಱಸಿಕೊಂಡು ಹೋಗಿ ಲಿಂಗ ಮುಂತಾಗಿ ಭಕ್ತಿ ಭಿಕ್ಷೆಯ ಬೇಡುವೆ(ಅಖಂಡೇ.೧೪೪-೧೩೩); ಹಾದೀಲಿ ಮೇವೋ ಜಾಣ ಸಾರಗ ಹಿಂಡೆ ಗ್ಯಾನೀಸಿ ಮೇವೋ ನವಿಲ್ಹಿಂಡೆ-ಸಾರಗದ್ದಹಿಂಡೆ ಜಾಣ ಗಿರಿಜೆಯ ಮಠವೆಲ್ಲಿ(ಹಳ್ಳಿ ಬಾ.೨೩).

೭. (ಮುಖ್ಯವಾಗಿ ಬ್ರಾಹ್ಮಣ ಬಾಲಕರಿಗಾಗಿ ಮೀಸಲಾಗಿರುತ್ತಿದ್ದ) ಪಾಠಶಾಲೆ; ಶಿಕ್ಷಣಶಾಲೆ: ಗಿಳಿಗಳೋದುವ ಮಠ ನವಿಲ್ಗಳ ನರ್ತನನಿಳಯವು.. ಎಂದೆನಲಾ ಪೊಳಲು ಪವನಮೆಸಿದಿಹುದು[೯](ಕುರಾಸಾಂ.೪-೩೨); ನಿಮ್ಮ ಮನೆ ಮಾಣಿಗೆ ವರ್ಷ ಐದು ತುಂಬಿಯಾಗುತ್ತದೆ. ನಮ್ಮ ಮಠಕ್ಕೆ ಕಳುಹಿಸಬಹುದಲ್ಲ[೯](ಮರಮ.೧೭೯); ಊರ ದೇಗುಲದಲ್ಲಿ ಐಗಳ ಮಠವಿತ್ತು[೧೦](ಹಾಹುತ್ತ.೬೩). 'ಕೂಲಿಮಠ'ಪರಾ.

೮. (ಧರ್ಮ ಪ್ರಚಾರ ಮತ್ತು ಸಾರ್ವಜನಿಕ ಸೇವೆ ನಡೆಸುವ) ಕ್ರೈಸ್ತ ಮತೀಯರ ಧಾರ್ಮಿಕ ಸಂಸ್ಥೆ; ಕ್ರೈಸ್ತಮಿಷನರಿ ಸಂಸ್ಥೆ: ಕ್ರೈಸ್ತಮಠವೆನಿಸಿಕೊಳ್ಳಬೇಕಾದರೆ ಅದು ಸ್ವಯಮಾಡಳಿತ ಸಂಸ್ಥೆಯಾಗಿದ್ದು ಧರ್ಮ ಸಭೆಯ ನಿಯಮಾವಳಿಯನುಸಾರ ಸ್ಥಾಪಿತವಾಗಿರಬೇಕು(ಕವಿಕೋ.V.೬೦೫).(ಎನ್.ಬಸವರಾಧ್ಯ; ೧೯೯೩:೬೮೬೦-೬೮೬೧).

ಮಠ(ನಾ). Matha(n)

೧. ವಿದ್ಯೆ, ಜ್ಞಾನ, ಧರ್ಮಬೋಧನೆ ಮತ್ತು ಪ್ರಸಾರಕಾರ್ಯ ನಡೆಸುವ ಆಧ್ಯಾತ್ಮಿಕ ಸಂಸ್ಥೆ-ಸಂಸ್ಥಾನ. Education and religious centre.

೨. ಗುಡಿ; ದೇವಾಲಯ, temple; shirne.

೩. (ಯಾತ್ರಾರ್ಥಿಗಳು, ಸಾಧು ಸಂತರಿಗೆ ನಿರಂತರವಾಗಿ ಅನ್ನದಾನ ನಡೆಸುವ) ಭೋಜನಶಾಲೆ; ಅನ್ನಛತ್ರ. Choultry; an establishment where food is served free to the travellers, asceties etc.

೪. ನಿವಾಸ; ವಾಸಸ್ಥಾನ. house; dwelling.

೫. ಪಾಠಶಾಲೆ; ಶಿಕ್ಷಣಶಾಲೆ. school; educational institution.(ಶ್ರೀಧರ್ ಎಂ.ಕೆ. ಡಾ., ೨೦೧೧-೧೧೦೭)[೧೨].

ಮಠ(ನಾ)

೧. ಸನ್ಯಾಸಿ, ಗುರು ಮೊ. ವಾಸಸ್ಥಾನ(n)monastery.

೨. ಶಾಲೆ school[13](ಶೇಷಗಿರಿರಾವ್ ಎಲ್.ಎಸ್., ೨೦೦೮-೩೬೨).

ಮಠ(matha)(ಸಂ) ನಾ.ಕೀರ್ತಿ ಶೇಷರಾದ ಪೂಜ್ಯರ, ದೇವರ ಹೆಸರಿನಿಂದ ಕಟ್ಟಿಸಿದ ಭವ್ಯ ಮಂದಿರ, ದೇವಸ್ಥಾನ, ಸನ್ಯಾಸಿಯ ಕುಟೀರ, ಸಂನ್ಯಾಸಿಗಳ ವಾಸಸ್ಥಾನ, ಪಾಠಶಾಲೆ, ವಿದ್ಯಾಭ್ಯಾಸ ಮಂದಿರ.n. a devotees cell, a hermitage residence of a company of ascetics, residence of guru(ಸುಗರ್ ಎ.ಕೆ. ಮತ್ತು ಇತರರು; ೨೦೦೭-೩೧೪).

ಮಠ. ಗುಡಿಸಲು; ಪರ್ಣ-ಶಾಲೆ; ದೇವಾಲಯ; ಸನ್ಯಾಸಿಗಳ ಮನೆ. (ಆಡಾ.ಶಿ.ವರಾಮ ಕಾರಂತ; ೨೦೦೯:೩೬೮)[೧೪].

ಮಠ(ಸಂ)ನಾ. ಕೀರ್ತಿಶೇಷರಾದ ಪೂಜ್ಯರ, ದೇವರ ಹೆಸರಿನಿಂದ ಕಟ್ಟಿಸಿದ ಭವ್ಯ ಮಂದಿರ; ದೇವಸ್ಥಾನ, ಸಂನ್ಯಾಸಿಯ ಕುಟೀರ, ಸಂನ್ಯಾಸಿಗಳ ವಾಸಸ್ಥಾನ; ಪಾಠಶಾಲೆ, ವಿದ್ಯಾಭ್ಯಾಸ ಮಂದಿರ; ಎತ್ತುಗಳಿಂದ ಎಳೆಯಲ್ಪಡುವ ಬಂಡಿ(ಪಂಡಿತ ಜೆ.ಎ.ಕವಲಿ; ೨೦೦೩:೬೬೪).

ಮಠ-ನಾ(ಸಂ) ಗುಡಿಸಲು, ಅನ್ನ ಕೊಡತಕ್ಕ ಸ್ಥಳ, ದೇವರಗುಡಿ ಪಾಠಶಾಲೆ, ಸಂನ್ಯಾಸಿಗಳ ಮನೆ[೧೬](ಗುರುನಾಥ ಜೋಶಿ; ೨೦೦೬:೫೦೦).

ಆಧುನಿಕ ನಿಘಂಟಕಾರರಾದ ಡಾ.ಆಪ್ಟೆಯವರು ತಮ್ಮ ನಿಘಂಟುವಿನಲ್ಲಿ ಮಠವೆಂಬ ಪದಕ್ಕೆ “The hut of an ascetic, a place of learning a college, a temple, monastry” ಎಂದು ಅರ್ಥೈಯಿಸಿದ್ದಾರೆ. ಡಾ.ರೆವರೆಂಡ್ ಕಿಟಲ್ ಪ್ರಕಾರ “ಮಠ=A hut, a cottage, a devotees call, residence of a company of ascetics, a residence of Guru, a school” ಇತ್ಯಾದಿ ಅರ್ಥಗಳನ್ನು ಹೇಳಿದ್ದು ‘ತಟದಲ್ಲ್ಯಾಗಲಿ ಮಠದಲ್ಲ್ಯಾಗಲಿ ಹಠದ ಜಂಗಮನ ಕಾಟ ತಪ್ಪುವುದಿಲ್ಲ’

ಎಂಬ ಗಾದೆ ಮಾತನ್ನು ಉದಾಹರಣೆಯಾಗಿ ನೀಡುವುದರಿಂದ ಮಠದಲ್ಲಿ ಜಂಗಮರು ಅಥವಾ ಗುರುಗಳು ವಿಧಿ ವಿಧಾನಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರೆಂಬ ಅಂಶ ಪ್ರಕಟವಾಗುತ್ತದೆ. ಒಟ್ಟಿನಲ್ಲಿ ಮಠದ ಅರ್ಥವಿವರಣೆ ಆಪ್ಟೆ ಹಾಗೂ ಕಿಟಲ್ ಅವರದು ಒಂದೇ ಆಗಿದೆ. ಮ್ಯಾಕ್‌ಡೊನೆಲ್ ಅವರ ಅರ್ಥ ವಿವರಣೆಯೂ ಇದೇ ಗತಿಯಲ್ಲಿ ಸಾಗಿದೆ.

ಅಮರ ಕೋಶದ ಅರ್ಥದಲ್ಲಿ ಹೇಳಬೇಕಾದರೆ, ಮಠ ಎಂದರೆ ಧರ್ಮಕ್ಷೇತ್ರ, ಇಲ್ಲವೇ ಪರೋಪಕಾರದ ಆಗರ. ಛತ್ರಾದಿನಿಲಯ ಎಂದು ಅಮರಸಿಂಹನು ನುಡಿಯುತ್ತಾನೆ. ಮ್ಯಾಂಡೋಸಲರ ಅವರು ಸಂಸ್ಕೃತ ಶಬ್ದಕೋಶದಲ್ಲಿ ಹೇಳಿರುವ, 'ಒಬ್ಬ ಸಂನ್ಯಾಸಿ ಇಲ್ಲವೇ ಅಭ್ಯರ್ಥಿಯ ಕುಟಿರ, ಒಂದು ಧಾರ್ಮಿಕ ಪಾಠಶಾಲೆ, ಅಥವಾ ಮಹಾವಿದ್ಯಾಲಯ ಮಠಾಧಿಪತಿಯೆಂದರೆ ಇಂತಹ ಧಾರ್ಮಿಕ ಸಂಸ್ಥೆಯ, ಇಲ್ಲವೆ ಪಾಠಶಾಲೆಯ ಮುಖ್ಯಸ್ಥ ಎಂಬ ಅರ್ಥವನ್ನು ಹೊಂದಿದೆ. ಮಠವೆಂದರೆ, ಧಾರ್ಮಿಕ ತತ್ವಗಳ ರಕ್ಷಣೆಯ ಕೇಂದ್ರ ಸ್ಥಳ ಹಾಗೂ ಧರ್ಮಸಂಘಟನೆಯ ಬುನಾದಿ, ಮನಸ್ಸನ್ನು ಏಕಾಗ್ರ ಚಿತ್ತದಲ್ಲಿಡುವ ಕ್ಷೇತ್ರ. ಅವಗುಣ ಹೋಗಲಾಡಿಸುವ ತಾಣ. ಸಮಾಜದಲ್ಲಿ ಸಮಾನತೆಯ ಭಾವ ಮೂಡಿಸುವ ಕೇಂದ್ರಸ್ಥಳ.

"ಮಠವೆಂದರೆ ವಿದ್ಯೆಯಾಗರ. ಕೆಲವಂತೂ ಒಳ್ಳೆಯ ವಿಶ್ವವಿದ್ಯಾಲಯದಂತೆ ಇದ್ದು, ಅಲ್ಲಿ ಅಧ್ಯಯನ, ಅಧ್ಯಾಪನ ಹಾಗೂ ಪ್ರಾಕಾರಗಳು ನಿರಂತರವಾಗಿ ನಡೆಯುತ್ತವೆ."(ಮಹಾದೇವಯ್ಯ ಟಿ.ಆರ್., ೧೯೮೧:೪೩೪)[೧೭].

ಮಠಗಳನ್ನು ಆಂಗ್ಲ ಭಾಷೆಯಲ್ಲಿ "ಮೊನೆಸ್ಟರಿಸ್(monasteris)" ಎಂದು ಕರೆಯುತ್ತಾರೆ. ಇಂಗ್ಲಿಷ್ ಶಬ್ದದ ಮೂಲವಾದ ಗ್ರೀಕ್ ಶಬ್ದವನ್ನು ಪರಿಶೀಲಿಸಿದರೆ ಇದರ ಅರ್ಥ 'ಏಕಾಂತತೆ' ಅಥವಾ 'ವಿವಕ್ತತೆ'. ಪ್ರಪಂಚ ಬಂಧನಗಳಿಂದ ಹೊರಗಾಗಿ, ಏಕಾಗ್ರಚಿತ್ತದಿಂದ ಧ್ಯಾನದಲ್ಲಿ ನಿರತವಾಗಲು ಏಕಾಂತತೆಯು ಅಗತ್ಯವೆಂಬ ಭಾವನೆ ಎಲ್ಲ ಧರ್ಮಗಳಲ್ಲಿಯೂ ಮೂಡಿಬಂದಿದೆ. ಮಠದಲ್ಲಿರುವ ಯತಿಗಳು ಪ್ರಾಪಂಚಿಕ ಜೀವನದಿಂದ ಹೊರಗಿದ್ದರೂ, ಸಂನ್ಯಾಸಿಗಳ ಸಾಮಾಜಿಕ ಸಂಬಂಧಗಳಿದ್ದವೆಂಬುದನ್ನು ಮರೆಯಬಾರದು. ಸಂನ್ಯಾಸಿಗಳು ಒಟ್ಟಿಗೆ ಇರಬೇಕಾದುದರಿಂದ ಅವರಿಗೆ ಅಗತ್ಯವಾಗಿ ಇರಬೇಕಾದ ಗುಣವು ಸಹನೆ"[೧೯](ಸದಾಶಿವಯ್ಯ ಎಚ್.ಎಂ., ೧೯೮೪:೯೮).

ಬಿ.ಕೆ.ಮುಖರ್ಜಿಯವರ ಪ್ರಕಾರ "ಕಾನೂನಿನ ವ್ಯವಹಾರಗಳಲ್ಲಿ ಮಠವೆಂದರೆ ಆತ್ಮವಿದ್ಯೆಯಲ್ಲಿ ಸಾಧನೆಯನ್ನು ಗಳಿಸಿದ ಒಬ್ಬ ಮಹಾವ್ಯಕ್ತಿಯ ಹಿರಿತನದಲ್ಲಿ ನಡೆಯುವ ಒಂದು ಧಾರ್ಮಿಕ ಸಂಸ್ಥೆ. ಒಂದು ವಿಶಿಷ್ಟ ಪಂಗಡಕ್ಕೆ ಶೇರಿದ ನೈಷ್ಠಿಕರ ಅನುಕೂಲಕ್ಕಾಗಿ ಸ್ಥಾಪಿತವಾದುದು. ಇವರು ಅಂಥ ಮಠದ ಅಧಿಪತಿಯ ಶಿಷ್ಯರಾಗಿ, ಆಧ್ಯಾತ್ಮಿಕ ವಿದ್ಯೆಯ ವಿಜ್ಞಾನಿಗಳಾಗಿರುತ್ತಾರೆ[೨೦]

(ಸದಾಶಿವಯ್ಯ ಎಚ್.ಎಂ., ೧೯೮೪:೧೦೦೫). ಈ ಅರ್ಥವನ್ನು ಸಮರ್ಪಕವಾಗಿ ಆಲೋಚಿಸಿದಾಗ, ಮಠ ಮತ್ತು ಮಠಾಧಿಪತಿಗಳು ಒಂದು ನಾಣ್ಯದ ಎರಡು ಮುಖಗಳಿದ್ದಂತೆ ಸಂಬಂಧವಿರುತ್ತದೆ. ಮಠವನ್ನು ಹೊರತುಪಡಿಸಿ ಮಠಾಧೀಶರು ಯಾವುದೇ ನೈತಿಕ ಧಾರ್ಮಿಕ ಕಾರ್ಯ ಮಾಡುವಂತಿಲ್ಲ.

ಆಪ್ಟೆಯವರು ತಮ್ಮ ಸಂಸ್ಕೃತ ಹಿಂದಿ ಕೋಶದಲ್ಲಿ ಮಠ ಎಂದರೆ, 'ಸಂನ್ಯಾಸಿಯ ಕೊಠಡಿ, ಸಾಧಕರ ಕುಟಿರ, ವಿಹಾರ, ಶಿಕ್ಷಾಲಯ, ವಿದ್ಯಾಮಂದಿರ, ಮಹಾವಿದ್ಯಾಲಯ, ಜ್ಞಾನಪೀಠ, ದೇವಾಲಯ, ಮಂದಿರ..... ಇತ್ಯಾದಿ ಅರ್ಥ ಹೇಳುತ್ತಾರೆ.

ಪಾಶ್ಚಿಮಾತ್ಯ ವಿದ್ವಾಂಸ ಮೆಕಡೊನಾಲ್ ತನ್ನ ಸಂಸ್ಕೃತ ಕೋಶದಲ್ಲಿ ಮಠದ ಪರಿಭಾಷೆಯನ್ನು ಹೇಳುವಾಗ, 'ಭೈರಾಗಿ ಅಥವಾ ವಿದ್ಯಾರ್ಥಿಗಳ ವಾಸಸ್ಥಾನ. ಧಾರ್ಮಿಕ ವಿಷಯಗಳ ಅಧ್ಯಯನ ಕೇಂದ್ರ ಅಥವಾ ಗುರುಕುಲವೆಂದು ತಿಳಿಸುತ್ತಾರೆ. ಮಠವೆಂದರೆ ಕೇವಲ ಒಂದು ಭವ್ಯ ಕಟ್ಟಡ ಮಾತ್ರವಲ್ಲ, ಅದೊಂದು ಧಾರ್ಮಿಕ ಸೌಧವಾಗಿ ಸಮಸ್ತ ಸಮಾಜವೇ ಸಾಂಘಿಕವಾಗಿ, ವಿಕಾಸಗೊಳ್ಳುವಂತೆ ಮಾಡುವ ಪೂಜಾಗೃಹ ಎನ್ನಬಹುದು. ದೇವಸ್ಥಾನಗಳನ್ನು ಬಿಟ್ಟರೆ ಜನ ಜೀವನದ ಮೇಲೆ ಪ್ರಭಾವ ಬೀರುವುದರಲ್ಲಿ ದ್ವಿತೀಯ ಸ್ಥಾನದಲ್ಲಿ ಇರುವ ಹಾಗೂ ಹಿಂದೂ ಸನ್ಯಾಸಿಗಳಲ್ಲಿ ಬಹುದೊಡ್ಡ ಸಂಖ್ಯೆಯಲ್ಲಿ ಇರುವ ಸಂಪ್ರದಾಯ ಮಾದರಿಯ ವಿರಕ್ತರ ಬಗ್ಗೆ ಮಾತ್ರ ಅಭಿಪ್ರಾಯಗಳನ್ನು ಇಲ್ಲಿ ಸೀಮಿತಗೊಳಿಸಲಾಗಿದೆ. ಸನ್ಯಾಸಿಯಿಂದ ಸಾಮಾನ್ಯವಾಗಿ ನಿರೀಕ್ಷಿಸುವ ಕನಿಷ್ಠ ಅರ್ಹತೆಗಳು:

೧. ಎಲ್ಲಾ ಸಾಂಸಾರಿಕ ಬಂಧನಗಳ ಪರಿತ್ಯಾಗ

೨. ಕಾಮ ವಾಸನೆಗಳ ಪರಿತ್ಯಾಗ

೩. ಖಾಸಗಿ ಆಸ್ತಿಯ ಪರಿತ್ಯಾಗ

೪. ಸಮುದಾಯ, ವಿಗ್ರಹಾರಾಧನೆ ಮತ್ತು ಸಂಸಾರಸ್ಥರಿಗೆ ವಿಧಿಸಿರುವ ಇತರ ವ್ರತಗಳ ಪರಿತ್ಯಾಗ

೫. ಆತ್ಮಸಂಸ್ಕೃತಿ ಮತ್ತು ಆಧ್ಯಾತ್ಮಿಕ ಜ್ಞಾನೋದಯಕ್ಕಾಗಿ ಜೀವನ ಸಮರ್ಪಣೆ

ಮಠಾಧಿಪತಿಯ ಮುಖ್ಯ ಕೆಲಸ ಜ್ಞಾನಾನ್ವೇಷಣೆ ಮತ್ತು ಜ್ಞಾನಪ್ರಸಾರ. ಇದಕ್ಕಾಗಿ ಸ್ವಾಧ್ಯಾಯ, ಶ್ರವಣ, ಮನನ ಮತ್ತು ನಿದಿಧ್ಯಾಸನ ಮೊದಲ ಹಂತಗಳು. ಆ ಮೇಲೆ ತೀವ್ರ ತಪಸ್ಸು ಲೌಕಿಕ ವ್ಯವಹಾರವನ್ನೆಲ್ಲ ಬಿಟ್ಟು ಸಮಾಧಿಸ್ಥಿತಿ. ಗಹನವಾದ ತಾತ್ವಿಕ

ವಿಚಾರಗಳ ಅನ್ವೇಷಣೆ, ಆರ್ಜನೆ ಅಂತರ್ಮುಖಿಯಾದಾಗ ಮಾತ್ರ ಸಾಧ್ಯ. ಇಂಥ ಅಲೌಕಿಕ ಉದ್ದೇಶಕ್ಕೆ ಪತಂಜಲಿ ಯೋಗಸೂತ್ರಗಳಲ್ಲಿ ಹೇಳಿರುವ ಅಷ್ಟಾಂಗಯೋಗ ಮುಖ್ಯಮಾರ್ಗ. ಇಂಥ ಸ್ಥಿತಿಯನ್ನು ಸಿದ್ಧಿಸಿಕೊಂಡವರು ಮತ್ತೆ ಬಹಿರ್ಮುಖರಾಗಿ ಲೌಕಿಕಕ್ಕೆ ಹಿಂತಿರುಗಿ ಬೋಧನೆ ಪ್ರವಚನಾದಿಗಳಿಂದ ಆ ಜ್ಞಾನವನ್ನು ಸತ್ಪಾತ್ರರಾದ ಶಿಷ್ಯರಿಗೆ ಪ್ರಧಾನ ಮಾಡಬೇಕಾಗುತ್ತದೆ.

ಮಠಾಧಿಪತಿಗೆ ಸಹಾಯ ಮಾಡಲು ಉತ್ತರಾಧಿಕಾರಿ, ಚರಮೂರ್ತಿ, ಪ್ರತಿನಿಧಿಗಳು ಇರುತ್ತಾರೆ. ಉತ್ತರಾಧಿಕಾರಿಯ ಆಯ್ಕೆ ಸ್ವಾಮಿಗಳಿಗೆ ಸೇರಿದ್ದರೂ ಕೆಲವು ವೇಳೆ ಚುನಾವಣೆ ನಡೆದಿರುವುದೂ ಉಂಟು. ಕೆಲವು ವೀರಶೈವ ಮಠಗಳಲ್ಲಿ(ಪಟ್ಟದ ಮಠಗಳು) ವಂಶಪಾರಂಪರ್ಯವಾಗಿ ಉತ್ತರಾಧಿಕಾರಿಗಳಾಗುತ್ತಾರೆ. ಮಠದ ಸ್ವಾಮಿ ಸಾಮಾನ್ಯವಾಗಿ ವಿರಕ್ತ, ಬ್ರಹ್ಮಚಾರಿ. ಆದರೆ ಮೈಸೂರಿನ ಪರಕಾಲಮಠ–ಕೆಲವು ವೀರಶೈವ ಮಠಗಳು, ಆದಿಚುಂಚನಗಿರಿಯ ಮಠ ಇತ್ಯಾದಿಗಳಲ್ಲಿ ಗೃಹಸ್ಥರೂ ಸನ್ಯಾಸಿಗಳಾಗಿ ಸ್ವಾಮಿಗಳಾಗಿದ್ದಾರೆ.

ಮಠಾಧಿಪತಿ ಸತ್ತಮೇಲೆ ಅವರ ಉತ್ತರ ಕ್ರಿಯೆಯಲ್ಲೂ ವೈಶಿಷ್ಟ್ಯವಿದೆ. ಅವರ ಶರೀರವನ್ನು ಸಾಮಾನ್ಯವಾಗಿ ಹೂಳಿಬಿಡುತ್ತಾರೆ. ವೈದಿಕ ಹಾಗೂ ವೀರಶೈವ ಪಂಥಗಳಲ್ಲಿ ಕುಳಿ ತೋಡಿ, ತತ್ಕಾಲಕ್ಕಾಗಿ ಹೊಲೆದ ವಸ್ತ್ರಗಳ ಚೀಲಗಳಲ್ಲಿ ಸ್ವಾಮಿಗಳ ಶರೀರವನ್ನಿಟ್ಟು ಅದರೊಡನೆ ವಿಭೂತಿ, ತುಲಸಿ, ಬಿಲ್ವಪತ್ರೆ ಇತ್ಯಾದಿ ವಸ್ತುಗಳನ್ನಿಟ್ಟು ಚೀಲಗಳನ್ನು ಕಟ್ಟಿ ಕುಳಿಯಲ್ಲಿ ಕುಳಿತಿರುವಂತೆ ಸ್ಥಾಪಿಸುತ್ತಾರೆ. ಕೆಲವು ಪಂಥಗಳಲ್ಲಿ ತೆಂಗಿನಕಾಯಿ ಇತ್ಯಾದಿಗಳಿಂದ ಅವರ ತಲೆಯ ಮೇಲುಭಾಗ (ಬ್ರಹ್ಮರಂಧ್ರ)ವನ್ನು ಘಾಸಿಗೊಳಿಸುವುದುಂಟು. ಕುಳಿ ಮುಚ್ಚಿ ಅದರ ಮೇಲೆ ಬೃಂದಾವನ ಗದ್ದಿಗೆ ಇಲ್ಲವೇ ಸಮಾಧಿಯನ್ನು ಕಟ್ಟಿ ಪೂಜೆಗೆ ಏರ್ಪಾಟಾಗುತ್ತದೆ. ಇಂದಿನ ಮಠಗಳ ಸ್ವರೂಪ ಹೆಚ್ಚು ಕಡಿಮೆ ಅನೂಚಾನವಾಗಿ ನಡೆದುಬಂದ ರೀತಿಯಲ್ಲೇ ಉಳಿದು ಬಂದಿವೆ. ಪ್ರತಿ ಮಠಕ್ಕೂ ಒಬ್ಬ ಅಧಿಪತಿ ಇರುತ್ತಾರೆ. ಇವರಿಗೆ ಆಚಾರ್ಯ, ಕುಲಪತಿ, ಗುರು, ಜಗದ್ಗುರು, ಸ್ವಾಮಿ, ಯತಿ, ಯತೀಂದ್ರ, ದೇಶಿಕ, ದೇಶಿಕೇಂದ್ರ ಇತ್ಯಾದಿ ಹೆಸರುಗಳು ಇರುತ್ತವೆ. ಮಠಾಧಿಪತಿಗೆ ನಿಯತವಾದ ವೇಷಭೂಷಣಗಳುಂಟು. ಸಾಮಾನ್ಯವಾಗಿ ಕಾವಿ(ಕಷಾಯ) ವಸ್ತ್ರಧಾರಣೆ ಅನೇಕ ಪಂಥಗಳಲ್ಲಿ ವಾಡಿಕೆಯಾಗಿದೆ. ಹಳದಿ, ಕೇಸರಿ ಅಥವಾ ಶುದ್ಧ ಬಿಳಿಯ ವಸ್ತ್ರಗಳನ್ನು ಕೆಲವು ಪಂಥದವರು ಧರಿಸುತ್ತಾರೆ. ಮೊದಮೊದಲು ಬಟ್ಟೆಗೆ ಪ್ರಾಧಾನ್ಯವಿರಲಿಲ್ಲ. ದಿಗಂಬರ ಜೈನರಲ್ಲಿ ನಿಷ್ಠುರ ಪ್ರತಿಗಳಾದ ಮುನಿಗಳು ನಗ್ನಮೂರ್ತಿಗಳು. ಸ್ಮಾರ್ತ, ಶ್ರೀವೈಷ್ಣವ, ಮಾಧ್ವ ಮುಂತಾದ ಪಂಥಗಳಲ್ಲಿ ಉಡುವ ವಸ್ತ್ರ ಮಾತ್ರ ಉಂಟು; ಹೊರಸಂಚಾರದಲ್ಲಿ

ಕೆಲವು ವೇಳೆ ಉತ್ತರೀಯ ಇರುತ್ತದೆ. ವೀರಶೈವರಲ್ಲಿ ಕೆಲವು ಮಠಗಳಲ್ಲಿ ಶಿರೋವೇಷ್ಟನ(ರುಮಾಲ), ಉದ್ದನೆಯ ನಿಲುವಂಗಿ, ಕತ್ತಿನ ಸುತ್ತ ಕೆಳಗೆ ಇಳಿಬೀಳುವಂತಹ ಉತ್ತರೀಯ, ಮೈಮೇಲೆ ನಿಲುವಂಗಿ ಇರುತ್ತವೆ. ಆಯಾಪಂಥಕ್ಕೆ ಅನುಗುಣವಾಗಿ ಮಾಮೂಲಾಗಿ ಹಣೆ, ಭುಜಗಳು, ಮುಂಗೈಗಳು, ಎದೆ ಮುಂತಾದ ಕಡೆ ಭಸ್ಮ, ತ್ರಿಪುಂಡ್ರ ನಾಮ, ಗಂಧ, ಗಂಧದ ಮುದ್ರೆ, ತಿಲಕ ಇತ್ಯಾದಿಗಳನ್ನು ಲಾಂಛನಗಳಾಗಿ ಇಟ್ಟುಕೊಳ್ಳುತ್ತಾರೆ. ಕೊರಳಲ್ಲಿ ರುದ್ರಾಕ್ಷಿ, ಜಪಸರ, ಕಂಕುಳಲ್ಲಿ ಕೃಷ್ಣಾಜಿನ, ಕೈಯಲ್ಲಿ ಕಮಂಡಲು, ದಂಡ(ಆಷಾಢ), ಎಡಭುಜದ ಮೇಲಿಂದ ಬಲ ಮಗ್ಗುಲಿಗೆ ಬರುವಂಥ ಯಜ್ಞೋಪವೀತ ಅಥವಾ ಲಿಂಗ ಇರುತ್ತವೆ. ಕಾಲಿಗೆ ಮರದ ಹಾವುಗೆ ಇರುವುದೂ ಉಂಟು. ಗುರುಗಳು ಭಕ್ತಾದಿಗಳಿಗೆ ದರ್ಶನಕ್ಕೆ ಕುಳಿತುಕೊಳ್ಳುವ ಜಾಗ ಗುರುಪೀಠ. ಇದನ್ನು ಸಿಂಹಾಸನ, ಗಾದಿ ಎನ್ನುವುದೂ ಉಂಟು. ಅದರ ಮೇಲೆ ಜಿಂಕೆ ಅಥವಾ ಹುಲಿಯ ಚರ್ಮ, ಕಾವಿಯ ಅಥವಾ ಶುದ್ಧ ಬಿಳಿಯವಸ್ತ್ರ ಹಾಸಿರುತ್ತಾರೆ. ವಿಶೇಷ ಸಂದರ್ಭಗಳಲ್ಲಿ ಪೀಠಾರೂಢರಾದಾಗ ರತ್ನಖಚಿತ ಸುವರ್ಣ ಕಿರೀಟಗಳನ್ನು ಆದಿಚುಂಚನಗಿರಿ, ಚಿತ್ರದುರ್ಗ ಮುರುಘಾಮಠ, ಶೃಂಗೇರಿ, ರಂಭಾಪುರಿ ಮುಂತಾದ ಸ್ವಾಮಿಗಳು ಧರಿಸಿಕೊಂಡು ಜರತಾರಿ ಅಥವಾ ರೇಷ್ಮೆಯ ಉತ್ತರೀಯ ಹೊದಿಯುವುದುಂಟು.

ಪ್ರತಿಮಠದಲ್ಲೂ ಇಷ್ಟದೇವತಾಪೂಜೆ ಇರುತ್ತದೆ. ವೀರಶೈವ ಮಠಗಳಲ್ಲಿ ಹಿಂದಿನ ಗುರುಗಳ ಸಮಾಧಿ ಪೂಜೆಗೆ ಪ್ರಾಶಸ್ತ್ಯವಿದೆ. ವೈದಿಕ ಪಂಥದ ಮೈಸೂರಿನ ಪರಕಾಲಮಠ, ಉಡುಪಿಯ ಶ್ರೀಕೃಷ್ಣಮಠ, ಆದಿಚುಂಚನಗಿರಿಯ ಮಠ ಇತ್ಯಾದಿಗಳಲ್ಲೂ ಇಷ್ಟದೇವತಾರ್ಚನೆಯ ಜೊತೆಗೆ ಪೂರ್ವದ ಸ್ವಾಮಿಗಳ ಸಮಾಧಿಗೆ ಪೂಜೆ ಸಲ್ಲುತ್ತದೆ. ಇವುಗಳೆಲ್ಲಾ ಮಠದ ಆವರಣದಲ್ಲೇ ಇರುತ್ತವೆ. ಪ್ರತಿಮಠದಲ್ಲೂ ಸಾಮಾನ್ಯವಾಗಿ ಪೀಠಾಧ್ಯಕ್ಷರೇ ಪೂಜೆ ಸಲ್ಲಿಸುತ್ತಾರೆ. ಮಠಾಧಿಪತಿಗಳು ಪ್ರವಾಸದ ಕಾಲದಲ್ಲಿ ತಮ್ಮ ಇಷ್ಟದೇವತಾ ವಿಗ್ರಹಗಳನ್ನು ಸಾಮಾನ್ಯವಾಗಿ ಸಂಗಡವೇ ಒಯ್ಯುವವರಿದ್ದಾರೆ. ಮಠಗಳು ಪ್ರಥಮತಃ ಆಧ್ಯಾತ್ಮ ಕೇಂದ್ರಗಳು. ಧರ್ಮಬೋಧನೆ ಹಾಗೂ ಪ್ರಸಾರದ ಕೇಂದ್ರಗಳು. ಈ ಉದ್ದೇಶದ ಜೊತೆಗೆ ಇವು ಸ್ವಪಂಥದ ಕೇಂದ್ರಸ್ಥಾನಗಳೂ ಆಗಿದ್ದು ಸಾಕಷ್ಟು ಶಿಷ್ಯಸಂಪತ್ತನ್ನು ಹೊಂದಿರುತ್ತವೆ.

ಈ ಮಠಗಳಿಗೆ ನಡೆದುಕೊಳ್ಳುವ ಶಿಷ್ಯವರ್ಗಕ್ಕೆ ಮಠದ ಅಧಿಪತಿಗಳ ತೀರ್ಮಾನಗಳು ಎಲ್ಲ ಧಾರ್ಮಿಕ ಲೌಕಿಕ ವ್ಯವಹಾರಗಳಲ್ಲಿ ಪರಮ ಗಣ್ಯವಾಗಿರುತ್ತವೆ. ಮಠಗಳ ಶಿಷ್ಯ ವ್ಯಾಪ್ತಿ ಆಯಾ ಪಂಥ, ಸಮುದಾಯಗಳಿಗೆ ಸಂಬಂಧಿಸಿದಂತೆ ಇರುತ್ತದೆ. ಅಪರೂಪವಾಗಿ ಸೀಮಿತ ಭೌಗೋಳಿಕ ವ್ಯಾಪ್ತಿ ಇರುವುದರಿಂದ ಈಗಿನ ಅನೇಕ ಮಠಗಳು ಧರ್ಮ ಪ್ರಚಾರ ಕಾರ್ಯ ಮಾತ್ರವಲ್ಲದೆ ವಿದ್ಯಾಪ್ರಸಾರ ಇತ್ಯಾದಿ ಸಮಾಜ ಕಲ್ಯಾಣ ಕಾರ್ಯಗಳಲ್ಲಿಯೂ ಆಸಕ್ತಿವಹಿಸುತ್ತಿವೆ.

ಕರ್ನಾಟಕದಲ್ಲಿ ನಾನಾ ಮತ-ಪಂಥಗಳಿಗೆ ಸಂಬಂಧಿಸಿದ ಸಹಸ್ರಾರು ಮಠಗಳು ಇವೆ. ಅನೇಕ ಮಠಗಳು ಹಿಂದಿನ ರಾಜರು, ಶ್ರೀಮಂತರಿಂದ ಪ್ರೋತ್ಸಾಹ ಗಳಿಸಿಯೋ ಶಿಷ್ಯಸಮೂಹದ ನೆರವಿನಿಂದಲೊ ಸಾಕಷ್ಟು ಚರ, ಸ್ಥಿರ ಆಸ್ತಿಯನ್ನು ಹೊಂದಿವೆ. ಆದರೆ ಈ ವಿವಿಧ ಮಠಗಳಿಗೆ ಸಂಬಂಧಿಸಿದ ಐತಿಹಾಸಿಕ ಮತ್ತು ಸಮಾಜ ವೈಜ್ಞಾನಿಕ ಅಧ್ಯಯನ ಅಷ್ಟಾಗಿ ನಡೆದಿಲ್ಲ. ಹೆಚ್ಚಿನ ಮಠಗಳ ಬಗ್ಗೆ ಪ್ರಕಟಿತ ಮಾಹಿತಿಗಳೂ ಸಾಕಷ್ಟು ದೊರೆಯುವುದಿಲ್ಲ. ಆದರೂ ಪ್ರಸಿದ್ಧವಾಗಿರುವ ಕೆಲವು ಮಠಗಳ ಮಾಹಿತಿಗಳು ಸಿಗುತ್ತವೆ.

ಪ್ರಾಚೀನ ಕಾಲದ ಗುರುಕುಲ ಪದ್ಧತಿಯ ಶಿಕ್ಷಣ ಸಂಕುಚಿತ ಬುದ್ಧಿಯಿಂದ ಕೂಡಿದ್ದಾಗಿ, ಕೆಲವರಿಗೆ ಮಾತ್ರವೇ ಸೀಮಿತವಾಗಿದ್ದುದರಿಂದ, ಅದು ದೇಶ ಕ್ಷೇಮ ಭದ್ರತೆಗಳಿಗೆ ಅನುವಾಗಿರಲಿಲ್ಲ. ಬೌದ್ಧ ವಿಹಾರಗಳಲ್ಲಾಗಲಿ, ಜೈನ ಮಠಗಳಲ್ಲಾಗಲಿ ನೀಡಲಾಗುತ್ತಿದ್ದ ಶಿಕ್ಷಣವನ್ನು ಸಾರ್ವತ್ರಿಕವೆನ್ನುವಂತಿರಲಿಲ್ಲ. ರಾಜಮಹಾರಾಜ ಪುರೋಹಿತರಿಗಂತು ಸಾಮಾನ್ಯರ ಉದ್ಧಾರ ಬೇಕಿರಲಿಲ್ಲ. ಸಮುದಾಯ ವಿಂಗಡಣೆಯ ಮೂಲಕ ಒಡೆದು ಆಳುವುದೇ ಅವರ ಬದುಕಾಗುತ್ತದೆ; ಸಮಾಜದ ಅಜ್ಞಾನವೇ ಅವರ ಉಳಿವಿಗೆ ಬಂಡವಾಳವಾಗಿಸಿಕೊಂಡಿದ್ದರು.

೧. ಮಠಗಳ ಪ್ರಾಚೀನತೆ

ಭಾರತದ ಸಮಾಜ ಹಾಗೂ ಸಂಸ್ಕೃತಿ ವಿಶ್ವದಲ್ಲಿಯೇ ವಿಶಿಷ್ಟ ವೈವಿಧ್ಯತೆಯನ್ನು ಹೊಂದಿದೆ. ವೈವಿಧ್ಯತೆಯನ್ನು ಹೊಂದಿರುವ ಸಮಾಜದ ಆರೋಗ್ಯ ಅದರ ಎಲ್ಲ ಸಮುದಾಯಗಳಲ್ಲಿನ ವ್ಯಕ್ತಿಗಳ ಮನಸ್ಸಿನ ಸ್ವಾಸ್ಥ್ಯವನ್ನೇ ಅವಲಂಬಿಸಿರುತ್ತದೆ. ಈ ಮಾನಸಿಕ ಆರೋಗ್ಯ ಒಂದು ಬಲಿಷ್ಠ ಸಮಾಜ ನಿರ್ಮಾಣದ ಅಡಿಗಲ್ಲು. ಹೀಗಾಗಿ ಜನರ ಅರಿವನ್ನು ಹೆಚ್ಚಿಸುವ ಶಿಕ್ಷಣ ಬೇಕಾಗುತ್ತದೆ. ಇದನ್ನು ಮನಗಂಡೇ ನಮ್ಮ ಪ್ರಾಚೀನರು ಗುರುಕುಲಗಳ ಮೂಲಕ ಶಿಕ್ಷಣ ಕೊಡುತ್ತಿದ್ದರು. ವೇದ ಉಪನಿಷತ್ತು ದರ್ಶನ ಶಾಸ್ತ್ರಗಳನ್ನು ಕಲಿಸುತ್ತಿದ್ದ. ಗುರುಕುಲದ ಈ ಕಲ್ಪನೆಯ ಹಂದರದ ಮೇಲೆಯೇ ಮುಂದೆ ಅನೇಕ ಮಠಗಳು ಹುಟ್ಟಿ ಬೆಳೆದು ಬಂದವು. ಧಾರ್ಮಿಕ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ಈ ಮಠಗಳ ಪಾತ್ರ ಅತ್ಯಂತ ಗಮನಾರ್ಹವಾದುದು. ೧೩ ಮತ್ತು ೧೪ನೇ ಶತಮಾನಗಳಲ್ಲಿ ಧರ್ಮ, ವ್ಯಾಕರಣ, ನಾಟಕ, ಕಾವ್ಯ ಮೊದಲಾದ ವಿಷಯಗಳಲ್ಲಿ ಜ್ಞಾನ ಸಂಪಾದನೆಗೆ ಈ ಮಠಗಳ ಆದ್ಯತೆ ನೀಡಿದ್ದವು. ಆಯಾ ಜ್ಞಾನದ ಶಿಸ್ತುಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಕರಾರುವಕ್ಕಾಗಿ ನೀಡಲು ವೀರಶೈವ ಮಠದವರು ಓದಿಸೋಮಠ, ಟೀಕಿನ ಮಠ, ಟಿಪ್ಪಣಿ ಮಠ, ಓಲೆಮಠ, ಸಾಲಿಮಠ ಮುಂತಾಗಿ ತಮ್ಮ ಮಠಗಳನ್ನು ವಿಭಾಗಿಸುತ್ತಿದ್ದರು. ಇದರಿಂದ ಶಿಕ್ಷಣ ಮತ್ತು ಧರ್ಮ ಎರಡೂ ಒಟ್ಟಿಗೇ

ವಕ್ಕಿಗಳಿಗೆ ಸಿಗುತ್ತಿದ್ದವು. ವೈದಿಕ, ಜೈನ, ಶೈವ ಈ ಪ್ರಮುಖ ಧರ್ಮಗಳು ಧರ್ಮಾಚರಣೆಗಾಗಿ ಮಠಗಳನ್ನು ಕಟ್ಟಿದವು. ಮಠಗಳನ್ನು ಹೋಲುವ ಧರ್ಮಛತ್ರ, ವಿದ್ಯಾಕೇಂದ್ರ, ಆಧ್ಯಾತ್ಮಿಕ ಕೇಂದ್ರ, ವಿಹಾರ, ದೇವಾಲಯ ಮುಂತಾದವುಗಳು ವಿವಿಧ ಧರ್ಮಗಳಲ್ಲಿ ಹುಟ್ಟಿಕೊಂಡವು. ಅವುಗಳ ಮುಖ್ಯಸ್ಥರಾಗಿ ಧರ್ಮಗುರುಗಳು ನೈಷ್ಠಿಕ ಜೀವನವನ್ನು ನಡೆಸುತ್ತ ಆಯಾ ಧರ್ಮದ ಅನುಯಾಯಿಗಳಿಗೆ ಪಾರಮಾರ್ಥಿಕ ಮಾರ್ಗದರ್ಶನ ಮಾಡುತ್ತಲಿದ್ದರು. ಈ ಮಠಗಳು ಪ್ರಾಚೀನ ಕಾಲದಿಂದ ಇಂದಿನವರೆಗೂ ನಡೆದುಕೊಂಡು ಮಹತ್ತರ ಸಾಧನೆ ಮಾಡಿರುವುದನ್ನು ಕಾಣಬಹುದು. ಆದುದರಿಂದ ಅವುಗಳ ಪ್ರಾಚೀನತೆಯನ್ನು ಅರಿಯುವುದು ಅಗತ್ಯವಾಗಿದೆ.

ವೇದಪೂರ್ವ ಕಾಲದಲ್ಲಿ ಮಠಗಳಿದ್ದ ಬಗ್ಗೆ ಮಾಹಿತಿ ಅಸ್ಪಷ್ಟವಾಗಿದ್ದರೂ, ವೇದ ಕಾಲದಲ್ಲಿ ಮಠಗಳಿಲ್ಲದಿದ್ದರೂ, ಗುರುಕುಲಗಳು ಆಶ್ರಮಗಳು ಇದ್ದವು ಎಂಬುದು ಸ್ಪಷ್ಟವಾಗಿದೆ. "ವೇದೋತ್ತರ ಕಾಲದಲ್ಲಿ ಈ ಆಶ್ರಮಗಳೇ ಛತ್ರಗಳಾಗಿ, ಧರ್ಮಕಾರ್ಯಗಳ ಚಟುವಟಿಕೆಗಳ ಕೇಂದ್ರಗಳಾಗಿ ಮಾರ್ಪಾಟಾದಂತೆ ತೋರುತ್ತದೆ. ಕ್ರಿ.ಶ.೭-೮ನೇ ಶತಮಾನದ ವೇಳೆಗೆ ಬೌದ್ಧ ವಿಹಾರಗಳ ಜನಪ್ರಿಯತೆ ಹೆಚ್ಚಾದಾಗ, ವೈದಿಕ ಧರ್ಮದ ಪ್ರಚಾರಕ್ಕೆ ಮಠಗಳ ಸ್ಥಾಪನೆಯ ಅನಿವಾರ್ಯತೆಯನ್ನು ಮನಗಂಡು ಭಾರತಾದ್ಯಂತ ಮಠ-ಮಂದಿರಗಳು ಸ್ಥಾಪನೆಗೊಂಡಿರಬೇಕು. ಇಂತಹ ಮಠ ಮಂದಿರಗಳಿಗೆ ರಾಜ ಮಹಾರಾಜರು, ಮಾಂಡಲಿಕರು, ಗಣ್ಯ ಸಿರಿವಂತರು, ಭಕ್ತ ಮಹಾಜನರು ದಾನದತ್ತಿಗಳನ್ನು ಬಿಟ್ಟು ಪೋಷಿಸಿಕೊಂಡು ಬಂದರು. ಆಗಮಗಳ ಕಾಲಕ್ಕೆ ಬಂದರೆ ವೀರಶೈವ ಮಠಗಳ ಪರಿಕಲ್ಪನೆ ವೀರಾಗಮದಲ್ಲಿ ಹೆಚ್ಚಾಗಿ ವರ್ಣಿತವಾಗಿದೆ. ವೀರಾಗಮದಲ್ಲಿ 'ಮಠಶೈವ' 'ಮಸ್ಥಲ' ಎಂಬ ಪದಗಳು ವೀರಶೈವ ಮಠದ ಪರಿಕಲ್ಪನೆಗೆ ಸ್ಪಷ್ಟ ನಿರ್ದೇಶನ ನೀಡುತ್ತವೆ. ೧೨ನೇ ಶತಮಾನದಲ್ಲಿ ಬಸವಾದಿ ಶರಣರು ನಡೆಸಿದ ಉತ್ಕ್ರಾಂತಿಯ ಪರಿಣಾಮ ಮಠಗಳ ಪರಿಕಲ್ಪನೆ ಇನ್ನಷ್ಟು ವಿಸ್ತಾರಗೊಂಡು, ಕಾಲಕ್ಕೆ ತಕ್ಕಂತೆ ಕೆಲವು ಮಠಗಳು ವೇದ, ಶಿವಾಗಮ, ಉಪನಿಷತ್ ಮುಂತಾದವಕ್ಕೆ ಮಹತ್ವಕೊಟ್ಟರೆ ಇನ್ನು ಕೆಲವು ಶಿವಶರಣರ ವಚನ-ವಿಚಾರಧಾರೆಗಳಿಗೆ ಮಹತ್ವ ಕೊಟ್ಟು ಸಾಗಿಬಂದವು"[೨](ಸಂತೆಬೆನ್ನೂರು ಸುಮತೀಂದ್ರನಾಡಿಗ್; ೨೦೦೮:೯-೭೦).

ಹಿಂದೂ ಧರ್ಮದಲ್ಲಿ ವೈದಿಕ ಸಂಪ್ರದಾಯವು ಪ್ರಬಲವಾದುದು. ಈ ಸಂಪ್ರದಾಯಕ್ಕೆ ಪ್ರತಿಭಟನೆಯ ಸ್ವರೂಪದಲ್ಲಿ ಆಗಮಿಕ ಸಂಪ್ರದಾಯವು ಅಸ್ತಿತ್ವಕ್ಕೆ ಬಂದಿತು. ಈ ಆಗಮಿಕ ಸಂಪ್ರದಾಯದ ಮಠಗಳು ಪುರಾಣ ಕಾಲಕ್ಕಿಂತಲೂ ಪೂರ್ವದಲ್ಲಿ ಅಸ್ತಿತ್ವದಲ್ಲಿದ್ದವೆಂಬುದಾಗಿ ಕೆಲವರು ವಾದಿಸುತ್ತಾರೆ. ಆಗಮಿಕ ಸಂಪ್ರದಾಯದಲ್ಲಿ ಪ್ರಸಿದ್ಧವೆನಿಸಿದ ಪಂಚಪೀಠಗಳೆಂದು ಹೆಸರಾದ ರಂಭಾಪುರಿ, ಉಜ್ಜೀಯನಿ, ಕೇದಾರ, ಶ್ರೀಶೈಲ ಮತ್ತು ಕಾಶಿ ಇವುಗಳ ಆಚಾರ್ಯರು

ಸ್ಥಾಪಿಸಿದ ಮಠಗಳು ಶಂಕರಾಚಾರ್ಯರಿಗಿಂತ ಪೂರ್ವದಲ್ಲಿಯೇ ಸ್ಥಾಪನೆಯಾಗಿದ್ದವೆಂಬ ಅಭಿಪ್ರಾಯವನ್ನು ಕೆಲವರು ಮಂಡಿಸುವರಾದರೂ ಈ ವಿಷಯ ಚರ್ಚಾಸ್ಪದವಾಗಿದೆ. ಶಂಕರಚಾರ್ಯರು ಸ್ಥಾಪಿಸಿದ ಮಠಗಳ ಬಗೆಗೆ ಕಾಲದ ಖಚಿತತೆ ಇದೆ. ಶಂಕರಾಚಾರ್ಯರು ಮಠಗಳನ್ನು ಸ್ಥಾಪಿಸುವಲ್ಲಿ ಧಾರ್ಮಿಕ ತತ್ತ್ವವಡಗಿದೆ.

ಧಾರ್ಮಿಕ ತಳಹದಿಯ ಮೇಲೆ ನಮ್ಮ ನಾಡು, ಅದನ್ನಾಳುವ ಪ್ರಭುಗಳು, ಸಾಮ್ರಾಟರು, ದೊರೆಗಳು, ರಾಜರು, ನಾಯಕರು, ಗುರು ಮಠಗಳಿಗೆ ಅದರ ಪಟ್ಟಾಧಿಕಾರಿಗಳಿಗೆ ಮಹತ್ವ ನೀಡಿ, ರಾಜ್ಯಾಡಳಿತದಲ್ಲಿ ಅವರ ಸಲಹೆ, ಮಾರ್ಗದರ್ಶನ, ಸೂಚನೆ ಪಡೆದು ಅದರಂತೆ ಆಡಳಿತ ನಡೆಸಿದರು. ಹೀಗಾಗಿ ಗುರು ಮಠಗಳು ರಾಜಮಾನ್ಯರಾಗಿ ಗುರುತಿಸಲ್ಪಟ್ಟರು. ಪರ್ಯಾಯವಾಗಿ ಗುರು ಮಠಗಳ ಅಭಿವೃದ್ಧಿಗೂ ರಾಜಾಶ್ರಯ ಅತ್ಯವಶ್ಯಕವಾಯಿತು. ನಮ್ಮ ನಾಡಿನ ಇತಿಹಾಸವನ್ನು ಪರಿಶೀಲಿಸಿದರೆ ಅನೇಕ ರಾಜವಂಶಗಳು ಒಂದಲ್ಲೊಂದು ಗುರುಪೀಠಗಳಿಗೆ ಮಾನ್ಯತೆ ನೀಡಿ, ಅವರನ್ನು ರಾಜಗುರುಗಳಾಗಿ ನೋಡಿಕೊಂಡಿರುವುದಲ್ಲದೆ, ಇತರೇ ಗುರು ಪೀಠಗಳಿಗೂ ಮಾನ್ಯತೆ ನೀಡಿ ಅವುಗಳಿಗೂ ಶಾಸನಗಳ ಮೂಲಕ ಅನೇಕ ದತ್ತಿ ದಾನ ನೀಡಿ ಅವುಗಳ ಪುರೋಭಿವೃದ್ಧಿಗೂ ಸಹಕಾರವಾಗಿದ್ದವೆಂಬ ವಿಚಾರ ತಿಳಿದು ಬರುತ್ತದೆ.

ಕರ್ನಾಟಕದಲ್ಲಿ ಇಂತಹ ಮಠಗಳ ದೊಡ್ಡ ಪಟ್ಟಿಯೇ ಇದೆ. ಹಳ್ಳಿಗೊಂದು ಗುಡಿ, ನಾಡಿಗೊಂದು ಗಡಿ ಇದ್ದಂತೆ, ಊರಿಗೊಂದು ಮಠ ನಮ್ಮಲ್ಲಿವೆ. ಹಿಂದೆಯೇ ಹೇಳಿದಂತೆ ವೀರಶೈವ ಮಠಗಳಲ್ಲಿ ಗುರುಪರಂಪರಾ ಮಠ-ವಿರಕ್ತ ಪರಂಪರಾ ಮಠ ಎಂಬ ಎರಡು ಮುಖ್ಯ ಪ್ರಬೇದಗಳು ಸಾಗಿ ಬಂದಿವೆ. ವೀರಶೈವರ ಜನಸಂಖ್ಯೆ ನಮ್ಮ ರಾಜ್ಯದಲ್ಲಿ ಹೆಚ್ಚಾಗಿರುವಂತೆಯೇ ಅವರ ಮಠಗಳ ಸಂಖ್ಯೆಯೂ ಅಷ್ಟೇ ಹೆಚ್ಚಾಗಿದ್ದು ಅವುಗಳಲ್ಲಿ ವೈವಿಧ್ಯವಿದೆ[೨](ಸಂತೆಬೆನ್ನೂರು ಸುಮತೀಂದ್ರನಾಡಿಗ್; ೨೦೦೮:೭೧).

ಕರ್ನಾಟಕದ ಇತಿಹಾಸದಲ್ಲಿ ಈ ಮಠ ಸಂಸ್ಥೆಯ ಬೆಳವಣಿಗೆಯನ್ನು ಗುರುತಿಸುವ ಪ್ರಯತ್ನಗಳು ನಡೆದಿಲ್ಲ. ಭಾರತದಲ್ಲಿ ಕ್ರಿ.ಪೂ.ಐದನೆಯ ಶತಮಾನದಷ್ಟು ಪುರಾತನ ಕಾಲದಲ್ಲಿ ಗುರುಕುಲಗಳಿದ್ದವು. ರಾಮಾಯಣದಲ್ಲಿ ಕರ್ನಾಟಕದ ನಾನಾ ಸ್ಥಳಗಳಲ್ಲಿ ಋಷಿ ಮುನಿಗಳು ತಪಸ್ಸು ಮಾಡಿಕೊಂಡಿದ್ದರೆಂದು ತಿಳಿದು ಬರುತ್ತದೆ. ಇವುಗಳ ಜೊತೆಗೆ ಬೌದ್ಧವಿಹಾರಗಳು, ಸಂಘರಾಮಗಳು, ಜೈನವಸತಿಗಳೂ(ಬಸದಿ-ಬಸ್ತಿ) ಇದ್ದುವು. ಬೌದ್ಧ ಮತ್ತು ಜೈನರ ವಿಹಾರಗಳು ಸುಮಾರು ಇಂದಿನ ಮಠದ ಸ್ವರೂಪವನ್ನೇ ಹೊಂದಿದ್ದವು. ಕ್ರಿಸ್ತಶಕ ಆರಂಭದ ಆಸುಪಾಸಿನ ಶತಮಾನಗಳಲ್ಲಿ ಶ್ರವಣಬೆಳಗೊಳ ಜೈನಧಾರ್ಮಿಕ ಕೇಂದ್ರವಾಗಿತ್ತೆಂದು ಜೈನ ಗ್ರಂಥಗಳಿಂದಲೂ ಕ್ರಿ.ಪೂ.೩ನೆಯ

ಶತಮಾನದಲ್ಲಿಯೇ ಅಶೋಕ ಮಹಿಷಮಂಡಲಕ್ಕೆ ಧರ್ಮಪ್ರಚಾರಕರನ್ನು ಕಳುಹಿಸಿದನೆಂದು ಬೌದ್ಧ ಮೂಲಗಳಿಂದಲೂ ತಿಳಿದುಬರುತ್ತದೆ.

ಪ್ರಾಚೀನ ಕರ್ನಾಟಕದಲ್ಲಿ ವಿದ್ಯಾಭ್ಯಾಸವನ್ನು ನೀಡುತ್ತಿದ್ದ ವಿದ್ಯಾಕೇಂದ್ರಗಳೆಂದರೆ ಅಗ್ರಹಾರ, ಬ್ರಹ್ಮಪುರಿ, ದೇವಸ್ಥಾನ ಮತ್ತು ಘಟಿಕಾಸ್ಥಾನಗಳು. ವಿದ್ಯಾದಾನ ಮಾಡುತ್ತಿದ್ದ ದೇವಾಲಯಗಳನ್ನು ಮಠಗಳೆಂದೂ ಕರೆಯಲಾಗುತ್ತಿತ್ತು. ಲಕುಲೀಶ–ಪಾಶುಪತ, ಕಾಳಮುಖರು ಕರ್ನಾಟಕಕ್ಕೆ ಬಂದು ದೇವಾಲಯಗಳ ನಿರ್ಮಾಣ ಮಾಡಿ, ಅವುಗಳ ಸ್ಥಾನಪತಿಗಳಾದ ಮೇಲೆ ದೇವಾಲಯಗಳನ್ನು ವಿದ್ಯಾಕೇಂದ್ರಗಳನ್ನಾಗಿ ಮಾರ್ಪಡಿಸಿದರು. ಈ ಶೈವ ಮುನಿಗಳು ಅಪಾರ ಜ್ಞಾನಿಗಳಾಗಿದ್ದು ಪಾಂಡಿತ್ಯದ ಮೇರು ಶಿಖರಗಳಾಗಿ ತಮ್ಮ ಜ್ಞಾನ–ಸದಾಚಾರ, ಸತ್ ಶೀಲಗಳ ಮೂಲಕ ರಾಜಮಹಾರಾಜರುಗಳೂ ಅವರ ಕಾಲುಗಳನ್ನು ತೊಳೆದು ಹಲವಾರು ದಾನದತ್ತಿಗಳನ್ನು ಬಿಟ್ಟ ನಿದರ್ಶನಗಳು ಶಾಸನಗಳಲ್ಲಿ ಸಿಗುತ್ತವೆ. ಕೋಡಿಮಠ ಇದಕ್ಕೆ ಒಳ್ಳೆಯ ಉದಾಹರಣೆಯಾಗಿದೆ. ಕೋಡಿಮಠದ ಕಾಳಾಮುಖ ಗುರುಗಳು ದೇವಸ್ಥಾನವನ್ನು ತಮ್ಮ ಶೈಕ್ಷಣಿಕ ಹಾಗೂ ಸಾಮಾಜಿಕ ಚಟುವಟಿಕೆಗಳ ಕೇಂದ್ರವನ್ನಾಗಿ ಮಾಡಿಕೊಂಡರು. ಈ ದೇವಸ್ಥಾನ–ಮಠಗಳ ಗುರುಗಳು ಅಥವಾ ಸ್ಥಾನಪತಿಗಳು ರಾಜಗುರುಗಳೆಂದು ಮಾನ್ಯರಾಗುವ ಮೂಲಕ ಸಹಜವಾಗಿ ಸಾಮಾಜಿಕ ಪ್ರತಿಷ್ಠೆಯನ್ನು ಪಡೆದರು. ಸಂಪತ್ತು ಹಾಗೂ ಅಧಿಕಾರಿಗಳು ನೆಲೆಗೊಳ್ಳುವ ಮೂಲಕ ಶೈವರ ದೇವಸ್ಥಾನ–ಮಠಗಳು ಅಗ್ರಹಾರ ಸಂಸ್ಕೃತಿಯ ಒಂದು ಭಾಗವಾಗುವ ಬದಲು ತಮ್ಮ ಪ್ರತ್ಯೇಕತೆಯನ್ನು ಕಾಯ್ದುಕೊಂಡವು. ವೇದಪಾರಂಗತರಾಗಿ, ವರ್ಣವ್ಯವಸ್ಥೆಯನ್ನು ಒಪ್ಪಿಕೊಂಡೂ ಎಲ್ಲಾ ಸಮುದಾಯಗಳವರಿಗೂ ಸಮಾನ ಅವಕಾಶಗಳನ್ನು ಕಲ್ಪಿಸಿಕೊಟ್ಟಿದ್ದು ಕಾಳಮುಖ ಶೈವ ಸಂಸ್ಕೃತಿಯ ವೈಶಿಷ್ಟ್ಯವೆನ್ನಬಹುದು”(ಡಾ.ಎಸ್.ವಿದ್ಯಾಶಂಕರ; ೨೦೦೮:೧೬೬–೧೬೭).

ಬೌದ್ಧರ ಕಾಲದಲ್ಲಿ ವಿದ್ಯಾಭ್ಯಾಸವು ಸಾಮಾನ್ಯವಾಗಿ ಬೌದ್ಧವಿಹಾರಗಳಲ್ಲಿ ನಡೆಯುತ್ತಿತ್ತು. ಕ್ರಿ.ಶ.೭ನೇ ಶತಮಾನದಲ್ಲಿ ೩ನೇ ಪುಲಿಕೇಶಿಯ ರಾಜ್ಯದಲ್ಲಿ ೧೦೦ ಬೌದ್ಧ ವಿಹಾರಗಳಿದ್ದು, ಅವುಗಳಲ್ಲಿ ೫೦೦೦ ಬೌದ್ಧ ಯತಿಗಳು ವಿದ್ಯಾಭ್ಯಾಸ ಪಡೆಯುತ್ತಿದ್ದರೆಂದು ಹ್ಯೂಯೆನ್‌ತ್ಸಾಂಗ್‌ನು ತಿಳಿಸಿದ್ದಾನೆ. ಬೌದ್ಧರ ಕಾಲದ ವಿಹಾರಗಳಲ್ಲಿ ಒಂದು ಧಾರವಾಡ ಜಿಲ್ಲೆಯ ಡಂಬಳ(ಧರ್ಮ ಪೊಳಲ್)ದಲ್ಲಿ ಕ್ರಿ.ಶ.೧೦೯೫ರ ವರೆಗೂ ಹಾಗೂ ಬಳ್ಳಿಗಾಮೆ ಶಿಕ್ಷಣ ಕೇಂದ್ರ ಕ್ರಿ.ಶ.೧೨ರ ವರೆಗೂ ಅಸ್ತಿತ್ವದಲ್ಲಿತ್ತೆಂದು ತಿಳಿದಗು ಬರುತ್ತದೆ. ಜೈನರ ಕಾಲದಲ್ಲಿ ಬಸದಿ, ಚೈತ್ಯಾಲಯಗಳಲ್ಲಿ ವಿದ್ಯಾಭ್ಯಾಸ ನಡೆಯುತ್ತಿತ್ತು.

ಡಾ.ಮೋರಿಸ್ ಅವರು "ವಿದ್ಯಾಪಾರಂಗತರಾದ ಬ್ರಾಹ್ಮಣರ ವಾಸವಾಸ್ಥನವೇ ಬ್ರಹ್ಮಪುರಿ ಎಂದು ಹೇಳಿದ್ದಾರೆ. ಅಗ್ರಹಾರಗಳು ಸ್ವತಂತ್ರ ಗ್ರಾಮಗಳಾಗಿದ್ದರೆ ಬ್ರಹ್ಮಪುರಿ ಒಂದು ದೊಡ್ಡ ಊರಿನಲ್ಲಿದ್ದು ಅಗ್ರಹಾರದ ಬ್ರಾಹ್ಮಣರು ಮಾಡುವ ಕೆಲಸವನ್ನೇ ಮಾಡುವ ಹಾಗೂ ವಿದ್ವಾಂಸರು ವಾಸ ಮಾಡುತ್ತಿದ್ದ ಬ್ರಾಹ್ಮಣರ ಬೀದಿಗಳಾಗಿದ್ದವು. ದೇವಾಲಯಗಳ ಪರಿಸರದಲ್ಲಿ ಮಠಗಳಿದ್ದು ಅಲ್ಲಿ ಗುರುವೂ ಶಿಷ್ಯರೂ ಕೂಡಿಯೇ ಇರುತ್ತಿದ್ದರು. ಶೈವಧರ್ಮ ಪ್ರವರ್ಧಮಾನಕ್ಕೆ ಬಂದ ಕಾಲದಲ್ಲಿ ಇಂತಹ ಅಗ್ರಹಾರಗಳನ್ನು 'ಶಿವಪುರಿ'ಗಳೆಂದು ಕರೆದರು. ಬೆಳಗಾವಿ ಜಿಲ್ಲೆಯ ಸೌಂದತ್ತಿ ತಾಲೂಕಿನ ಮುನವಲ್ಲಿ(ಮುನೋಳಿ) ತಿಳಿದು ಬರುತ್ತದೆ. ಈ ಬ್ರಹ್ಮಪುರಿಗಳಲ್ಲಿ ಅಧ್ಯಾಪನ ಅಧ್ಯಯನಗಳಲ್ಲಿ ತೊಡಗಿದ್ದ ಅಧ್ಯಾಪಕರು, ವಿದ್ಯಾರ್ಥಿಗಳ ನಿರ್ವಹಣೆಗಾಗಿ ಉದಾರ ಭೂದಾನ, ಧನ, ಧ್ಯಾಗಳನ್ನು ರಾಜನು ನೀಡುತ್ತಿದ್ದನೆಂಬ ಬಗ್ಗೆ ಶಾಸನಗಳಲ್ಲಿ ಉಲ್ಲೇಖಗಳಿವೆ"(ಶ್ರೀನಿವಾಸರಾವ್.ಎಸ್.ವಿ., ೧೯೯೯:೧೭೨-೧೭೩).

ನಾಗಮಂಗಲ ತಾಲ್ಲೂಕಿನ ಆದಿಚುಂಚನಗಿರಿಯಲ್ಲಿರುವ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಪ್ರಾಚೀನ ಮಠಗಳಲ್ಲೊಂದು. ಶಿವಮೊಗ್ಗ ಜಿಲ್ಲೆಯ ಹುಮಚದ ಜೈನಮಠ ಎಂಟನೆಯ ಶತಮಾನದಲ್ಲಿ ಜಿನದತ್ತರಾಯನೆಂಬುವನು ಸ್ಥಾಪಿಸಿದ್ದೆಂದು ಪ್ರತೀತಿ. ಇಲ್ಲಿಯ ಸ್ವಾಮಿಗಳಿಗೆ ದೇವೇಂದ್ರಕೀರ್ತಿ ಭಟ್ಟಾರಕರೆಂಬ ಸಾಮಾನ್ಯ ನಾಮಾಂಕಿತವಿದೆ. ಈಗಿನ ಶ್ರವಣಬೆಳಗೊಳದ ಮಠವನ್ನು ಗಂಗರಸ ಮಂತ್ರಿ ಚಾವುಂಡರಾಯ ೯೮೩ರಲ್ಲಿ ಸ್ಥಾಪಿಸಿದ. ೧೧೧೭ರಿಂದ ಇಲ್ಲಿಯ ಪೀಠಾಧಿಕಾರಿಗಳಿಗೆ ಚಾರುಕೀರ್ತಿ ಪಂಡಿತಾಚಾರ್ಯರೆಂಬ ಹೆಸರಿದೆ. ಶಂಕರಾಚಾರ್ಯರು ಭಾರತದ ನಾಲ್ಕು ಮೂಲೆಗಳಲ್ಲೂ ಸ್ಥಾಪಿಸಿದ ನಾಲ್ಕು ಪ್ರಸಿದ್ಧ ಪೀಠಗಳಲ್ಲಿ ಶ್ರೀ ಶೃಂಗೇರಿ ಶಾರದಾಪೀಠವೂ ಒಂದು.

ಅಖಿಲ ಭಾರತ ವ್ಯಾಪ್ತಿಯಿರುವ ಮಠಗಳಲ್ಲಿ ಇದಕ್ಕೆ ಪ್ರಥಮಸ್ಥಾನ ಸಲ್ಲುತ್ತದೆ. ಶ್ರೀವೈಷ್ಣವ ಮಠಗಳಲ್ಲಿ ಮೈಸೂರು ನಗರದ ಶ್ರೀ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಮಠ ಪ್ರಸಿದ್ಧವಾದುದು. ಶ್ರೀ ರಾಮಾನುಜ ವೇದಾಂತ ದೇಶಿಕ ಮೂಲದ ಇದು ೧೩೬೦ರಲ್ಲಿ ಕಂಚಿಯಲ್ಲಿ ಸ್ಥಾಪಿತವಾಯಿತು. ಯದುರಾಯರು ಮತ್ತು ಕೃಷ್ಣರಾಯರ ಕಾಲದಲ್ಲಿ ಶ್ರೀರಂಗಪಟ್ಟಣದ ಹತ್ತಿರ ಸ್ಥಾಪಿತವಾಗಿ ಇತ್ತೀಚಿಗೆ ಮೈಸೂರಿಗೆ ವರ್ಗವಾಯಿತು.

ಎಂಟನೆಯ ಶತಮಾನದ ಕೊನೆಯವರೆಗೂ ಜೈನ, ಬೌದ್ಧ, ಸನ್ಯಾಸಿಗಳಲ್ಲದೆ, ಕಾಳಾಮುಖರು, ಕಾಪಾಲಿಕರು, ಪಾಶುಪತರೂ, ಶಿವಾಲಯಗಳಲ್ಲಿ ವಾಸಿಸುತ್ತಿದ್ದರು. ಆದರೆ, ಮಠಗಳ ಅಗತ್ಯವನ್ನು ಗ್ರಹಿಸಿ ಇಂಡಿಯಾ ದೇಶದ ನಾಲ್ಕು ದಿಕ್ಕುಗಳಲ್ಲಿಯೂ ಮಠಗಳನ್ನು ಸ್ಥಾಪಿಸಿದ ಯಶಸ್ಸು

ಶ್ರೀಶಂಕರಾಚಾರ್ಯರಿಗೆ ಹೋಗುತ್ತದೆ. ಹಿಂದೂ ಧರ್ಮದ ಹೆಸರಿನಲ್ಲಿ ಕಾಣಿಸಿಕೊಂಡಿದ್ದ ಕೆಟ್ಟ ಪದ್ಧತಿಗಳನ್ನು ನಿವಾರಿಸುವುದಲ್ಲದೆ, ಹಿಂದೂ ಧರ್ಮದ ತತ್ತ್ವಗಳನ್ನು ಜನರಿಗೆ ತಿಳಿಸಲು ಅನೇಕ ಸ್ಥಳಗಳಲ್ಲಿ ಮಠಗಳು ಸ್ಥಾಪಿತವಾದವು. ದ್ವಾರಕಿ, ಪುರಿ, ಬದರಿ, ಶೃಂಗೇರಿ, ಹರಿದ್ವಾರ, ವೃಂದಾವನ, ಪ್ರಯಾಗ, ಕಾಶಿ ಅಥವಾ ಮಹಂತ ಎಂದು ಕರೆಯುತ್ತಿದ್ದರು. ಜೋಗೇಂದ್ರ ಚಂದ್ರ ಘೋಷರು ತಿಳಿಸುವಂತೆ "ಬೌದ್ಧ ಧರ್ಮದ ಮಾದರಿಯ ಮೇಲೆ ಮಠಗಳು ಸ್ಥಾಪಿತವಾದವು. ಇಲ್ಲಿ ವೇದಾಂತ ತತ್ತ್ವಗಳ ಅಧ್ಯಯನವು ಪ್ರಶಾಂತ ವಾತಾವರಣದಲ್ಲಿ ಜರುಗುತ್ತಿತ್ತು. ಇಂಡಿಯಾ ದೇಶದ ಮಧ್ಯಮ ಯುಗದಲ್ಲಿ ದೇವಸ್ಥಾನಗಳು, ಮಠಗಳು, ಜ್ಞಾನಪ್ರಸಾರದ ಕೇಂದ್ರಗಳಾಗಿದ್ದವು. ವಿದ್ಯಾಕೇಂದ್ರಗಳಾಗಿದ್ದವು. ವಿದ್ಯೆಯೆಲ್ಲವೂ ಬಹುತೇಕವಾಗಿ ಧಾರ್ಮಿಕ ವಿಚಾರಗಳಿಗೆ ಸೀಮಿತವಾಗಿತ್ತು. ಮಠಗಳ ಕಾರ್ಯಗಳು ಪ್ರಮುಖವಾಗಿ ಎರಡು ಮೊದಲನೆಯದಾಗಿ ಪರಂಪರಾಗತವಾಗಿ ಬಂದ ಹಿಂದೂ ಧರ್ಮದ ವಿವಿಧ ಉದ್ಗ್ರಂಥಗಳ ಅಧ್ಯಯನ. ಎರಡನೆಯದಾಗಿ ಹಿಂದೂ ಧರ್ಮದ ತತ್ತ್ವಗಳ ವ್ಯವಸ್ಥಿತ ಪ್ರಚಾರ. ಇವಲ್ಲದೆ ಮಠಕ್ಕೆ ಬಂದ ಅತಿಥಿಗಳನ್ನು ಸತ್ಕರಿಸುವ ಸಂಪ್ರದಾಯವೂ ಕಾಣಬರುತ್ತದೆ"[೨](ಸದಾಶಿವಯ್ಯ ಹೆಚ್.ಎಂ., ೧೯೮೪:೯೯) ಈ ಮಠಗಳು ಆಯಾ ಧರ್ಮಕ್ಕೆ ಸಂಬಂಧಿಸಿದಂತೆ ಈಗಲೂ ಕಾರ್ಯೋನ್ಮುಖವಾಗಿ ಸಮಾಜದ ಮೇಲೆ ತಮ್ಮ ಪ್ರಭಾವ ಬೀರುವುದರೊಂದಿಗೆ ಸಮಾಜದ ಹಿಡಿತವನ್ನು ಹೊಂದಿವೆ.

ಬಸವೇಶ್ವರರ ಕಾಲದಲ್ಲಿ ಕಲ್ಯಾಣದಲ್ಲಿದ್ದ ಅನುಭವ ಮಂಟಪ ವೀರಶೈವ ಮಠಗಳಿಗೆ ಮೊದಲ ಚಿಲುಮೆ. ವೀರಶೈವ ಧಾರ್ಮಿಕ ಕ್ರಾಂತಿ ರಾಜಕೀಯ ಆಂದೋಳನಕ್ಕೆ ಕಾರಣವಾಗಿ ಅನೇಕ ಶರಣರು ಕಲ್ಯಾಣವನ್ನು ಬಿಟ್ಟರು. ಇಂಥ ಮೂರು ಸಾವಿರ ಶರಣರು ಮಾಡಿಕೊಂಡ ಧಾರ್ಮಿಕ ಕೇಂದ್ರ ಈಗಿನ ಹುಬ್ಬಳ್ಳಿಯ ಮೂರುಸಾವಿರ ಮಠವಾಯಿತೆನ್ನಲಾಗಿದೆ. ಚಿತ್ರದುರ್ಗದ ಶ್ರೀ ಚಿನ್ಮೂಲಾದ್ರಿ ಬೃಹನ್ಮಠವು ಮೊದಲು ಸುಮಾರು ಇಪ್ಪತ್ತೈದು ಜನ ಸ್ವಾಮಿಗಳ ಕಾಲದಲ್ಲಿ ನಿಗದಿಯಾದ ಸ್ಥಳದಲ್ಲಿ ನಿಲ್ಲಲಾಗದೆ ಚರಮಠವಾಗಿದ್ದುದು ಚಿತ್ರದುರ್ಗದ ಭರಮನಾಯಕನ ಕಾಲದಲ್ಲಿ ಪ್ರೋತ್ಸಾಹ ಸಿಕ್ಕಿ ಅಲ್ಲಿ ನೆಲೆಯಾಗಿ ನಿಂತಿತೆನ್ನಲಾಗಿದೆ.

೧೨ನೇ ಶತಮಾನದ ಶರಣರ ಮಠದ ಪರಿಕಲ್ಪನೆ ಹೀಗಿದೆ:

"ತನ್ನ ಮಠಕ್ಕೆ ತಾ ಬಹಡೆ ಮುನಿಸುಂಟೆ?
ಕೂಡಲಸಂಗನ ಶರಣರ ಮನೆಯ ಬಾಗಿಲುಗಾಹಿ ನಾನಾಗಿರ್ದು
ಕರ್ತರು ಗೃಹಕ್ಕೆ ಬಂದಡೆ ಬೇಕು ಬೇಡೆನ್ನೆ"[೨](ಡಾ.ಆರ್.ಸಿ.ಹಿರೇಮಠ:೧೩೩).

ಪ್ರಸ್ತುತದಲ್ಲಿ ಮಠ–ಮನೆ–ಗೃಹ ಮೂರು ಶಬ್ದಗಳೂ ಬಳಕೆಯಾಗಿವೆ. ಜೊತೆಗೆ ಅವುಗಳು ವಾಸದ ಅರ್ಥವನ್ನು ಸೂಚಿಸುತ್ತವೆ.

"ಭಕ್ತನ ಮಠವೆಂದು ಮುನ್ನವೆ ಅಱಿದಱಿದು ಬಂದು
ಮತ್ತೊಂದ ಮತ್ತೊಂದ ನೆನೆವರೆ?"[೨೮](ಡಾ.ಆರ್.ಸಿ.ಹಿರೇಮಠ:೧೩೩).

ಹಡಪದಪ್ಪಣ್ಣನ ಈ ವಚನದಲ್ಲಿ ಮಠವೆಂದರೆ ಮನೆಯೆಂಬ ಅರ್ಥವಿದೆ.

"ಲಿಂಗಾರ್ಚನೆಯ ಮಾಡುವೆನಯ್ಯ
ಜಂಗಮ ಮಠಕ್ಕೆ ಬರಬೇಕೆಂದು
ಆ ಜಂಗಮವೆನ್ನ ಮಠಕ್ಕೆ ಬಂದಂಡೆ
ಲಿಂಗಾರ್ಚನೆಯ ಮಾಡಿ ಜಂಗಮಾರ್ಚನೆಯ ಮಾಡುವೆನು"[೨೯](ಡಾ.ಆರ್.ಸಿ.ಹಿರೇಮಠ:೧೪೦).

ಚೆನ್ನಬಸವಣ್ಣನವರು ತಮ್ಮ ವಚನದಲ್ಲಿ ಮಠದ ಕುರಿತು ಈ ರೀತಿ ಹೇಳುತ್ತಾರೆ.

"ಎರಡು ಲಕ್ಷ ಎಂಬತ್ತೈದು ಸಾವಿರದ ಏಳುನೂರ ಇಪ್ಪತ್ತು
ದಾಸೋಹದ ಮಠಂಗಳು"[೩೦](ಡಾ.ಆರ್.ಸಿ.ಹಿರೇಮಠ:೧೧೭).

ಶರಣರ ಪರಿಕಲ್ಪನೆಯಲ್ಲಿ ಮಠದ ಅರ್ಥ ವ್ಯಾಪಕವಾದುದಾಗಿದೆ.

"ಜಡರುಗಳ ಮನದ ಕತ್ತಲೆಯ ಕಳೆಯಬೇಕೆಂದು
ಕಟ್ಟಿತ್ತು ಕಲ್ಯಾಣದಲ್ಲಿ ಮಹಾಮಠವು"[೩೧](ಡಾ.ಆರ್.ಸಿ.ಹಿರೇಮಠ:೩೦೧).

ಎಂಬ ಚೆನ್ನಬಸವಣ್ಣನವರ ವಚನದಲ್ಲಿ ಮಠವೆಂದರೆ, 'ಮಹಾಮನೆ' ಅಥವಾ 'ಅನುಭಾವ ಮಂಟಪ' ಎಂಬರ್ಥದಲ್ಲಿದ್ದು, ಶರಣರ ಸಾಮೂಹಿಕ ವೈಚಾರಿಕ ಚರ್ಚೆಗಳ ಕೇಂದ್ರವಾಗಿತ್ತೆಂದು ತಿಳಿಯಲವಕಾಶವಿದೆ.

ಶಿವಶರಣರ ಜೀವನ ಚರಿತ್ರೆಗಳನ್ನು ಕಾವ್ಯವನ್ನಾಗಿಸಿದ ಶಿವಕವಿಗಳ ದೃಷ್ಟಿಯಲ್ಲಿ ಮಠವೆಂದರೆ ಮಹಾತ್ಮರ, ಭಕ್ತರ ವಾಸಸ್ಥಾನ, ಪವಿತ್ರಸ್ಥಾನ ಎಂದು ಭಾವಿಸಲಾಗಿದೆ.

'ಜಡರುಗಳಿರಾ ತೊಲಗಿ ಭೊ! ಎನುತಡಿಗಡಿಗೆ ಜಯ
ಘಂಟಿಯನು ಹೊಯಿದು ಎಡೆಗಡೆಗೆ ಸಾರುತ್ತ ಶರಣನು
ಮಠಕೆ ನಡೆತಂದು ಮೃದುವಾಗಿ ಘಟ್ಟಿಸಿ'[೩೨](ಡಾ.ಆರ್.ಸಿ.ಹಿರೇಮಠ:೧೯೭೧).

೨. ಮಠಗಳ ಸ್ವರೂಪ

ಮಠಗಳ ಪ್ರಾಚೀನತೆ ಹಾಗೂ ಅಸ್ತಿತ್ವ ಕುರಿತಂತೆ ಹಲವಾರು ಶಾಸನಗಳು ಆಗಿನ

ಮಠಗಳ ಸ್ವರೂಪವನ್ನು ವಿವರಿಸುತ್ತವೆ. ಸೈದ್ಧಾಂತಿಕವಾಗಿ ಮಠಗಳ ಸ್ವರೂಪ ಹೇಗಿತ್ತೆಂಬುದನ್ನು ಅರಿಯುವುದು ಅಗತ್ಯವಾಗಿದೆ. ಇಂದಿನ ಮಠಗಳ ಸ್ವರೂಪ ಕಾಲಮಾನಕ್ಕೆ ತಕ್ಕಂತೆ ಬದಲಾಗಿದೆ. ವೈಚಾರಿಕ-ವೈಜ್ಞಾನಿಕ ದೃಷ್ಟಿಕೋನವನ್ನಿಟ್ಟುಕೊಂಡು ಮಠಗಳು ತಮ್ಮ ಕಾರ್ಯಾಚರಣೆ, ಧರ್ಮಾಚರಣೆ ಸ್ವರೂಪವನ್ನು ಬದಲಿಸಿಕೊಂಡು ಬೃಹತ್ ಸಂಸ್ಥೆಗಳಾಗಿ ಮುನ್ನಡೆದಿವೆ. ಆದರೆ, ನಮಗೆ ಹಿಂದಿನ ಮಠಗಳ ಸ್ವರೂಪ ಒಂದೆಡೆ ಸಿಗುವುದಿಲ್ಲ. ಆ ದೃಷ್ಟಿಯಿಂದ ವಿವಿಧ ಧರ್ಮಗಳ ಹಿಂದಿನ ಮಠಗಳನ್ನು ಇಡಿಯಾಗಿ ನೋಡುವುದು ಅಗತ್ಯವಾಗಿದೆ. "ಮಠಗಳ ಹೆಸರು ಹೇಳುವಾಗ ಸಾಮಾನ್ಯವಾಗಿ ಅವು ಸಂಬಂಧವನ್ನು ಪಡೆದಿದ್ದ ದೇವಸ್ಥಾನಗಳ ಹೆಸರನ್ನು ಹೇಳುತ್ತವೆ ಶಾಸನಗಳು. ಉದಾಹರಣೆಗೆ: ಮುಳುಗುಂದದ ನಗರೇಶ್ವರ ಮಠ, ವಿಕ್ರಮಪುರದ ಶ್ರೀಸ್ವಯಂಬು ನಗರೇಶ್ವರ ದೇವರ ಮಠ, ಶ್ರೀಪರ್ವತದಗಸ್ಯೇಶ್ವರ ಸಂತತಿಯ ಮಠ"[೩೩](ಡಾ.ಎಂ.ಚಿದಾನಂದಮೂರ್ತಿ, ೧೯೭೯:೧೧೬) ಎಂಬುದನ್ನು ಗಮನಿಸಿದಾಗ ಮಠವೆನ್ನುವುದು ದೇವಸ್ಥಾನದ ಭಾಗವಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ. ಬಸವಾದಿ ಪ್ರಥಮರ ನಂತರ ಅಂದರೆ, ೧೨ನೇ ಶತಮಾನದಿಂದೀಚೆಗೆ ದೇವಾಲಯಗಳಿಂದ ಮಠಗಳು ಬೇರೆ ಆದಂತೆ ತಿಳಿದುಬರುತ್ತದೆ. ದೇವಾಲಯಗಳಲ್ಲಿ ಕೇವಲ ದೇವತಾರ್ಚನೆ ನಡೆದರೆ, ಮಠಗಳು ಧರ್ಮ ಪ್ರಚಾರಕ ಕೇಂದ್ರಗಳಾದವು. ಇದಕ್ಕಿಂತಲೂ ಪೂರ್ವದಲ್ಲಿ ಮಠಗಳ ಸ್ವರೂಪವನ್ನು ತಿಳಿಯಲು ತೃಪ್ತಿಕರವಾದ ಆಧಾರಗಳಿಲ್ಲ. ಜಾಗತಿಕ ಇತಿಹಾಸದಲ್ಲಿ ಋಗ್ವೇದ ಪ್ರಾಚೀನ ಕೃತಿಯಾಗಿದೆ. ಇದನ್ನು ಕಂಠಸ್ತವಾಗಿ ಉಳಿಸಿಕೊಂಡು ಬಂದದ್ದು ನಮ್ಮ ವಿದ್ಯಾಭ್ಯಾಸದ ಪ್ರಾರಂಭದ ಘಟ್ಟ. ನಂತರ ಆರ್ಯರ ಆಗಮನದಿಂದ ವೇದಗಳು ಹುಟ್ಟಿಕೊಂಡವು. ಇದರಿಂದಾಗಿ ಕ್ರಮೇಣ ಮೌಖಿಕತೆಗೆ ಚಾಕ್ಷುಷ ರೂಪ ಬಂದು ಲಿಪಿಗಳ ಉಗಮವಾಯಿತು. ಮುಂದುವರಿದಂತೆ ಜ್ಞಾನದ ವಿವಿಧ ಶಾಖೆಗಳು ಬೆಳೆದು ಬಂದವು. ಕಲಿಯುವ-ಕಲಿಸುವ ಪದ್ಧತಿಯಲ್ಲಿ ಬದಲಾವಣೆಯಾಗಿ ವಿದ್ಯಾಸಂಸ್ಥೆಗಳು ಬೆಳೆದು ಬಂದವು. ಮುಂದೆ ಉಪನಿಷತ್ತುಗಳ ಸಮಯದಲ್ಲಿ ಆಧ್ಯಾತ್ಮಿಕ ತಳಹದಿಯ ಮೇಲೆ ಧಾರ್ಮಿಕ ಶಿಕ್ಷಣ ಪ್ರಚುರಗೊಂಡು ಗುರು-ಶಿಷ್ಯರ ಸಂಬಂಧ ಬೆಳೆಯಿತು. ಆ ಮೂಲಕವಾಗಿ ಗುರುಕುಲಗಳ ಕಲ್ಪನೆ ಮೂಡಿಬಂತು.

ಇತಿಹಾಸ-ಪುರಾಣ-ಸ್ಮೃತಿಗಳ ಕಾಲಕ್ಕೆ ವಿದ್ಯಾಭ್ಯಾಸದ ವಿಷಯದಲ್ಲಿ ವೈವಿಧ್ಯತೆ ಕಾಣಿಸಿಕೊಂಡು ವೇದ-ಪಾಠಗಳಲ್ಲದೆ, ಶಾಸ್ತ್ರಗಳ ಅಧ್ಯಯನವೂ ನಡೆಯಿತು. ಬೌದ್ಧಧರ್ಮದ ಪ್ರಖರತೆ ಹಾಗೂ ಅಶೋಕನಂಥ ರಾಜಮಹಾರಾಜರ ಪ್ರೋತ್ಸಾಹದಿಂದ ವಿಹಾರಗಳು-ಸಂಘಾರಾಮಗಳು ಶಿಕ್ಷಣ ಕೇಂದ್ರಗಳಾದವು. ನಂತರ ಕ್ರಿ.ಪೂ.೨೯೭ರಲ್ಲಿ ಗುಣಭದ್ರಾಚಾರ್ಯ ಹಾಗೂ ಚಂದ್ರಗುಪ್ತರಿಂದ

ಕರ್ನಾಟಕದಲ್ಲಿ ಜೈನ ಧರ್ಮ ಪ್ರವೇಶಿಸಿ ಬಸದಿ-ಚೈತ್ಯಾಲಯಗಳು ನಿರ್ಮಾಣಗೊಂಡು ವಿದ್ಯಾಪ್ರಸಾರಕ್ಕೆ ಮುಂದಾದವು. ಕ್ರಿ.ಶ.೬-೭ನೇ ಶತಮಾನದಿಂದ ಕರ್ನಾಟಕದಲ್ಲಿ ಮಠಗಳು ಕಾಣಿಸಿಕೊಳ್ಳಲಾರಂಭಿಸಿದವು. ರಾಜರಿಂದ, ಪ್ರಜೆಗಳಿಂದ ಪೋಷಿಸಿಕೊಂಡು ಬರುತ್ತಿದ್ದ ಮಠಗಳು ವಿದ್ಯಾರ್ಥಿ-ಶಿಕ್ಷಕರಿಗೆ ಊಟ, ವಸತಿ ಒದಗಿಸಿ ಶಿಕ್ಷಣ ನೀಡುತ್ತಿದ್ದವು. ವೇದಾಧ್ಯಾಯ ವೇದಾಂಗ-ಪುರಾಣ ಇತಿಹಾಸ-ವ್ಯಾಕರಣ-ತತ್ತ್ವಶಾಸ್ತ್ರ-ಕಾವ್ಯ-ನಾಟಕ ಮತ್ತು ಸಂಗೀತ ಅಧ್ಯಯನ-ಅಧ್ಯಾಪನ ನಡೆಯುತ್ತಿದ್ದವು.

ಒಟ್ಟಿನಲ್ಲಿ ಐತಿಹಾಸಿಕವಾಗಿ ಮಠಗಳ ಸ್ವರೂಪ ವೇದಕಾಲದಲ್ಲಿ ಧರ್ಮ ಛತ್ರಗಳ ರೂಪದಲ್ಲಿ, ಉಪನಿಷತ್ತುಗಳ ಕಾಲದಲ್ಲಿ ಗುರುಶಿಷ್ಯರ ಸಂಬಂಧವನ್ನಿರಿಸಿಕೊಂಡು ಗುರುಕುಲಗಳ ರೂಪದಲ್ಲಿ, ತದನಂತರ ಇತಿಹಾಸ-ಪುರಾಣ-ಸ್ಮೃತಿಗಳ ಕಾಲಕ್ಕೆ ವಿದ್ಯಾಕೇಂದ್ರಗಳ ರೂಪದಲ್ಲಿ ಬೆಳೆದುಬಂದವೆನ್ನಬಹುದು.

೩. ಮಠಗಳ ಕರ್ತವ್ಯ

ಪ್ರಾಚೀನ ಕಾಲದಲ್ಲಿ ದೇವಸ್ಥಾನಗಳು, ಮಠಗಳು ಹಾಗೂ ಅಗ್ರಹಾರಗಳು ವಿದ್ಯಾ ಕಲಿಕೆಯ ಕೇಂದ್ರಗಳಾಗಿದ್ದವು. ಬಸವನ ಬಾಗೇವಾಡಿ ಅಂದಿನ ಪ್ರಸಿದ್ಧ ಅಗ್ರಹಾರವಾಗಿತ್ತು. ಕೂಡಲಸಂಗಮ ಪ್ರಸಿದ್ಧ ವಿದ್ಯಾಕೇಂದ್ರವಾಗಿತ್ತು. ಬಸವಣ್ಣನ ನಂತರ ಎಲ್ಲಾ ವೀರಶೈವ ಮಠಗಳು ಅನ್ನ ದಾಸೋಹದ ಜೊತೆ ಜ್ಞಾನ ದಾಸೋಹವನ್ನು ಶಿವನ ಸೇವೆಯೆಂದು ಭಾವಿಸಿದವು. ಕಲ್ಯಾಣದ ಕ್ರಾಂತಿಯ ನಂತರ ಶಿಕ್ಷಣ ಹಾಗೂ ಸಾಹಿತ್ಯ ಸಂರಕ್ಷಣೆಯ ಕಾಯಕವನ್ನು ವೀರಶೈವ ಮಠಗಳಷ್ಟು ನಿಷ್ಠೆಯಿಂದ ಮಾಡಿದವರು ಮತ್ತೊಬ್ಬರಿಲ್ಲ. ಈ ರೀತಿಯ ಚಾರಿತ್ರಿಕ ಪರಂಪರೆಯನ್ನು ಹೊಂದಿರುವ ಮಠಗಳು ಸಾಮಾಜಿಕವಾಗಿ ಮಹತ್ವದ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಸಮಾಜದ ಅವಿಭಾಜ್ಯ ಅಂಗಗಳಾಗಿವೆ. ಮೂಲತಃ ಧಾರ್ಮಿಕ ವಿಧಿ-ವಿಧಾನಗಳನ್ನು ಆಚರಿಸುವ ಧಾರ್ಮಿಕ ಕೇಂದ್ರಗಳಾಗಿದ್ದ ಮಠಗಳು ನಂತರದ ದಿನಮಾನಗಳಲ್ಲಿ ಸಾಮಾಜಿಕ-ಸಾಹಿತ್ಯಿಕ-ಸಾಂಸ್ಕೃತಿಕ ಕೇಂದ್ರಗಳಾಗಿ ಸಮಷ್ಠಿ ಜೀವನದ ಒಳಿತಿಗಾಗಿ ದುಡಿಯುತ್ತ ಬಂದಿದ್ದು ಅವುಗಳ ಕರ್ತವ್ಯ ಧಾರ್ಮಿಕ ವಲಯವನ್ನು ದಾಟಿ ಸಾಮಾಜಿಕ ವಲಯವನ್ನು ವ್ಯಾಪಿಸಿಕೊಂಡಿತು. ಧರ್ಮ ಪ್ರಸಾರ, ಸಾಮಾಜಿಕ ಸುಧಾರಣೆ, ಶಿಕ್ಷಣಕ್ಕೆ ಏಕಕಾಲದಲ್ಲಿ ಸೇವೆಗೈದವು.

ಕೆಲವಂತೂ ತಮ್ಮ ತಮ್ಮ ಚಟುವಟಿಕೆಗಳಲ್ಲೂ ಸುಪ್ರಸಿದ್ಧವಾಗಿವೆ. ಬೆಟ್ಟದಪುರ, ರಂಭಾಪುರಿ, ನಿಡುಮಾಮಿಡಿ, ಧಾರವಾಡ, ಹುಬ್ಬಳ್ಳಿ, ಬೆಂಗಳೂರು ನಗರದಲ್ಲಿರುವ ಅನೇಕ ಮಠಗಳೂ ಸಹ ಅನ್ನ ದಾಸೋಹ, ಜ್ಞಾನದಾಸೋಹ ನಡೆಸುತ್ತಿವೆ. ಉತ್ತರ ಕರ್ನಾಟಕದ ಹಳ್ಳಿ ಹಳ್ಳಿಗಳಲ್ಲೂ ಸಹ ಚಿಕ್ಕ ಪುಟ್ಟ ಮಠಗಳಿದ್ದು ಯಥೋಚಿತವಾಗಿ ಕಾರ್ಯೋನ್ಮುಖವಾಗಿವೆ.

೧೯ನೆಯ ಶತಮಾನದಿಂದ ಲಂಡನ್‌ಮಿಷನ್, ಬಾಸೆಲ್ ಮಿಷನ್, ಮೆಥಾಡಿಸ್ಟ್‌ಮಿಷನ್, ವೆಸ್ಲಿಯನ್ ಮಿಷನ್, ಚರ್ಚ್ ಆಫ್ ಸೌತ್ ಇಂಡಿಯಾ ಇತ್ಯಾದಿ ಕ್ರೈಸ್ತ ಸಂಸ್ಥೆಗಳು ವ್ಯವಸ್ಥಿತವಾಗಿ ಧರ್ಮಪ್ರಚಾರ ಮತ್ತು ಸಾರ್ವಜನಿಕ ಸೇವೆಯನ್ನು ಮಾಡುತ್ತಿವೆ.

ಶ್ರೀರಾಮಕೃಷ್ಣ ಮಿಷನ್ ಮೈಸೂರು, ಮಂಗಳೂರು, ಬೆಂಗಳೂರುಗಳಲ್ಲಿ ಕಾರ್ಯೋನ್ಮುಖವಾಗಿದೆ. ಅಖಿಲ ಭಾರತಮಟ್ಟದ ವೇದಾಂತ ಮಹಾವಿದ್ಯಾಲಯ, ಕಾಲೇಜು, ವಿದ್ಯಾರ್ಥಿನಿಲಯಗಳನ್ನು ಮೈಸೂರಿನಲ್ಲಿ ನಡೆಸುತ್ತಿದೆ. ಆರ್ಯಸಮಾಜವೂ ತಕ್ಕಮಟ್ಟಿಗೆ ಕರ್ನಾಟಕದಲ್ಲಿ ಬೆಂಗಳೂರು, ಮೈಸೂರು, ಮಂಗಳೂರುಗಳಲ್ಲಿ ಸಕ್ರಿಯ ಪಾತ್ರವಹಿಸಿತ್ತು. ಕೆಂಗೇರಿಯ ಗುರುಕುಲ ಆರ್ಯಸಮಾಜದ ಮೂಲವೆನ್ನಬೇಕು. ಚುಂಚನಕಟ್ಟೆಯ ಶ್ರೀ ಗುರುರಾಮ ಮಿಷನ್(ಸೇವಾ ಸಮಿತಿ) ಗುರುಕುಲವೂ ಸಹ ಆರ್ಯಸಮಾಜದ ಕೆಲವು ಉದ್ದೇಶಗಳನ್ನು ಅಳವಡಿಸಿಕೊಂಡಿದೆ. ಹಾಗಾಗಿ ಮಠಗಳು ಭಾರತೀಯ ಇತಿಹಾಸದಲ್ಲಿ ಅರಮನೆಗೆ ಪರಂಪರೆಯಿರುವಂತೆ ಗುರುಮನೆಗಳಿಗೂ ಮಹತ್ವದ ಸ್ಥಾನವಿದೆ. ಋಷಿಮುನಿಗಳ ಆಶ್ರಯದಲ್ಲಿಯೇ ಭಾರತೀಯ ಸಂಸ್ಕೃತಿ ಕೂನರಿ ಹೋಗರೇರಿ ಮರವಾಗಿ ಬೆಳೆದು ಮಕರಂದ ಬೀರಲಿಲ್ಲವೇ? ಲೌಕಿಕದೊಂದಿಗೆ ಪಾರಮಾರ್ಥಿಕ ವಿದ್ಯೆಯನ್ನು, ಐಹಿಕ ಭೋಗಗಳೊಂದಿಗೆ ಆಮುಷ್ಮಿಕ ಸಿದ್ಧಿಯನ್ನು ಸಾಧಿಸುವ ಕಲೆಯನ್ನು ಕಲಿಸುವ ಸತ್ಪರಂಪರೆ ಗುರುಕುಲಗಳಿಗೆ, ಋಷಿಮುನಿಗಳ ಆಶ್ರಮಗಳಿಗಿದೆ. ರಾಜಕುಮಾರರು ಬ್ರಹ್ಮಚಾರಿಗಳಾಗಿ ಆಶ್ರಮದಲ್ಲಿದ್ದು ಗುರುಸೇವೆ-ಗೋಸೇವೆ ಮಾಡುತ್ತ ನೀತಿ-ಧರ್ಮಗಳನ್ನು, ಶಸ್ತ್ರ-ಶಾಸ್ತ್ರ ವಿದ್ಯೆಗಳನ್ನು ಕಲಿಯುತ್ತಿರಲಿಲ್ಲವೆ? ಜೀವನೋಪಾಯಕ್ಕೆ ಕಾಯಕ ಕಲೆಯನ್ನು ಕಲಿಯುತ್ತಿದ್ದರಲ್ಲದೆ, ಕೀರ್ತಿ ವಾರ್ತೆಗಾಗಿ, ರಾಜ್ಯ ಸಂಪಾದನೆಗಾಗಿ ಧನುರ್ವಿದ್ಯೆಯನ್ನು ಸಂಪಾದಿಸುತ್ತಿದ್ದರು. ಆತ್ಮ ವಿಕಾಸಕ್ಕಾಗಿ ಆಧ್ಯಾತ್ಮಿಕ ಅನುಭವವನ್ನು ಮಾಡಿಕೊಳ್ಳುತ್ತಿದ್ದರು. ಧರ್ಮಗುರುಗಳಾದ ವಟುಗಳೊಂದಿಗೆ ಗುರುಕುಲಗಳು ದೇಶವನ್ನು ರಕ್ಷಿಸುವ, ರಾಜಕುಮಾರರು ಅಧ್ಯಯನ ಮಾಡುವ ಕಮ್ಮಟಗಳಾಗಿದ್ದವು. ಗುರುಗಳು(ಅನ್ನದಾನೀಶ್ವರ ಸ್ವಾಮಿಗಳು:೪)“ಕಷ್ಟ ಕಾರ್ಪಣ್ಯಗಳ ಹೊನಲಿನಲ್ಲಿ ಈಜುತ್ತಿರುವ ಸಂಸಾರಿಯ ಮನ ಅದೆಷ್ಟೋ ಬಾರಿ ತನ್ನ ವಿಶಾಲಭಾವನೆಯನ್ನು ಕಳೆದುಕೊಂಡು ಸಂಕುಚಿತವಾಗಿ ದ್ವೇಷಾಸೂಯೆಗಳಿಗೆ ಎಡೆಕೊಡುತ್ತದೆ. ದ್ವೇಷಾಸೂಯೆಗಳಿಗೆ ಎಡೆಯಿತ್ತೊಡನೆ ಮಾನವ ದಾನವನಾಗಿ ತಾನು ಮುಗ್ಗರಿಸುವುದು ಸಾಲದೆಂದು ಅನ್ಯರನ್ನು ಅಧೋಗತಿಗಿಳಿಸಲು ಹವಣಿಸುತ್ತಾನೆ. ಇಂತಹ ಸಮಯದಲ್ಲಿ ಜನರನ್ನು ತಪ್ಪುದಾರಿಗೆ ಬೀಳದಂತೆ ಎಚ್ಚರಿಸಲೋಸುಗವೇ ಗುರುವಾದವನು ಜನತೆಯ ಮಧ್ಯೆ ಮಠ ಕಟ್ಟಿಕೊಂಡು ವಾಸಿಸುತ್ತಾನೆ”[೬](ಡಾ.ಎಚ್.ಎಂ.ತಿಪ್ಪೇರುದ್ರಸ್ವಾಮಿ; ೧೯೬೪:೧೧).

ವಿದ್ಯಾಭ್ಯಾಸವನ್ನು ಜನಪ್ರಿಯಗೊಳಿಸುವ ಹಿರಿದಾದ ಕೆಲಸ ಮಠಗಳದಾಗಿತ್ತು. ಅಂತೆಯೇ ಅಮರ ಸಿಂಹನು "ಮಠಗಳು ವಿದ್ಯಾರ್ಥಿಗಳ ವಾಸಸ್ಥಾನಗಳಾಗಿದ್ದವೆಂದು ಹೇಳಿರುವುದನ್ನು ಸ್ಮರಿಸಬಹುದು. ಮಠಗಳು, ಧರ್ಮಪ್ರಸಾರದ ಜೊತೆಗೆ ಲೌಕಿಕ ವಿದ್ಯಾಭ್ಯಾಸಕ್ಕೆ ಪ್ರಾಮುಖ್ಯತೆ ನೀಡಿದಂತೆ ತಿಳಿದುಬರುತ್ತದೆ. ಕ್ರಿ.ಶ.೧೭ನೇ ಶತಮಾನದ ಪಾಯಾವರ್ಣಿಯೆಂಬ ಕವಿ "ಜ್ಞಾನಚಂದ್ರ ಚರಿತ್ರೆಯಲ್ಲಿ" ವಿದ್ಯಾರ್ಜನೆಗಾಗಿ ಶ್ರವಣಬೆಳ್ಗೊಳದಲ್ಲಿ ಮಠಕ್ಕೆ ಹೋಗುತ್ತಿದ್ದ ಬಾಲಕರ ಚಿತ್ರಣವನ್ನು ಹೀಗೆ ಕೊಡುತ್ತಾನೆ.

ಕಡಿತ ಹಲಗೆ ಬಹಳ ವೋಲೆ ಕಂಠವ
ಪಿಡಿದುಹಸ್ತದಿ ವಿನೋದದಲಿ
ಸಡಗರದಿಂದ ಮಠಕೆ ಪೋಪ ಕುವರರ
ವೃಂದದ ಕಂಡಳಾ ಚದುರೆ(ಬಿ.ಕೆ.ಹಿರೇಮಠ; ೧೯೯೨:೨೬).

ಎಂಬುದನ್ನು ಗಮನಿಸಿದಾಗ ಪ್ರಾಚೀನ ಕಾಲದಲ್ಲಿ ಮಠಗಳು ಶಿಕ್ಷಣ ಕೇಂದ್ರಗಳಾಗಿದ್ದವೆಂಬುದು ಸ್ಪಷ್ಟವಾಗುತ್ತದೆ. ಅಂತೆಯೇ "ಅಡವಿಯಲ್ಲಿಯ ಆಶ್ರಮ ಬೇರೆ, ಊರಲ್ಲಿಯ ಮಠ ಬೇರೆ, ಒಂದರ ಗುರಿ ಆತ್ಮಕಲ್ಯಾಣ, ಇನ್ನೊಂದರ ಗುರಿ ಆತ್ಮ ಕಲ್ಯಾಣದೊಂದಿಗೆ ಸಮಾಜ ಕಲ್ಯಾಣ. ಹೀಗಾಗಿ ಮಠವೆನ್ನುವುದು ಧರ್ಮದೊಂದಿಗೆ ಸಮಾಜದ ಆರೋಗ್ಯಕ್ಕೆ ಅವಶ್ಯವಾಗಿರುವ ಶಿಕ್ಷಣಪ್ರಸಾರ, ಸಾಹಿತ್ಯಸೃಷ್ಟಿ, ನ್ಯಾಯ ಪರಿಪಾಲನೆ, ಔಷದೋಪಚಾರ, ವೃತ್ತಿವ್ಯವಸ್ಥೆ, ಕಲಾ ಪೋಷಣೆ, ಸಂಸ್ಕೃತಿ ಸಂವರ್ಧನೆ ಇತ್ಯಾದಿ ಚಟುವಟಿಕೆಗಳಿಗೆ ಚ್ಯುತಿಬಾರದಂತೆ ನೋಡಿಕೊಳ್ಳುವ ಒಂದು ಸಾಮಾಜಿಕ ಸಂಸ್ಥೆ"[೬](ಡಾ.ಜೆ.ಎಂ.ನಾಗಯ್ಯ; ೧೯೯೨:VII)ಗಳಾಗಿ ಕೆಲಸ ಮಾಡುತ್ತಾ ಬಂದಿವೆ.

ಅಡಿ ಟಿಪ್ಪಣಿಗಳು

೧. ಅನ್ನದಾನೀಶ್ವರ ಸ್ವಾಮಿಗಳು, ಶ್ರೀ ಶಿವಯೋಗಿ ಮಂದಿರ, ಶ್ರೀ ಜ.ಅನ್ನದಾನೀಶ್ವರ ಸಂಸ್ಥಾನ ಮಠ, ಮುಂಡರಗಿ.

೨. ಕವಲಿ.ಚೆ.ಎ., ೨೦೦೩, ಸಚಿತ್ರ ಕನ್ನಡ–ಕನ್ನಡ ಕಸ್ತೂರಿ ಕೋಶ, ಧಾರವಾಡ, ರಾಮಾಶ್ರಯ ಪಬ್ಲಿಕೇಷನ್ಸ್.

೩. ಗುರುನಾಥ ಜೋಶಿ ಹಾಗೂ ಅಶ್ವತ್ಥನಾರಾಯಣ ಬಿ., ೨೦೦೬, ಕನ್ನಡ–ಕನ್ನಡ ಶಬ್ದಕೋಶ, ಹುಬ್ಬಳ್ಳಿ, ಸಂಕೇಶ್ವರ ಪ್ರಿಂಟರ್ಸ್ ಪ್ರೈವೇಟ್ ಲಿಮಿಟೆಡ್.

೪. ಚಿದಾನಂದಮೂರ್ತಿ ಎಂ., ೧೯೭೯, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೫. ಜವಳಿ ಬಿ.ಸಿ., ೧೯೭೩, ಲಿಂಗಾಯತ ಧರ್ಮ ಸ್ಥಾಪಕರಾರು, ಸಮೀದಾನ ಗ್ರಂಥಮಾಲೆ, ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ.

೬. ತಿಪ್ಪೇರುದ್ರಸ್ವಾಮಿ ಎಚ್.ಎಂ., ೧೯೬೪, ಪ್ರಸಾದ, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲಾ, ಮೈಸೂರು.

೭. ನಾಗಯ್ಯ ಜೆ.ಎಂ., ೧೯೯೨, ಆರನೆಯ ವಿಕ್ರಮಾದಿತ್ಯನ ಶಾಸನಗಳು, ವೀರಶೈವ ಅಧ್ಯಯನ ಅಕಾಡೆಮಿ, ನಾಗನೂರು, ರುದ್ರಾಕ್ಷಿಮಠ, ಬೆಳಗಾವಿ

೮. ಪ್ರಭುಶಂಕರ, ಭಾ.ವೇ.ಶ್ರೀಧರ., ೨೦೦೬, ಕನ್ನಡ–ಇಂಗ್ಲಿಷ್ ನಿಘಂಟು, ಬೆಂಗಳೂರು, ಅಭಿನವ.

೯. ಬಸವರಾಧ್ಯ ಎನ್., ೧೯೯೩, ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು(ಸಂಪುಟ ಏಳು), ಬೆಂಗಳೂರು, ಕನ್ನಡ ಸಾಹಿತ್ಯ ಪರಿಷತ್ತು.

೧೦. ಮಹಾದೇವಯ್ಯ ಟಿ.ಆರ್. (ಲೇ), ೧೯೮೧, ದಾಸೋಹಸಿರಿ(ಸಂಪಾದನೆ ಎರಿಸೀಮೆ ಚೆನ್ನಪ್ಪ ಮತ್ತು ಟಿ.ಆರ್.ಮಹಾದೇವಯ್ಯ), ಶ್ರೀಸಿದ್ಧಗಂಗಾ ಶ್ರೀ ಹಳೇ ವಿದ್ಯಾರ್ಥಿಗಳ ಸಂಘ, ಕ್ಷೇತ್ರ ತುಮಕೂರು.

೧೧. ವಿದ್ಯಾಶಂಕರ ಎಸ್., ೨೦೦೮, ಕೆಳದಿ ಅರಸರು ಮತ್ತು ವೀರಶೈವ ಮಠಗಳು (ಇದರಲ್ಲಿ: ಮಹಾಮಹತ್ತಿನ ಮಠಗಳು(ಸಂ) ಜಯದೇವಪ್ಪ ಜೈನಕೇರಿ ಮತ್ತು ಡಾ.ಜಗದೀಶ). ಕೌಲೇದುರ್ಗ ಮರುಳಸಿದ್ದೇಶ್ವರ ವೀರಶೈವ ಅಧ್ಯಯನ ಕೇಂದ್ರ.

೧೨. ವೆಂಕಟಸುಬ್ಬಯ್ಯ ಜಿ., ೨೦೦೬, ಪ್ರಿಸಮ್ ಕನ್ನಡ ಕ್ಲಿಷ್ಟ ಪದಕೋಶ, ಬೆಂಗಳೂರು, ಪ್ರಿಸಮ್ ಬುಕ್ಸ್ ಪ್ರೈ ಲಿ.

೧೩. ಶಿವರಾಮ ಕಾರಂತ ಕೆ., ೨೦೦೯, ಸಿರಿಗನ್ನಡ ಅರ್ಥಕೋಶ, ಬೆಂಗಳೂರು, ಸಪ್ನಬುಕ್‌ಹೌಸ್.

೧೪. ಶ್ರೀಧರ್ ಎಂ.ಕೆ. ಡಾ., ೨೦೧೧, ಸಂಕ್ಷಿಪ್ತ ಕನ್ನಡ–ಇಂಗ್ಲಿಷ್ ನಿಘಂಟು, ಬೆಂಗಳೂರು, ಕನ್ನಡ ಸಾಹಿತ್ಯ ಪರಿಷತ್ತು.

೧೫. ಶ್ರೀನಿವಾಸರಾವ್.ಎಸ್.ವಿ., ೧೯೯೯, ಬ್ರಾಹ್ಮಣ ಮಠಗಳು (ಇದರಲ್ಲಿ; ಭಗೀರಥ ಸಂಕಲ್ಪ, ಸಂ.ಕಮಲೇಶ್.ಕೆ.ಆರ್) ಕುಷ್ಟಗಿ. ಶ್ರೀ ಭಗೀರಥ ಉಪ್ಪಾರ ಧಾರ್ಮಿಕ ಟ್ರಸ್ಟ್ ಬೆಂಗಳೂರು ಮತ್ತು ರಾಜಋಷಿ ಭಗೀರಥ ಜಯಂತಿ ಉತ್ಸವ ಸಮಿತಿ, ಕುಷ್ಟಗಿ.

೧೬. ಶೇಷಗಿರಿರಾವ್ ಎಲ್.ಎಸ್., ೨೦೦೮, ಸುಭಾಷ್ ನಿಘಂಟು, ಬೆಂಗಳೂರು, ಸುಭಾಷ್ ಸ್ಟೋರ್ಸ್ ಬುಕ್ಸ್ ಕಾರ್ನರ್.

೧೭. ಸದಾಶಿವಯ್ಯ ಎಚ್.ಎಂ., ೧೯೮೪, ಅರ್ಚನ(ಸಂಪಾದನೆ: ಮಲ್ಲೇದೇವರು ಎಚ್.ಪಿ.), ಶ್ರೀ ಜ.ಶಿವರಾತ್ರಿ ರಾಜೇಂದ್ರಸ್ವಾಮಿಗಳ ಪಟ್ಟಾಧಿಕಾರ ಸುವರ್ಣ ಮಹೋತ್ಸವ ಸಮಿತಿ, ಮೈಸೂರು

೧೮. ಸಿದ್ಧಗಂಗಪ್ಪ ಎಚ್.ಎಸ್., ೨೦೦೮, ಜನಪದರು ಮತ್ತು ಮಹಾಮಹತ್ತಿನ ಮಠಗಳು(ಇದರಲ್ಲಿ: ಮಹಾಮಹತ್ತಿನ ಮಠಗಳು(ಸಂ) ಜಯದೇವಪ್ಪ ಜೈನಕೇರಿ ಮತ್ತು ಡಾ.ಜಗದೀಶ). ಕೌಲೇದುರ್ಗ ಮರುಳಸಿದ್ದೇಶ್ವರ ವೀರಶೈವ ಅಧ್ಯಯನ ಕೇಂದ್ರ.

೧೯. ಸುಗರ್ ಎ.ಕೆ. ಮತ್ತು ಇತರರು., ೨೦೦೭, ಕನ್ನಡ-ಕನ್ನಡ-ಇಂಗ್ಲಿಷ್ ಶಬ್ದಕೋಶ, ಧಾರವಾಡ, ರಾಮಾಶ್ರಯ ಪಬ್ಲಿಕೇಷನ್ಸ್.

೨೦. ಸಂತೆಬೆನ್ನೂರು ಸುಮತೀಂದ್ರನಾಡಿಗ್; ೨೦೦೮, ಮಧ್ಯ ಕರ್ನಾಟಕದ ಮಹತ್ತಿನ ಮಠಗಳು(ಇದರಲ್ಲಿ: ಮಹಾಮಹತ್ತಿನ ಮಠಗಳು(ಸಂ) ಜಯದೇವಪ್ಪ ಜೈನ್‌ಕೇರಿ ಮತ್ತು ಡಾ.ಜಗದೀಶ). ಕೌಲೇದುರ್ಗ ಮರುಳ ಸಿದ್ದೇಶ್ವರ ವೀರಶೈವ ಅಧ್ಯಯನ ಕೇಂದ್ರ.

೨೧. ಹಿರೇಮಠ ಆರ್.ಸಿ.(ಸಂ)., ಗುಮ್ಮಳಾಪುರದ ಸಿದ್ಧಲಿಂಗೇಶ್ವರರ ಶೂನ್ಯ ಸಂಪಾದನೆ.

೨೨. ಹಿರೇಮಠ ಆರ್.ಸಿ(ಸಂ)., ೧೯೭೧, ಬಸವಪುರಾಣ, ಶ್ರೀ ನಿ.ಪ್ರಸ್ವ ಮಹಾಂತಸ್ವಾಮಿಗಳು, ಶ್ರೀಗುರು ಮೃತ್ಯುಂಜಯ ಸ್ವಾಮಿಗಳು, ಧಾರವಾಡ.

೨೩. ಹಿರೇಮಠ ಬಿ.ಕೆ., ೧೯೯೨, ಕನ್ನಡ ಹಸ್ತಪ್ರತಿಗಳು: ಒಂದು ಅಧ್ಯಯನ, ವೀರಶೈವ ಅಧ್ಯಯನ ವೇದಿಕೆ, ಹಿರೇಮಠ, ಕಸಬಾ, ಜಂಬಂಗಿ, ವಿಜಾಪುರ.

ಅಧ್ಯಾಯ: ನಾಲ್ಕು

ಅಲಕ್ಷಿತರ ಮಠಗಳ ಸ್ಥಾಪನಾ ಪ್ರೇರಕಗಳು

ಅಧ್ಯಾಯ: ನಾಲ್ಕು

ಅಲಕ್ಷಿತರ ಮಠಗಳ ಸ್ಥಾಪನಾ ಪ್ರೇರಕಗಳು

ನಾಗರಿಕನಾಗುತ್ತಾ ಸಾಗಿದ ಮಾನವನಿಗೆ ಈ ಸಾಮಾಜಿಕ ಬದುಕಿನ ಸುಖ ಮತ್ತು ನೆಮ್ಮದಿ ಪ್ರಮುಖವೆನಿಸುತ್ತವೆ. ಇಂತಹ ಸುಖವನ್ನು ಲಭ್ಯವಿರುವ ಸೌಲಭ್ಯಗಳನ್ನು ಬಳಸಿಕೊಂಡು ಭೋಗಿಸಿ ಪಡೆಯುವುದಾದರೆ, ನೆಮ್ಮದಿ ಸಂಬಂಧಗಳಿಂದ ಸೃಷ್ಟಿಯಾಗುವ ಯಾದೃಚ್ಛಿಕ ಅನುಭವವಾಗಿದೆ. ಮಾನವನು ತನ್ನ ಬದುಕನ್ನು ಕಟ್ಟಿಕೊಳ್ಳುವ ಮತ್ತು ಅನುಭವಿಸುವ ಸಾಮಾಜಿಕ ಕೌಶಲ್ಯದಿಂದಾಗಿ ನೆಮ್ಮದಿಯನ್ನು ಕಂಡುಕೊಳ್ಳತೊಡಗಿದ. ಇಲ್ಲಿ ಕೌಟುಂಬಿಕ ಸಂಬಂಧಗಳಲ್ಲಿ ದೇವರು, ದೈವ, ಆಚರಣೆಗಳು, ನಂಬಿಕೆ ಮತ್ತು ನಿಷೇಧಗಳು ಈತನ ಇಡೀ ಬದುಕಿಗೆ ಒಂದು ಸೈದ್ಧಾಂತಿಕ ಚೌಕಟ್ಟನ್ನು ನಿರ್ಮಿಸಿದವು. ಇಂತಹ ಬದುಕಿನ ಚೌಕಟ್ಟಿನಾಚೆ ತನ್ನನ್ನು ವಿಸ್ತರಿಸಿಕೊಂಡು ಹೆಚ್ಚಿನ ನೆಮ್ಮದಿ ಮತ್ತು ಸಾಮಾಜಿಕ ಸ್ಥಾನ ಹಾಗೂ ಸಂರಕ್ಷಣೆಯನ್ನು ಪಡೆಯಲು ಅಪೇಕ್ಷಿಸಿದ. ಈ ಅಪೇಕ್ಷಿತ ಪಯಣದ ಒಂದು ಹಂತವಾಗಿ ಹಿಂದೂಗಳ ಆಧ್ಯಾತ್ಮದ ಇತ್ತೀಚಿನ ಅತ್ಯಂತ ಉದಾತ್ತ ಬೆಳವಣಿಗೆಯಾದ ಸಂಸ್ಥೆಯೇ ಆಶ್ರಮ,–ಸನ್ಯಾಸಿಗಳ ತಾಣ. ಪ್ರಾಪಂಚಿಕ ಆಸೆಗಳನ್ನು ತ್ಯಜಿಸಿ ದೈವ ಸಾಕ್ಷಾತ್ಕಾರಕ್ಕಾಗಿ ತಮ್ಮನ್ನು ಸಮರ್ಪಿಸಿಕೊಂಡ ಸನ್ಯಾಸಿಗಳ ತಾಣವೇ ಮಠ. ಇದು ತಪಸ್ಸಿನ ಜ್ಞಾನಾನ್ವೇಷಣೆಯ ಧಾರ್ಮಿಕ ಕೇಂದ್ರ. ಕ್ರಮೇಣ ಆಶ್ರಮ, ಗುರುಮನೆ, ಗುರುಕುಲಗಳಾಗಿ ಕಾಲ ಕಳೆದಂತೆ ಇದು ವಿದ್ಯಾಪ್ರಸಾರ, ಜ್ಞಾನಪ್ರಸಾರ, ಮತ ಪ್ರಸಾರ ಕೇಂದ್ರಗಳಾಗಿ ಬೆಳೆದಿವೆ. ಪ್ರಾಚೀನ ಕಾಲದಿಂದಲೂ ವಿದ್ಯಾಭ್ಯಾಸಕ್ಕೂ ಮತ್ತು ಗುರುಕುಲಗಳಿಗೂ ನಿಕಟ ಸಂಬಂಧವಿರುವುದನ್ನು ಪುರಾಣೇತಿಹಾಸ ಕಾಲದಿಂದ ಕಾಣುತ್ತಾ ಬಂದಿದ್ದೇವೆ. ಗುರುಕುಲಗಳ ಅಗ್ರಹಾರ, ಘಟಿಕಾಸ್ಥಾನ, ಬ್ರಹ್ಮಪುರಿ ಮುಂತಾದವುಗಳ ಬಗೆಗೆ ಶಾಸನಗಳಲ್ಲಿ ಉಲ್ಲೇಖಗಳಿರುವುದನ್ನು ಗಮನಿಸಬಹುದಾಗಿದೆ. ಗುರುಕುಲ ಪದ್ಧತಿ ವಿದ್ಯಾಭ್ಯಾಸ ವೈದಿಕ ಕಾಲ ಹಾಗೂ ರಾಮಾಯಣ, ಮಹಾಭಾರತದ ಪುರಾಣಗಳಲ್ಲಿ ಇದ್ದುದು ಮುಂದುವರಿದು ಇತ್ತೀಚಿನ ದಿನಗಳಲ್ಲೂ ಇನ್ನೂ ಅಸ್ತಿತ್ವದಲ್ಲಿರುವುದನ್ನು ಕಾಣುತ್ತೇವೆ.

ವೈದಿಕ, ಜೈನ, ಬೌದ್ಧ, ಶೈವ ಧರ್ಮಗಳು ಧರ್ಮಾಚರಣೆಗಾಗಿ ಮಠಗಳನ್ನು ಕಟ್ಟಿದವು. ಮಠಗಳನ್ನು ಹೋಲುವ ಧರ್ಮಛತ್ರ, ವಿದ್ಯಾಕೇಂದ್ರ, ಆಧ್ಯಾತ್ಮಿಕ ಕೇಂದ್ರ, ವಿಹಾರ, ದೇವಾಲಯ ಮುಂತಾದವುಗಳು ವಿವಿಧ ಧರ್ಮಗಳಲ್ಲಿ ಹುಟ್ಟಿಕೊಂಡವು. ಅವುಗಳ ಮುಖ್ಯಸ್ಥರಾಗಿ ಧರ್ಮಗುರುಗಳು ನೈತಿಕ ಜೀವನವನ್ನು ನಡೆಸುತ್ತ ಆಯಾ ಧರ್ಮದ ಅನುಯಾಯಿಗಳಿಗೆ ಪಾರಮಾರ್ಥಿಕ ಮಾರ್ಗದರ್ಶನ ಮಾಡುತ್ತಲಿದ್ದರು. ಈ ಮಠಗಳು ಪ್ರಾಚೀನ ಕಾಲದಿಂದ ಇಂದಿನವರೆಗೂ ನಡೆದುಕೊಂಡು ಮಹತ್ತರ ಸಾಧನೆ ಮಾಡಿರುವುದನ್ನು ಕಾಣಬಹುದು.

ರಾಮಾಯಣದಲ್ಲಿ ಕರ್ನಾಟಕದ ನಾನಾ ಸ್ಥಳಗಳಲ್ಲಿ ಋಷಿ ಮುನಿಗಳು ತಪಸ್ಸು ಮಾಡಿಕೊಂಡಿದ್ದರೆಂದು ತಿಳಿದು ಬರುತ್ತದೆ. ಇವುಗಳ ಜೊತೆಗೆ ಬೌದ್ಧವಿಹಾರಗಳು, ಸಂಘರಾಮಗಳು, ಜೈನವಸತಿಗಳೂ(ಬಸದಿ–ಬಸ್ತಿ) ಇದ್ದುವು. ಬೌದ್ಧ ಮತ್ತು ಜೈನರ ವಿಹಾರಗಳು ಸುಮಾರು ಇಂದಿನ ಮಠದ ಸ್ವರೂಪವನ್ನೇ ಹೊಂದಿದ್ದವು. ಕ್ರಿಸ್ತಶಕ ಆರಂಭದ ಆಸುಪಾಸಿನ ಶತಮಾನಗಳಲ್ಲಿ ಶ್ರವಣಬೆಳಗೊಳ ಜೈನಧಾರ್ಮಿಕ ಕೇಂದ್ರವಾಗಿತ್ತೆಂದು ಜೈನ ಗ್ರಂಥಗಳಿಂದ ತಿಳಿಯುತ್ತದೆ. ಕ್ರಿ.ಪೂ.೩ನೆಯ ಶತಮಾನದಲ್ಲಿಯೇ ಅಶೋಕ ಮಹಿಷಮಂಡಲಕ್ಕೆ ಧರ್ಮಪ್ರಚಾರಕರನ್ನು ಕಳುಹಿಸಿದನೆಂದು ಬೌದ್ಧ ಮೂಲಗಳಿಂದಲೂ ತಿಳಿದುಬರುತ್ತದೆಯಾದ್ದರಿಂದ ಈ ಕಾಲದಲ್ಲಿ ಅವರ ವಿಹಾರ ಮಠಗಳು ಇದ್ದಿರಬೇಕೆಂದು ಊಹಿಸಬಹುದು.

ಎಂಟನೆಯ ಶತಮಾನದ ಕೊನೆಯವರೆಗೂ ಜೈನ, ಬೌದ್ಧ ಸನ್ಯಾಸಿಗಳಲ್ಲದೆ, ಕಾಳಾಮುಖರು, ಕಾಪಾಲಿಕರು, ಪಾಶುಪತರು, ಶಿವಾಲಯಗಳಲ್ಲಿ ವಾಸಿಸುತ್ತಿದ್ದರು. ಆದರೆ, ಮಠಗಳ ಅಗತ್ಯವನ್ನು ಗ್ರಹಿಸಿ ಇಂಡಿಯಾ ದೇಶದ ನಾಲ್ಕು ದಿಕ್ಕುಗಳಲ್ಲಿಯೂ ಮಠಗಳನ್ನು ಸ್ಥಾಪಿಸಿದ ಯಶಸ್ಸು ಶ್ರೀಶಂಕರಾಚಾರ್ಯರಿಗೆ ಸಲ್ಲುತ್ತದೆ. ಹಿಂದೂಧರ್ಮದ ಹೆಸರಿನಲ್ಲಿ ಕಾಣಿಸಿಕೊಂಡಿದ್ದ ಕೆಟ್ಟ ಪದ್ಧತಿಗಳನ್ನು ನಿವಾರಿಸುವುದಲ್ಲದೆ, ಹಿಂದೂ ಧರ್ಮದ ತತ್ತ್ವಗಳನ್ನು ಜನರಿಗೆ ತಿಳಿಸಲು ಅನೇಕ ಸ್ಥಳಗಳಲ್ಲಿ ಮಠಗಳು ಸ್ಥಾಪಿತವಾದವು. ಹಿಂದೂ ಧರ್ಮವನ್ನು ತಾತ್ವಿಕ ನೆಲೆಗಟ್ಟಿನಲ್ಲಿ ಭದ್ರಗೊಳಿಸುವ ನೆಲೆಯಲ್ಲಿಯೂ ಈ ಮಠಗಳು ಸ್ಥಾಪನೆಯಾಗಿರುವುದು ಕಂಡುಬರುತ್ತದೆ.

ಬ್ರಾಹ್ಮಣರ ಅಗ್ರಹಾರಗಳು ಮತ್ತು ವೀರಶೈವ ಮಠಗಳು ವಿದ್ಯಾಕೇಂದ್ರಗಳಾಗಿ ಗೋಚರಿಸಿಕೊಂಡ ನಂತರದಲ್ಲಿ ಹಿಂದುಳಿದ ಅಥವಾ ಅಲಕ್ಷಿತ ಸಮುದಾಯಗಳ ಜನರು ಸಹ ಎಚ್ಚೆತ್ತುಕೊಂಡಿರುವರು. ಸಮಾಜದ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳಬೇಕಾದರೆ ಅಥವಾ ಸಾಮೂಹಿಕತ್ವವನ್ನು ಉಳಿಸಿಕೊಳ್ಳಬೇಕಾದರೆ ಶಿಕ್ಷಣ ಬಹುಮುಖ್ಯ ಪಾತ್ರವನ್ನು ವಹಿಸುತ್ತದೆ ಎನ್ನುವ ಕಾರಣದಿಂದ ಅಲಕ್ಷಿತ ಸಮುದಾಯದ ಜನ ಕಲಿಕೆಯತ್ತ ಹೆಜ್ಜೆ ಇಟ್ಟರು. ಕೆಲ ಬ್ರಾಹ್ಮಣರ ಪ್ರತಿರೋಧದ

ನಡುವೆಯೂ ವಿದ್ಯೆಯನ್ನು ಕಲಿತು ಸಮುದಾಯದ ಒಳತಿಗಾಗಿ ದುಡಿಯುವ ಪ್ರಯತ್ನ ಮಾಡಿದವರಲ್ಲಿ ಡಾ.ಬಾಬಾಸಾಹೇಬ ಅಂಬೇಡ್ಕರ್‌ರು ಒಬ್ಬರು. ಅಸ್ಪೃಶ್ಯತೆ ಎನ್ನುವ ಅನಿಷ್ಟ ಪದ್ಧತಿಯ ಫಲವಾಗಿಯೇ ಇಂದು ಎಲ್ಲಾ ಅಲಕ್ಷಿತ ಸಮುದಾಯದವರು ಉನ್ನತ ಶಿಕ್ಷಣ ಪಡೆದು ಗೌರವಯುತ ಸ್ಥಾನದಲ್ಲಿರಲು ಸಾಧ್ಯವಾಗಿದೆ. ಆ ಮೂಲಕ ಬಡತನದ ನಿರ್ಮೂಲನೆ ಮಾಡುವತ್ತ ಹೆಜ್ಜೆ ಇಡಲಾಯಿತು. ಅಸ್ಪೃಶ್ಯತೆ, ಬಡತನ, ಅನಕ್ಷರತೆಯನ್ನು ಅಳಿಸುವ ಮೂಲಕ ಸಾಮಾಜಿಕ ಅನನ್ಯತೆಯನ್ನು ಗುರುತಿಸುವ ಫಲವಾಗಿ ಮಠಗಳು ಹುಟ್ಟಿಕೊಂಡವು. ಆಯಾ ಸಮುದಾ-ಜನಾಂಗದ ಜನರನ್ನು ಜಾಗೃತಿಯತ್ತ ಕೊಂಡೊಯ್ಯುವ ಪ್ರಯತ್ನವನ್ನು ಅಲಕ್ಷಿತ ಸಮುದಾಯದ ಮಠಗಳು ಮಾಡುತ್ತಿವೆ.

ಈ ಮಠಗಳು ಹುಟ್ಟಿಕೊಳ್ಳುವಿಕೆಯ ಉದ್ದೇಶ ಒಂದು ಸಂಘಟನೆಗೊಳ್ಳುವ ಆಲೋಚನೆಯಿಂದ. ಆರಂಭದಲ್ಲಿ ಮೇಲು ಸಮುದಾಯಗಳ ಮಠಗಳು ಈ ಹಿನ್ನೆಲೆಯಲ್ಲಿ ಹುಟ್ಟಿಕೊಂಡವು. ನಂತರದಲ್ಲಿ ಈ ಮಠಗಳು ತಮ್ಮ ಸಮುದಾಯವನ್ನು ಸಂಘಟನೆಗೊಳಿಸುವುದಲ್ಲದೆ ಅವುಗಳ ಅಭಿವೃದ್ಧಿಗೆ, ಸಮುದಾಯಗಳ ಕಲ್ಯಾಣಕ್ಕೆ ಕಾಯಕಲ್ಪ ತೊಟ್ಟವು. ಯಾವುದೇ ಒಂದು ಸಮುದಾಯದ ಉದ್ಧಾರ ಅಕ್ಷರ ಜ್ಞಾನದಿಂದ ಮಾತ್ರ ಸಾಧ್ಯ ಎಂಬ ಸತ್ಯವನ್ನು ಮನಗಂಡ ಮಠಗಳು ಧಾರ್ಮಿಕ ಕಾರ್ಯಚಟುವಟಿಕೆಗಳ ಜೊತೆಗೆ ಶಿಕ್ಷಣ ನೀಡುವ ಕೇಂದ್ರಗಳಾಗಿ ಜನರಿಗೆ ಅರಿವು ಮೂಡಿಸಲು ಮುಂದಾದವು. ಆ ಮೂಲಕ ಸಾಮಾಜಿಕ ಸೇವೆಯಲ್ಲಿ ತೃಪ್ತಿಗೊಂಡವು. ಅದಕ್ಕೆ ನಿದರ್ಶನವಾಗಿ ಇವತ್ತು ರಾಜ್ಯದಾದ್ಯಂತ ಮಠಮಾನ್ಯಗಳಿಂದ ನಡೆಸಲ್ಪಡುವ ಅನೇಕ ವಿದ್ಯಾಸಂಸ್ಥೆಗಳನ್ನು ನೋಡಬಹುದು. ಕಾಲಕ್ಕೆ ತಕ್ಕಂತೆ ವಿವಿಧ ರೀತಿಯ ಶಿಕ್ಷಣದ ಕೋರ್ಸ್‌ಗಳನ್ನು ನಡೆಸಿ ಆ ಮೂಲಕ ಸಮಾಜದ ಅಭಿವೃದ್ಧಿಗೆ ಕಾರಣರಾಗಿದ್ದಾರೆ. ಆದರೆ ಆರಂಭದಲ್ಲಿ ಈ ಬಗೆಯ ಕೆಲಸ ನಡೆದದ್ದು ಮೇಲು ಸಮುದಾಯ, ಮೇಲ್ವರ್ಗದವರಲ್ಲಿ ಮಾತ್ರ. ಅಂದರೆ ಈ ಉನ್ನತ ಸಮುದಾಯಗಳು ಮಾತ್ರ ಮಠಗಳಂತಹ ಧಾರ್ಮಿಕ ಸಂಸ್ಥೆಗಳನ್ನು ನಿರ್ಮಿಸಿಕೊಂಡವು. ಮಹಾಭಾರತದ ಕಾಲದಲ್ಲಿ ಅಲಕ್ಷಿತ ಸಮುದಾಯಗಳಿಗೆ ಶಿಕ್ಷಣ ನಿಷೇಧವಾಗಿತ್ತು. ಅದೇ ಮಾದರಿಯಲ್ಲಿ ಆಧುನಿಕ ಮಠಗಳು ತಮ್ಮ ಪೌರಾಣಿಕ ಪರಂಪರೆಯನ್ನು ಆಧಾರವಾಗಿಟ್ಟುಕೊಂಡು ಮಠಗಳಲ್ಲಿ ಅಲಕ್ಷಿತರಿಗೆ ಪ್ರವೇಶಕ್ಕೆ ಹೆಚ್ಚಿನ ಅವಕಾಶಗಳಿಲ್ಲ.

ಆದರೆ ಸಮಾಜದ ಕಡೆಯ ವರ್ಗದವರಾಗಿದ್ದ ಅಲಕ್ಷಿತ ವರ್ಗಕ್ಕೆ ವಿದ್ಯೆ ಕಲಿಯುವ ಅವಕಾಶ ದೊರೆತಿದ್ದು ತೀರಾ ವಿಳಂಬವಾಗಿ. ಭಾರತದಲ್ಲಿ ಈಸ್ಟ್ ಇಂಡಿಯಾ ಕಂಪನಿ

ಸ್ಥಾಪನೆಯಾದ ನಂತರವಷ್ಟೆ ಬ್ರಿಟೀಷರು ಎಲ್ಲ ವರ್ಗದವರಿಗೂ ಸಮಾನ ಶಿಕ್ಷಣದ ಅವಕಾಶ ಕಲ್ಪಿಸಿದರು. ನಂತರ ಎಲ್ಲ ವರ್ಗದವರಿಗೂ ಸರ್ಕಾರಿ ಹುದ್ದೆಗಳು ಸೃಷ್ಟಿಯಾದವು. ದೈಹಿಕ ಶ್ರಮವಿಲ್ಲದೆ ನಿರ್ದಿಷ್ಟ ವೇತನ ಸಿಗುವ ಹುದ್ದೆಗಳು ಅಲಕ್ಷಿತ ವರ್ಗದವರನ್ನು ಆಕರ್ಷಿಸಿದವು. ಆ ಹುದ್ದೆ ಪಡೆಯಬೇಕಾದರೆ ಅವರು ಶಿಕ್ಷಿತರಾಗಬೇಕಾಯಿತು. ಈ ಹಿನ್ನೆಲೆಯಲ್ಲಿ ವಿದ್ಯೆ ಕಲಿಯುವ ಹಂಬಲ ಅಲಕ್ಷಿತ ವರ್ಗದವರಲ್ಲೂ ಮೂಡಲಾರಂಭಿಸಿತು. ಅದರಲ್ಲೂ ಒಂದಿಷ್ಟು ಸ್ಥಿತಿವಂತರಾದವರು ಪರ ಊರಿಗೆ ತೆರಳಿ ವಿದ್ಯಾಭ್ಯಾಸ ಮಾಡಲು ಸಾಧ್ಯವಾಯಿತು. ಆದರೆ ಆರ್ಥಿಕವಾಗಿ ಹಿಂದುಳಿದ ಹಾಗೂ ಅಲಕ್ಷಿತ ಸಮುದಾಯದ ಗ್ರಾಮೀಣ ಜನರಿಗೆ ವಿದ್ಯೆ ಗಗನ ಕುಸುಮವಾಯಿತು. ಹಾಗಾಗಿ ಅಲಕ್ಷಿತ ಸಮುದಾಯದಲ್ಲೆ ಈಗಾಗಲೇ ಒಂದಿಷ್ಟು ಶಿಕ್ಷಿತರಾದ ಜನ ತಮ್ಮ ಅರಿವಿನಿಂದ ತಮ್ಮ ಸಮುದಾಯಗಳ ಅಭಿವೃದ್ಧಿಯ ಕನಸು ಕಂಡರು. ಮೊದಲು ಮೇಲು ಸಮುದಾಯದವರಿಗೆ ಹೊಳೆದ, ಸಂಘಟನೆ ಮತ್ತು ಶಿಕ್ಷಣದಿಂದ ಅಭಿವೃದ್ಧಿ ಸಾಧ್ಯ ಎಂಬ ಅರಿವು ತಡವಾಗಿಯಾದರೂ ಅರ್ಥವಾಗಿ ಅಲಕ್ಷಿತ ಸಮುದಾಯದವರು ಕೂಡಾ ತಮ್ಮ ಕಣ್ಣೆದುರು ಬೆಳೆದು ನಿಂತ ಮೇಲು ಸಮುದಾಯದ ಮಠಮಾನ್ಯಗಳನ್ನೇ ಮಾದರಿಯಾಗಿ ಇಟ್ಟುಕೊಂಡು ಅಲಕ್ಷಿತ ಸಮುದಾಯಗಳು ಕೂಡಾ ಮಠಮಾನ್ಯಗಳ ಸ್ಥಾಪನೆಗೆ ಮುಂದಾದವು. ಹೀಗಾಗಿ ಅಲಕ್ಷಿತ ಸಮುದಾಯದ ಮಠಗಳ ಉಗಮದ ಇತಿಹಾಸ ಕ್ರಿ.ಶ.೧೯೦೦ರ ಹಿಂದೆಯಂತೂ ಇರಲು ಸಾಧ್ಯವಿಲ್ಲ. ಆದರೆ ಆಧುನಿಕ ಸಂದರ್ಭದಲ್ಲಿ ಪ್ರತಿಯೊಂದು ಸಮುದಾಯವು ಮಠಪರಂಪರೆಯಿಂದ ಹೊರತಾಗಿಲ್ಲ.

ಅಲಕ್ಷಿತ ಸಮುದಾಯದ ಮಠಮಾನ್ಯಗಳ ಮೂಲ ಉದ್ದೇಶ ತಮ್ಮ ಸಮುದಾಯದ ಜನರಿಗೆ ಅರಿವು ಮೂಡಿಸುವುದೇ ಆಗಿತ್ತು. ಹಾಗಾಗಿ ಅವು ಕೂಡಾ ಅನೇಕ ಶಿಕ್ಷಣ ಸಂಸ್ಥೆಗಳ ಮೂಲಕ ಅಲಕ್ಷಿತ ವರ್ಗದ ಮಕ್ಕಳಿಗೆಲ್ಲ ಶಿಕ್ಷಣ ಸುಲಭವಾಗಿ ಎಟುಕುವಂತೆ ಮಾಡಿದವು. ಜೊತೆಗೆ ಅಲಕ್ಷಿತ ಸಮುದಾಯದ ಜನ ಅಕ್ಷರಕ್ಕೆ ತೆರೆದುಕೊಂಡಂತೆ ಅವರಿಗೆ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಹಾಗೂ ಮಹಾತ್ಮ ಗಾಂಧೀಜಿ ಅವರಂತಹ ಸಮುದಾಯಾತೀತ ನೆಲೆಯ ಚಿಂತನೆಗಳು ತಮ್ಮ ಸಮುದಾಯಗಳನ್ನು ಮತ್ತಷ್ಟು ಗಟ್ಟಿಗೊಳಿಸಿಕೊಳ್ಳಲು ಸಹಾಯಕವಾದವು.

ಅಲ್ಲದೆ ಇವತ್ತಿನ ರಾಜಕೀಯ ಚಟುವಟಿಕೆಗಳೂ ಕೂಡಾ ಒಂದರ್ಥದಲ್ಲಿ ಅಲಕ್ಷಿತ ಸಮುದಾಯದ ಮಠಗಳು ಹುಟ್ಟುವುದಕ್ಕೆ ಕಾರಣವಾಗಿದೆ. ಮಠಗಳಿಗೆ ಸಮುದಾಯದ ಹಿನ್ನೆಲೆಯಲ್ಲಿ ಒಂದು ಸಂಘಟನೆ ಸಾಧ್ಯವಾಗಿದೆ. ಜೊತೆಗೆ ಮೇಲು ಸಮುದಾಯದ ಮಠಗಳು ಇವತ್ತು ದೇಶದ ರಾಜಕಾರಣದಲ್ಲಿ ಪ್ರಬಲವಾದ ಪಾತ್ರ ವಹಿಸುತ್ತಿವೆ. ಈ ಮಠಗಳು ಇಡೀ ಸಮುದಾಯವನ್ನು ಧರ್ಮದ ಹೆಸರಿನಲ್ಲಿ ಒಗ್ಗೂಡಿಸಿವೆ. ರಾಜಕೀಯ ಪಕ್ಷಗಳ ಸೋಲು

ಗೆಲುವು ಈ ಮತಗಳ ಇಚ್ಛಾಶಕ್ತಿಯ ಮೇಲೆ ನಿಂತಿದೆ. ಹಾಗಾಗಿ ರಾಜ್ಯದ ಪ್ರಮುಖ ರಾಜಕೀಯ ಚಟುವಟಿಕೆಗಳು ನಡೆಯುವುದರ ಹಿಂದೆಯೂ ಮಠಗಳ ಪ್ರಭಾವ ಇದೆ. ಈ ಗುಪ್ತ ಹೊಂದಾಣಿಕೆಗೆ ಮಠಗಳು ಕಾರ್ಯಸ್ಥಾನದ ವೇದಿಕೆಯಾಗಿ ಕಾರ್ಯ ನಿರ್ವಹಿಸುತ್ತಿವೆ. ಇದು ಇಂದು ಎಲ್ಲರಿಗೂ ಗೊತ್ತಿರದ ಸಂಗತಿಯಾಗಿ ಏನು ಉಳಿದಿಲ್ಲ. ಹಾಗಾಗಿ ಓಟು ಬ್ಯಾಂಕಿನ ರಾಜಕಾರಣ ಈ ಅಲಕ್ಷಿತ ಮಠಗಳ ಹುಟ್ಟಿಗೆ ಮುಖ್ಯ ಕಾರಣವಾಗಿದೆ.

ಶಿಕ್ಷಣ, ಕೈಗಾರಿಕೆ, ಉನ್ನತ ಶ್ರೇಣಿಯ ಅಧಿಕಾರಗಳ ಹಂಚಿಕೆ, ಮಠಪೀಠಗಳಿಗೆ ಸಂಬಂಧಿಸಿದ ಆಸ್ತಿಯ ಕ್ರೋಢೀಕರಣ ಮುಂತಾದ ವ್ಯವಹಾರಗಳಲ್ಲಿ ಮೇಲು ಸಮುದಾಯದ ರಾಜಕಾರಣಿಗಳು ಪಕ್ಷಾತೀತವಾಗಿ ಒಂದಾಗುವ ರೀತಿಯಲ್ಲಿ ಅಲಕ್ಷಿತ ಸಮುದಾಯಗಳ ಯಾವುದೇ ಸಮುದಾಯದ ರಾಜಕಾರಣಿಗಳು ಒಂದಾಗುವುದಿಲ್ಲ. ಮೀಸಲಾತಿಗೆ ಸಂಬಂಧಪಟ್ಟ ವಿಷಯಗಳಲ್ಲಿ ಅನ್ಯಾಯ ನಡೆದ ಸಂದರ್ಭದಲ್ಲಿ ಅಲಕ್ಷಿತ ಸಮುದಾಯಗಳ ಶಾಸಕರು ಪಕ್ಷಾತೀತವಾಗಿ ಹೋರಾಡಲು ಮುಂದಾಗಲು ಹಿಂಜರಿಯುತ್ತಾರೆ. ಅಧಿಕಾರ ಎನ್ನುವುದು ಮಠಗಳ ಕೃಪೆ ಇದ್ದಾಗ ಮಾತ್ರ ದೊರಕುವುದು ಎಂಬುದು ಇವರ ವಿಚಾರ. ಹೀಗಾಗಿ ಮಠಗಳ ಅವಕೃಪೆಗೆ ಒಳಗಾದರೆ ಮೇಲು ಸಮುದಾಯದ ಬೆಂಬಲ ಕಳೆದುಕೊಂಡು ಅಧಿಕಾರಕ್ಕೆ ಮರಳಿ ಬರಲು ಸಾಧ್ಯವಿಲ್ಲ ಎಂಬ ಭಯದಿಂದಾಗಿ, ಇಕ್ಕಟ್ಟಿಗೆ ಸಿಲುಕಿದ ರಾಜಕಾರಣಿಗಳು ಅಲಕ್ಷಿತ ಸಮುದಾಯದವರಿಗೆ ನ್ಯಾಯ ಒದಗಿಸಲು ಸಾಧ್ಯವಾಗದ ಅಸಹಾಯಕ ಸ್ಥಿತಿಯಲ್ಲಿದ್ದರು.

ಹೀಗೆ ಮೇಲು ಸಮುದಾಯದ ಮಠಕೇಂದ್ರಿತ ರಾಜಕೀಯ ವಿದ್ಯಮಾನಗಳು ಅಲಕ್ಷಿತ ಸಮುದಾಯಗಳ ರಾಜಕಾರಣಿಗಳನ್ನು ಅಧೀನರನ್ನಾಗಿಸಿದ್ದವು. ತಮ್ಮ ಸಮುದಾಯ ಸಂಘಟನೆಗಳಿಂದ ಮಾತ್ರ ರಾಜಕೀಯ ಅಧಿಕಾರವನ್ನು ಪಡೆಯಬಹುದು ಎನ್ನುವ ಭಯ ಅಲಕ್ಷಿತ ಸಮುದಾಯದ ರಾಜಕಾರಣಿಗಳಿಗೆ ಕಾಡುತ್ತಿದೆ. ಜೊತೆಗೆ ಸಮುದಾಯ, ಸಂಘಟನೆ ಶಕ್ತಿ ಹಾಗೂ ರಾಜಕೀಯ ಪ್ರಯೋಜನವನ್ನು ಸಮರ್ಥಿಸುವ ರೀತಿಯಲ್ಲಿ ಎಲ್ಲ ರಾಜಕೀಯ ಪ್ರಯೋಜನವನ್ನು ಸಮರ್ಥಿಸುವ ರೀತಿಯಲ್ಲಿ ಎಲ್ಲ ರಾಜಕೀಯ ಪಕ್ಷಗಳೂ ಇಂಥ ಸಂಘಟನೆಗಳಿಗೆ ಪ್ರೋತ್ಸಾಹ ನೀಡುತ್ತಿವೆ. ಈ ಎಲ್ಲಾ ವಿದ್ಯಮಾನಗಳು ಅಲಕ್ಷಿತ ಸಮುದಾಯಗಳನ್ನು ಅವರವರ ಕಕ್ಷೆಯಲ್ಲಿ ಒಗ್ಗಟ್ಟಾಗುವುದಕ್ಕೆ ಒತ್ತಾಯಿಸುತ್ತಿವೆ. ಇಂತಹ ಒಗ್ಗಟ್ಟು ಜನರ ಭಾವನಾತ್ಮಕ ಶಕ್ತಿಯಾಗಿ ಹೊರ ಹೊಮ್ಮಬೇಕಾದರೆ ಅದು ಧಾರ್ಮಿಕತೆಯಿಂದ ಮಾತ್ರ ಸಾಧ್ಯ ಎಂಬ ಭಾವನೆ ರಾಜಕಾರಣದಲ್ಲಿ ಬಲವಾಗಿದೆ. ಹೀಗಾಗಿ ಎಲ್ಲಾ ಅಲಕ್ಷಿತ ಸಮುದಾಯಗಳ ರಾಜಕೀಯ ಮುಖಂಡರು ಅವರವರ ಸಮುದಾಯದ ಮಠಗಳನ್ನು ಕಟ್ಟಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ. ಸಮುದಾಯಗಳ ರಾಜಕಾರಣಿಗಳು ಸಹ ಹಣವನ್ನು ಮುಂದುವರಿದ ಮಠಗಳಿಗೆ ನೀಡಿದರೂ ಕೂಡ ಕೊನೆಗೆ ಮಠಾಧೀಶರ ಕೈಗೊಂಬೆಯಾಗಿ

ಕೆಲಸ ಮಾಡಬೇಕಾಗುತ್ತದೆ. ಜೊತೆಗೆ ತಾವು ಕೊಟ್ಟ ಹಣ ತಮಗೆ ಆಗಲಿ ತಮ್ಮ ಸಮುದಾಯಕ್ಕೆ ಆಗಲಿ ಯಾವುದೇ ಪ್ರಯೋಜನ ಆಗುವುದಿಲ್ಲ ಎಂದು ತಿಳಿದುಕೊಂಡು, ಅಲಕ್ಷಿತ ಸಮುದಾಯಗಳ ಮಠಗಳ ನಿರ್ಮಾಣದಲ್ಲಿ ರಾಜಕೀಯ ಇಚ್ಛಾಶಕ್ತಿಯೂ ಕೆಲಸ ಮಾಡುತ್ತದೆ. ಇದಕ್ಕೆ ಕಾರಣ ಇಷ್ಟೆ ಅಲಕ್ಷ ಸಮುದಾಯದ ರಾಜಕಾರಣಿಗಳು ಹಣ, ಆಸ್ತಿ ಮಾಡಿದರೆ ಭ್ರಷ್ಟ ರಾಜಕಾರಣಿ ಎಂಬ ಪಟ್ಟ ಮುಂದುವರೆದು, ಆ ಸಮುದಾಯ ಹಾಗೂ ಆ ರಾಜಕಾರಣಿಯ ಟೀಕೆಗಳಿಗೆ ಗುರಿಯಾಗಬೇಕಾಗುತ್ತದೆ. ಜೊತೆಗೆ ಹಣ, ಅನುದಾನ ಮುಂದುವರೆದ ಮಠಗಳಿಗೆ ನೀಡಿದರೆ ಸಕಾಲದಲ್ಲಿ ತಮಗೆ ನೆರವಿಗೆ ಬರುವುದಿಲ್ಲ ಎಂಬ ಸ್ಥಿತಿಯನ್ನು ಅರಿತ ಅಲಕ್ಷಿತ ಸಮುದಾಯದ ರಾಜಕಾರಣಿಗಳ ಅಲಕ್ಷಿತ ಸಮುದಾಯ ಅಭಿವೃದ್ಧಿ ಮತ್ತು ತಮ್ಮ ರಾಜಕೀಯ ರಕ್ಷಣ ಕೇಂದ್ರಗಳಾಗಿ ಮಠಗಳನ್ನು ನಿರ್ಮಾಣ ಮಾಡಿಕೊಳ್ಳುತ್ತಿದ್ದಾರೆ.

೧. ಯಾವುದೇ ಮಠಗಳ ಆಸ್ತಿಪಾಸ್ತಿಯ ವಿವರಗಳ ತೆರಿಗೆ ಇಲಾಖೆಗೆ ಒಳಪಡದೇ ಇರುವುದರಿಂದ ಮುಂದುವರಿದ ಸಮುದಾಯದವರು ಮಾಡಿಕೊಂಡ ಉಪಾಯವನ್ನು ಅಲಕ್ಷಿತ ಸಮುದಾಯಗಳು ಅವರ ಹಾದಿಯಲ್ಲಿ ಮುಂದೆ ಸಾಗುತ್ತಿವೆ.
೨. ಮಠಗಳು ರಾಜಕಾರಣಿಗಳ ಗುಪ್ತ ಹಣದ ಬ್ಯಾಂಕಗಳಾಗಿ ಪರಿವರ್ತನೆ ಹೊಂದುತ್ತಿವೆ.
೩. ಶಾಸಕರ ಅನುದಾನವನ್ನು ಹೆಚ್ಚಿನ ಪ್ರಮಾಣದಲ್ಲಿ ಮಠಗಳಿಗೆ ನೀಡುತ್ತಿರುವುದರಿಂದ ಮಠಗಳು ಹುಟ್ಟಿಕೊಳ್ಳುತ್ತಿವೆ.
೪. ಓಟು-ನೋಟುಗಳಾಗಿ ಮಠಗಳ ನಿರ್ಮಾಣ.
೫. ಸಮುದಾಯದೊಳಗಿನ ಮತ್ತು ಹೊರಗಿನ ಅಂತರಕಲಹಗಳ ಕಾರಣದಿಂದಾಗಿ ಮಠಗಳು ಹುಟ್ಟಿಕೊಳ್ಳುತ್ತವೆ.
೬. ಸಮುದಾಯಕ್ಕೊಂದು ಅವಶ್ಯವಿಲ್ಲದಿದ್ದರೂ ಪ್ರತಿಷ್ಠೆಗಾಗಿ ಮಠಗಳು ಜನ್ಮ ತಾಳುತ್ತಿವೆ.
೭. ಲಿಂಗದೀಕ್ಷೆಯಿಂದ ರೂಪಗೊಂಡ ಮಠಗಳು(ಒಬ್ಬ ಗುರು ತನ್ನ ಶಿಷ್ಯವೃಂದಕ್ಕೆ ಗುರುಬೋಧವನ್ನು ನೀಡುವ ಮೂಲಕ ಮುಂದೆ ಅದೇ ಒಂದು ದೊಡ್ಡ ಗುಂಪಾಗಿ ಅವರಿಗೆ ಒಂದು ಮಠವನ್ನು ನಿರ್ಮಿಸಿಕೊಳ್ಳುವುದು).
೮. ಅಕ್ಕಮಹಾದೇವಿಯಿಂದ ಮಹಿಳಾ ಮಠಗಳಿಗೆ ಪ್ರೇರಣೆ.
೯. ಅನಾಥಪ್ರಜ್ಞೆ, ಒಂಟಿತನ, ಸಾಂಸಾರಿಕ ವೈರಾಗ್ಯ ಮಹಿಳೆಯರನ್ನು ಮಠಗಳೆಡೆಗೆ ಮುಖಮಾಡುವಂತೆ ಮಾಡಿವೆ.
೧೦. ಮುಂದುವರೆದ ಮಠಗಳು ಅಥವಾ ಮೇಲುವರ್ಗದವರು ಅಲಕ್ಷಿತ ಸಮುದಾಯಕ್ಕೆ ಒಂದು ಮಠವನ್ನು ಸ್ಥಾಪಿಸಿಕೊಡುವುದು ಆ ಸಮುದಾಯ ಮತ್ತು ಅದರ ಮಠ ತನ್ನ ಅಧೀನದಲ್ಲಿ ಎಂಬ ಆಲೋಚನೆಯಿಂದ.

ಬ್ರಿಟೀಷರ ಕಪಿಮುಷ್ಟಿಯಿಂದ ಹೊರ ಬಂದ ನಂತರ ಅಧಿಕಾರದಲ್ಲಿದ್ದ ಸರಕಾರಗಳು ತಮ್ಮ ಉದ್ದೇಶ ಅಲಕ್ಷಿತ ಸಮುದಾಯದ ಅಭಿವೃದ್ಧಿ ಎಂದು ಹೇಳಿದರು. ಆದರೆ ಅದನ್ನು ಪಾಲಿಸಿ ಸಾಮಾಜಿಕ ನ್ಯಾಯ ಒದಗಿಸಿದ್ದು ಶ್ರೀ ದೇವರಾಜ ಅರಸು ಅವರು. ಕರ್ನಾಟಕದ ಅಲಕ್ಷಿತ ಸಮುದಾಯಗಳ ಅಭಿವೃದ್ಧಿಗಾಗಿ ಅನೇಕ ಪ್ರಗತಿಪರ ಕಾರ್ಯಕ್ರಮಗಳನ್ನು ರೂಪಿಸಿದರು. ತುಳಿತಕ್ಕೊಳಗಾದ, ಹೋರಾಟದ ಮನೋಭಾವ ಮತ್ತು ಬುದ್ಧಿಜೀವಿ ಎನಿಸಿಕೊಂಡ ಶ್ರೀ ಎಲ್.ಜಿ.ಹಾವನೂರ ಅವರನ್ನು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರನ್ನಾಗಿ ಮಾಡಿದವರು ದೇವರಾಜ ಅರಸು ಅವರು ಆ ಮೂಲಕ ಅಲಕ್ಷಿತ ಸಮುದಾಯಗಳಿಗೆ ರಾಜಕೀಯವಾಗಿ ಮಾನ್ಯತೆ ನೀಡಿದರು. ವಿರೋಧ ಪಕ್ಷಗಳ ಪ್ರತಿರೋಧದ ನಡುವೆಯೂ ಹಾವನೂರು ವರದಿಯನ್ನು ಅಂಗೀಕರಿಸಿದರು. ರೋಸ್ಟರ್ ಪದ್ಧತಿ, ಗೇಣಿದಾರರಿಗೆ ಭೂ ಒಡೆತನ, ಜೀತಪದ್ಧತಿ ನಿಷೇಧ ಮುಂತಾದ ಪ್ರಗತಿಪರ ಸರಕಾರಿ ಆದೇಶಗಳು ಹೊರಬಂದವು. ಈ ಕ್ರಮದಿಂದ ಅಲಕ್ಷಿತ ಸಮುದಾಯಗಳಲ್ಲಿ ಆತ್ಮವಿಶ್ವಾಸ ಮೂಡಿತು.

ಈ ಆಯೋಗದ ಅಧ್ಯಕ್ಷರಾಗಿದ್ದ ಪ್ರೊ.ಎಲ್.ಜಿ.ಹಾವನೂರು ಅವರು ಅಲಕ್ಷಿತ ಸಮುದಾಯಗಳ ನೋವು ನಲಿವನ್ನು ತುಂಬಾ ಹತ್ತಿರದಿಂದ ಕಂಡವರು ಹಾಗೂ ತಾವೇ ಸಾಮಾಜಿಕ ಸೌಲಭ್ಯಗಳಿಂದ ವಂಚಿತರಾದವರು. ಇವರ ತಳಸ್ಪರ್ಷಿ ಅಧ್ಯಯನದ ಹಿನ್ನೆಲೆಯಲ್ಲಿ ಅಲಕ್ಷಿತ ಸಮುದಾಯಗಳ ಸಾಮಾಜಿಕ ಸಮಸ್ಯೆಗಳು ಸರ್ಕಾರದ ಗಮನಕ್ಕೆ ಬಂದವು. ಹೀಗೆ ಸೌಲಭ್ಯವಂಚಿತ ಅಲಕ್ಷಿತ ಸಮುದಾಯಗಳಿಗೆ ಕಾನೂನಾತ್ಮಕವಾಗಿ ಸೌಲಭ್ಯಗಳು ದೊರೆತವು. ಸಾಮಾಜಿಕ ಅಸಮಾನತೆಯನ್ನು ತೊಡೆದುಹಾಕುವ ಮೂಲಕ ಶಿಕ್ಷಣ ವಂಚಿತರು ಸುಶಿಕ್ಷಿತರಾಗತೊಡಗಿದರು. ಜೊತೆಗೆ ತಮ್ಮ ತಮ್ಮ ಸಮುದಾಯಗಳ ಸರ್ವಾಂಗೀಣ ಅಭಿವೃದ್ಧಿಗೆ ಪ್ರಯತ್ನಿಸಿದರು. ಇದರ ಫಲವಾಗಿಯೇ ಮಠಗಳು ರೂಪುಗೊಂಡಿರಬಹುದು. ಅವುಗಳು ಸಾಮಾಜಿಕ ಅನನ್ಯತೆಯ ಜೊತೆಗೆ ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವುದು, ಅನ್ನ ದಾಸೋಹ ಮತ್ತು ಅಕ್ಷರ ದಾಸೋಹದ ಕಾರ್ಯವನ್ನು ಕೈಗೊಂಡು ಮಠಗಳು ಪ್ರಾರಂಭವಾದವು. ತಮ್ಮ ಸಮುದಾಯದ ಹಾಗೂ ಸರ್ಕಾರದ ಸಹಕಾರದಿಂದ ಈ ಮಠಗಳು ಆರ್ಥಿಕವಾಗಿ ಪ್ರಗತಿಯೆಡೆಗೆ ಸಾಗುತ್ತಿವೆ.

ಅಲಕ್ಷಿತ ಸಮುದಾಯಗಳಲ್ಲಿ ಮಠಗಳ ಹುಟ್ಟಿಗೆ ಆಯಾ ಸಮುದಾಯಗಳಲ್ಲಿನ ಪವಾಡ ಪುರುಷರು ಕಾರಣರಾಗಿರಬಹುದು. ಉದಾ: ಕುರುಬ ಸಮುದಾಯದ ಸಿದ್ಧಾರೂಢ ಮಠ. ಇದು ಮುಗುಳಕೊಡದ ಯಲ್ಲಾಲಿಂಗ ಮಠ. ಇವರು ಸಂಸಾರಿಯಾಗಿದ್ದು ಕೆಲ ಪವಾಡಗಳನ್ನು ಮಾಡುತ್ತಿದ್ದರು. ಮಡದಿಯ ಅಕಾಲ ಮೃತ್ಯುವಿನಿಂದ ಮನೆ ಬಿಟ್ಟು ಹೊರ ಬಂದರು. ಆಗ

ಜನರ ಸಂಕಷ್ಟಗಳಿಗೆ ಸ್ಪಂದಿಸುತ್ತಾ ಎಲ್ಲಾ ಸಮುದಾಯದವರಿಗೆ ಪೂಜ್ಯನೀಯ ವ್ಯಕ್ತಿಯಾದರು. ಅವರು ಲಿಂಗೈಕ್ಯವಾದ ಸ್ಥಳವನ್ನು ಯಲ್ಲಾಲಿಂಗ ಮಠ ಎಂದು ಪ್ರಸಿದ್ಧವಾಗಿದೆ. ಮುಗುಳಕೋಡದಲ್ಲಿ ಮಾತ್ರವಲ್ಲದೆ ಅವರು ಬೇರೆ ಕಡೆಗಳಲ್ಲಿ ಓಡಾಡಿ ಪವಾಡಗಳನ್ನು ತೋರಿಸಿ ಭಕ್ತರನ್ನು ಸಂಪಾದಿಸಿದ ಸ್ಥಳಗಳಲ್ಲಿ ಮಠಗಳು ಸ್ಥಾಪನೆಗೊಂಡಿವೆ. ಗುಲ್ಬರ್ಗಾದಲ್ಲಿ, ದಿಡಗಾಮಠ, ಕೋಳಿವಾಡದಲ್ಲಿ ಹೀಗೆ ಬೇರೆ ಬೇರೆ ಕಡೆ ಯಲ್ಲಾಲಿಂಗರ ಮಠಗಳಿವೆ.

ಇತ್ತೀಚಿನ ವರ್ಷಗಳಲ್ಲಿ ವಾಲ್ಮೀಕಿ ಸಮುದಾಯದವರಲ್ಲಿ ಸಂಘಟನೆಯ ಹೊಂಗಿರಣವು ಮೂಡಿರುವುದಕ್ಕೆ ಮುಖ್ಯ ಕಾರಣವೆಂದರೆ ಅವರಲ್ಲಿ ಉಂಟಾಗಿರುವ ಧಾರ್ಮಿಕ ಜಾಗೃತಿ ಎಂದು ಹೇಳಬಹುದು. ಪ್ರಾರಂಭದಲ್ಲಿ ವಾಲ್ಮೀಕಿ ಗುರುಪೀಠವು ೧೯೯೭ರಲ್ಲಿ ಕೆಲವು ಪ್ರಮುಖರ ಪ್ರಯತ್ನದೊಂದಿಗೆ ಅಸ್ತಿತ್ವಕ್ಕೆ ಬಂದಿತು. ಕೈಲಾಸಾಶ್ರಮದ ತಿರುಚಿಸ್ವಾಮಿಗಳ ಶಿಷ್ಯರಾದ, ವಾಲ್ಮೀಕಿ ಸಮುದಾಯದ ಬಗೆಗೆ ಅಪಾರ ಕಾಳಜಿ ಹೊಂದಿದ ಓಂಕಾರೇಶ್ವರ ಬೆಟ್ಟದಲ್ಲಿರುವ ಮಠದ ಸದ್ಗುರು ಶ್ರೀ ಶಿವಪುರಿ ಮಹಾಸ್ವಾಮಿಗಳು ಎಲ್ಲಾ ಹಿಂದುಳಿದ ಅಲಕ್ಷಿತ ಸಮುದಾಯದವರಲ್ಲೂ ಗುರುಪೀಠಗಳಾಗಬೇಕೆಂಬ ಮಹತ್ ಉದ್ದೇಶವನ್ನು ಹೊಂದಿರುವುದಲ್ಲದೆ ಅದನ್ನು ಕಾರ್ಯರೂಪಕ್ಕೂ ತಂದಿರುತ್ತಾರೆ. ಅತ್ಯಂತ ಹಿಂದುಳಿದ ವಾಲ್ಮೀಕಿ ಸಮುದಾಯದ ವಾಲ್ಮೀಕಿ ಆಶ್ರಮ ಮಹಾಸಂಸ್ಥಾನದ ಆದಿಗುರುಪೀಠದ ಜಗದ್ಗುರು ವಾಲ್ಮೀಕಿ ಸತ್ಯಾನಂದಪುರಿ ಮಹಾಸ್ವಾಮಿಗಳು ೨೬ನೇ ಸೆಪ್ಟೆಂಬರ್ ೧೯೯೭ರಂದು ಸಂನ್ಯಾಸ ದೀಕ್ಷೆಯನ್ನು ಶಿವಪುರ ಮಹಾಸ್ವಾಮಿಗಳಿಂದ ಸ್ವೀಕರಿಸಿ ಪ್ರಥಮ ಗುರುಪೀಠಾರೋಹಣವನ್ನು ಬೆಂಗಳೂರಿನ ಬೇಡರ ಕಣ್ಣಪ್ಪ ಗುಡಿಯ ಸುಂದರ ಪರಿಸರದಲ್ಲಿ ಮಾಡಿದರು. ಈ ಘಟನೆ ವಾಲ್ಮೀಕಿ ಸಮುದಾಯದ ಧಾರ್ಮಿಕ ಸಂಘಟನೆಯ ದೃಷ್ಟಿಯಿಂದ ಒಂದು ಮೈಲಿಗಲ್ಲು ಎಂದೇ ಹೇಳಲಾಗುತ್ತದೆ. ವಾಲ್ಮೀಕಿ ಸತ್ಯಾನಂದಪುರಿ ಸಮುದಾಯದ ಸ್ವಾಮಿಗಳು ಸಮುದಾಯದ ಸರ್ವತೋಮುಖ ಉನ್ನತಿಗಾಗಿ ಹಗಲಿರುಳು ಶ್ರಮಿಸಿದ್ದಾರೆ. ಈ ಸಮುದಾಯವನ್ನು ರಾಜ್ಯದ ಪಟ್ಟಭದ್ರರ ಸಂಕೋಲೆಯಿಂದ ಸ್ವತಂತ್ರಗೊಳಿಸಿ ಸ್ವಾವಲಂಬಿಗಳಾಗಿ ಜೀವಿಸುವಂತೆ ತಮ್ಮ ವೈಚಾರಿಕ ಚಿಂತನೆಯಿಂದ ಎಚ್ಚರಗೊಳಿಸುತ್ತಿರುವಲ್ಲಿ ಯಶಸ್ವಿಯಾಗಿರುತ್ತಾರೆ. ಸ್ವಾಮಿಗಳು ಹಿಂದುಳಿದ ವರ್ಗ, ಅದರಲ್ಲೂ ದೀನ–ದಲಿತರ ಬಗೆಗೆ ಅಪಾರ ಕಾಳಜಿ ಉಳ್ಳವರಾಗಿದ್ದಾರೆ(ಸ.ಲಿಂಗಯ್ಯ;, ೧೯೯೯, ೨೦೨). ತಮ್ಮ ಸಮುದಾಯದ ಪರವಾದ ತುಡಿತವನ್ನು ಹೊಂದಿದ ಶ್ರೀಗಳು ಸಮುದಾಯದ ಉದ್ಧಾರಕ್ಕಾಗಿ ಹಲವಾರು ಯೋಜನೆಗಳನ್ನು ರೂಪಿಸಿದರು.

"ಇತ್ತೀಚಿಗೆ ಸ್ಥಾಪಿತವಾದ ಅಲಕ್ಷಿತ ಸಮುದಾಯಗಳ ಗುರುಪೀಠಗಳು ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಲು ಅನೇಕ ತಾಂತ್ರಿಕ ತೊಂದರೆಗಳು ಕಂಡುಬರುತ್ತದೆ. ಸರಕಾರವು ೧೯೮೭ಕ್ಕೆ ಮೊದಲು ಮಂಜೂರು ಮಾಡಿದ ಶಾಲಾ ಕಾಲೇಜುಗಳಿಗೆ ಶಾಶ್ವತ ಅನುದಾನ ಬಿಡುಗಡೆ ಮಾಡಿದೆ. ಅನಂತರ ಮಂಜೂರಾದ ಖಾಸಗಿ ಶಾಲಾ ಕಾಲೇಜುಗಳನ್ನೇ ಅನುದಾನರಹಿತವೆಂದು ಸರ್ಕಾರ ತೀರ್ಮಾನಿಸಿರುವುದು ಅಲಕ್ಷಿತ ಸಮುದಾಯದ ಸಂಸ್ಥೆಗಳಿಗೆ ಅಸ್ತಿತ್ವದ ಪ್ರಶ್ನೆಯಾಗಿಯೇ ಮುಂದುವರೆದಿರುವುದು ಶೋಚನೀಯ ಸಂಗತಿ. ಸರ್ಕಾರವು ೧೯೮೭ರ ನಂತರವೂ ಕೆಲವು ಶಾಲಾ ಕಾಲೇಜುಗಳಿಗೆ ಅನುದಾನ ನೀಡಿದ ಉದಾಹರಣೆಗಳಿವೆ. ಹಲವು ವರ್ಷಗಳ ಹಿಂದೆ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸುವ ಕೆಲಸವನ್ನು ಮಠಾಧಿಪತಿಗಳು ಮತ್ತು ಮೇಲ್ವರ್ಗದ ಶ್ರೀಮಂತ ವರ್ಗದವರು ಮಾತ್ರ ಮಾಡಲು ಸಾಧ್ಯವಾಗುತ್ತಿತ್ತು. ಹಿಂದುಳಿದ ವರ್ಗದ ಕೆಲವರು ಈ ದಿಸೆಯಲ್ಲಿ ಸಾಧನೆ ಮಾಡುವುದು ಸಾಧ್ಯವಾಗಿರಬಹುದು. ಆದರೆ ಶೈಕ್ಷಣಿಕ ಸೌಲಭ್ಯದಿಂದ ಇದೀಗ ಪ್ರಜ್ಞೆ ಮೂಡಿರುವ ಹರಿಜನ-ಗಿರಿಜನರು ಹಾಗೂ ಸಾಮಾಜಿಕವಾಗಿ ಇನ್ನೂ ಹಿಂದುಳಿದವರು ಜಾಗೃತರಾಗಿ ಶಾಲಾ-ಕಾಲೇಜುಗಳನ್ನು ಸ್ಥಾಪಿಸುವಲ್ಲಿ ಇತ್ತೀಚೆಗಷ್ಟೆ ಮುಂದಾಗಿದ್ದಾರೆ. ನಿಜವಾದ ಪರಿಸ್ಥಿತಿ ಹೀಗಿರುವಾಗ ಈ ಸಾಮಾಜಿಕ ಅನ್ಯಾಯವನ್ನು ಸರಿಪಡಿಸುವ ದೃಷ್ಟಿಯಿಂದ ಆಯಾ ವರ್ಗದವರಿಗೆ ಮೀಸಲಾತಿಗನುಗುಣವಾಗಿ ಸಂವಿಧಾನಾತ್ಮಕ ತೊಡಕಿಲ್ಲದಂತೆ ಅನುದಾನ ನೀಡುವ ಮೂಲಕ ಉತ್ತೇಜಿಸಬಹುದೆಂಬ ಅಭಿಪ್ರಾಯವನ್ನು ಅನೇಕ ಹಿಂದುಳಿದವರು, ದಲಿತರು ಹೊಂದಿರುತ್ತಾರೆ(ಸಂ.ಲಿಂಗಯ್ಯ; ೧೯೯೯:೨೦೫). ಈ ದಿಸೆಯಲ್ಲಿ ಅಲಕ್ಷಿತ ಸಮುದಾಯದ ಗುರುಪೀಠಗಳೂ ಶೈಕ್ಷಣಿಕ ಅಭ್ಯುದಯವನ್ನು ಪಡೆಯಲು ಕಾರ್ಯೋನ್ಮುಖವಾಗಿವೆ.

ಅಭಿವೃದ್ಧಿಯನ್ನು ಕುರಿತು ಯೋಚಿಸುವಾಗ ಸಮುದಾಯ ಆಧಾರಿತ ಅಭಿವೃದ್ಧಿಯು, ಅಭಿವೃದ್ಧಿಕಾರರು ಪರಿಭಾವಿಸಿದ ಮಾನದಂಡದ ಅಭಿವೃದ್ಧಿಯಾದರೆ, ಇಂತಹ ಸಮುದಾಯ, ವರ್ಗಭೇದಗಳಿಂದ ಸಾಂಸ್ಕೃತಿಕವಾಗಿ ಅಲಕ್ಷೆಗೊಳಗಾಗಿ ಸಾಮಾಜಿಕ ಗೌರವ, ಸ್ಥಾನ ಹಾಗೂ ಯಜಮಾನಿಕೆಯಿಂದ ದೂರ ತಳ್ಳಲ್ಪಟ್ಟ ಸಮುದಾಯಗಳನ್ನು ವಿಚಲಿತಗೊಳಿಸಿದವು. ಈ ನಡುವೆ ತನ್ನದಲ್ಲದ ಸಮುದಾಯಗಳ ದೇವರು, ದೈವ ಮತ್ತು ಸಾಂಸ್ಕೃತಿಕ ಆಚರಣೆಗಳು ಅಲಕ್ಷಿತ ಸಮುದಾಯಗಳ ಮೇಲೆ ಬೀರಿದ ಪ್ರಭಾವ ತನ್ನತನವನ್ನು ಕಳೆದುಕೊಳ್ಳುವ ಭೀತಿ ಹೆಚ್ಚಾಯಿತು. ಶತಮಾನಗಳಿಂದ ಅದುವೇ ಅತೀತ ಮತ್ತು ಅಂತಿಮವೆಂದು ನಂಬಿಸಿದವರ ಧಾರ್ಮಿಕ ಯಜಮಾನಿಕೆ ಮತ್ತೆ ಮತ್ತೆ ಇವರನ್ನು ನವೀನ ಮಾದರಿಯ ಅಲಕ್ಷಿತರನ್ನಾಗಿ ದೂರ ನಿಲ್ಲಿಸಿತು. ಈ ಕಾರಣಕ್ಕಾಗಿ ಅಲಕ್ಷಿತರಿಗೆ ತನ್ನ ಸಾಮುದಾಯಿಕ ಮಠಗಳು ತನ್ನ ಸಮುದಾಯದ ದೈವಗಳ ಗುಡಿಗಳಷ್ಟೇ ಪ್ರಮುಖವೆನಿಸಿದವು. ಈ ಕ್ಷಣದವರೆಗೆ ಅನ್ಯ ಸಮುದಾಯದ ಮಠಗಳೊಂದಿಗೆ

ತಮ್ಮ ಧಾರ್ಮಿಕ ಸಂಬಂಧವನ್ನು ಹೊಂದಿ, ಯಾವುದೋ ಕಟ್ಟುಪಾಡಿಗೆ ಮತ್ತು ಹುಸಿ ಪ್ರತಿಷ್ಠೆಗೆ ಗಂಟುಬಿದ್ದು, ಅಲ್ಲಿನ ಉತ್ಸವ, ಆಚರಣೆಗಳಲ್ಲಿ ತನಗರಿವಿಲ್ಲದಂತೆ ಅಸ್ಪೃಶ್ಯತೆಯ ಆಚರಣೆಗೊಳಪಟ್ಟಿದ್ದರು. ಅದನ್ನೇ ಮುಂದುವರೆಸಿಕೊಂಡು ಬಂದ ಇವರು ಸಮುದಾಯ, ಕಸುಬು, ದೇವರು, ದೈವ, ಕೊಡುತರುವುದು ಇವೆಲ್ಲವೂ ತಮ್ಮವಾಗಿದ್ದು, ಮಠಗಳಂತಹ ಧಾರ್ಮಿಕ ಕೇಂದ್ರ ಮತ್ತು ಅಲ್ಲಿರುವ ಧಾರ್ಮಿಕ ಗುರುವಿಗಾಗಿ ಅನ್ಯ ಸಮುದಾಯವನ್ನು ಅವಲಂಬಿಸಿರುವ ಅನಿವಾರ್ಯತೆಯಿಂದ ವಿಮುಕ್ತನಾಗುವ ಯೋಚನೆಗಳು ಸಮುದಾಯದ ಸಾರ್ವತ್ರಿಕ ನಿರ್ಧಾರಗಳು ಅಲಕ್ಷಿತರ ಮಠಗಳ ಸ್ಥಾಪನೆಗೆ ಒಂದು ಸಣ್ಣ ಪ್ರಭಾವವೂ ಆಗಿದೆ.

ಯಾವುದೇ ಒಂದು ಸಮಾಜದ ಆರೋಗ್ಯವು ಆಯಾಯಾ ಸಮುದಾಯಗಳಲ್ಲಿನ ವ್ಯಕ್ತಿಗಳ ಮನಸ್ಸಿನ ಸ್ವಾಸ್ಥ್ಯವೂ ಬಹಳ ಮುಖ್ಯವಾಗುತ್ತದೆ. ಈ ಮಾನಸಿಕ ಆರೋಗ್ಯ ಬಲಿಷ್ಠ ಸಮಾಜದ ನಿರ್ಮಾಣದ ಅಡಿಗಲ್ಲಾಗಿದೆ. ಈ ಹಿನ್ನೆಲೆಯಲ್ಲಿ ಗುರುಕುಲ ಪದ್ಧತಿಯೂ ಪ್ರಾರಂಭವಾಯಿತು. ವೇದ ಉಪನಿಷತ್ತು ದರ್ಶನ ಶಾಸ್ತ್ರಗಳನ್ನು ಅಧ್ಯಯನ ಗುರುಕುಲಗಳಲ್ಲಿ ನಡೆಯುತ್ತಿತ್ತು. ಈ ಕಲ್ಪನೆಯ ಮುಖಾಂತರವೇ ಮಠಗಳು ಉಗಮಗೊಂಡವು. ರಾಜಾಶ್ರಯದಲ್ಲಿ ಮಠಗಳು ಪೋಷಣೆಗೊಂಡವು. ನಂತರ ಈಸ್ಟ್ ಇಂಡಿಯಾ ಕಂಪನಿಯ ಮೂಲಕ ಭಾರತಕ್ಕೆ ಹೆಜ್ಜೆ ಇಟ್ಟ ಬ್ರಿಟೀಷರಿಂದ ೧೯೪೭ರಲ್ಲಿ ಸ್ವಾತಂತ್ರ್ಯಗೊಂಡ ತರುವಾಯ ಅವರ ಶೈಕ್ಷಣಿಕ ವ್ಯವಸ್ಥೆಯ ನಿಯಮಗಳಿಗೆ ಕಟ್ಟುಬೀಳಬೇಕಾಯಿತು. ರಾಜಕೀಯ ಧುರೀಣರು ಜನಸಾಮಾನ್ಯರ ಬಗ್ಗೆ ಗಮನಕೊಡದ ಕಾರಣ ಅನೇಕ ಹಿಂದುಳಿದ ವರ್ಗಗಳ ಸಮಸ್ಯೆಗಳು ಸಮಸ್ಯೆಗಳಾಗಿಯೇ ಉಳಿದವು.

ಈ ಕಾರಣದಿಂದ ವೀರಶೈವ ಮಠಗಳು ಒಕ್ಕಲಿಗ ಮಠಗಳು ಹುಟ್ಟಿಕೊಂಡವು. ಹಾಗೆಯೇ ಶೈಕ್ಷಣಿಕ ಪ್ರಗತಿಯ ಮೂಲಕ ವೈಚಾರಿಕ–ವೈಜ್ಞಾನಿಕ ಚಿಂತನೆಗಳು ಸಾಧ್ಯ ಮತ್ತು ಆ ಮೂಲಕ ಸಮುದಾಯದ ಅಭಿವೃದ್ಧಿಯೂ ಸಾಧ್ಯ ಎಂದು ಮನಗಂಡ ಅಲಕ್ಷಿತ ಸಮುದಾಯದ ಹಿರಿಯರು ಸೇವಾ ಮನೋಭಾವದಿಂದ ಮಠಗಳನ್ನು ಸ್ಥಾಪಿಸುವ ಮೂಲಕ ಅಲ್ಪಸಂಖ್ಯಾತರಿಗೆ ಸಹಾಯ ಮಾಡತೊಡಗಿದರು. ಸಮುದಾಯದವರನ್ನು ಪ್ರಧಾನಧಾರೆಗೆ ತರುವ ಪ್ರಯತ್ನದ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಶಿಕ್ಷಣ ಸಂಸ್ಥೆಗಳು ಅಭಿವೃದ್ಧಿಗೆ ಕಾರಣೀಭೂತವಾಗಿವೆ.

ಯಾವುದೇ ಒಂದು ಜನಸಮುದಾಯ ಅಭಿವೃದ್ಧಿಯಾಗಬೇಕಾದರೆ ಶಿಕ್ಷಣ ಸಂಸ್ಥೆಗಳು, ವಸತಿ ಶಾಲೆಗಳು, ಹಾಸ್ಟೆಲ್‌ಗಳು, ಸಮುದಾಯ ಭವನಗಳು ಬಹಳ ಅವಶ್ಯಕವಾಗಿವೆ. ಇವುಗಳು ನಿರಂತರವಾಗಿರಬೇಕಾದ ನೀರು, ವಿದ್ಯುತ್ ಆಧುನಿಕ ಪರಿಕರಗಳ ಕಟ್ಟಡಗಳು ಅಷ್ಟೆ ಮುಖ್ಯ. ಇವುಗಳ ಸಮರ್ಪಕ ಬಳಕೆಯಿಂದಾಗಿ ಒಂದು ಸಮುದಾಯ ಅಭಿವೃದ್ಧಿಯಾಗಲೂ ಸಾಧ್ಯ.

ಅಲಕ್ಷಿತ ಸಮುದಾಯದವರಲ್ಲಿ ಮುಖ್ಯವಾಗಿ ವಾಲ್ಮೀಕಿ, ಗೊಲ್ಲ, ಲಂಬಾಣಿ, ಛಲವಾದಿ, ಉಪ್ಪಾರ, ಭೋವಿ ಮುಂತಾದ ಸಮುದಾಯಗಳ ಹಿರಿಯರು, ರಾಜಕಾರಣಿಗಳು ಹಾಗೂ ಸಮಾಜ ಸೇವಕರುಗಳು ಒಟ್ಟಾಗಿ ಸೇರಿ ಈ ಅಲಕ್ಷಿತ ಮಠಗಳನ್ನು ಸ್ಥಾಪಿಸಿದ್ದಾರೆ. ಅವುಗಳಲ್ಲಿ ಕೆಲವು ಸ್ಥಾಪನೆಯ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ನಿಧಾನವಾಗಿ ಪ್ರಗತಿಯತ್ತ ಸಾಗುತ್ತಿದ್ದರೆ, ಕೆಲವು ಮಠಗಳು ಇನ್ನೂ ಸ್ಥಾಪನೆಯ ಆರಂಭದಲ್ಲಿಯೇ ಇದ್ದಂತೆ ಇರುವುದನ್ನು ಕಾಣಬಹುದು.

ಕರ್ನಾಟಕದ ಪ್ರಮುಖ ಸಮುದಾಯಗಳಲ್ಲಿ ದೇವಾಂಗ ಸಮುದಾಯವೂ ಒಂದು. ಇವರು ಮಾಡುವ ವೃತ್ತಿಯ ಹಿನ್ನೆಲೆಯಲ್ಲಿ ಇವರನ್ನು ನೇಕಾರರು ಎಂದು ಕರೆಯುವರು. ಸಾಲಿ, ಪದ್ಮಸಾಲಿ, ಸೀಗೆ, ತೊಗಟವೀರ, ಕುರುಹೀನಶೆಟ್ಟಿ, ಹಟಗಾರ, ಬೇಡ, ಕೋಷ್ಟಿ, ವಿಂಕರ, ಜುರೋಹಿ, ಹಲಕಾರ ಇವುಗಳು ದೇವಾಂಗ ಸಮುದಾಯದ ಉಪ ಸಮುದಾಯಗಳಾಗಿವೆ. ಬಹುತೇಕ ಜನರು ಇಂದಿಗೂ ನೇಕಾರಿಕೆ ವೃತ್ತಿಯನ್ನು ಅವಲಂಬಿಸಿದ್ದಾರೆ. ಸುಮಾರು ೪-೫ ಲಕ್ಷ ಬೆಲೆ ಬಾಳುವ ಸೀರೆ ನೇಯುವ ಈ ಸಮುದಾಯದ ಹೆಣ್ಣು ಮಕ್ಕಳು ಸಾವಿರ ರೂಪಾಯಿಯ ಸೀರೆಯನ್ನುಡುವುದು ಕನಸಿನ ಮಾತಾಗಿದೆ. ಈ ಹಿನ್ನೆಲೆಯಲ್ಲಿ 'ನೇಕಾರನ ಹೆಂಡತಿ ಬತ್ತಲೆ' ಎಂಬ ಗಾದೆ ಮಾತು ಇಂದಿಗೂ ಅವರ ಬದುಕಿನಲ್ಲಿ ಸತ್ಯವಾಗಿದೆ.

ಪಾರಂಪರಿಕ ವೃತ್ತಿಯನ್ನು ಅವಲಂಬಿಸಿರುವ ಈ ಸಮುದಾಯದಲ್ಲಿ ಅಕ್ಷರಸ್ಥರ ಸಂಖ್ಯೆ ವಿರಳ. ಹೆಣ್ಣುಮಕ್ಕಳು ತಿಳುವಳಿಕೆ ಬರುವ ಪ್ರಾಯದಿಂದಲೇ ಲಡಿ ಸುತ್ತುವುದು, ಉಂಕಿ ಹೂಡುವುದು, ಕಂಡಿಕೆ ಸುತ್ತುವುದು, ರೇಷ್ಮೆ ಹೊಯ್ಯುವುದು, ಸ್ವಲ್ಪ ಕಾಲು ಉದ್ದವಾದರೆ ಸಾಕು ಮಗ್ಗದಲ್ಲಿ ಇಳಿ ಬಿಡುವುದು. ಹೀಗೆ ಬಡತನ ಕಾರಣದಿಂದಾಗಿ ಮನೆಯವರೆಲ್ಲರೂ ಒಟ್ಟಾಗಿ ಕೆಲಸಮಾಡಿದರೆ ಹಣ ಗಳಿಸಬಹುದು ಎನ್ನುವ ಕಾರಣದಿಂದಾಗಿ ಮಕ್ಕಳನ್ನು ಸರಿಯಾಗಿ ಶಾಲೆಗೂ ಕಳುಹಿಸದೆ ಚಿಕ್ಕಪುಟ್ಟ ಕೆಲಸಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ಶಿಕ್ಷಣದ ಬಗ್ಗೆ ಆಸಕ್ತಿ ಕಳೆದುಕೊಂಡ ಯುವ ಪೀಳಿಗೆ ಮನೆಯವರು ಮಾಡುವ ಕೆಲಸಕ್ಕೆ ಸಹಾಯಮಾಡುತ್ತಾ ಅದೇ ಕೆಲಸವನ್ನೇ ಅವಲಂಬಿಸಿಬಿಡುತ್ತಾರೆ.

ಕರ್ನಾಟಕದಲ್ಲಿ ಸುಮಾರು ೨೦ ಲಕ್ಷಕ್ಕೂ ಮೀರಿ ಈ ಸಮುದಾಯದವರಿದ್ದರೂ ಅವರಲ್ಲಿ ಅಕ್ಷರಸ್ಥರ ಸಂಖ್ಯೆ ಕಡಿಮೆ. ಇದಕ್ಕೆ ಬಡತನವೇ ಕಾರಣವಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಾಗಿ ವಾಸಿಸುವ ಈ ಸಮುದಾಯದವರು ನಗರ ಪ್ರದೇಶದ ಹೆಚ್ಚಿನ ಶೈಕ್ಷಣಿಕ ಅನುಕೂಲತೆಗಳು ಸಿಗುತ್ತಿಲ್ಲ.

ಈ ಹಿನ್ನೆಲೆಯಲ್ಲಿ ಈ ಸಮುದಾಯದವರು ವಿದ್ಯಾವಂತರ ಸಂಖ್ಯೆಯನ್ನು ಹೆಚ್ಚಿಸಬೇಕು. ಆ ಮೂಲಕ ಸಮಾಜ ಉದ್ಧಾರವೂ ಸಾಧ್ಯ ಎಂದು ಹೇಳಿದವರು ದೊಡ್ಡ ಬಳ್ಳಾಪುರದ ಕೊಂಗಾಡಿಯಪ್ಪನವರು. ಶಾಲಾ ಶಿಕ್ಷಕರಾದ ಇವರು ಬಡತನದಲ್ಲಿಯೂ ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಇವರ ಈ ನಿಸ್ವಾರ್ಥ ಸೇವೆಯನ್ನು ಮೆಚ್ಚಿದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಇವರಿಗೆ 'ಲೋಕಸೇವಾ ನಿರತ' ಎಂಬ ಬಿರುದನ್ನು ದಯಪಾಲಿಸಿದ್ದರು. ಇವರ ಅಭಿಮಾನಗಳು ಇವರ ಹೆಸರಿನಲ್ಲಿ 'ಲೋಕಸೇವಾ ನಿರತ ದೊಡ್ಡಬಳ್ಳಾಪುರ ಕೊಂಗಾಡಿಯಪ್ಪ ಮೆಮೋರಿಯಲ್ ಎಜುಕೇಶನ್ ಸೊಸೈಟಿ' ಎಂಬ ಶಿಕ್ಷಣ ಸಂಸ್ಥೆಯನ್ನು ಹುಟ್ಟುಹಾಕಿದರು. ಇಂದಿಗೂ ಈ ಸಂಸ್ಥೆ ದೇವಾಂಗ ಸಮುದಾಯದ ಏಕೈಕ ಶಿಕ್ಷಣ ಸಂಸ್ಥೆಯೆಂಬ ಅಭಿಮಾನಕ್ಕೆ ಪಾತ್ರವಾಗಿದೆ. ಹೀಗೆ ಸಮುದಾಯದವರು ಅನುಭವಿಸುವ ಬಡತನವನ್ನು ದೂರಮಾಡಲು ಶೈಕ್ಷಣಿಕ ಪ್ರಗತಿಯಿಂದಲೇ ವೃತ್ತಿ ಹಿನ್ನೆಲೆಯಲ್ಲಿ ಸಾಧ್ಯ ಎಂದು ಮನಗಂಡ ಮಹಾನೀಯರು ಸಂಘ ಸಂಸ್ಥೆಯನ್ನು ಸ್ಥಾಪಿಸುವ ಮೂಲಕ ಬದಲಾವಣೆಯು ಸಾಧ್ಯ ಎನ್ನುವುದನ್ನು ಅರಿತು ಸಂಸ್ಥೆಗಳನ್ನು ರೂಪಿಸಿದರು.

ಈ ಮಠಗಳ ಮೂಲಧ್ಯೇಯ ಸಮುದಾಯದ ಸಂಘಟನೆಯನ್ನು ಕಾಪಾಡಿಕೊಳ್ಳುವುದು.

೧. ಆಯಾಯ ಸಮುದಾಯಗಳಲ್ಲಿರುವ ಜನಪರವಾಗಿರುವ ಧಾರ್ಮಿಕ ವಿಧಿ-ವಿಧಾನಗಳನ್ನು ಗೌರವಿಸುವುದು, ಪಾಲಿಸುವುದು.

೨. ಶೈಕ್ಷಣಿಕವಾಗಿ ಪ್ರಗತಿಸಾಧಿಸುವ ಮೂಲಕ ಆರ್ಥಿಕವಾಗಿಯೂ ಸದೃಢರಾಗುವುದು.

೩. ಇತ್ತೀಚಿಗೆ ಕೆಲ ರಾಜಕೀಯ ಪಕ್ಷಗಳಿಗೆ ಪರೋಕ್ಷವಾಗಿ ಸಹಕರಿಸುವ ಮೂಲಕ ತಮ್ಮ ಸಮುದಾಯದ ಜನತೆಗೂ ರಾಜಕೀಯ ಪ್ರವೇಶಕ್ಕೆ ಪ್ರಚೋದಿಸುವುದು ಮತ್ತು ರಾಜಕೀಯವಾಗಿ ಪ್ರಬಲರಾಗುವುದು.

೪. ಇತ್ತೀಚಿನ ಕೆಲ ದಿನಗಳಲ್ಲಿ ಮೇಲು ಸಮುದಾಯಗಳ ಮಠಕೇಂದ್ರಿತ ರಾಜಕೀಯ ವಿದ್ಯಮಾನಗಳು ಅಲಕ್ಷಿತ ಸಮುದಾಯಗಳ ರಾಜಕಾರಣಿಗಳನ್ನು ಅಧೀರರನ್ನಾಗಿಸದೆ ಆಯಾ ಸಮುದಾಯ ಸಂಘಟನೆಯ ಮೂಲಕ ರಾಜಕೀಯ ಅಧಿಕಾರವನ್ನು ಪಡೆಯಬಹುದು ಎನ್ನುವ ಕಾರಣಕ್ಕಾಗಿ ಧಾರ್ಮಿಕ ಭಾವದಿಂದ ಜನತೆಯನ್ನು ಭಾವನಾತ್ಮಕವಾಗಿ ಒಗ್ಗೂಡಿಸಲು ಮಠಗಳು ಹುಟ್ಟಿಕೊಂಡವು.

೫. ಅನ್ನ ದಾಸೋಹದ ಮೂಲಕ ಆಹಾರದ ಮಹತ್ವವನ್ನು ಮತ್ತು ದುಡಿಯುವ ವರ್ಗದ ಮಹತ್ವವನ್ನು ತಿಳಿಸುವುದು.

ಒಂದರ್ಥದಲ್ಲಿ ಇಂದು ಅಲಕ್ಷಿತ ಸಮುದಾಯದ ಮಠಗಳು ಮಾಡುವ ಕೆಲಸವನ್ನು ೧೨ನೇ ಶತಮಾನದಲ್ಲಿಯೇ ಅಂತಹ ಸಮಾಜಮುಖಿ ಕೆಲಸಗಳು ನಡೆದಿದ್ದವು ಎಂಬುದನ್ನು ಗುರುತಿಸಬಹುದು. ಅಲಕ್ಷಿತ ವರ್ಗದ ಜನರಿಗೆ ತಮ್ಮ ಸಮುದಾಯದ ಬಗೆಗೆ ತಾವು ಒಪ್ಪಿಕೊಳ್ಳಲಾಗದ ಒಂದು ಬಗೆಯ ಕೀಳರಿಮೆಯಿಂದ ಹೊರಬರುವಂತೆ ಮಾಡಿ ಅವರಲ್ಲಿ ಆತ್ಮವಿಶ್ವಾಸ ತುಂಬುವ ಕೆಲಸ ಮಾಡಿದ್ದು ಬಸವಣ್ಣನಂತಹ ಶಿವಶರಣರು. ಹಾಗಾಗಿ ಒಂದರ್ಥದಲ್ಲಿ ಈ ಮಠದ ಮೂಲಕ ಸಂಘಟನೆಗೊಳ್ಳುವ ಅಲಕ್ಷಿತ ಸಮುದಾಯಗಳ ಇಂದಿನ ಆಲೋಚನೆಯ ಮೂಲ ೧೨ನೇ ಶತಮಾನದಲ್ಲಿಯೇ ನಡೆದಿತ್ತು. ಸಾಮಾಜಿಕವಾಗಿ ಎಲ್ಲಾ ವರ್ಗದವರಿಗೆ ಮುಕ್ತವಾಗಿ ಬೆರೆಯುವ ಅವಕಾಶವನ್ನು ಮೊದಲಿಗೆ ೧೨ ಶತಮಾನದಲ್ಲಿ ಕಲ್ಪಿಸಲಾಗಿತ್ತು. ಹಾಗಾಗಿ ಅಲಕ್ಷಿತ ಸಮುದಾಯಗಳ ಮಠಗಳ ಬೆಳವಣಿಗೆಯ ಹಿಂದೆ ಶರಣ ಚಳುವಳಿಯ ಪ್ರಭಾವವಿರುವುದು ಕಂಡುಬರುತ್ತದೆ. ಇಂದು ಜನ್ಮತಾಳಿರುವ ಪ್ರತಿಯೊಂದು ಅಲಕ್ಷಿತ ಮಠಗಳೂ ಬಸವಣ್ಣನವರ ತಾತ್ವಿಕ ವಿಚಾರಗಳಿಂದ ಪ್ರಭಾವಿತವಾದವುಗಳಾಗಿದ್ದು, ಶರಣತತ್ವದಡಿಯಲ್ಲಿಯೇ ಮುಂದುವರೆದಿವೆ.

ಅಡಿ ಟಿಪ್ಪಣಿಗಳು

ಲಿಂಗಯ್ಯ ಸ; ೧೯೯೯, ವಾಲ್ಮೀಕಿ ಗುರುಪೀಠ(ಇದರಲ್ಲಿ: ಭಗೀರಥ ಸಂಕಲ್ಪ(ಸಂ), ಕಮಲೇಶ್ ಕೆ.ಆರ್), ಕುಷ್ಟಗಿ, ಶ್ರೀ ಭಗೀರಥ ಉಪ್ಪಾರ ಧಾರ್ಮಿಕ ಟ್ರಸ್ಟ್, ಬೆಂಗಳೂರು ಮತ್ತು ರಾಜಋಷಿ ಭಗೀರಥ ಜಯಂತಿ ಉತ್ಸವ ಸಮಿತಿ, ಕುಷ್ಟಗಿ.

ಅಧ್ಯಾಯ: ಐದು

ಅಲಕ್ಷಿತರ ಮಠಗಳು: ಒಂದು ನೋಟ

೧. ಪ್ರಸ್ತಾವನೆ
೨. ವಾಲ್ಮೀಕಿ ಪೀಠ
೩. ಬಂಜಾರ ಮಹಾಸಂಸ್ಥಾನ
೪. ಮಾದಾರ ಚನ್ನಯ್ಯ ಮಠ
೫. ಆದಿಜಾಂಬವ ಮಠ
೬. ಶ್ರೀಕೃಷ್ಣಯಾದವಾನಂದ ಮಠ
೭. ಸಿದ್ದರಾಮೇಶ್ವರ ಭೋವಿ ಗುರುಪೀಠ
೮. ಛಲವಾದಿ ಪೀಠ
೯. ಶರಣ ಹರಳಯ್ಯ ಗುರುಪೀಠ
೧೦. ಚಿನ್ಮೂಲಾದ್ರಿ ಶಿಲಾಪುರಿ ಮಹಾಸಂಸ್ಥಾನ, ಭಗೀರಥ ಪೀಠ
೧೧. ಕನಕ ಗುರು ಪೀಠ

ಅಧ್ಯಾಯ: ಐದು

ಅಲಕ್ಷಿತರ ಮಠಗಳು: ಒಂದು ನೋಟ

೧. ಪ್ರಸ್ತಾವನೆ

ಭರತ ಖಂಡದಲ್ಲಿ ಧರ್ಮಕ್ಕೆ ಇರುವಷ್ಟು ಪ್ರಾಮುಖ್ಯತೆ ಇನ್ನು ಬೇರೆ ಯಾವ ದೇಶಗಳಲ್ಲಿಯೂ ಇರಲಿಕ್ಕಿಲ್ಲ. ಭಾರತದಲ್ಲಿ ಹಲವು ಧರ್ಮಗಳು ತಮ್ಮ ಅಸ್ತಿತ್ವವನ್ನು ಕಂಡುಕೊಂಡಿವೆ. ಕನ್ನಡ ನಾಡು–ನುಡಿ, ಸಂಸ್ಕೃತಿಗೆ ಧರ್ಮಗಳು ನೀಡಿದಂತಹ ಕೊಡುಗೆಗಳು ಅವಿಸ್ಮರಣೀಯವೇ ಸರಿ. ಪ್ರಾಚೀನ ಕಾಲದಿಂದಲೂ ಹಿಂದೂ ಧರ್ಮದಲ್ಲಿ ಅನೇಕ ಶಾಖೆಗಳಿದ್ದು ಪ್ರತಿಯೊಂದು ಶಾಖೆಗೂ ಧರ್ಮಾಧಿಕಾರಿ ಅಥವಾ ಗುರುಗಳು ಇರುತ್ತಿದ್ದರು. ಈ ಸಂದರ್ಭದಲ್ಲಿ ಹಿಂದೂ ಧರ್ಮದ ವಿಕಸಿತ ಧರ್ಮಗಳಾಗಿ ಉದಯಿಸಿದ ಬೌದ್ಧಧರ್ಮ, ಜೈನಧರ್ಮ, ಸಿಖ್‌ಧರ್ಮ ಮತ್ತು ವೀರಶೈವ ಧರ್ಮಗಳಂತಹ ಧರ್ಮಗಳು ಹಿಂದೂ ಧರ್ಮದ ತತ್ವ ಸಿದ್ಧಾಂತಗಳಿಗೆ ಭಿನ್ನವಾಗಿ ಗುರುತಿಸಿಕೊಂಡು ಅಸ್ತಿತ್ವವನ್ನು ಪಡೆದುಕೊಂಡಿವೆ. ಇಂತಹ ಹಲವು ಧರ್ಮಗಳು ತಮ್ಮ ತಮ್ಮ ಧರ್ಮ ಕೇಂದ್ರಗಳನ್ನು ಸ್ಥಾಪಿಸಿಕೊಂಡು, ತಮ್ಮ ಧರ್ಮದ ತತ್ವ–ಸಿದ್ಧಾಂತಗಳನ್ನು ಪ್ರಚಾರವನ್ನು ಮಾಡುತ್ತ ಬಂದಿವೆ. ಮುಂದೆ ಈ ಧರ್ಮ ಕೇಂದ್ರಗಳಲ್ಲಿ ಕೆಲವು ಮಠಗಳಾಗಿ ಪರಿವರ್ತನೆಗೊಂಡವು. ಹೀಗೆ ರೂಪಗೊಂಡಂತಹ ಮಠಗಳು ಧರ್ಮಗಳ ಪ್ರಚಾರ ಹಾಗೂ ತಮ್ಮ ಸಮುದಾಯಗಳ ಅಭಿವೃದ್ಧಿ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಕಾರ್ಯಗಳನ್ನು ಪ್ರೋತ್ಸಾಹಿಸುತ್ತಾ ಬಂದಿವೆ. ಈ ಮಠಗಳು ಪ್ರಾಚೀನ ಕಾಲದಿಂದಲೂ ಒಂದಲ್ಲ ಒಂದು ರೀತಿಯಲ್ಲಿ ಸಮಾಜ ಸೇವೆಗಾಗಿ ತಮ್ಮನ್ನು ತೊಡಗಿಸಿಕೊಳ್ಳುವುದರ ಮೂಲಕ ತಮ್ಮ ಸಮುದಾಯದ ಜನತೆಯನ್ನು ಜಾಗೃತರನ್ನಾಗಿ ಮಾಡುವ ಉದ್ದೇಶವನ್ನಿಟ್ಟುಕೊಂಡಿದ್ದವು. ವೈದಿಕ ಕಾಲದಲ್ಲಿ ಬ್ರಾಹ್ಮಣರು ತಮ್ಮ ವಿದ್ಯಾಭ್ಯಾಸಕ್ಕಾಗಿ ಗುರುಕುಲಗಳು, ಅಗ್ರಹಾರಗಳು, ಘಟಿಕಾಸ್ಥಾನ, ಬ್ರಮ್ಹಪುರಿ ಮುಂತಾದವುಗಳಲ್ಲಿ ನಡೆಯುತ್ತಿದ್ದವು ಎಂಬುದಕ್ಕೆ ನಮ್ಮಲ್ಲಿ ಅನೇಕ ಉಲ್ಲೇಖಗಳು ಕಂಡುಬರುತ್ತವೆ. ನಂತರ ಬೌದ್ಧರಲ್ಲಿ ವಿದ್ಯಾಭ್ಯಾಸವು ಸಾಮಾನ್ಯವಾಗಿ ಬೌದ್ಧವಿಹಾರಗಳಲ್ಲಿ ನಡೆಯುತ್ತಿತ್ತು. ಕ್ರಿ.ಶ.೭ನೇ

ಶತಮಾನದಲ್ಲಿ ೨ನೇ ಪುಲಿಕೇಶಿಯ ರಾಜ್ಯದಲ್ಲಿ ೧೦೦ ಬೌದ್ಧ ವಿಹಾರಗಳು ಕರ್ನಾಟಕದಲ್ಲಿದ್ದವು. ಜೊತೆಗೆ ೫೦೦೦ ಬೌದ್ಧ ಯತಿಗಳು ವಿದ್ಯಾಭ್ಯಾಸ ಪಡೆಯುತ್ತಿದ್ದರು ಎಂಬುವುದು ಉಲ್ಲೇಖವಿದೆ. ಹಾಗೆಯೇ ಜೈನರು ತಮ್ಮ ಧರ್ಮದ ಪ್ರಚಾರಕ್ಕೆ ಜೈನಬಸದಿ, ಚೈತ್ಯಾಲಯಗಳಲ್ಲಿ ಮಠಗಳು ಅಸ್ತಿತ್ವದಲ್ಲಿದ್ದವು. ಉದಾಹರಣೆಗೆ ಹೊಂಬುಜ, ಕಾರ್ಕಳ, ಮೂಡಬಿದ್ರೆ, ಶ್ರವಣಬೆಳಗೊಳ ಮುಂತಾದ ಪ್ರದೇಶಗಳಲ್ಲಿ ಜೈನ ಮಠಗಳಿದ್ದವು ಎಂಬುದಕ್ಕೆ ಉಲ್ಲೇಖಗಳು ಸಿಗುತ್ತವೆ. ಜೊತೆಗೆ ವೀರಶೈವ ಮಠಗಳು ಸಹ ತುಂಬ ಪ್ರಾಚೀನತೆ ಇಲ್ಲದಿದ್ದರೂ ಸಹ ೨೦೦ ವರ್ಷಗಳ ಇತಿಹಾಸ ಇರುವುದು ಕಂಡುಬರುತ್ತದೆ.

ಎಲ್ಲ ಅಂಶಗಳನ್ನು ಗಮನಿಸಿದಾಗ ಕರ್ನಾಟಕ ಚರಿತ್ರೆಯಲ್ಲಿ ಹಲವು ಧರ್ಮಗಳು ಉದಯಿಸಿ, ಅವುಗಳು ವಿದ್ಯಾಕೇಂದ್ರಗಳಾಗಿ, ಸಮಾಜದ ಸನ್ನಡತೆಗೆ ಮತ್ತು ಧಾರ್ಮಿಕ ಕೇಂದ್ರಗಳಾಗಿ ಮಠಗಳು ಸ್ಥಾಪನೆಗೊಂಡವು. ಇಂತಹ ಮಠಗಳಿಗೆ ರಾಜರು ಹಾಗು ವಿದ್ಯಾಭಿಮಾನಿಗಳು ಸಹಕಾರ–ಸಹಯೋಗದಿಂದ ದಾನ–ದತ್ತಿಗಳಿಂದ ನಡೆಯುತ್ತಿದ್ದವು. ಈ ಮೇಲೆ ಚರ್ಚಿಸಿದಂತಹ ಎಲ್ಲ ಮಠಗಳು ಮೇಲ್ವರ್ಗದ ಜನತೆಯ ಮಠಗಳಾಗಿ ಇರುವುದು ಕಂಡುಬರುತ್ತಿದೆ. ಈ ಸಂದರ್ಭದಲ್ಲಿ ಯಾವೊಂದು ಅಲಕ್ಷಿತ ಸಮುದಾಯದ ಮಠಗಳು ಇರಲಿಲ್ಲ. ಬದಲಾಗಿ ಮೇಲ್ವರ್ಗದವರ ಮಠ–ಮಾನ್ಯಗಳ ಆಶ್ರಯದಲ್ಲಿ ಬದುಕಿದವರು.

ಕ್ರಿ.ಶ.೧೨ನೇ ಶತಮಾನದಲ್ಲಿ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಸಮಾನತೆಯನ್ನು ಸಾರಿದಂತಹ ಮಹಾನ್ ಮಾನವತಾವಾದಿ ಬಸವಣ್ಣ ಸರ್ವಜನರು ಸಮಾನರು, ಅಸ್ಪೃಶ್ಯತೆ, ಶೋಷಣೆಯ ವಿರುದ್ಧ ಕ್ರಾಂತಿಯನ್ನು ಮಾಡಿ ಸಮಾನತೆಯ ಸಮಾಜಕ್ಕಾಗಿ ಹಂಬಲಿಸಿದವರು. ವೈದಿಕಶಾಹಿಯ ಕುತಂತ್ರಗಳಿಂದ; ಸಮುದಾಯ, ಉಪ ಸಮುದಾಯಗಳು, ಅಸ್ಪೃಶ್ಯತೆ, ಶೋಷಣೆಗಳು ಈ ನಾಡಿನಲ್ಲಿ ಹುಟ್ಟಿಕೊಂಡವು. ಇಂತಹ ಅನೇಕ ವೈರುಧ್ಯಗಳಿಂದ ಅಸಮಾನತೆ, ಶೋಷಣೆ, ಅನ್ಯಾಯ, ಅಸ್ಪೃಶ್ಯತೆ ಇಂತಹ ಹಲವಾರು ಸಮಸ್ಯೆಗಳು ಸಮಾಜದಲ್ಲಿ ನೆಲೆಯೂರಿದ್ದವು. ಇಂತಹ ಅಸಮಾನತೆಯ ವಿರುದ್ಧ ಶತ–ಶತಮಾನಗಳಿಂದಲೂ ಹೋರಾಟ ನಡೆಸುತ್ತಲೇ ಬಂದಿದೆ. ಆದರೂ ಧಾರ್ಮಿಕವಾಗಿ, ಸಾಮಾಜಿಕವಾಗಿ ಶೋಷಣೆಗಳ ನಡೆಯುತ್ತಲೇ ಸಾಗಿವೆ. ಮನುಷ್ಯ ಸಂಬಂಧಗಳ ನಡುವೆ ಅಂತರ ಏರ್ಪಟ್ಟಿವೆ. ಇಂತಹ ಅಸ್ವಸ್ಥ ಸಮಾಜವನ್ನು ಸರಿಪಡಿಸುವ ನಿಟ್ಟಿನಲ್ಲಿ ೧೨ನೇ ಶತಮಾನದ ವಚನಕಾರರು, ಸಮಾಜದ ಸ್ವಾಸ್ಥ್ಯವನ್ನು ಸಂಘಟಿಸುವಲ್ಲಿ ನಿರತರಾದರು. ಧರ್ಮ ಎಂಬುದು ಉಚ್ಚಸಮುದಾಯದ ಸ್ವತ್ತಾಗಿತು. ಧಾರ್ಮಿಕ ಕೇಂದ್ರಗಳು, ಕಂದಾಚಾರ, ಮೂಢನಂಬಿಕೆಗಳ ಆಗರಗಳಾಗಿದ್ದವು.

ಪುರೋಹಿತಶಾಹಿಗಳು ದೇವರು, ಧರ್ಮದ ಹೆಸರಿನಲ್ಲಿ ಮುಗ್ಧ ಜನರನ್ನು ವಂಚಿಸುತ್ತಿದ್ದರು. ಹೀಗಾಗಿ ಅಸ್ಪೃಶ್ಯವೆಂಬ ವರ್ಗವೇ ಸೃಷ್ಟಿಯಾಯಿತು. ವೈದಿಕ ವ್ಯವಸ್ಥೆಯೊಳಗ ದಲಿತವರ್ಗದ ಜನ ಪ್ರವೇಶಿಸುವಂತರಲಿಲ್ಲ. ದೇವಾಲಯಗಳ ಉಪಾಸನೆ ಕೇಂದ್ರಗಳಾಗಿದ್ದವು. ಅದು ಮೇಲುವರ್ಗದವರಿಂದ ಕಡೆಗಣಿಸಲ್ಪಟ್ಟ, ದೀನ-ದಲಿತರಿಗೆ ಧಾರ್ಮಿಕ ಮತ್ತು ಸಾಮಾಜಿಕ ಅಸ್ತಿತ್ವವನ್ನು ಒದಗಿಸಿಕೊಡಲು ಹನ್ನೆರಡನೆ ಶತಮಾನದ ಶರಣರು ಹೋರಾಡಿದರು.

ವೈದಿಕ ಋಷಿಗಳು ಸಮುದಾಯ, ಕುಲ, ಗೋತ್ರಗಳನ್ನು ಪ್ರಶ್ನಿಸಿದರು. ಸಾಮಾಜಿಕ ನ್ಯಾಯ ಮತ್ತು ಸಮಾನತೆಯನ್ನು ಸಾಧಿಸಲು ಹೊರಟ ಅಂದಿನ ಆಂದೋಲನದಲ್ಲಿ ಬೇರೆ ಬೇರೆ ಸಮುದಾಯ-ಉಪಸಮುದಾಯಗಳಿಂದ ಮತ್ತು ಕೆಳಸ್ತರದಿಂದ ಬಂದವರು ಭಾಗವಹಿಸಿದರು. ಹೀಗಾಗಿ ಆ ಸಂದರ್ಭದಲ್ಲಿ ತಾರತಮ್ಯ ಭಾವವನ್ನು ಹೊಂದಿರಲಿಲ್ಲ. ಸಂಸ್ಕಾರ ಎನ್ನುವುದು ಹುಟ್ಟಿನಿಂದ ಬರುತ್ತಿದೆ ಎಂಬ ಕಂದಾಚಾರ ತೊಲಗಿ ಅವಕಾಶ ದೊರತರೆ ಯಾವುದೇ ಪುರದಿಂದ ಸಂಸ್ಕಾರವಂತರು ರೂಪುಗೊಳ್ಳಬಹುದೆಂಬುದು ದೃಢಪಟ್ಟಿತು. ಇಂಥ ಮಹತ್ವದ ಆಲೋಚನೆಗಳನ್ನು ಶರಣ ಪರಂಪರೆ ಪ್ರತಿಪಾದಿಸಿತು. ಅವುಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳದೇ ಸಾಮಾಜಿಕ ತಾರತಮ್ಯ, ಅಸ್ಪೃಶ್ಯತೆ, ಅಂಧಶ್ರದ್ಧೆಯನ್ನು ಪೋಷಿಸುವವರು ಪ್ರಬಲರಾದರು. ಈಗಲೂ ಇಂತಹ ಸ್ಥಿತಿಯೇ ನಿರ್ಮಾಣವಾಗಿದೆ. ಭಾರತದಂತಹ ಸಮುದಾಯತೀತ ರಾಷ್ಟ್ರದಲ್ಲಿ ಸಮುದಾಯಗಳೇ ಅತಿಯಾಗಿ ಮತಾಂಧತೆ ಉಲ್ಬಣಿಸುತ್ತಿದೆ. ಧರ್ಮದ ಜೊತೆ ರಾಜಕಾರಕಣ ಬೆರೆತು, ಸ್ವಾರ್ಥ, ಪ್ರತಿಷ್ಠೆಯ ಕಾರಣದಿಂದಾಗಿ, ಧರ್ಮಕ್ಕೆ ಸಮುದಾಯ ಸ್ವರೂಪ ಬಂದುಬಿಟ್ಟಿದೆ. ಇಂದು ಜಗತ್ತನ್ನು ಸಮುದಾಯ ವೈಷಮ್ಯದ ದಳ್ಳುರಿ ಆವರಿಸಿದೆ,. ಪಂಗಡ-ಒಳಪಂಗಡಗಳ ಮಧ್ಯೆ ಆಂತರಿಕ ಕಲಹಗಳು ನಡೆದಿವೆ. ಮಹಾಪುರುಷರ ಆದರ್ಶಗಳನ್ನು ತೋರಿಕೆಗೆ ಮುಂದಿಟ್ಟುಕೊಂಡು ಸ್ವ-ಪ್ರತಿಷ್ಠೆಯನ್ನು ಮೆರೆಯುವವರು ಹೆಚ್ಚಿದ್ದಾರೆ. ಮಹಾತ್ಮರ ಜಯಂತಿ, ಉತ್ಸವಗಳು ಔಪಚಾರಿಕವೆನ್ನಿಸಿವೆ. ಧರ್ಮದ ಹೆಸರಿನಲ್ಲಿ ಗೊಡ್ಡು ಸಂಪ್ರದಾಯ, ಆಚರಣೆಗಳು ಮುಂದುವರಿದಿವೆ. ಅವುಗಳನ್ನು ಬದಲಾಯಿಸಬೇಕಾದರೆ, ತಮ್ಮ ಧರ್ಮ, ಸಮುದಾಯಗಳಲ್ಲಿ ಒಂದು ಆರೋಗ್ಯಕರವಾದ ವಾತಾವರಣವನ್ನು ಸೃಷ್ಟಿಮಾಡಬೇಕು, ಮನುಷ್ಯ ಉನ್ನತಿಗೆ ದಾರಿಯನ್ನು ಹುಡುಕಬೇಕು, ಧಾರ್ಮಿಕ ನೆಲೆಯಲ್ಲಿ ವೈಜಾರಿಕ ದೃಷ್ಟಿಯಿಂದ ಸ್ವಚ್ಛ ಸಮಾಜವನ್ನು ಕಟ್ಟಬೇಕು. ವೇದ-ಶಾಸ್ತ್ರಗಳ ನೆಪದಲ್ಲಿ ಮನುಕುಲವನ್ನು ನಾಶಮಾಡಬಾರದು. ಅದಕ್ಕಾಗಿಯೇ ೧೨ನೇ ಶತಮಾನದಲ್ಲಿ ಶರಣರಾದ ಸಿದ್ಧರಾಮನ ಪ್ರತಿಕ್ರಿಯೆ ಹೀಗಿದೆ.

ಸ್ಮೃತಿಗಳು ಸಮುದ್ರ ಪಾಲಾಗಲಿ

ಶೃತಿಗಳು ವೈಕುಂಠ ಸೇರಲಿ

ಪುರಾಣಗಳ ಅಗ್ನೇಯ ಸೇರಲಿ ಎಂದು ಹೇಳುತ್ತಾರೆ.

ವರ್ಣಾಶ್ರಮ ವ್ಯವಸ್ಥೆಯ ಪ್ರಭಾವದಿಂದ ವೈದಿಕ ಸಂಸ್ಕೃತಿ ತನ್ನ ಅದಿಪತ್ಯವನ್ನು ವಿಸ್ತರಿಸಿಕೊಂಡಿತು. ಇದರಿಂದಾಗಿ ಸಾಮಾಜಿಕ ವ್ಯವಸ್ಥೆ ಹದಗೆಟ್ಟಿತು. ವಿಪ್ರ ಹೊಲೆಯ, ಮಾದಿಗ, ಶೂದ್ರ, ಅಸ್ಪೃಶ್ಯ, ಗಂಡು-ಹೆಣ್ಣು ಎಂಬ ನಿಲುವುಗಳಿಂದ ಸಮಾಜದಲ್ಲಿ ಸಮುದಾಯ ತಾರತಮ್ಯ ಉಂಟಾಗಿ, ಸಮುದಾಯ ಆಧಾರಿತ ಶೋಷಣೆಯ ನೆಲೆಗಳು ಉಂಟಾದವು. ಇಂದಿಗೂ ಸಹ ಸಮುದಾಯ ಎಂಬ ವಿಷಪ್ರಾಶನದಿಂದ ದಲಿತ, ಅಲಕ್ಷಿತ ಸಮುದಾಯಗಳು ಶೋಷಣೆಗೆ ಒಳಗಾಗುತ್ತಿವೆ. ಇಂತಹ ಸುದೀರ್ಘವಾದ ಇತಿಹಾಸದಲ್ಲಿ ಶತ-ಶತಮಾನದಿಂದಲೂ, ದಲಿತರು ಪ್ರಾಣಿಗಳಿಗಿಂತ ಕಡೆಯಾಗಿ ಜೀವಿಸಿ, ತಮ್ಮ ನೋವುಗಳನ್ನು ತಾವೇ ನುಂಗಿಕೊಂಡು ಮೇಲ್ವರ್ಗದವರ ಸುಖಕ್ಕಾಗಿ ದುಡಿದವರು. ಇಂತಹವರ ನೋವಿಗೆ ೧೨ನೇ ಶತಮಾನದಲ್ಲಿ ಕ್ರಾಂತಿ ಮಾಡಿದಂತಹ ಮಹಾನ್ ಮಾನವತಾವಾದಿ ಬಸವಣ್ಣ ಅನೇಕ ಶರಣರು ಸಮಾನತೆಯ ಸಮಾಜವನ್ನು ಕಟ್ಟುವ ನಿಟ್ಟಿನಲ್ಲಿ ಅಸ್ತಿಭಾರಹಾಕಿ ನಡೆದಂತೆ ನುಡಿದರು. ನುಡಿದಂತೆ ನಡೆದರು. ಆದರೆ ವಾಸ್ತವ ಪ್ರಪಂಚದಲ್ಲಿಟ್ಟುಕೊಂಡು ನೋಡುವುದಾದರೆ, ಸುಮಾರು ೮೦೦ ವರ್ಷಗಳ ಹಿಂದೆ ನಡೆದಂತಹ ಸಾಮಾಜಿಕ ಕ್ರಾಂತಿ, ಸಮಾಜದ ಬದಲಾವಣೆಗೆ ನಡೆದಂತಹ ಚಳವಳಿಗಳು ಕೇವಲ ಇಂದು ಪುಸ್ತಕಗಳನ್ನು ಸೇರಿವೆ. ೧೯-೨೦ನೇ ಶತಮಾನದಲ್ಲಿ ಬಂದಂತಹ ಮಾನವತಾವಾದಿಯಾದ ಡಾ.ಬಿ.ಆರ್.ಅಂಬೇಡ್ಕರ್ ಅವರಂತಹ ಒಬ್ಬ ಮಹಾನ್‌ವ್ಯಕ್ತಿ ಸಂವಿಧಾನವನ್ನು ರಚಿಸುವುದರ ಮೂಲಕ, ಈ ದೇಶದ ಕಾನೂನು, ಮೀಸಲಾತಿ, ದಲಿತ, ಅಸ್ಪೃಶ್ಯರು, ಅಲಕ್ಷಿತ ತಳಸಮುದಾಯಗಳು, ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ಸಂವಿಧಾನದಲ್ಲಿ ಕಾನೂನುಗಳನ್ನು ತಂದರು. ಆ ಮೂಲಕ ಸಮಾಜದ ಕೆಳಸ್ತರದಲ್ಲಿರುವ ಸಮುದಾಯಗಳನ್ನು ಮೇಲ್‌ಸ್ತರಕ್ಕೆ ತರಲು ಬಹಳ ದೊಡ್ಡ ಸಂಕಲ್ಪ ಆಶಾಭಾವನೆಯನ್ನು ಇಟ್ಟುಕೊಂಡಿದ್ದರು. ಆದರೆ ಪ್ರಸ್ತುತ ಸಂದರ್ಭದಲ್ಲಿ ಆದರ್ಶ ಸಮಾಜವನ್ನು ನಿರ್ಮಾಣ ಮಾಡಬೇಕೆಂದು ಹೇಳುತ್ತಲೇ ತಾರತಮ್ಯವನ್ನು ಬೆಳೆಸುತ್ತಿರುವವರು ಹೆಚ್ಚುತ್ತಿದ್ದಾರೆ. ಸವರ್ಣೀಯರು ಹಾಗೂ ದಲಿತರು ಪರಸ್ಪರ ನಂಬಿಗೆಯನ್ನು ಕಳೆದುಕೊಂಡಿದ್ದಾರೆ. ಪ್ರಜಾ ಪ್ರಭುತ್ವ ವ್ಯವಸ್ಥೆಯಲ್ಲಿ ಅಸಮಾನತೆಗೆ ಅವಕಾಶವಿಲ್ಲ. ಆದರೂ ಭಾರತದಲ್ಲಿ ಸಮುದಾಯ ದಳ್ಳುರಿ ನಿರಂತರವಾಗಿ ವ್ಯಾಪಿಸುತ್ತಿದೆ. ದಲಿತರನ್ನು ಅಮಾನೀಯವಾಗಿ ನಡೆಸಿಕೊಳ್ಳುವ ಪ್ರವೃತ್ತಿಯಿದೆ. ಸಭೆ-ಸಮಾರಂಭಗಳಲ್ಲಿ

ಬೊಗಳೆ ಮಾತುಗಳನ್ನಾಡಿ, ಜೀವನ ಸಂದರ್ಭದಲ್ಲಿ ಪ್ರಚ್ಛನ್ನ ಭ್ರಷ್ಟರಾಗಿರುವ ರಾಜಕಾರಣಿಗಳಿದ್ದಾರೆ, ಅಧಿಕಾರಿಗಳಿದ್ದಾರೆ, ದಿನವಿಡೀ ಹರಿಜನರೊಡನೆ ವ್ಯವಹರಿಸಿ ಮನೆಸೇರಿದ ಕೂಡಲೇ ಗಂಜಲದ ನೀರಿನಿಂದ ಪುನೀತರಾದೆವೆಂದು ನೆಮ್ಮದಿ ತಂದುಕೊಳ್ಳುವ ಜಡಸಂಪ್ರದಾಯವಾದಿಗಳಿದ್ದಾರೆ. ಇಂತಹ ಸಮಾಜದಲ್ಲಿ ಸಮುದಾಯ, ವಿನಾಶವಾಗಬೇಕೆಂದು ಹೋರಾಡಿದ ಬಸವಣ್ಣ, ಗಾಂಧಿ, ಅಂಬೇಡ್ಕರ್ ಅವರ ವಿಚಾರಧಾರೆಗಳನ್ನು ಒಪ್ಪುವ ಈ ದೇಶದಲ್ಲಿ ಧರ್ಮಸಹಿಷ್ಣುತೆ, ಸಮಾನತೆ, ಸಾಮಾಜಿಕ ನ್ಯಾಯಕ್ಕೆ ಆಧುನಿಕ ಸಂದರ್ಭದಲ್ಲಿರುವಂತಹ ನಾವುಗಳು ಇನ್ನಾದರು ಅರ್ಥಮಾಡಿಕೊಳ್ಳುವ ಆ ನಿಟ್ಟಿನಲ್ಲಿ ಚಿಂತಿಸಬೇಕಾಗಿದೆ. ಇಂತಹ ಸಾವಿರಾರು ವಿಚಾರ–ಚಿಂತನೆಗಳು ನುಡಿದರು, ಸಹ ಅಸಮಾನತೆ ಸಮಾಜದಲ್ಲಿ ನೆಲೆಯೂರಿದೆ.

ಸಮುದಾಯ ಏಣಿ–ಶ್ರೇಣೀಕರಣ ಸಮಾಜದಲ್ಲಿ ಪ್ರತಿಯೊಂದು ಸಮುದಾಯಗಳು ಮಠಗಳ ಸ್ಥಾಪನೆ ಮಾಡಿಕೊಳ್ಳುವುದರ ಮೂಲಕ, ಸ್ವಾವಲಂಬನೆ, ಅಭಿವೃದ್ಧಿ ಶೈಕ್ಷಣಿಕ ಪ್ರಗತಿ ಸಮಾಜದಲ್ಲಿ ಮೇಲ್‌ಸ್ತರಕ್ಕೆ ಬಂದು ಗೌರವ–ಸ್ಥಾನಮಾನಗಳನ್ನು ಪಡೆಯುವ ನಿಟ್ಟಿನಲ್ಲಿ ದಾಪುಗಾಲು ಹಾಕುತ್ತಿವೆ. ಬಹಳ ಮುಖ್ಯವಾಗಿ ಅಲಕ್ಷಿತ ಸಮುದಾಯದ ಮಠಗಳನ್ನು ಹುಟ್ಟುಹಾಕುವುದರ ಮೂಲಕ, ಧಾರ್ಮಿಕ ಸಂಘಟನೆ, ಸಮುದಾಯದ ಸರ್ವಾಂಗೀಣ ಅಭ್ಯುದಯವನ್ನು ಮೂಲ ಉದ್ದೇಶವನ್ನಿಟ್ಟುಕೊಂಡಿವೆ. ಮತ್ತು ತಮ್ಮ ತಮ್ಮ ಸಮುದಾಯಗಳಲ್ಲಿ ಧಾರ್ಮಿಕ ಜಾಗೃತಿಯನ್ನು ಮೂಡಿಸುವುದರ ಮೂಲಕ, ಸಮುದಾಯದ ಒಗ್ಗಟ್ಟು ಆ ಮೂಲಕ ಸಮುದಾಯದ ಆರ್ಥಿಕ ಸ್ವಾವಲಂಬನೆ, ಶೈಕ್ಷಣಿಕ ಪ್ರಗತಿ, ಸಾಮಾಜಿಕ ಮನ್ನಣೆಯನ್ನು ಪಡೆಯಲು ಮಠ ಎಂಬ ಗುರು ಕೇಂದ್ರಗಳನ್ನು ತೆರೆದು, ಆ ಮೂಲಕ ಸಮುದಾಯದವರನ್ನು ಭಕ್ತಿ–ಗೌರವಗಳಿಂದ ನಡೆದುಕೊಳ್ಳುವಂತೆ, ಮತ್ತು ಸನ್ಮಾರ್ಗದತ್ತ ನಡೆಯುವಂತೆ ಬೋಧನೆ ಮಾಡಲಾಗುತ್ತಿದೆ. ಈ ನಿಟ್ಟಿನಲ್ಲಿ ತಳಸಮುದಾಯದ ಮಠಗಳು ಆರಂಭದ ಹೆಜ್ಜೆಯನ್ನು ಇಟ್ಟಿವೆ.

ಬಹುತೇಕ ದಲಿತ, ಅಲಕ್ಷಿತ ಸಮುದಾಯದ ಮಠಗಳು ಅಂದರೆ ಶ್ರಮಿಕ ವರ್ಗವು ಮತ್ತು ಸಮಾಜದ ಅಭಿವೃದ್ಧಿಗೆ ಯಾವುದಾದರು ಒಂದು ಕಾಯಕದಲ್ಲಿ ಪರಂಪರಾಗತವಾಗಿ ನಿಷ್ಠೆಯನ್ನು ಇಟ್ಟುಕೊಂಡು ಬಂದಂತಹವು. ಇಂತಹ ಸಾವಿರಾರು ವರ್ಷಗಳ ಇತಿಹಾಸದಲ್ಲಿ ಅಲಕ್ಷಿತ ಸಮುದಾಯಗಳ ನೋವು, ಶೋಷಣೆ, ಶ್ರಮ, ಅನ್ಯಾಯಗಳನ್ನು ತಮ್ಮ ಒಡಲೊಳಗಿರಿಸಿಟ್ಟುಕೊಂಡು ತಮ್ಮ ನೋವುಗಳನ್ನು ತಾವೇ ನುಂಗುತ್ತ ಸಾವಿರಾರು ವರ್ಷಗಳಿಂದ ತಾಳ್ಮೆ ಸಹನೆಯಿಂದ ಸಹಿಸುತ್ತ ಬಂದಿದ್ದಾರೆ. ಇನ್ನಾದರು ಆ ದಮನಿತ ಸಮುದಾಯಗಳಿಗೆ ಸಮಾಜದಲ್ಲಿ ಗೌರವ, ಮನ್ನಣೆ ದೊರೆತು ಸಮಾಜದ ಮುಖ್ಯನೆಲೆಯಲ್ಲಿ ಗುರುತಿಸಿಕೊಳ್ಳುವ

ನಿಟ್ಟಿನಲ್ಲಿ ಹೆಜ್ಜೆ ಇಡಬೇಕಾಗಿದೆ. ಅಲಕ್ಷಿತ ಸಮುದಾಯಗಳ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ವಲಯಗಳಲ್ಲಿ ಸಬಲರು ಎನ್ನುವ ನಿಟ್ಟಿನಲ್ಲಿ ಅಲಕ್ಷಿತ ಸಮುದಾಯದವರು ಜಾಗೃತರಾಗಬೇಕಾಗಿದೆ. ಇಂತಹ ಹತ್ತು-ಹಲವಾರು ದೊಡ್ಡ ಆಶೋತ್ತರಗಳನ್ನು ಇಟ್ಟುಕೊಂಡ ಅಲಕ್ಷಿತ ಸಮುದಾಯದವರು ಮಠಗಳ ಸ್ಥಾಪನೆಗೊಂಡಿವೆ. ಈ ಅಲಕ್ಷಿತ ಮಠಗಳ ಮಠಾಧೀಶರನ್ನು ಸಂದರ್ಶನ ಮಾಡಿದಾಗ ಮಠಗಳ ಸ್ಥಾಪನೆಯ ಉದ್ದೇಶ, ಏಕೆ? ಇಂತಹ ಹತ್ತು ಹಲವಾರು ಪ್ರಶ್ನೆಗಳಿಗೆ ಮುಂದಿಟ್ಟುಕೊಂಡು ಕೇಳಿದಾಗ ಅವರು ನೀಡಿರುವಂತಹ ಉತ್ತರಗಳು ಸಮುದಾಯದ ಅಭಿವೃದ್ಧಿ, ಸಮುದಾಯದ ಒಗ್ಗಟ್ಟು, ಸಮುದಾಯದ ಏಳಿಗೆಗೆ ಸಹಕಾರ, ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಸಂಘಟಿಸುವ ಪ್ರಯತ್ನ, ಶೈಕ್ಷಣಿಕವಾಗಿ ಆ ಸಮುದಾಯವನ್ನು ಪ್ರಗತಿಯತ್ತ ಏರಲು ಪ್ರಯತ್ನ ಸಾಧಿಸುವುದಾಗಿದೆ. ಹಾಗೆಯೇ ಇದುವರೆಗೂ ಅಲಕ್ಷಿತ ಸಮುದಾಯ ಸಾಧಿಸಿರುವ ಶೈಕ್ಷಣಿಕ ಪ್ರಗತಿ ಮುಂದೆ ಹಾಕಿಕೊಳ್ಳುವಂತಹ ಕಾರ್ಯಕ್ರಮಗಳು ಮತ್ತು ಸಮಾಜದ ನೆಲೆಯಲ್ಲಿ ಸಾಮಾಜಿಕ ಸಮಾನತೆಗೆ ಇತರೆ ಮೇಲ್ವರ್ಗದ ಮಠಾಧೀಶರು ತಮ್ಮೊಂದಿಗೆ ವ್ಯವಹರಿಸುವ ರೀತಿ ಮತ್ತು ಆ ಮಠಗಳಿಂದ ಸಹಕಾರ, ಹಾಗೆಯೇ ಅಲಕ್ಷಿತ ಸಮುದಾಯಗಳು, ಮಠಾಧಿಪತಿಗಳು ತಮ್ಮ ತಮ್ಮ ಸಮುದಾಯಗಳ ಅಭಿವೃದ್ಧಿಗೆ ಹಾಕಿಕೊಂಡಿರುವ ಕಾರ್ಯಕ್ರಮಗಳು ಯಾವುವು? ಅವು ಯಾವ ನಿಟ್ಟಿನಲ್ಲಿ ಸಾಗಬೇಕು ಮತ್ತು ಅವುಗಳಿಂದ ಸಮುದಾಯಗಳಿಗೆ ಯಾವ ರೀತಿಯ ಪ್ರಯೋಜನ ಇಂತಹ ಹಲವಾರು ಪ್ರಶ್ನೆಗಳೊಂದಿಗೆ ಚರ್ಚಿಸಲಾಯಿತು. ಆದರೆ ಈ ಎಲ್ಲ ಪ್ರಶ್ನೆಗಳಿಗೆ ಕೆಲವೊಂದು ಮಠಾಧೀಶರರು ನಿರಾಶದಾಯಕವಾದ ಉತ್ತರ ನೀಡುತ್ತಾರೆ.

ಸಮುದಾಯದ ಅಭಿವೃದ್ಧಿ ಶೈಕ್ಷಣಿಕವಾಗಿ ಪ್ರಗತಿ ಸರ್ಕಾರದ ಅನುದಾನದ ನೆರವುಗಳು ಹೇಗೆ ಸಮುದಾಯದ ಪ್ರಗತಿಗೆ ಬಳಕೆ ಮಾಡಿಕೊಂಡಿದ್ದಾರೆ ಎಂಬುದನ್ನು ನೋಡಿದರೆ. ಸರ್ಕಾರದ ಅನುದಾನದ ಕೊರತೆ, ಬಹಳಷ್ಟು ಕಾಡುತ್ತಿದೆ. ಈ ಮಠಗಳಿಗೆ ಆದಾಯದ ಮೂಲಗಳು ಬಹಳ ಕಡಿಮೆ, ಶೈಕ್ಷಣಿಕ ಚಟುವಟಿಕೆಗಳಲ್ಲಿ ಬಹಳ ಹಿಂದುಳಿದಿವೆ. ಕೇವಲ, ಒಂದೆರಡು ಶಾಲೆ, ವಸತಿ ನಿಲಯಗಳನ್ನು ಸ್ಥಾಪನೆ ಮಾಡಿರುವುದು ಕಂಡುಬರುತ್ತದೆ. ಒಟ್ಟಿನಲ್ಲಿ ಅಲಕ್ಷಿತ ಸಮುದಾಯದ ಮಠ ಮತ್ತು ಮಠಾಧೀಶರು ಹೆಚ್ಚು ಕ್ರಿಯಾಶೀಲರಾಗಿ ಉಳಿಯಬೇಕಾದ ಅನಿವಾರ್ಯತೆ ಬಹಳ ಇದೆ. ಈ ಅಲಕ್ಷಿತ ಸಮುದಾಯದ ಇತಿಹಾಸದ ನೋವನ್ನು ಅರ್ಥಮಾಡಿಕೊಂಡು ಪ್ರಗತಿಯ ಬದುಕನ್ನು ಕಟ್ಟಿಕೊಳ್ಳಬಹುದಾಗಿದೆ.

ಒಂದೇ ರೀತಿಯಲ್ಲಿ ಈ ಎಲ್ಲ ಅಲಕ್ಷಿತ ಮಠಗಳು ಚಿತ್ರದುರ್ಗ ಶ್ರೀ ಮುರಘಾಮಠದ ಕೃಪಾಶೀರ್ವಾದದೊಂದಿಗೆ ಈ ಎಲ್ಲಾ ಅಲಕ್ಷಿತ ಸಮುದಾಯಗಳಿಗೆ ಪೀಠಾಧಿಪತಿಗಳನ್ನು

ಮಾಡಿದ್ದಾರೆ. ಆ ಮೂಲಕ ಸಮುದಾಯಗಳ ಒಗ್ಗಟ್ಟು ಅಭಿವೃದ್ಧಿ ಶೈಕ್ಷಣಿಕ ಪ್ರಗತಿ ಸಾಧ್ಯ ಎಂಬುದು ಶ್ರೀ ಶರಣರ ದೊಡ್ಡ ನಿಲುವಾಗಿದೆ. ಸಾಮಾಜಿಕ ಚಿಂತಕರಾದ ಡಾ.ಬಂಜಗೆರೆ ಜಯಪ್ರಕಾಶ ಅವರು ಹೇಳುವಂತೆ ಬಹಳ ಮುಖ್ಯವಾಗಿ "ಅಲಕ್ಷಿತ ಮಠಗಳು ತಮ್ಮ ಸಮುದಾಯದ ಅಭಿವೃದ್ಧಿಗಾಗಿ ಬೇಕಾಗಿರುವಂತಹ ನಾಯಕತ್ವದ ಅಭಿವೃದ್ಧಿ, ಉದ್ಯಮಗಳ ಅಭಿವೃದ್ಧಿ, ಅತ್ಯುತ್ತಮ ರಾಜಕಾರಣಿಗಳ ಅಭಿವೃದ್ಧಿ, ಚಿಂತಕರ ಅಭಿವೃದ್ಧಿಗೆ ಬಹಳ ಕ್ಷೇತ್ರಗಳು ಇವೆ. ವಿದ್ವಾಂಸರನ್ನೂ, ರಾಜಕಾರಣಿಗಳನ್ನು, ಸಮಾಜ ಸೇವಕರನ್ನೂ ಇವರೇ ಬೆಳೆಸಬೇಕು. ಹಲವು ಬಗೆಯ ಜನರನ್ನು ಅಭಿವೃದ್ಧಿಗಾಗಿ ಮಾಡಬೇಕಾಗಿರುವ ಆರ್ಥಿಕ ಸಂಪನ್ಮೂಲಗಳಾಗಿ ಕ್ರೋಢೀಕರಿಸಬೇಕು. ಒಂದು ಮಠ ನಿಷ್ಪಕ್ಷವಾಗಿ ಸಂಪನ್ಮೂಲ ಕ್ರೋಢೀಕರಣವಾಗಿರುವ ಒಂದು ಜಾಗವಾಗಿರಬೇಕು, ರಾಜಕೀಯವಾಗಿ ತಮಗೆ ಬರಬೇಕಾಗಿರುವ ಪಾಲು ಎಲ್ಲೆಲ್ಲಿ ಮೀಸಲಾಗಿದೆಯೋ ಅದನ್ನು ಸರಿಯಾಗಿ ವಿನಿಯೋಗ ಮಾಡಿಕೊಳ್ಳಲಿಕ್ಕೆ ಪಂಚಾಯತ್‌ರಾಜ್ ವ್ಯವಸ್ಥೆಯಿಂದ ಹಿಡಿದು ಜಿಲ್ಲಾ ಪಂಚಾಯತ್, ತಾಲ್ಲೂಕ್ ಪಂಚಾಯತ್, ವಿಧಾನ ಸಭೆ, ವಿಧಾನ ಪರಿಷತ್, ಲೋಕಸಭೆಯವರಿಗೂ ಅದಕ್ಕೆ ಬೇಕಿರುವ ಪ್ರಾತಿನಿಧ್ಯವನ್ನು ಗಳಿಸೋಕೆ ಬೇಕಾಗಿರುವ ಸಾಮಾಜಿಕ ಸಂಘಟನೆಗಳು ಮಾಡಬೇಕು, ಮತಬ್ಯಾಂಕ್ ಕ್ರಿಯೆಟ್ ಮಾಡಬೇಕು. ಇಂತಹ ಹತ್ತು ಹಲವಾರು ಅಂಶಗಳನ್ನು ಮಠಾಧೀಶರು ಅರಿತಿರಬೇಕು. ಹಾಗಾದಾಗ ಈ ಅಲಕ್ಷಿತ ಮಠಗಳ ಅಭಿವೃದ್ಧಿಗೆ ಪೂರಕವಾದ ವಾತಾವರಣವನ್ನು ಸೃಷ್ಟಿಮಾಡಿಕೊಂಡಂತಾಗುತ್ತದೆ ಅಥವಾ ಸಹಕಾರಿಯಾಗುತ್ತದೆ.

ಪ್ರತಿಯೊಂದು ಸಮುದಾಯದ ಮಠಾಧೀಶರು ತಮ್ಮ ಸಮುದಾಯದ ಪಾರಂಪರಿಕ ಆಚರಣೆ, ಸಂಸ್ಕೃತಿಯ ಬಗ್ಗೆ ಚೆನ್ನಾಗಿ ತಿಳಿದುಕೊಂಡಿರಬೇಕು. ಯಾವುದೇ ಸಮುದಾಯದ ಸ್ವಾಮಿಗಳು ಆಗಿರಲಿ ನಮ್ಮ ಸಮುದಾಯಗಳು ಸಂಸ್ಕೃತಿಯ ಹಿನ್ನೆಲೆ ನಮಗಿಂತಲೂ ಜಾಸ್ತಿ. ಅಧ್ಯಯನದಿಂದ ತಿಳಿದವರಾಗಿರಬೇಕು. ಅದಕ್ಕೋಸ್ಕರ ವಿಶೇಷವಾದ ಅಧ್ಯಯನ ಹೊಂದಿದ್ದರೆ ಉತ್ತಮ. ಸಮುದಾಯದಲ್ಲಿ ಅಮಾನವೀಯ ಯಾವುದು, ಮಾನವೀಯ ಯಾವುದು ಇದನ್ನು ಸರಿಯಾದ ರೀತಿಯಲ್ಲಿ ಗುರುತಿಸಿ ಆ ಸಮುದಾಯದ ಪ್ರಜ್ಞಾವಂತರ ಜೊತೆಗೆ ಸೇರಿ ಚರ್ಚಿಸಿ ತೀರ್ಮಾನ ಮಾಡಬೇಕು. ಸಮುದಾಯದ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಅವಮಾನಿಸದೇ ಅದನ್ನು ಸರಿಯಾದ ರೀತಿಯಲ್ಲಿ ವಿಂಗಡಿಸಿ ಆ ಅಂಶಗಳನ್ನು ಪರಿಗಣಿಸಿಕೊಂಡು ಸಮುದಾಯಗಳನ್ನು ಮುನ್ನಡೆಸಬೇಕಾದ ಬಹಳ ದೊಡ್ಡ ಜವಾಬ್ದಾರಿ ಮಠಾಧೀಶರಿಗೆ ಇದೆ.

೨. ವಾಲ್ಮೀಕಿ ಪೀಠ

ಇತಿಹಾಸದುದ್ದಕ್ಕೂ ಶೌರ್ಯ, ಸಾಹಸ, ಪರಾಕ್ರಮಕ್ಕೆ ಹೆಸರಾದ ನಾಯಕ ಸಮುದಾಯವು

ಪ್ರಸ್ತುತ ದಿನಮಾನದಲ್ಲಿ ಕಡುಕಷ್ಟ ಕಾರ್ಪಣ್ಯ, ಅಂಧಕಾರದಲ್ಲಿ ಮುಳುಗಿ ಹೋಗಿದ್ದ ಸಮಯದಲ್ಲಿ ಸಮುದಾಯದ ಮುಖಂಡರ ಜೊತೆ ವಾಲ್ಮೀಕಿ ಪೀಠದ ಪೀಠಾಧಿಪತಿಗಳು ವಾಲ್ಮೀಕಿ ಗುರುಪೀಠವು ಜೊತೆ ಸಮುದಾಯದ ಮುಖಂಡರು ಭಾಸ್ಕರನು ಉದಯಿಸಿದಂತೆ ಬಂದು ಸಮುದಾಯವನ್ನು ಜಾಗೃತಿ ಮೂಡಿಸುವ ಸಲುವಾಗಿ ಕರ್ನಾಟಕದ ಉದ್ದಗಲಕ್ಕೂ ಮಿಂಚಿನಂತೆ ಸಂಚರಿಸಿ ನಾಯಕ ಸಮುದಾಯವನ್ನು ಜಾಗೃತಿಗೊಳಿಸಿ, ಒಟ್ಟುಗೂಡಿಸುವ ಕೆಲಸವನ್ನು ಪುಣ್ಯಾನಂದಪುರಿ ಮಹಾಸ್ವಾಮಿಗಳು ನಾಲ್ಕೈದು ವರ್ಷಗಳಲ್ಲಿ ಮಾಡಿದರು. ನಾಯಕ ಸಮುದಾಯದ ರಥಕ್ಕೆ ಸಾರಥಿಯ ಕೊರಗು ಇತ್ತು. ಆ ಕೊರತೆಯನ್ನು ಪುಣ್ಯಾನಂದಪುರಿ ಮಹಾಸ್ವಾಮಿಗಳು ಯಶಸ್ವಿಯಾಗಿ ನೆರವೇರಿಸಿದರು. ಈ ಸಮುದಾಯವನ್ನು ಸಾರಥಿಯಾಗಿ ಮುನ್ನಡೆಸುವ ಕೆಲಸ ಮಾಡುತ್ತಿದ್ದರು. ಈ ಸಮುದಾಯಕ್ಕೆ ಸರ್ಕಾರದ ಮೀಸಲಾತಿ ಕಡಿಮೆ ಇದೆ. ಇದರಿಂದ ನಾಯಕ ಸಮುದಾಯದ ಅಭಿವೃದ್ಧಿ ಹಿನ್ನಡೆಯಾಗುತ್ತಿದೆ ಎಂದು ಮನಗಂಡು ಹೋರಾಟಕ್ಕೆ ಅಣಿಯಾಗುತ್ತಿರುವ ಸಂದರ್ಭದಲ್ಲಿ ಜಗದ್ಗುರು ಶ್ರೀ ಶ್ರೀ ಪುಣ್ಯಾನಂದಪುರಿ ಮಹಾಸ್ವಾಮಿಗಳು ಅಕಾಲಿಕ ಮರಣಕ್ಕೆ ತುತ್ತಾಗಿದ್ದು ಇಡೀ ನಾಯಕ ಸಮಾಜಕ್ಕೆ ಬರಸಿಡಿಲು ಬಂದೆರಗಿ ಕಾರ್ಗತ್ತಲೆಯಲ್ಲಿ ಮುಳುಗಿದಂತಾದದ್ದು ದುರ್ದೈವವೇ ಸರಿ. ದಿನಾಂಕ ೩.೪.೨೦೦೭ರ ದಿನ ನಾಯಕರ ಅಂಧಕಾರದ ದಿನ, ವಾಲ್ಮೀಕಿ ಸಮಾಜದ ಜ್ಯೋತಿ ನಂದಿಹೋದ ದಿನ.

ಶ್ರೀ ವಾಲ್ಮೀಕಿ ಗುರುಪೀಠ ಸ್ಥಾಪನೆಗಾಗಿ ಸಮುದಾಯದ ಮುಖಂಡರೆಲ್ಲಾ ಸೇರಿ ಹರಿಹರ ತಾಲೂಕಿನ ರಾಜನಹಳ್ಳಿಯಲ್ಲಿ ಜಾಗವನ್ನು ಗೊತ್ತುಪಡಿಸಿ, ಭೂಮಿ ಪೂಜೆಗೆಂದು ಶ್ರೀ ಶ್ರೀ ಪುಣ್ಯಾನಂದಪುರಿ ಶ್ರೀಗಳನ್ನು ಕರೆದುಕೊಂಡು ಹೋದಾಗ ಯತಿಗಳು ರಾಜನಹಳ್ಳಿಗೆ ಆಗಮಿಸಿ ಭೂಮಿ ಪೂಜೆ ನೆರವೇರಿಸಿ ಅಪಾರ ಸಂಖ್ಯೆಯಲ್ಲಿ ಸೇರಿದ್ದ ಬಂಧುಗಳನ್ನು ಉದ್ದೇಶಿಸಿ ಆಶೀರ್ವಚನ ನೀಡಿ ಕುಳಿತಿದ್ದಾಗ, ರಾಜನಹಳ್ಳಿ ಗ್ರಾಮದ ಒಬ್ಬ ಯಜಮಾನರು ಶ್ರೀಗಳ ಹತ್ತಿರ ಬಂದು ಶ್ರೀ ಸ್ವಾಮಿಜಿಯವರೇ ನಾನು ಬಾಲಕನಿದ್ದಾಗ ಒಬ್ಬ ಸನ್ಯಾಸಿ ನಮ್ಮ ಹಳ್ಳಿಗೆ ಆಗಮಿಸಿದ್ದರು. ಅವರು ಹೇಳಿದ್ದು ಮುಂದೊಂದು ದಿನ ಈ ಸ್ಥಳದಲ್ಲಿ ಒಬ್ಬ ಬಂದು ನೆಲಸುವರು. ನಿಮ್ಮ ಗ್ರಾಮವು ರಾಜ್ಯದಲ್ಲಿಯೇ ಹೆಸರಾಂತ ಗ್ರಾಮವಾಗುವುದು ಎಂದು ತಿಳಿಸಿದ್ದರು. ಆ ಮಾತು ಇಂದು ನಿಜವಾಗಿದೆ, ಬುದ್ದಿ ಎಂದು ಹೇಳಿದನಂತೆ. ಆ ಯಜಮಾನನು ಅಂದು ಹೇಳಿದ ಮಾತುಗಳನ್ನು ಜ್ಞಾಪಿಸಿಕೊಳ್ಳುತ್ತಾ ನೋಡಿ ಎಲ್ಲಿಯ ರಾಜೇಶ್ವರಿ! ಎಲ್ಲಿಯ ರಾಜನಹಳ್ಳಿ! ದೇವಿಯ ಕೃಪೆ ಎಷ್ಟು ಸತ್ಯವಾಗಿದೆ. ಅಲ್ಲವೇ ಎಂದಿದ್ದರು ಯತಿಗಳು.

ಇಂದು ರಾಜನಹಳ್ಳಿ ಶ್ರೀ ವಾಲ್ಮೀಕಿ ಗುರುಪೀಠವು ಅತ್ಯಂತ ಸುಂದರವಾದ ನಿಸರ್ಗದ ಮಡಿಲಲ್ಲಿ ನೆಲೆಗೊಂಡಿದೆ. ನದಿ ತೀರ ಸುಂದರ ಪರಿಸರ ಎಲ್ಲವೂ ವಾಲ್ಮೀಕಿ ಗುರುಪೀಠದ ಅಭಿವೃದ್ಧಿಗೆ ಪೂರಕವಾಗಿ ಕಂಗೊಳಿಸುತ್ತಿವೆ. ಶ್ರೀಮಠಕ್ಕೆ ಪ್ರೇರಕ ಶಕ್ತಿಯಾಗಿ ಪರಿಣಮಿಸಿವೆ. ಇದನ್ನೇ ಸ್ವಾಮಿಗಳು ಪದೇ ಪದೇ ಹೇಳುತ್ತಿದ್ದುದು 'ತೇನವಿನ ತೃಣಮಪ ನಚಲತಿ' ದೇವರ ಅನುಗ್ರಹವಿಲ್ಲದೇ ಒಂದು ಹುಲ್ಲು ಕಡ್ಡಿಯೂ ಸಹ ಅಲುಗಾಡದು ಎಲ್ಲಾ ಜೀವರಾಶಿಗಳಿಗೂ ದೇವರ ಅನುಗ್ರಹವು ಬೇಕೆ ಬೇಕು ಎನ್ನುತ್ತಿದ್ದರು.

ಶ್ರೀ ಶ್ರೀ ಪೂರ್ಣಾನಂದಪುರಿ ಶ್ರೀಗಳು ಕರ್ನಾಟಕದ ಉದ್ದಗಲಕ್ಕೂ ಜಾಗೃತ ನೆಲೆಯಲ್ಲಿ ಸಂಚರಿಸಿ ಸಮುದಾಯದ ಸ್ಥಿತಿಗತಿಗಳ ಬಗ್ಗೆ ಕೆಲವೇ ವರ್ಷಗಳಲ್ಲಿ ಸಂಪೂರ್ಣ ಅರಿವು ಮಾಡಿಕೊಂಡಿದ್ದರು. ಒಂದು ಕಾಲಕ್ಕೆ ಕರ್ನಾಟಕವನ್ನೇ ಸಾಮ್ರಾಜ್ಯವನ್ನಾಗಿ ಆಳಿ, ಈ ನಾಡು ನುಡಿ, ನೆಲ-ಜಲಗಳ ರಕ್ಷಣೆಗಾಗಿ ಅಹೋರಾತ್ರಿ ತಮ್ಮ ಶಾರ್ಯ ಪರಾಕ್ರಮಗಳಿಂದ ಹೋರಾಟ ಮಾಡಿ, ಪ್ರಜೆಗಳಿಗೆ ನೆಮ್ಮದಿಯ ಆಡಳಿತವನ್ನು ನೀಡಿ, ಸಾರ್ವಜನಿಕರಿಂದ ಮನ್ನಣೆಗೆ ಅರ್ಹವಾಗಿದ್ದ ಈ ಸಮುದಾಯದ ಬಗ್ಗೆ ಈವತ್ತಿನ ಪರಿಸ್ಥಿತಿಯನ್ನು ಅರಿತ ಯತಿಗಳು ಮಮ್ಮಲ ಮರಿಗಿದ್ದುಂಟು. ಈ ದಿಸೆಯಲ್ಲಿ ಈ ವೀರ, ಶೂರ ಸಮುದಾಯವನ್ನು ಜಾಗೃತಗೊಳಿಸಿ ಬಹುಮುಖ್ಯವಾಗಿ ಶೈಕ್ಷಣಿಕವಾಗಿ, ಧಾರ್ಮಿಕವಾಗಿ, ಸಾಮಾಜಿಕವಾಗಿ ಎಚ್ಚರಗೊಳಿಸಬೇಕೆಂಬ ಮಾರ್ಗದಲ್ಲಿ ಸಾಗಿ ಶ್ರೀ ಗುರುಪೀಠವನ್ನು ಅಭಿವೃದ್ಧಿಪಡಿಸುವತ್ತಾ ಗಮನಹರಿಸಿದ್ದರು. ತಾವು ಪೀಠಕ್ಕೆ ಬಂದ ಮೇಲೆ ಅಹೋರಾತ್ರಿ ನಿದ್ದೆಗೆಟ್ಟು ಸಂಚಾರಮಾಡಿ ನಾಡಿನುದ್ದಕ್ಕೂ ಸಭೆ, ಸಮಾರಂಭಗಳು ವಾಲ್ಮೀಕಿ ಜಯಂತಿಗಳು, ಸಮ್ಮೇಳನಗಳನ್ನು ಮಾಡುತ್ತಾ, ಸಮಾಜವನ್ನು ಸಂಘಟಿಸುತ್ತಾ ಜನಜಾಗೃತಿ ಮೂಡಿಸಲಾರಂಭಿಸಿದರು. ಇದರ ಪ್ರತಿಫಲವೋ ಎಂಬಂತೆ ಇಂದು ಸಮುದಾಯದವರು ಸಮಾಜದ ಎಲ್ಲಾ ರಂಗಗಳಲ್ಲೂ ಪ್ರತಿಷ್ಠಿತ ಸ್ಥಾನಗಳಿಗೆ ಏರುತ್ತಿರುವುದನ್ನು ಕಾಣುತ್ತಿದ್ದೇವೆ.

ಶ್ರೀಗಳು ಶ್ರೀ ವಾಲ್ಮೀಕಿ ಗುರುಪೀಠದ ಅಭಿವೃದ್ಧಿಯುತ್ತ ಹೆಚ್ಚಿನ ಗಮನ ಹರಿಸಿ ಹಲವಾರು ಕಟ್ಟಡಗಳನ್ನು ನಿರ್ಮಾಣ ಮಾಡಿಸಿದರು. ಪ್ರೌಢ ಶಾಲೆವರೆಗಿನ ಶಿಕ್ಷಣ ಶಾಲೆಗಳನ್ನು ಆರಂಭಿಸಿದರು. ಡಿ.ಇಡಿ. ಕಾಲೇಜನ್ನು ಬಹಳ ಶ್ರಮಪಟ್ಟು ಮಂಜೂರು ಮಾಡಿಸಿದರು. ಖ್ಯಾತ ನರರೋಗ ತಜ್ಞರಾದ ಬೆಂಗಳೂರಿನಲ್ಲಿ ನೆಲೆಸಿರುವ ಡಾ.ಜಿ.ರಂಗಯ್ಯ ಮತ್ತು ಶ್ರೀಮತಿ ರತ್ನರಂಗಯ್ಯನವರ ಮೇಲೆ ಪ್ರಭಾವ ಬೀರಿ ಅವರಿಂದ ಡಿ.ಇಡಿ ಕಾಲೇಜು ಕಟ್ಟಡವನ್ನು ನಿರ್ಮಾಣ ಮಾಡಿಸಿದರು. ಈಗ ಈ ಕಟ್ಟಡದಲ್ಲಿ ಡಿ.ಇಡಿ ಕಾಲೇಜಿನ ತರಗತಿಗಳು ಪ್ರಾರಂಭವಾಗಿವೆ. ಇದೊಂದು ಶ್ರೀ ವಾಲ್ಮೀಕಿ ಗುರುಪೀಠದ ಆವರಣದಲ್ಲಿರುವ ಬಹು ಸುಂದರ ಕಾಲೇಜ್ ಕಟ್ಟಡವಾಗಿದೆ. ಅದೇ

ರೀತಿ ಪ್ರೌಢ ಶಾಲೆಗೂ ಕಟ್ಟಡ ನಿರ್ಮಾಣ ಮಾಡಿಸಿದ್ದಾರೆ. ಮತ್ತೊಂದು ಬಹು ಸುಂದರವಾದ ಅನ್ನಪೂರ್ಣೇಶ್ವರಿ ಅನ್ನದಾಸೋಹ ಕಟ್ಟಡವನ್ನು ನಿರ್ಮಿಸಿದ್ದಾರೆ. ಇದರ ಪಕ್ಕದಲ್ಲಿಯೇ ಶ್ರೀ ವಾಲ್ಮೀಕಿ ಸಾರ್ವಜನಿಕ ವಿದ್ಯಾರ್ಥಿ ನಿಲಯವು ತಲೆ ಎತ್ತಿನಿಂತಿದೆ.

ಈ ವಿದ್ಯಾರ್ಥಿ ನಿಲಯದಲ್ಲಿ ೧೫೦ ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಊಟ, ವಸತಿ ಕಲ್ಪಿಸಿದ್ದಾರೆ. ಈ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗಾಗಿ ಗ್ರಂಥಾಲಯವನ್ನು ಸಜ್ಜುಗೊಳಿಸಿರುವರು. ನಯನ ಮನೋಹರವಾದ ಶ್ರೀಮಠದ ಕಟ್ಟಡವು ಅವರ ಕಾಲದಲ್ಲಿ ನಿರ್ಮಾಣವಾಗಿದೆ. ಗೋಶಾಲೆ ನಾಗರ ಕಟ್ಟೆಗಳು ನಿರ್ಮಾಣವಾಗಿವೆ. ಮಾಜಿ ಸಚಿವರು ಸಮುದಾಯದ ಪ್ರಭಾವಿ ಮುಖಂಡರು ಆದ ಶ್ರೀ ಸತೀಶ ಜಾರಕಿಹೊಳಿಯವರು ನಿರ್ಮಾಣ ಮಾಡಿ ಶ್ರೀಮಠಕ್ಕೆ ಅರ್ಪಿಸಬೇಕಾಗಿದ್ದ ಶ್ರೀ ವಾಲ್ಮೀಕಿ ಕುಟೀರ ಎಂಬ ಸುಂದರ ಕಟ್ಟಡವು ಮುಕ್ತಾಯ ಹಂತ ತಲುಪಿದೆ. ಹೀಗೆ ಶ್ರೀ ಪುಣ್ಯಾನಂದಪುರಿ ಯತಿಗಳು ಈ ಸ್ಥಳಕ್ಕೆ ಬಂದು ನೆಲೆಸಿದ್ದಾಗ ಕೇವಲ ಒಂದು ಚಿಕ್ಕ ಹುಲ್ಲಿನ ಕುಟೀರದಲ್ಲಿ ಎರಡು ವರ್ಷಗಳ ಕಾಲ ವಾಸಮಾಡಿದರು. ಬಹು ಕಷ್ಟದ ದಿನಗಳನ್ನು ಕಂಡಿದ್ದರು. ಅವರ ಕ್ರಿಯಾಶೀಲ ವ್ಯಕ್ತಿತ್ವದಿಂದಾಗಿ ಇಂದು ಶ್ರೀ ಮಠವು ಶ್ರೀಗಳು ಜೀವಿಸಿದ್ದ ಕೇವಲ ಕೆಲವೇ ವರ್ಷಗಳಲ್ಲಿ ಇತರೆ ಸಮಾಜದವರು ಬೆಕ್ಕಸಬೆರಗಾಗುವಂತೆ ಅಭಿವೃದ್ಧಿ ಕಂಡಿದೆ. ಪ್ರತಿವರ್ಷ ರಾಜ್ಯಾದ್ಯಂತ ಸಂಚರಿಸುತ್ತಾ ಒಂದು ಲಕ್ಷ ಕಿ.ಮೀ.ಗೂ ಹೆಚ್ಚು ಪ್ರವಾಸ ಮಾಡಿ ಜನರನ್ನು ಶ್ರೀಮಠದ ಮೂಲಕ ಸಮುದಾಯ ಅಭಿವೃದ್ಧಿ ಕಡೆಗೆ ಎಳೆಯುತ್ತಿದ್ದರು. ಪ್ರತಿ ವರ್ಷಕ್ಕೆ ಒಂದು ಬಾರಿ ಶ್ರೀಮಠದಿಂದ ಹೊರಗೆ ರಾಜ್ಯಮಟ್ಟದ ಸಮ್ಮೇಳನಗಳನ್ನು ಸಂಘಟಿಸುತ್ತಿದ್ದರು. ಇದರಿಂದ ಸಮಾಜದಲ್ಲಿ ಅತಿ ಕ್ಷಿಪ್ರವಾಗಿ ಸಂಘಟನೆ, ಜಾಗೃತಿಯ ಅರಿವನ್ನು ಮೂಡಿಸುತ್ತಿದ್ದರು. ಶ್ರೀಗಳು ಪಟ್ಟಾಭಿಷಕ್ತರಾಗಿದ್ದ ಕೇವಲ ಅಲ್ಪಾವಧಿಯಲ್ಲೇ ಅಗಾಧವಾದ ಪರಿಶ್ರಮದಿಂದ ಶ್ರೀಮಠವನ್ನು ಸಮಾಜವನ್ನು ಕಟ್ಟುವಲ್ಲಿ ಯಶಸ್ವಿಯಾಗಿದ್ದರು.

ಮಠದ ಹಿನ್ನೆಲೆ

ಈ ಸಮಾಜದ ಗುರುಪರಂಪರೆಯ ಬಗ್ಗೆ ಇತಿಹಾಸವನ್ನು ಕೆದಕಿದಾಗ ಹಿಂದಿನ ಕಾಲದಲ್ಲಿದ್ದ ಈ ಸಮಾಜದ ರಾಜರೇ ಸಮಾಜದ ಗುರುಗಳಾಗಿದ್ದುದು ಕಂಡುಬಂದಿದೆ. ಸ್ವಾತಂತ್ರ ಬಂದ ಮೇಲೆ ಗುರು ಪರಂಪರೆ ನಿಂತು ಹೋಯಿತು. ಆದರೆ ಈಗಿನ ಅನ್ಯ ಸಮಾಜದವರು ಮಠಗಳನ್ನು ಕಟ್ಟಿಕೊಂಡು ಅನೇಕ ಕ್ಷೇತ್ರಗಳಲ್ಲಿ ಪ್ರಗತಿ ಹೊಂದಿ, ತಮ್ಮ ಅಭ್ಯುದಯವನ್ನು ಸಾಧಿಸಿಕೊಂಡಿವೆ. ನಾವು ಏಕೆ ಮಠ ಮಾಡಿಕೊಳ್ಳಬಾರದು? ನಾವು ಏಕೆ ಅಭಿವೃದ್ಧಿ ಸಾಧಿಸಿಕೊಳ್ಳಬಾರದು ಎಂದು ಯೋಚಿಸಿ ಕರ್ನಾಟಕದಾದ್ಯಂತ ಬಂಧುಗಳು, ಬೆಂಗಳೂರು ನಗರದ ನಾಯಕ ಸಮಾಜದ ಗಣ್ಯವ್ಯಕ್ತಿಗಳು ಸಭೆ ಸೇರಿ, ಗಂಭೀರವಾಗಿ ಚರ್ಚಿಸಿ ಮಠ,

ಗುರು, ಗುರಿಗಳ ಸಾಧನೆ ಮಾಡಬೇಕೆಂದು ಬೆಂಗಳೂರಿನಲ್ಲಿ ೧೯೬೪ರಲ್ಲಿಯೇ ಅಂದರೆ ಅಷ್ಟು ಹಿಂದೆಯೇ ಯೋಚಿಸತೊಡಗಿದ್ದರು.

ಬೆಂಗಳೂರಿನ ಶ್ರೀ ಶ್ರೀ ಶ್ರೀ ತಿರುಚಿ ಸ್ವಾಮಿಗಳ ಆಶ್ರಯದಲ್ಲಿ ಸಮಾಜದ ಓರ್ವ ವಟುವನ್ನು ಆರಿಸಿಕೊಂಡು, ದೀಕ್ಷೆಗಾಗಿ ಕೈಲಾಸ ಆಶ್ರಮದಲ್ಲಿ ಇಟ್ಟರು. ಮುಂದೆ ಬೆಂಗಳೂರಿನ ಶ್ರೀ ಶಿವಭಕ್ತ ಕಣ್ಣಪ್ಪ ಮಹಾಗುರು ಟ್ರಸ್ಟಿನ ಶ್ರೀ ಅಶ್ವತ್ಥ ರಾಮಯ್ಯನವರು ಹಾಗೂ ಸಮಾಜದ ಗಣ್ಯ ವ್ಯಕ್ತಿಗಳು ಕೂಡಿಕೊಂಡು ಶ್ರೀ ಶ್ರೀ ಶ್ರೀ ಸತ್ಯಾನಂದ ಪುರಿಸ್ವಾಮಿಗಳನ್ನು ಆಯ್ಕೆ ಮಾಡಿಕೊಂಡು ೧೯೯೭ರಲ್ಲಿಯೇ ಗುರುಪೀಠ ಪ್ರಾರಂಭಿಸಿದರು. ಸ್ವಾಮಿಗಳಿಗೆ ಜಗದ್ಗುರುಗಳು ಕಿರೀಟಧಾರಣೆ ಮಾಡಿದರು. ಸ್ವಾಮಿಗಳು ಹಾಗೂ ಟ್ರಸ್ಟಿನ ಸದಸ್ಯರುಗಳಲ್ಲಿ ಹಲವಾರು ವಿಷಯಗಳಲ್ಲಿ ಭಿನ್ನಾಭಿಪ್ರಾಯ ಉಂಟಾಗಿ ೨೦೦೦ ಇಸ್ವಿಯ ಆಗಸ್ಟ್ ತಿಂಗಳಲ್ಲಿ ಶ್ರೀ ಶ್ರೀ ಶ್ರೀ ಸತ್ಯಾನಂದ ಪುರಿ ಸ್ವಾಮಿಗಳು ಪೀಠತ್ಯಾಗ ಮಾಡಿದರು. ಸಮಾಜದ ಒಡಕಿನಿಂದ ಪ್ರಥಮ ಮಠವು ಸ್ವಾಮಿಗಳಿಲ್ಲದೆ ಅನಾಥವಾಯಿತು. ಇದು ಬಹು ದುಃಖಕರ ಸಂಗತಿಯಾಯಿತು.

ರಾಜನಹಳ್ಳಿ ವಾಲ್ಮೀಕಿ ಮಠ

ಸನ್ಮಾನ್ಯ ಶ್ರೀ ತಿಪ್ಪೇಸ್ವಾಮಿಗಳು ೧೯೯೮ರಲ್ಲಿ ಕರ್ನಾಟಕ ಸರ್ಕಾರದಲ್ಲಿ ಮಂತ್ರಿಗಳಾಗಿದ್ದರು. ಇವರು ಕರ್ನಾಟಕದ ಎಲ್ಲ ನಾಯಕ ಸಮುದಾಯಕ್ಕೆ ಅನುಕೂಲವಾಗುವ ದೃಷ್ಟಿಯಿಂದ ರಾಜ್ಯದ ಮಧ್ಯಭಾಗವಾದ ದಾವಣಗೆರೆಯಲ್ಲಿ ಮಠ ಸ್ಥಾಪನೆಯಾಗಬೇಕು ಎಂದು ಹರಿಹರ ತಾಲೂಕಿನ ರಾಜನಹಳ್ಳಿಯಲ್ಲಿ ೧೭ ಎಕರೆ ೧೩ ಗುಂಟೆ ಭೂಮಿಯನ್ನು ಅನೇಕ ಹಿರಿಯ ಗಣ್ಯ ವಾಲ್ಮೀಕಿ ಬಂಧುಗಳ ಜೊತೆಗೂಡಿ ಖರೀದಿಸಿದರು. ದಿನಾಂಕ ೯-೨-೧೯೯೮ರಂದು ರಾಜನಹಳ್ಳಿಯಲ್ಲಿ ಕೈಲಾಸ ಆಶ್ರಮದ ಜಗದ್ಗುರುಗಳಾದ ಶ್ರೀ ತಿರುಚಿ ಸ್ವಾಮಿಗಳ ಕೃಪಾಶೀರ್ವಾದದೊಡನೆ ಅವರ ದೀಕ್ಷೆ ಪಡೆದು ಶಿಷ್ಯರಾದ ಶ್ರೀ ಶ್ರೀ ಶ್ರೀ ಪುಣ್ಯಾನಂದಪುರಿ ಸ್ವಾಮಿಗಳಿಗೆ ಪಟ್ಟಕಟ್ಟಲಾಯಿತು. ಪರಮಪೂಜ್ಯ ಜಗದ್ಗುರು ಶ್ರೀ ಬಾಲಗಂಗಾಧರನಾಥ ಸ್ವಾಮಿಗಳು ತಮ್ಮ ಅಮೃತಹಸ್ತದಿಂದ ಈ ವಾಲ್ಮೀಕಿ ಸಮಾಜದ ಜಗದ್ಗುರುಗಳಿಗೆ ಕಿರೀಟಧಾರಣೆ ಮಾಡಿದರು. ಇವರು ರಾಜನಹಳ್ಳಿಯ ವಾಲ್ಮೀಕಿ ಮಹಾಸಂಸ್ಥಾನದ ಪ್ರಥಮ ಪೀಠಾಧಿಪತಿಗಳಾದರು.

ಇವರು ಎಂಟು ವರ್ಷಗಳವರೆಗೆ ಮಠಕ್ಕೆ ಅಖಂಡ ಸೇವೆ ನೀಡಿದರು. ಕರ್ನಾಟಕದ ವಾಲ್ಮೀಕಿ ಸಮಾಜ ಇವರನ್ನು ಹೊಸಪೇಟೆಯಲ್ಲಿ ಸಮಾಜದ ಲಕ್ಷ ಜನರ ಸಮ್ಮುಖದಲ್ಲಿ ಸತ್ಕರಿಸಿದರು. ಸ್ವಾಮಿಗಳು ಕೇವಲ ಎಂಟೇ ವರ್ಷಗಳಲ್ಲಿ ವಾಲ್ಮೀಕಿ ಜಯಂತಿಗಳನ್ನು ಆಚರಿಸುತ್ತಾ ಕರ್ನಾಟಕದಾದ್ಯಂತ ನಾಯಕ ಸಮುದಾಯದಲ್ಲಿ ಮಿಂಚಿನ ಸಂಚಲನೆ ಮೂಡಿಸಿದರು. ಸಮಾಜ

ಬಾಂಧವರಿಗೆ ಸಾಮಾಜಿಕ ಅರಿವನ್ನು ಮೂಡಿಸಿ, ಸಮುದಾಯದ ಒಗ್ಗಟ್ಟಿಗಾಗಿ ಶ್ರಮಿಸಿ, ಭಕ್ತರ ಕಾಣಿಕೆಗಳಿಂದಲೇ ಮಠದಲ್ಲಿ, ಶಿಕ್ಷಣ ಸಂಸ್ಥೆ ದಾಸೋಹಗಳನ್ನು ನೆಡಸಿ ಮಠದ ಅಭಿವೃದ್ಧಿ ಜೊತೆಗೆ ನಾಯಕ ಸಮುದಾಯದ ಏಳಿಗೆಗೆ ಶ್ರಮಿಸಿದ ಮಹಾನ್ ಪುಣ್ಯಪುರುಷ ಪುಣ್ಯಾನಂದಪುರಿ ಸ್ವಾಮಿಗಳು ಎಂದು ನಾಡಿನ ನಾಯಕ ಸಮುದಾಯದ ಪ್ರತಿಯೊಬ್ಬರ ಬಾಯಿಯಲ್ಲಿ ಹೇಳುವುದು ಕಂಡುಬರುತ್ತದೆ. ದಿನಾಂಕ ೩.೪.೨೦೦೭ರಂದು ಕರೂರ ಗ್ರಾಮದ ಭಕ್ತರ ಮನೆಗೆ ಭೇಟಿನೀಡಿ ಮಠಕ್ಕೆ ವಾಪಸ್ಸಾಗುವಾಗ ಇವರ ಕಾರು ರೈಲು ಎಂಜಿನ್ನಿಗೆ ಸಿಕ್ಕು ಆಕಸ್ಮಿಕ ಅಪಘಾತವಾಗಿ ಕೈಲಾಸವಾಸಿ ಆದರು. ಮಠವು ಅನಾಥವಾಯಿತು. ರಾಜನಹಳ್ಳಿಯ ಶ್ರೀ ವಾಲ್ಮೀಕಿ ಮಹಾಸಂಸ್ಥಾನದ ಈಗಿನ ಟ್ರಸ್ಟಿನ ಅಧ್ಯಕ್ಷರಾದ ಶ್ರೀ ಸತೀಶ ಜಾರಕಿಹೊಳಿಯವರು ಕರ್ನಾಟಕದ ತುಂಬಾ ಸಂಚರಿಸಿ ಸಮಾಜ ಬಾಂಧವರನ್ನು ಮುಖಂಡರನ್ನು ಕಂಡು ಜನರ ಅಭಿಪ್ರಾಯಗಳನ್ನು ಪಡೆದುಕೊಂಡು ಚಿತ್ರದುರ್ಗದ ಮುರುಘಾಮಠದಲ್ಲಿ ಶಿವಮೂರ್ತಿ ಸ್ವಾಮಿಯವರಲ್ಲಿ ತರಬೇತಿಹೊಂದಿ ಸಂನ್ಯಾಸಿಯಾಗಿದ್ದ ಪ್ರಸನ್ನ ಕುಮಾರ ಸ್ವಾಮೀಜಿಯವರನ್ನು ಎರಡನೇ ಸ್ವಾಮೀಜಿಯಾಗಿ, ನಾಯಕ ಸಮುದಾಯದ ಗುರುವನ್ನಾಗಿ ಮಾಡಿದರು. ದಿ.೧೪.೧೦.೨೦೦೮ರಂದು ವಾಲ್ಮೀಕಿ ಗುರುಪೀಠದಲ್ಲಿ ಪಟ್ಟಾಭಿಷೇಕವನ್ನು ಭಕ್ತರ ಸಮ್ಮುಖದಲ್ಲಿ ಮಾಡಿದರು.

ಗೊಲಪಲ್ಲಿ ವಾಲ್ಮೀಕಿ ಶಾಖ ಮಠ

ಈ ವಾಲ್ಮೀಕಿ ಮಠವು ರಾಜನಹಳ್ಳಿ ಮಠದ ಎರಡನೇ ಮಠ ಎಂದರೆ ತಪ್ಪಾಗಲಾರದು. ಉತ್ತರ ಕರ್ನಾಟಕ ಭಾಗದ ಜನರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಪುಣ್ಯಾನಂದಪುರಿ ಮಹಾಸ್ವಾಮಿಗಳ ಆಶ್ರಮದಲ್ಲಿದ್ದ ಶ್ರೀವರದನಂದ ಮಹಾಸ್ವಾಮಿಗಳು ಮಠಾಧೀಶರು. ಉತ್ತರ ಕರ್ನಾಟಕದ ಜ್ಯೋತಿ ಎಂದು ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ಸನ್ಮಾನ್ಯ ಸತೀಶ ಜಾರಕಿಹೊಳಿಯವರು ಸ್ವಾಮೀಜಿಯವರ ಕಾರ್ಯವನ್ನು ಮನದಾಳದಿಂದ ಗುಣಗಾನ ಮಾಡಿದರು. ಶ್ರೀ ಮಠವು ಯಾವುದೇ ರಾಜಕಾರಣಿಗಳ ಬೆಂಬಲವಿಲ್ಲದೇ ಭಕ್ತರ ಸಹಾಯ ಸಹಕಾರದಿಂದ ಮಠವನ್ನು ಸುಂದರವಾಗಿ ನಿರ್ಮಾಣ ಮಾಡಿದ್ದಾರೆ. ಅಷ್ಟೇ ಅಲ್ಲದೇ ಶೋಷಣೆಗೆ ತುತ್ತಾದ ಮನೆಗಳಿಗೆ ಕುದ್ದಾಗಿ ಭೇಟಿ ಮಾಡಿ ಕಷ್ಟದಲ್ಲಿ ಸದಾ ಜೊತೆಗೆ ಇರುತ್ತೇನೆ ಎನ್ನುವ ಆತ್ಮ ವಿಶ್ವಾಸ ತುಂಬುವ ಕೆಲಸ ಮಾಡುತ್ತಿದ್ದಾರೆ. ಜೊತೆಗೆ ವಾಲ್ಮೀಕಿ ಮಠ ಗೊಲಪಲ್ಲಿ ವತಿಯಿಂದ ಸಮುದಾಯ ಬಡ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ಮತ್ತು ವಸತಿ ವ್ಯವಸ್ಥೆಯನ್ನು ಕಲ್ಪಿಸುವ ಮಹತ್ವದ ಯೋಜನೆಯನ್ನು ಹಾಕಿಕೊಂಡಿದ್ದಾರೆ. ಇಲ್ಲಿನ ಸ್ವಾಮೀಜಿಯವರು ರಾಯಚೂರು, ಯಾದಗಿರಿ ಜಿಲ್ಲೆಗಳಲ್ಲಿ ಪ್ರತ್ಯೇಕವಾಗಿ ಅಡವಿಯಲ್ಲಿ ಉಳಿದ ಬೇಡ ಸಮುದಾಯಗಳಿಗೆ ಮೂಲಭೂತ ಸೌಲಭ್ಯ ಒದಗಿಸುವ ಬಗ್ಗೆ ಹಾಗೂ ಸಾಮಾಜಿಕ ಅರಿವು ಮೂಡಿಸುವ ಕಡೆ ವಿಶೇಷ ಕಾಳಜಿ ವಹಿಸುತ್ತಿದ್ದಾರೆ.

ಹಿರೇಮನ್ನಾಪುರ ವಾಲ್ಮೀಕಿ ಶಾಖ ಮಠ

ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಹಿರೆಮನ್ನಾಪುರ ಗ್ರಾಮದಲ್ಲಿ ವಾಲ್ಮೀಕಿ ಶಾಖ ಮಠವನ್ನು ಪ್ರಾರಂಭಿಸಲಾಗಿದೆ. ಈ ಮಠದ ಪೀಠಾಧಿಪತಿಗಳಾದ ಅಪ್ಪಯ್ಯ ಸ್ವಾಮಿಯವರು ವಹಿಸಿಕೊಂಡಿದ್ದಾರೆ. ಕೊಪ್ಪಳ ಜಿಲ್ಲೆಯ ನಾಯಕ ಸಮುದಾಯವನ್ನು ಸುಧಾರಿಸುವ ಸಮಾಜದ ಮುಖ್ಯವಾಹಿನಿಗೆ ತರಲು ಕಂಕಣಬದ್ಧರಾಗಿ ಕೆಲಸ ಮಾಡುತ್ತಿದ್ದಾರೆ. ಮನ್ನಾಪುರದಲ್ಲಿ ಸುಂದರವಾದ ಮಠ ನಿರ್ಮಾಣ ಮಾಡಿದ್ದಾರೆ. ಹತ್ತು ವರ್ಷಗಳಿಂದ ಪ್ರೌಢಶಾಲೆವರೆಗೆ ಬೇಡ ನಾಯಕ ಮತ್ತು ಇತರೆ ಹಿಂದುಳಿದ ಮಕ್ಕಳಿಗೆ ಉಚಿತ ಶಿಕ್ಷಣ, ಅನ್ನದಾಸೋಹದ ಮೂಲಕ ಸಮಾಜದ ಸೇವೆಗೆ ಸರ್ವಸ್ವವನ್ನು ಅರ್ಪಣೆ ಮಾಡಿಕೊಂಡಿರುವ ಅಪ್ಪಯ್ಯ ಸ್ವಾಮಿಯವರು ಕೊಪ್ಪಳ ಭಾಗದ ಶಿಕ್ಷಣ ದಾಹ ನೀಗಿಸುವ ಕೆಲಸ ಮಾಡುತ್ತಿದ್ದಾರೆ. ಆದರೆ ಇದಕ್ಕೆ ಜನಪ್ರತಿನಿಧಿಗಳ ಸಹಾಯ ಅಲ್ಪಸ್ವಲ್ಪ ಆದರೆ ಸಮಾಜ ಬಂಧುಗಳ ಸೇವೆ ಅವಿಸ್ಮರಣೀಯ ಎಂದು ಅಪ್ಪಯ್ಯ ಸ್ವಾಮಿಯವರು ಹೇಳುತ್ತಾರೆ.

ಮಠಗಳಿಂದ ಆದ ಅಭಿವೃದ್ಧಿ ಕಾರ್ಯಗಳು

ರಾಜನಹಳ್ಳಿ ವಾಲ್ಮೀಕಿ ಮಠ

೧. ವಾಲ್ಮೀಕಿ ಸಾರ್ವಜನಿಕ ವಿದ್ಯಾರ್ಥಿ ನಿಲಯ

೨. ವಾಲ್ಮೀಕಿ ಮಠದ ಆವರಣದಲ್ಲಿ ಡಿ.ಇಡ್ ಕಾಲೇಜ್ ಪ್ರಾರಂಭಿಸಲಾಗಿದೆ.

೩. ವಾಲ್ಮೀಕಿ ಮಠದ ಆವರಣದಲ್ಲಿ ಪ್ರೌಢಶಾಲೆ ಪ್ರಾರಂಭಿಸಲಾಗಿದೆ.

೪. ಅನ್ನದಾಸೋಹ ವ್ಯವಸ್ಥೆ ಮಾಡಲಾಗಿದೆ.

೫. ಗೋಶಾಲೆ ಪ್ರಾರಂಭಿಸಲಾಗಿದೆ

೬. ವಾಲ್ಮೀಕಿ ಕುಟೀರವನ್ನು ವಾಲ್ಮೀಕಿ ಗುರುಪೀಠದ ಅಧ್ಯಕ್ಷರಾದ ಶ್ರೀ ಸತೀಶ ಜಾರಕಿಹೊಳಿಯವರು ನಿರ್ಮಿಸಿಕೊಟ್ಟಿದ್ದಾರೆ.

ಉತ್ತರ ಕರ್ನಾಟಕದ ಗೊಲಪಲ್ಲಿ ವಾಲ್ಮೀಕಿ ಮಠ

೧. ಉಚಿತ ಅನ್ನದಾಸೋಹ ವ್ಯವಸ್ಥೆ ಮಾಡಲಾಗಿದೆ.

೨. ಶ್ರೀ ಮಠದ ಸುಂದರ ಕಟ್ಟಡ ನಿರ್ಮಾಣ ಮಾಡಲಾಗಿದೆ.

೩. ಶೈಕ್ಷಣಿಕವಾಗಿ ಪದವಿ ಹಂತದವರೆಗೆ ಸಮುದಾಯದ ಮಕ್ಕಳಿಗೆ ಉಚಿತ ಶಿಕ್ಷಣ ಮತ್ತು ವಸತಿ ವ್ಯವಸ್ಥೆ ಕಲ್ಪಿಸುವ ಗುರಿಯನ್ನು ಶ್ರೀಮಠ ಹೊಂದಿದೆ.

ವಾಲ್ಮೀಕಿ ಶಾಖಾ ಮಠ ಮನ್ನಾಪುರ

೧. ಪ್ರೌಢಶಾಲೆವರೆಗೆ ಉಚಿತ ಶಿಕ್ಷಣ ವ್ಯವಸ್ಥೆ ಕಲ್ಪಿಸಲಾಗಿದೆ.

೨. ದಾಸೋಹದ ವ್ಯವಸ್ಥೆ ಮಾಡಲಾಗಿದೆ.

೩. ಬಹು ವಿಸ್ತಾರವಾದ ಆವರಣವನ್ನು ಶ್ರೀಮಠ ಹೊಂದಿದೆ.

ಸಮುದಾಯದ ಜೊತೆ ಮಠದ ಸಂಬಂಧ

ರಾಜನಹಳ್ಳಿಯಲ್ಲಿರುವ ವಾಲ್ಮೀಕಿ ಸಮುದಾಯದ ಏಕೈಕ ಮಹಾಮಠ. ಪ್ರಥಮ ಸ್ವಾಮೀಜಿಯವರಾದ ಶ್ರೀಪುಣ್ಯಾನಂದಪುರಿ ಸ್ವಾಮೀಜಿಯವರು ಸಮುದಾಯದವರ ಜೊತೆಗೆ ಉತ್ತಮ ಭಾಂದವ್ಯ ಹೊಂದಿದವರು ಎನ್ನುವ ಅಭಿಪ್ರಾಯ ನಾಡಿನ ಎಲ್ಲಾಕಡೆ ಕೇಳಿ ಬರುತ್ತಿತ್ತು. ಅವರ ಮರಣದ ನಂತರ ಶ್ರೀ ಶ್ರೀ ಪ್ರಸನ್ನಾನಂದ ಸ್ವಾಮೀಜಿಯವರು ಈ ಮಠವನ್ನು ಮುಂದೆ ನಡೆಸುವ ಜವಾಬ್ದಾರಿ ತೆಗೆದುಕೊಂಡರು. ಎರಡು ಮೂರು ವರ್ಷಗಳವರೆಗೆ ಚೆನ್ನಾಗಿ ಕೆಲಸ ಮಾಡಿದರು. ಜೊತೆಗೆ ಸಮುದಾಯದವರ ಜೊತೆಗೆ ನೇರ ಸಂಪರ್ಕದಲ್ಲಿ ಇದ್ದರು. ಆದರೆ ಇತ್ತೀಚೆಗೆ ಈ ಮಠದ ಕಡೆ ಸಮುದಾಯದವರು ಬರುವ ಸಂಖ್ಯೆ ಕಡಿಮೆಯಾಗಿದೆ. ಜೊತೆಗೆ ಈ ಸಮುದಾಯಕ್ಕೆ ಸಂಬಂಧಪಟ್ಟ ಜನಪ್ರತಿನಿಧಿಗಳು ಕೂಡ ಈ ಕಡೆ ಬರುತ್ತಿಲ್ಲ ಎನ್ನುವ ಅಭಿಪ್ರಾಯ ಸಮುದಾಯದವರಲ್ಲಿ ಕೇಳಿ ಬರುತ್ತಿದೆ. ಮಠದ ಆಶ್ರಯದಲ್ಲಿ ಸಾಮಾನ್ಯ ಜನತೆಗೆ ಸ್ಪಂದಿಸುವಂತಹ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಮಠಾಧೀಶರು ನಿರ್ಲಕ್ಷ್ಯವು ಇದಕ್ಕೆ ಕಾರಣವೆಂಬುದು ಹಲವಾರು ಮೂಲಗಳಿಂದ ತಿಳಿದುಬರುತ್ತದೆ.

ವಾಲ್ಮೀಕಿ ಶಾಖ ಮಠಗಳಿಂದ ಆದದ್ದು ಅಭಿವೃದ್ಧಿ ಕೆಲಸ. ರಾಜನಹಳ್ಳಿ ಮಠದಲ್ಲಿ ನಡೆಯುತ್ತಿಲ್ಲ. ಜೊತೆಗೆ ಅನುದಾನವನ್ನು ಮಠ ಸರಿಯಾಗಿ ಬಳಸಿಕೊಂಡಿಲ್ಲ ಎನ್ನುವ ಮಾತು ಜನಪ್ರತಿನಿಧಿಗಳದಾಗಿದೆ.

ವಾಲ್ಮೀಕಿ ಮಠದ ಅಭಿವೃದ್ಧಿಗೆ ಇರುವ ಸವಾಲುಗಳು

೧. ಸಮುದಾಯದ ಜನಪ್ರತಿನಿಧಿಗಳನ್ನು ಒಂದು ಕಡೆ ಸೇರಿಸುವ ಕೆಲಸ ಆಗುತ್ತಿಲ್ಲ.

೨. ಚುನಾವಣೆ ಬಂದಾಗ ಮಾತ್ರ ಮೀಸಲಾತಿ ಪ್ರಶ್ನೆ ಎದುರಾಗುತ್ತದೆ.

೩. ಪ್ರಥಮ ಸ್ವಾಮೀಜಿಯವರು ಮಾಡಿರುವ ಕೆಲಸವನ್ನು ಬಿಟ್ಟರೆ ಈಗಿನ ಸ್ವಾಮೀಜಿಯವರಿಂದ ಹೇಳಿಕೊಳ್ಳುವಷ್ಟು ಕೆಲಸ ಆಗಿಲ್ಲ ಎನ್ನುವ ಕೊರಗು ಸಮುದಾಯದವರಿಗೆ ಕಾಡುತ್ತಿದೆ.

೪. ಅಕ್ರಮ ಜಾತಿ ಪ್ರಮಾಣ ಪತ್ರ ಪಡೆದುಕೊಳ್ಳುವವರ ವಿರುದ್ಧ ಮಠದ ವತಿಯಿಂದ ಯಾವುದೇ ಹೇಳಿಕೆ ಬರುತ್ತಿಲ್ಲ.

೫. ಪರಿಶಿಷ್ಟ ಪಂಗಡಕ್ಕೆ ಹಿಂದುಳಿದ ಜಾತಿಯವರನ್ನು ಸೇರಿಸುವ ಕೆಲಸ ಅಡ್ಡಿ ಆತಂಕವಿಲ್ಲದೆ ಮಾಡುತ್ತಿದೆ. ಇದರ ವಿರುದ್ಧ ಮಠದಿಂದ ಯಾವುದೇ ಪ್ರತಿಕ್ರಿಯೆ ಇಲ್ಲ ಎನ್ನುವ ಕೂಗು ಒಂದು ಕಡೆಯಾದರೆ, ಸಮುದಾಯದ ಪ್ರಗತಿಗೆ ದೊಡ್ಡ ಸಮಸ್ಯೆಯಾಗಿದೆ.

೬. ಮಠಾಧೀಶರು ಐಶಾರಾಮಿ ಜೀವನ ಬಯಸುತ್ತಿದ್ದಾರೆ ಎನ್ನುವ ಅಭಿಪ್ರಾಯ ಸಮುದಾಯದಲ್ಲಿ ಕೇಳಿ ಬರುತ್ತಿದೆ.

ಜಗದ್ಗುರು ಶ್ರೀ ಶ್ರೀ ಪುಣ್ಯಾನಂದಪುರಿ ಮಹಾಸ್ವಾಮಿಗಳ ಪರಿಚಯ

ಶ್ರೀ ಶ್ರೀ ಪುಣ್ಯಾನಂದಪುರಿ ಸ್ವಾಮಿಗಳಿಗೆ ತಂದೆ ತಾಯಿಗಳು ಇಟ್ಟ ಹೆಸರು ಪ್ರೇಮಕುಮಾರ ಇವರ ಸ್ವಂತ .ಸ್ಥಳ ತುಮಕೂರು ಜಿಲ್ಲೆಯ ತಿಪಟೂರು. ೧.೬.೧೯೭೨ರಲ್ಲಿ ತಿಪಟೂರಿನ ನಾಯಕ ಮನೆತನದ ಶ್ರೀ ರಂಗಸ್ವಾಮಿ ಮತ್ತು ಶ್ರೀಮತಿ ಮಹಾದೇವಮ್ಮನವರ ಉದರದಲ್ಲಿ ಜನಿಸಿದರು. ಈ ಮಾತಾ ಪಿತೃರಿಗೆ ಯತಿಗಳನ್ನು ಸೇರಿ ಒಟ್ಟು ಆರು ಜನ ಮಕ್ಕಳು. ಶ್ರೀಗಳೇ ಮನೆಗೆ ಹಿರಿಯ ಮಗ, ಕುಟುಂಬ ನಿರ್ವಹಣೆಗೆ ತಂದೆ ತಾಯಿಗಳು ಕೃಷಿ ಕಾರ್ಮಿಕ ವೃತ್ತಿಯನ್ನು ಕೈಗೊಂಡಿದ್ದರು. ಅನೇಕ ಸಲ ಕಷ್ಟಕಾರ್ಪಣ್ಯಗಳು ಬಂದಾಗಲೂ ಮಕ್ಕಳನ್ನು ಚೆನ್ನಾಗಿ ಜೋಪಾನ ಮಾಡುತ್ತಿದ್ದರು.

ಕುಟುಂಬದವರು ಬಡತನದ ಜೀವನ ಸಾಗಿಸುತ್ತಿದ್ದರೂ ಮನೆಯಲ್ಲಿ ದೈವಭಕ್ತಿಗೇನೂ ಕಡಿಮೆ ಇರಲಿಲ್ಲ. ಶ್ರೀಗಳ ಮಾತಾಪಿತರು ಮಹಾದೈವ ಭಕ್ತರಾಗಿದ್ದರು. ವೃತ್ತಿಯಲ್ಲಿ ವ್ಯವಸಾಯವನ್ನು ಅವಲಂಬಿಸಿದ್ದರಾದರೂ ಇದು ಮಳೆ ಬಂದಾಗ ಮಾತ್ರ ಸಾಗುತ್ತಿತ್ತು. ಇತರೆ ದಿನಗಳಲ್ಲಿ ಕೂಲಿ ಮಾಡಿಯೇ ಬದುಕು ಸವೆಸಬೇಕಾಗಿತ್ತು. ಶ್ರೀಗಳು ಬಾಲ್ಯದ ದಿನಗಳನ್ನು ಹಾಗೂ ಶಿಕ್ಷಣವನ್ನು ಕಡು ಕಷ್ಟದಿಂದಲೇ ತಿಪಟೂರಿನಲ್ಲಿ ಕಳೆದರು. ಹೆಚ್ಚಿನ ವಿದ್ಯಾಭ್ಯಾಸ ಮಾಡಲು ಇವರ ಹತ್ತಿರದ ಸಂಬಂಧಿಗಳು ಬೆಂಗಳೂರಿನ ಕೈಲಾಸ ಆಶ್ರಮಕ್ಕೆ ತಂದು ಬಿಟ್ಟರು.

ಶ್ರೀಗಳು ಬೆಂಗಳೂರಿನ ಕೈಲಾಸ ಆಶ್ರಮಕ್ಕೆ ಬಂದು ವಿದ್ಯಾಭ್ಯಾಸವನ್ನು ಮುಂದುವರಿಸಿದಂತೆ ಕ್ರಮೇಣ ತಮ್ಮ ಕುಟುಂಬದ ಸಂಪರ್ಕವನ್ನು ಕಳೆದುಕೊಳ್ಳುತ್ತಾ ಬಂದರು. ಆಶ್ರಮವಾಸ ಅಲ್ಲಿನ ಪರಿಸರ, ಚಿಕ್ಕವಯಸ್ಸಿನ ಶ್ರೀಗಳ ಮೇಲೆ ಅಗಾಧ ಬದಲಾವಣೆಗೆ ಪ್ರೇರಕವಾಗಿ ಪರಿಣಮಿಸಿತು. ಮೊದಲು ಶ್ರೀಗಳಿಗೇನು ತಾನು ಬ್ರಹ್ಮಚಾರಿಯಾಗಬೇಕು ಸ್ವಾಮಿಗಳಾಗಿರಬೇಕು ಎಂಬ ಕಲ್ಪನೆ ಏನು ಉಂಟಾಗಿರಲಿಲ್ಲ. ಆದರೆ ಆಶ್ರಮದ ಜೀವನ ಕ್ರಮೇಣ ತನ್ನಲ್ಲಿ ಲೌಕಿಕ ಜೀವನದ ಬಗ್ಗೆ ನಿರಾಸಕ್ತಿ ಬಂದು ಆಧ್ಯಾತ್ಮದ ಕಡೆ ಮನಸ್ಸು ಮಾಡಿದರು. ಆಶ್ರಮ ವಾತಾವರಣ ಮನುಷ್ಯನಿಗೆ ದೊಡ್ಡ ಸಂಸ್ಕಾರ ನೀಡುವ ಪುಣ್ಯಕ್ಷೇತ್ರವೆಂದು ಹೇಳಿದರ

ತಪ್ಪಾಗಲಾರದು. ಶ್ರೀ ಶ್ರೀ ತಿರುಚಿ ಮಹಾಸ್ವಾಮಿಗಳು ಮಹಾನ್ ತಪಸ್ವಿಗಳು, ಬ್ರಹ್ಮಜ್ಞಾನಿಗಳೆಂದು ಪೂಜಿತರು. ಇವರ ಮಾರ್ಗದರ್ಶನದಲ್ಲಿ ಮುಂದುವರಿದ ಶ್ರೀಗಳಿಗೆ ಅವರ ಆಶೀರ್ವಾದ ಲಭಿಸಿ ಮುಂದೆ ಅವರು ಪರಮಶಿಷ್ಯರಾದರು. ಗುರುಗಳಿಂದ ಸನ್ಯಾಸ ದೀಕ್ಷೆಗಳನ್ನು ಸ್ವೀಕರಿಸಿದರು. ಹುಟ್ಟಿ ಬೆಳೆದ ಮನೆಯನ್ನು ತಂದೆ-ತಾಯಿ ಸೋದರಿಯರನ್ನು ಅಷ್ಟೇ ಏಕೆ ಇಡೀ ಕುಟುಂಬವನ್ನು ಬಂಧು-ಬಳಗವನ್ನು ತ್ಯಾಗ ಮಾಡಿ ಸಮಾಜವೇ ನನ್ನ ಕುಟುಂಬ, ಅವರೇ ನನ್ನ ಸೋದರ ಸೋದರಿ, ತಂದೆ-ತಾಯಿ ಬಂಧು-ಬಳಗ ಎಲ್ಲವೂ ಎಂದು ಸ್ವೀಕರಿಸಿ, ತನಗೆ ಅಲ್ಲಿವರೆಗೆ ಕುಟುಂಬದವರು ಇಟ್ಟಿದ್ದ ಪ್ರೇಮಕುಮಾರನೆಂಬ ಹೆಸರಿನಿಂದ ಬದಲಾವಣೆಗೊಂಡು, ಮಹಾತೇಜಸ್ವಿಗಳಾದ ಶ್ರೀ ಶ್ರೀ ತಿರುಚಿ ಮಹಾಸ್ವಾಮಿಗಳಿಂದ ಶ್ರೀ ಶ್ರೀ ಶ್ರೀ ಪುಣ್ಯಾನಂದಪುರಿ ಮಹಾಸ್ವಾಮಿಗಳಾಗಿ ಮರುನಾಮಕರಣಗೊಂಡರು. ರಾಜನಹಳ್ಳಿಯ ಪ್ರಥಮ ಪೀಠಾಧೀಶರಾದರು. ಜವರಾಯನು ಕಠೋರವಾಗಿ ಅವರನ್ನು ಅಸ್ತಂಗತರನ್ನಾಗಿ ಮಾಡಿದನು.

ಪುಣ್ಯಾನಂದಪುರಿ ಮಹಾಸ್ವಾಮಿಗಳು ಬದುಕಿದ್ದು ಕಡಿಮೆ ವರ್ಷವಾದರೂ ಸಾಧಿಸಿದ್ದು ಮಾತ್ರ ಸಿಂಹಪಾಲು. ಬಿಡಿಬಿಡಿಯಾಗಿ ಹರಿದು ಹೋಗಿದ್ದ ಸಮಾಜವನ್ನು ಅಲ್ಪ ಸಮಯದಲ್ಲಿ ಕೂಡಿಸುವ ಕೆಲಸ ಮಾಡಿದರು. ಮಹಾಸ್ವಾಮಿಗಳ ಜೀವಂತವಾಗಿ ಇದ್ದಿದ್ದರೆ ಕರ್ನಾಟಕ ರಾಜ್ಯದ ಆಧುನಿಕ ನಾಯಕರಾಗಿ ಅಧಿಕಾರ ನಡೆಸುತ್ತಿದ್ದರು ಎಂದು ಅನೇಕರ ನಾಲಿಗೆಯ ಮೇಲೆ ಈ ಮಾತು ಮಿಂಚಿನಂತೆ ಹರಿದಾಡಿದ್ದು ಮಾತ್ರ ಸತ್ಯ ಎಂದು ಸಮುದಾಯದವರ ಅಭಿಪ್ರಾಯವಾಗಿದೆ.

ಶ್ರೀ ಶ್ರೀ ಶ್ರೀ ಪ್ರಸನ್ನ ವಾಲ್ಮೀಕಿ ಸ್ವಾಮಿಗಳ ಪರಿಚಯ

ಶ್ರೀಗಳು ತಂದೆ ಬಸಪ್ಪ ಸಿದ್ರಾಮಪ್ಪಗುಡಿ ತಾಯಿ ಯಲ್ಲಮ್ಮ. ಯಲ್ಲಮ್ಮ ದೇವಿ ಪರಮಭಕ್ತರು. ಗದಗ ಜಿಲ್ಲೆ ರೋಣ ತಾಲೂಕಿನ ಹಿರೇಮಣ್ಣೂರು ಗ್ರಾಮದ ನಿವಾಸಿಗಳು. ಇವರ ಮೂಲ ಮನೆತನದ ಹೆಸರು ಜಗಳೂರು ಎಂದು ಕರೆಯುತ್ತಿದ್ದರು. ಹನುಮಪ್ಪ ದೇವರ ಗುಡಿ ಮುಂದೆ ಇವರ ಮನೆ ಇದ್ದುದರಿಂದ ಗುಡಿ ಎಂದು ಅಡ್ಡ ಹೆಸರು ಬಂದಿತೆಂದು ತಾಯಿ ಹೇಳುತ್ತಾರೆ. ಸಿದ್ರಾಮಪ್ಪ ಸಹೋದರ ಗೋವಿಂದಪ್ಪನವರಿಗೆ ಮಕ್ಕಳಿದ್ದರಿಂದ ಬಸಪ್ಪನನ್ನೇ ದತ್ತಕ ತೆಗೆದುಕೊಂಡು ಈಗ ಶ್ರೀಗಳ ತಾಯಿ ಸಹೋದರರು ದತ್ತಕ ಅಜ್ಜನ ಮನೆಯಲ್ಲೇ ಇರುತ್ತಾರೆ. ಇವರ ಮೂಲ ಮನೆಯಲ್ಲಿ ಇವರ ಅತ್ತೆಯ ಮಕ್ಕಳು ನೆಲೆಸಿರುತ್ತಾರೆ.

ಶ್ರೀ ಪ್ರಸನ್ನ ವಾಲ್ಮೀಕಿ ಮಹಾಸ್ವಾಮಿಗಳ ಹಿಂದಿನ ಹೆಸರು ರಮೇಶ ಬಸಪ್ಪ ಗುಡಿ. ಮೂರನೇ ಸುಪುತ್ರರು. ಅಂದಪ್ಪ ಹಿರಿಯ ಮಗ ಕೃಷಿ ಮಾಡಿಕೊಂಡಿದ್ದಾರೆ. ಎರಡನೆಯ

ಮಗ ಹನುಮಂತ ಸಹಶಿಕ್ಷಕರಾಗಿ ಶಿರಹಟ್ಟಿ ತಾಲೂಕಿನ ನವೆಬೆನ್ನೂರ ಪ್ರಾಥಮಿಕಶಾಲೆ ಶಿಕ್ಷಕರಾಗಿದ್ದಾರೆ. ಶರಣಪ್ಪ ಕೊನೆಯವರು. ಶ್ರೀಗಳು ಚಿತ್ರದುರ್ಗದ ಮುರುಘಾ ಮಠದಲ್ಲಿ ವಿದ್ಯಾಭ್ಯಾಸ ಮುಗಿಸಿ ಪ್ರಸ್ತುತ ವಾಲ್ಮೀಕಿ ಮಠದ ಎರಡನೇ ಪೀಠಾಧೀಶರಾಗಿದ್ದಾರೆ. ಸಮುದಾಯ ಏಳಿಗೆಗಾಗಿ ಸದಾ ಕ್ರಿಯಾಶೀಲವಾಗಿ ಕೆಲಸ ಮಾಡುತ್ತಿದ್ದಾರೆ. ಮೊದಲನೆಯ ಸ್ವಾಮಿಗಳನ್ನು ಕಳೆದುಕೊಂಡ ಸಮಾಜಕ್ಕೆ ಎರಡನೇ ಸ್ವಾಮಿಗಳಾಗಿ ಆಗಮಿಸಿದವರು ಸಮಾಜಕ್ಕೆ ದಾರಿ ದೀಪವಾಗಿ ಕೆಲಸ ಮಾಡುತ್ತಿದ್ದಾರೆ. ಆದರೆ ಇತ್ತೀಚಿಗೆ ಮಠದ ಬೆಳವಣಿಗೆ ಕುಂಠಿತವಾಗಿದೆ. ಏಕೆಂದರೆ ಆಸಕ್ತಿ ಕೊರತೆಯೋ ಮಠದ ದೌರ್ಬಲ್ಯವೋ ಗೊತ್ತಾಗುತ್ತಿಲ್ಲ. ಈ ಸಮಾಜದ ಪರಿಸ್ಥಿತಿ.

"ವಿದ್ಯೆ ಕಲಿಸದ ಬುದ್ಧಿ ಹೇಳದ ಗುರುವು

ಬಿದ್ದಿರಲು ಬಂದು ನೋಡದ ತಾಯಿ

ಈ ಮೂವರು ಶುದ್ಧ ವೈರಿ" ಎಂದ ಸರ್ವಜ್ಞ.

ಸಮಾಜವನ್ನು ಸರಿಯಾದ ದಾರಿಗೆ ತರಬೇಕಾದ ಸ್ವಾಮಿಗಳು ಇತ್ತೀಚೆಗೆ ವಿಲಾಸ ಜೀವನಕ್ಕೆ ಮೊರೆ ಹೋಗಿರುವುದರಿಂದ ಸಮಾಜಕ್ಕೆ ಹೇಳುವವರು ಯಾರು ಇಲ್ಲ, ಕೇಳುವವರು ಯಾರು ಇಲ್ಲ. ಇದರಿಂದ ಶೋಷಿತ ಸಮುದಾಯ ಮತ್ತಷ್ಟು ಶೋಷಣೆಗೊಳಗಾಗುತ್ತಿರುವುದು ಮಾತ್ರ ಸತ್ಯ ಸಂಗತಿಯಾಗಿದೆ ಎನ್ನುವ ಹಲವರ ಅಭಿಪ್ರಾಯವಾಗಿದೆ.

೩. ಬಂಜಾರ ಮಹಾಸಂಸ್ಥಾನ: ಚಿತ್ರದುರ್ಗ

ಪೀಠಾಧ್ಯಕ್ಷರು: ಬಸವ ಸೇವಾಲಾಲ್ ಸರ್ದಾರ್ ಸ್ವಾಮೀಜಿ

ಮಠದ ಸ್ಥಾಪನೆ: ೨೦೦೬

ಬಂಜಾರ ಸೇವಾಲಾಲ್ ಮಹಾಸಂಸ್ಥಾನವು ಚಿತ್ರದುರ್ಗ ಹೊರ ವಲಯವಾದ ರಾಷ್ಟ್ರೀಯ ಹೆದ್ದಾರಿ-೪ ರ ಪಕ್ಕದಲ್ಲಿದೆ. ಈ ಸಂಸ್ಥಾನವನ್ನು ಅಲಕ್ಷಿತ ಸಮುದಾಯದ ಪ್ರಗತಿಯ ಆಶಯಹೊಂದಿ ಅಲಕ್ಷಿತ ವರ್ಗದ ಎಲ್ಲಾ ಸಮುದಾಯಗಳಿಗೂ ಪ್ರತ್ಯೇಕವಾದ ಪೀಠವನ್ನು ಸ್ಥಾಪನೆ ಮಾಡುವ ಸಂದರ್ಭದಲ್ಲಿ ಲಂಬಾಣಿ ಸಮುದಾಯದ ಪ್ರತಿನಿಧಿಯಾಗಿ ಈ ಮಠವನ್ನು ಸ್ಥಾಪನೆ ಮಾಡಲಾಗಿದೆ. ಈ ಪೀಠದ ಸ್ವಾಮಿಯನ್ನು ಚಿತ್ರದುರ್ಗದ ಮುರುಘಮಠದ ಶರಣರಾದ ಶ್ರೀ ಶಿವಮೂರ್ತಿ ಮುರುಘಶರಣರು ೨೦೦೬ರಲ್ಲಿ ಪಟ್ಟಾಭಿಷೇಕ ಮಾಡಿದರು. ಅಂದಿನಿಂದ ಈ ಮಠವು ಲಂಬಾಣಿ ಸಮುದಾಯದ ಪ್ರತಿನಿಧಿಯಾಗಿದ್ದುಕೊಂಡು, ಈ ಸಮುದಾಯದ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸುತ್ತಿದೆ. ಈ ಕುರಿತು ದಿನಾಂಕ ೧೨.೦೪.೨೦೧೬ರಂದು

ಲಂಬಾಣಿ ಪೀಠದ ಪೀಠಾಧ್ಯಕ್ಷರಾದ ಶ್ರೀ ಬಸವ ಸೇವಾಲಾಲ್ ಸರ್ದಾರ್ ಸ್ವಾಮೀಜಿಯು ತಮ್ಮ ಮಠದ ಕುರಿತು ಹೇಳುವುದನ್ನು ಈ ಮುಂದಿನಂತೆ ವಿವರಿಸಲಾಗಿದೆ.

ಶ್ರೀಮಠದ ಸ್ಥಾಪನೆಯ ಹಿಂದಿನ ಒತ್ತಡ ಹಾಗೂ ಉದ್ದೇಶ

ಲಂಬಾಣಿ ಸಮುದಾಯವನ್ನು ಪ್ರತಿನಿಧಿಸುವ ಈ ಮಠವನ್ನು ೨೦೦೬ರಲ್ಲಿ ಸ್ಥಾಪಿಸುವುದಕ್ಕೂ ಮುಂಚಿತವಾಗಿ ಶಿವಶರಣ ಬಸವಣ್ಣನ ಪರಿಕಲ್ಪನೆಯ ವೀರಶೈವ ಮಾದರಿಯ ಪೀಠವು ಈ ಸಮುದಾಯದಲ್ಲಿ ಕಂಡು ಬರುವುದಿಲ್ಲ. ಆದರೆ ಇದಕ್ಕೂ ಮುಂಚಿತವಾಗಿ ಈ ಸಮುದಾಯವು 'ಸಂತಸೇವಾಲಾಲ್ ಮಹರಾಜರನ್ನು' ತಮ್ಮ ಸಾಂಸ್ಕೃತಿಕ ನಾಯಕನೆಂದು ಆರಾಧಿಸುತ್ತಾ ಬಂದಿದ್ದಾರೆ. ಆದರೆ ಈ ಸಮುದಾಯದಲ್ಲಿ ಜಾಗೃತಿಯನ್ನು ಮೂಡಿಸಲು ಹಾಗೂ ಈ ಸಮುದಾಯವನ್ನು ಸಾಮಾಜಿಕವಾಗಿ ಸಂಘಟನೆಯ ಮಾದರಿಯಲ್ಲಿ ಮುನ್ನೆಡೆಸುವ ಆಶಯ ಹೊಂದಿ ವೀರಶೈವ ಮಾದರಿಯ ಪೀಠವೊಂದನ್ನು ಸ್ಥಾಪನೆ ಮಾಡಲಾಯಿತು. ಈ ಮಠಗಳ ಸಂಪೂರ್ಣ ನಿಯಂತ್ರಣವು ಮುರುಘಾ ಶರಣರ ಕೈಯಲ್ಲಿರುವುದರಿಂದ ಇದು ವೀರಶೈವ ಮಾದರಿಯಲ್ಲಿಯೇ ರಚನೆಯಾಗಿದೆ. ಈ ಸಮುದಾಯದ ಹಕ್ಕುಗಳ ಸಂರಕ್ಷಣೆ ಹಾಗೂ ಜಾಗೃತ ಪ್ರಜ್ಞೆಗಾಗಿ ಈ ಮಠದ ಅವಶ್ಯಕತೆಯ ಅನಿವಾರ್ಯವು ಇತ್ತು. ಈ ಕಾರಣದಿಂದ ಲಂಬಾಣಿ ಸಮುದಾಯದ ಮುಖಂಡರು ಹಾಗೂ ಮುರುಘ ಶರಣರ ಪರಿಶ್ರಮದ ಫಲವಾಗಿ ಈ ಪೀಠವು ಸ್ಥಾಪನೆಯಾಯಿತು.

ಈ ಪೀಠದ ಉದ್ದೇಶವೆಂದರೆ ಲಂಬಾಣಿ ಸಮುದಾಯವನ್ನು ರಾಜಕೀಯವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ಮತ್ತು ಧಾರ್ಮಿಕವಾಗಿ ಮುನ್ನಡೆಸುವುದು. ಶ್ರೀ ಮಠದ ಸ್ಥಾಪನೆಯ ಹಿಂದಿನ ಪ್ರಮುಖ ಉದ್ದೇಶವಾಗಿರುತ್ತದೆ. ಮುಂದುವರೆದಿರುವ ಸಮುದಾಯಗಳು ತಮ್ಮ ಸಾಮಾಜಿಕ ಭದ್ರತೆಗಾಗಿ ಈ ರೀತಿಯ ಮಠ ಪರಂಪರೆಯನ್ನು ಬೆಳೆಸಿಕೊಂಡು ಬಂದಿರುವಾಗ ಅಲಕ್ಷಿತ ಸಮುದಾಯಗಳು ಈ ಮಾದರಿಯನ್ನು ಅನುಸರಿಸುವ ಮೂಲಕ ತಮ್ಮ ಸಮುದಾಯದ ಸಂಘಟನಾ ಶಕ್ತಿಯನ್ನು ಎತ್ತಿ ಹಿಡಿಯುವ ಉದ್ದೇಶದಿಂದ ಈ ಪೀಠದ ಸ್ಥಾಪನೆಗೆ ಮುಂದಾಗಿರುವುದು ತಿಳಿದುಬರುತ್ತದೆ.

ಶ್ರೀಮಠದೊಂದಿಗೆ ಸಮುದಾಯದ ಒಡನಾಟ

ಶ್ರೀಮಠವು ೨೦೦೬ರಲ್ಲಿ ಸಾಮಾಜಿಕವಾಗಿ ಹಿಂದುಳಿದಿರುವ ಈ ಲಂಬಾಣಿ ಸಮುದಾಯದಲ್ಲಿ ಜಾಗೃತಿಯನ್ನು ಮೂಡಿಸುವ ಸಲುವಾಗಿ ಸ್ಥಾಪನೆಯಾಯಿತು. ಈ ಮಠದ ಸ್ಥಾಪನೆಯ ಬಗ್ಗೆ ಬಹುತೇಕ ಸಮುದಾಯದವರು ಒತ್ತಾಸೆಯನ್ನು ವ್ಯಕ್ತಪಡಿಸಿದ್ದರು. ಇದಕ್ಕೆ ಕಾರಣ ಈ

ಸಮುದಾಯದಲ್ಲಿ ಸಂಘಟನೆಯ ಸ್ವಭಾವ ಮೂಡಿಸುವುದಾಗಿತ್ತು. ಆದರೆ ಈ ಶ್ರೀಮಠ ಕಾರ್ಯವೈಖರಿಯ ಬಗ್ಗೆ ಈ ಸಮುದಾಯದ ಬಹುತೇಕರಲ್ಲಿ ವಿರೋಧವಿದೆ. ಇದಕ್ಕೆ ಕಾರಣವೆಂದರೆ ತಮ್ಮ ಮೂಲ ಸಂಸ್ಕೃತಿಯ ಸೇವಾಲಾಲ್ ಸಂಸ್ಕೃತಿಯನ್ನು ಮರೆಮಾಚಿ, ವೀರಶೈವ ಸಂಸ್ಕೃತಿಯನ್ನು ಅಳವಡಿಸಿಕೊಂಡಿರುವುದಾಗಿದೆ. ಈ ಕಾರಣದಿಂದ ಹಲವಾರು ವ್ಯಕ್ತಿಗಳು ಈ ಮಠವನ್ನು ತಿರಸ್ಕಾರಕ್ಕೆ ಗುರಿಪಡಿಸಿದ್ದಾರೆ.

ಆದರೆ ಶ್ರೀಮಠವು ಜನತೆಯಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಜನತೆಯತ್ತ ಮುಖಮಾಡುತ್ತಿದೆ. ಹಲವು ತಾಂಡಗಳಿಗೆ ಭೇಟಿ ನೀಡುವ ಮೂಲಕ ತಾಂಡಗಳ ಜನತೆಯ ಪ್ರಗತಿಗಾಗಿ ವಿವಿಧ ಯೋಜನೆಗಳನ್ನು ರೂಪಿಸಿಕೊಳ್ಳುತ್ತಿದೆ. ಇತ್ತೀಚೆಗೆ ಈ ಮಠದ ಬಗ್ಗೆ ಜನತೆಯಲ್ಲಿ ಗೌರವ ಭಾವವು ತಳೆಯುತ್ತಿದೆ. ಮಠದ ಶ್ರೀಗಳು ಶಿವರಶರಣರಾದ ಮುರುಘಶರಣರಿಂದ ದೀಕ್ಷೆ ಪಡೆದರು. ಬಸವ ತತ್ವಗಳೊಂದಿಗೆ, ಸರ್ದಾರ್ ಸೇವಾಲಾಲ್‌ರವರ ತತ್ವಗಳನ್ನು ಅಳವಡಿಸಿಕೊಂಡು ಜನತೆಯ ಪ್ರಗತಿಗಾಗಿ ಶ್ರಮಿಸುತ್ತಿರುವುದು ಕಂಡುಬರುತ್ತದೆ. ಇವುಗಳನ್ನೆಲ್ಲ ಬದಿಗೊತ್ತಿ ಶ್ರೀಮಠದ ಪೀಠಾಧ್ಯಕ್ಷರು ಜನತೆಯನ್ನು ತಮ್ಮತ್ತ ಸೆಳೆಯಲು ಹಲವಾರು ಜನಪರ ಯೋಜನೆಗಳನ್ನು ಹಾಕಿಕೊಂಡು ಮುನ್ನಡೆಯುತ್ತಿದ್ದಾರೆ. ಇಲ್ಲಿ ಪ್ರಮುಖವಾಗಿ ಎದ್ದುಕಾಣುವ ಅಂಶವೆಂದರೆ ಲಂಬಾಣಿ ಸಮುದಾಯದ ಮೂಲ ಸಂಸ್ಕೃತಿಗೂ, ಮಠ ಪರಂಪರೆಯ ಶರಣ ತತ್ವಗಳಿಗೂ ನಡುವೆ ಸಂಘರ್ಷಣೆ ನಡೆಯುತ್ತಿದೆ. ಇದಕ್ಕೆ ಕಾರಣ ಲಂಬಾಣಿ ಸಮುದಾಯವು ಇಂದಿಗೂ ತನ್ನ ಮೂಲ ಸಂಸ್ಕೃತಿ ಹಾಗೂ ಪರಂಪರೆಯನ್ನು ಯಥಾವತ್ತಾಗಿ ಪಾಲಿಸಿಕೊಂಡು ಬಂದಿದೆ. ಇಂತಹ ಸಂದರ್ಭದಲ್ಲಿ ವೀರಶೈವ ಮಾದರಿಗೆ ಹೊಂದಿಕೊಳ್ಳುವಲ್ಲಿ ಹಲವಾರು ತೊಡಕುಗಳಿವೆ. ಆದರೆ ಪೀಠಾಧಿಪತಿಗಳು ಈ ಸಂಘರ್ಷದ ನಿಲುವುಗಳನ್ನು ಮೆಟ್ಟಿನಿಂತು ಜನತೆಯತ್ತ ಮುಖಮಾಡುತ್ತಿರುವುದು ಕಂಡುಬರುತ್ತದೆ.

ಶ್ರೀಮಠದ ಶೈಕ್ಷಣಿಕ ಸ್ಥಿತಿಗತಿ

ಲಂಬಾಣಿ ಗುರು ಪೀಠವು ೨೦೦೬ರಲ್ಲಿ ಸ್ಥಾಪನೆಯಾಗಿದ್ದು, ಶೈಕ್ಷಣಿಕ ಬೆಳವಣಿಗೆಯಲ್ಲಿ ಹಿಂದುಳಿದಿದೆ. ಈ ಹಂತದಲ್ಲಿ ತಮ್ಮ ಮಠದ ಅಡಿಯಲ್ಲಿ ಪ್ರಾಥಮಿಕ ಶಾಲೆಯನ್ನು ತೆರೆದಿದ್ದು ಇದೀಗ ದಾಪುಗಾಲು ಇಡುತ್ತಿದೆ. ಸಮುದಾಯದ ಜನತೆಯಲ್ಲಿ ಶಿಕ್ಷಣದ ಅರಿವು ಮೂಡಿಸಲು ಈ ಮಠವು ನಿರಂತರವಾಗಿ ಶ್ರಮಿಸುತ್ತಿದೆ. ಬಡಮಕ್ಕಳನ್ನು ಗುರುತಿಸಿ ಅವರಿಗೆ ಶಿಕ್ಷಣಕ್ಕೆ ಅನುವು ಮಾಡಿಕೊಡುವ ವಿಶೇಷ ಯೋಜನೆಗಳನ್ನು ರೂಪಿಸಿಕೊಂಡಿದೆ. ಲಂಬಾಣಿ ಸಮುದಾಯದಲ್ಲಿ ಗುಳೆ ಹೋಗುವುದು ಕಂಡುಬರುತ್ತದೆ. ಇವರು ತಮ್ಮ ಹೊಟ್ಟೆಪಾಡಿಗಾಗಿ

ದೂರದ ಊರುಗಳಿಗೆ ಕೂಲಿ ಅರಸಿ ಹೋಗುತ್ತಾರೆ. ಈ ಸಂದರ್ಭದಲ್ಲಿ ತಮ್ಮ ಮಕ್ಕಳ ಶಿಕ್ಷಣವನ್ನು ಮೊಟಕುಗೊಳಿಸಿ ಜೊತೆಗೆ ಕರೆದುಕೊಂಡು ಹೋಗುತ್ತಾರೆ. ಇದನ್ನು ತಡೆಯಲು ಸಂಚಾರಿ ಶಾಲೆಗಳನ್ನು ತೆರೆಯುವಂತೆ ಸರ್ಕಾರದ ಮೇಲೆ ಒತ್ತಡ ತರುತ್ತಿದೆ. ಹಾಗೆಯೇ ಸಾಧ್ಯವಾದಷ್ಟು ಮಕ್ಕಳಿಗೆ ಸಹಕಾರ ನೀಡುತ್ತಾ ಬಂದಿದೆ.

ಶ್ರೀಮಠದ ಆರ್ಥಿಕ ಸ್ಥಿತಿಗತಿ

ಶ್ರೀಮಠವು ಆರ್ಥಿಕವಾಗಿ ಅತ್ಯಂತ ಹಿಂದುಳಿದಿದೆ. ಅಲಕ್ಷಿತ ಸಮುದಾಯಕ್ಕಂದೇ ಜೀವ ತಳೆದಿರುವ ಈ ಮಠವು ಮುರುಘ ಶರಣರಿಂದ ಎರಡು ಎಕರೆ ಜಮೀನು ಪಡೆದು ತನ್ನ ಬೆಳವಣಿಗೆಯನ್ನು ಆರಂಭಿಸಿದೆ. ಈ ಸಮುದಾಯದ ಶ್ರೀಮಂತವರ್ಗದವರು, ಅಧಿಕಾರಿಗಳು, ಕೆಲವು ರಾಜಕಾರಣಿಗಳು ಹಾಗೂ ಭಕ್ತರೇ ಇದರ ಆರ್ಥಿಕ ಮೂಲವಾಗಿದೆ. ಮಠಕ್ಕೆ ಇನ್ನುಳಿದ ಯಾವುದೇ ಸ್ಥಿರಾಸ್ತಿ ಇರುವುದು ಕಂಡುಬರುವುದಿಲ್ಲ. ಆದರೆ ಈ ಮಠಕ್ಕೆ ಸಮುದಾಯದ ಜನರ ವಿರೋಧವಿರುವುದರಿಂದ ಸೂಕ್ತವಾದ ಆರ್ಥಿಕ ಸಹಕಾರದ ಕೊರತೆ ಕಂಡುಬರುತ್ತದೆ. ಮಠಕ್ಕೆ ರಾಜಕಾರಣದ ಜೊತೆ ಸೂಕ್ತವಾದ ಹೊಂದಾಣಿಕೆಯ ಕೊರತೆಯಿಂದಾಗಿ ಸರ್ಕಾರದಿಂದಲೂ ಸೂಕ್ತವಾದ ಅನುದಾನದ ಕೊರತೆ ಕಂಡುಬರುತ್ತದೆ. ಇದಕ್ಕೆ ಪ್ರಮುಖ ಕಾರಣವೆಂದರೆ ಸಮುದಾಯದ ಮತ್ತು ಶ್ರೀಮಠದ ನಡುವಿನ ತಾತ್ವಿಕ ಸಂಘರ್ಷದ ಸ್ವರೂಪವಾಗಿದೆ.

ಶ್ರೀಮಠದ ಸಾಮಾಜಿಕ ಚಳುವಳಿ

ಶ್ರೀಮಠವು ಅಲಕ್ಷಿತ ಸಮುದಾಯದ ಪ್ರತಿನಿಧಿಯಾಗಿ ಜನ್ಮತಳೆದಿದೆ. ಈ ಸಂದರ್ಭದಲ್ಲಿ ಹಲವಾರು ವಿಜ್ಞಾನಿಗಳು, ವಿರೋಧಗಳ ನಡುವೆ ಬೆಳೆಯುತ್ತಿದೆ. ಆರ್ಥಿಕವಾಗಿ ಹಿಂದುಳಿದಿರುವ ಈ ಮಠವನ್ನು ಉನ್ನತ ವರ್ಗಗಳು ಹಾಗೂ ಉನ್ನತ ವರ್ಗವನ್ನು ಪ್ರತಿನಿಧಿಸುವ ಕೆಲವು ಮಠಗಳ ಸ್ವಾಮಿಗಳು, ಅಧಿಕಾರಿಗಳು ಇವರನ್ನು ತಿರಸ್ಕಾರದಿಂದ ನೋಡುವುದು ಮಾತ್ರವಲ್ಲ, ಈ ಮಠಗಳನ್ನು ತುಳಿಯುವ ಷಡ್ಯಂತ್ರಗಳನ್ನು ರೂಪಿಸುತ್ತ ಬಂದಿವೆ. ಇದಕ್ಕೆ ಕಾರಣ ತಳವರ್ಗದ ಮಾದಿಗ ಸಮುದಾಯವು ಜಾಗೃತರಾದರೆ ತಮ್ಮ ಅಸ್ತಿತ್ವಕ್ಕೆ ಧಕ್ಕೆಯಾಗುವುದೆಂಬ ಆತಂಕ ಈ ಉನ್ನತ ವರ್ಗಗಳ ಮಠಗಳು ಹಾಗೂ ಜನತೆಯಲ್ಲಿ ನೆಲೆಯೂರಿದೆ. ಹೀಗಾಗಿ ಈ ಅಲಕ್ಷಿತ ಮಠವನ್ನು ಹತ್ತಿಕ್ಕುವ ಪ್ರಯತ್ನ ನಡೆಯುತ್ತಿವೆ. ಆದರೆ ಮಠವು ಈ ಎಲ್ಲ ಸಮಸ್ಯೆಗಳ ಮಧ್ಯೆ ಜನರ ವಿಶ್ವಾಸವನ್ನು ಪಡೆದು, ಸಮುದಾಯದ ಜನತೆಯಲ್ಲಿ ಸಾಮಾಜಿಕ ಪ್ರಜ್ಞೆ ಹಾಗೂ ಅರಿವು ಮೂಡಿಸುವತ್ತ ಶ್ರಮಿಸುತ್ತಿರುವುದು ಕಂಡುಬರುತ್ತದೆ.

ಉನ್ನತ ವರ್ಗಗಳು ಈ ಮಠದಲ್ಲಿ ಬಿರುಕು ಮೂಡಿಸಲು ಹಾಗೂ ಈ ಮಠಕ್ಕೆ ಕೇಡುಬಗೆಯುವ ನೆಲೆಯಲ್ಲಿ, ಈ ಸಮುದಾಯಗಳಲ್ಲಿ ವಿವಿಧ ಬಣಗಳನ್ನು ಸೃಷ್ಟಿಸುವ ಕೆಲಸ

ಮಾಡುತ್ತ ಬಂದಿವೆ. ಈ ಮೂಲಕ ಶ್ರೀಮಠವು ಆರ್ಥಿಕವಾಗಿ ಮುಂದುವರೆಯದಂತೆ ಜನತೆಯನ್ನು ತಪ್ಪುದಾರಿಗೆ ತಳ್ಳಲು ಪ್ರಯತ್ನಿಸುತ್ತಿವೆ. ಈ ಪೀಠಾಧ್ಯಕ್ಷರು ಈ ಎಲ್ಲ ಅಂಶಗಳನ್ನು ಗುರುತಿಸಿ ಜನತೆಯಲ್ಲಿ ಐಕ್ಯತೆಯನ್ನು ಸಾಧಿಸಲು ಹೋರಾಟ ನಡೆಸುತ್ತಿದ್ದಾರೆ.

೪. ಶ್ರೀ ಮಾದಾರ ಚನ್ನಯ್ಯ ಮಹಾಸಂಸ್ಥಾನ

ಶ್ರೀಮಠವು ೨೦೦೪ರಲ್ಲಿ ಚಿತ್ರದುರ್ಗದಲ್ಲಿ ಸ್ಥಾಪನೆಯಾಗಿದೆ. ಇದರ ಪ್ರಥಮ ಪೀಠಾಧ್ಯಕ್ಷರು ಶ್ರೀ ಬಸವಪ್ರಭು ಮಾದಾರ ಚನ್ನಯ್ಯ ಮಹಾಸ್ವಾಮಿಗಳು. ಮಾದಾರ ಚನ್ನಯ್ಯ ಮಹಾಸಂಸ್ಥಾನ ಪೀಠದ ಕೇಂದ್ರ ಸ್ಥಳವು ಚಿತ್ರದುರ್ಗದ ರಾಷ್ಟ್ರೀಯ ಹೆದ್ದಾರಿ ೪ರಲ್ಲಿ ಮುರುಘಮಠದ ಸಮೀಪದಲ್ಲಿಯೇ ಕಂಡುಬರುತ್ತದೆ. ಈ ಪೀಠವು ಮಾದಿಗ(ಆದಿ ಕರ್ನಾಟಕ) ಸಮುದಾಯದ ಪ್ರತಿನಿಧಿಯಾಗಿ ಜನ್ಮತಳೆದಿದೆ. ಈ ಪೀಠವನ್ನು ಚಿತ್ರದುರ್ಗದ ಮುರುಘ ಮಠದ ಪೀಠಾಧ್ಯಕ್ಷರಾದ ಶ್ರೀ ಶಿವಮೂರ್ತಿ ಮುರುಘ ಶರಣರು ತಮ್ಮ ಧರ್ಮಜಾಗೃತಿಯ ಒತ್ತಾಸೆಯಿಂದ ಸಮಾಜದಲ್ಲಿ ತುಳಿತಕ್ಕೆ (ನಿರ್ಲಕ್ಷಕ್ಕೆ) ಒಳಗಾಗಿರುವ ಸಮುದಾಯಗಳಲ್ಲಿ ಧರ್ಮ ಜಾಗೃತಿಯನ್ನು ಮೂಡಿಸುವ ಸಲುವಾಗಿ ಪ್ರತಿಯೊಂದು ಸಮುದಾಯಗಳಿಗೂ ಧಾರ್ಮಿಕ ಪೀಠವನ್ನು 'ಶರಣ ತತ್ವಗಳ' ಅಡಿಯಲ್ಲಿ ಅಸ್ತಿತ್ವಕ್ಕೆ ತರುವ ಪ್ರಯತ್ನ ಮಾಡಿದರು. ಈ ಹಿನ್ನೆಲೆಯಲ್ಲಿ ರೂಪಗೊಂಡಿರುವುದೇ ಶ್ರೀ ಮಾದಾರ ಚನ್ನಯ್ಯ ಗುರುಪೀಠ.

ಪೀಠ ಸ್ಥಾಪನೆಯ ಬಹುಮುಖ್ಯ ಉದ್ದೇಶ

'ಮಾದಿಗ' ಸಮುದಾಯವನ್ನು ಧಾರ್ಮಿಕವಾಗಿ ಹಾಗೂ ಶೈಕ್ಷಣಿಕವಾಗಿ, ರಾಜಕೀಯವಾಗಿ ಜಾಗೃತಿ ಮೂಡಿಸುವ ಬಹುಮುಖ್ಯ ಉದ್ದೇಶವನ್ನು ಇಟ್ಟುಕೊಂಡು ಶ್ರೀಮಠವನ್ನು ಸ್ಥಾಪನೆ ಮಾಡಲಾಯಿತು. 'ಮಾದಿಗ' ಸಮುದಾಯವು ಉನ್ನತ ವರ್ಗಗಳಿಂದ ನಿರ್ಲಕ್ಷ್ಯಕ್ಕೆ ಗುರಿಯಾಗಿ ಹಲವಾರು ರೀತಿಯ ಶೋಷಣೆಗಳನ್ನು ಅನುಭವಿಸಿಕೊಂಡು ಬಂದಿದೆ. ಇಂತಹ ತುಳಿತಕ್ಕೆ ಒಳಗಾಗಿರುವ ಸಮುದಾಯವನ್ನು ಧಾರ್ಮಿಕವಾಗಿ ಮುನ್ನಡೆಸುವ ಬಹುಮುಖ್ಯ ಉದ್ದೇಶದಿಂದಲೂ ಶ್ರೀಮಠವನ್ನು ಸ್ಥಾಪಿಸಿರುವುದು ಕಂಡು ಬರುತ್ತದೆ. ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ಸ್ಥಾಪನೆಯಾದಂತಹ ವಚನ ಚಳವಳಿ ಅಥವಾ ಶರಣ ಚಳುವಳಿಗೆ ತಾತ್ವಿಕ ಶಕ್ತಿಯನ್ನು ನೀಡಿದವರು ಬಸವಣ್ಣನವರಿಗಿಂತ ಹಿರಿಯರು ಆಗಿರುವಂತಹ ಮಾದಾರ ಚನ್ನಯ್ಯನವರು. ಅವರ ಕಾಣಿಕೆ ಅಭೂತಪೂರ್ವವಾಗಿದೆ. ಮಾದಾರ ಚನ್ನಯ್ಯನವರ ತಾತ್ವಿಕತೆಯನ್ನು ಮನಗಂಡ ಬಸವಣ್ಣನವರು ಅಲಕ್ಷಿತ ಸಮುದಾಯದ ಶರಣರನ್ನೆಲ್ಲ ಒಂದೆಡೆ ಸೇರಿಸಿಕೊಂಡು ಸಮುದಾಯ ವ್ಯವಸ್ಥೆಯನ್ನು ಮೀರಿ ಸಮಾನತೆಯನ್ನು ಸಾಧಿಸುವ ಸಲುವಾಗಿ

ಶೂನ್ಯ ಪೀಠವನ್ನು ಸ್ಥಾಪಿಸಿಕೊಂಡು ಅನುಭವ ಮಂಟಪದ ಅಡಿಯಲ್ಲಿ ವಿವಿಧ ಯೋಜನೆಗಳನ್ನು ರೂಪಿಸಿಕೊಂಡು ಅಸಮಾನತೆಯನ್ನು ಮೀರಿ, ಶರಣ ದೀಕ್ಷೆ ಪಡೆದವರೆಲ್ಲ ಶ್ರೇಷ್ಠತಮರು ಎಂಬುದನ್ನು ಪ್ರಚಾರ ಪಡಿಸಿದರು. ಹನ್ನೆರಡನೇ ಶತಮಾನದ ಸಾಮಾಜಿಕ ಸಮಾನತೆಯ ಶರಣ ಚಳವಳಿಯ ಆಂದೋಲನವು ಇಂದಿಗೂ ಮಾದರಿಯಾಗಿದೆ. ಇಂತಹ ಶ್ರೇಷ್ಠ ಆಂದೋಲನಕ್ಕೆ ಪ್ರೇರಕ ಶಕ್ತಿಯಾಗಿದ್ದವರಲ್ಲಿ ಮಾದಾರ ಚನ್ನಯ್ಯನವರು ಒಬ್ಬರಾಗಿದ್ದರು. ಈ ಕಾರಣದಿಂದ ಮಾದಾರ ಚನ್ನಯ್ಯನವರ ಸ್ಮರಣಾರ್ಥವಾಗಿ, ಅವರ ತತ್ವ-ಚಿಂತನೆಗಳ ಬಗ್ಗೆ ಅರಿವು ಮೂಡಿಸುವ ಮೂಲಕ, ಅವರ ಮಾರ್ಗದಲ್ಲಿ ಸಮಾಜದಲ್ಲಿ ಇಂದಿಗೂ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಸಮುದಾಯವನ್ನು ಆರ್ಥಿಕವಾಗಿ, ಧಾರ್ಮಿಕವಾಗಿ, ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಜಾಗೃತಗೊಳಿಸುವ ಉದ್ದೇಶದಿಂದ ಈ ಪೀಠವನ್ನು ಮುರಘ ಶರಣರಾದ ಶ್ರೀ ಶಿವಮೂರ್ತಿ ಮುರುಘ ಶರಣರು ತಮ್ಮ ಅಧೀನದಲ್ಲಿ ೨೦೦೪ರಲ್ಲಿ ಸ್ಥಾಪನೆ ಮಾಡಿ ಈ ಮಠವನ್ನು ಮುನ್ನಡೆಸಿಕೊಂಡು ಬರುತ್ತಿದ್ದಾರೆ.

ಶ್ರೀಮಠದ ಸ್ಥಾಪನೆಯಲ್ಲಿ ಸಮುದಾಯದ ಪಾಲು

೨೦೦೪ರಲ್ಲಿ ಸ್ಥಾಪನೆಯಾದ ಮಾದಾರ ಚನ್ನಯ್ಯ ಗುರುಪೀಠವನ್ನು ಶ್ರೀ ಶಿವಮೂರ್ತಿ ಮುರುಘ ಶರಣರು ತನ್ನ ಅಧೀನದಲ್ಲಿ ಅಲಕ್ಷಿತ ಸಮುದಾಯಗಳನ್ನು ಸಂಘಟಿಸುವ ಉದ್ದೇಶದಿಂದ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಪ್ರತಿಯೊಂದು ಅಲಕ್ಷಿತ ಸಮುದಾಯಗಳನ್ನು ಜಾಗೃತಗೊಳಿಸುವ ಉದ್ದೇಶದಿಂದ ಧರ್ಮ ಜಾಗೃತಿಯ ನೆಲೆಯಲ್ಲಿ ಪೀಠವನ್ನು ಸ್ಥಾಪಿಸುವ ಪೂರ್ವ ಯೋಜನೆಯೊಂದನ್ನು ಕೈಗೊಂಡರು. ಈ ಸಂದರ್ಭದಲ್ಲಿ ಸಮಾಜದ ಜನತೆಯೊಂದಿಗೆ ಸಮಾಜದ ಮುಖಂಡರೊಂದಿಗೆ ಚರ್ಚೆಯನ್ನು ಕೈಗೊಳ್ಳಲಾಯಿತು. ಧಾರ್ಮಿಕವಾಗಿ ಶೋಷಣೆಗೆ ಒಳಗಾಗಿರುವ ಸಮುದಾಯಗಳು ಇದರಿಂದ ತಾವು ಕೂಡ ಧಾರ್ಮಿಕವಾಗಿ ಸಮಾಜದಲ್ಲಿ ಗುರುತಿಸಿಕೊಳ್ಳುವ ಮಹತ್ತರ ಉದ್ದೇಶದಿಂದ ಇಂತಹ ಕಾರ್ಯಕ್ಕೆ ಶ್ರೀ ಮುರುಘ ಶರಣರಿಗೆ ಬೆಂಬಲವಾಗಿ ನಿಂತರು.

ನಿರ್ಲಕ್ಷ್ಯಕ್ಕೆ ಒಳಗಾಗಿರುವ ಸಮುದಾಯಗಳಲ್ಲಿ ಧರ್ಮ ಜಾಗೃತಿಯ ಕಾರಣದಿಂದ ಸಮಾಜದಲ್ಲಿನ ಪ್ರತಿಯೊಬ್ಬ ಪ್ರಜೆಯು ಈ ಪೀಠಗಳಿಗೆ ಸಹಕಾರ ನೀಡುವ ಮೂಲಕ ಶ್ರೀ ಮಠಕ್ಕೆ ಬದ್ಧವಾಗಿರುವುದಾಗಿ ತಿಳಿಸಿ ಇದರ ನೀತಿ-ನಿಯಮಗಳನ್ನು ಪಾಲಿಸಿಕೊಂಡು ಬರುವುದಾಗಿ ಭರವಸೆ ನೀಡಿತು. ಆದರೆ ಈ ಮಠದ ಸ್ಥಾಪನೆಯ ಕಾರ್ಯ ವೈಖರಿಗಳು ಪುರೋಹಿತಶಾಹಿ ಮಾದರಿಯನ್ನು ಹೋಲುವ ಕಾರಣದಿಂದ ಬಹುತೇಕ ವಿದ್ಯಾವಂತ ವರ್ಗ, ಬುದ್ಧಿ ಜೀವಿಗಳು

ಹಾಗೂ ವೈಚಾರಿಕ ಚಿಂತಕರು ಇವನ್ನು ವಿರೋಧಿಸಿದರು. ಇದಕ್ಕೆ ಕಾರಣ ಆಧುನಿಕ ಶಿಕ್ಷಣವು ಸಮುದಾಯತೆಯನ್ನು ತೊಲಗಿಸುವ ಪ್ರಯತ್ನ ಕೈಗೊಂಡಿರುವಾಗ ಶ್ರೀ ಶಿವಮೂರ್ತಿ ಮುರುಘ ಶರಣರು ವೈದಿಕಶಾಹಿಯ ಮಾದರಿಯನ್ನು ಪ್ರಬಲಗೊಳಿಸುವ ಉದ್ದೇಶದಿಂದ ಮತ್ತೆ ಸಮುದಾಯತೆಯನ್ನು ಪ್ರಬಲಗೊಳಿಸುವ ಕಾರ್ಯಕ್ಕೆ ಮುಂದಾಗುತ್ತಿದ್ದಾರೆ ಎಂಬುದಾಗಿ ಬಹುತೇಕ ಚಿಂತಕರು, ಶರಣರ ಈ ನಿಲುವುಗಳನ್ನು ವಿರೋಧಿಸಿದರು. ಆದರೆ ಶ್ರೀ ಶಿವಮೂರ್ತಿ ಮುರುಘ ಶರಣರು ತಾವು ರೂಪಿಸಿಕೊಂಡಿರುವ ಈ ಯೋಜನೆಯನ್ನು ಸಾಮಾನ್ಯ ಜನರ ಸಹಕಾರ ಪಡೆದು ಪೂರೈಸಿದರು.

ಮಾದಾರ ಚನ್ನಯ್ಯ ಗುರುಪೀಠ ಸ್ಥಾಪನೆಯಾಗಿ ಒಂದು ದಶಕವನ್ನು ಪೂರೈಸಿಕೊಂಡು ಮುನ್ನಡೆಯುತ್ತಿದೆ. ಈ ಅವಧಿಯಲ್ಲಿ ಬಹುತೇಕ ಭಕ್ತವರ್ಗವನ್ನು ಶ್ರೀ ಮಠವು ಗಳಿಸಿಕೊಂಡು ಮುನ್ನಡೆಯುತ್ತಿದೆ. ಶ್ರೀಮಠದ ಸ್ಥಾಪನೆಯ ಬಗ್ಗೆ ವಿರೋಧ ವ್ಯಕ್ತಪಡಿಸಿದ ವಿಚಾರವಾದಿಗಳ ನಿಲುವುಗಳು ಸೋಲು ಅನುಭವಿಸಿದಾಗ ಅನಿವಾರ್ಯ ಕಾರಣಗಳಿಂದ ಕೆಲವರು ಇದರ ಅಡಿಯಲ್ಲಿ ಸಮಾಜ ಜಾಗೃತಿಗೆ ಮುಂದಾಗಿರುವುದು ಕಂಡುಬರುತ್ತದೆ.

ಶ್ರೀಪೀಠದ ಆರ್ಥಿಕ ಸ್ಥಿತಿಗತಿ

ಶ್ರೀಪೀಠವು ಇಂದಿಗೆ ಸ್ಥಾಪನೆಯಾಗಿ ಒಂದು ದಶಕವನ್ನು ಪೂರೈಸಿದೆ. ಈ ಅವಧಿಯಲ್ಲಿ ಶ್ರೀಮಠವು ಆರ್ಥಿಕವಾಗಿ ದಾಪುಗಾಲು ಇಡಲು ಪ್ರಾರಂಭಿಸಿದೆ. ಕರ್ನಾಟಕದಲ್ಲಿ ಮಾದಿಗ ಸಮುದಾಯವು ಅತ್ಯಂತ ಹಿಂದುಳಿದ ಸಮುದಾಯವಾಗಿದ್ದು, ಆರ್ಥಿಕವಾಗಿ ತೀರಾ ಹಿಂದುಳಿದು ಬಡತನವನ್ನು ಅನುಭವಿಸುತ್ತಿದ್ದಾರೆ. ಈ ಕಾರಣದಿಂದ ಮಠದ ಆರ್ಥಿಕ ಸ್ಥಿತಿಯೂ ತೀರಾ ಹಿಂದುಳಿದಿದೆ. ಶ್ರೀ ಮುರುಘ ಮಠದಿಂದ ಚಿತ್ರದುರ್ಗದಲ್ಲಿ ಎರಡು ಎಕರೆ ಪ್ರದೇಶವನ್ನು ಪಡೆದುಕೊಂಡು ಮುರುಘ ಶರಣರ ಸಹಕಾರ ಹಾಗೂ ಸಮುದಾಯದ ನೌಕರವರ್ಗ ಹಾಗೂ ಸಾಮಾನ್ಯ ಜನರ ಆರ್ಥಿಕ ನೆರವಿನಿಂದ ವ್ಯವಸ್ಥಿತವಾದ ಮಠವನ್ನು ಸ್ಥಾಪಿಸಿಕೊಂಡು ತಮ್ಮ ಯೋಜನೆಗಳನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಇತ್ತೀಚಿನ ದಿನಗಳಲ್ಲಿ ದಿನದಿಂದ ದಿನಕ್ಕೆ ಮಠದ ಆರ್ಥಿಕ ಪರಿಸ್ಥಿತಿಯು ಸುಧಾರಣೆಗೊಳ್ಳುತ್ತಿದೆ. ಆರಂಭಿಕ ಸ್ಥಿತಿಗಿಂತ ಈ ಹತ್ತು ಹನ್ನೆರಡು ವರ್ಷಗಳಲ್ಲಿ ಮಠದ ಆರ್ಥಿಕ ಪರಿಸ್ಥಿತಿಯು ಸಾಕಷ್ಟು ಚೇತರಿಕೆಕಂಡಿದೆ. ಮುಂದೆಯೂ ಇದು ತನ್ನ ಬೆಳವಣಿಗೆಯನ್ನು ಕಂಡುಕೊಳ್ಳುತ್ತದೆ ಎಂಬುದಾಗಿ ಶ್ರೀಮಠದ ಪೀಠಾಧ್ಯಕ್ಷರಾದ ಬಸವ ಪ್ರಭು ಮಾದಾರ ಚನ್ನಯ್ಯ ಸ್ವಾಮಿಗಳು ತಿಳಿಸಿದ್ದಾರೆ.

ಎರಡು ಎಕರೆ ಭೂಮಿಯಲ್ಲಿ ಶ್ರೀಮಠದ ಕಟ್ಟಡವನ್ನು ಹೊರತುಪಡಿಸಿದರೆ ಉಳಿದಂತೆ ಯಾವುದೇ ತೆರನಾದ ಸ್ಥಿರಾಸ್ತಿಯು ಕಂಡುಬರುವುದಿಲ್ಲ. ಸರ್ಕಾರದಿಂದ ಕೆಲವು ಅನುದಾನಗಳನ್ನು ಪಡೆಯುತ್ತಾ ಬಂದಿದ್ದು ಮಠದ ಕ್ಷೇಯೋಭಿವೃದ್ಧಿಗಾಗಿ ಶ್ರಮಿಸುತ್ತಿದ್ದಾರೆ.

ಶ್ರೀಮಠದ ಶೈಕ್ಷಣಿಕ ಸ್ಥಿತಿಗತಿ

ಶ್ರೀಮಠವು ತನ್ನ ಸಮುದಾಯದ ಜನತೆಯಲ್ಲಿ ಜಾಗೃತಿಯನ್ನು ಮೂಡಿಸುವ ಸಲುವಾಗಿ ರೂಪಗೊಂಡಿತು. ಶ್ರೀಮಠಕ್ಕೆ ಸ್ತಿರಾಸ್ತಿ ಮತ್ತು ಚರಾಸ್ತಿಯ ಕೊರತೆಯಿಂದಾಗಿ ಯಾವುದೇ ಶಾಲೆಗಳನ್ನು ಇದುವರೆಗೂ ಪ್ರಾರಂಭಿಸಿರುವುದಿಲ್ಲ. ತನ್ನ ಸಮುದಾಯದ ಜನತೆಯಲ್ಲಿ ಶೈಕ್ಷಣಿಕ ಪ್ರಗತಿ ಮೂಡಿಸಲು ಬಡತನದಲ್ಲಿರುವ ಮಕ್ಕಳಿಗೆ ವಿದ್ಯಾಭ್ಯಾಸವನ್ನು ನೀಡಲು ಶ್ರೀ ಮುರುಘ ಶರಣರ ಸಂಯುಕ್ತ ಆಶ್ರಯದಲ್ಲಿ ನಡೆಯುತ್ತಿರುವ ಶಾಲಾ-ಕಾಲೇಜುಗಳಲ್ಲಿಯೇ ಅವಕಾಶವನ್ನು ಕಲ್ಪಿಸಿಕೊಡುತ್ತಾ ಬರಲಾಗಿದೆ. ಮುಂದಿನ ದಿನಗಳಲ್ಲಿ ಶ್ರೀ ಶಿವಮೂರ್ತಿ ಮುರುಘ ಶರಣರ ಸಹಕಾರ, ಸಮುದಾಯದ ಜನತೆಯ ಸಹಾಯ ಹಸ್ತ ಹಾಗೂ ಸರ್ಕಾರದ ಸವಲತ್ತುಗಳನ್ನು ಪಡೆದು ಶ್ರೀಮಠದ ಅಡಿಯಲ್ಲಿಯೂ ಶಾಲಾ-ಕಾಲೇಜುಗಳನ್ನು ಆರಂಭಿಸುವ ಮಹತ್ತರ ಆಶಯವನ್ನು ಹೊಂದಿರುವುದಾಗಿ ತಿಳಿದುಬರುತ್ತದೆ.

ರಾಜಕೀಯ ಸ್ಥಿತಿಗತಿ

ಕರ್ನಾಟಕದಲ್ಲಿ 'ಮಾದಿಗ' ಸಮುದಾಯವು ಅತ್ಯಂತ ಹಿಂದುಳಿದ ಸಮುದಾಯವಾಗಿದೆ. ಈ ಸಮುದಾಯದಲ್ಲಿ ಮೀಸಲಾತಿಯ ದ್ವಂದ್ವ ನೀತಿಯಿಂದಾಗಿ ಈ ಸಮುದಾಯಕ್ಕೆ ನ್ಯಾಯಯುತವಾಗಿ ಸಲ್ಲಬೇಕಾದ ಸ್ಥಾನಮಾನಗಳು ದಲಿತರಲ್ಲಿಯೇ ಇರುವ ಪ್ರಬಲ ವರ್ಗಗಳು ಎಲ್ಲಾ ಸವಲತ್ತುಗಳನ್ನು ಪಡೆಯುತ್ತಾ ಬಂದಿವೆ. ಕರ್ನಾಟಕ ಸರ್ಕಾರದಲ್ಲಿ ಇಂದು ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಸಚಿವರಾಗಿರುವ ಹೆಚ್. ಆಂಜನೇಯರವರು ಇಂದಿನ ಸರ್ಕಾರದಲ್ಲಿ ಉತ್ತಮ ಸ್ಥಾನವನ್ನು ಹೊಂದಿದ್ದಾರೆ. ಉಳಿದಂತೆ ಕೆಲವೇ ಶಾಸಕರನ್ನು ಹೊಂದಿದ್ದು ಒಬ್ಬ ಲೋಕಸಭಾಸದಸ್ಯರನ್ನು ಹೊಂದಿದೆ. ರಾಜಕೀಯವಾಗಿಯೂ ಈ ಸಮುದಾಯದ ಪ್ರಾತಿನಿಧ್ಯವು ತೀರಾ ಹಿಂದುಳಿದಿರುವುದು ಕಂಡುಬರುತ್ತದೆ.

ಶ್ರೀಮಠದ ಜನಪರ ಯೋಜನೆಗಳು

ಶ್ರೀಮಠವು ಹಲವು ಜನಪರ ಯೋಜನೆಗಳನ್ನು ರೂಪಿಸಿಕೊಂಡು ತನ್ನ ಸಮುದಾಯದ ಜಾಗೃತಿಯನ್ನು ಮೂಡಿಸುವ ಕೆಲಸ ಮಾಡುತ್ತಿದೆ. ಈ ಸಮುದಾಯದ ಜನತೆಯಲ್ಲಿ ಧಾರ್ಮಿಕ ಜಾಗೃತಿ ಮೂಡಿಸುವ ಮೂಲಕ ತಮ್ಮಲ್ಲಿರುವ ಕೀಳು ಎಂಬ ಭಾವನೆಯಿಂದ ಹೊರಬರುವಂತೆ

ಸಲಹೆ–ಸಹಕಾರ ನೀಡುತ್ತ ಬಂದಿದೆ. ಈ ಸಮುದಾಯದಲ್ಲಿನ ಪ್ರತಿಭೆಗಳನ್ನು ಗುರುತಿಸಿ ಅವರಿಗೆ ಪುರಸ್ಕರಿಸುವ ಕಾರ್ಯವನ್ನು ನಿರ್ವಹಿಸಿಕೊಂಡು ಬಂದಿದೆ. ಇಲ್ಲಿನ ಮಠದ ಸಮುದಾಯಕ್ಕೆ ಉನ್ನತ ವರ್ಗಗಳಿಂದ ಶೋಷಣೆಗಳು, ದೌರ್ಜನ್ಯಗಳು ನಡೆದಾಗ ಅವರ ಪರವಾಗಿ ನಿಂತು ಅಭಯ ನೀಡುತ್ತಿದೆ. ಈ ಸಮುದಾಯದ ಜನತೆಯಲ್ಲಿನ ಕೆಲವು ಭಿನ್ನ ಮತಗಳು ಹಾಗೂ ಕಲಹಗಳನ್ನು ಶಮನಗೊಳಿಸಿ ಪ್ರಗತಿಯತ್ತ ನಡೆಯುವಂತೆ ಜಾಗೃತಿ ಮೂಡಿಸುತ್ತಾ ಬಂದಿದೆ. ಇದಲ್ಲದೆ ಮಾದಿಗ ಸಮುದಾಯಕ್ಕೆ ಒಳಮೀಸಲಾತಿಯನ್ನು ನೀಡುವಂತೆ ವರದಿಯನ್ನು ನೀಡಿದ 'ಸದಾಶಿವ ಆಯೋಗ'ದ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ತನ್ನ ಹೋರಾಟವನ್ನು ಮುಂದುವರೆಸಿಕೊಂಂಡು ಬಂದಿದೆ.

ಶ್ರೀಮಠದ ಅಡಿಯಲ್ಲಿ ಹಲವಾರು ಯೋಜನೆಗಳನ್ನು ರೂಪಿಸಿಕೊಂಡಿದ್ದು ಇಲ್ಲಿನ ಸಾಂಸ್ಕೃತಿಕ ಹಿರಿಮೆಯನ್ನು ಎತ್ತಿಹಿಡಿಯುವ ಮೂಲಕ ಇಲ್ಲಿನ ಅನಿಷ್ಟ ಪದ್ಧತಿಗಳನ್ನು ವಿರೋಧಿಸಿ ಜನತೆಯಲ್ಲಿ ಜಾಗೃತಿ ಮೂಡಿಸುತ್ತ ಬಂದಿದ್ದಾರೆ. ಹೀಗೆ ಜನತೆಯೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದ್ದು ಶರಣ ತತ್ವಗಳ ಅಡಿಯಲ್ಲಿ ಆಧುನಿಕ ಜನ–ಜೀವನಕ್ಕೆ ಪೂರಕವಾದ ನನೆಲೆಯಲ್ಲಿ ತನ್ನ ಹೋರಾಟವನ್ನು ಶ್ರೀಮಠವು ಮುಂದುವರೆಸಿಕೊಂಡು ಬಂದಿದೆ.

೫. ಆದಿಜಾಂಬವ ಮಠ, ಕೋಡಿಹಳ್ಳಿ, ಹಿರಿಯೂರು ತಾಲೂಕು

ಪಾರಂಪರಿಕ ಹಿನ್ನೆಲೆ

ನಮ್ಮ ರಾಜ್ಯದಲ್ಲಿ ಗುರುಪರಂಪರೆ ಹೊಂದಿರುವ ಮಠಗಳಲ್ಲಿ ಆದಿಜಾಂಬವ ಮಠವು ಒಂದು. ಈ ಮಠವು ದಲಿತ ಸಮುದಾಯಗಳಲ್ಲಿ ಒಂದಾದ ಮಾದಿಗ ಸಮುದಾಯಕ್ಕೆ ಸಂಬಂಧಿಸಿದೆ. ಪುರಾಣಕಾಲದಿಂದಲೂ ಆಧುನಿಕ ಸಂದರ್ಭದವರೆಗೆ ಸುದೀರ್ಘವಾದ ಚಾರಿತ್ರಿಕ ಹಿನ್ನೆಲೆಯನ್ನು ಕಾಣಬಹುದಾಗಿದೆ. ಜೊತೆಗೆ ಶತಶತಮಾನಗಳಿಂದಲೂ ಶೋಚನೀಯ ಸ್ಥಿತಿಯಲ್ಲಿ ಮುಳುಗಿರುವ ಮಾದಿಗ ಸಮುದಾಯದ ಏಳಿಗೆ, ಅಭಿವೃದ್ಧಿಗೆ ಗಂಭೀರವಾದ ಕಾಳಜಿಯನ್ನು ಹೊತ್ತು ಸಾಗುತ್ತಿದೆ. ಪ್ರಸ್ತುತ ಮಠವು ಹಿರಿಯೂರು ತಾಲೂಕಿನ ಕೋಡಿಹಳ್ಳಿ ಗ್ರಾಮವನ್ನು ತನ್ನ ಕೇಂದ್ರಸ್ಥಾನವನ್ನಾಗಿ ಮಾಡಿಕೊಂಡಿದೆ. ಮೂಲತಃ ಶ್ರೀಶೈಲ, ಗಜವಾಡ, ಕಡಪ, ನೆಲಮಂಗಲ ಈ ನಾಲ್ಕು ಸ್ಥಳಗಳಲ್ಲಿ ಮೊದಲು ಕೇಂದ್ರಸ್ಥಾನವಾಗಿ ಮಾಡಿಕೊಂಡು ತರುವಾಯ ಕೋಡಿಹಳ್ಳಿ ಗ್ರಾಮವನ್ನು ತನ್ನ ನೆಲೆಯಾಗಿ ಮಾಡಿಕೊಂಡಿದೆ.

ಆದಿಜಾಂಬವ ಮಠ ಹನ್ನೊಂದು ತಲೆಮಾರಿನ ಪೀಠಾಧ್ಯಕ್ಷರನ್ನು ಒಳಗೊಂಡು ಸಾಂಸ್ಕೃತಿಕ ವೈವಿಧ್ಯತೆಯಿಂದ ಕೂಡಿದೆ. ಆರಂಭದಲ್ಲಿ ಅಂಬಾನಂದ ಸ್ವಾಮಿಗಳು ಆದಿಜಾಂಬವ ಮಠಕ್ಕೆ

ಮೂಲ ತಳಪಾಯ ಹಾಕಿದರು. ಆದರೆ ಮಠಗಳ ಮೂಲಭೂತ ಧೋರಣೆಗಳಿಂದ ಹೊರತಾಗಿ ನೋಡಲಾಗುತ್ತದೆ. ಮುಖ್ಯವಾಗಿ ಈ ಎಲ್ಲ ಪೀಠಾಧ್ಯಕ್ಷರುಗಳು ಸಂಸಾರಯೋಗಿಗಳಾಗಿರುವರು. ಆದರೆ ಈಗಿರುವ ಸ್ವಾಮಿಗಳಾದ ಮಾರ್ಕಂಡೇಯ ಮುನಿಗಳು ಬ್ರಹ್ಮಚಾರಿಗಳಾಗಿದ್ದಾರೆ. ಬಹುಮುಖ್ಯವಾಗಿ ಈ ಮಠದ ಚಾರಿತ್ರಿಕ ವಿಶೇಷವೆಂದರೆ, ವಂಶಪಾರಂಪರೆಯಿಂದ ಬಂದಿರುವ ಮಠವಾಗಿದೆ. ಮಾದಿಗ ಸಮುದಾಯದ ಮೂಲ ಪುರುಷ ಪುರಾಣಕಾಲದ 'ಜಾಂಬವಂತ' ಈತನನ್ನು ಈ ಸಮುದಾಯವು ಸಾಂಸ್ಕೃತಿಕ ನಾಯಕನನ್ನಾಗಿ ಮಾಡಿಕೊಂಡು ತಮ್ಮ ಅಸ್ಮಿತೆಯನ್ನು ಕಾಪಾಡಿಕೊಂಡು ಬಂದಿದೆ. ಆಧುನಿಕ ಸಂದರ್ಭದಲ್ಲಿ ಸಾಮಾಜಿಕ ಅಸಮಾನತೆ, ತಾರತಮ್ಯಗಳಿಂದ ಶೋಚನೀಯ ಬದುಕನ್ನು ಕಂಡಿರುವ ಮಾದಿಗ ಸಮುದಾಯವು ತಮ್ಮ ಮೂಲ ಪುರುಷನ ಹೆಸರಿನಲ್ಲಿ ಮಠವನ್ನು ಸ್ಥಾಪಿಸಿಕೊಂಡು ಸಾಮಾಜಿಕ ಸುಧಾರಣೆಯತ್ತ ಮುಖಮಾಡಿದೆ.

ಈ ಸಮುದಾಯದಲ್ಲಿ ಜಾಂಬವಂತ ಮನಿಗಳು, ಅಂಬಾನಂದ ಮುನಿಗಳು, ಹರಳಯ್ಯ ಮತ್ತು ಮಾದಾರ ಚನ್ನಯ್ಯ, ಮಲೆ ಮಾರಪ್ಪ ಇವರು ಸಾಂಸ್ಕೃತಿಕ ನಾಯಕರಾಗಿ ಪ್ರತಿನಿಧಿಕರಣಗೊಂಡಿರುವರು. ತಮ್ಮ ಸಮುದಾಯದ ಅಭಿವೃದ್ಧಿ ಮತ್ತು ಸುಧಾರಣೆಗೆ ಸೈದ್ಧಾಂತಿಕವಾಗಿ ಅಥವಾ ತಾತ್ವಿಕವಾಗಿ ಅನಾದಿ ಕಾಲದಿಂದಲೂ ದನಿಯೆತ್ತುತ್ತಾ ಬಂದಿದ್ದಾರೆ. ಸಾಮಾಜಿಕ ಸಮಾನತೆಯ ಕನಸು ಕಾಣುವ ಇವರ ತತ್ವ, ಆದರ್ಶಗಳು ಸಮುದಾಯಕ್ಕೆ ಸ್ಫೂರ್ತಿದಾಯಕವಾಗಿವೆ. ಹಿಂದೂ ಧರ್ಮ ಪ್ರತಿಪಾದಿಸುವ ಅಸ್ಪೃಶ್ಯತೆ, ಸಮುದಾಯ ಭೇದದಂತಹ ಅನಿಷ್ಟ ಆಚರಣೆಗಳ ವಿರುದ್ಧ ಹೋರಾಟ ಮನೋಭಾವದೊಂದಿಗೆ ಜನ ಜಾಗೃತಿಯ ಅರಿವು ಮೂಡಿಸುವಂತೆ ಕೈಂಕರ್ಯವನ್ನು ಈ ಮಠವು ಕೈಗೊಂಡಿದೆ.

ತಮ್ಮ ವೃತ್ತಿಯನ್ನು ಎಲ್ಲಿಯೂ ಕೀಳು ಎಂದು ಭಾವಿಸಿದೆ. ತಮ್ಮ ಕಾಯಕದಲ್ಲೇ ಶಿವನನ್ನು ಕಂಡುಕೊಂಡು ಮಾದಾರ ಹರಳಯ್ಯನೆಂಬ ದಲಿತ ಅನುಭಾವಿಯ ನಿಲುವುಗಳು ಹೀಗಿವೆ.

"ಅಚ್ಚೆಯ ಸುಚ್ಚುವ ಅಳಿಯ ಮನೆಯಲ್ಲಿ ಪ್ರತ್ಯಕ್ಷನಾದ
ಪರಮೇಶ್ವರನ ಕಂಡ
ಇತ್ತಲೋಕಯ್ಯ ಕಾಯದ ತತ್ತಿಯ ಹೊತ್ತಾಡುವವನ
ನಿನ್ನ ಭಕ್ತರ ಠಾವಿನಲ್ಲಿಗೆ ಹೋಗಿ ಮುಕ್ತಿಯ ಮಾಡು॥

ಎಂಬುದಾಗಿ ತಮ್ಮ ಸಮುದಾಯವು ಕೊಟ್ಟಿರುವ ಕಾಯಕದ ಹಿರಿಮೆಯನ್ನು ಸಾರುತ್ತಾರೆ. ತಮ್ಮ ಕುಲಕಸುಬನ್ನು ಯಾವ ಹೊತ್ತಿಗೂ ಕೀಳು ಎಂದೂ ಭಾವಿಸಿದೆ, ಅದೇ ಪರಮಾರ್ಥವೆಂದೂ ತಿಳಿದು ತಮ್ಮ ಅಸ್ತಿತ್ವವನ್ನು ಕಾಣುತ್ತಾರೆ. ಇಂತಹ ಆದರ್ಶಗಳಿಂದ ಮಾದಿಗ ಸಮುದಾಯದ

ಕಾಯಕನಿಷ್ಠೆ. ಸಮಾನತೆ, ಸ್ವಾಭಿಮಾನ, ಸ್ವಾಯತ್ತ ಜೀವನ ಎನ್ನುವ ಮೌಲ್ಯಗಳನ್ನು ಹೊಂದಿದ್ದು ಈ ಸಮುದಾಯವು ಇಂತಹ ಮೌಲ್ಯಗಳನ್ನು ಸಾಕಾರಗೊಳಿಸಿದೆ.

ಶಿಕ್ಷಣ

'ವಿದ್ಯೆಯೇ ವಿಶ್ವದ ಬೆಳಕು' ಎಂಬುದು ಆದಿ ಜಾಂಬವ ಮಠದ ಮೂಲಧ್ಯೇಯವಾಗಿದೆ. ಇಂತಹ ಸಮುದಾಯದಲ್ಲಿ ಶಿಕ್ಷಣಕ್ಷೇತ್ರಕ್ಕೆ ಹೆಚ್ಚು ಪ್ರಾಧಾನ್ಯತೆಯನ್ನು ಕೊಡಲಾಗಿದೆ. ಮಾದಿಗ ಸಮುದಾಯವು ತೀರಾ ಹಿಂದುಳಿದ ಸಮುದಾಯವಾಗಿದೆ. ಈ ಸಮುದಾಯದ ಶಿಕ್ಷಣ ಕುಂಠಿತಕ್ಕೆ ಸಂಪ್ರದಾಯ ಸಮಾಜದ ಧೋರಣೆಗಳು ಕಾರಣವಾದರೆ ಮತ್ತೊಂದು ರೀತಿಯಲ್ಲಿ ಸಮಾನವಾಗಿ ಬಡತನವು ಪ್ರಮುಖ ಕಾರಣವಾಗಿದೆ. ಇಂತಹ ವಾಸ್ತವತೆಯನ್ನು ಅರಿತುಕೊಂಡ ಮಠವು ಶೈಕ್ಷಣಿಕ ಸಾಧನೆಗೆ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಈಗಾಗಲೇ ಹಿರಿಯೂರು ತಾಲೂಕು ಪಟ್ಟಣದಲ್ಲಿ ಒಂದು ಶಾಖೆಯನ್ನು ಆರಂಭಿಸಲಾಗಿದೆ. ಈ ಶಾಖೆಯ ಪೀಠಾಧ್ಯಕ್ಷರು ಷಡಕ್ಷರಿ ಮುನಿಗಳಾಗಿದ್ದಾರೆ. ಈಗಿರುವ ಪ್ರಧಾನ ಕೇಂದ್ರದ ಮಾರ್ಕಂಡಯ್ಯ ಸ್ವಾಮಿಗಳು ಸಮುದಾಯದ ಶಿಕ್ಷಣಕ್ಕೂ, ಒತ್ತು ಕೊಟ್ಟು 'ಬಾಲಕ ಮತ್ತು ಬಾಲಕಿಯರ ಪ್ರೌಢಶಾಲೆ'ಯನ್ನು ತೆರೆಯಲಾಗಿದೆ. ಹಾಗೂ ಬಾಲಕಿಯರ ವಸತಿ ನಿಲಯಗಳನ್ನು ಆರಂಭಿಸಲಾಗಿದೆ. ಮುಂದಿನ ದಿನಗಳಲ್ಲಿ ಬಾಲಕರ ವಸತಿ ನಿಲಯ, ಪದವಿ ಪೂರ್ವ ಕಾಲೇಜು, ವೃತ್ತಿಪರ ತರಭೇತಿಗಳನ್ನು ಆರಂಭ ಮಾಡುವುದರ ಬಗ್ಗೆ ಚಿಂತನೆ ನಡೆಸಲಾಗಿದೆ. ಇನ್ನು ಮಠದ ವತಿಯಿಂದ ವಿದ್ಯಾರ್ಥಿಗಳಿಗೆ ಶಿಷ್ಯವೇತನ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ, ಮುಂದಿನ ವಿದ್ಯಾಭ್ಯಾಸಕ್ಕೆ ಆರಂಭಿಕ ನೆರವು ಮಾಡಿಕೊಡಲಾಗಿದೆ. ಸಮುದಾಯದಲ್ಲಿ ಶಿಕ್ಷಣ ಹಿಂದುಳಿದಿರುವುದರಿಂದ ಮಹಿಳಾ ಶಿಕ್ಷಣಕ್ಕೆ ಹೆಚ್ಚು ಹೊತ್ತು ನೀಡಿರುವುದನ್ನು ಕಾಣಬಹುದು.

ರಾಜಕೀಯ

ಈ ಮಠಕ್ಕೆ ರಾಜಕೀಯ ಬೆಂಬಲ ತುಂಬಾ ಕಡಿಮೆ. ಸಾವಿರ ವರ್ಷಗಳ ಕಾಲ ಇತಿಹಾಸ ಹೊಂದಿರುವ ಈ ಮಠಕ್ಕೆ ಸರ್ಕಾರದ ಅನುದಾನದ ವಿಷಯದಲ್ಲಿ ತಾರತಮ್ಯಗಳಾಗಿವೆ. ಪ್ರಬಲ ವರ್ಗಗಳ ಮಠಗಳಿಗೆ ಸಿಗುವ ಮಾನ್ಯತೆ ಸೌಲಭ್ಯಗಳು ಆದಿಜಾಂಬವ ಮಠಕ್ಕೆ ದೊರಕುತ್ತಿಲ್ಲ. ಡಿ ವಿ ಸದಾನಂದಗೌಡರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಕಟ್ಟಡ ನಿರ್ಮಾಣಕ್ಕೆ ೨ ಕೋಟಿ ಅನುದಾನ ನೀಡಿದ್ದಾರೆ. ಹಿರಿಯೂರು ಸ್ಥಳೀಯ ಶಾಸಕರಾದ ಡಿ ಸುಧಾಕರ ಅವರು ಕೂಡ ತಮ್ಮ ಅವಧಿಯಲ್ಲಿ ಅಭಿವೃದ್ಧಿಗೆ ಸಹಾಯ ಮಾಡಿದ್ದಾರೆ. ತಮ್ಮ ಸಮುದಾಯವನ್ನು ರಾಜಕೀಯ ಪ್ರವೇಶ ಮಾಡುವ ಉದ್ದೇಶದಿಂದ ಹಿರಿಯೂರಿನಲ್ಲಿ ಬೃಹತ್ ಜನಜಾಗೃತಿ ಸಭೆಯನ್ನು ಮಾಡಿದ್ದಾರೆ. ಗ್ರಾಮ, ತಾಲೂಕು, ಜಿಲ್ಲಾ ಪಂಚಾಯತಿಗಳ

ಚುನಾವಣೆಗೆ ಸಂಬಂಧಿಸಿದಂತೆ ತಮ್ಮ ಸಮುದಾಯದವರು ತೊಡಗಿಸಿಕೊಳ್ಳುವಂತೆ ಅರಿವು ಮೂಡಿಸಲಾಗಿದೆ.

ಮುಂದಿನ ದಿನಗಳಲ್ಲಿ ತಮ್ಮ ಸಮುದಾಯದ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ರಾಜಕೀಯದಂತಹ ಕ್ಷೇತ್ರದಲ್ಲಿ ಸುಧಾರಣೆಗಾಗಿ ಹಲವಾರು ಯೋಜನೆಗಳಾಗಿ...?

೬. ಶ್ರೀ ಶ್ರೀ ಶ್ರೀ ಶ್ರೀಕೃಷ್ಣಯಾದವಾನಂದ ಮಠ, ಚಿತ್ರದುರ್ಗ

ಅಖಿಲ ಭಾರತದಲ್ಲಿ ಯಾದವ ಅಥವಾ ಗೊಲ್ಲ ಸಮುದಾಯವನ್ನು ಪ್ರತಿನಿಧಿಸುವ ಶ್ರೀಕೃಷ್ಣಯಾದವಾನಂದ ಮಠವಾಗಿದೆ. ಪ್ರಸ್ತುತವಾಗಿ ಈ ಮಠ ಚಿತ್ರದುರ್ಗ ಪಟ್ಟಣದಲ್ಲಿನ ಯಾದವಗಿರಿಯಲ್ಲಿ ದಿನಾಂಕ: ೧೦.೧೧.೨೦೦೮ರಲ್ಲಿ ಸ್ಥಾಪನೆಯಾಗಿದೆ. ಈ ಮಠದ ಸ್ಥಾಪನೆ ತೀರಾ ಇತ್ತೀಚಿನದಾಗಿರುವುದರಿಂದ ಮಠದ ಪರಂಪರೆಗೆ ಸಂಬಂಧಿಸಿದಂತೆ ಅಷ್ಟೇನೂ ಚಾರಿತ್ರಿಕತೆ ಇಲ್ಲ. ಆದರೆ ಮಠದ ಪೀಠಾಧ್ಯಕ್ಷರಾದ ಶ್ರೀಕೃಷ್ಣಯಾದವಾನಂದ ಸ್ವಾಮಿಗಳು ಈ ಒಂದು ಮಠದ ಮೊದಲ ಪೀಠಾಧ್ಯಕ್ಷರಾಗಿದ್ದರು. ಶರಣ ಸಂಸ್ಕೃತಿಯನ್ನು ಸುಧೀರ್ಘಕಾಲ ಪ್ರಚಾರಮಾಡುತ್ತ ಬಂದಿರುವ ಶ್ರೀ ಮುರುಘಸ್ವಾಮಿಮಠ, ಶ್ರೀ ಶಿವಕುಮಾರ ಸ್ವಾಮಿಗಳು ಸಮಾಜದಲ್ಲಿ ರಾಜಕೀಯವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಾಗೂ ಸಾಮಾಜಿಕವಾಗಿ ಹಿಂದುಳಿದಿರುವ ಮತ್ತು ಅಲಕ್ಷಿತತನಕ್ಕೆ ಒಳಗಾಗಿರುವ ಸಮುದಾಯಗಳನ್ನು ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ಆಯಾ ಸಮುದಾಯಕ್ಕೆ ಸಂಬಂಧಿಸಿದಂತೆ ತಮ್ಮ ಶಿಷ್ಯರನ್ನು ಮಠಾಧೀಶರನ್ನಾಗಿ ಮಾಡಿ ಸಮುದಾಯಗಳ ಅಭಿವೃದ್ಧಿಗೆ ನಾಂದಿ ಹಾಡಿದ್ದಾರೆ. ಈ ಒಂದು ಪ್ರಗತಿಪರವಾದ ಚಿಂತನೆಯ ತತ್ವದಡಿಯಲ್ಲಿ ಸ್ಥಾಪಿತಗೊಂಡಿರುವ ಶ್ರೀಕೃಷ್ಣಯಾದವಾನಂದ ಮಠವು ಗೊಲ್ಲ ಸಮುದಾಯದ ಶ್ರೇಯೋಭಿವೃದ್ಧಿಗಾಗಿ ಕಳೆದ ಒಂದು ದಶಕದಿಂದಲೂ ಹಗಲಿರುಳು ಶ್ರಮಿಸುತ್ತಾ ಸಾಗಿದೆ.

ಗೊಲ್ಲ ಸಮುದಾಯಕ್ಕೆ ತನ್ನದೇ ಆದ ಸಾಂಸ್ಕೃತಿಕ ಪರಂಪರೆ ಇದೆ. ಮೂಲತಃ ಪಶುಪಾಲಕರಾದ ಗೊಲ್ಲರು ಅಲೆಮಾರಿ ಜೀವನಕ್ಕೆ ಅಂಟಿಕೊಂಡವರು. ಪಶುಗಳ ಪಾಲನೆಗಾಗಿ ಹುಲ್ಲು ನೀರು ಅರಸುತ್ತಾ ಒಂದೆಡೆ ಸ್ಥಿರವಾಗಿ ನಿಲ್ಲದೆ ಕಾಡು ಮೇಡುಗಳಲ್ಲಿ ಜೀವನ ಮಾಡುತ್ತಿದ್ದಾರೆ. ಸಮಕಾಲೀನ ಸಂದರ್ಭದಲ್ಲಿಯೂ ಕೂಡಾ ಗೊಲ್ಲ ಸಮುದಾಯವು ಊರು ಬಿಟ್ಟು ನಾಲ್ಕು ಐದು ಕಿಲೋಮೀಟರ್ ದೂರದಲ್ಲಿ ಅಡವಿಗಳಲ್ಲಿ ಹಟ್ಟಿಯನ್ನು ಕಟ್ಟಿಕೊಂಡು ಬದುಕುವರು, ಬಹುತೇಕ ಹಟ್ಟಿಸಂಸ್ಕೃತಿಗೆ ಹೊಂದಿಕೊಂಡ ಇವರು ಅನಾದಿಕಾಲದ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿಕೊಂಡು ಬಂದಿದ್ದಾರೆ. ಪ್ರಸ್ತುತದಲ್ಲಿಯೂ ಕೂಡಾ ಅವರ ಬದುಕಿನಲ್ಲಿ ಪುರಾತನ ಸಂಸ್ಕೃತಿಯನ್ನು ಅವರು ಉಳಿಸಿಕೊಂಡು ಬಂದಿರುವ ಆಚರಣೆ, ನಂಬಿಕೆ, ರೂಢಿ

ಮತ್ತು ಸಂಪ್ರದಾಯಗಳನ್ನು ಕಾಣಬಹುದಾಗಿದೆ. ಹೀಗೆ ಸಾಂಸ್ಕೃತಿಕ ಹಿರಿಮೆಯನ್ನು ಗುರುತಿಸಿಕೊಂಡಿರುವ ಗೊಲ್ಲ ಸಮುದಾಯದಲ್ಲಿ ಪುರಾಣ ಕಾಲ ಮತ್ತು ಪ್ರಾಚೀನ ಕಾಲದಿಂದಲೂ ಸಾಂಸ್ಕೃತಿಕ ನಾಯಕರನ್ನು ಆರಾಧಿಸಿಕೊಂಡು ಬಂದಿದ್ದಾರೆ. ಶ್ರೀಕೃಷ್ಣ, ಬಲರಾಮ ಮತ್ತು ಎತ್ತಪ್ಪ, ಜುಂಜಪ್ಪ ಈ ಮಹಾಪುರುಷರ ಮೂಲಕ ತಮ್ಮ ಸಮುದಾಯದ ಸಾಂಸ್ಕೃತಿಕ ಪರಂಪರೆಯನ್ನು ಕಟ್ಟಿಕೊಂಡು ಬಂದಿರುವುದು ತಿಳಿದು ಬರುತ್ತದೆ. ಪ್ರಸ್ತುತ ಶ್ರೀಕೃಷ್ಣಯಾದವಾನಂದ ಮಠವು ಪಶುಪಾಲಕ ಸಂಸ್ಕೃತಿಯನ್ನು ಸಾಂಕೇತಿಸುತ್ತದೆ.

ಸಾಮಾಜಿಕ ಹಿನ್ನೆಲೆ

ಗೊಲ್ಲ ಸಮುದಾಯವು ಪ್ರಸ್ತುತ ಸಂದರ್ಭದಲ್ಲಿ ಸಾಮಾಜಿಕವಾಗಿ ತೀರಾ ಹಿಂದುಳಿದಿರುವುದು ಕಂಡುಬರುತ್ತದೆ. ಸಮುದಾಯದ ಅಭಿವೃದ್ಧಿಗಾಗಿ ಮಠವು ಕೆಲಸ ಮಾಡುತ್ತಿದೆ. ಸಮುದಾಯದಲ್ಲಿ ಕಂಡುಬರುವ ಮೂಢನಂಬಿಕೆಗಳು ಮತ್ತು ಡಾಂಭಿಕ ಆಚರಣೆಗಳ ಬಗ್ಗೆ ಜನರಲ್ಲಿ ತಿಳುವಳಿಕೆ ಮೂಡಿಸುವಂತಹ ಕೆಲಸಮಾಡುತ್ತಿದೆ. ಜನರಲ್ಲಿ ಸಮುದಾಯದ ಸ್ಥಿತಿಗತಿಯನ್ನು ಚರ್ಚಿಸಲು ಮಠದಲ್ಲಿ ಪ್ರತಿ ತಿಂಗಳೂ 'ಚಿಂತನಾ ಚಾವಡಿ' ಎಂಬ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತದೆ. ಹಾಗೂ ರಾಜ್ಯದಲ್ಲಿ ಸಾಮಾಜಿಕವಾಗಿ ಹಿಂದುಳಿದಿರುವ ಗೊಲ್ಲರಹಟ್ಟಿಗಳಿಗೆ ಭೇಟಿನೀಡಿ ಅರಿವು ಮೂಡಿಸುವ ಸಲುವಾಗಿ "ಹಳ್ಳಿಗೊಂದು ಕಾರ್ಯಕ್ರಮ"ವನ್ನು ಕಳೆದ ಒಂದು ದಶಕಗಳಿಂದಲೂ ಮಾಡಿಕೊಂಡು ಬಂದಿದೆ. ಸಮುದಾಯ ತೀರಾ ಹಿಂದುಳಿದಿರುವುದರಿಂದ ಅಲ್ಲಿ ದಾರಿದ್ರ್ಯ ಬಡತನ ಮತ್ತು ಕಷ್ಟ ತೊಂದರೆಗಳಿಗೆ ತುತ್ತಾಗಿರುವ ಕುಟುಂಬಗಳಿಗೆ ಸಹಾಯ ಮಾಡುವುದಲ್ಲದೆ 'ಪುನಃಶ್ಚೇತನ'ದಂತ ಕಾರ್ಯಕ್ರಮ ಮಾಡಿದ್ದು ಉಂಟು. ಇನ್ನು ಸಮುದಾಯದ ಮಹಿಳೆಯರ ಅಭಿವೃದ್ಧಿಗೆ ಅಪಾರವಾದ ಕಾಳಜಿಯನ್ನು ಹೊಂದಿದೆ. ಈ ಕಾರಣವಾಗಿ ಸಮುದಾಯದಲ್ಲಿ ಮಹಿಳೆಯರು ಮಡಿ ಮೈಲಿಗೆಗೆ ಸಂಬಂಧಿಸಿದಂತೆ ಹಟ್ಟಿಯ ಹೊರಗೆ ಇರುವ ಪದ್ಧತಿಯನ್ನು ತೊಲಗಿಸಲು ತಿಳುವಳಿಕೆ ಮೂಡಿಸುವಂತಹ ಕಾರ್ಯಕ್ರಮ ಮಾಡಿಕೊಂಡು ಬರಲಾಗಿದೆ.

ರಾಜಕೀಯ ಹಿನ್ನೆಲೆ

ಸಮುದಾಯುದ ಸಾಮಾಜಿಕ ಸ್ಥಿತಿಗತಿಯನ್ನು ಕಂಡರೆ ಯಾವುದೇ ರೀತಿಯ ರಾಜಕೀಯ ಪ್ರಗತಿಯು ಆಗಿಲ್ಲ. ರಾಜ್ಯದಲ್ಲಿ ಅಲ್ಪ ಸಂಖ್ಯಾತರಾದ ಈ ಸಮುದಾಯವು ರಾಜಕೀಯ ತಾರತಮ್ಯಕ್ಕೆ ಒಳಗಾಗಿರುವಂತಹ ಪರಿಸ್ಥಿತಿಗಳನ್ನು ಕಾಣಬಹುದು. ಅಲ್ಲದೆ ಈ ಕಾರಣವಾಗಿ ರಾಜ್ಯದ ರಾಜಕಾರಣದಲ್ಲಿ ಸಮುದಾಯಕ್ಕೆ ರಾಜಕೀಯ ಸ್ಥಾನಮಾನ ದೊರಕಲ್ಲ ಎನ್ನುವುದಕ್ಕೆ ಯಾವೊಬ್ಬ ಸಚಿವ, ಅಥವಾ ಶಾಸಕರಿಲ್ಲ. ಹೊಳಲ್ಕೆರೆ ಮಾಜಿ ಶಾಸಕ ಉಮಾಪತಿ, ಬೆಂಗಳೂರು

ಕೆ ಆರ್ ಪುರದ ಮಾಜಿ ಸಚಿವರಾದ ಎ ಕೃಷ್ಣಪ್ಪ ಮತ್ತು ಪ್ರಸ್ತುತದಲ್ಲಿ ವಿಧಾನಪರಿಷತ್ ಸದಸ್ಯರಾಗಿರುವ ಜಯಮ್ಮ ಬಾಲರಾಜ ಮತ್ತು ಕೆ.ಆರ್.ಪುರ ಕ್ಷೇತ್ರದಿಂದ ಆಯ್ಕೆ ಆಗಿರುವ ಬಿ.ಬಿ.ಎಂ.ಪಿ.ಯ ಹಾಲಿ ಸದಸ್ಯರಾದ ಪೂರ್ಣಿಮಾ ಶ್ರೀನಿವಾಸರನ್ನು ಬಿಟ್ಟರೆ ಈ ಸಮುದಾಯದಲ್ಲಿ ರಾಜಕೀಯ ಚಾರಿತ್ರಿಕ ಹಿನ್ನೆಲೆ ತೀರಾ ವಿರಳವಾದದ್ದು.

ಹಾಗಾಗಿ ರಾಜಕೀಯ ಅಭಿವೃದ್ಧಿಗೆ ಸಮುದಾಯದಲ್ಲಿ ಅರಿವು ಮೂಡಿಸುವ ಕೆಲಸವನ್ನು ಮಠವು ಮಾಡಿಕೊಂಡು ಬಂದಿದೆ. ರಾಜಕೀಯವಾಗಿ ಹಿಂದುಳಿದಿರುವುದರಿಂದ ಯಾವುದೇ ಬೆಂಬಲವೂ ಈ ಮಠಕ್ಕೆ ಇರುವುದಿಲ್ಲ. ಸರ್ಕಾರದಿಂದ ಯಾವುದೇ ಅನುದಾನವೂ ಕೂಡ ಈ ಮಠಕ್ಕೆ ದೊರೆತಿಲ್ಲದೆ ಇರುವುದರಿಂದ ಮಠ ಅಭಿವೃದ್ಧಿ ವಿಷಯದಲ್ಲಿ ತೀರಾ ಹಿಂದುಳಿದಿದೆ. ಮಠದ ಅಧೀನದಲ್ಲಿ ಚಿತ್ರದುರ್ಗ ಯಾದವ ನೌಕರರ ಸಂಘ ಮತ್ತು ಜಿಲ್ಲಾ ಯಾದವ ಸಂಘ, ರಾಜ್ಯ ಯಾದವ ಸಂಘಗಳು ಬರುತ್ತವೆ. ಮಠದ ಜೊತೆಗೆ ಸಮುದಾಯದ ಅಭಿವೃದ್ಧಿ ಕಾರ್ಯಕ್ರಮಕ್ಕೆ ಸಹಕಾರಿಯಾಗಿದೆ.

ಶೈಕ್ಷಣಿಕ ಸ್ಥಿತಿಗತಿ

ಶ್ರೀಕೃಷ್ಣಯಾದವಾನಂದ ಮಠವು ಸಮುದಾಯದ ಶೈಕ್ಷಣಿಕ ಅಭಿವೃದ್ಧಿಗಾಗಿ ಕಾಳಜಿಯನ್ನು ಹೊಂದಿದೆ. ಗೊಲ್ಲ ಸಮುದಾಯವು ಶಿಕ್ಷಣ ಕ್ಷೇತ್ರದಲ್ಲಿ ಹಿಂದುಳಿದಿರುವುದಕ್ಕೆ ಹಲವು ಕಾರಣಗಳಿವೆ. ಮೊದಲನೆಯದಾಗಿ ರೂಢಿ-ಸಂಪ್ರದಾಯಕ್ಕೆ ಬದ್ಧವಾಗಿರುವುದು. ಎರಡು ಸಾಮಾಜಿಕ ಒಡೆತನ ಹಾಗೂ ಆಧುನಿಕ ಶಿಕ್ಷಣದ ಬಗ್ಗೆ ತಿಳುವಳಿಕೆಯ ಸಮಸ್ಯೆ. ಮೂರು ಶೈಕ್ಷಣಿಕ ಅಭಿವೃದ್ಧಿಗಾಗಿ ಸರ್ಕಾರದಿಂದ ಪ್ರತ್ಯೇಕ ಪ್ರೋತ್ಸಾಹವಿಲ್ಲದಿರುವುದು. ಈ ಮೂರು ಅಂಶಗಳಿಂದ ಗೊಲ್ಲ ಸಮುದಾಯವನ್ನು ಶೈಕ್ಷಣಿಕ ದೃಷ್ಟಿಯಿಂದ ಗಮನಿಸಿದಾಗ ಅಭಿವೃದ್ಧಿ ಆಗಿರುವುದು ವಿರಳವೆನಿಸುತ್ತದೆ. ಅಲ್ಲದೆ ವೃತ್ತಿಪರ ಕೋರ್ಸ್‌ಗಳು ಮತ್ತು ತಾಂತ್ರಿಕ, ವೈದ್ಯಕೀಯ ಕೋರ್ಸ್‌ಗಳನ್ನು ವ್ಯಾಸಂಗ ಮಾಡಲು ಕಡುಬಡವರಾದ ಗೊಲ್ಲ ಸಮುದಾಯದ ಕುಟುಂಬಗಳಿಗೆ ಒಂದು ಸವಾಲಾಗಿ ಪರಿಣಮಿಸಿದೆ. ಹಾಗಾಗಿ ಈ ಹಿನ್ನೆಲೆಯಿಂದಲೆ ಶ್ರೀಕೃಷ್ಣಯಾದವಾನಂದ ಮಠವು ಶೈಕ್ಷಣಿಕ ಅಭಿವೃದ್ಧಿಗಾಗಿ ಹಲವು ಯೋಜನೆಗಳನ್ನು ಹಾಕಿಕೊಂಡಿದೆ. ಕರ್ನಾಟಕ ರಾಜ್ಯದ ಪ್ರತಿಯೊಂದು ಪ್ರದೇಶದಲ್ಲಿ ಪ್ರಾಥಮಿಕ, ಮಾಧ್ಯಮಿಕ ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳನ್ನು ತೆರೆಯುವುದು, ಜೊತೆಗೆ ಬಾಲಕ, ಬಾಲಕಿಯರ ವಸತಿ ನಿಲಯಗಳನ್ನು ತೆರೆಯಲಾಗುವುದು ಎಂದು ಮಠದ ಸ್ವಾಮಿಗಳಾದ ಶ್ರೀಕೃಷ್ಣಯಾದವನಾಂದ ಸ್ವಾಮಿಗಳು ಯೋಜನೆಗಳ ಕುರಿತು ಹೇಳುತ್ತಾರೆ. ಆದರೆ ಪ್ರಸ್ತುತದ ಸಂದರ್ಭದಲ್ಲಿ ಹಾಸನ ಜಿಲ್ಲೆ ಅರಸೀಕೆರೆ ತಾಲೂಕಿನಲ್ಲಿ ಒಂದು ವಸತಿನಿಲಯ ಆರಂಭಮಾಡಲಾಗಿದೆ ಎಂದು ಹೇಳುತ್ತಾರೆ.

೭. ಶ್ರೀ ಶ್ರೀ ಶ್ರೀ ಸಿದ್ದರಾಮೇಶ್ವರ ಭೋವಿ ಗುರುಪೀಠ

ಭೋವಿ ಗುರುಪೀಠ: ಚಿತ್ರದುರ್ಗ

ಶ್ರೀ ಜಗದ್ಗುರು ಸಿದ್ದರಾಮೇಶ್ವರ ಮಹಾಸಂಸ್ಥಾನ

ಕರ್ನಾಟಕದಲ್ಲಿ ಮೊಟ್ಟಮೊದಲ ಬಾರಿಗೆ ಬಾಗಲಕೋಟೆಯಲ್ಲಿ ಭೋವಿ ಗುರುಪೀಠವು ಆರಂಭವಾಯಿತು. ಎರಡನೇ ತಲೆಮಾರಿನ ಗುರುಪೀಠವು ದಾವಣಗೆರೆಯಲ್ಲಿ ಆರಂಭವಾಯಿತು. ಮೂರನೆಯ ತಲೆಮಾರಿನ ಗುರುಪೀಠವು ಚಿತ್ರದುರ್ಗದಲ್ಲಿ ರಾಷ್ಟ್ರೀಯ ಹೆದ್ದಾರಿಯ ಪಟ್ಟಣದಲ್ಲಿ. ೨೦೦೭ರಲ್ಲಿ ಈ ಭೋವಿ ಗುರುಪೀಠ ಪ್ರಾರಂಭವಾಯಿತು. ಚಿತ್ರದುರ್ಗದ ಈ ದಿನ ಗುರುಪೀಠದ ಸ್ವಾಮೀಜಿಯಾಗಿರುವ ಶ್ರೀ ಸಿದ್ದರಾಮೇಶ್ವರ ಸ್ವಾಮಿಗಳು ಚಿತ್ರದುರ್ಗದ ಶ್ರೀ ಶಿವಮೂರ್ತಿ ಶರಣರಿಂದ ದೀಕ್ಷೆಯನ್ನು ಪಡೆದು ಭೋವಿ ಗುರುಪೀಠಕ್ಕೆ ಪಟ್ಟಾಭಿಷೇಕ ಮಾಡಲಾಯಿತು.

ಭೋವಿ ಗುರುಪೀಠದ ಮುಖ್ಯ ಉದ್ದೇಶ

ಈ ಸಮುದಾಯವು ಅಭಿವೃದ್ಧಿಯಿಂದ ಬಹಳ ಹಿಂದುಳಿದ ಸಮುದಾಯವಾಗಿದೆ. ಈ ಸಮುದಾಯವನ್ನು ಸಮಾಜದ ಮುನ್ನೆಲೆಗೆ ತರಬೇಕಾದ ಅನಿವಾರ್ಯವೂ ಕೂಡ ಆಗಿತ್ತು. ಮತ್ತು ಈ ಸಮುದಾಯದ ಹಿರಿಯರು ರಾಜಕೀಯ ಮುಖಂಡರು ಗುರುಪೀಠದ ಸ್ಥಾಪನೆಗೆ ಬಲವಾದ ಪ್ರೇರಣೆಯಾಗಿದ್ದಾರೆ. ಈ ಸಮಾಜವನ್ನು ಸಮ-ಸಮಾಜ-ಸಮಾನತೆಯ ಅರಿವನ್ನು ಮೂಡಿಸುವುದು, ಜಾಗೃತಿ ಮೂಡಿಸುವುದೇ ಈ ಮಠದ ದೊಡ್ಡ ಸವಾಲಾಗಿದೆ.

ಪ್ರಾಚೀನಕಾಲದಿಂದಲೂ ಶ್ರಮದ ಕೆಲಸಗಳನ್ನು ಮಾಡಿಕೊಂಡು ಬಂದಿದ್ದಾರೆ. ಇವರಲ್ಲಿ ಹೆಚ್ಚಾಗಿ ಮೂಢನಂಬಿಕೆ, ಕಂದಾಚಾರಗಳು ಮನೆಮಾಡಿ ನಿಂತಿವೆ. ಇಂತಹ ಅವೈಜ್ಞಾನಿಕವಾಗಿರುವ ಈ ಸಮುದಾಯವನ್ನು ಅಭಿವೃದ್ಧಿ ಪಥದಲ್ಲಿ ಕೊಂಡ್ಯೊಯ್ಯಲು ಈ ಭೋವಿ ಗುರುಪೀಠದ ಸ್ಥಾಪನೆಯ ಹಿಂದಿರುವ ಬಹಳ ಮುಖ್ಯವಾದ ಉದ್ದೇಶ ಹಾಗೂ ಅನಿವಾರ್ಯವು ಕೂಡ ಆಗಿದೆ.

ಭೋವಿ ಸಮುದಾಯದ ಅಭಿವೃದ್ಧಿಗೆ ಮತ್ತು ಸಮಾಜದಲ್ಲಿ ಒಳ್ಳೆಯ ಸ್ಥಾನಮಾನಕ್ಕಾಗಿ ತೊಡಗಿಸಿಕೊಂಡು ಹಲವಾರು ಕಾರ್ಯಕ್ರಮಗಳನ್ನು ಮಠವು ಪ್ರಾರಂಭಿಸಿದೆ. ಮೊದಲು ಈ ಸಮುದಾಯಕ್ಕೆ ಜಾಗೃತಿ ಮೂಡಿಸಲು ಅವರಿಗೆ ಶ್ರದ್ಧಾ ಕೇಂದ್ರಗಳನ್ನು ಸ್ಥಾಪನೆ ಮಾಡಲಾಯಿತು. ಧಾರ್ಮಿಕ ಕ್ಷೇತ್ರಗಳು ಮತ್ತು ಭಕ್ತಿಯ ಕೇಂದ್ರಗಳ ಮೂಲಕ ಈ ಸಮುದಾಯಕ್ಕೆ ಮೊದಲ ಜಾಗೃತಿ ಮೂಡಿಸುತ್ತ ಬಂದಿದ್ದಾರೆ.

ಧರ್ಮದ ತಳಹದಿಯಲ್ಲಿ ಈ ಸಮುದಾಯವನ್ನು ಜಾಗೃತಿ ಮೂಡಿಸಿ ಆ ಮೂಲಕ ಅಭಿವೃದ್ಧಿ ಪಥಕ್ಕೆ ಕರೆದುಕೊಂಡು ಹೋಗುವುದು. ಹಾಗೆಯೇ ಈ ಮಠವು ಸಮುದಾಯದ

ಭಾವನೆಗಳಿಗೆ ಸ್ಪಂದಿಸುವುದರ ಜೊತೆಗೆ ಸಮುದಾಯದ ಅಭಿವೃದ್ಧಿಗೆ ಹಲವಾರು ಯೋಜನೆಗಳನ್ನು ರೂಪಿಸಿಕೊಂಡಿದೆ.

ಭೋವಿ ಸಮುದಾಯವು ಪ್ರಾಚೀನ ಕಾಲದಿಂದಲೂ ಶ್ರಮವನ್ನೇ ನಂಬಿಕೊಂಡು ದುಡಿದುಂಡವರು. ಇದೊಂದು ಮುಗ್ದ ಸಮುದಾಯವಾಗಿರುವುದರಿಂದ ಈ ಸಮುದಾಯಕ್ಕೆ ಬರುವಂತಹ ಸರಕಾರದ ಯೋಜನೆಗಳು ಸಿಗುತ್ತಿಲ್ಲ. ನೈಸರ್ಗಿಕವಾಗಿ ಸಿಗುವಂತಹ ಮರಳುಗಣಿಗಾರಿಕೆ, ಕಲ್ಲುಗಣಿಗಾರಿಕೆ, ಕಟ್ಟಡದ ಕೆಲಸ, ಕೈ ಕೆಲಸಗಳು ಇಂತಹ ಹಲವಾರು ಉದ್ಯೋಗಗಳನ್ನು ಮಾಡುತ್ತಿದ್ದಾರೆ. ಇವರಿಗೆ ಸರಕಾರವು ಇನ್ನಷ್ಟು ಸೌಲಭ್ಯಗಳನ್ನು ಒದಗಿಸುವುದರ ಮೂಲಕ ಈ ಸಮುದಾಯಕ್ಕೆ ಆಸರೆಯಾಗಬೇಕಾಗಿದೆ. ಸರಕಾರವು ಈ ಸಮುದಾಯದ ಜನರು ನಿರುದ್ಯೋಗಿಗಳಾಗಿ ಇರುವ ಸಂದರ್ಭದಲ್ಲಿ ಈ ಸಮುದಾಯದಲ್ಲಿರುವಂತಹ ವೃತ್ತಿ ಕೌಶಲ್ಯಗಳಿಗೆ ಅನುಗುಣವಾಗಿ ಕೆಲಸವನ್ನು ನೀಡುವುದರ ಮೂಲಕ ಉದ್ಯೋಗಸ್ಥರನ್ನಾಗಿ ಮಾಡಬೇಕಾಗಿದೆ. ಆ ಮೂಲಕ ಸಮುದಾಯವು ಅಭಿವೃದ್ಧಿ ಹೊಂದಿ ಸಮಾಜದಲ್ಲಿ ಸಮಾನತೆ ಬರಲು ಸಾಧ್ಯ. ಈ ನಿಟ್ಟಿನಲ್ಲಿ ಈ ಭೋವಿ ಗುರುಪೀಠವು ಕೆಲಸ ಮಾಡುತ್ತಿದೆ.

ಭೋವಿ ಗುರುಪೀಠವು ಶೈಕ್ಷಣಿಕ ಅಭಿವೃದ್ಧಿಯತ್ತ ಸಾಗುವಲ್ಲಿ ಮಠದ ಕಾರ್ಯ

ಭೋವಿ ಗುರುಪೀಠವು ಸ್ಥಾಪನೆಯಾಗಿ ಒಂಭತ್ತು ವರ್ಷಗಳು ಆಗಿದೆ. ಈ ಅವಧಿಯಲ್ಲಿ ಗುರುಪೀಠವು ಮೂರು ಶಾಲೆಗಳನ್ನು, ಅಂದರೆ ಒಂದು ಪ್ರಾಥಮಿಕ, ಹಿರಿಯ ಪ್ರಾಥಮಿಕ, ಒಂದು ಪ್ರೌಢಶಾಲೆ ತೆರೆಯುವುದರ ಮೂಲಕ ಆ ಸಮುದಾಯದ ವಿದ್ಯಾರ್ಥಿಗಳಿಗೂ ಹಾಗೂ ಇನ್ನಿತರ ಸಮುದಾಯದ ವಿದ್ಯಾರ್ಥಿಗಳಿಗೂ ಸಹ ಉಚಿತ ಶಿಕ್ಷಣ, ವಸತಿ, ಪಠ್ಯಪುಸ್ತಕಗಳು, ಊಟವನ್ನು ನೀಡುತ್ತಿದೆ. ಹಾಗೆಯೇ ಪದವಿಪೂರ್ವ ಕಾಲೇಜು ಸ್ಥಾಪನೆ ಮಾಡಲಾಗಿದೆ. ಸಮುದಾಯದಲ್ಲಿ ಉನ್ನತ ಶಿಕ್ಷಣವನ್ನು ಮಾಡುವಂತ ಬಡ ವಿದ್ಯಾರ್ಥಿಗಳಿಗೆ ಮಠದ ವತಿಯಿಂದ ಸಹಾಯ ಹಸ್ತವನ್ನು ನೀಡಿದೆ.

ಭೋವಿ ಗುರುಪೀಠದ ಮೂಲಕ ಸಮುದಾಯದ ಸಂಸ್ಕೃತಿ

ಈ ಸಮುದಾಯದಲ್ಲಿ ಪರಂಪರಾಗತವಾಗಿ ಬಂದಂತಹ ಸಮುದಾಯದ ಸಂಸ್ಕೃತಿಯ ಚಹರೆಗಳನ್ನು ವೈಚಾರಿಕ ರೀತಿಯಲ್ಲಿ ವಿಮರ್ಶಿಸಿ ಚಿಕಿತ್ಸೆ ನೀಡುವ ಕಾರ್ಯ ನಡೆಯುತ್ತಿದೆ. ಈ ಮೂಲಕ ಸಮುದಾಯದಲ್ಲಿರುವಂತಹ ಮೂಢನಂಬಿಕೆ, ಕಂದಾಚಾರಗಳನ್ನು ತೊಡೆದುಹಾಕುವುದರ ಆ ನಿಟ್ಟಿನಲ್ಲಿ ಸಮುದಾಯದಲ್ಲಿ ಜಾಗೃತಿಯನ್ನು ಮೂಡಿಸಲಾಗುತ್ತಿದೆ. ಮಠವು ಸಮುದಯ ಆಧಾರಿತವಾದ ಮಠವಾಗಿದ್ದರೂ ಸಹ, ವಿವಿಧ ಸಂಸ್ಕೃತಿಗಳ

ಕೇಂದ್ರವಾಗಿರುವುದು ಹಾಗೆಯೇ ನಾವು ಅದನ್ನು ಧರ್ಮವಾಗಿ ನೋಡುತ್ತೇವೆ ಎಂದು ಶ್ರೀಗಳು ಹೇಳುತ್ತಾರೆ.

ಭೋವಿ ಗುರುಪೀಠದೊಂದಿಗೆ ಸಮುದಾಯದ ಒಡನಾಟ ಮತ್ತು ಸಮುದಾಯದ ಅಭಿವೃದ್ಧಿಗೆ ಕೈಗೊಂಡ ಕಾರ್ಯಕ್ರಮಗಳು

ಮಠದ ಅಭಿವೃದ್ಧಿಗೆ ಈ ಸಮುದಾಯದ ಜನರು ಮತ್ತು ರಾಜಕೀಯ ಮುಖಂಡರ ಸೇವೆ ಮತ್ತು ದೇಣಿಗೆ ಬಹಳ ಮುಖ್ಯ ಪಾತ್ರ ವಹಿಸಿದೆ. ಗ್ರಾಮಪಂಚಾಯತಿ ಸದಸ್ಯರಿಂದ ಹಿಡಿದು ಎಂಎಲ್ಎ, ಎಂಎಲ್‌ಸಿ, ಸಚಿವರ ತನಕ ಈ ಮಠದ ಅಭಿವೃದ್ಧಿಗೆ ನೆರವಾಗಿದ್ದಾರೆ. ಮತ್ತು ಮುಂದಿನ ಅಭಿವೃದ್ಧಿಯ ಕುರಿತಂತೆ ಸಲಹೆ ಸೂಚನೆಗಳನ್ನು ನೀಡುತ್ತ ಬಂದಿದ್ದಾರೆ.

ಶ್ರೀಮಠವು ಗ್ರಾಮಪಂಚಾಯತಿ ಸದಸ್ಯರನ್ನು ಚಿತ್ರದುರ್ಗದಲ್ಲಿ ನಡೆದಂತಹ ಕಾರ್ಯಕ್ರಮದಲ್ಲಿ ಸನ್ಮಾನಿಸಿ ಅವರಿಗೆ ಸಮುದಾಯದ ಅಭಿವೃದ್ಧಿಗೆ ಪೂರಕವಾಗುವಂತೆ ಸಲಹೆ ಸೂಚನೆಗಳನ್ನು ನೀಡಲಾಯಿತು. ಶ್ರೀ ಮಠವು ಮೊದಲು ಈ ಸಮುದಾಯದ ನಾಯಕರು ಮತ್ತು ಮುಖಂಡರಿಗೆ ಜಾಗೃತಿ ಮೂಡಿಸುವುದರ ಜೊತೆಗೆ ಈ ಸಮುದಾಯದ ಜನಸಾಮಾನ್ಯರು ಜಾಗೃತರಾಗುತ್ತಾರೆ ಎಂಬ ಮನೋಭಾವನೆಯನ್ನು ಶ್ರೀಮಠವು ಹೊಂದಿದೆ. ಹಾಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡು ನೆರವಾಗುತ್ತಾ ಬಂದಿದೆ.

ಜಾಗೃತಿಯ ಸಲುವಾಗಿ ಈ ಸಮುದಾಯಕ್ಕೆ ಕಾರ್ಯಕ್ರಮವನ್ನು ರಚಿಸಿ ಅವರಿಗೆ ಕಾರ್ಯಗಾರದ ಮೂಲಕ ಶಿಬಿರವನ್ನು ಏರ್ಪಡಿಸಿ ಜಾಗೃತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ.

–ಜನಸಾಮಾನ್ಯರಿಗೆ ಸಂಘಟನೆಯ ದೃಷ್ಟಿಕೋನ ಬೆಳೆಸುವುದು

–ರಾಷ್ಟ್ರಮಟ್ಟದ ಸಮಾವೇಶಗಳನ್ನು ಹಮ್ಮಿಕೊಳ್ಳುವುದು

–ರಾಜ್ಯಮಟ್ಟದ ಸಮಾವೇಶ

–ಜಿಲ್ಲಾ ಮಟ್ಟದ ಸಮಾವೇಶ ಹಾಗೂ ತಾಲೂಕು ಮಟ್ಟದ ಸಮಾವೇಶಗಳನ್ನು ಹಮ್ಮಿಕೊಳ್ಳುವುದರ ಮೂಲಕ ಜಾಗೃತರನ್ನಾಗಿ ಮಾಡುತ್ತದೆ. ಸಿದ್ದರಾಮೇಶ್ವರ ಜಯಂತಿಯಂತಹ ಆಚರಣೆಯ ನೆಪದಲ್ಲಿ ಧಾರ್ಮಿಕ ನೆಲೆಯ ಮೇಲೆ ಸಮುದಾಯದ ಜಾಗೃತಿಯನ್ನು ಮೂಡಿಸುವುದಾಗಿದೆ.

–ಶೈಕ್ಷಣಿಕವಾಗಿ ಜಾಗೃತಿ ಮಾಡಿಸುವುದು ಅಂದರೆ, ವಿದ್ಯಾಸಂಸ್ಥೆಗಳ ಸ್ಥಾಪನೆ, ವಸತಿನಿಲಯಗಳ ಸ್ಥಾಪನೆ ಮಾಡುವುದು.

–ಭೋವಿ ಸಮಾಜ ಎನ್ನುವುದು ಅಭಿಯಂತರರು. ಅವರ ವೃತ್ತಿ ಕೌಶಲ್ಯಗಳನ್ನು ಬಳಸಿಕೊಳ್ಳುವಂತೆ ಮಾಡುವುದು. ಈ ಸಮುದಾಯದಲ್ಲಿರುವಂತಹ ಸ್ಕಿಲ್‌ಗಳನ್ನು ಉಪಯೋಗಿಸಿಕೊಂಡು ಕಟ್ಟಡದ ಶೀಲಿಂಗ್, ಸಿಮೆಂಟ್‌ಶಿಲ್ಪಗಳು, ಕಲ್ಲು ಶಿಲ್ಪಗಳು ಇಂತಹ ಕೆಲಸವನ್ನು ಪ್ರೋತ್ಸಾಹಿಸಿ ಸರಕಾರದ ಮೂಲಕ ಯೋಜನೆಗಳನ್ನು ರೂಪಿಸುವುದು.

–ಭೋವಿ(ವಡ್ಡರ) ಸಂಶೋಧನಾ ಕೇಂದ್ರ ಮತ್ತು ಸಿದ್ದರಾಮೇಶ್ವರ ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸಿ ಆ ಮೂಲಕ ಸಮುದಾಯದ ಅಭಿವೃದ್ಧಿಗೆ ಪೂರಕವಾಗುವಂತೆ ಕೆಲಸ ಮಾಡುವುದು. ಈಗಾಗಲೇ ಚಿತ್ರದುರ್ಗದಲ್ಲಿ ಸಂಶೋಧನಾ ಕೇಂದ್ರವನ್ನು ಸ್ಥಾಪನೆಮಾಡಲು ಚಿಂತಿಸಿದ್ದಾರೆ. ಆ ಮೂಲಕ ಸಾಹಿತ್ಯ, ಸಂಸ್ಕೃತಿ ಸಮುದಾಯದ ಪ್ರಾಚೀನತೆ, ಸಮುದಾಯದ ಅಭಿವೃದ್ಧಿಗೆ ಸಂಬಂಧಿಸಿದಂತಹ ವಿಷಯಗಳನ್ನು ಕುರಿತು ಸಂಶೋಧನೆ ಮಾಡಲಾಗುವುದು.

ಶ್ರೀಮಠವು ಈ ಸಮುದಾಯದ ಉನ್ನತ ಶಿಕ್ಷಣವನ್ನು ಬಯಸುವವರಿಗೆ ಸಹಕಾರ ನೀಡುವುದು. ವಿದ್ಯಾರ್ಥಿ ವೇತನ ಹಾಗೆಯೇ ತಾಂತ್ರಿಕ ವಿದ್ಯಾಭ್ಯಾಸ ಮಾಡುವವರಿಗೆ ಆರ್ಥಿಕ ಸಹಾಯ ಮಾಡುತ್ತದೆ. ಶ್ರೀಮಠವು ನೌಕರರ ಸಮಾವೇಶವನ್ನು ಮಾಡುವುದರ ಮೂಲಕ ಚಿಂತನ ಮಂಥನ ಕಾರ್ಯಕ್ರಮ ಮಾಡುತ್ತಿದ್ದಾರೆ. ಇಂತಹ ಸಮಾವೇಶಗಳಲ್ಲಿ ಮಠದ ಅನುದಾನ, ವಿದ್ಯಾರ್ಥಿನಿಲಯ ಸ್ಥಾಪನೆಗೆ, ಶ್ರೀಮಠದ ದಾಸೋಹಕ್ಕೆ ಮಠದಲ್ಲಿ ಇರುವಂತಹ ಮಕ್ಕಳಿಗೆ ಊಟ ವಸತಿಗಾಗಿ ದಾನ, ಮಠದ ಕಟ್ಟಡದ ನಿರ್ವಹಣೆಗೆ ಅನುದಾನ, ವಿದ್ಯಾರ್ಥಿವೇತನ, ಸಮುದಾಯದ ಮದುವೆ ಸಮಾರಂಭ ಮುಂತಾದವುಗಳಿಗೆ ಸಹಕಾರ ನೀಡುವುದಾಗಿದೆ. ಇಂತಹ ಹತ್ತು ಹಲವಾರು ಕಾರ್ಯಕ್ರಮಗಳನ್ನು ರೂಪಿಸುವುದರ ಮೂಲಕ ಮಠದ ಅಭಿವೃದ್ಧಿ ಮತ್ತು ಸಮುದಾಯದ ಅಭಿವೃದ್ಧಿಯನ್ನು ಮಾಡುತ್ತ ಬಂದಿರುವುದನ್ನು ನೋಡಬಹುದು.

ಒಟ್ಟಿನಲ್ಲಿ ಭೋವಿ ಗುರುಮಠವೂ (ಸಿದ್ದರಾಮೇಶ್ವರ ಮಠ) ಈ ಮಠದ ಸಂಗಮಕೇಂದ್ರವಾಗಿ ಸ್ಥಾಪನೆಗೊಂಡಿದೆ. ಸಮಾಜದ ಮತ್ತು ಸಮುದಾಯದ ಅಭಿವೃದ್ಧಿಗಾಗಿ ಈ ಮಠವು ಕೆಲಸ ನಿರ್ವಹಿಸುತ್ತ ಸಾಗುತ್ತಿದೆ. ಏಕೆಂದರೆ ಈ ಮಠವು ಬಸವ ತತ್ವಗಳ ಆಧಾರದ ಮೇಲೆ ಮತ್ತು ಚಿತ್ರದುರ್ಗದ ಮುರುಘ ಶರಣರ ಮಾರ್ಗದರ್ಶನದಲ್ಲಿ ಸಾಗುತ್ತಿದೆ. ಹಾಗೆಯೇ ಈ ಗುರುಪೀಠವು ಸಮುದಾಯ ಆಧಾರಿತವಾದ ಪೀಠವಾಗಿರುವುದರಿಂದ ಸಂಸ್ಕೃತಿ ಕೇಂದ್ರವಾಗುವಂತಹ ಪೀಠವು ಕೂಡ ಆಗಿರುವುದಾಗಿದೆ. ಭೋವಿ ಗುರುಪೀಠವನ್ನು ಸಮುದಾಯ ಆಧಾರದ ಮೇಲೆ ಅಥವಾ ಸಮುದಾಯವಾಗಿ ನೋಡುವುದಾದರೆ ಅದನ್ನು ನಾವು ಧರ್ಮವಾಗಿ ನೋಡುತ್ತೇವೆ ಎಂದು ಹೇಳುತ್ತಾರೆ. ಸಮುದಾಯ–ಸಮುದಾಯಗಳ ನಡುವೆ ಸ್ನೇಹ–ಸಂಘರ್ಷಮುಕ್ತವಾದ ವಾತಾವರಣವನ್ನು

ಸೃಷ್ಟಿಮಾಡುತ್ತೇ ಹೊರತು ಅದನ್ನು ಜ್ವಾಲಾಮುಖಿಯಾಗಿಸುವಂತೆ ಮಾಡುವುದು ಅಲ್ಲ ಎಂದು ಹೇಳುತ್ತಾರೆ. ಅನ್ಯ ಮಠಗಳೊಂದಿಗೆ ಭಾಂದವ್ಯ, ಪರಸ್ಪರ ಗೌರವ ಭಾವನೆಗಳನ್ನು ಹೊಂದಿರುವಂತಹದನ್ನು ಕಾಣಬಹುದು. ಆದರೆ ಉನ್ನತ ಮಠಗಳು, ಶ್ರೀಮಂತ ಮಠಗಳಾದ ವೈದಿಕ, ಒಕ್ಕಲಿಗ, ಲಿಂಗಾಯತ ಮಠಗಳೊಂದಿಗೆ ಸಂಬಂಧ, ಸಹಕಾರ ಇದೆ ಎಂದು ಹೇಳುತ್ತಾರೆ. ಮತ್ತು ಪ್ರೋತ್ಸಾಹಿಸುತ್ತಾರೆ ಎಂದು ಹೇಳುತ್ತಾರೆ.

ಒಂದರ್ಥದಲ್ಲಿ ಹೇಳುವುದಾದರೆ ಅಲಕ್ಷಿತ ಸಮುದಾಯದ ಮಠಗಳು ಅಭಿವೃದ್ಧಿಯ ಹಂತದಲ್ಲಿ ಸಾಗುತ್ತ ನಡೆಯುತ್ತಿವೆ. ತಮ್ಮ ತಮ್ಮ ಸಮುದಾಯದ ಜನತೆಯನ್ನು ಮಠದೊಂದಿಗೆ ಅವಿನಾಭಾವ ಸಂಬಂಧ ಬರುವಂತೆ ಪರಸ್ಪರ ಸಂಬಂಧ ಹೊಂದಿವೆ. ಈ ಮಠವು ಹಲವಾರು ಜನಪರ ಯೋಜನೆ ಮತ್ತು ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಮುಂದೆ ಸಮುದಾಯದ ಅಭಿವೃದ್ಧಿಯ ಜೊತೆಗೆ ಅಭಿವೃದ್ಧಿಯತ್ತ ಸಾಗುತ್ತಿದೆ. ಒಟ್ಟಾರೆಯಾಗಿ ಈ ಮಠಕ್ಕೆ ಸಮುದಾಯದ ಸಂಘಟನೆ, ಅಭಿವೃದ್ಧಿ, ಒಗ್ಗಟ್ಟು ಬಹಳ ಮುಖ್ಯವಾಗಿದೆ. ಶೈಕ್ಷಣಿಕ ಜಾಗೃತಿ ಈ ಸಮುದಾಯದ ಅಲೆಮಾರಿಗಳಿಗೆ ಜಾಗೃತಿ ಹಾಗೂ ಅವರಿಗೆ ಸೂಕ್ತ ಭದ್ರತೆ ನೀಡುವುದಾಗಿದೆ.

೮. ಛಲವಾದಿ ಗುರುಪೀಠ, ಚಿತ್ರದುರ್ಗ, ಬಸವನಾಗಿದೇವ ಸ್ವಾಮಿ

ಚಿತ್ರದುರ್ಗ ಶಿವಮೂರ್ತಿ ಮುರಘಾಶರಣರಿಂದ ದೀಕ್ಷೆ ಪಡೆದ ಶ್ರೀ ಬಸವನಾಗಿದೇವ ಸ್ವಾಮೀಜಿ ಶರಣಪರಂಪರೆಯ ಹಿನ್ನಲೆಯಲ್ಲಿ ಛಲವಾದಿ ಗುರುಪೀಠವನ್ನು ಮುನ್ನಡೆಸುತ್ತಿದ್ದಾರೆ.

ಚಿತ್ರದುರ್ಗದ ರಾಷ್ಟ್ರೀಯ ಹೆದ್ದಾರಿ-೪ರಲ್ಲಿ ಮಠವಿದ್ದು, ಶ್ರೀಗಳ ವೈಚಾರಿಕ ಹಿನ್ನೆಲೆಯಿಂದಾಗಿ ನಾಡಿನಾದ್ಯಂತ ಸದಾ ಸುದ್ಧಿಯಲ್ಲಿ ಇರುತ್ತಾರೆ. ಬಹಳ ಮುಖ್ಯವಾಗಿ ಈ ಸಮುದಾಯವು ಸಮಾಜದ ಕಟ್ಟ ಕಡೆಯ ಅಂಚಿನಲ್ಲಿರುವುದಾಗಿದೆ. ಶತ-ಶತಮಾನಗಳಿಂದ ಶೋಷಣೆಯನ್ನು ಅನುಭವಿಸುತ್ತ, ಪ್ರಾಣಿಗಳಂತೆ ಜೀವಿಸುತ್ತಾ ಬದುಕುತ್ತ ಬಂದಿದ್ದಾರೆ. ಪ್ರಸ್ತುತ ಆಧುನಿಕ ಸಂದರ್ಭದಲ್ಲಿ ನೋಡುವುದಾದರೆ, ಸಮಾಜವೂ ವೈಚಾರಿಕತೆ, ಸಮಾನತೆ ನೆಲೆಯಲ್ಲಿ ಸಾವಿರಾರು ಭಾಷಣಗಳನ್ನು ಮಾಡುತ್ತಾರೆ. ಆದರೆ ಈ ಸಮುದಾಯದ ಪರಿಸ್ಥಿತಿಯೇ ಬೇರೆಯೇ ಆಗಿದೆ. ಈ ನಿಟ್ಟಿನಲ್ಲಿ ಸ್ವಾಮೀಜಿಯನ್ನು ಪ್ರಶ್ನೆ ಮಾಡಿದಾಗ ತಾವು ಮಠಾಧೀಶರಾಗಿ ಅಲಕ್ಷಿತ ಸಮುದಾಯಗಳಿಗೆ ಮೊದಲೇ ಆರ್ಥಿಕ ನಿಟ್ಟಿನಲ್ಲಿ ಸಂಕಷ್ಟಕ್ಕೆ ಈಡಾಗಿದ್ದೇವೆ. ಪ್ರಸ್ತುತ ಲಿಂಗಾಯಿತರು, ಬ್ರಾಹ್ಮಣರ ಮಠಕ್ಕೆ ಹೋಲಿಸಿದ ಸಂದರ್ಭದಲ್ಲಿ ಅಲಕ್ಷಿತ ಸಮುದಾಯಗಳು ಬಹಳಷ್ಟು ಹಿಂದುಳಿದಿವೆ. ಶ್ರೀ ಬಸವನಾಗಿದೇವ ಸ್ವಾಮಿಗಳು ಪೀಠಾಧ್ಯಕ್ಷರಾಗಿ ಬಂದ ಮೇಲೆ ಮುಂಚೆ ಇದ್ದ ಸ್ಥಿತಿಗೂ, ಪೀಠಾಧ್ಯಕ್ಷರಾಗಿ ನಂತರ ಸಮುದಾಯದ ಅಭಿವೃದ್ಧಿ ಬಹಳಷ್ಟು ಸುಧಾರಿಸಿದೆ. ಮತ್ತು ಈ

ನಿಟ್ಟಿನಲ್ಲಿ ಈವರೆಗೂ ಬೆಳವಣಿಗೆಯಲ್ಲಿ ನೂರಕ್ಕೆ ನೂರರಷ್ಟು ಯಶಸ್ಸನ್ನೂ ಕಂಡಿದ್ದೀವಿ. ಅಂತ ಹೇಳಿಲಿಕ್ಕೆ ಆಗುವುದಿಲ್ಲ. ಮುಂಚಿನ ಸ್ಥಿತಿಗೂ ಈಗಿನ ಸ್ಥಿತಿಗೂ ಸ್ವಲ್ಪ ಮಟ್ಟಿಗಾದರು ಸಮುದಾಯ ಸುಧಾರಿಸಿದೆ ಎಂದು ಹೇಳಬಹುದು.

ಮಠಾಧೀಶನಾದ ಮೇಲೆ ಹಲವಾರು ಮಠಗಳ ಸಂಪರ್ಕ ಮತ್ತು ಹಲವು ಜ್ಞಾನಿಗಳ, ಚಿಂತಕರು, ರಾಜಕೀಯ ಮುಖಂಡರ ಒಡನಾಟದಿಂದ ಮಠದ ಅಭಿವೃದ್ಧಿ, ಅನುಭವ ಮತ್ತು ಮಠದ ಕಾರ್ಯರೂಪಗಳ ಬಗ್ಗೆ ತಿಳಿದುಕೊಳ್ಳುವಂತೆ ಅನುಕೂಲವಾಗಿದೆ. ಈ ಸಮುದಾಯವನ್ನು ಧಾರ್ಮಿಕವಾಗಿ ಜಾಗೃತಿಯನ್ನು ಮಾಡುವ ನಿಟ್ಟಿನಲ್ಲಿ ಹೆಜ್ಜೆ ಇಡಲಾಗಿದೆ. ಶತಶತಮಾನಗಳಿಂದಲೂ ಮೌಢ್ಯ-ಕಂದಾಚಾರ, ಅಂಧಶ್ರದ್ಧೆಗಳಿಂದ ತಮ್ಮನ್ನು ತಾವೇ ಶೋಷಣೆಗೆ ಒಳಪಡಿಸಿಕೊಂಡಿದ್ದಾರೆ. ಜೊತೆಗೆ ಮೇಲ್ವರ್ಗದವರು ಇವರ ಅನಕ್ಷರತೆ ಅಜ್ಞಾನದಿಂದ ಇವರನ್ನು ಸಂಪೂರ್ಣವಾಗಿ ಸಮಾಜದಲ್ಲಿ ಪ್ರಾಣಿಗಳಿಗಿಂತ ಕಡೆಯಾಗಿ ಕಾಣಲಾಯಿತು. ಅಂಬೇಡ್ಕರ್, ಬಸವಣ್ಣ, ಗಾಂಧಿಯಂತಹ ಮಹಾನ್ ಮಾನವತಾವಾದಿಗಳಿಂದ ಸಮಾಜದ ಮುನ್ನಡೆಗೆ ಬಂದರೂ ಸಹ ಶೋಷಣೆ ಇಂದಿಗೂ ತಪ್ಪಿಲ್ಲ. ಈ ನಿಟ್ಟಿನಲ್ಲಿ ಈ ಮಠವು ಸಮುದಾಯದ ಜನತೆಗೆ ಜಾಗೃತಿ, ಶಿಕ್ಷಣ ಕೊಡಿಸುವುದರ ಮೂಲಕ ಮೌಢ್ಯ ಅಂಧಚಾರಗಳನ್ನು ತೊಡೆದುಹಾಕಿ ಸುಶಿಕ್ಷಿತರಾಗಿ ಮಾಡಬೇಕಾದ ಅನಿವಾರ್ಯತೆ ಈ ಮಠಕ್ಕೆ ಇದೆ.

ಇಂತಹ ಹಲವು ಯೋಜನೆಗಳನ್ನು ರೂಪಿಸಿಕೊಂಡಂತಹ ಈ ಮಠವೂ ಹಲವು ಸಮುದಾಯ ಪರವಾದ ಯೋಜನೆಗಳನ್ನು ರೂಪಿಸಿಕೊಂಡಿದೆ. ಮೊಟ್ಟಮೊದಲನೆಯದಾಗಿ ಈ ಸಮುದಾಯದವರನ್ನು ಜಾಗೃತಿ ಮೂಡಿಸುವುದರ ಮೂಲಕ ಒಗ್ಗೂಡಿಸಿ, ಅರಿವು ಮೂಡಿಸುವುದು ಅವಶ್ಯವಿದೆ. ಹಾಗೆಯೇ ಧಾರ್ಮಿಕ ಜಾಗೃತಿಯನ್ನು ಮೂಡಿಸುವುದರ ಮೂಲಕ ನಮ್ಮ ಸಮುದಾಯದಲ್ಲಿರುವ ಕೀಳರಿಮೆಯನ್ನು ಹೋಗಲಾಡಿಸಿ ಶ್ರೇಷ್ಠತೆಯ ಭಾವನೆಯನ್ನು ಮೂಡಿಸುವುದಾಗಿದೆ. ಈ ಸಮುದಾಯದಲ್ಲಿ ಎಷ್ಟು ಬುದ್ಧಿವಂತರು, ಪ್ರತಿಭೆಗಳು ಇವೆ. ಅದಕ್ಕೆ ಸರಿಯಾದ ವೇದಿಕೆ ಸಿಗದೆ ವಿದ್ಯಾಭ್ಯಾಸಕ್ಕೆ ನೆರವುಗಳು ಇಲ್ಲದೆ, ಈ ಸಮುದಾಯದ ಜನತೆ ನಿರಾಸಕ್ತರಾಗಿದ್ದಾರೆ. ಇಂತಹ ಪ್ರತಿಭೆವುಳ್ಳವರಿಗೆ ಒಂದು ಒಳ್ಳೆಯ ವೇದಿಕೆ ರೂಪಿಸಿಕೊಡುವುದಾಗಿದೆ. ಶೈಕ್ಷಣಿಕ ಸೌಲಭ್ಯಗಳು, ವಸತಿ ನಿಲಯಗಳು, ಸರಕಾರದಿಂದ ಬರುವಂತಹ ಅನುದಾನ ಬಳಸಿಕೊಂಡು, ಗುಣಮಟ್ಟದ ಶಿಕ್ಷಣವನ್ನು ಕೊಡಿಸಬೇಕಾದ ಗುರಿ ಈ ಮಠಕ್ಕೆ ಇದೆ.

ಪ್ರಸ್ತುತ ಸಂದರ್ಭದಲ್ಲಿ ಈ ಸಮುದಾಯದವರು ಮೇಲ್ವರ್ಗದವರಿಂದ ಶೋಷಣೆ, ದೌರ್ಜನ್ಯ, ಸಮುದಾಯ ನಿಂದನೆ, ಬಹಿಷ್ಕಾರ, ಅತ್ಯಾಚಾರದಂತಹ ಪ್ರಕರಣಗಳು ಸಾಕಷ್ಟು ನಡೆಯುತ್ತಿವೆ.

ಇಂತಹ ಅನ್ಯಾಯ, ಶೋಷಣೆಗಳನ್ನು ತಡೆಯುವ ನಿಟ್ಟಿನಲ್ಲಿ ಮಠವು ಕಾನೂನು ಅರಿವು ಮೂಡಿಸುತ್ತಿದೆ. ಜೊತೆಗೆ ನೊಂದವರಿಗೆ ಧ್ವನಿಯಾಗಿ ಈ ಮಠವು ನಿಲ್ಲುವ ನಿಟ್ಟಿನಲ್ಲಿ ಹೆಜ್ಜೆಯನ್ನು ಹಾಕಿದೆ. ಹಾಗೆಯೇ ಈ ಮಠವು ತನ್ನ ಸಮುದಾಯದ ಸಮಾವೇಶಗಳನ್ನು ಏರ್ಪಡಿಸುವುದರ ಮೂಲಕ ಚಿಂತನ-ಮಥನ ಕಾರ್ಯಕ್ರಮಗಳನ್ನು ರೂಪಿಸುತ್ತಿದೆ. ಹಾಗೂ ಈ ಸಮಾವೇಶಗಳಲ್ಲಿ ಮಠದ ಅನುದಾನ, ಮೀಸಲಾತಿ, ಅಭಿವೃದ್ಧಿಯ ಅಂಶಗಳು, ಮಠದ ಅಭಿವೃದ್ಧಿಯ ಕಾರ್ಯಕ್ರಮಗಳು, ಶ್ರೀ ಮಠದ ದಾಸೋಹ, ಮಠದ ನಿರ್ವಹಣೆ, ಸಮುದಾಯದ ಮದುವೆ ಸಮಾರಂಭ ಮುಂತಾದವುಗಳು ಈ ಸಮಾವೇಶಗಳಲ್ಲಿ ಚರ್ಚಿಸಿ ಮಠದ ಅಭಿವೃದ್ಧಿ ಯೋಜನೆಗಳನ್ನು ಹಾಕಿಕೊಳ್ಳಲಾಗುತ್ತದೆ.

ಕರ್ನಾಟಕ ಸರಕಾರದಿಂದ ಬರುವಂತಹ ಅನುದಾನಗಳನ್ನು ಪಡೆಯಲು ಅಲಕ್ಷಿತ ಮಠಾಧೀಶರ ಸಮುದಾಯದವರ ಒಕ್ಕೂಟ ಎಂಬುದು ಇದೆ. ನಾವೆಲ್ಲಾ ಒಟ್ಟಾಗಿ ಎಲ್ಲ ಮಠಾಧೀಶರು ಸೇರಿ ಸರಕಾರದಿಂದ ಅನುದಾನ ಬಿಡುಗಡೆ ಮಾಡಿಸಿಕೊಂಡು ಬರುವುದು, ಸಮುದಾಯದ ಅಭಿವೃದ್ಧಿ, ಮಠದ ಅಭಿವೃದ್ಧಿಗೆ ಅನುದಾನವನ್ನು ಬಳಸಿಕೊಳ್ಳುತ್ತೇವೆ. ಹಾಗೆಯೇ ಮೇಲ್ವರ್ಗದವರ ಮಠಗಳಾದ ಲಿಂಗಾಯತ, ಬ್ರಾಹ್ಮಣರು, ಮಠಗಳೊಂದಿಗೆ ಒಡನಾಟಗಳು ಅಷ್ಟೇನು ಇಲ್ಲ ಎಂದು ಹೇಳುತ್ತಾರೆ. ವೇದ-ಉಪನಿಷತ್ತು ಇದಾವೆ ಅಲ್ಲ, ಅವು ಬ್ರಾಹ್ಮಣರವಲ್ಲ ಅವು ಹೊಲೆಯ, ಮಾದಿಗ, ಹಿಂದುಳಿದವರ ಅನುಭವಗಳು ಎಂದು ಹೇಳುತ್ತಾರೆ. ಅದಕ್ಕೆ ಬಸವನಾಗಿದೇವ ಸ್ವಾಮಿಗಳು ಪ್ರಶ್ನೆ ಮಾಡುತ್ತಾರೆ. ಬ್ರಾಹ್ಮಣರು ಏಕೆ ಅಸ್ಪೃಶ್ಯತೆಯನ್ನು ಹೋಗಲಾಡಿಸಿಲ್ಲ. ಹಾಗೆಯೇ ಈ ಸಮಸ್ಯೆಯನ್ನು ಲಿಂಗಾಯಿತರು ಏಕೆ ಬಗೆಹರಿಸಿಲ್ಲ? ಆದ್ದರಿಂದ ಹಿಂದುಳಿದ ವರ್ಗದವರು ಮತ್ತು ದಲಿತರು ನಿಜವಾದ ಜ್ಞಾನವನ್ನು ನಿಜವಾದ ಕಾಳಜಿಯನ್ನು, ಸಮಾಜದ ಅಭಿವೃದ್ಧಿಯನ್ನು ಹೊಂದಿದ್ದಾರೆ. ಮಠಗಳಲ್ಲಿನ ಮಠಾಧೀಶರು ಮುಂದೆ ಬಂದರೆ ಇಂತಹ ಜನ ಸುಧಾರಣೆಯಾಗುವುದರಲ್ಲಿ ಯಾವುದೇ ಅನುಮಾನವಿಲ್ಲ. ಮಾಜಿ ರಾಷ್ಟ್ರಪತಿಗಳಾದ ಅಬ್ದುಲಾ ಕಲಾಂ ಅವರು ಹೇಳುವಂತೆ ಬುದ್ಧಿವಂತಿಕೆಯ ಜೊತೆಗೆ ಆಧ್ಯಾತ್ಮಿಕತೆ ಬೇಕು ಅಂತ. ಆಧ್ಯಾತ್ಮಿಕತೆ ಹೆಚ್ಚಿದರೆ ಸುಳ್ಳು ಹೇಳುವವನು ಬದಲಾವಣೆಯಾಗಿರುವುದೇ ಆಧ್ಯಾತ್ಮ. ಬುದ್ಧ ಬಸವಣ್ಣ ಮಾಡಿದ್ದು ಅದನ್ನೆ ಎಲ್ಲ ದೇವ ಮಾನವರು ಮಾಡುವುದು ಅದನ್ನೆ ದೇವರನ್ನು ನಂಬುವ ಹಾಗೆ ಮಾಡಬಹುದು. ನಂಬದಹಾಗೆ ಮಾಡಬಹುದು. ಒಟ್ಟಿನಲ್ಲಿ ನಾನು ನನ್ನ ಸಮುದಾಯ ನನ್ನ ಮುಕ್ತ ಸಮಾಜದಲ್ಲಿ ಮುಂದೆವರೆಯಲು ಸಾಮರ್ಥ್ಯವನ್ನು ಹೆಚ್ಚು ಮಾಡುವುದಾಗಿದೆ.

ಒಟ್ಟಿನಲ್ಲಿ ಅಲಕ್ಷಿತ ಮಠಗಳು ಈ ನಿಟ್ಟಿನಲ್ಲಿ ಜಾಗೃತಿಯನ್ನು ಹಾಗು ಸವಾಲುಗಳನ್ನು ಸ್ವೀಕರಿಸಬೇಕಾಗಿದೆ.

ಅಲಕ್ಷಿತ ಸಮುದಾಯದ ಜನರ ಮುಗ್ಧತೆ ಮತ್ತು ಅಮಾಯಕತೆಯನ್ನು ಬಂಡವಾಳ ಮಾಡಿಕೊಳ್ಳುವ ಬುದ್ಧಿವಂತಿಕೆ ಮೇಲ್ವರ್ಗದ ಸಮುದಾಯಗಳ ಮಠಗಳು ಮತ್ತು ಧಾರ್ಮಿಕ ಕೇಂದ್ರಗಳು ಮಾಡುತ್ತಿವೆ. ಅದರಿಂದ ತಮ್ಮ ಸಮುದಾಯದ ಚರಿತ್ರೆ, ಸಂಸ್ಕೃತಿಯ ಪರಂಪರೆಯ ಬಗ್ಗೆ ಗೊತ್ತಿರದೆ ಜನಸಮುದಾಯಗಳ ನಂಬಿಕೆಯನ್ನು ಮುಂದುವರಿದ ಮಠಗಳು ತಮ್ಮ ಹಿತಕ್ಕಾಗಿ ದುರ್ಬಳಕೆ ಮಾಡಿಕೊಳ್ಳುತ್ತಿರುವುದನ್ನು ನಾವು ನೋಡಬಹುದು. ಹಾಗೆಯೇ ನಮ್ಮ ಅಸ್ತಿತ್ವವನ್ನು ತೋರಿಸಬೇಕಾದ ಅನಿವಾರ್ಯತೆ ಇದೆ.

ಈಗಾಗಲೇ ಉನ್ನತ ಸ್ಥಾನದಲ್ಲಿರುವ ಮಠಗಳಂತೆ ಸಾಂಸ್ಕೃತಿಕ ಆಚರಣೆ, ಪೂಜೆ, ಯಜ್ಞಯಾಗಾದಿಗಳನ್ನು ಮಾಡುವಂತಹ ಮಠಗಳು ಇವಾಗದೇ, ನಿರ್ಲಕ್ಷಿತರ ಸಂವಿಧಾನಾತ್ಮಕ ಹಕ್ಕು ಬಾಧ್ಯತೆಗಳನ್ನು ಕೇಳುವುದನ್ನು ಮತ್ತು ಸಮುದಾಯಗಳು ಪ್ರಶ್ನಿಸುವಂತಹ ಕೆಲಸ ಮಾಡಬೇಕಾಗಿದೆ.

ಅಲಕ್ಷಿತ ಮಠಗಳು ಬಹಳ ಮುಖ್ಯವಾಗಿ ಸಮುದಾಯದವರಿಗೆ ಶಿಕ್ಷಣವನ್ನು ನೀಡಬೇಕಾದ ಅನಿವಾರ್ಯತೆ ಬಹಳ ಇದೆ. ಹಾಗೆಯೇ ಮಠಗಳಿಗೆ ಲಭ್ಯವಿರುವ ಸವಲತ್ತುಗಳನ್ನು ಪಡೆಯುವ ಮಾಹಿತಿಯನ್ನು ಕ್ರೋಢೀಕರಿಸಬೇಕಾಗಿದೆ.

ಚುನಾವಣೆ, ರಾಜಕಾರಣ ಇವು ಕೇವಲ ದೇಶಕ್ಕೆ ಸೀಮಿತವಾಗಿ ಬಿಟ್ಟರೆ ಅಲಕ್ಷಿತ ಸಮುದಾಯಗಳು ಇವುಗಳಿಗೆ ಬಳಕೆಯಾಗುವುದನ್ನು ತಡೆಯಬೇಕಾಗಿದೆ. ಸಮಾಜದಲ್ಲಿ ಅಲಕ್ಷಿತರನ್ನು ಶಕ್ತಿಯಾಗಿ ನಿಲ್ಲುವಂತೆ ಮಾಡಬೇಕಾದ ಮತ್ತು ರಾಜ್ಯ ರಾಜಕಾರಣದಲ್ಲಿ ಶಕ್ತಿಯಾಗಿ ರೂಪುಗೊಳ್ಳುವಂತೆ ಈ ಮಠಗಳು ಕಾರ್ಯ ನಿರ್ವಹಿಸಬೇಕಾಗಿದೆ.

ಅಲಕ್ಷಿತ ಸಮುದಾಯಗಳ ಪರಂಪರಾನುಗತವಾಗಿ ಆಹಾರ ಪದ್ಧತಿಯನ್ನು ಪ್ರಶ್ನಿಸುವ ಈ ಮೇಲ್ವರ್ಗದ ಮಠಗಳಿಗೆ ತಮ್ಮದೇ ಆದಂತಹ ಆಹಾರ ಪದ್ಧತಿಯ ಪರಂಪರೆಯಿಂದ ಸಂಸ್ಕೃತಿಯನ್ನು ತಿಳಿಸುವ ನಿಟ್ಟಿನಲ್ಲಿ ಹಾಗೂ ಅದುವೇ ಶ್ರೇಷ್ಠವೆಂದು ನಿರೂಪಿಸುವ ಪ್ರಯತ್ನ ಮಾಡಬೇಕಾಗಿದೆ. ದಾರಿ ತಪ್ಪಿಸುವ ಪುರೋಹಿತಶಾಹಿಯ ಮನೋಭಾವನೆಗಳನ್ನು ತಳ್ಳಿಹಾಕಬೇಕಾಗಿದೆ.

ಅಲಕ್ಷಿತ ಸಮುದಾಯಗಳು ತಮ್ಮ ಪಾರಂಪರಿಕ ಕುಲಕಸುಬುಗಳನ್ನು ಉಳಿಸಿಕೊಳ್ಳುವ, ಗೌರವಿಸಿಕೊಳ್ಳುವ ಮತ್ತು ಪ್ರಸ್ತುತ ಸಂದರ್ಭಕ್ಕೆ ಹೊಂದಿಕೊಳ್ಳುವಂತೆ ತಯಾರಿಸುವ ಕೌಶಲ್ಯಗಳನ್ನು ಅಭಿವೃದ್ಧಿ ಪಡಿಸುವ ತಂತ್ರಾಂಶಗಳನ್ನೂ ಅಳವಡಿಸಿಕೊಂಡು ಜೊತೆಗೆ ತರಬೇತಿಯನ್ನು ನೀಡಿ ಅದರಲ್ಲಿ ಪರಿಣಿತರಾಗುವಂತೆ ಮಾಡುವುದು ಈ ಮಠಗಳ ಉದ್ದೇಶವಾಗಬೇಕಾಗಿದೆ.

ಅಲಕ್ಷಿತ ಮಠಗಳು ಮೇಲ್ವರ್ಗದವರ ಮಠಾಧೀಶರುಗಳು ಮತ್ತು ಪುರೋಹಿತಶಾಹಿಗಳ ಆಚರಣೆಗಳನ್ನು ಮಾಡದೇ ತಮ್ಮದೇ ಆದ ಸಂಸ್ಕೃತಿ, ಸಂಪ್ರದಾಯ ಆಚರಣೆಗಳನ್ನು ಗೌರವಿಸಿ ರೂಢಿಸಿಕೊಳ್ಳಬೇಕೆಂದು ಸಮುದಾಯದ ಮುಕ್ತ ಸಮಾಜದ ಸರ್ವತೋಮುಖ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದರ ಮೂಲಕ, ಜನಪರ ಯೋಜನೆಗಳನ್ನು ರೂಡಿಸಿಕೊಳ್ಳುವುದರ ಮೂಲಕ ಅಲಕ್ಷಿತ ಸಮುದಾಯಗಳು ಈ ಇಟ್ಟಿನಲ್ಲಿ ಮುಂದಾಗಬೇಕಾದ ಅನಿವಾರ್ಯತೆ ಇದೆ.

೯. ಶರಣ ಹರಳಯ್ಯ ಗುರುಪೀಠ, ಶ್ರೀ ಬಸವ ಹರಳಯ್ಯ ಸ್ವಾಮಿ

ಕರ್ನಾಟಕದ ಅಲಕ್ಷಿತ ಮಠಗಳಲ್ಲಿ ಶರಣ ಹರಳಯ್ಯ ಗುರುಪೀಠವೂ ಒಂದಾಗಿದೆ. ೧೨ನೇ ಶತಮಾನದಲ್ಲಿ ಬರುವಂತಹ ಶರಣ ಹರಳಯ್ಯ ಎಂಬ ದಲಿತ ವಚನಕಾರನಾಗಿರುವನು. ಈತ ೧೨ನೇ ಶತಮಾನದಲ್ಲಿ ಸಮುದಾಯ ಅಸಮಾನತೆ, ಅಸ್ಪೃಶ್ಯತೆ ತಾರತಮ್ಯ ನೀತಿಗಳ ಬಗ್ಗೆ ಬಸವಣ್ಣನವರ ಮುಂದಾಳತ್ವದಲ್ಲಿ ಹೋರಾಡಿದರು. ಹಾಗೆಯೇ ಅನೇಕ ವಚನಗಳನ್ನು ರಚನೆ ಮಾಡುವುದರ ಮೂಲಕ ಸಮಾಜದ ಅಸಮಾನತೆ, ಶೋಷಣೆಯ ಕುರಿತಾಗಿ ಮಾತನಾಡಿದ್ದಾರೆ. ಇಂತಹ ಶರಣ ಹರಳಯ್ಯ ಲಿಂಗಾಯತ ಸಮಾಜಕ್ಕೆ ಇವರ ಕೊಡುಗೆ ಮಹತ್ವದ್ದಾಗಿದೆ. ದಲಿತ ಸಮುದಾಯದಲ್ಲಿ ಶರಣ ಪರಂಪರೆ ಹಿನ್ನಲೆಯಲ್ಲಿ ಹುಟ್ಟಿಕೊಂಡ ಮಠಗಳ ಸಾಲಿನಲ್ಲಿ ಹರಳಯ್ಯ ಗುರುಪೀಠವೂ ಒಂದಾಗಿದೆ.

೨೦೦೩ರಲ್ಲಿ ಚಿತ್ರದುರ್ಗದ ಶಿವಮೂರ್ತಿ ಮುರಘಾಶರಣದಿಂದ ದೀಕ್ಷೆಪಡೆದ ಶ್ರೀ ಬಸವಹರಳಯ್ಯ ಸ್ವಾಮೀಜಿ ಸದ್ಯ ಮುರುಘಾ ಮಠದಲ್ಲಿದ್ದಾರೆ. ೨೦೦೯ನೇ ಮೇ ತಿಂಗಳಲ್ಲಿ ಹಿರಿಯೂರಿನ ತಾಲೂಕಿನ ಐಮಂಗಲದಲ್ಲಿ ಶರಣಹರಳಯ್ಯ ಗುರುಪೀಠಕ್ಕೆ ಭೂಮಿಪೂಜೆ ನೆರವೇರಿಸಿದ್ದಾರೆ. ಈ ಮಠದ ಸ್ಥಾಪನೆ ಉದ್ದೇಶ ಈ ಮಠವು ಸಮಾಜ ಜನತೆಯೊಂದಿಗಿನ ಸಂಬಂಧವನ್ನು ಹೇಗೆ ವಿಶ್ವಾಸಪೂರ್ಣವಾಗಿ ತೆಗೆದುಕೊಳ್ಳಬೇಕು. ಹಾಗೆಯೇ ತನ್ನ ಸಮುದಾಯದೊಂದಿಗೆ ಸ್ಪಂದಿಸುವ ಮತ್ತು ಸಂಸ್ಕೃತಿ, ಸಂಪ್ರದಾಯಗಳನ್ನು ವೈಚಾರಿಕಪೂರ್ಣವಾಗಿ ತೆಗೆದುಕೊಂಡು ಹೋಗುವ ಮೊಟ್ಟ ಮೊದಲ ಮಠದ ಆಕಾಂಕ್ಷೆಯಾಗಿದೆ. ಈ ಮಠದ ಸ್ಥಾಪನೆಯೊಂದಿಗೆ ತನ್ನ ಸಮುದಾಯವನ್ನು ಹಲವು ಯೋಜನೆಗಳನ್ನು ಹಾಕಿಕೊಳ್ಳುವುದರ ಮೂಲಕ ಅಭಿವೃದ್ಧಿಯತ್ತ ಸಾಧಿಸುವ ಮಹತ್ವದ ಗುರಿಯನ್ನು ಹಾಕಿಕೊಂಡಿದೆ. ಹಾಗೆಯೇ ಈ ಗುರುಪೀಠವೂ ಸಮುದಾಯವನ್ನು ಸಾಮಾಜಿಕ, ಶೈಕ್ಷಣಿಕ, ಆರ್ಥಿಕವಾಗಿ ಹಿಂದುಳಿದಿದ್ದೂ ಅದನ್ನು ಧಾರ್ಮಿಕ ನೆಲೆಯೊಳಗೆ ಸಮುದಾಯದಲ್ಲಿ ಐಕ್ಯತೆಯನ್ನು ಮೂಡಿಸಿ ಸಂಘಟಿಸುವ ಪ್ರಯತ್ನ ಮಾಡಲಾಗುವುದು. ಮೊದಲಿಗೆ ಈ ಗುರುಪೀಠವನ್ನು ಪ್ರಾಥಮಿಕ ಸವಲತ್ತುಗಳಿಂದ

ಸರಿಯಾಗಿ ಉಪಯೋಗಿಸಿಕೊಂಡು ಈ ಮಠವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯುವ ಬಹಳ ಮುಖ್ಯವಾದ ಉದ್ದೇಶ ಹಾಗೂ ಧ್ಯೇಯವಾಗಿದೆ. ಶತ-ಶತಮಾನಗಳಿಂದ ಈ ಸಮುದಾಯವು ಶೋಷಣೆಗೆ ಒಳಗಾಗಿ ಸಮಾಜದ ಕಟ್ಟಕಡೆಯ ಸ್ಥಾನದಲ್ಲಿ ಬದುಕುತಿದ್ದಾರೆ. ಅವರನ್ನು ಜಾಗೃತರನ್ನಾಗಿ ಮಾಡುವುದರ ಮೂಲಕ, ಮಹತ್ವದ ಅರಿವು ಮೂಡಿಸುವುದಾಗಿದೆ. ಜೊತೆಗೆ ಸಮುದಾಯ ಅತ್ಮವಿಶ್ವಾಸ ಮತ್ತು ನಂಬಿಕೆಯಿಂದ ಸಮುದಾಯದೊಂದಿಗೆ ತನ್ನ ಮಠ ಸಂಬಂಧವನ್ನು ಮುರಿದು ಕಟ್ಟುವ ಹರಿಣಕಾರನಾಗಿ ಈ ಸಮುದಾಯದೊಂದಿಗೆ ನಿಲ್ಲಬೇಕಾಗಿದೆ. ಒಟ್ಟಿನಲ್ಲಿ ಈ ಅಲಕ್ಷಿತ ಸಮುದಾಯಗಳು ತಮ್ಮ ಸಮುದಾಯದ ಮಠಗಳನ್ನು ಸ್ಥಾಪಿಸಿಕೊಳ್ಳುತ್ತಿರುವುದು ಒಂದು ರೀತಿಯಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯಿಂದ ಪುನಶ್ಚೇತನವೆಂದು ಪರಿಭಾವಿಸಲಾಗಿದೆ. ಅಲಕ್ಷಿತ ಜನರ ಮುಗ್ಧತೆಯನ್ನು ಬಳಕೆ ಮಾಡಿಕೊಳ್ಳುವ ಚಾಣಾಕ್ಷತೆಯನ್ನು ಕೆಲವು ಮುಂದುವರಿದ ಸಮುದಾಯಗಳ ಮಠಗಳು ಮುಕ್ತ ಧಾರ್ಮಿಕ ಕೇಂದ್ರಗಳ ಮಾಡುತ್ತಿರುವುದನ್ನು ಅಸ್ತಿತ್ವಕ್ಕೆ ಬರುತ್ತಿರುವ ಅಲಕ್ಷಿತರ ಮಠಗಳು ಇಂದು ನಿಯಂತ್ರಿಸಬೇಕಿದೆ. ಈ ಸಮಾಜದಲ್ಲಿ ಉತ್ತಮ ಸ್ಥಾನದ ಪದಗ್ರಹಣಕ್ಕೆ ಸಜ್ಜಾಗುವ ಅಲಕ್ಷಿತ, ತನ್ನ ಸಮುದಾಯದಲ್ಲಿ ರೂಢಿಯಲ್ಲಿರುವ ಅನಿಷ್ಟ ಪದ್ಧತಿಗಳಿಂದ ಮುಕ್ತನಾಗುವ ಸಂಕಲ್ಪವನ್ನು ಮಾಡಬೇಕಿದೆ. ವರ್ತಮಾನದ ಶಕ್ತಿರಾಜಕಾರಣದ ಭಾಗವಾಗಿ ಅಪವ್ಯಯವಾಗುವ ಅಲಕ್ಷಿತರ ಶಕ್ತಿಯ ಒಳಗೆ ನಿಲ್ಲಬೇಕಿದೆ. ಅಲಕ್ಷಿತರೇ ರಾಜಕಾರಣದ ಶಕ್ತಿಯಾಗಿ ರೂಪಗೊಳ್ಳುವುದು ಅವಶ್ಯವಿದೆ. ಜಾಗತೀಕರಣದ ಪ್ರಭಾವ ಅಲಕ್ಷಿತರ, ದೈವಾರಾಧನೆ ಮತ್ತು ಆಹಾರ ಸಂಸ್ಕೃತಿಯ ಮೇಲಾಗುತ್ತಿರುವುದನ್ನು ಅಸ್ಮಿತೆಯ ದೃಷ್ಟಿಯಿಂದ ಉಳಿಸಿಕೊಳ್ಳಬೇಕಿದೆ. ಮೌಢ್ಯತೆಯಿಂದ ಯಾವುದೋ ಭ್ರಮೆಗೆ ಒಳಗಾಗಿದ್ದಾರೆ. ಈ ಎಲ್ಲ ನಿಟ್ಟಿನಲ್ಲಿ ಈ ಅಲಕ್ಷಿತ ಸಮುದಾಯಗಳು ಕೆಲಸ ಮಾಡಬೇಕಾದ ಅನಿವಾರ್ಯತೆ ಹಾಗೂ ಅವಶ್ಯವಾಗಿದೆ. ಇಂತಹ ಹಲವು ಆಶೋತ್ತರಗಳನ್ನು ಇಟ್ಟುಕೊಂಡು ಈ ಅಲಕ್ಷಿತ ಮಠಗಳು ತಮ್ಮ ಸಮುದಾಯದ ಅಭಿವೃದ್ಧಿಗೆ ಪ್ರಯತ್ನ ಪಡಬೇಕಾಗಿದೆ. ಮೌಢ್ಯ ತೊರೆದು ವೈಚಾರಿಕತೆ ಕಡೆಗೆ ಸಮುದಾಯ ತರಬೇಕು ಎಂಬ ಹಿನ್ನೆಲೆಯಲ್ಲಿ ಶ್ರೀ ಬಸವ ಹರಳಯ್ಯ ಸ್ವಾಮೀಜಿ ಆಶೋತ್ತರಗಳನ್ನು ಇಟ್ಟುಕೊಂಡಿದ್ದಾರೆ.

೧೦. ಉಪ್ಪಾರ/ಭಗೀರಥ ಪೀಠ

ಚಿನ್ಮೂಲಾದ್ರಿ ಶಿಲಾಪುರಿ ಮಹಾಸಂಸ್ಥಾನ, ಭಗೀರಥ ಪೀಠ

ಉಪ್ಪಾರ ಸಮುದಾಯದ ಮಠವು ಸು.೪೦೦/೫೦೦ ವರ್ಷಗಳ ಹಿಂದೆ ಅಸ್ತಿತ್ವಕ್ಕೆ ಬಂದಿತು. ಈ ಮಠವು ಈಗ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲೂಕಿನ ಮಧುರೆಯ ಪಕ್ಕದಲ್ಲಿರುವ ಬ್ರಹ್ಮ ವಿದ್ಯಾನಗರದಲ್ಲಿ ಸ್ಥಾಪಿತವಾಗಿದ್ದು, ದಾವಣಗೆರೆ, ಬೆಳಗಾವಿ, ನಾಗನೂರು ಮತ್ತು ಬೆಂಗಳೂರಿನಲ್ಲಿ ಒಟ್ಟು ತನ್ನ ಮೂರು ಶಾಖಾ ಮಠಗಳನ್ನು ಹೊಂದಿದೆ.

೨೦೧೬ ಫೆಬ್ರವರಿ/ಮಾರ್ಚ್ ತಿಂಗಳಲ್ಲಿ ಕ್ಷೇತ್ರಕಾರ್ಯಕ್ಕೆ ಉಪ್ಪಾರ ಭಗೀರಥ ಪೀಠದ ಪುರುಷೋತ್ತಮಾನಂದ ಪುರಿ ಮಹಾ ಸ್ವಾಮಿಗಳನ್ನು ಸಂದರ್ಶಿಸಿ, ಉಪ್ಪಾರ ಸಮುದಾಯದ ಈ ಮಠದ ಅಸ್ತಿತ್ವದ ಚರಿತ್ರೆ ಮತ್ತು ಅದರ ಬೆಳವಣಿಗೆ ಹಾಗೂ ಸಮುದಾಯ ಮತ್ತು ಸಮಾಜದ ಇತರ ಸಮುದಾಯಗಳ ಅಭಿವೃದ್ಧಿಯನ್ನು ಕುರಿತಾಗಿ ಕೈಗೊಂಡ ಸಾಮಾಜಿಕ ಹಾಗೂ ಧಾರ್ಮಿಕ ಕಾರ್ಯ ಚಟುವಟಿಕೆಗಳನ್ನು ಕುರಿತಾದ ಮಾಹಿತಿಯನ್ನು ಸಂಗ್ರಹಿಸಿಕೊಳ್ಳಲಾಗಿದೆ. ಇಂದಿನ ಮಠಾಧೀಶ್ವರರಾದ ಶ್ರೀ ಪುರುಷೋತ್ತಮಾನಂದಪುರಿ ಮಹಾಸ್ವಾಮಿಗಳ ದೃಷ್ಟಿಯಲ್ಲಿ ಸಮುದಾಯದ ಸಾಂಸ್ಕೃತಿಕ ಅನನ್ಯತೆಯನ್ನು ಪೋಷಿಸಿ ಬೆಳೆಸಲು ಮತ್ತು ಸಮುದಾಯದ ಸಮಗ್ರ ಅಭಿವೃದ್ಧಿಗಾಗಿ ಅವರು ತೆಗೆದುಕೊಂಡ ಕ್ರಮಗಳೇನು ಎಂಬುದನ್ನು ಇಲ್ಲಿ ದಾಖಲಿಸಲಾಗಿದೆ.

ಪುಣ್ಯಾನಂದ ಪುರಿಸ್ವಾಮಿಗಳು ಹೇಳುವಂತೆ ೧೨ ಜನ ಗುರುಗಳು ಸಿಂಹಾಸನಾಧೀಶ್ವರರು ಆಗಿಹೋಗಿದ್ದಾರೆ. ಪದ್ಮ ಮಹರ್ಷಿಗಳು ಮೂಲ ಪುರುಷರಾಗಿದ್ದಾರೆ. ಆರಾಧ್ಯ ದೈವ ಚನ್ನಕೇಶವ-೧೨ನೇ ಲೇಪಾಕ್ಷ ಮಹಾಸ್ವಾಮಿಗಳು, ಈ ಪೀಠಕ್ಕೆ ಮುಖ್ಯರಾಗಿದ್ದಾರೆ. ನಿಜಲಿಂಗಪ್ಪ ಅವರು-೫೦೦ ಎಕರೆ ಜಮೀನು ಸರಕಾರದಿಂದ ಮಠದ ಸಂಸ್ಥಾಪನೆಗೆ ಭೂಮಿಯನ್ನು ನೀಡಿದರು. ಮೊದಲು ೧೦೦ ಕುಟುಂಬದ ಜನರನ್ನು ಕರೆತಂದು ಇವರಿಗೆ ಕೃಷಿ ಕೂಲಿ ಕೊಟ್ಟು ಜಮೀನನ್ನು ಸ್ವಚ್ಛಗೊಳಿಸಿ ಮಠ ಕಟ್ಟಿದರು ಮತ್ತು ೧೯೭೩-೭೪ರಲ್ಲಿ. ಶಿಕ್ಷಣ ಸಂಸ್ಥೆಯನ್ನು ಕಟ್ಟಿದರು.

೧೩ನೇ ಮಹಾಸ್ವಾಮಿಗಳು ಪುಣ್ಯಾನಂದ ಪುರಿಗಳು. ಮೊದಲು ಈ ಪೀಠ ಚಿತ್ರದುರ್ಗದಲ್ಲಿ ಇತ್ತು ಎಂದು ಚರಿತ್ರೆ ಹೇಳುತ್ತದೆ. ಕುರುಬನಕಟ್ಟೆಯಲ್ಲಿತ್ತು. ತಿ೦೦ಗಳ ನಂತರ ಉಪ್ಪಾರಟ್ಟಿಗೆ ವರ್ಗವಾಯಿತು. ನಂತರ ನಾಯಕನಹಟ್ಟಿಯ ಕೆರೆಯಲ್ಲಿ ಕಟ್ಟಲಾಯಿತು. ಈಗಲೂ-ಪೂರ್ವ ಪೀಠಕ್ಕೆ ಹೋಗುತ್ತೇವೆ. ಅಲ್ಲಿ ಗದ್ದಿಗಳಿವೆ. ಚನ್ನಕೇಶವ ದೇವಾಲಯ ಅಲ್ಲಿಯೇ ಇದೆ. ಲೇಪಾಕ್ಷ ಮಹಾಸ್ವಾಮಿಗಳು ಭಕ್ತರ ಅಪೇಕ್ಷೆ ಮೇರೆಗೆ ಆಡವೇಶ್ವರ ಪುಣ್ಯಕ್ಷೇತ್ರಕ್ಕೆ ಬಂದು ನೆಲಸಿದರು. ೩೫೦/೪೦೦ ವರ್ಷಗಳ ನಂತರವೂ ಈ ಮಹಾತ್ಮರ)ಜೀವಂತ ಸಮಾದಿ ಇದೆ) ಹೇಳಿದ ಮಾತಿಗೆ ಈ ಕಾಡಿನಲ್ಲಿ ಸ್ವಚ್ಛಗೊಳಿಸಿ ಇಲ್ಲಿಯೇ ಮಠವನ್ನು ಸ್ಥಾಪಿಸಿದರು. ಈ ಸಂದರ್ಭದಲ್ಲಿ ಲೇಪಾಕ್ಷ ಸ್ವಾಮಿಗಳು ನಿಜಲಿಂಗಪ್ಪನವರಿಗೆ ನಾನು ಇಲ್ಲಿ ಮಠ ಸ್ಥಾಪಿಸಬೇಕೆಂದಿದ್ದೇನೆ. ಮುಖ್ಯಮಂತ್ರಿಗಳಾದ ತಾವು ಜಮೀನಿನ ಸಹಾಯ ಮಾಡಬೇಕೆಂದು ಸ್ವಾಮಿಗಳು ಕೇಳಿಕೊಂಡರು. ಈ ಕೋರಿಕೆಗೆ ಇದಕ್ಕೆ ನಿಜಲಿಂಗಪ್ಪನವರು ಸ್ಪಂದಿಸಿದರು. ಭಕ್ತರನ್ನು ಸೇರಿಸಿ ಹೊಸದಾಗಿ ಬ್ರಹ್ಮಾನಂದ ನಗರ ಎಂದು ನಾಮಕರಣ ಮಾಡಿ ಜಮೀನನ್ನು ಸ್ವಚ್ಛಮಾಡಿದರು. ನಂತರ ಸಾಮೂಹಿಕವಾಗಿ ಕೃಷಿ ಪದ್ಧತಿಯನ್ನು ಮಾಡಬೇಕೆಂದು ರೈತಾಪಿ

ಕಾರ್ಮಿಕರಿಗೆ ಕೆಲಸಕೊಟ್ಟು-ಅನ್ನ, ವಸತಿ ವ್ಯವಸ್ಥೆಯನ್ನು ಮಾಡಿದರು. ಸ್ವಾಮಿಗಳು ಸಹಕಾರ ತತ್ವದಡಿಯಲ್ಲಿ ಕೂಡು ಒಕ್ಕಲು ಮಾಡಿಕೊಂಡು ಎಲ್ಲರನ್ನು ಸಲುಹಿದರು.

ಸ್ವಾಮಿಗಳು ೧೫-೨೦ ವರ್ಷ ಜೋಳಿಗೆ ಹಾಕಿಕೊಂಡು ಎಲ್ಲರನ್ನು ಸಾಕಿದರು. ಅವರಿಗೆ ೧-೨ ಎಕರೆ ಜಮೀನು ನೀಡಿ ರೈತರಿಗೆ ಸಹಾಯ ಮಾಡಿದರು. ೧೯೭೩-೭೪ರಲ್ಲಿ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ ಅದು ಶ್ರೀ ಪ್ರಿಯ ಜಗದ್ಗುರು ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿದರು. ಅವು ಚಿಕ್ಕಮಂಗಳೂರು, ಶಿವಮೊಗ್ಗ ಜಿಲ್ಲೆಗಳಲ್ಲಿ ಅನೇಕ ಶಿಕ್ಷಣ ಕೇಂದ್ರಗಳು ಬಿ.ಇಡಿ., ಡಿ.ಇಡಿ., ಪಿ.ಯು.ಸಿ ಕಾಲೇಜುಗಳನ್ನು ತೆರೆಯಲಾಯಿತು. ಗ್ರಾಮೀಣ ಭಾಗದಲ್ಲಿ ಜನರ ಜಾಗೃತಿಯನ್ನು ಮೂಡಿಸಲು ಕಾರ್ಯಕ್ರಮಗಳನ್ನು ಹಾಕಿಕೊಂಡವು. ೧೯೯೭ರಲ್ಲಿ ಪುರುಷೋತ್ತಮಾನಂದಪುರಿ ಮಹಾಸ್ವಾಮಿಗಳಿಗೆ ಪಟ್ಟಾಭಿಷೇಕವಾಯಿತು. ೧೯೯೯ರಲ್ಲಿ ಲೇಪಾಕ್ಷಿ ಮಹಾಸ್ವಾಮಿಗಳು ಲಿಂಗೈಕ್ಯರಾದರು ಎಂದು ಮಹಾಸಂಸ್ಥಾನದ ಪೀಠಾಧೀಶ್ವರರಾದ ಪುಣ್ಯಾನಂದಸ್ವಾಮಿಗಳು ಹೇಳಿದರು.

ಈ ಹಿಂದೆ ಉಪ್ಪಾರರು ಚೋಳದ ಉಪ್ಪನ್ನು ತಯಾರಿಸುತ್ತಿದ್ದರು. ಅಲ್ಲದೆ ಕೆರೆದಂಡೆ ಮತ್ತು ಮಾಳಿಯಲ್ಲಿ ಉಪ್ಪನ್ನು ತಯಾರಿಸುತ್ತಿದ್ದರು. ಆದ್ದರಿಂದ ಇವರನ್ನು ಉಪ್ಪಾರ ಎಂದು ಕರೆಯುತ್ತಾರೆ. ಅಲ್ಲದೆ ಬೇರೆ ಬೇರೆ ರಾಜ್ಯಗಳಲ್ಲಿ ಇವರಿಗೆ ಮೆಲು ಸಕ್ಕರೆ ಶೆಟ್ಟರು, ಲೊನಾರಿ, ಅಂತ ಕರಿತಾರೆ. ಈ ಉಪ್ಪನ್ನು ಮಾರಿ ಜೀವನ ಮಾಡುತ್ತಿದ್ದರು. ಬ್ರಿಟೀಷರು ಈಸ್ಟ್ ಇಂಡಿಯಾ ಕಂಪನಿ ಸ್ಥಾಪಿಸಿದ ಮೇಲೆ ಅವರು ಈ ಉಪ್ಪಿನ ಮೇಲೆ ನಿಷೇಧ ಹೇರಿದರು. ಅಲ್ಲದೆ ಅವರು ತಮ್ಮ ಸಮುದ್ರದ ಉಪ್ಪನ್ನು ಜಾರಿಗೆ ತಂದರು. ಮಹಾರಾಷ್ಟ್ರದಲ್ಲಿ ಲೊನಾರಿ, ಆಂಧ್ರ-ಸಗರ, ಗುಜರಾತಿನಲ್ಲಿ ಅಗೇರೆ ಅಂತ ಬೇರೆ ಬೇರೆ ಹೆಸರಿನಿಂದ ಕರೆಯುತ್ತಾರೆ. ಈಗ ಅವರನ್ನು ಕಲ್ಲು ಉಪ್ಪಾರ, ಮಣ್ಣು ಉಪ್ಪಾರ, ಗಾರೆ ಉಪ್ಪಾರ ಅಂತ ಕರೆಯುವುದೆ ಚಾಲ್ತಿಯಲ್ಲಿದೆ. ಅಲ್ಲದೆ ಇವರು ಬದುಕನ್ನು ಕಟ್ಟಿಕೊಳ್ಳಲಿಕ್ಕೆ ಅನೇಕ ವೃತ್ತಿಗಳನ್ನು ಅಂದರೆ ಗೋಡೆ ಕಟ್ಟುವುದು, ಕಲ್ಲು ಒಡೆಯುವುದು ಮಾಡುತ್ತಾ ಜೀವನ ನಡೆಸುತ್ತಿದ್ದಾರೆ. ಈಗ ಸಮುದಾಯ ಪ್ರವರ್ಗ ೧ರಲ್ಲಿ ಬರುತ್ತದೆ. ಈ ಸಮುದಾಯಕ್ಕೆ ಸರಕಾರದಿಂದ ಯಾವುದೇ ರೀತಿಯ ಸೌಲಭ್ಯಗಳು ಸಿಗುತ್ತಿಲ್ಲ. ಅದೇ ರೀತಿ ಎಲ್ಲ ಸಮುದಾಯಗಳ ಸ್ಥಿತಿಯೂ ಆಗಿದೆ. ಪುಣ್ಯಾನಂದ ಪುರಿಯವರ ೫ನೇ ಪಟ್ಟಾಭಿಷೇಕದ ವರ್ಷಾಚರಣೆ ಸಂದರ್ಭಕ್ಕೆ ಬಂಗಾರಪ್ಪನವರು, ಧರ್ಮಸಿಂಗ್, ವೀರಪ್ಪ ಮೊಯಿಲಿ ಅವರು ಬಂದಿದ್ದು ವಿಶೇಷ. ಇಡೀ ಹಿಂದುಳಿದ ಮಠಗಳ ಎಲ್ಲಾ ಪೀಠಾಧಿಪತಿಗಳು ಸೇರಿ ಮುಖ್ಯಮಂತ್ರಿ ಸಿದ್ರಾಮಯ್ಯ ಅವರಿಗೆ ಎಲ್ಲಾ ಮಠಗಳಿಗೆ

೧೦೦ ಕೋಟಿ ರೂಪಾಯಿ ಅನುದಾನ ಬಿಡುಗಡೆ ಮಾಡಬೇಕು ಎನ್ನುವ ಆಗ್ರಹಿಸುವಲ್ಲಿ ಪುಣ್ಯಾನಂದ ಪುರಿಗಳು ಪ್ರಮುಖ ಪಾತ್ರವಹಿಸಿದ್ದನ್ನು ನೋಡುತ್ತೇವೆ. ಬಡ ಮಕ್ಕಳಿಗೆ ಹೆಚ್ಚು ಶಿಕ್ಷಣಕ್ಕೆ ಆದ್ಯತೆ ಕೊಡುವಂತೆ ಜನಜಾಗೃತಿಯನ್ನು ಮೂಡಿಸುವಲ್ಲಿ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದೇವೆ. ಅಲ್ಲದೆ ನಮ್ಮ ಮಠಗಳಲ್ಲಿ ಮಕ್ಕಳಿಗೆ ಉಚಿತ ಶಿಕ್ಷಣ ಕೊಡುವಂತ ವ್ಯವಸ್ಥೆಯನ್ನು ಮಾಡಿದ್ದೇವೆ. ಅವರಿಗೆ ಬಟ್ಟೆ, ಪುಸ್ತಕ, ಪೆನ್ನು, ನೋಟ್‌ಬುಕ್ ಕೊಡುವಂತ ಕೆಲಸ ಈ ಮಠದ ವತಿಯಿಂದ ಮಾಡುತ್ತಿದ್ದೇವೆ. ಯಾದಗಿರಿ ಜಿಲ್ಲೆಯ ಸೈದಾಪುರ ಮತ್ತು ರಾಯಚೂರಿನಲ್ಲಿ ಶಾಖಾಮಠ ಸ್ಥಾಪಿಸಲು ತಯಾರಿ ನಡೆಸಿದ್ದೇವೆ.

ದಾವಣಗೆರೆಯಲ್ಲಿ ಶಾಖಾಮಠ, ಗೋಕಾಕ್ ನಾಗನೂರಿನಲ್ಲಿ ಒಂದು ಶಾಖಾಮಠ, ಬೆಂಗಳೂರು, ನಾಯಕನಹಟ್ಟಿ, ಚನ್ನೈ, ಅನಂತಪುರದಲ್ಲಿ ಶಾಖಾ ಮಠಗಳನ್ನು ಸ್ಥಾಪಿಸಿ ಅಲ್ಲಿ ಜನಜಾಗೃತಿ, ಶಿಕ್ಷಣ, ಮೂಢನಂಬಿಕೆಗಳನ್ನು ಕುರಿತು ಅರಿವು ಮೂಡಿಸುವಲ್ಲಿ ಕಾರ್ಯಕ್ರಮಗಳನ್ನು ಮಠದ ವತಿಯಿಂದ ಹಮ್ಮಿಕೊಂಡಿದ್ದೇವೆ. ಈ ಸಮುದಾಯವು ಮೀಸಲಾತಿಗೆ ಒಳಪಡಬೇಕೆಂದು ಹಿಂದುಳಿದ ವರ್ಗಗಳ ಆಯೋಗಗಳು ಹಾವನೂರು ಆಯೋಗ, ಚಿನ್ನಪ್ಪರೆಡ್ಡಿ ಆಯೋಗ, ವೆಂಕರೆಡ್ಡಿ ಆಯೋಗ ಎಲ್ಲ ಆಯೋಗಗಳು ಒತ್ತಾಯಿಸಿವೆ. ನಾವು ಸರಕಾರದ ಮೇಲೆ ಒತ್ತಡ ಹೇರಿದ್ದೇವೆ. ರಾಜಕೀಯವಾಗಿ ಶಾಸಕರು ಚಾಮರಾಜ ನಗರದಲ್ಲಿ ಪುಟ್ಟರಂಗಶೆಟ್ಟಿ, ಯಂಕೋಬ ಅಂತ ಬಳ್ಳಾರಿಯವರು ನಿಗಮ ಮಂಡಳಿಯಲ್ಲಿ ಅಧ್ಯಕ್ಷರಾಗಿ ಸ್ಥಾನ ಪಡೆದಿದ್ದಾರೆ. ಜಿಲ್ಲಾ ಪಂಚಾಯ್ತಿಯಲ್ಲಿ ೧೩ ಜನ ಆಯ್ಕೆ. ತಾಲೂಕು ಪಂಚಾಯ್ತಿಗಳಲ್ಲಿ ೫೦ ಜನ ಸದಸ್ಯರು ಆಯ್ಕೆ ಆಗಿದ್ದಾರೆ. ಕರ್ನಾಟಕ ರಾಜ್ಯ ಉಪ್ಪಾರ ಸಂಘ, ಉಪ್ಪಾರ ಯುವಜನ ಸಂಘ, ಉಪ್ಪಾರ ಮಹಿಳಾ ಸಂಘಗಳು ಸ್ಥಾಪನೆಯಾಗಿವೆ.

ಶೈಕ್ಷಣಿಕವಾಗಿ ಸಮುದಾಯ ಸರಕಾರಿ ವರದಿ-೭೫ ಅಂತ. ಆದರೆ ನಮ್ಮ ಅರಿವಿಗೆ ಬಂದಂತೆ ಇದು ಕೇವಲ ೪೫ರಷ್ಟು ಶಿಕ್ಷಣ ಪಡೆದವರಾಗಿದ್ದಾರೆ. ಆದ್ದರಿಂದ ಸರಕಾರ ಈ ಸಮುದಾಯಕ್ಕೆ ಹೆಚ್ಚಿನ ಸೌಲಭ್ಯಗಳನ್ನು ನೀಡಬೇಕು ಎಂಬುದು ನಮ್ಮ ಆಶಯವಾಗಿದೆ. ಆದ್ದರಿಂದ ಈ ಉಪ್ಪಾರ ಸಮುದಾಯ ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕೆಂದು ಸಮಾಜದ ಮುಖಂಡರೆಲ್ಲರು ರಾಜ್ಯ ಸರಕಾರಕ್ಕೆ ಒತ್ತಡ ಹೇರಿದ್ದೇವೆ. ಹಾಗೆ ರಾಜ್ಯ ಸರಕಾರವು ಕೇಂದ್ರ ಸರಕಾರಕ್ಕೆ ಈ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕೆಂದು ಒತ್ತಡ ಹೇರಿದ್ದೇವೆ.

ಎಲ್ಲ ಜಯಂತಿ ಮಾಡುವಂತೆ-ಮೇ ೧೩ನೇ ತಾರೀಖು ಭಗೀರಥ ಜಯಂತಿ ಮಾಡುವಂತೆ ಸರಕಾರವನ್ನು ಕೋರಿದ್ದೇವೆ. ಅದಕ್ಕೆ ಸರಕಾರ ಸಕಾರಾತ್ಮಕವಾಗಿ ಸ್ಪಂಧಿಸಿದೆ. ಈ ಸಮುದಾಯದ ಅಭಿವೃದ್ಧಿಗೆ ಸರಕಾರ ಅನುದಾನ ಬಿಡುಗಡೆ ಮಾಡಬೇಕು ಎಂದು ಕೋರಿಕೊಂಡಿದ್ದೇವೆ.

ಬಡವರಿಗೆ ಮಠದ ವತಿಯಿಂದ ಸಾಲ–ಸೌಲಭ್ಯವನ್ನು, ಬಡವರಿಗೇನಾದೂ ಕೊಟ್ಟಿದ್ದೀರಾ ಎಂದು ಸಂಶೋಧಕರ ಪ್ರಶ್ನೆಗೆ ಸ್ವಾಮಿಗಳು. "ನಾವು ಅವರಿಗೆ ಹಣದ ರೀತಿಯಲ್ಲಿ ಬಡವರಿಗೆ ಸಾಲ ನೀಡಿಲ್ಲ. ಬದಲಿಗೆ ಮಠದ ವತಿಯಿಂದ ಅವರಿಗೆ ಸಾವಯವಕೃಷಿಗೆ ಉತ್ತೇಜನ ನೀಡಲು ಪ್ರೋತ್ಸಾಹಿಸುತ್ತೇವೆ. ಹನಿ ನೀರಾವರಿ ಮತ್ತು ತೋಟಗಾರಿಕೆ ಹಾಗೂ ಹೈನುಗಾರಿಕೆಯ ಬಗೆಗೆ ರೈತರಿಗೆ ತರಬೇತಿ ನೀಡುವಂತ ವ್ಯವಸ್ಥೆ ಮಾಡಿದ್ದೇವೆ. ರೈತರಿಗೆ ಸಾವಯವ ಕೃಷಿಯ ಬಗೆಗೆ ಮತ್ತು ಕೊಟ್ಟಿಗೆ ಗೊಬ್ಬರದ ಬಗೆಗೆ ಅರಿವು ಮೂಡಿಸುವಂತ ಕಾರ್ಯ ಮತ್ತು ಕ್ಯಾಂಪ್‌ಗಳನ್ನು ನಡೆಸುತ್ತಿದ್ದೇವೆ. ೪೫ ಎಕರೆ ದಾಳಿಂಬೆ ೩೫ ಅಡಿಕೆ ಸಿರಿದಾನ್ಯಗಳ ರಾಗಿ, ನವಣೆ, ಜೋಳ, ಬಗೆಗೆ ಅರಿವು ಮೂಡಿಸುವಂತೆ ಮಾಡಲು ಬೆಂಗಳೂರಿನ ಕೃಷಿ ವಿಜ್ಞಾನಿಗಳನ್ನು ಕರೆಯಿಸಿ ತರಬೇತಿಯನ್ನು ಕೊಡಿಸುತ್ತೇವೆ" ಎಂದು ಹೇಳಿದರು. ರಾಸಾಯನಿಕ ಮತ್ತು ಕೃಷಿ ನಾಶಕವನ್ನು ಸಿಂಪಡಿಸದೆ ಎಚ್ಚರವಹಿಸಿ ಎಂದು ಜನರಿಗೆ ಅರಿವು ಮೂಡಿಸುವಲ್ಲಿ ಮಠದ ವತಿಯಿಂದ ಅನೇಕ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.

ತರಬೇತಿಯನ್ನು ಬೆಂಗಳೂರಿನ ಹೆಬ್ಬಾಳದಲ್ಲಿ ಕೊಡಲಾಗಿದೆ. ಹೈನುಗಾರಿಕೆ ಕುರಿತು ತರಬೇತಿ ನೀಡಿದ್ದೇವೆ. ಕೊಟ್ಟಿಗೆ ಗೊಬ್ಬರ ಮತ್ತು ಸಾವಯವಗೊಬ್ಬರದ ಅರಿವು ಮೂಡಿಸುತ್ತೇವೆ. ಎನ್.ಜಿ.ಓ.ಗಳ ಮೂಲಕ ಸಾಮಾಜಿಕ ಅರಿವು, ಪರಿಸರ ಕುರಿತು ಮಾಹಿತಿ, ರಕ್ತದಾನ ಶಿಬಿರ ಹಾಗೂ ವೃದ್ಧರಿಗೆ ಕಣ್ಣಿಗೆ ಆಪರೇಷನ್ ಮಾಡಿಸುವಂತದ್ದನ್ನು ಮಾಡುತ್ತಿದ್ದೇವೆ. ಭಕ್ತರು ಮಠಕ್ಕೆ ತುಂಬ ಸಹಕಾರ ನೀಡುತ್ತಾರೆ. ಬಾಗಲಕೋಟೆ, ಬೆಳಗಾವಿ, ಗೋಕಾಕ, ಗಂಗಾವತಿ, ಸಿಂಧನೂರು ಪ್ರದೇಶಗಳಿಂದ ಕಾಣಿಕೆ ರೊಟ್ಟಿ, ಬೆಲ್ಲ, ಕಾಳು ಕಡಿ ಕೊಟ್ಟು ಸಹಕಾರ ನೀಡುತ್ತಾರೆ. ಬಾಗಲಕೋಟೆಯಲ್ಲಿ ಭಗೀರಥಕಾರ್ಯಕ್ರಮ ಮಾಡಿದಾಗ ಭಕ್ತರು ೨೦೦೦ ರೊಟ್ಟಿ ಕೊಟ್ಟರು. ಪುರುಷೋತ್ತಮಾನಂದ ಪುರಿಗಳು ಶಿಕ್ಷಣವನ್ನು ಮಾತಾಡಿಯೇ ಪಡೆದಿದ್ದಾರೆ. ಅನೇಕ ಶಿಕ್ಷಣ ಸಂಸ್ಥೆಗಳನ್ನು ಇವರು ನಡೆಸಿಕೊಂಡು ಹೋಗುತ್ತಿದ್ದೇವೆ. ಪ್ರತಿ ೨ ವರ್ಷಕ್ಕೊಮ್ಮೆ ಜಾತ್ರೆ ನಡೆಸಲು ಉದ್ದೇಶಿಸಿದ್ದೇವೆ. ಶಿವಪುರಿ ಮಹಾಸ್ವಾಮಿಗಳು ಉತ್ತರಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದರು. ಬೆಂಗಳೂರಿನ ಕೈಲಾಸ ಆಶ್ರಮ, ಕೆಂಗೇರಿಯಲ್ಲಿದೆ. ತಿರುಚಿ ಮಹಾಸ್ವಾಮಿಗಳನ್ನು ಉತ್ತರಾಧಿಕಾರಿಯನ್ನಾಗಿ ಮಾಡಿಕೊಂಡಿದ್ದರು. ಶಿವಪುರಿ ಮಹಾಸ್ವಾಮಿಗಳೇ ಪುರ್ಣಾನಂದಪುರಿ ಸ್ವಾಮಿಗಳಿಗೆ ಆಧ್ಯಾತ್ಮ ಶಿಕ್ಷಣ ನೀಡಿದವರು. ಶೋಷಿತ, ಹಿಂದುಳಿದ ಮಠಗಳಿಗೆ ಪೀಠಗಳನ್ನು ಕೊಟ್ಟವರು. ೩೦ ವರ್ಷಗಳವರೆಗೆ ಮಠದ ಮತ್ತು ಜನರ ಸೇವೆಯನ್ನು ಮಾಡಿದರು.

ನೇಕಾರ ಸಮುದಾಯದ(ದೇವಾಂಗ) ದಯಾನಂದ ಮಹಾಸ್ವಾಮಿಗಳಿಗೆ ಹಂಪಿಯ ಹೇಮಕೂಟದಲ್ಲಿ ಪಟ್ಟಾಭಿಷೇಕ ಮಾಡಿದರು. ಕುರುಬ ಸಮುದಾಯಕ್ಕೆ ಕಾಗಿನೆಲೆಯಲ್ಲಿ ವೀರೇಂದ್ರ ಕೇಶವ ಸ್ವಾಮಿಗಳಿಗೆ ಪಟ್ಟಾಭಿಷೇಕ ಮಾಡಿದರು. ಅಲ್ಲಿ ೧೯೯೧-೯೨ರಲ್ಲಿ ಅಧಿಕಾರದಲ್ಲಿರುತ್ತಾರೆ. ವಾಲ್ಮೀಕಿ ಮಠ ಸ್ಥಾಪಿಸಿ ಪುಣ್ಯಾನಂದ ಮಹಾಸ್ವಾಮಿಗಳ ಪಟ್ಟಾಭಿಷೇಕ ಮಾಡಿದರು. ಮಡಿವಾಳ ಸಮುದಾಯಕ್ಕೆ ತಿಗುಳ ಸಮುದಾಯಕ್ಕೆ ಮಠವನ್ನು ಸ್ಥಾಪಿಸಿಕೊಟ್ಟರು. ಮುಂದೆ ತಿರುಚಿ ಮಠವನ್ನು ಆಕ್ರಮಿಸಿ ಬ್ರಾಹ್ಮಣ ಸಮುದಾಯದವರು ಅಧಿಪತ್ಯವನ್ನು ಸ್ಥಾಪಿಸಿದರು. ಈ ಮಠವನ್ನು ವಶಕ್ಕೆ ತೆಗೆದುಕೊಂಡು ನಮ್ಮ ಸಮುದಾಯದ ಸ್ವಾಮಿಯವರನ್ನು ಹೊರಹಾಕಿ ಅದನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಸುಮಾರು ೬೦೦ ಕೋಟಿ ರೂಪಾಯಿ ಮಠದ ಆಸ್ತಿಯನ್ನು ಅವರು ತೆಗೆದುಕೊಂಡರು.

ಬ್ರಾಹ್ಮಣರು ಹಿಂದುಳಿದ ಮಠಗಳನ್ನು ವಶಪಡಿಸಿಕೊಂಡು ತಾವು ಮುಂದೆ ಅದನ್ನು ಬ್ರಾಹ್ಮಣ ಮಠವನ್ನಾಗಿ ಮಾಡಲು ಅನೇಕ ಹುನ್ನಾರಗಳನ್ನು ನಡೆಸುತ್ತಿದ್ದಾರೆ. ಕಾರಣ, ಹಿಂದುಳಿದ ಮತ್ತು ತಳಸಮುದಾಯಗಳ ಮಠಗಳ ಬಗ್ಗೆ ಇರುವ ತಾತ್ಸರತೆ ಮತ್ತು ಭಯವನ್ನು ಎತ್ತಿತೋರಿಸುತ್ತದೆ ಎಂದು ಪುರುಷೋತ್ತಮಾನಂದ ಮಹಾಸ್ವಾಮಿಗಳು ಹೇಳಿದರು. ಇದಕ್ಕೆ ಆದಿಚುಂಚನಗಿರಿ ಸ್ವಾಮಿಗಳು ಕುಮ್ಮಕ್ಕಿನಿಂದಾಗಿ ಹಿಂದುಳಿದ ಮಠಗಳನ್ನು ಹೇಗೆ ತುಳಿತಕ್ಕೆ ಒಳಪಡಿಸುತ್ತಾರೆ ಎಂಬುದನ್ನು ನೋಡಬಹುದು.

ಮಹಾಮಠದ ಶಿಕ್ಷಣ ಕೇಂದ್ರಗಳು

ಪುರುಷೋತ್ತಮಾನಂದ ಪುರಿಮಹಾಸ್ವಾಮಿಗಳು ಹಿಂದಿನ ಗುರುಪರಂಪರೆಯನ್ನು ಉಳಿಸಿಕೊಂಡು ಮುಂದುವರೆಸಿಕೊಂಡು ಬಂದಿದ್ದಾರೆ. ಅದರಲ್ಲಿ ವಿಶೇಷವಾಗಿ ಶಿಕ್ಷಣ ಸಂಸ್ಥೆಗಳನ್ನು ಅಭಿವೃದ್ಧಿಪಡಿಸುವಲ್ಲಿ ಇವರದು ಶ್ರಮ ಮಹತ್ವದ್ದಾಗಿದೆ. ಬಡಮಕ್ಕಳಿಗೆ ಮಠದ ವತಿಯಿಂದ ಉಚಿತ ಶಿಕ್ಷಣ ನೀಡುತ್ತಿದ್ದಾರೆ. ಜನರನ್ನು ಶಿಕ್ಷಣವಂಚಿತರನ್ನಾಗಿಸುವ ಮೂಲಕ ಸಮಾಜ ಪರಿವರ್ತನೆಗೆ ದಾರಿಯಾಗಬಹುದು ಎಂಬ ಮಾತು ಸ್ವಾಮೀಜಿಯವರದ್ದಾಗಿದೆ. ಮತ್ತು ಸರಕಾರಗಳು ಈ ನಿಟ್ಟಿನಲ್ಲಿ ಕೆಲಸ ಕಾರ್ಯವನ್ನು ಕೈಗೊಳ್ಳಬೇಕು ಎನ್ನುವ ಮಾತು ಹೇಳುವ ಮೂಲಕ ಸರಕಾರಕ್ಕೆ ಎಚ್ಚರಿಕೆ ಸಂದೇಶವನ್ನು ಕಳುಹಿಸಿದರು.

೧. ಡಿ.ಇಡಿ ಶಿಕ್ಷಣ ಸಂಸ್ಥೆ, ಚಿಕ್ಕಮಗಳೂರು.

೨. ಸಿದ್ದೇಶ್ವರ ಪ್ರೌಢಶಾಲೆ, ಚಿಕ್ಕಮಗಳೂರು.

೩. ಲೇಪಾಕ್ಷಿ ಪದವಿಪೂರ್ವ ಕಾಲೇಜು, ಸೀತಾರಾಮಪುರ

೪. ಚನ್ನಕೇಶವ ಪ್ರೌಢಶಾಲೆ ಹಾಗೂ ಪದಪೂರ್ವ ಶಿಕ್ಷಣ ಸಂಸ್ಥೆ, ಚಿತ್ರದುರ್ಗ.

ಇನ್ನೂ ಹಲವಾರು ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಬೆಳೆಸಿರುವುದು ಈ ಶ್ರೀ ಮಠದ ಇನ್ನೊಂದು ವಿಶೇಷ.

ಬೇರೆ ಮಠಗಳೊಂದಿಗಿನ ನಿಮ್ಮ ಸಂಬಂಧ ಹೇಗಿದೆ ಎಂಬುದನ್ನು ಕೇಳಿದ ಪ್ರಶ್ನೆಗೆ; ಸ್ವಾಮೀಜಿ ಅವರು;

ನಮಗೆ ಯಾವ ಮಠಗಳು ಮೇಲು-ಕೀಳೆನ್ನದೆ ಗೌರವವನ್ನು ನೀಡುತ್ತಾರೆಯೋ ನಾವು ಅಂಥ ಮಠಗಳಿಗೆ ಹೋಗಿ ಬರುತ್ತೇವೆ. ನಮ್ಮ ಅಂದರೆ ಹಿಂದುಳಿದ ಮಠಗಳಿಗೆ ಮೇಲ್ವರ್ಗ ಮಠಗಳು ಗೌರವ ನೀಡುವುದಿಲ್ಲವೋ ಅಂಥ ಮಠಗಳಿಗೆ ನಾವು ಹೋಗುವುದಿಲ್ಲ" ಎಂದು ಹೇಳಿದರು. ಆದರೆ; ಇತ್ತೀಚಿಗೆ ಬ್ರಾಹ್ಮಣ ಮಠಾಧೀಶರು ಅಲಕ್ಷಿತ ಸಮುದಾಯದ ಮಠಗಳನ್ನು ಸಹ ತಮ್ಮ ಸಹಯೋಗದೊಂದಿಗೆ ಕರೆದುಕೊಂಡು ಹೋಗುತ್ತಿದ್ದಾರೆ. ಅವರೂ ಸಹ ನಮ್ಮ ಮಠಗಳು ಮಾಡುವ ಉತ್ಸವ ಕಾರ್ಯಕ್ರಮಗಳಿಗೆ ಬಂದು ಹೋಗುತ್ತಿದ್ದಾರೆ. ನಾವು ಬ್ರಾಹ್ಮಣ ಮಠಗಳು ನಡೆಸುವ ಉತ್ಸವಗಳಲ್ಲಿ ಭಾಗವಹಿಸುತ್ತೇವೆ. ಅವರು ನಮಗೆ ಗೌರವ ಕೊಡುತ್ತಾರೆ.

ಒಟ್ಟಾರೆಯಾಗಿ ಉಪ್ಪಾರ ಭಗೀರಥ ಪೀಠದ ಮಹಾಸ್ವಾಮಿಗಳಾದ ಪುರುಷೋತ್ತಮಾನಂದಪುರಿ ಸ್ವಾಮಿಗಳು ಸಮುದಾಯವನ್ನು ಬೆಳೆಸುವುದರ ಜೊತೆ ಜೊತೆಗೆ ತಳ ಸಮುದಾಯಗಳನ್ನು ಕಟ್ಟಿ ಸಂಘಟಿಸುವಲ್ಲಿ ಶ್ರಮಿಸುತ್ತಿದ್ದಾರೆ. ಉಪ್ಪಾರರ ಶ್ರೇಯೋಭಿವೃದ್ಧಿಗಾಗಿ ಅನೇಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಅವರಿಗೆ ಉಚಿತವಾದ ಶಿಕ್ಷಣವನ್ನು ನೀಡುವ ಮೂಲಕ ಬಡವರ ಶ್ರೇಯೋಭಿವೃದ್ಧಿಗಾಗಿ ದುಡಿಯುತ್ತಿದ್ದಾರೆ. ಸಮಾಜದ ಜನರಿಗೆ ಸಾಮಾಜಿಕ ಅರಿವು ಮತ್ತು ಮೂಢನಂಬಿಕೆಗಳ ಆಚರಣೆಯ ವಿರುದ್ಧ ಜಾಗೃತಿಯನ್ನು ಮೂಡಿಸುತ್ತಿದ್ದಾರೆ.

ಉಪ್ಪಾರ ಸಮುದಾಯದಲ್ಲಾದ ಆಚರಣೆಗಳಲ್ಲಿನ ಬದಲಾವಣೆಗಳು

೧. ಈ ಸಮುದಾಯ ಮರಣ, ಬೇಟೆ, ಊಟೋಪಚಾರಗಳಂತ ಶಿಷ್ಟಚಾರದ ಕ್ರಮಗಳನ್ನು ಬದಲಾವಣೆಗಳನ್ನು ತಂದಿತು.

೨. ಭೂತೇಶ್ವರ ಅಥವಾ ಜಾತ್ರೆಯ ಸಂದರ್ಭದಲ್ಲಿ ಮುಳ್ಳಿನ ಪವಾಡ ಮಾಡುವ ಕೆಲಸವನ್ನು ತಿರಸ್ಕರಿಸಿದರು.

೩. ಬಾಲ ಕಾರ್ಮಿಕರಿಗೆ ಮೋಕ್ಷ ಮತ್ತು ಮುಕ್ತಿ

೪. ಬಾಲ್ಯವಿವಾಹ ಪದ್ಧತಿಯನ್ನು ರದ್ದುಪಡಿಸುವ ಉದ್ದೇಶ ಇವರದ್ದಾಗಿದೆ.

೫. ಪ್ರಬಲ ವರ್ಗಗಳಿಂದ ಶೋಷಿತ ಸಮುದಾಯವಾದ ಉಪ್ಪಾರ ಇಂತಹವನ್ನು ಶೋಷಣೆಯಿಂದ ಮುಕ್ತಿಗೊಳಿಸುವುದು.

೬. ಈ ಸಮುದಾಯದ ಎಲ್ಲಾ ಮಕ್ಕಳಿಗೆ ಕನಿಷ್ಠ ಮಟ್ಟದ ಶಿಕ್ಷಣ ನಡೆಯುವಂತೆ ಕ್ರಮಕೈಗೊಳ್ಳುವುದು.

ಉಪ್ಪಾರರ ಕುಲಕಸುಬು ಉಪ್ಪನ್ನು ತಯಾರಿಸುವುದು. ಕುಲಕಸುಬಿನ ಜೊತೆಗೆ ಆಳರಸರ ಕಾಲದಲ್ಲಿ ಮಣ್ಣು ಮತ್ತು ಕಲ್ಲಿನಿಂದ ಗೋಡೆಯನ್ನು ಕಟ್ಟುವುದರಿಂದ ಇವರಿಗೆ ಮಣ್ಣು ಉಪ್ಪಾರ ಮತ್ತು ಕಲ್ಲು ಉಪ್ಪಾರ ಎಂಬ ಹೆಸರು ಬಂದಿತು. ಬ್ರಿಟಿಷರು ೧೮೦೫ರಲ್ಲಿ ಉಪ್ಪನ್ನು ತಯಾರಿಸುವ ಕುಲಕಸುಬಿಗೆ ಆಗಾಥವುಂಟಾಯಿತು. ಸರಕಾರ ಉಪ್ಪಾರರ ಮೇಲೆ ನಿಯಂತ್ರಮಣ ಹೇರಿತು. ಅಲ್ಲದೆ ಅಸ್ತಿತ್ವದಲ್ಲಿರುವ ಉಪ್ಪು ತಯಾರಿಕ ಘಟಕಗಳ ಮೇಲೆ ಹೆಚ್ಚಿನ ಸುಂಕ ವಿಧಿಸಿತು. ಇದರಿಂದ ಉಪ್ಪು ತಯಾರಿಸುವ ಕುಲಕಸುಬು ನಾಶವಾಗುತ್ತ ಬಂದಿತು. ಆದರೆ ಉಪ್ಪಾರ ಚಲಬಿಡದೆ ಕೃಷಿ ಭೂಮಿಯೊಂದಿಗಿನ ಸಂಬಂಧ ಕಳೆದುಕೊಳ್ಳಲಿಲ್ಲ. ಗೋಡೆ ಕಟ್ಟಡ, ಇಟ್ಟಿಗೆ ಕೆಲಸ ಹೀಗೆ ವಿವಿಧ ವೃತ್ತಿಗಳನ್ನು ಅನುಸರಿಸಿದರು. ಇದರಿಂದ ವೀರ ಜೀವಿಗಳೆನಿಸಿಕೊಂಡರು ಮತ್ತು ಉಪವೀರರು ಎಂದು ಕರೆಸಿಕೊಂಡರು.

೧೧. ಕನಕ ಗುರುಪೀಠ

೧. ವಿವಿಧತೆಯಿಂದ ಏಕತೆಯತ್ತ

ಒಡಕಾಗಿ ಕ್ಷೀಣ ಬಲ, ಒಗ್ಗಟ್ಟಿನದು ಆನೆ ಬಲ–ಎಂಬ ಮಾತಿದೆ. ಒಡೆಯರು, ಹೆಗ್ಗಡೆಗಳು, ಹಂಡೆ ಕುರುಬರು, ಲಾಳಿಕುರುಬರು, ಹೊಸ ಕುರುಬರು, ಹತ್ತಿ ಕಂಕಣದವರು, ಉಣ್ಣೆ ಕಂಕಣದವರು, ಕಾಡು ಕುರುಬರು, ಜೇನು ಕುರುಬರು, ಗೊಂಡರು, ರಾಜಗೊಂಡರು–ಹೀಗೆ ವಿವಿಧ ಪಂಗಡಗಳನ್ನು ಪಡೆದ ಹಾಲುಮತದ ವ್ಯಾಪ್ತಿ ಬಹು ವಿಶಾಲ. ಹಾಲುಮತಸ್ಥರು ಎಂಬ ಅರ್ಥಪೂರ್ಣ ಐತಿಹಾಸಿಕ ಹೆಸರಿನಡಿಯಲ್ಲಿ ಏಕತೆ ಸಾಧಿಸಬೇಕು. ನಮ್ಮ ನಡುವಿನ ಒಳ ಬೇದಗಳ ಕಾರಣದಿಂದಾಗಿ ಬಿಡಿ ಬಿಡಿಯಾಗಿ ಅನ್ಯರ ಅಡಿಯಲ್ಲಿ, ಮಣ್ಣಿನ ಹುಡಿಯಲ್ಲಿ ಹೊರಳಿ ನರಳುವ ಯಾಚಕ ಸ್ಥಿತಿಯಿಂದ ಎದ್ದೇಳಬೇಕು. ನಮ್ಮ ಮೂಲ ದೌರ್ಬಲ್ಯಕ್ಕೆ ನಮ್ಮಲ್ಲಿ ಸಂಘಟನೆ ಇಲ್ಲದಿರುವುದೇ ಕಾರಣ ಎನ್ನುವುದನ್ನು ಮರೆಯಬಾರದು. ನಮ್ಮ ಪರಂಪರೆ ನಮಗೆ ವಿವೇಕದ ದಾರಿದೀಪವಾಗಬೇಕು.

೨. ಸಂಘಟನೆಯಲ್ಲಿ ಶಕ್ತಿ

ಇವತ್ತಿನ ಸಾಮಾಜಿಕ ವ್ಯವಸ್ಥೆಯಲ್ಲಿ ಅಸಮಾನತೆಯದೇ ಸಿಂಹಪಾಲು. ಉಳ್ಳವರು ಇಲ್ಲದವರನ್ನು ಶೋಷಿಸುವ, ಮೇಲ್ವರ್ಗ, ಕೆಳವರ್ಗವನ್ನು ಕೀಳಾಗಿ ಕಾಣುವ ಪರಿಸ್ಥಿತಿಯೇ ಎಲ್ಲೆಲ್ಲೋ ಈ

ಇಲ್ಲದವರ ಅಸಹಾಯಕತನ ಇಲ್ಲವಾಗಬೇಕು. ಬಡವ ಬಲ್ಲಿದವರೆಂಬ ಮೇಲು-ಕೀಳೆಂಬ ಅಸಮಾನತೆ ತೊಲಗಬೇಕು. ಸಮಾನತೆಯೇ ಮನುಷ್ಯ ಸಮಾಜದ ಅಂತಿಮ ಸತ್ಯವಾಗಬೇಕು. ಇದು ಸಾಧ್ಯವಾಗಬೇಕಾದರೆ ಹಿಂದುಳಿದ ಸಮುದಾಯವಾದ ಕುರುಬರಿಗೆ ಜಾಗೃತಿ ಮೂಡಿಸಬೇಕಾದರೆ ಸಮುದಾಯಕ್ಕೆ ಗುರು ಪೀಠದ ಅವಶ್ಯವಾಗಿದೆ. ಆ ಮುಖಾಂತರ ಸರ್ವತೋಮುಖ ಬೆಳವಣಿಗೆ ಸಹಕಾರಿಯಾಗಿದೆ.

೩. ಸಮುದಾಯದ ಪ್ರಗತಿ

ಹಾಲುಮತದವರು ಸಂಘಟಿತರಾಗುವುದು ಸಾಮಾಜಿಕ ಅನಿವಾರ್ಯ, ಅಗತ್ಯದ ಹಸಿವು. ಈ ಪದವನ್ನು ಇಂಗಿಸಲು ಸಾಮೂಹಿಕವಾಗಿ ಸದೃಢಗೊಳ್ಳಲು, ರಾಜಕೀಯವಾಗಿ ಸಮಬಲರಾಗಲು ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಲು ಭೌಗೋಳಿಕವಾಗಿ ಏಕವಾಗಲು, ಸಂಘಟನಾತ್ಮಕವಾಗಿ ಒಂದಾಗಲು ನಮಗೊಂದು ಗುರಿಯಿರಬೇಕು. ನಮ್ಮ ಮಾರ್ಗದರ್ಶನಕ್ಕೊಬ್ಬ ಗುರುವಿರಬೇಕು. ಈ ಗುರಿಯೇ

೪. ನನಸಾಗುತ್ತಿದೆ ಕನಸು

ಅನಂತ ದಿನಗಳ ಅಭೀಷೆ ಈಡೇರುತ್ತಿದೆ. ನಮ್ಮ ಸುತ್ತ ಮುತ್ತಲಿನ ಸಮಾಜ ಬಾಂದವರಂತೆ ನಾವು ಸಾಮಾಜಿಕವಾಗಿ ಸಶಕ್ತರಾಗಬೇಕು. ಶೈಕ್ಷಣಿಕವಾಗಿ ಸಮಬಲರಾಗಬೇಕು. ರಾಜಕೀಯವಾಗಿ ಸಂಘಟಿತರಾಗಬೇಕು. ಈ ಹಲವು ಹನ್ನೊಂದು ಯೋಜನೆಗಳ ಫಲದಿಂದ ಮೈದುಂಬಿ ಕಾಗಿನೆಲೆ ಪ್ರಸಾರಾಂಗದಡಿ ನಮ್ಮ ಸಂಸ್ಕೃತಿಯ ಪುನರುತ್ಥಾನಕ್ಕೆ ಕಂಕಣಬದ್ಧರಾಗಲು ಈ ಗುರುಪೀಠ ಹಾಲುಮತದವರಿಗೆ ಹಿಂದುಳಿದವರಿಗೆ ಸ್ಫೂರ್ತಿಯ ತಾಣವಾಗಲಿದೆ. ಈ ಕೇಂದ್ರವನ್ನು ಸದೃಢವಾಗಿ ಕಟ್ಟಲು, ಗುರುಗಳ ಆಶೀರ್ವಾದ ಪಡೆಯಲು ನಾಡಿನ ಉದ್ದಗಲಗಳಲ್ಲಿ ಹಂಚಿಹೋಗಿದೆ. ಹಾಲುಮತದವರು, ಹಿಂದುಳಿದವರು ಮುಂದೆ ಬರಬೇಕು. ಸಕ್ರಿಯ ಸಹಕಾರ ನೀಡಬೇಕು. ಒಂದು ಮನಸ್ಸಿನಿಂದ ಒಂದು ಧ್ಯೇಯಕ್ಕಾಗಿ ನಮ್ಮನ್ನು ನಾವು ತೊಡಗಿಸಿಕೊಂಡು ಶ್ರೀಮಠದಿಂದ ಎಲ್ಲರ ಏಳಿಗೆಯಾಗಲು ಅನುಕೂಲವಾಗುತ್ತದೆ. ಅರಿತುಕೊಂಡು ಮಠದೊಂದಿಗೆ ಸಮುದಾಯ ಮುಂದೆ ಸಾಗಲು ಶ್ರೀಮಠದಿಂದ ಸಾಧ್ಯವಾಗುತ್ತದೆ.

ಶ್ರೀ ಗುರುಪೀಠ

ಕುರುಬ ಸಮುದಾಯದ ದಿವ್ಯ ಪುರುಷ ಶ್ರೀ ಟಿ.ಮರಿಯಪ್ಪನವರು(ಮಾಜಿ ಸಚಿವರು) ಶ್ರೀ ಕೈಲಾಸ ಆಶ್ರಮದ ಮಹಾಸಂಸ್ಥಾನದ ಜಗದ್ಗುರು ಶ್ರೀ ಶ್ರೀ ಶ್ರೀ ತಿರುಚಿ ಸ್ವಾಮಿಗಳ ಹತ್ತಿರ ಕುರುಬ ಸಮುದಾಯಕ್ಕೆ ಶ್ರೀಗುರುಪೀಠದ ಅವಶ್ಯಕತೆ ಬಗ್ಗೆ ಸದಾ ಚಿಂತಿಸುತ್ತಿದ್ದರಂತೆ ಶ್ರೀಗುರುಗಳ

ಮಾರ್ಗದರ್ಶನದಿಂದ ಬಡತನದಲ್ಲಿರುವ ನನ್ನ ಜನರು ಶಿಕ್ಷಣ-ಆರ್ಥಿಕ ಕ್ಷೇತ್ರಗಳಲ್ಲಿ ಮುಂದೆ ಬಂದರು ಎಂದು ಮಮ್ಮಲ ಮರುಗುತ್ತಿದ್ದರಂತೆ.

ನಂತರ ೧೯೮೨ ಮತ್ತು ೧೯೮೫ರಲ್ಲಿ ಬೆಂಗಳೂರಿನಲ್ಲಿ ನಡೆದ ಸಮ್ಮೇಳನಗಳಲ್ಲಿ ಕೂಡ ಶ್ರೀ ಗುರುಪೀಠದ ಬಗ್ಗೆ ದೀರ್ಘ ಚರ್ಚೆಯಾಗಿ, ಒಮ್ಮತದಿಂದ ಠರಾವು ಆಗಿದೆ. ಈ ದಿಕ್ಕಿನತ್ತ ಶ್ರೀ ಸಿದ್ಧರಾಮಯ್ಯನವರು ಅನೇಕ ಹಿರಿಯರು, ಸಂಸತ್ ಸದಸ್ಯರು, ಶಾಸಕರು, ಮಾಜಿ ಸಚಿವರು, ಸಮಾಜದ ಬಂಧುಗಳ ಜೊತೆ ಸಮಾಲೋಚನೆ ನಡೆಸಿ ಒಂದು ಇತಿಹಾಸ ನಿರ್ಮಿಸುವ ತೀರ್ಮಾನಕ್ಕೆ ಬಂದರು. ಆ ತೀರ್ಮಾನವೇ ಈಗಿನ ಗುರುಪೀಠ ಸ್ಥಾಪನೆ. ಅಷ್ಟೊತ್ತಿಗೆ ಶ್ರೀ ಕನಕದಾಸರ ೫೦೦ನೆಯ ಜಯಂತ್ಯೋತ್ಸವವನ್ನು ಪ್ರತೀ ತಾಲ್ಲೂಕಿನಲ್ಲಿ, ಹಳ್ಳಿ-ಹಳ್ಳಿಯಲ್ಲಿ ಆಚರಿಸಿ ಶ್ರೀ ಕನಕದಾಸರ ಹೆಸರಿನಲ್ಲಿ ಜನಜಾಗೃತಿಯನ್ನು ಮೂಡಿಸಿದ್ದ ಶ್ರೀ ಸಿದ್ಧರಾಮಯ್ಯನವರು ಗುರುಪೀಠವೇ ಈ ಸಮುದಾಯಕ್ಕೆ ತಾರಕಮಂತ್ರವೆಂದು ಬಗೆದು ಶ್ರೀ ಎಚ್.ವಿಶ್ವನಾಥ(ಶಾಸಕರು) ಇವರ ಅಧ್ಯಕ್ಷತೆಯಲ್ಲಿ ಒಂದು ಗುರುಪೀಠ ಸಮಿತಿ ರಚಿಸಿ ಪ್ರಪ್ರಥಮ ಪಟ್ಟಾಧಿಕಾರಿಗಳಾಗಿ ಶ್ರೀ ಬೀರೇಂದ್ರ ಕೇಶವ ತಾರಕಾನಂದಪುರಿ ಸ್ವಾಮಿಗಳಿಗೆ ಗುರುಗಳಾಗುವಂತೆ ಬೇಡಿಕೊಳ್ಳಲಾಯಿತು. ಮೈಸೂರಿನ ನಂಜನಗೂಡಿನವರಾದ ಶ್ರೀಗಳು ಎಂ.ಎ.ಪದವೀಧರರು, ಆ ಜನ್ಮ ಬ್ರಹ್ಮಚಾರಿಗಳು, ಕಠಿಣವ್ರತ ನಿಷ್ಠರು, ಸತ್ಯನಿಷ್ಠರು, ಪ್ರಾಮಾಣಿಕರು, ಬಡವರ ಬಗ್ಗೆ ವಿಶೇಷ ಮಮತೆಯುಳ್ಳವರು ಇಂತಹವರು ದೊರೆತದ್ದು ಈ ಸಮುದಾಯದ ಪುಣ್ಯ. ಎಷ್ಟೋ ಶತಮಾನಗಳ ಕೋಟಿ ಜನಗಳ ತಪಸ್ಸಿನ ಫಲ.

೧೫-೬-೮೦ರಲ್ಲಿ ಶ್ರೀ ಕನಕದಾಸರ ಐಕ್ಯಸ್ಥಳವಾದ ಕಾಗಿನೆಲೆಯಲ್ಲಿ ಶ್ರೀ ಗುರುಮಠದ ಭೂಮಿ ಪೂಜೆಯನ್ನು ಶ್ರೀಗುರುಗಳ ಅಮೃತ ಹಸ್ತದಿಂದ ನೆರವೇರಿಸಲಾಯಿತು. ಭೂಮಿಪೂಜೆಯ ಅನಂತರ ಶ್ರೀಗಳು ತಪೋಭೂಮಿಯಾದ ಹೃಷಕೇಶಕ್ಕೆ ತೆರಳಿ ಅಲ್ಲಿ ಸುಮಾರು ೧ ೧/೨ ವರ್ಷಗಳ ಕಾಲ ಇದ್ದು ಕೆಲವು ತಿಂಗಳು ಬೆಂಗಳೂರಿನ ಶ್ರೀ ಕೈಲಾಸ ಆಶ್ರಮದಲ್ಲಿದ್ದರು. ಶ್ರೀಗಳ ಪಟ್ಟಾಭಿಷೇಕಕ್ಕಿಂತ ಮುಂಚೆ ನಾಡಿನ ಮೂಲೆಮೂಲೆಗಳಲ್ಲಿ ಸಂಚರಿಸಿ, ಸಭೆಗಳನ್ನೇರ್ಪಡಿಸಿ ಈ ಸಮುದಾಯದ ಸಾಮಾನ್ಯರು ಈ ಕಾರ್ಯದಲ್ಲಿ ಬಾಗಿಯಾಗಿ, ಅದರ ಫಲವನ್ನು ಅನುಭವಿಸಬೇಕೆನ್ನುವ ದೂರದೃಷ್ಟಿಯ ಸದುದ್ದೇಶದಿಂದ ಜಿಲ್ಲಾ ಗುರುಪೀಠ ಸಮಿತಿಗಳನ್ನು ರಚಿಸಲಾಗಿದೆ. ಶ್ರೀ ಗುರುಮಠದ ರಾಜ್ಯವ್ಯಾಪ್ತಿ ವಿಸ್ತರಿಸಲಾಗಿದೆ.

ಕಾಗಿನೆಲೆ ಕನಕಪೀಠದ ಪರಿಚಯ

ಕನಕಮಂದಿರ ೧೯೮೨ರಲ್ಲಿ ಧಾರವಾಡ ಜಿಲ್ಲೆಯ ಬ್ಯಾಡಗಿ ತಾಲ್ಲೂಕಿನ ಕಾಗಿನೆಲೆ ಗ್ರಾಮದಲ್ಲಿ

ಸಂತಕವಿ ಕನಕದಾಸರ ಸಮಾದಿಯ ಮೇಲೆ ಒಂದು ಕನಕ ಮಂದಿರವನ್ನು ನಿರ್ಮಿಸಲಾಯಿತು. ಜೀರ್ಣವಾಗಿ ಶಿಥಿಲವಾಗಿ ಕಾಲದ ಮರೆಯಲ್ಲಿ ಮಣ್ಣುಗುಪ್ಪೆಯಾಗಿ ಶಿಥಿಲವಾಗಿ ಹೋಗುತ್ತಿದ್ದ ಕನಕದಾಸರ ಸಮಾಧಿ ಇಂದು ಕೆರೆಯ ತಡಿಯಲ್ಲಿರುವ ಒಂದು ಶಾಂತ ಸುಂದರ ದಿವ್ಯ ಮಂದಿರವಾಗಿ ಕಂಗೊಳಿಸಿ ಶಾಂತಿ ಅರಸಿ ಬಂದ ಪಥಿಕರಿಗೆ "ತಲ್ಲಣಿಸದಿರು ಕಂಡ್ಯ ತಾಳುಮನವೆ" ಎಂದು ಸಾಂತ್ವಾನ ನೀಡುತ್ತಿದೆ. ಈ ಮಹಾಕ್ಷೇತ್ರದ ನೆರೆಯಲ್ಲೇ ಇಂದು ಕಾಗಿನೆಲೆ ಕನಕ ಮಹಾಸಂಸ್ಥಾನದ ಗುರುಪೀಠವು ಇಡೀ ಕುರುಬ ಸಮುದಾಯದ ಆಶಾಸೌಧವಾಗಿ ಸ್ಥಾಪಿತವಾಗಿದೆ. ಸುಮಾರು ೨ ಲಕ್ಷ ರೂಪಾಯಿಗಳ ಖರ್ಚಿನಲ್ಲಿ ಈ ಮಂದಿರವನ್ನು ಕಟ್ಟಿದ್ದಷ್ಟೇ ಅಲ್ಲ ೫೦,೦೦೦ ರೂಪಾಯಿಗಳನ್ನು ಸಾರ್ವಜನಿಕರಿಂದ ಸಂಗ್ರಹಿಸಿ ಬ್ಯಾಂಕ್ ಠೇವಣಿಯಾಗಿರಿಸಿ, ಅದರ ಬಡ್ಡಿಯಿಂದ ಅಲ್ಲಿ ಪೂಜೆ-ಪುನಸ್ಕಾರಗಳು ಮತ್ತು ಮಂದಿರದ ನಿರ್ವಹಣೆಗೆ ವ್ಯವಸ್ಥೆ ಮಾಡಲಾಗಿದೆ. ಕುರುಬ ಸಮುದಾಯದ ಮೇಲ್ಮೆಗಾಗಿ ಚಿಂತನೆ ನಡೆಸುವುದಲ್ಲದೇ, ಅದಕ್ಕಾಗಿ ಸಾರ್ವಜನಿಕರಲ್ಲಿ ಉತ್ಸಾಹ ಸಹಕಾರ ಪಡೆದು ಪ್ರಗತಿಯತ್ತ ಕರೆದೊಯ್ಯುವುದರಲ್ಲಿ ಈ ಗುರುಪೀಠ ಅವಿರತವಾಗಿ ಶ್ರಮಿಸುತ್ತಿದೆ.

ಶ್ರೀ ಮಠದ ಉನ್ನತ ಆದರ್ಶ

ಧಾರ್ಮಿಕ ಭಾವನೆಯನ್ನು ಹೆಚ್ಚಿಸಿ ವಸತಿ ಶಾಲೆಗಳನ್ನು ಹಾಗೂ ಉಚಿತ ವಿದ್ಯಾರ್ಥಿ ನಿಲಯಗಳನ್ನು, ಶಾಲಾ ಕಾಲೇಜುಗಳನ್ನು ಮೂಲೆ-ಮೂಲೆಗಳಲ್ಲಿ ತೆರೆದು ಶೈಕ್ಷಣಿಕ ಅಭಿವೃದ್ಧಿ, ಧಾರ್ಮಿಕ ಹಿನ್ನೆಲೆಯಲ್ಲಿ ಸಮಾಜದ ಅಭಿವೃದ್ಧಿ ಮಹಾತ್ಮಗಾಂಧೀಜಿಯವರ ಆಸೆಯಂತೆ ಕಟ್ಟ ಕಡೆಯವನಿಗೂ ನ್ಯಾಯ ದೊರಕಿಸಿಕೊಡುವುದೇ ಶ್ರೀಮಠದ ಉನ್ನತಾದರ್ಶ. ಇಲ್ಲಿಯವರೆಗೆ ಆದ ಸಾಧನೆ ಒಂದು ದಿನದಲ್ಲಿ ಒಬ್ಬರ ಸಾಧನೆಯಲ್ಲ ಇದು ನಮ್ಮ ಹಿರಿಯರು ಅನೇಕ ಎಲೆಮರೆಕಾಯಿ ಕಾರ್ಯಕರ್ತರು ದಾನಿಗಳು, ಬಂಧುಗಳ ತ್ಯಾಗದ, ಶ್ರಮದ, ದೂರದೃಷ್ಟಿಯ ಪ್ರತೀಕ. ಈಗಿರುವ ಸಂಘ ಸ್ಥಾಪನೆಯಾಗುತ್ತಿರುವುದಕ್ಕೆ ಗುರುಪೀಠದ ಮಾರ್ಗದರ್ಶನ ಮತ್ತು ಗುರುಗಳ ಪ್ರೇರಣೆಯಾಗಿದೆ.

ಗುರುಪೀಠದ ಸ್ವರೂಪ ಮತ್ತು ಮಹತ್ವ

ಪರಿಸರ ಕೈಗೂಸಾದ ಮಾನವ ಪ್ರಕೃತಿಯ ಮಡಿಲಲ್ಲಿ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವಾಗ ಪ್ರಕೃತಿಯನ್ನೇ ಗುರುವಾಗಿ ಸ್ವೀಕರಿಸಿದರೂ ಅನುಭವದಿಂದ ಪಡೆದ ಜ್ಞಾನ ಮತ್ತೊಂದು ಹಂತದಲ್ಲಿ ದಾರಿ ತೋರುವ 'ಗುರು'ವಾಗಿರುವುದನ್ನು ಅಲ್ಲಗಳೆಯುವಂತಿಲ್ಲ. ಹೀಗಿದ್ದೂ ಅಸತ್ಯದಿಂದ ಸತ್ಯದೆಡೆಗೆ, ಕತ್ತಲೆಯಿಂದ ಬೆಳಕಿನೆಡೆಗೆ ಮೃತ್ಯುವಿನಿಂದ ಅಮೃತದೆಡೆಗೆ ಕರೆದೊಯ್ಯುವ ಶಕ್ತಿಯು ಸಾಕ್ಷಾತ್ಕಾರಕ್ಕೆ ಮಾರ್ಗದರ್ಶನ ನೀಡುವ 'ಗುರು'ವಿಗೆ ಹಂಬಲಿಸುವುದು ಮಾನವನ ಬದುಕಿನುದ್ದಕ್ಕೂ

ಕಂಡುಬರುತ್ತದೆ. "ಶಿವ ಪಥವನರಿವರೆ ಗುರುಪಥವೆ ಮೊದಲು" ಹರ ಮುನಿದರೆ ಗುರು ಕಾಯ್ವ "ಗುರು ಮುಟ್ಟದ್ದು ಗುಡ್ಡ" ಗುರು ಹಿರಿಯರ ಅರಿಯದವನ ಅರಿವದೇತಕೆ ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ ಎಂಬಂಥ ನುಡಿಮುತ್ತುಗಳು ಭಾರತೀಯ ಪರಂಪರೆಯಲ್ಲಿ ಗುರುವಿಗೆ ಇರುವ ಗೌರವಾದರಗಳನ್ನು ಸ್ಥಾನ-ಮಾನಗಳನ್ನು ನಿರ್ದೇಶಿಸುತ್ತವ. ಸಮಯ ಸಂದರ್ಭಾನುಸಾರ ತಪಸ್ಸಿನ, ಅಧ್ಯಯನದ, ಅನುಭವದ ಹಿನ್ನೆಲೆಯಲ್ಲಿ ಪಡೆದ ಜ್ಞಾನವನ್ನು ಶಿಕ್ಷಾಗುರುವಾಗಿ, ದೀಕ್ಷಾಗುರುವಾಗಿ, ಮೋಕ್ಷಗುರುವಾಗಿ, ಅಜ್ಞಾನದ ಅಂಧಕಾರದಲ್ಲಿ ತೊಳಲುತ್ತಿರುವ ಜನತೆಗೆ ಸುಜ್ಞಾನದ ಬೆಳಕನ್ನು ನೀಡಿದ, ನೀಡುತ್ತಿರುವ ಗುರುಗಳನ್ನು ಎಲ್ಲೆಡೆ ಕಾಣುತ್ತೇವೆ.

ಜನ ಸಮುದಾಯದಲ್ಲೇ ಪರೋಪಕಾರರ್ಥ ಮಿದಂ ಶರೀರಂ ಎಂಬ ಸೂಕ್ತಿಯ ಅಂತರಾರ್ಥವನ್ನರಿತ ವ್ಯಕ್ತಿ ಜ್ಞಾನ ಸಂಪನ್ನನಾಗಿ ಮಾರ್ಗದರ್ಶನ ಮಾಡಲು ತೊಡಗಿದಾಗ ಆತನ ಮಾತಿಗೆ ಬೆಲೆಕೊಟ್ಟು ಗುರುವೆಂದು ಗೌರವಿಸಿರುವುದಕ್ಕೆ ಬೇಕಾದಷ್ಟು ಸಾಕ್ಷಿಗಳಿವೆ. ಮಾಡುತ್ತಾ ಜನತೆಯನ್ನು ಸತ್ಪಥದಲ್ಲಿ ಕೊಂಡೊಯ್ಯುವ ಗುರುತರ ಕಾರ್ಯದಲ್ಲಿ ಗುರು ನಿರತನಾದ ಇಂಥ ಗುರು ಅಗತ್ಯವಾಗಿ ಕೆಲವೆಡೆ ನೆಲೆ ನಿಲ್ಲಬೇಕಾದ ಪ್ರಸಂಗ ಒದಗಿಬಂದುವು. ಹೀಗೆ ನೆಲೆ ನಿಂತ ತಾಣಗಳೇ ಮಠ ಪೀಠಗಳಾದವು. ಇಂಥ ಮಠ-ಮಾನ್ಯಗಳು ಬಂದವರಿಗೆಲ್ಲಾ ಸಾರ್ಥಕ ಜೀವನ ನಡೆಸಲು ಮಾರ್ಗದರ್ಶನ ನೀಡಿದವು. ಆಗ ಇವುಗಳಿಗೆ ಜನಸಾಮಾನ್ಯರಿಂದ ಹಿಡಿದು ರಾಜಮಹಾರಾಜರವರೆಗೆ ಎಲ್ಲರೂ ದಾನ-ದತ್ತಿಗಳನ್ನು ಉದಾರವಾಗಿ ನೀಡತೊಡಗಿದರು. ಹೀಗಾಗಿ ಇವು ಬರುಬರುತ್ತಾ ಸಾಂಸ್ಥಿಕ ರೂಪ ಪಡೆದವು. ಅಲ್ಲದೇ ಜನಸಮುದಾಯವನ್ನು ಹಿಡಿತದಲ್ಲಿಟ್ಟುಕೊಂಡವು. ಇಂಥ ಮಠ-ಮಾನ್ಯಗಳಲ್ಲಿ ಆಯಾ ಸಮುದಾಯದ ಇಷ್ಟದೈವದ ಪೂಜೆ ನಡೆಯತೊಡಗಿತು. ವಿರಕ್ತರಾದವರು ಇವುಗಳ ಅಧಿಪತಿಗಳಾಗತೊಡಗಿದರು. ಕೆಲವೆಡೆ ವರ್ಣಾಶ್ರಮ ಪದ್ಧತಿಯ ಹಿನ್ನೆಲೆಯಲ್ಲಿ ಸನ್ಯಾಸಾಶ್ರಮ ಸ್ವೀಕಾರದ ಹಂತದಲ್ಲಿದ್ದವರು ಅಧಿಪತಿಗಳಾದರು. ಇವುಗಳಲ್ಲಿ ದೊರೆಯುತ್ತಿರುವ ಸೌಕರ್ಯಗಳನ್ನು ಗೌರವಾದರಗಳನ್ನು ಗಮನಿಸಿದ ಕೆಲವರು ವಂಶಪಾರಂಪರ್ಯವಾಗಿ ಅಧಿಪತಿಗಳನ್ನು ನೇಮಿಸತೊಡಗಿದರು.

ಬಹುಶಃ ಆರಂಭದ ಅವಸ್ಥೆಯಲ್ಲಿ ಜಾತಿ, ಮತ, ಪಂಥಗಳ ಬೇದವಿಲ್ಲದೆ ಜನಪರ ಕಾರ್ಯಗಳನ್ನು ಪ್ರಾಮಾಣಿಕವಾಗಿ ಮಾಡುವ ವೈಚಾರಿಕ ತಳಹದಿಯ ಮೇಲೆ ಜನರ ಬದುಕನ್ನು ರೂಪಿಸುವ ಕೈಂಕರ್ಯದಲ್ಲಿ ನಿರತರಾದರು. ಇಂಥ ವಾತಾವರಣ ಕಾಲಾನುಕ್ರಮದಲ್ಲಿ ಇಲ್ಲವಾಗಿ ತಮ್ಮ ತಮ್ಮ ಸಮುದಾಯದ ಜನರ ಉದ್ಧಾರದ ಕಡೆಗೆ ಗಮನ ಕೊಡತೊಡಗಿದಾಗ

ಇವುಗಳ ಅಸ್ತಿತ್ವವನ್ನು ಕೆಲವರು ಪ್ರಶ್ನಿಸಿದರು. ಆಗ ಅವರಿಗೆ ನಾಸ್ತಿಕರೆಂಬ ಹಣೆಪಟ್ಟಿಯನ್ನು ಕಟ್ಟಿರುವುದಕ್ಕೆ ನಿದರ್ಶನಗಳಿವೆ. ಹೀಗಾಗಿ ಸಂಕುಚಿತ ಮನೋಭಾವದ ಜನ ವಿರೋಧಿ ಚಟುವಟಿಕೆಗಳಲ್ಲಿ ನಿರತರಾದವರನ್ನು ಕಂಡಾಗ ಸಹಜವಾಗಿಯೇ ಜನಪರ ಕಾಳಜಿಯುಳ್ಳವರಿಗೆ ಅವುಗಳಲ್ಲಿ ಕುಳಿತ ಅಧಿಪತಿಗಳನ್ನು ಕಂಡಾಗ ಅಲರ್ಜಿಯಾಗುವುದರಲ್ಲಿ ಅನುಮಾನವಿಲ್ಲ.

ಯಾವುದೇ ವ್ಯಕ್ತಿ ಅಥವಾ ಸಮುದಾಯ ಎಲ್ಲ ವಿಧದಲ್ಲೂ ಮುಂದೆ ಬರಬೇಕಾದರೆ ದೂರದೃಷ್ಟಿಯುಳ್ಳ ದಾರಿ ತೋರುವ ಸಮರ್ಥ ಗುರುಬೇಕು. ಉದಾತ್ತ ಗುರಿಯಿಲ್ಲದೆ ಅದನ್ನು ತೋರಿಸುವ ಶಕ್ತ ಗುರುವಿಲ್ಲದ ಸಮಾಜ ಅಥವಾ ವ್ಯಕ್ತಿ ಜೀವನದಲ್ಲೆಂದೂ ಮುಂದೆ ಬರಲು ಸಾಧ್ಯವಾಗಲಾರದು. ಹೀಗಾಗಿ ದೇವರು ಧರ್ಮಗಳ ಹೆಸರಿನಲ್ಲಿ ಮೌಢ್ಯವನ್ನು ಬಿತ್ತದೆ ಸಾರ್ಥಕ ಜೀವನಕ್ಕೆ ಬೇಕಾದ ಅರ್ಥಪೂರ್ಣ ಜೀವನ ಮೌಲ್ಯಗಳನ್ನು ಜನಮನದಲ್ಲಿ ಬಿತ್ತಿ-ಪ್ರತಿಫಲ ಪಡೆಯಬಲ್ಲ ಸದ್ಗುರು ಬೇಕಾಗಿದೆ. ಹೊಸದೃಷ್ಟಿ-ಹೊಸ ಧ್ಯೇಯ ಧೋರಣೆಗಳನ್ನು ಧಾರಣ ಮಾಡಿಕೊಂಡು ಇಡೀ ಮಾನವತೆಯನ್ನು ಸನ್ಮಾರ್ಗದತ್ತ ಕೊಂಡೊಯ್ಯುವ ಧರ್ಮ ಪೀಠಗಳು ಎಷ್ಟಿದ್ದರೂ ಬೇಕು. ಇತ್ತೀಚಿನ ದಿನಗಳಲ್ಲಿ ತಮ್ಮ ತಮ್ಮ ಸಮುದಾಯದ ಉದ್ಧಾರದ ಕನಸು ಕಾಣುತ್ತಾ ಅದನ್ನು ನನಸಾಗಿಸುವ ದಿಶೆಯಲ್ಲಿ ಕಾರ್ಯಪ್ರವೃತ್ತವಾಗುವ ಹೊಸ ಹೊಸ ಮಠ-ಪೀಠಗಳು ಅಲ್ಲಲ್ಲೇ ತಲೆಯೆತ್ತುತ್ತಿವೆ. ಹೆಜ್ಜೆ ಹೆಜ್ಜೆಗೆ ಸ್ಪರ್ಧಿಸಬೇಕಾಗಿರುವ ಇಂದಿನ ಸಂದರ್ಭದಲ್ಲಿ ಅದಕ್ಕೆ ಪೂರಕ ವಾತಾವರಣ ಕಲ್ಪಿಸಿಕೊಡುವಲ್ಲಿ ಇಂಥ ಗುರುಪೀಠಗಳು ಮಹತ್ವದ ಪಾತ್ರ ವಹಿಸುತ್ತಿವೆ. ಹೀಗಾಗಿ ತಮಗೆ ದಾರಿ ತೋರುವ ಗುರುಗಳನ್ನು, ಗುರುಪೀಠಗಳನ್ನು ಹುಡುಕಿಕೊಂಡು ಹೋಗುವುದು ತಾವೇ ಅಂಥ ಪೀಠಗಳನ್ನು ಸ್ಥಾಪಿಸಿಕೊಳ್ಳುವುದು ತಪ್ಪಾಗಲಾರದೇನೋ? ಆದರೆ ಆ ಪೀಠಗಳು ತಮ್ಮ ತಮ್ಮ ಜಾತಿ ಮತಗಳ ಚೌಕಟ್ಟಿನಿಂದ ಹೊರಬಂದು ಸಕಲ ಮಾನವತೆಯ ಹಿತಬಯಸುವ ಧೋರಣೆಯುಳ್ಳವಾಗಿರಬೇಕಾದುದು ತೀರ ಅನಿವಾರ್ಯ ಮತ್ತು ಅಗತ್ಯ. ಆಗ ಅವುಗಳಿಗೆ ಬೆಲೆ ಬರುವುದರಲ್ಲಿ ಅನುಮಾನವಿಲ್ಲ.

ಕನಕ ಗುರುಪೀಠ-ತಿಂಥಿಣಿ ಶಾಖಾ ಮಠ

ಕನಕಗುರು ಪೀಠವು ೨೦೦೫ರಲ್ಲಿ ಅಂದಿನ ಗುಲ್ಬರ್ಗಾ ಜಿಲ್ಲೆಗೆ ಒಳಪಟ್ಟ ಸುರಪುರ ತಾಲೂಕಿನ ಕೃಷ್ಣನದಿಯ ಪಕ್ಕದಲ್ಲಿ ತಿಂಥಿಣಿ ಭಾವೈಕ್ಯತೆ ನೆಲೆಯಾಗಿ ಸ್ಥಳದಲ್ಲಿ ಸಮುದಾಯದ ಸಾಂಸ್ಕೃತಿಕ ವ್ಯಕ್ತಿಯಾಗಿದ್ದ ಕನಕದಾಸ ಹೆಸರಿನಲ್ಲಿ ಮಠವನ್ನು ಸ್ಥಾಪನೆ ಮಾಡಲಾಯಿತು. ಕುರುಬ ಸಮುದಾಯದ ಮಹಾಮಠದ ಜಗದ್ಗುರು ಶ್ರೀ ಶ್ರೀ ವೀರೇಂದ್ರಕೇಶವ ಮಹಾಸ್ವಾಮೀಜಿಯವರು ಸಮುದಾಯದ ಸ್ಥಿತಿಗತಿಯನ್ನು ಅರಿತುಕೊಂಡು ಸಮುದಾಯ ಹಿರಿಯರ

ಜೊತೆ ಚರ್ಚಿಸಿ ಪ್ರಾದೇಶಿಕ ವಿಭಾಗಗಳ ಆಧಾರದ ಮೇಲೆ ನಾಲ್ಕು ವಿಭಾಗಗಳಿಗೆ ಸ್ವಾಮೀಜಿಗಳನ್ನು ಆಯ್ಕೆ ಮಾಡಿ ಒಬ್ಬೊಬ್ಬ ಸ್ವಾಮೀಜಿಗಳಿಗೆ ಒಂದೊಂದು ವಿಭಾಗಗಳನ್ನು ಜವಾಬ್ದಾರಿ ವಹಿಸಿಕೊಟ್ಟರು. ನಾವು ಈ ಗುಲ್ಬರ್ಗಾ ವಿಭಾಗಕ್ಕೆ ಶ್ರೀ ಸಿದ್ಧರಾಮಾನಂದ ಮಹಾಸ್ವಾಮೀಜಿಯವರನ್ನು ಪಟ್ಟಾಭಿಷೇಕ ಮಾಡಲಾಯಿತು. ನೇಮಕಗೊಂಡಂತಹ ಸಿದ್ಧರಾಮಾನಂದ ಮಹಾಸ್ವಾಮಿಜಿಯವರು ಈ ವಿಭಾಗದಲ್ಲಿ ಸಂಚಾರ ಮಾಡಿ ಸಂಘಟನೆ ಮತ್ತು ಜಾಗೃತಿ ಅರಿವು ಜೊತೆ ಕನಕಗುರು ಪೀಠದ ಬಗ್ಗೆ ಪರಿಚಯ ಮಾಡಿಕೊಟ್ಟರು. ಅತ್ಯಂತ ಬಡತನ ರಾಜಕೀಯ, ಆರ್ಥಿಕ, ಅತ್ಯಂತ ಸಾಮಾಜಿಕ ಹಿನ್ನಡೆ ಅನುಭವಿಸುವಂತಹ ವಿಭಾಗ ಅಂದರೆ ಗುಲ್ಬರ್ಗಾ ವಿಭಾಗ. ಇಂತಹ ವಿಭಾಗಕ್ಕೆ ನೇಮಕ ಮಾಡಿದ ಸಂದರ್ಭದಲ್ಲಿ ಯಾವುದೇ ಸೌಲಭ್ಯ ಇರಲಿಲ್ಲ. ಮಠವನ್ನು ಒಂದು ಧಾರ್ಮಿಕ ವಾತಾವರಣಕ್ಕೆ ತರಬೇಕಾದರೆ ಬಹಳ ಕಷ್ಟಪಡಬೇಕಾಯಿತು ಎಂದು ಸ್ವಾಮೀಜಿಯವರು ಕ್ಷೇತ್ರಕಾರ್ಯಕ್ಕೆಂದು ಮಠಕ್ಕೆ ಹೋದಾಗ ತಿಳಿಸಿಕೊಟ್ಟರು. ಸ್ವಾಮೀಜಿಯವರು ಬಹಳ ಸೂಕ್ಷ್ಮವಾದ ವಿಚಾರವನ್ನು ಈ ಸಂದರ್ಭದಲ್ಲಿ ಹೇಳಿದ್ದು ಏನೆಂದರೆ ಈ ಮಠಗಳು ಎಲ್ಲೋ ಒಂದು ಕಡೆಗೆ ಹಿಂದುಳಿದ ವರ್ಗಗಳ ಅಥವಾ ಸಂಸ್ಕಾರೇತರ ಸಮುದಾಯಗಳ ಮಠಗಳನ್ನು ಸ್ಥಾಪನೆ ಮಾಡಿಕೊಳ್ಳುವುದರ ಹಿಂದೆ ಸಾರ್ವಜನಿಕವಾಗಿ ಉದ್ದೇಶ ಒಂದಿದ್ದರೆ ಆಂತರಿಕ ಉದ್ದೇಶ ಬೇರೇನೇ ಇದೆ ಎಂದು ಹೇಳಿದರು. ಈ ವೇಳೆಯಲ್ಲಿ ಅಲಕ್ಷಿತ ಸಮುದಾಯಗಳ ವಿಚಾರವನ್ನು ಪ್ರಸ್ತಾಪಿಸಿದರು. ಸಾರ್ವಜನಿಕ ಉದ್ದೇಶವೇ ದಿಟವಾಗಿ ಇದ್ದರೆ ಇವತ್ತು ಹಿಂದುಳಿದ ವರ್ಗಗಳ ಮಠಗಳು ಬಹಳಷ್ಟು ಪ್ರಬಲವಾಗಿ ಹಿಂದೆ ಕೆಲವು ವ್ಯಕ್ತಿಗಳು ಸ್ವಾಮಿಗಳನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡು ರಾಜಕೀಯ ಸಾಮಾಜಿಕ ಲಾಭವನ್ನು ಪಡೆಯುವ ಉದ್ದೇಶವನ್ನು ಇಟ್ಟುಕೊಂಡು ಸಹ ಹಲವಾರು ಮಠಗಳು ಸ್ಥಾಪನೆಯಾಗಿರುವುದರಿಂದ ಆಂತಹ ಉದ್ದೇಶಗಳು ಪ್ರಮುಖವಾದಂತ ಮಠಗಳು ಇವತ್ತು ಹಿನ್ನಡೆ ಅನುಭವಿಸುತ್ತಾ ಇವೆ. ಅಂತಹ ಉದ್ದೇಶಗಳನ್ನು ಮೀರಿ ಬೆಳೆಯುವ ಸ್ವಾಮಿಗಳು ಎಲ್ಲಿ ಪ್ರಯತ್ನ ಮಾಡುತ್ತಾ ಇದ್ದಾರೆ, ಅಲ್ಲಿ ಚಟುವಟಿಕೆ ಸಾಮಾಜಿಕ ಸ್ವಾಸ್ಥ್ಯ ಹೆಚ್ಚಾಗಿ ಇರೋದನ್ನು ಸ್ವಾಮೀಜಿಯವರು ಹಲವು ಮಠಗಳ ನಿಕಟ ಸಂಪರ್ಕದಿಂದ ಕಂಡುಕೊಂಡಿರುವುದು ಸತ್ಯ.

ಸ್ವಾಮೀಜಿಯವರು ನಮ್ಮ ಮಠವನ್ನು ಸಹ ರಾಜಕೀಯವಾಗಿ ಪ್ರಭಾವ ಒತ್ತಡಕ್ಕೆ ಒಳಗಾಗಬಾರದು ಎನ್ನುವ ದೃಷ್ಟಿಯಿಂದ ಸುಂದರ, ಪ್ರಶಾಂತವಾದ ಕೃಷ್ಣ ನದಿಯ ಪಕ್ಕದಲ್ಲಿ ಮಠವನ್ನು ಸ್ಥಾಪನೆ ಮಾಡಲಾಯಿತು. ಇದು ಕೇವಲ ರಾಜಕಾರಣಿಗಳ ಒಕ್ಕೂಟ ಅಥವಾ ಸ್ವಾರ್ಥಿಗಳ ಒಕ್ಕೂಟ ಆಗಬಾರದು. ಈ ನೆಲೆಗೆ ಎಲ್ಲರೂ ಬರುವಂತಹ ವಾತಾವರಣ

ಮಠಗಳಲ್ಲಿ ಇರಬೇಕು ಎನ್ನುವ ಮಹತ್ವದ ನಿಲುವಿನಿಂದ ಸ್ಥಾಪನೆ ಮಾಡಲಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಮೊದಲಿಗೆ ಮಠದ ಬಗ್ಗೆ ಇರುವ ವ್ಯವಸ್ಥೆ ಸಾದಕ ಬಾದಕಗಳ ಬಗ್ಗೆ ಸಮುದಾಯದವರ ಒಟ್ಟುಗೂಡಿ ತಿಳಿಸಲಾಯಿತು. ಮಠದ ಪ್ರಾರಂಭ ಸಂದರ್ಭದಲ್ಲಿ ತಾತ್ಕಾಲಿಕ ಶೆಡ್‌ಗಳನ್ನು ಮಾಡಿ ಶೆಡ್‌ನಲ್ಲೇ ವಾಸಮಾಡಿಕೊಂಡು ೪-೧೦ನೇ ತರಗತಿಯವರೆಗೆ ಸುಮಾರು ಎರಡು ನೂರು ಮಕ್ಕಳಿಗೆ ಪಾಠ ಪ್ರವಚನ ಜೊತೆಗೆ ವಸತಿ ವ್ಯವಸ್ಥೆ ಮಾಡಿಕೊಡಲಾಯಿತು. ಇತ್ತೀಚೆಗೆ ಸುಂದರವಾದ ಕಟ್ಟಡವನ್ನು ನಿರ್ಮಾಣ ಮಾಡಲಾಗಿದೆ. ಅದರಲ್ಲಿ ಶೈಕ್ಷಣಿಕ ವ್ಯವಸ್ಥೆ ಸೇರಿದಂತೆ ಅನೇಕ ಸಭೆ ಸಮಾರಂಭ ಮತ್ತು ಶೈಕ್ಷಣಿಕವಾಗಿ ಸಮುದಾಯವನ್ನು ಪ್ರಗತಿಗೊಳಿಸುವ ನಿಟ್ಟಿನಲ್ಲಿ ಈಗ ಮಠದಲ್ಲಿ ಪಿಯುಸಿ ಮತ್ತು ಐಟಿಐ ಕೋರ್ಸ್ ಪ್ರಾರಂಭಿಸಲಾಗಿದೆ.

ಶ್ರೀ ಮಠದ ವತಿಯಿಂದ ಶೇಡಂ ಮತ್ತು ಕೊಪ್ಪಳದಲ್ಲಿ ಪ್ರಾಥಮಿಕ ಶಾಲೆ ಮಾಡಿದಿವಿ ಜೊತೆಗೆ ಶಾಲೆಗಳಲ್ಲಿದೇನೇ ಗುಲ್ಬರ್ಗಾದಲ್ಲಿ ಕಾಲೇಜು ಹುಡುಗರಿಗೋಸ್ಕರನೆ ವಸತಿ ನಿಲಯಗಳನ್ನು ಮಾಡಲಾಗಿದೆ. ನಮ್ಮ ಭಾಗದ ಜನಗಳು ಗುಲ್ಬರ್ಗಾಕ್ಕೆ ಓದಲಿಕ್ಕೆ ಹೋಗುತ್ತಾರೆ. ಅಲ್ಲಿ ಕಾಲೇಜು ಹುಡುಗರಿಗೆ ಉಳಿದುಕೊಳ್ಳಲು ಇರಲಿಲ್ಲ. ಕಾಲೇಜು ಹುಡುಗರಿಗೋಸ್ಕರ ವಸತಿ ವ್ಯವಸ್ಥೆ ಮಠದ ವತಿಯಿಂದ ಮಾಡಲಾಗಿದೆ.

ಶ್ರೀ ಮಠದ ವತಿಯಿಂದ ಪ್ರತಿ ವರ್ಷ ಹಾಲುಮತ ಉತ್ಸವ ಎಂದು ಅದ್ದೂರಿಯಾಗಿ ಮಾಡುತ್ತೇವೆ. ಸಮುದಾಯದವರು ಮತ್ತು ಇತರೇ ಸಹೋದರ ಸಮುದಾಯದವರನ್ನು ಕರೆದುಕೊಂಡು ಸಂಪ್ರದಾಯವನ್ನು ಮರುನಿರ್ಮಾಣ ಮಾಡುವ ಕಾರ್ಯ ಈ ಉತ್ಸವದಲ್ಲಿ ನಡೆಯುತ್ತದೆ.

ಈ ಮಠವು ಕೇವಲ ಸಮುದಾಯದವರಿಗೆ ಸೀಮಿತವಾಗಿಲ್ಲ. ಇತರೆ ಎಲ್ಲ ಸಮುದಾಯಗಳಿಗೆ ಅನ್ನದಾಸೋಹದ ಜೊತೆಗೆ ಜ್ಞಾನದ ದಾಸೋಹ ಕೂಡ ಸರ್ವರಿಗೆ ಅವಕಾಶ ಕಲ್ಪಿಸಿಕೊಡಲಾಗಿದೆ. ಶ್ರೀ ಮಠಕ್ಕೆ ಸರ್ಕಾರದ ವತಿಯಿಂದ ಒಂದು ಕೋಟಿ ಅನುದಾನ ನೀಡಿದ್ದಾರೆ. ಆದರೆ ಅದನ್ನು ನಾವು ಇನ್ನು ಬಳಕೆ ಮಾಡಿಕೊಂಡಿಲ್ಲ. ಸರಿಯಾದ ಯೋಜನೆ ರೂಪಿಸಿಕೊಂಡು ಹಣವನ್ನು ಸಸ್ಬಳಕೆ ಮಾಡಿಕೊಳ್ಳಲಾಗುವುದು.

ಶ್ರೀ ಮಠದ ಅಧೀನದಲ್ಲಿ ಶಾಖ ಮಠಗಳನ್ನು ಮಾಡಲಾಗಿದೆ. ಕುಷ್ಟಗಿ ತಾಲೂಕು ಬಾಗೇನಾಳದಲ್ಲಿ ಶಾಖಮಠವನ್ನು ಸ್ಥಾಪನೆ ಮಾಡಲಾಗಿದೆ. ಅದೇ ರೀತಿ ಕೊಪ್ಪಳ ತಾಲೂಕು ಹಾಲವರ್ತಿಯಲ್ಲಿ ಮಠವನ್ನು ಸ್ಥಾಪನೆ ಮಾಡಲಾಗಿದೆ. ನಂತರ ಬಳ್ಳಾರಿ ಜಿಲ್ಲೆಯ ಕುರಗೋಡದಲ್ಲಿ ಶಾಖ ಮಠವನ್ನು ಸ್ಥಾಪನೆ ಮಾಡಲಾಗಿದೆ.

ಶ್ರೀ ಮಠದಿಂದ ಎಲ್ಲೆಲ್ಲಿ ಶಾಖಾಮಠಗಳು ಅವಕಾಶ ಇದೆಯೋ ಆ ಮಠವನ್ನು ಸ್ಥಾಪನೆ ಮಾಡಲಾಗಿದೆ. ಅಲ್ಲಿಗೆ ಸ್ವಾಮೀಜಿಗಳನ್ನು ನೇಮಕ ಮಾಡಲಾಗಿದೆ. ಇನ್ನು ಎರಡು ಸ್ವಾಮಿಗಳನ್ನು ನೋಡಿಕೊಂಡು ಮಠಕ್ಕೆ ಆಯ್ಕೆಮಾಡಲಾಗುವುದು.

ಕೊನೆಯದಾಗಿ ಹೇಳುವುದೇನೆಂದರೆ ಕನಕ ಗುರುಪೀಠ ಸ್ಥಾಪನೆ ಆದರೂನು ನಮ್ಮದೇ ಆದಂತಹ ಮಠ ಇರಬೇಕು ಅಂತ ಭಾವನೆ ಜನರಲ್ಲಿ ಬಂತು. ಆವಾಗಲೂ ಬಹಳ ಮಂದಿ ಸ್ವಂತವಾಗಿ ಮಾಡಿಕೊಂಡಿರುವಂತಹ ವ್ಯವಸ್ಥೆನು ಇದಾವೆ.

ಈ ವರ್ಷದ ಅವು ಸ್ವಯಂ ಘೋಷಿತ ಏನು ಆದವು ಪಾರಂಪರಿಕ ಸಮುದಾಯ ಕ್ಲಾಶಶ್ ಏನಿಲ್ಲ ಅದನ್ನು ಸೃಷ್ಟಿ ಮಾಡೋದಕ್ಕೆ ಬಹಳಷ್ಟು ಮಂದಿ ಪ್ರಯತ್ನ ಮಾಡಿದ್ರು. ವೀರಶೈವ ಪ್ರಮುಖ ವೀರಶೈವರೇ ಧಾರ್ಮಿಕ ಮುಖಂಡರನೇ ಪ್ರಯತ್ನ ಮಾಡಿದ್ರು. ನೀವು ಶೈವರಿದೀರಿ. ನೀವು ರೇವಣಸಿದ್ದೇಶ್ವರ ಆರಾಧಕರಿದಿರಿ. ನೀವು ವೈಷ್ಣವ ಸಂಪ್ರದಾಯದ ಕನಕದಾಸರ ಪೀಠಕಟ್ಟಿಕೊಂಡು ನಿಮಗೆ ಹಾದಿ ತಪ್ಪಸ್ತಾ ಇದಾರಿ. ನಿಮಗೂ ಆ ಮಠಕ್ಕೂ ಸಂಬಂಧವಿಲ್ಲ. ಅಲ್ಲಿಯೇ ಸ್ವಾಮಿಗಳ ಬ್ರಾಹ್ಮಣರ ಪ್ರತೀಕವಾಗಿ ಇರುವಂತೆ ಸ್ವಾಮಿಗಳು ಅನ್ನುವಂತ ಭಾವನೆಗಳನ್ನು ಸೃಷ್ಟಿ ಮಾಡಿ ಗ್ಯಾಪನ್ನು ಸಹ ಸೃಷ್ಟಿ ಮಾಡಿದರು. ನಾವು ೪ ಮಠಗಳನ್ನು ಯಾವಾಗ ಮಾಡಿದ್ವಿ ಜನಹತ್ತಿರ ಆದರು. ಜನ ಹತ್ತಿರ ಆದ ಮೇಲೆ ವಾಸ್ತವಿಕತೆ ಗೊತ್ತಾಯಿತು.

ಅಧ್ಯಾಯ ಆರು

ಜನಪದರು ಮತ್ತು ಮಠಗಳು

ಅಧ್ಯಾಯ: ಆರು

ಜನಪದರು ಮತ್ತು ಮಠಗಳು

ಜನಪದ ಸಾಹಿತ್ಯವೆಂದರೆ ಕೇವಲ ಹಾಡಲ್ಲ, ಅದರಲ್ಲಿ ಧ್ಯಾನ, ಭಕ್ತಿ, ಚಿಂತನೆಯಷ್ಟೇ ಇರುವುದಿಲ್ಲ. ಧಾರ್ಮಿಕ ಆಚರಣೆ, ನಡೆ, ನುಡಿ, ಕಲೆ, ಸಾಹಿತ್ಯ, ಸಂಗೀತಗಳಲ್ಲದೆ ಅದು ಒಂದು ಸಮುದಾಯದ ಸಮಗ್ರ ಜೀವನದ ಜೀವಂತ ಚಿತ್ರಣವಾಗಿದೆ. ಬಹುತೇಕ ಎಲ್ಲ ಅನಕ್ಷರಸ್ಥ ಜನ ಸಮುದಾಯಗಳು ಹಾಗೂ ಶೋಷಿತ ಜನರ ಅನಿಸಿಕೆಗಳನ್ನು ವ್ಯಕ್ತಪಡಿಸುವುದಕ್ಕೆ ಇರುವ ಏಕೈಕ ಮಾದ್ಯಮವೆಂದರೆ ಕಂಠಸ್ಥ ಸ್ವರೂಪದಲ್ಲಿ ಹರಿದು ಬರುವ ಜನಪದ ಸಾಹಿತ್ಯವೇ ಆಗಿದೆ. ಬದುಕಿನ ಮೇಲೆ ಪ್ರಭಾವ ಬೀರಿದ ದೈವವನ್ನು ಮನಸ್ಸಿನಲ್ಲಿಯೇ ನೆನೆದು ಒಂದುಕ್ಷಣ ಪ್ರಾರ್ಥನೆ ಸಲ್ಲಿಸಿ ಕೃತಾರ್ಥರಾಗುವ ಭಾವ ನಮ್ಮ ಜನಪದರದ್ದು. ಹಾಗಾಗಿ ಜನಪದರು ತಮ್ಮ ಸಮುದಾಯದ ಮಠಗಳನ್ನು ಅಭಿವೃದ್ಧಿಪಡಿಸಲು ದಾನಧರ್ಮಗಳನ್ನು ನೀಡಿ ಗೌರವಿಸುತ್ತಿದ್ದರು. ಆ ಮೂಲಕ ದೈವವನ್ನು ಆರಾಧಿಸುವುದು ಕಂಡುಬರುತ್ತದೆ.

ಒಳಮಠಕೆ

ಜಂಗಮರು ಹೊರಮಠಕೆ ಭಕ್ತರು ಕುಲಹನ್ನೆರಡು ಜಾತಿ ಕಲಿಯಾಲಿ ಹೊರಮಠದಾಗೆ ಮದ್ದು ಮಾಂಸಗಳೇ ಬೇಸಾಲಿ ಹೊರಮಠದಲ್ಲಿ. ಆರ್ಥಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ ಪ್ರಬಲವಾದ ಸಮುದಾಯಗಳು ಮಡಿ ಮೈಲಿಗೆ ಎಂಬ ಪರಿಕಲ್ಪನೆಯಲ್ಲಿ ಗದ್ದುಗೆ ಪೂಜೆ ಉನ್ನತ ವರ್ಗದವರ ಪಾಲಾದರೆ ಸಮಾದಿ ಪೂಜೆ ದಲಿತ, ಕೆಳವರ್ಗದ ಮಠಮಾನ್ಯಗಳ ಸೊತ್ತಾಗಿದೆ. ಮಠಗಳು ದಲಿತ ಮಠಗಳಾಗಿ ಕೆಳಜಾತಿಯ ಮಠಗಳಾಗಿ ರೂಪಿತವಾಗಿವೆ. ಹೀಗೆ ಜನಪದರು ಯಾವುದೇ ಭೇದ-ಭಾವವಿಲ್ಲದೆ ತಮ್ಮ ತನು-ಮನಗಳನ್ನು ಮಠಮಾನ್ಯಗಳಿಗೆ ಅರ್ಪಿಸುತ್ತಿದ್ದರು. ಆದರೆ ಜನಪದರಲ್ಲಿ ಎಂದಿಗೂ ಸಹ ಇದು ಮೇಲು ಜಾತಿಯವರ ಮಠ, ಕಳಜಾತಿಯವರ ಮಠವೆಂದು ತಿಳಿಯದೆ ಎಲ್ಲಾ ಮಠಗಳು ಧನ್ಯತ ಭಾವದಿಂದ ನಡೆದು ಭಕ್ತಿಪೂರ್ವಕವಾಗಿ ಹಾಡಿ ದಾನ-ದತ್ತಿಗಳನ್ನು ನೀಡುತ್ತಿದ್ದರು. ಇವತ್ತಿಗೂ ಸಹ ಎಷ್ಟು ಲಿಂಗಾಯತ

ಮಠಗಳು, ಬ್ರಾಹ್ಮಣ ಮಠಗಳು ಭೇದ-ಭಾವಗಳು ಇಲ್ಲದೇ ಜನಪದರ ಮನದಲ್ಲಿ ನೆಲೆನಿಂತಿವೆ. ಉದಾಹರಣೆಗೆ

ಗುರುವಿನ ಮಠದಾಗ ತಿರುಗಾಡುವುದಾದರೆ

ರೇಷ್ಮೆ ದೋತರದ ತೊರಮಗ ಗೊಬ್ಬಯ್ಯ

ಗುರುಪೀಠ ಮಾಡಿ ಬರುವಾದ

ಎನ್ನುವ ಜನಪದರ ದಾಟಿಯಲ್ಲಿ ಲಿಂಗಾಯತ ಮಠವಾದ ಕೊಟ್ಟೂರುಸ್ವಾಮಿ ಮಠದ ವರ್ಣನೆಯನ್ನು ತಂದಿರುವುದು ಕಾಣಬಹುದು.

ಹೀಗೆ ಜನಪದರ ಬಾಯಿಯಲ್ಲಿ ಯಾವುದೇ ಮೇಲುಕೀಳು, ಹಮ್ಮು-ಭಿಮ್ಮು ತೋರದೆ ಕೇವಲ ಭಕ್ತಿಯೊಂದೇ ಅವರ ಪಾಲಿಗೆ ಶ್ರೇಷ್ಠವೆಂದು ತಿಳಿಯುತ್ತಾರೆ.

'ಮುನಿಗಳಿರುವುದು ಆಶ್ರಮ, ಯತಿಗಳಿರುವುದು ಮಠ' ಎಂಬ ಗಾದೆ ಮಾತು ಕನ್ನಡ ಜಾನಪದದಲ್ಲಿದೆ. ಅಂದರೆ ಮುನಿಗಳು ಆತ್ಮೋದ್ಧಾರ ಪಡೆಯಲು ಅರಣ್ಯದಲ್ಲಿರುವ ಆಶ್ರಮದಲ್ಲಿ ಜೀವಿಸುತ್ತಿದ್ದರು. ಆದರೆ ಸಂನ್ಯಾಸಿಗಳು ಆತ್ಮೋದ್ಧಾರದ ಜೊತೆಗೆ, ಧರ್ಮ ಬೋಧನೆ ಮಾಡಲು ಜನವಸತಿ ಪ್ರದೇಶಗಳಾದ ಗ್ರಾಮ, ನಗರ, ಪಟ್ಟಣಗಳಲ್ಲಿ ಮಠ ಮಾಡಿಕೊಂಡಿರುತ್ತಿದ್ದರು. ಇಂತಹ ಮಠಗಳನ್ನು ಅಗ್ರಹಾರ, ಬ್ರಹ್ಮಪುರಿ, ದೇವಸ್ಥಾನ ಮತ್ತು ಘಟಿಕಾಸ್ಥಾನಗಳೆಂದೂ ಸಹ ಕರೆಯುತ್ತಿದ್ದರು. ಮೂಲದಲ್ಲಿ ಇವುಗಳು ವಿದ್ಯಾಭ್ಯಾಸವನ್ನು ನೀಡುತ್ತಿದ್ದ ವಿದ್ಯಾಕೇಂದ್ರಗಳಾಗಿದ್ದವು. ಇಂತಹ ಮಠಗಳ ಗುರುಗಳು ಅಥವಾ ಸ್ಥಾನಪತಿಗಳು 'ರಾಜಗುರು'ಗಳೆಂದು ಮಾನ್ಯರಾಗುವ ಮೂಲಕ ಸಹಜವಾಗಿ ಸಾಮಾಜಿಕ ಪ್ರತಿಷ್ಠೆಯನ್ನು ಪಡೆದರು. ಬಹುಮುಖ್ಯವಾಗಿ ಧಾರ್ಮಿಕ ಹಿನ್ನೆಲೆಯಲ್ಲಿ ನಿಂತಿರುವ ಈ ನಾಡನ್ನು ಆಳಿದವರೆಲ್ಲರೂ ಗುರುಮಠಗಳಿಗೆ ಅದರ ಪಟ್ಟಾಧಿಕಾರಿಗಳಿಗೆ ಮಹತ್ವನೀಡಿ, ರಾಜ್ಯಾಡಳಿತದಲ್ಲಿ ಅವರ ಸಲಹೆ, ಮಾರ್ಗದರ್ಶನ, ಸೂಚನೆ ಪಡೆದು ಅದರಂತೆ ಆಡಳಿತ ನಡೆಸಿದರು. ಹಾಗಾಗಿ ಗುರುಮಠಗಳು ರಾಜಮಾನ್ಯರಾಗಿ ಗುರುತಿಸಲ್ಪಟ್ಟರು. ಹೀಗೆ ರಾಜಮಾನ್ಯರಾದ ಮಠಾಧೀಶರ ಮಠಗಳಿಗೆ ಒಂದಿಲ್ಲೊಂದು ರಾಜಾಶ್ರಯ ದೊರೆತು ಮಠಗಳ ಏಳಿಗೆಯು ವೇಗವಾಗಿ ನಡೆಯಿತು. ಹಾಗೆ ನೋಡಿದರೆ ಕರ್ನಾಟಕದಲ್ಲಿ ಮಠಗಳಿಲ್ಲದ ಊರಿಲ್ಲವೇನು ಅನ್ನುವಷ್ಟು ಮಠಗಳಿರುವುದನ್ನು ಕಾಣಬಹುದು.

ರಾಜರು, ನಾಯಕರು, ದೊರೆಗಳು, ಸಾಮ್ರಾಟರು, ಪ್ರಭುಗಳು ಮುಂತಾದ ಅನೇಕ ರಾಜವಂಶಗಳು ಒಂದಿಲ್ಲೊಂದು ಗುರುಪೀಠಗಳಿಗೆ ಮಾನ್ಯತೆ ನೀಡಿ, ಅವರನ್ನು ರಾಜಗುರುಗಳನ್ನಾಗಿ

ನೋಡಿಕೊಳ್ಳುವುದಲ್ಲದೆ, ಇತರೆ ಮಠಗಳ ಪೀಠಾಧಿಕಾರಿಗಳಿಗೂ ವಿಶೇಷ ಮಾನ್ಯತೆ ಕೊಡುತ್ತಿದ್ದರು. ಮಾನ್ಯತೆ ಕೊಡುವುದರ ಜೊತೆಗೆ ಶಾಸನಗಳ ಮೂಲಕ ಅನೇಕ ದತ್ತಿದಾನ ನೀಡಿ ಅವುಗಳ ಪುರೋಭಿವೃದ್ಧಿಗೂ ಸಹಕಾರಿಯಾಗಿದ್ದರು. ಹಾಗಾಗಿಯೇ ಕರ್ನಾಟಕದಲ್ಲಿ ಈ ತರಹದ ಮಠಗಳ ದೊಡ್ಡ ಪಟ್ಟಿಯ ಪರಂಪರೆ ಇದೆ. ಹಳ್ಳಿಗೊಂದು ಗುಡಿ, ನಾಡಿಗೊಂದು ಗಡಿ ಇದ್ದಂತೆ, ಊರಿಗೊಂದು ಮಠ ಕರ್ನಾಟಕದಲ್ಲಿರುವುದನ್ನು ಕಾಣಬಹುದಾಗಿದೆ. ಕರ್ನಾಟಕದಲ್ಲಿರುವ ಶಾಸನಗಳನ್ನು ಗಮನಿಸಿದರೆ ಬಹುಪಾಲು ಶಾಸನಗಳು ಗುರುಮಠಗಳಿಗೆ ದತ್ತಿ, ದಾನಗಳನ್ನು ನೀಡಿರುವುದರ ಬಗೆಗೆ ತಿಳಿಸುತ್ತವೆ. ಇದನ್ನು ಗಮನಿಸಿದರೆ ಮಠ, ಮಠಾಧೀಶರು ಹಾಗೂ ಈ ನಾಡನ್ನಾಳಿದ ರಾಜಮಹಾರಾಜರುಗಳ ಸಂಬಂಧಗಳು ಚೆನ್ನಾಗಿಯೇ ಇದ್ದವು ಎಂದು ತಿಳಿದು ಬರುತ್ತದೆ.

ನಮ್ಮ ನಾಡನ್ನಾಳಿದ ಅನೇಕ ರಾಜ ವಂಶಗಳು ಒಂದಲ್ಲೊಂದು ಗುರುಪೀಠಗಳಿಗೆ ಮಾನ್ಯತೆ ನೀಡಿ, ಅವರನ್ನು ರಾಜಗುರುಗಳನ್ನಾಗಿ ನೋಡಿಕೊಂಡಿರುವುದಲ್ಲದೆ, ಇತರೆ ಗುರು ಪೀಠಗಳಿಗೂ ಮಾನ್ಯತೆ ನೀಡಿ ಅವುಗಳಿಗೂ ಶಾಸನಗಳ ಮೂಲಕ ಅನೇಕ ದತ್ತಿ ದಾನ ನೀಡಿ ಅವುಗಳ ಪುರೋಭಿವೃದ್ಧಿಗೂ ಸಹಕಾರವಾಗಿದ್ದಂತೆ, ಸಾಮಾನ್ಯ ಪ್ರಜೆಗಳು ತಮ್ಮ ಹೆಸರಿನಲ್ಲಿ, ತಮ್ಮ ಸಂಬಂಧಿಗಳ ಮಕ್ಕಳ ಹೆಸರಲ್ಲಿ ಮಠ ಕಟ್ಟಿಸಿ ದಾನ ನೀಡುತ್ತಿದ್ದರು.

ಬದನೂರಿನಿಂದ ಅರಗಕ್ಕೆ ಹೋಗುವ ದಾರಿ ಕೂಡೂರಿನಲ್ಲಿ ಬೊಕ್ಕಸದ ಸಿದ್ದಬಸಯ್ಯನ ಹೆಂಡತಿ ವೀರಮ್ಮನು ತನ್ನ ಮಗ ಭದ್ರಯ್ಯನ ಹೆಸರಲ್ಲಿ ಕಟ್ಟಿಸಿದ ಮಹತ್ತಿನ ಮಠಕ್ಕೆ ಸೋಮಶೇಖರ ನಾಯಕರು ಐದು ಎತ್ತುಗಳ ಮಾನ್ಯವನ್ನು ಶಿವಾರ್ಪಿತವಾಗಿ ಬಿಟ್ಟರು.

ಜಗಳೂರು ತಾಲ್ಲೂಕು ರೆಡ್ಡಿಹಳ್ಳಿ ಗ್ರಾಮ ಆಂಜನೇಯ ದೇವಸ್ಥಾನದ ಪಶ್ಚಿಮ ಗೋಡೆ ಬಳಿ ನೆಟ್ಟ ಕಲ್ಲಿನ ಶಾಸನದಂತೆ(EC–೭, ನಂ.೪೫) ಶಕ ೧೪೮೯ (ಕ್ರಿ.ಶ.೧೫೬೭)ರಲ್ಲಿ ಚಿತ್ರದುರ್ಗದ ಕಾಮಗೇತಿ ಕಸ್ತೂರಿ ರಂಗಪ್ಪನ ದಳವಾಯಿ ಭರಮಪ್ಪನವರು ಜಗಳೂರು ವಿರಕ್ತಮಠಕ್ಕೆ ದಾನಕೊಟ್ಟ ಪ್ರಸ್ತಾಪವಿದೆ. ತೃಟಿತವಾದ ಈ ಶಾಸನದಿಂದ ಹೆಚ್ಚಿನ ವಿವರ ತಿಳಿದು ಬರುವುದಿಲ್ಲ. ಇದೇ ಜಗಳೂರು ತಾಲ್ಲೂಕು ಕಲ್ಲೇದೇವರಪುರದ ಶಾಸನ(MAR ೧೯೪೨/೩೫) ಪರಿಧಾವಿ ಸಂವತ್ಸರದ ಜೇಷ್ಠ ಬಹುಳ ೫ ಕಲ್ಲೇದೇವರಪುರದ ಕಂತಿಯ ವಡೆಯರಿಗೆ ಹಿರಿಯ ಪರಿಗೆಯಕ್ಕನ ಮಕ್ಕಳು ದಯೆಸಯಕ್ಕರು ಜಮ್ಮಾಪುರದ ಕೆರೆಯ ಕೆಳಗಣ ಗದ್ದೆಯನ್ನು ದಾಸ ಕೊಟ್ಟಿದ್ದನ್ನು ತಿಳಿಸುತ್ತದೆ. ಈ ಕಂತಿಯ ಒಡೆಯರು ವೀರಶೈವ ಪಂಥದ ಗುರುಗಳೆಂಬುದು ಸ್ಪಷ್ಟವಾಗಿದೆಯಾದರೂ ಅವರಿಗೆ ಸಂಬಂಧಿಸಿದ ಮಠದೇವರು ಇದ್ದಲ್ಲಿ

ಅವರ ಹೆಸರು ಉಕ್ತವಾಗಿಲ್ಲ. ಇದೇ ತಾಲೂಕಿನ ರಸ್ತೆ ಮಾಚನಹಳ್ಳಿ ಶಾಸನ(MAR ೧೯೪೪/ ೩೬) ಗೌಡ ಕಲ್ಲಪ್ಪ ಮತ್ತು ಮಾದಿನಾಯಕರು ಸಿಂಗಣ ಒಡೆಯರ ಮಠಕ್ಕೆ ಮಾನ್ಯ ಎಂಬ ಬರಹ ಮಾತ್ರವಿದ್ದು, ಇದು ೧೮ನೇ ಶತಮಾನದ ಒಂದು ಭೂದಾನದ ದಾಖಲೆಯಾಗಿದೆ. ಇದೇ ಜಗಲೂರು ತಾಲ್ಲೂಕು ಆಸಗೋಡು ಗ್ರಾಮದಲ್ಲಿ ಶಿಲಾಶಾಸನ(MAR ೧೯೪೭-೫೬/ ೧೨) ಚಿತ್ರದುರ್ಗದ ಮುರಿಗೆ ಮಠಕ್ಕೆ ಮಲ್ಲಪ್ಪ ಎಂಬಾತ ಭೂಮಿದಾನ ಕೊಟ್ಟ ವಿಚಾರ ತಿಳಿಸುತ್ತದೆ'(ಸಂತೆ ಬೆನ್ನೂರು ಸುಮತೀಂದ್ರ ನಾಡಿಗ್, ೨೦೦೮, ೭೨).

ಶಾಂತಯ್ಯ ತನ್ನ ತಾಯಿ ಲಿಂಗಮ್ಮನ ಹೆಸರಲ್ಲೂ ಮಠಕಟ್ಟಿಸಿ ಭೂಮಿಯನ್ನು ದಾನ ನೀಡಿದನಂತೆ(ಕೆ.ಅ.ಶಾ.ಸಂ.೨೪೩) ಕರ್ತರಯ್ಯನು ತಮ್ಮ ತಾಯಿ ಲಿಂಗಮ್ಮಾಜಿಯವರ ಹೆಸರಲ್ಲಿ ಮಹತ್ತಿನ ಮಠಕಟ್ಟಿಸಿದಾಗ ಚೆನ್ನಾಮ್ಮಾಜಿಯು ೨೫ ಎತ್ತಿನ ಮಾನ್ಯವನ್ನು ಶಿವಾರ್ಪಿತವಾಗಿ ಬಿಟ್ಟಳು.

ಬಿದಿರೂರ ಹಳೆಯ ಮುತ್ತಿನ ಮಹತ್ತಿನ ಮಠಕ್ಕೆ ಶಿವಪ್ಪ ನಾಯಕರಿಗೆ ಶಾಶ್ವತ ಶಿವಲೋಕ ಪ್ರಾಪ್ತಿಯಾಗಲೆಂದು ಅವರ ಅನುಜರಾದ ವೆಂಕಟಪ್ಪನಾಯಕರು ೬೩ ಗದ್ಯಾಣದ ಭೂಮಿಯನ್ನು ದಾನಕೊಟ್ಟರು(ಕೆ.ಅ.ಶಾ.ಸಂ.೧೫೧).

ಸೋಮಶೇಖರನಾಯಕನು ತನ್ನ ಅಣ್ಣನಾದ ಭದ್ರಪ್ಪ ನಾಯಕನು ಮಾಡಿರುವ ಹಿರಣ್ಯಗರ್ಭದಾನ ಕಾಲದಲ್ಲಿ ಅರಗದ ಮಠಕ್ಕೆ ಒಂದಷ್ಟು ಭೂಮಿಯನ್ನು ಕೊಟ್ಟು ಅದರಲೊಂದಿಷ್ಟು ಭಾಗ ತೆಂಗು, ಅಡಕೆ, ಬಾಳೆ ಬೆಳೆಯಲು ಸೂಚಿಸಿದನು(ಕೆ.ಅ.ಶಾ.ಸಂ.೧೫೨).

'ಚನ್ನಗಿರಿ ತಾಲ್ಲೂಕು ಸಂತೇಬೆನ್ನೂರಿನ ಶಾಸನ(EC–೭, ಚನ್ನಗಿರಿ–೧೧) ಸಿರಿನಾಯಕ ಕೊಟ್ಟ ಮಠಮಾನ್ಯ ಎಂಬ ಉಲ್ಲೇಖ ಒಳಗೊಂಡಿರುವ ಇದು ಇಲ್ಲಿದ್ದ ಸಿದ್ಧಲಿಂಗ ದೇವರ ಮಠಕ್ಕೆ ಭೂಮಿ ಕೊಟ್ಟರೆಂದು ಹೇಳಲಾಗುತ್ತದೆ. ಇದೇ ತಾಲ್ಲೂಕಿನ ತಣಿಗೆರೆಯಲ್ಲಿರುವ ಶಾಸನ(EC–೭, ಚನ್ನಗಿರಿ–೧೪)'ಕೋಗುಂಡೆ ಬಸಪ್ಪ ದೇವರಿಗೆ ಕೊಟ್ಟ ಹೊಂನು ಮಠ' ಎಂಬ ಉಲ್ಲೇಖ ಒಳಗೊಂಡಿದೆ. ಅಲ್ಲಿರುವ ಇನ್ನೊಂದು ಶಾಸನ(EC–೭, ಚನ್ನಗಿರಿ.೧೫) 'ವಡನಹಾಳ್ಳೆಯನವರಿಗೆ ವಲೋಲು ಕೊಟ್ಟ ಮಟ' ಎಂದಿದೆ. ಇದೇ ತಾಲೂಕು ಹಿರೇಕೋಗಲೂರಿನ ಒಂದು ಶಾಸನ(EC–೭, ಚನ್ನಗಿರಿ೦೨೫) ಸಂತೆಬೆನ್ನೂರು 'ಸಿದ್ಧಲಿಂಗದೇವರ ಮಠಕ್ಕೆ' ಸಂತೆಬೆನ್ನೂರು ಹನುಮಪ್ಪ ನಾಯಕ ಕೊಟ್ಟ ದತ್ತಿ ವಿಚಾರ ತಿಳಿಸುತ್ತದೆ. ಇದೇ ಚನ್ನಗಿರಿ ತಾಲ್ಲೂಕು ಅಂಣಾಪುರದಲ್ಲಿರುವ ಶಾಸನ(EC–೭, ಚನ್ನಗಿರಿ ೬೩). ಸಂತೆಬೆನ್ನೂರು ಮಹಾಂತಮಠದ ಧರ್ಮಕ್ಕೆ' ನೀಡಿದ ದಾನದ ಬಗ್ಗೆ ಮಾಹಿತಿ ನೀಡುತ್ತದೆ. ಹಿರೇಕೋಗಲೂರಿನಲ್ಲಿ

ದೊರೆತ ಇನ್ನೊಂದು ಶಾಸನ(MAR ೧೯೩೫/೩೮) ಗುರುಬಸವ ಮತ್ತು ಸುತ್ತಿಗಾವಿಯ ಮಹಾಂತರಿಗೆ ನಾಲ್ಕು ಮಠದ ದೇವರಿಗೆ ದಾನ ಕೊಡುವ ವಿಚಾರ ತಿಳಿಸುತ್ತಿದ್ದು, ಇದಕ್ಕೆ ವೀರ ಮಾಹೇಶ್ವರರು ಅಡ್ಡಿಪಡಿಸದಿರಲು ಸೂಚಿಸಲಾಗಿದೆ'(ಸಂತೇಬೆನ್ನೂರು ಸುಮತೀಂದ್ರ ನಾಡಿಗ್, ೨೦೦೮, ೭೩–೭೪).

ಹಬ್ಬ ಹುಣ್ಣಿಮೆ ಜಾತ್ರೆ ದ್ವಾದಶ ಪುಣ್ಯಕಾಲಗಳಲ್ಲಿನ ಉತ್ಸವಕ್ಕೆ ಕೊಟ್ಟ ದಾನಗಳು

ಚಕ್ಕೋಡದ ಮಹತ್ತಿನ ಮಠಕ್ಕೆ ಕಾಶಿಯಲ್ಲಿ ಮಾಡುವ ಸೋಮವಾರದ ಪರ್ವಕ್ಕೆ ಚಕ್ಕೋಡ ಗ್ರಾಮವನ್ನು ದಾನ ಬಿಟ್ಟು ೭೫ ವರಹಗಳನ್ನು ಕೊಟ್ಟು ೩೭ ಭಾಗ ಮಠಕ್ಕೆ ೨೪ ಭಾಗ ಕಾಶಿಯಲ್ಲಿ ಮಾಡುವ ಪೂಜೆಗೆ ಸೇರಬೇಕು ಎಂದು ಶಾಸನ ಹಾಕಿಸಿಕೊಟ್ಟಿದ್ದಾರೆ(೨೦೦೮, ೧೯೭).

ಬೊಕ್ಕಸಟ ಸಿದ್ದಬಸವಯ್ಯನ ಹಂಪೆಯಲ್ಲಿ ನಡೆಸುವ ಜಾತ್ರೆಗಾಗಿ ಕೌಲೇದುರ್ಗದ ಮಹತ್ತಿನ ಮಠಕ್ಕೆ ಬಸಪ್ಪನಾಯಕರು ೧೨೦ ವರಹದ ಸಾಲವನ್ನು ಮತ್ತು ಒಂದಷ್ಟು ಭೂಮಿಯನ್ನು ಶಿವಾರ್ಪಿತವಾಗಿ ಬಿಟ್ಟರು(ಕೆ.ಅ.ಶಾ.ಸಂ.೧೫೫). ಚಂದ್ರಗ್ರಹಣ ಸಂದರ್ಭಗಳ ಸಂದರ್ಭದಲ್ಲಿ ಬಿಟ್ಟದಾನವೂ ಇದೆ(ಕೆ.ಅ.ಶಾ.ಸಂ.೨೨೫).

ಮಂಡಲಿಯ ಮುಳ್ಳುಸ್ವಾಮಿಯ ಮಹತ್ತಿನ ಮಠಕ್ಕೆ ಪ್ರತಿವರುಷ ಕಾರ್ತಿಕ ಸೋಮವಾರಗಳಲ್ಲಿ ಮಾಡುವ ಪರ್ವ ದೀಪಾರಾಧನೆಗೆ, ಅಮೃತಪಡಿಗೆ ಗಾಜನೂರು ಸೀಮೆಯ ಘಟ್ಟದ ಗ್ರಾಮದ ಭೂಮಿಯನ್ನು ದಾನ ಮಾಡಿದರು(ಕೆ.ಅ.ಶಾ.ಸಂ.೨೨೬).

ಹೀಗೆ ಯುಗಾದಿ ಮಹಾನವಮಿ ದೀವಳಿಗೆ ಹಬ್ಬಗಳಲ್ಲಿ ಹಬ್ಬಗಾಣಿಕೆಯೆಂದು ಕೆಲವು ಗದ್ಯಾಣಗಳನ್ನು ಕೊಡುತ್ತಿದ್ದರು. ಚಾತುರ್ಮಾಸದ ಆರಾಧನೆಗೆ ವಿಶೇಷ ದಾನ ನೀಡಲಾಗುತ್ತಿತ್ತು. ಜಂಗಮರಿಗೆ ಕಂತೆ ಭಿಕ್ಷೆ ನೀಡುವ ಸಲುವಾಗಿಯೇ ದಾನದತ್ತಿಗಳನ್ನು ನೀಡುತ್ತಿದ್ದರು.

ವೀರಶೈವ ಮಠಗಳಿಗೆ ಬ್ರಾಹ್ಮಣರೂ ದಾನ ನೀಡಿದ್ದಾರೆ. ಸುಬ್ಬಭಟ್ಟ ಸಿರಿವಂತ ಕೃಷ್ಣಭಟ್ಟ, ಪ್ರಧಾನಿ ಹಾರೋವೆಂಕಟಯ್ಯ, ಚಿನ್ನಬಂಡಾರದ ಕೃಷ್ಣಪ್ಪಯ್ಯನ ಮೊಮ್ಮಗ ಲೋಕಯ್ಯ ಮಠಗಳಿಗೆ ಭೂದಾನಗಳನ್ನು ನೀಡಿದ್ದಾರೆ.

ವ್ಯಾಪಾರಿಗಳು ಕೂಡಾ ಕೆಲವು ದಾನಗಳನ್ನು ಕೊಟ್ಟು ಶಾಸನ ಹಾಕಿಸಿದ್ದಾರೆ. ವೆಂಕಟಪ್ಪನಾಯಕರ ನಿರೂಪಿವಿಡಿದು ಮಹಾನಾಡ ಶೆಟ್ಟಿಯರೆಲ್ಲ ಚಂಪಕ ಸರಿಸ್ಸಿನ ಮಠಕ್ಕೆ ಮೂಲವೀಸದ ಧರ್ಮ ಶಾಸನ ಹಾಕಿಸಿಕೊಟ್ಟರು.

ಮುಸ್ಲಿಂ ಧರ್ಮಿಯರು ಮಠಗಳಿಗೆ ದಾನವನ್ನು ನೀಡಿದ್ದಾರೆ. ಮೇಲಗಣಗವಿಯ ಮಠದ ಬಸವಲಿಂಗದೇವರಿಗೆ ಚಿಕ್ಕಮಳಲಕೆರೆಯ ಗ್ರಾಮದಿಂದ ಬುರಾನ್‌ಖಾನ್ ಅವನ ಮಕ್ಕಳಾದ ಮಯಿದುಖಾನ್, ಬುಡಗಾಖಾನ್, ಪಾದೂಖಾನ್, ಶಾಖಾಸುಖಾನ್ ಕೊಟ್ಟದ್ದು ೧೪ ವರಹಗಳು. ಹಾಗೂ ಅವರ ಚಿಕ್ಕಪ್ಪ ಬಹಖಾನ ಮಗ ಅಬೂಖಾನ್‌ನು ತನ್ನ ಪಾಲಿಗೆ ಬಂದ ಭೂಮಿಯಿಂದ ೩೦ ವರಹದ ಭೂಮಿಯನ್ನು ಶಿವಾರ್ಪಿತವಾಗಿ ಕೊಟ್ಟನು(ಕೆ.ಅ.ಶಾ.ಸಂ.೨೩೩).

'ಮಹಿಳೆಯರು ಸಾಕಷ್ಟು ದಾನದತ್ತಿಗಳನ್ನು ನೀಡಿದ್ದಾರೆ. ಚೆನ್ನಾಮ್ಮಾಜಿ ಶಿವಪ್ಪನಾಯಕರ ಹೆಸರಿನಲ್ಲಿ ಶಿವರಾಜಪುರದಲ್ಲಿನ ಮಹತ್ತಿನ ಮಠಕ್ಕೆ ಯಜನಿಗ್ರಾಮದ ಮಠಕ್ಕೆ ಕವಲೇದುರ್ಗ ಉಳಿವೆ, ಚಿನ್ನಾಪುರ, ಎಡಹಳ್ಳಿ, ಹೊಸಹಳ್ಳಿ, ಆಗುಂಬೆ, ಮಾಲೂರು ಸೀಮೆ ಮುಂತಾದ ಮಠಗಳಿಗೆ ಭೂದಾನ, ಎತ್ತಿನ ಮಾನ್ಯದ ದಾನಗಳನ್ನು ಬಿಟ್ಟಿದ್ದಾಳೆ. ಹಾಗೆಯೇ ಹಿಂದೆ ಕೊಟ್ಟದಾನವನ್ನು ಸ್ಥಿರೀಕರಣ ಮಾಡಿ ಮುಂದುವರಿಸಿದ್ದಾಳೆ. ಬಸವಲಿಂಗಮ್ಮಾಜಿಯು ಅಂಡಿಗೆ ಸೀಮೆಯಲ್ಲಿ ತ್ಯಾವರಕೊಪ್ಪ ಗ್ರಾಮವನ್ನು ದಾನ ನೀಡಿದ್ದಾಳೆ. ಕಾಶೀಮಠದ ಪೀಠದ ಶಿವಲಿಂಗಸ್ವಾಮಿಗಳಿಗೆ ಕಾಳವಳ್ಳಿ ಬಂದಗದ್ದೆಯ ಕೆಲಭೂಮಿಯನ್ನು ಶಿವಾರ್ಪಿತವಾಗಿ ಬಿಟ್ಟಿದ್ದಾಳೆ. ಬನದಮ್ಮನು ಕೆರೆಕೊಪ್ಪದಲ್ಲಿ ಪರಮೇಶ್ವರಮ್ಮಾಜಿಯು ಕೋಟೇಶ್ವರದಲ್ಲಿ ಬಸವಯ್ಯನ ಮಡದಿ ವೀರಮ್ಮನು ಮಠಗಳನ್ನು ಕಟ್ಟಿಸಿ ದಾನಗಳನ್ನು ನೀಡಿದ್ದಾರೆ. ಕಲಾವಿದೆಯರು ಮಠಗಳನ್ನು ಕಟ್ಟಿಸಿ ಮಹತ್ತಿನ ಮಠಗಳಿಗೆ ದಾನವನ್ನು ನೀಡಿದ್ದಾರೆ. ಹುಜೂರು ಮೇಳದ ಪುಟ್ಟತಾಯಿ ಜಂಬುಖಂಡಿಚೆನ್ನಯು ಕುಂಬಸೆ ಬಿದನೂರ ಮಧ್ಯದ ಮಠಕ್ಕೆ ೩೦೦ ವರಹದ ಭೂಮಿಯನ್ನು ಕ್ರಯಮಾಡಿಸಿಕೊಂಡು ಚಿಕ್ಕಜೆನ್ನಿ ಗ್ರಾಮದ ೪೯ ವರಹದ ಭೂಮಿಯನ್ನು ಶಿವಾರ್ಪಿತವಾಗಿ ಬಿಟ್ಟಳು'(೨೦೦೮, ೧೯೯-೨೦೦).

ಮಠಗಳಿಗೆ ಭಕ್ತರು ಅನೇಕ ರೀತಿಯ ಕೊಡುಗೆಗಳನ್ನು ನೀಡುತ್ತಿದ್ದರು. ತಾವು ಬೆಳೆದ ಧಾನ್ಯಗಳನ್ನು ನೀಡುತ್ತಿದ್ದರು. ಕೆಲವು ಭಕ್ತಾದಿಗಳು ತಾವು ಬೆಳೆದ ಧಾನ್ಯಗಳನ್ನು ಬಂಡಿಗಳಲ್ಲಿ ತುಂಬಿಕೊಂಡು ಬಂದು ಮಠಕ್ಕೆ ಸಲ್ಲಿಸುತ್ತಿದ್ದರು. ಆನಂದಿಪುರದ ಚಂಪಕ ಸರಸ್ಸಿ ಮಠಕ್ಕೆ ವೆಂಕಟಪ್ಪನಾಯಕರು ೧೨ ಎತ್ತಿನ ಮಾನ್ಯ ಬಿಟ್ಟಿದ್ದಾರೆ(ಕೆ.ಅ.ಶಾ.ಸಂ.೪೪). ಮಹತ್ತಿನ ಮಠಕ್ಕೆ ೫ ಎತ್ತಿನ ಮಾನ್ಯವನ್ನು(೪೭) ಬಾರಕೂರಿನ ಮಹತ್ತಿನ ಮಠಕ್ಕೆ ೧೨ ಎತ್ತಿನ ಮಾನ್ಯವನ್ನು(೫೪) ಸದಾಶಿವನಗರದ ಮಹತ್ತಿನ ಮಠಕ್ಕೆ ೨೦ ಎತ್ತಿನ ಮಾನ್ಯ ಕೆರೆಕೊಪ್ಪದ ಮಠಕ್ಕೆ ವೀರಭದ್ರ ನಾಯಕರು ೧೦ ಎತ್ತುಗಳ ಮಾನ್ಯವನ್ನು(ಕೆ.ಅ.೮೬) ಉಳುಮೆಯ ಮಹತ್ತಿನ ಮಠಕ್ಕೆ ಚೆನ್ನಮ್ಮಾಜಿಯು ೨೫ ಎತ್ತಿನ ಮಾನ್ಯವನ್ನು(೧೮೧) ಆಗುಂಬೆ ಮಹತ್ತಿನ ಮಠಕ್ಕೆ ೭ ಎತ್ತಿನ ಮಾನ್ಯವನ್ನು ಕೊಟ್ಟಳು(೧೯೫) ಶಾಸನಗಳು ಹೀಗೆ ತಂದು ವಸ್ತುಗಳನ್ನು ಮಾರಿಕೊಳ್ಳದೆ ಮಠದ ಧರ್ಮಕ್ಕೆ ಉಪಯೋಗಿಸಬೇಕೆಂದು ಷರತ್ತನ್ನು ವಿಧಿಸಿವೆ.

ವಸ್ತುಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆ ಸಾಗಿಸುವಾಗ ವರ್ತಕರು ಸಾಮಾನ್ಯರು ೧ ಹೇರಿಗೆ ಇಷ್ಟು ಸುಂಕ ಎಂದು ವಸೂಲು ಮಾಡುತ್ತಿದ್ದರು. ಒಂದೊಂದು ಸಾರಿ ರಾಜರೇ ವೀಸದ ಸುಂಕವನ್ನು ಪಡೆದುಕೊಳ್ಳಲು ಅನುಮತಿಕೊಟ್ಟರೆ, ಕೆಲವು ಸಾರಿ ವ್ಯಾಪಾರಿಗಳೇ ಮೂಲವೀಸದ ಸುಂಕವನ್ನು ಮಠಕ್ಕೆ ಕೊಡುವಂತೆ ಕೇಳಿಕೊಂಡಿದ್ದಾರೆ.

ಮಹಾನಾಡ ಶೆಟ್ಟಿಯರೆಲ್ಲ ಸೇರಿ ವೆಂಕಟಪ್ಪನಾಯಕರ ನಿರೂಪವಿಡುದು ಚಂಪಕ ಸರಸ್ಸಿನ ಮಠಕ್ಕೆ ಮೂಲವೀಸದ ಧರ್ಮಶಾಸನ ಹಾಕಿಸಿಕೊಟ್ಟರು. ವೆಂಕಟಪ್ಪನಾಯಕರ ಆಳ್ವಿಕೆಯ ಪ್ರದೇಶದ ಎಲ್ಲ ಭಾಗಗಳಲ್ಲೂ ಸುಂಕದ ವಸೂಲಿಯನ್ನು ಮಾಡಿಕೊಳ್ಳಬಹುದಿತ್ತು.

ಕೆಳದಿಯಲ್ಲಿ ಮಠಗಳು ಕಾಣಿಕೆ ಎಂಬ ಈ ತೆರಿಗೆಯನ್ನು ಗ್ರಾಮಸ್ಥರಿಂದ ವಸೂಲಿ ಮಾಡುವ ಹಕ್ಕನ್ನು ದೊರೆಗಳಿಂದ ಪಡೆದುಕೊಂಡಿದ್ದರು. ಕಂದಾಯವನ್ನು ಯಾರಿಂದ ವಸೂಲು ಮಾಡಿಕೊಳ್ಳಬೇಕು ಎಂದಾಗ ಸಾದು, ವಕ್ಕಲಿಗ, ರೆಡ್ಡಿಗ, ಕಂಬಾರ ಕೈವಾಡ ಜಾತಿಗಳನ್ನು ಹೆಸರಿಸುತ್ತಾರೆ. ಮಠಕ್ಕೆ ಕೆಳಜಾತಿಯ ವರ್ಗದವರು ನೀಡಬೇಕಾಗಿದ್ದಿತು(ಕೆ.ಅ.ರಾ.ಸು.೧೫೮).

ಮಠಗಳು ಅಂದಿನ ಕಾಲದಲ್ಲಿ ರಾಜರ ಅನುಮತಿಯ ಮೇರೆಗೆ ಹೊರಗೆ ಇಷ್ಟು ಹಣ ಎಂದು ಎತ್ತು, ಎಮ್ಮೆ, ದನ ಕೋಣಗಳ ಮಾರಾಟದ ಮೇಲೂ ಸುಂಕವಿಧಿಸಿ ಅವನ್ನು ಮಠಕ್ಕೆ ಪಡೆದುಕೊಂಡಿದ್ದರು(ಕೆ.ಅ.ಶಾ.ಸಂ.೨೩೦). "ಕ್ರಿ.ಶ. ೧೬೦೪ ರ ಶಿವನಸಮುದ್ರ ಶಾಸನವು (ಕೊ.ಗಾ.೨೮) ತಿರುಮಲರಾಜ ನಾಯಕನು ಶಿವನಸಮುದ್ರದ ವೀರಶೈವ ಗುಡಿಯಲ್ಲಿ ಮಠವನ್ನು ನಿರ್ಮಿಸಿ, ಗುರುಗಳು ಹಾಗೂ ಭಕ್ತರಿಗೆ ಅಂನವನಿಕುವರಿ(ಅನ್ನದಾಸೋಹ) ನಿರ್ವಹಣೆಗಾಗಿ ಭೂದಾನ ನೀಡಿದ ಸಂಗತಿಯನ್ನು ಹೇಳುತ್ತದೆ.

ಸಕಲೇಶಪುರ ತಾಲ್ಲೂಕು ಬೆಚ್ಚನಹಳ್ಳಿಯ ಕ್ರಿ.ಶ. ೧೪೧೩ರ ಶಾಸನವು(ಸ.ಪು.೫೪) ವಿಜಯನಗರದ ಒಂದನೇ ದೇವರಾಯನ ಕಾಲದಲ್ಲಿ ಮಾದಂಣ ಎಂಬ ಭಕ್ತನು ಮಲ್ಲಿನಾಥದೇವರ ಮಕ್ಕಳು ನಂಜನಾಥ ದೇವರಿಗೆ ಬೆಕ್ಕನಹಳ್ಳಿ ಗ್ರಾಮವನ್ನು, ಆ ಸ್ಥಳದವರನ್ನು ಒಡಂಬಡಿಸಿ ಮಠ ಮಾನ್ಯಧರ್ಮವಾಗಿ ಪುರಧರ್ಮ ಅರ್ಥಾತ್ ಪುರವರ್ಗ ಶಾಸನವಾಗಿ ಕೊಟ್ಟ ವಿಷಯ ಹೇಳಿದೆ. ಪುರವರ್ಗ ಮಠ ಮಾನ್ಯಧರ್ಮ ಎಂದರೆ ಎರಡೂ ಶಬ್ದಗಳು ವೀರಶೈವ ಮಠದ ಅಯ್ಯನಿಗೆ-ಗುರುವಿಗೆ ದಾನ ಎಂಬ ಅರ್ಥವನ್ನು ನೀಡುತ್ತವೆ.

ಜನಪದರು ಮಠಗಳ ಅಭಿವೃದ್ಧಿಗಾಗಿ ದಾನ ನೀಡಿದ ಬಗ್ಗೆ ಚಿಕ್ಕಮಗಳೂರು ಜಿಲ್ಲೆಯ ಬೆಟ್ಟದ ಹಲಸುಬಾಳುವಿನ ಫಲಹಾರ ಮಠದ ಕ್ರಿ.ಶ. ೧೭೦೭ರ ತಾಮ್ರಶಾಸನ ಮಹಾನಾಡಿನ ಸಂಗನ ಬಸವಪ್ಪನ ಸಹಿತವಾಗಿ ರೈತಾಪಿ ಜನರು ಚನ್ನವೀರ ದೇವರ ಮಠಕ್ಕೆ ಕೊಡುಗೆ ಕೊಟ್ಟ ಬಗ್ಗೆ ಹೇಳಿದೆ(ಚಿ.ಮ.೬೦) ಶಾಸನದಲ್ಲಿ.

ದಾನ ನೀಡಿದ ರೈತಾಪಿ ಸಮುದಾಯದಲ್ಲಿ ವೀರಶೈವರಲ್ಲದೆ ವೀರಶೈವೇತರರೂ ಇದ್ದರು ಎಂಬುದು ಗಮನಾರ್ಹ. ಅಂದರೆ ವೀರಶೈವ ಮಠಗಳು ಸಮಾಜಕ್ಕೆ ಸಲ್ಲಿಸುತ್ತಿರುವ ಸೇವೆಯನ್ನು ಮೆಚ್ಚಿ ವೀರಶೈವೇತರರೂ ಮಠಗಳು ಮಾಡುವ ಕೆಲಸಗಳಿಗೆ ಸಹಮತವನ್ನು ವ್ಯಕ್ತಪಡಿಸಿರುವುದು ಈ ಶಾಸನದಿಂದ ತಿಳಿದು ಬರುತ್ತದೆ.

ಜನಪದರು ಮಠ ಮತ್ತು ಮಠದಲ್ಲಿರುವ ಯೋಗಿಗಳ ಕುರಿತು ತಮ್ಮದೇ ಆದ ರೀತಿಯಲ್ಲಿ ಹೊಗಳಿದ್ದಾರೆ.

ಜಟಾಧಾರಿಯಾದ ಆ ಯೋಗಿಯ ಬೀಸಗೂದಲುಗಳನ್ನು ನೋಡಿ

ಇಂಜಾಣದಡಿವ್ಯಾಗ, ಮಂಜುಬಿದ್ದಾವ ತಾಯಿ

ಮಂಜಲ್ಲ ಮಳೆಯ ಸರುವೆಂದೆ । ಶಿವಲಿಂಗ

ಕೆಂಜೆಡೆ ಬಿಚ್ಯಾರ ಬಿಸಲಿಗೆ ॥

ಮಂಜೊ, ಮಯಸರವೊ ಎಂಬಂತೆ ಕಾಣುತ್ತದೆ ಆ ಯೋಗಿಯ ಕೆಂಜೆಡೆ !

ಪಟ್ಟಕೆ ಒಪ್ಪೂವ ಪರದೇಶಿ ನೆನೆದೇನೆ

ಬಟ್ಟಲೀಭೂತಿ ಧರಿಸೂರ । ಶಿವಲಿಂಗ

ಪಟ್ಟದೇಗೀಯ ನೆನೆದೇನೆ ॥

ತೆಳ್ಳನ್ನು ಕಾಲೀಗೆ, ಬೆಳ್ಳಿಯ ಆವೀಗೆ

ಮೆಲ್ಲಕ ಮಟದ ಇಳಿದಾರ । ಶಿವಲಿಂಗ

ಜಕಣೇರ ಭಾವಿ ಜಳಕಕ ॥

ಆ ಶಿವಲಿಂಗಯೋಗಿಯ ದಿನಚರಿಯನ್ನೂ, ರೂಪರೇಷೆಯನ್ನೂ ಇಲ್ಲಿ ಕಾಣಬಹುದು.

"ಹರಿಯ ಹೊತ್ತೀಲೆದ್ದು, ನರಿಯ ಮಾರಿಯ ಕಂಡೆ

ತಿರುಗಾಡುದ ಕಂಡೆ ಪವಳ್ಯಾಗ । ಒಶಿವಲಿಂಗ

ಸಾಲು ಸಂಪಿಗೆ ವನದಾಗ ॥

ಮಲ್ಲಿಗೆ ತೂರೀನೆ, ಗಲ್ಲೀಪ ಹೊಲಿಸೇನೆ

ಯಾಕೊಲ್ಲನವ್ವ ಮಟದೊಡೆಯ ಶಿವಲಿಂಗ

ಬೇಡ್ಯಾನು ಬೆಳ್ಳಿ ಚವರೀಯ ॥"(ಬಿ.ಎಸ್.ಗದ್ದಗಿಮಠ, ಕನ್ನಡ ಜಾನಪದ ಗೀತೆಗಳು)

ಈ ಶಿವಲಿಂಗಯೋಗಿಯನ್ನು ಕಾಣುವದೆಂದರೆ ಒಂದು ಭಾಗ್ಯ ಆ ಭಕ್ತನಿಗೆ. ಗುರುವನ್ನು ತೃಪ್ತಿಪಡಿಸಲು ಭಕ್ತಿಯಿಂದ ತನ್ನ ಸೇವೆಯನ್ನು ಅರ್ಪಿಸಲು ಹೋಗಿದ್ದಾನೆ ಕಡೆಗೆ

"ಯಾರಿಗೆ ಮಾಡಿದರ, ಸಾರತ ನನಗಿಲ್ಲ

ಗದ್ದಗಿ ಮಠದ ಗುರುವೀಗೆ । ಮಾಡಿದರ

ಸಾರತ ಹೊಂದೀನೆ ಶಿವನಲ್ಲೆ ॥"(ಬಿ.ಎಸ್.ಗದ್ದಗಿಮಠ, ಕನ್ನಡ ಜಾನಪದ ಗೀತೆಗಳು)

ಎಂದು ತನ್ನ ದೃಢವಾದ ಭಕ್ತಿಯನ್ನು ಸಾರಿ ಹೇಳಿದ್ದಾನೆ. ಇಂತಹ ಅನೇಕ ಹಾಡುಗಳು ಒಬ್ಬೊಬ್ಬ ರೈತನಿಗೆ ಸಂಬಂಧಿಸಿದ ಮನೆಯ ದೇವರಿಗಾಗಲಿ, ಇಲ್ಲವೆ ಸಾಧುಸತ್ಪುರುಷರಿಗಾಗಲಿ ಇರುವುದನ್ನು ಜನತೆಯ ನಿದರ್ಶನಕ್ಕೆ ತರಲು ಮೇಲಿನ ಪದ್ಯಗಳನ್ನು ಕೊಡಲಾಗಿದೆ.

ರಾಜಮಹಾರಾಜರು, ಜನಪದರಿಂದ ದಾನ ಪಡೆದ ಮಠಗಳು ಸಹ ಸಮುದಾಯ ಕೊಡುಗೆಯಾಗಿ ಜ್ಞಾನ ಪ್ರಸಾರ, ದಾಸೋಹ ಕಾರ್ಯ ಮಾಡುವುದರ ಜೊತೆಗೆ ಬಾವಿಗಳನ್ನು ಜೀರ್ಣೋದ್ಧಾರ ಮಾಡಿ ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತಿದ್ದವು. ಚಾಮರಾಜನಗರ ತಾಲ್ಲೂಕು(ಈಗ ಜಿಲ್ಲಾ ಕೇಂದ್ರವಾಗಿದೆ) "ಬಾನಗವಾಡಿ ಶಾಸನದಲ್ಲಿ ಉಕ್ತವಾಗಿರುವ ಉಮ್ಮತ್ತೂರು ಉಪ್ಪರಿಕೆಯ ಸಿಂಹಾಸನದ ಮಹಾಮಹತ್ತಿನ ಮಠ, ಉಮ್ಮತ್ತೂರಿನಲ್ಲಿದ್ದು, ಈ ಕಾಲದ ಮಠದ ಹಿರಿಯವೊಡೆಯ ಚನ್ನಬಸವದೇವ ರಾಜನಾಗಿದ್ದ. ಆಗ ಬರ ಬಂದ ಕಾಲವಾಗಿತ್ತು. ಅಂತಾಗಿ ಭಾವಿಯ ಜೀರ್ಣೋದ್ಧಾರ ಮಾಡಿ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಹಿರಿಯಗುರು ನಿರೂಪವಾಗಿತ್ತು. ಗುರು ವಿರಕ್ತ ಪರಂಪರೆಯ ಮಠಗಳು ಜನಪದ ಕಲೆಗಳಿಗೆ ಪ್ರೋತ್ಸಾಹ ನೀಡುತ್ತಿದ್ದವು. ಆಚರಣೆ, ಸಂಪ್ರದಾಯಗಳಿಗೆ ಪ್ರೋತ್ಸಾಹ ನೀಡುತ್ತಿದ್ದವು ಎಂಬುದಕ್ಕೆ ಬಾಳೆಹಳ್ಳಿ ಮಠ ಸಂಬಂಧಿಯಾದ ಅಂದಿನ ಶ್ರೀ ಮುದ್ರಾಂಭಪುರಿ ಪೀಠದ ಗೋತ್ರಪುರುಷ ವೀರಭದ್ರನ ದೇಗುಲ ಸಂಬಂಧಿಯಾದ ೧೪ ಶಾಸನಗಳಲ್ಲಿ(ಶಿಲಾ ಹಾಗೂ ತಾಮ್ರ ಶಾಸನಗಳು) ಎರಡು ತಾಮ್ರ ಶಾಸನಗಳು ಕೃತಕವೆನ್ನಲಾಗಿದೆ. ಕ್ರಿ.ಶ.೧೫೩೩ರಲ್ಲಿ ವೀರಭದ್ರ ದೇಗುಲಕ್ಕೆ 'ವಿರೂಪಾಕ್ಷ ಶಾಲೆ'ಯನ್ನು ಗೆಯ್ಯಿದುವುದು(ನ.ಪು.೧೭) ಬಹುಶಃ ಅನ್ನ ದಾಸೋಹಕ್ಕೆ ನೆರವಾದ ಪಾಕಶಾಲೆಯೋ ಅಥವಾ ವೀರಭದ್ರನ ದೇವತಾ ಆಚರಣೆಗೆ ಅನುಕೂಲಿಸುವ ಅಂದರೆ ಉತ್ಸವಮೂರ್ತಿ ಪರ್ವಗಳಿಗೆ ವೀರಗಾಸೆಯ ಖಡ್ಗದ ಉಗ್ಗಡಮೆಯ ಸ್ಥಳವಾಗಿ ಹಾಗೂ ಸಮ್ಮಾಳ ಸಹಿತವಾದ ವೀರಭದ್ರ ಕುಣಿತಕ್ಕೆ ನೆಲೆಯಾಗಿ ಅದನ್ನು ರೂಪಿಸಿರುವಂತಿದೆ.

‘ತುಮಕೂರು ತಾಲೂಕು ಮಲ್ಲಸಂದ್ರ ಹೋಬಳಿ ಹಾಲ್ನೂರು ಗ್ರಾಮದ ಮಹಂತಿನ ಮಠ ಅಥವಾ ಹಾಲ್ನೂರು ಮಠದಲ್ಲಿ ಗೌರಿಹಬ್ಬವನ್ನು ವಿಶೇಷವಾಗಿ ಆಚರಿಸಲಾಗುತ್ತದೆ. ನೂರಾರು ಜನ ಮಹಿಳೆಯರು(ಎಲ್ಲಾ ಕೋಮಿನವರು) ಬಾಗಿನ ಕೊಡಲು ಬರುತ್ತಾರೆ. ಗಣಪತಿ ಹಬ್ಬದ ದಿನ ಈ ಮಠದ ವಂಶದ ಐದು ಜನ ವೀರಮಾಹೇಶ್ವರರು ಜಂಗು, ಬೆತ್ತ, ಜೋಳಿಗೆ ಸಮೇತ ಮನೆ ಮನೆಗೆ ಭಿಕ್ಷಕ್ಕೆ ಹೋಗುತ್ತಾರೆ. ಗೌರಮ್ಮನನ್ನು ಬಿಡುವ ದಿನ ವಿಶೇಷವಾದ ‘ಪರ’ವನ್ನು ಮಾಡಿ ಗ್ರಾಮದ ಎಲ್ಲಾ ಜನತೆಗೆ ಪಟ್ಟದ ಸ್ವಾಮಿಗಳ ಮಹಾಶಿವಪೂಜೆ, ಪಾದೋದಕ ಪ್ರಸಾದದ ನಂತರ ವಿಶೇಷ ದಾಸೋಹವನ್ನು ಮಾಡುವ ಸಂಪ್ರದಾಯವಿದೆ(ಡಾ.ಬಿ.ನಂಜುಂಡಸ್ವಾಮಿ, ೨೦೦೮, ೩೬).

ಮಠಗಳ ಪೀಠಾಧಿಪತಿಗಳು ತನ್ನ ಶಿಷ್ಯರ ಮೂಲಕ ವೀರಶೈವ ಧರ್ಮೀಯರಿಗೆ ಅಗತ್ಯವಾದ ಧಾರ್ಮಿಕ ಆಚರಣೆಗಳನ್ನು ನಡೆಸಿಕೊಡುತ್ತಿದ್ದರಲ್ಲದೆ ಸಮಾಜದಲ್ಲಿ ಸನ್ಮಾರ್ಗದಲ್ಲಿ ನಡೆಯುವಂತೆ ಮಾರ್ಗದರ್ಶನ ನೀಡುವ, ಶಿಕ್ಷಿಸುವ ಅಧಿಕಾರವನ್ನು ಮಠಾಧಿಪತಿಗಳು ಹೊಂದಿದ್ದರು. ಪಂಚಪೀಠಾಧೀಶರಿಗೆ ಐದು ಉಪಾಚಾರ್ಯರ ವರ್ಗಗಳಿವೆ.

೧. ಮಠದಯ್ಯ(ಹಿರೇಮಠದಯ್ಯ) ೨. ಮಠಪತ್ರಿ ೩. ಗಣಾಚಾರ್ಯ ೪. ಗಣಕುಮಾರ ೫. ಸ್ವಾವರಿಕ ಇವರೇ ಉಪಚಾರ್ಯರಾದ ಪಂಚವೃತ್ಯಾಚಾರ್ಯರು. ಇವರೆಲ್ಲರೂ ಸಮಾನಶೀಲರು ಸಮಾನ ಸುಸಂಸ್ಕೃತವುಳ್ಳರೂ ಆಗಿರುತ್ತಾರೆ(ಡಾ.ಎಸ್.ಸಿ.ನಂದಿಮಠ)

ಮೂವತ್ತು ನಲವತ್ತು ಗ್ರಾಮಗಳಿಗೆ ಒಂದರಂತೆ ಅಥವಾ ದೊಡ್ಡ ಪಟ್ಟಣಗಳಿಗೆ ಒಂದರಂತೆ ಪಟ್ಟದ ಮಠಗಳಿರುತ್ತವೆ. ಪಟ್ಟದೇವರು ತಮಗೆ ನಿರ್ದಿಷ್ಟಪಡಿಸಿದ ಪ್ರಾದೇಶಿಕ ಜನರ ಧಾರ್ಮಿಕ ಕಾರ್ಯಗಳನ್ನು ನಡೆಸಿಕೊಡುವ ಹಾಗೂ ಕುಟುಂಬಗಳ ಅಥವಾ ಗ್ರಾಮಗಳ ನಡುವಿನ ವಿವಾದಗಳನ್ನು ಬಗೆಹರಿಸಿ ನ್ಯಾಯ ನಿರ್ಣಯಗಳನ್ನು ನೀಡುವ ಅಧಿಕಾರವನ್ನು ಹೊಂದಿರುತ್ತಾರೆ.

ಸಮಾಜದಲ್ಲಿ ತಾಂಡವವಾಡುತ್ತಿದ್ದ ಅನ್ಯಾಯ, ಅಧರ್ಮ, ಅನೀತಿಗಳನ್ನು ಗುರುಪೀಠದ ಪ್ರತಿನಿಧಿಗಳು ತಮ್ಮ ವಿಶಿಷ್ಟವಾದ ಕಾಯಕದ ಮೂಲಕ ತಿದ್ದಿ ಅವರ ಮನಪರಿವರ್ತನೆ ಮಾಡಿ ಸನ್ಮಾರ್ಗದಲ್ಲಿ ನಡೆಯುವಂತೆ ಮಾಡಿ ಆರೋಗ್ಯವಂತ ಸಮಾಜ ನಿರ್ಮಾಣ ಮಾಡಲು ಅಹರ್ನಿಶಿ ದುಡಿಯುತ್ತಿದ್ದರು. ಇವರಿಗೆ ಭಕ್ತರು ನೀಡುವ ಕಾಣಿಕೆಯೇ ಜೀವನಾಧಾರವಾಗಿತ್ತು. ಸಾಮಾನ್ಯವಾಗಿ ಸದಾ ಜಂಗಮರೇ ಆಗಿರುತ್ತಿದ್ದ ಇವರು ಗ್ರಾಮಗಳಿಗೆ ಬಂದಾಗ ಆಯಾ ಗ್ರಾಮದ ಮಠದಯ್ಯಗಳು ಅವರಿಗೆ ಊಟದ ಏರ್ಪಾಟುಗಳನ್ನು ಮಾಡಿಕೊಡುತ್ತಿದ್ದರು. ಇವರು ಗ್ರಾಮಗಳ ಗುರುಪೀಠದ ಸೇತುವೆಯಾಗಿದ್ದರು!!

ಗ್ರಾಮೀಣರಿಗೂ ಮಠಗಳಿಗೂ ಹಾಗೂ ಮಠದ ಗುರುಗಳ(ಜಂಗಮರ) ಬಗ್ಗೆ ಅಪಾರವಾದ ಭಕ್ತಿ ಗೌರವ. ಸಮಾಜದ ಅಭಿವೃದ್ಧಿಗೆ ತಮ್ಮನ್ನು ತೊಡಗಿಸಿಕೊಂಡಿರುವ ಮಠಗಳು ಮಠಾಧಿಪತಿಗಳಿಗೆ ತಮ್ಮ ಕೈಲಾದ ನೆರವನ್ನು ಕಾಣಿಕೆಯನ್ನು ಸಲ್ಲಿಸುತ್ತಾ ಬಂದಿದ್ದಾರೆ. ತಾವು ಬೆಳೆದ ದವಸ ಧಾನ್ಯಗಳನ್ನು ಮಠದ ದಾಸೋಹಕ್ಕೆ ಕೊಡುತ್ತಾರೆ. ಹಣ್ಣು-ಹಂಪಲು ಕಾಯಿ-ಕಸರು ಮೊದಲಾದವುಗಳ ಮೊದಲನೆ ಬೀಡನ್ನು ಮಠಕ್ಕೆ ಮೀಸಲೆಂದು ನೀಡುತ್ತಾರೆ. ಮಠದ ಯೋಗಿಯು ಬೇಡಿದ್ದನ್ನು ಒದಗಿಸಿಕೊಡಲು ಯತ್ನಿಸುತ್ತಾನೆ. ಭಕ್ತಿಯು ತುಂಬಿದಾಗ ಆ ಮಠವನ್ನೂ ಹಾಗೂ ಪಟ್ಟದ ಯೋಗಿಯನ್ನು ಪರಿಪರಿಯಿಂದ ಗುಣಗಾನ ಮಾಡುತ್ತಾನೆ.

"ಆಟವೆಲ್ಲ ಮಟವೆಲ್ಲೆ ಮಟದ ಬಾಗಿಲವೆಲ್ಲೆ

ಕಟದ ರುದ್ರಾಕ್ಷಿ ಕದವೆಲ್ಲೆ-ಗದ್ದುಗಿ

ಮಟವೈತೆ! ಬಾಳಿವನದಾಗ"(ಪುಟ.೧೩-೧೪, ಕನ್ನಡ ಜಾನಪದ ಗೀತೆಗಳು

ಎಂದು ಅಭಿಮಾನದಿಂದ ಮಠದ ಸ್ಥಾನಮಾನವನ್ನು ಅಭಿವ್ಯಕ್ತಪಡಿಸುತ್ತಾರೆ. ಆ ಮಠದ ಶಿವಲಿಂಗ ಯೋಗಿಯ ಅದ್ಬುತ ಶಕ್ತಿಯನ್ನು ಕೊಂಡಾಡುತ್ತಾನೆ.

"ಅರಾಣದಡಿವ್ಯಾಗ ಆರುಕಾಲಿನ ಮಂಚ

ನಾಗರ ಸರಪು ತಲೆಗಿಂಬು-ಶಿವಲಿಂಗ

ಹ್ಯಾಂಗ ಗವಿದಾವೋ ಸಪನಿದ್ದೆ"(ಪುಟ.೧೩-೧೪, ಕನ್ನಡ ಜಾನಪದ ಗೀತೆಗಳು

ಎಂದಿದ್ದಾರೆ(ಡಾ.ಬಿ.ಎಸಂ.ಗದ್ದಗಿಮಠ, ೧೯೬೯, ೧೩-೧೪). ಶಿವಯೋಗಿಯ ದರ್ಶನ ಮಾಡುವುದೆಂದರೆ ನಮ್ಮ ಜನಪದರಿಗೆ ಎಲ್ಲಿಲ್ಲದ ಸಡಗರ ಸಂಭ್ರಮ. ಅವರ ದರ್ಶನ ಭಾಗ್ಯ, ಜೀವನದಲ್ಲಿ ಒದಗಿದ ಸುಯೋಗ ಎಂದು ಭಾವಿಸಿದ್ದಾರೆ. ಗುರುವನ್ನು ತೃಪ್ತಿಪಡಿಸಲು ಮಠಕ್ಕೆ ಹೋದ ಜನಪದರು

"ಯಾರಿಗೆ ಮಾಡಿದರ ಸಾರತ ನನಗಿಲ್ಲ

ಗದ್ದಿಗಿ ಮಠದ ಗುರುವಿಗೆ-ಮಾಡಿದರ

ಸಾರತ ಹೊಂದೀನೆ ಶಿವನಲ್ಲೆ"(ಪುಟ.೧೪, ಕನ್ನಡ ಜಾನಪದ ಗೀತೆಗಳು

ಎಂದು ತಮ್ಮ ದೃಢವಾದ ಭಕ್ತಿಯನ್ನು ಸಾರಿ ಹೇಳಿದ್ದಾರೆ(ಬಿ.ಎಸ್.ಗದ್ದಿಗಿಮಠ, ೧೯೬೯, ೧೪).

ಮಠಗಳು ಜ್ಞಾನಪ್ರಸಾರ ಸಂಪ್ರದಾಯಗಳು ಬೆಳೆಯಲು ಸೂಕ್ತ ವಾತಾವರಣವನ್ನು ಕಲ್ಪಿಸಿಕೊಡುತ್ತಿದ್ದವು.

ಮಠಗಳು ಈಗಲೂ ಗ್ರಾಮೀಣ ಪ್ರದೇಶದಲ್ಲಿ ದಾಸೋಹ ಕಾರ್ಯವನ್ನು ನಡೆಸಿಕೊಂಡು ಬರುತ್ತಿವೆ. ಈ ಮಠಗಳು ಮಾಡುತ್ತಿರುವ ಸಮಾಜ ಸೇವೆಯನ್ನು ಮುಕ್ತ ಕಂಠದಿಂದ ಶ್ಲಾಘಿಸಿದ ಜನಪದರು ಅವುಗಳಿಗೆ ಬೆಂಬಲ ಸೂಚಿಸುವ ದೃಷ್ಟಿಯಿಂದ ತಾವು ಬೆಳೆಯುವ ಧಾನ್ಯಗಳಲ್ಲಿ ಒಂದಿಷ್ಟು ಭಾಗವನ್ನು ಕಣದಲ್ಲಿಯೇ ಮುಡುಪಾಗಿಡುವ ಸಂಪ್ರದಾಯವನ್ನು ಅನುಸರಿಸುತ್ತಾ ಮುಂದುವರಿಸಿಕೊಂಡು ಬಂದಿದ್ದಾರೆ. ಹಾಗೆ ಮಠಗಳಿಗೆ, ಜಂಗಮರಿಗೆ ಮುಡುಪು ತೆಗೆದಿಟ್ಟರೆ ರಾಶಿ ಹೆಚ್ಚುತ್ತದೆ ಎಂಬ ನಂಬಿಕೆಯೂ ಇದೆ.

"ರಾಶಿಗಾಳಿಯು ಬೀಸಿ, ಸೂಸಿ ಹರಿಯಿತು ಕಣವು
ಕೂಸ ಕೋಳೂರ ಕಡೆಗಾಳಿ–ಬೀಸೆಂದು
ಮೀಸಲೀ ರಾಶಿ ಜಂಗಮಕೆ

ಹಿಂಗಾರಿ ಬೆಳಸಾಗಿ–ಮುಂಗಡವೆ ಬೆಳೆಬಂದು
ಟಿಂಗ ಬಿಳಿ ಜೋಳ ಒಕ್ಕುವುದು–ಬೆಳವಲವು
ಜಂಗಮಗೆ ಎಡೆಯ ಹೊಸ ಬೆಳಸು

ಕಣದೊಳಗೆ ಹಾಡಿ ಬೆಳಕೊಂಡು ಒಕ್ಕವನು
ಕಣ ರಾಶಿ ಉಣಿಸಿ ಜಂಗಮಕೆ"(ಪುಟ.೧೦, ಗದ್ದಗಿ ಮಠದ ಬರಹಗಳು)

ಮಠಗಳು ಮಾಡುವ ದಾಸೋಹ ಕಾಯಕದ ರೀತಿಯಲ್ಲಿಯೇ ಒಕ್ಕಲಿಗನು ತನ್ನ ಹೊಲ ಗೆಲಸವೇ ಕಾಯಕವಾಗಿದ್ದು, ಸುಗ್ಗಿಯೇ ದಾಸೋಹ, ಹರನ ಸೇವೆ.

ಯಾರ ಹಂಗಿಲ್ಲದೊಂದೇ ಕಾಯಕವೆಂದರೆ ಒಕ್ಕಲುತನವು. ನಿಸರ್ಗವು ದಯೆಮಾಡಿದರೆ ಸಾಕು, ಒಕ್ಕಲಿಗನ ಹನ್ನೆರಡು ತಿಂಗಳ ಕಾಯಕ ದಾಸೋಹವೇ ದಾಸೋಹ. ಒಕ್ಕಲಿಗನು ದಾನಧರ್ಮಗಳಲ್ಲಿ ಮುಂದಾದ ಕೊಡಗೈಯೆಂದೂ ಹೇಳಿದ್ದಾನೆ.

"ಮೂತಾಳ, ಕೂರಿಗೆಗೆ, ಯಾತರದು ಹಂಗಿಲ್ಲ
ಭೂತಾಯಿಯ ಬೆಳೆಯ ಒಕ್ಕಲಿಗೆ । ಜಗದೊಳಗೆ
ಕೋತುಳ್ಳ ಮೇಳೆ ಬಲಗೊಂಡ ಎಂದೂ
ಕಡೆಯ ಬಲಕಿನ ತಾಳ, ಎಡೆಯಾಯ್ತು ಅರಸರೀಗೆ

ಎಡಗಡೆಯ ತಾಳ ಪಶುಪಕ್ಷಿ । ಜೀವನಕೆ

ನಡುವಿನ ತಾಳ ರೈತನಿಗೆ

ಒಂದು ತಾಳದ ಬೆಳೆಯ ಬಂದವರಿಗಿಲ್ಲೆನ್ನ

ಮುಂದು ಕೊಡಗೈಯು ಒಕ್ಕಲಿಗ । ನಾಡೊಳಗ

ಹೊಂದಿ ದಾಸೋಹ ಶಿವಮತರ"(ಪುಟ.೦೬, ಗದ್ದಗಿ ಮಠದ ಬರಹಗಳು)

ಈ ಪ್ರಕಾರ ಒಕ್ಕಲಿಗನ ಗಳಿಕೆಯು ಹಂಚಲ್ಪಡುವುದೆಂದು ಅದೇ ಕವಿಯು ಹೇಳಿದ್ದಾನೆ(ಬಿ.ಎಸ್.ಗದ್ದಿಗಿಮಠ, ೬).

"ನೂರೊಂದು ಶರಣರಿಗೆ, ನೂರೊಂದು ಬಂಟರೆನೆ

ಸಾರಿದನು ಜಗಕೆ ಒಕ್ಕಲಿಗ । ಸುಗ್ಗಿಯಡು

ವೀರ ಕಾಯಕದ ದಿನವೆಂದು

ಶರಣಮಡಿವಾಳಾದ, ಕರಿಬಂಟ ಕಣದೊಳಗೆ

ಹರಳಾದ ಕಣಕ ಬಿಳಿಬಂಟ । ಪ್ರಭುಲಿಂಗ

ಗುರುಬುದ್ದಿವಂತ ಲಿಂಗಾದ"(ಪುಟ.೮, ಗದ್ದಗಿ ಮಠದ ಬರಹಗಳು)

ಶರಣರು ಸಹ ಜನಸಾಮಾನ್ಯರ ಭಾಷೆಗೆ ಒತ್ತುಕೊಟ್ಟರು. ಸಂಸ್ಕೃತಿಯ ವಾಹಕವಾಗಿ ಗಾದೆ, ಒಗಟು, ನುಡಿಗಟ್ಟುಗಳನ್ನು ಬಳಸಿಕೊಂಡರೆಂಬುದು ಸತ್ಯವಾದರೂ ಜನಪದರಲ್ಲಿ ಪರಂಪರೆಯಿಂದಲೇ ಈ ನೀತಿ ಮೌಲ್ಯಗಳನ್ನು ಅಳವಡಿಸಿಕೊಂಡಿರುವುದರ ಫಲವಾಗಿ ಅವರ ಹಾಡು ಹಸೆಗಳೇ ಸಾಕ್ಷಿಭೂತವಾಗಿ ನಮ್ಮ ಕಣ್ಮುಂದಿವೆ.

ವೀರಶೈವ ಪಂಚಾಚಾರ ಮಠಗಳಲ್ಲಿ, ಬಹುತರವಾಗಿ ವಿರಕ್ತ ಜಂಗಮವು ಮಠವು ಹಳ್ಳಿಗಳಲ್ಲಿ, ಧರ್ಮ ದಾಸೋಹ ಸಮಾಜ ಕಾರ್ಯಗಳ ಸ್ಥಾನವಿದ್ದದ್ದು ಇಂದು ಸಹ ನಾವು ಕಾಣಬಹುದು. ಇದರ ಪೋಷಣೆಗೆ ಹೊಸಮತದ ಎಲ್ಲ ಕಸುಬುಗಾರರು, ಮೊದಲಿನ ಕಾಲದಿಂದಲೂ ಮುಡುಪುಗಳನ್ನು ಕಳಿಸುತ್ತಿದ್ದರು. ಈ ಮುಡುಪುಗಳಲ್ಲಿ ಬಹುಭಾಗವು ಒಕ್ಕಲಿಗನ ಕಡೆಯಿಂದ ಬರುತ್ತಿತ್ತು.

"ರಾಸಿ ಗಾಳಿಯು ಬೀಸಿ, ಸೂಸಿ ಹರಿಯಿತು ಕಣವು

ಕೂಸ ಕೋಳೂರ ಕಡೆಗಾಳಿ । ಬೀಸಿಂದು

ಮೀಸಲೀ ರಾಸಿ ಜಂಗಮಗೆ ।

ಹಿಂಗಾರಿ ಬೆಳಸಾಗಿ, ಮುಂಗಡವೆ ಜೆಳೆಬಂದು

ಟಂಗ ಬಿಳಿ ಜೋಳ ಒಕ್ಕುವದು। ಬೆಳವಲವು

ಜಂಗಮಗೆ ಎಡೆಯ ಹೊಸಬೆಳಕು

ಕಣದೊಳಗೆ ಒಕ್ಕಲಿಗ ಧನಿಯೆತ್ತಿ ಭೆಲ್ತನಕ

ಧನಿಯೆಂದು ಹಾಡಿ ಬೆಳಕೊಂಡು । ಒಕ್ಕಲಿಗನು

ಕಣರಾಸಿ ಉಣಿಸಿ ಜಂಗಮಗೆ"(ಪುಟ.೧೦, ಗದ್ದಗಿ ಮಠದ ಬರಹಗಳು)

ಎಲ್ಲ ಬೆಳೆಗಳ ಮೊದಲನೇ ಬೀಡನ್ನು ಒಕ್ಕಲಿಗನು ಇಂಥ ಮಠಗಳಿಗೆ ಭಕ್ತಿಪೂರ್ವಕವಾಗಿ ತಂದುಕೊಡುತ್ತಿದ್ದ. ಈ ಪರಿಪಾಠವನ್ನು ನಾವು ಈಗಲೂ ಹಳ್ಳಿಯ ಒಕ್ಕಲಿಗರಲ್ಲಿ ಕಾಣಬಹುದು. ಆದರೆ ಈಗ ಕೊಡುವ ಪ್ರಮಾಣವು ಅಳತೆ, ಮಾಪುಗಳಲ್ಲಿ ಮಾತ್ರ ಮೊದಲಿಗಿಂತಲೂ ಸ್ವಲ್ಪ ಕಡಿಮೆಯಾಗಿರಬಹುದು. ಮೊದಲಿನ ಕಾಲದಲ್ಲಿ ಮೇಟಿಯ ರಾಶಿಯ ಹೊಂದಿಗೆ ಅದಕ್ಕೆ ಒಂದು ಪ್ರಮಾಣದಲ್ಲಿ, ಬುದ್ಧಿವಂತಲಿಂಗನ ರಾಶಿಯೆಂದು ಒಕ್ಕಲಿಗನು ತನ್ನ ಗುರು ಮಠಕ್ಕೆ ಬೇರೆ ರಾಶಿಯನ್ನೇ ಇಡುತ್ತಿದ್ದನು. ಈ ರಾಶಿಗೆ ಯಾರದೂ ಹಕ್ಕಿದ್ದಿಲ್ಲ. ಅದು ಸಮಾಜ ಸೇವೆಗೆ ಗುರುಮಠಕ್ಕೆ ನೇರವಾಗಿ ಸಲ್ಲುತ್ತಿತ್ತು.(ಗದ್ದಗಿಮಠ ಬಿ.ಎಸ್., ೯-೧೦)

ವೀರಶೈವ ಮಠಗಳು ಜನಸಾಮಾನ್ಯರ ದುಃಖ ದುಮ್ಮಾನಗಳಿಗೆ ಹಿಂದಿನಿಂದಲೂ ನೆರವಾಗಿವೆ. ಅದಕ್ಕಾಗಿಯೇ ಜನಪದ ಸಾಹಿತ್ಯದಲ್ಲೂ ಮಠಗಳ ಉಲ್ಲೇಖ ಮತ್ತೆ ಮತ್ತೆ ಬರುತ್ತವೆ.

'ಘಟ ಇದ್ದರೆ ಮಠ ಕಟ್ಟಬಹುದು'

'ಆಕಾಶ ನೋಡಾಕೆ ನೂಕಾಟ ಯಾಕೆ'

'ಎದ್ದು ಕಲ್ಲು ಪೂಜಾರಿಗೆ ಬಿದ್ದ ಕಲ್ಲು ಅಗಸನಿಗೆ'

ಅವಿದ್ಯಾವತಿಯಾದರೂ ನೆನೆದುಕೊಳ್ಳುವುದು ಗುರುವನ್ನು ಪರಶಿವನನ್ನು ಆಕೆಗೂ ಒಬ್ಬ ಆಧ್ಯಾತ್ಮಿಕ ಗುರುವೊಬ್ಬನುಂಟು.

ಎದ್ದೋನೆ ನಿಮ್ಮ ಗ್ಯಾನ ಏಳುತಲೆ ನಿಮಗ್ಯಾನ

ಸಿದ್ಧರ ಗ್ಯಾನ ಶಿವಗ್ಯಾನ। ಮಾಶಿವನೆ

ನಿದ್ದೆಗಣ್ಣಾಗೆ ನಿಮ್ದುಗ್ಯಾನ

ನಿದ್ದೆಗಣ್ಣಲ್ಲಿ ಕಂಡ ಸುದ್ದಗುರುವಿನ ಪಾನ
ಎದ್ದು ನೋಡಿದರೆ ನಿರಬಯಲ ಗುರುರಾಯ
ರುದ್ದರನ ಮಯಿಮೆ ತಿಳಿಯಾವ

ಮಠಗಳೂ ಕೂಡ ಜನಪದರ ಮತ್ತು ಗ್ರಾಮಗಳ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾದ ಕಾರ್ಯಗಳನ್ನು ಹಮ್ಮಿಕೊಂಡು ಅನುಷ್ಠಾನಗೊಳಿಸುತ್ತಾ ಬಂದಿರುವುದು ಜನಪದ ತ್ರಿಪದಿಗಳಿಂದ, ಶಾಸನಗಳಿಂದ ವ್ಯಕ್ತವಾಗುತ್ತದೆ. ಇಲ್ಲಿ ಜನಪದರು ಅಂದಾಗ ಕೇವಲ ವೀರಶೈವರು ಮಾತ್ರವಲ್ಲದೆ ಗ್ರಾಮಗಳಲ್ಲಿ ವಾಸಿಸುತ್ತಿದ್ದ ಇತರ ಸಮುದಾಯದವರೂ ಇದ್ದರು. ಅವರೆಲ್ಲರ ಅಭಿವೃದ್ಧಿ ಮಠಗಳ ಆಶಯವಾಗಿತ್ತು.

ಹೀಗೆ ಜನಪದರು ಮತ್ತು ಮಠಗಳ ನಡುವೆ ಒಂದು ಕೊಡು-ಕೊಳ್ಳುವಿಕೆಯ ಸಂಬಂಧವಿತ್ತು. ರೈತ ಕುಟುಂಬದವರು ತಾವು ಬೆಳೆದ ಬೆಳೆಯನ್ನು ಒಂದೆಡೆ ಮಠಗಳಿಗೆ ದಾನ ಮಾಡಿದರೆ ಮತ್ತೊಂದೆಡೆ ಮಠಗಳು ಆ ದವಸ-ಧಾನ್ಯಗಳಿಂದ ಬಡವರಿಗೆ, ಹಸಿದವರಿಗೆ, ಬಂದ ಭಕ್ತಾದಿಗಳಿಗೆ ಅನ್ನ ದಾಸೋಹ ಮಾಡುತ್ತಿರುವ ಪರಂಪರೆ ನಡೆದುಕೊಂಡು ಬಂದಿದೆ. ಇದಲ್ಲದೆ ನಮ್ಮ ಜನಪದರು ತಮ್ಮ ಮನೆಯಲ್ಲಿ ಏನೇ ಶುಭಕಾರ್ಯ ನಡೆಯಲಿ ಅದಕ್ಕೆ ಮಠದ ಸ್ವಾಮಿಗಳಿಂದ ಕೇಳಿ ಅದನ್ನು ಹಮ್ಮಿಕೊಳ್ಳುವರು. ಮತ್ತು ಆ ಕಾರ್ಯಕ್ರಮವನ್ನು ಮಠದ ಸ್ವಾಮಿಗಳ ಸಾನಿಧ್ಯದಲ್ಲಿಯೇ ನಡೆಸುವ ರೂಢಿ ಇದೆ. ಅದು ಮದುವೆ, ನಾಮಕರಣ, ಗೃಹಪ್ರವೇಶದಂತಹ ಹಲವಾರು ಸಂದರ್ಭದಲ್ಲಿ ಮಠದ ಸ್ವಾಮಿಗಳ ನೇತೃತ್ವದಲ್ಲಿ ತಮ್ಮ ಕಾರ್ಯಗಳನ್ನೆಲ್ಲ ಮಾಡುವರು. ಇದೊಂದು ರೀತಿಯ ಮಠಗಳ ಮತ್ತು ಜನಪದರ ನಡುವಿನ ಸಾಂಸ್ಕೃತಿಕ ಬಾಂಧವ್ಯದ ಬೆಸುಗೆಯಾಗಿದೆ. ಅಂತಹದ್ದೊಂದು ಅವಿನಾಭಾವತೆಯ ಸಾಂಸ್ಕೃತಿಯ ಪರಂಪರೆ ಜನಪದರು ಮತ್ತು ಮಠಗಳ ನಡುವೆ ಇರುವುದನ್ನು ನಾವು ಈಗಲೂ ಕಾಣುತ್ತೇವೆ.

ಮನೆಯಲ್ಲಿ ಮಕ್ಕಳು ಕಿರಿಕಿರಿಮಾಡಿ ಅಳುತ್ತಿದ್ದರೆ, ಮನೆಯಲ್ಲಿ ಶ್ರಮವಾದಾಗ ಅದರ ಶುಭಾ-ಅಶುಭದ ಬಗೆಗೆ, ಮನೆಯಲ್ಲಿ ಮಗುವಿನ ಜನನವಾದಾಗ ಅದರ ಜನನ ಕಾಲದ ಶುಭ-ಅಶುಭದ ಬಗೆಗೆ ಕೇಳಲು, ಮನೆಯಲ್ಲಿ ಮದುವೆ ನಿಶ್ಚಯವಾದರೆ ಅದನ್ನು ಇಡುವ ಮುಹೂರ್ತದ ಬಗೆಗೆ ಕೇಳಲು ಹೀಗೆ ಮುಂತಾದ ಸಂದರ್ಭದಲ್ಲಿ ಜನರು ಮಠದತ್ತ ಧಾವಿಸಿ ಮಠದ ಸ್ವಾಮಿ ಹೇಳುವ ಸಲಹೆ-ಸೂಚನೆಯಂತೆ ನಡೆದುಕೊಳ್ಳುತ್ತಾರೆ. ಇದು ಮಠಗಳ ಆರಂಭದ ಕಾಲದಿಂದ ಇಂದಿಗೂ ನಡೆದುಕೊಂಡು ಬಂದ ಕ್ರಮವಾಗಿದೆ.

ಅಲ್ಲದೇ ಊರಿನ ಜಾತ್ರೆ, ಉತ್ಸವ, ಹಬ್ಬ-ಹರಿದಿನಗಳ ಸಂದರ್ಭದಲ್ಲಿ ಊರ ವತಿಯಿಂದ ಧಾರ್ಮಿಕ ಕಾರ್ಯಕ್ರಮವನ್ನು ಆಯೋಜಿಸಿ ಆ ಕಾರ್ಯಕ್ರಮಕ್ಕೆ ವಿವಿಧ ಮಠಗಳ ಮಠಾಧೀಶರನ್ನು ಕರೆಸಿ ಅವರಿಂದ ಉಪದೇಶವನ್ನು ನೀಡಿಸುವರು. ಅಂತಹ ಧರ್ಮೋಪದೇಶದ ಕಾರ್ಯಕ್ರಮಕ್ಕೆ ಊರಿನ ಜನರು, ನೆರೆಹೊರೆಯವರು, ಬಂಧು ಬಳಗದವರೆಲ್ಲ ಆಗಮಿಸಿ ಮಠಾಧೀಶರ ಹಿತವಚನಗಳನ್ನು ಕೇಳುವರು. ಊರಿನ ಜಾತ್ರೆಯಂತಹ ಪ್ರಮುಖ ಕಾರ್ಯಕ್ರಮಗಳಲ್ಲಿ ಈ ರೀತಿಯ ಕಾರ್ಯಕ್ರಮಗಳು ನಿರಂತರವಾಗಿ ನಡೆದುಕೊಂಡು ಬಂದಿರುವುದನ್ನು ನಾವು ಕಾಣಬಹುದು. ಹಾಗಾಗಿ ಮಠ ಮತ್ತು ಜನರ ನಡುವಿನ ಸಂಬಂಧ ಇಂದು ನಿನ್ನೆಯದಲ್ಲ. ಅದು ಪರಂಪರಾಗತವಾಗಿ ನಡೆದುಕೊಂಡು ಬಂದಿರುವಂತಹದ್ದಾಗಿದೆ.

ಅಡಿ ಟಿಪ್ಪಣಿಗಳು

೧. ಸಂತೆಬೆನ್ನೂರು ಸಮತೀಂದ್ರನಾಡಿಗ್; ೨೦೦೮, ಮಧ್ಯ ಕರ್ನಾಟಕದ ಮಹತ್ತಿನ ಮಠಗಳು(ಇದರಲ್ಲಿ ಮಹಾಮಹತ್ತಿನ ಮಠಗಳು(ಸಂ) ಜಯದೇವಪ್ಪ ಜೈನಕೇರಿ ಮತ್ತು ಜಗದೀಶ). ಮರುಳ ಸಿದ್ದೇಶ್ವರ ವೀರಶೈವ ಅಧ್ಯಯನ ಕೇಂದ್ರ ಕವಲೇದುರ್ಗ, ಶಿವಮೊಗ್ಗ.

೨. ಗದ್ದಗಿಮಠ ಬಿ.ಎಸ್., ಗದ್ದಗಿಮಠರ ಬರಹಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೩. ಗದ್ದಗಿಮಠ ಬಿ.ಎಸ್., ೧೯೬೯, ಕನ್ನಡ ಜಾನಪದ ಗೀತೆಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಅಧ್ಯಾಯ: ಏಳು

ಅಲಕ್ಷಿತರ ಮತಗಳು: ಸಮಸ್ಯೆ, ಸವಾಲು ಹಾಗೂ ಮುಂದೇನು.

೧. ಅಸ್ತಿತ್ವದ ಸಮಸ್ಯೆ ಮತ್ತು ಅಸ್ತಿತ್ವದ ಪ್ರಶ್ನೆ
೨. ಉನ್ನತ ವರ್ಗಗಳ ಮತಗಳೊಂದಿಗೆ ಪೈಪೋಟಿ
೩. ಆರ್ಥಿಕ ಸಮಸ್ಯೆ ಅಥವಾ ಆದಾಯದ ಮೂಲಗಳ ಕೊರತೆ
೪. ಮೂಲ ಸಾಂಸ್ಕೃತಿಕ ಪರಂಪರೆ ಮತ್ತು ಮತದೊಂದಿಗಿನ ಸಂಘರ್ಷ
೫. ಮಠಾಧಿಪತಿಗಳ ಐಷಾರಾಮಿ ಜೀವನ ಕ್ರಮ
೬. ಮೂಲಭೂತವಾದಿ ನೆಲೆ ಹಾಗೂ ಸಂಘ ಪರಿವಾರಗಳಿಂದ ಬಿಡುಗಡೆಗೊಳ್ಳಬೇಕಾದ ಅಗತ್ಯತೆ
೭. ಮುಂದೇನು

ಅಧ್ಯಾಯ: ಏಳು

ಅಲಕ್ಷಿತರ ಮಠಗಳು: ಸಮಸ್ಯೆ, ಸವಾಲು ಹಾಗೂ ಮುಂದೇನು.

ಭಾರತವು ವಿವಿಧತೆಯಲ್ಲಿ ಏಕತೆಯನ್ನು ಕಂಡುಕೊಂಡಿರುವ ನಾಡು. ಇಲ್ಲಿ ವಿವಿಧ ಧರ್ಮ ಹಾಗೂ ವಿವಿಧ ಸಮುದಾಯದ ಜನರು ನೆಲೆಯನ್ನು ಕಂಡುಕೊಂಡಿದ್ದಾರೆ. ಇವರೆಲ್ಲರೂ ಕೂಡ ತಮ್ಮದೇ ಆದ ಸಾಂಸ್ಕೃತಿಕ ಅಸ್ಮಿತೆಯನ್ನು ಕಾಪಾಡಿಕೊಳ್ಳುವ ಮೂಲಕ ತಮ್ಮ ಹೋರಾಟವನ್ನು ಮುನ್ನಡೆಸಿಕೊಂಡು ಬಂದಿದ್ದಾರೆ. ಈ ಎಲ್ಲ ವಿವಿಧತೆಯ ಸಂಪ್ರದಾಯ ಮತ್ತು ಆಚರಣೆಗಳನ್ನು ಕಾಪಾಡಿಕೊಂಡು ಭಾರತೀಯರು ಏಕತೆಯನ್ನು ಸಾಧಿಸಿಕೊಂಡು ಬಂದಿದ್ದಾರೆ. ಇದು ಶತ ಶತಮಾನಗಳಿಂದಲೂ ಅಸ್ತಿತ್ವದಲ್ಲಿರುವುದನ್ನು ನಾವು ಕಾಣಬಹುದಾಗಿದೆ. ಇಲ್ಲಿ ತಮ್ಮ ನೆಲೆಯನ್ನು ಕಂಡುಕೊಂಡಿರುವ ಪ್ರತಿಯೊಂದು ಧರ್ಮವು ಕೂಡ ಮಾನವನ ಕಲ್ಯಾಣವನ್ನು ಬಯಸುವಂತಹ ಶಾಂತಿ, ಸಹನೆ, ಕರುಣೆ, ಮೈತ್ರಿ, ಸಹಕಾರ - ಸಹೋದರತ್ವ ಭಾವಗಳನ್ನು ಪ್ರತಿಪಾದಿಸುವುದನ್ನು ಗಮನಿಸಬಹುದಾಗಿದೆ. ಮಾನವನು ಈ ಧರ್ಮದ ತಳಹದಿಯ ಮೇಲೆ ರೂಪಿತವಾಗಿರುವ ನಿಯಮಗಳನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡು ಮುಂದುವರೆಯುತ್ತಿದ್ದಾನೆ. ಹಾಗೆಯೇ ಬದಲಾದ ಕಾಲಕ್ಕೆ ತಕ್ಕಂತೆ ತನ್ನ ಜೀವನಶೈಲಿಯನ್ನು ಬದಲಾಯಿಸಿಕೊಂಡರೂ ಧರ್ಮದ ಮೇಲಿನ ಮಾನವನ ನಂಬಿಕೆಯು ಇಂದಿಗೂ ಕಡಿಮೆಯಾಗಿಲ್ಲ. ಇದು ಧರ್ಮ ಮತ್ತು ಮಾನವನಿಗಿರುವ ಸಂಬಂಧವನ್ನು ಎತ್ತಿಹಿಡಿಯುತ್ತದೆ.

ಹಿಂದೂ ಧರ್ಮದ ಧಾರ್ಮಿಕ ತಳಹದಿಯ ಮೇಲೆ ರೂಪಿತಗೊಂಡಿರುವ ಮಠಗಳು ಜನತೆಯಲ್ಲಿ ಸೌಹಾರ್ದತೆಯನ್ನು ಮೂಡಿಸುವುದರ ಜೊತೆಗೆ ಜನತೆಯ ಜೀವನದಲ್ಲಿ ಬದಲಾವಣೆಯನ್ನು ತರಲು ಪ್ರಾರಂಭಿಸಿದವು. ಇಂತಹ ಮಠಗಳು ಹಿಂದಿನ ದಿನಗಳಲ್ಲಿ ಉನ್ನತ ವರ್ಗಗಳಿಗೆ ಹೆಚ್ಚಿನ ಗಮನ ನೀಡಿದವು. ಇಲ್ಲಿ ಅಲಕ್ಷಿತ ಸಮುದಾಯಗಳನ್ನು 'ಕೀಳು' ದೃಷ್ಟಿಕೋನದಿಂದ ಕಾಣಲಾರಂಭಿಸಿದವು. ಇದಕ್ಕೆ ಪ್ರಮುಖ ಕಾರಣವೆಂದರೆ ಭಾರತದಲ್ಲಿ ವೈದಿಕತೆಯು ಸೃಷ್ಟಿಸಿರುವ ವರ್ಣವ್ಯವಸ್ಥೆಯಾಗಿದೆ. ಈ ಅಸಮಾನತೆಯ ವರ್ಣವ್ಯವಸ್ಥೆಯು ಬ್ರಾಹ್ಮಣ, ಕ್ಷತ್ರಿಯ

ಸಮುದಾಯಗಳಿಗೆ ಹೆಚ್ಚಿನ ಗೌರವ ಮತ್ತು ಉತ್ತಮ ಸ್ಥಾನಮಾನಗಳನ್ನು ಕಲ್ಪಿಸಿದರೆ ವೈಶ್ಯನಿಗೆ ಈ ಎರಡು ಸಮುದಾಯಗಳಿಗೆ ವಿಧೇಯವಾಗಿರುವಂತೆ ಮತ್ತು ಆರ್ಥಿಕ ವ್ಯವಹಾರಗಳ ಹೊಣೆಯನ್ನು ನೀಡಿತು. ಆದರೆ ಕೆಳಸ್ತರದ 'ಶೂದ್ರ' ಸಮುದಾಯಗಳನ್ನು ಕಟ್ಟಕಡೆಗೆ ತಳ್ಳುವ ಮೂಲಕ ಶೋಷಣೆಗೆ ಗುರಿಪಡಿಸಲಾಯಿತು. ಇದರಲ್ಲಿಯೇ ಕಂಡುಬರುವಂತೆ ಅಸ್ಪೃಶ್ಯ ಸಮುದಾಯವನ್ನು ಅತ್ಯಂತ ನಿಂದನೆಗೆ ಗುರಿಪಡಿಸುವ ಮೂಲಕ ಎಲ್ಲ ಹಕ್ಕುಗಳಿಂದ ವಂಚನೆಗೆ ಗುರಿಪಡಿಸಿತು. ಹಾಗೆಯೇ ಈ ಸಮುದಾಯವನ್ನು ಕೀಳು ವೃತ್ತಿಯಲ್ಲಿ ನಿರತರಾದ ಇವರನ್ನು ಸಮುದಾಯದ ಹೆಸರಿನಲ್ಲಿ ನಿರಂತರವಾಗಿ ಶೋಷಣೆಗೆ ಗುರಿಪಡಿಸುತ್ತ ಬಂದಿತು.

ಭಾರತದಲ್ಲಿ ವೈದಿಕತೆಯು ಸೃಷ್ಟಿಸಿರುವ ಈ ವರ್ಣವ್ಯವಸ್ಥೆಯನ್ನು ಜಾಗೃತವಾಗಿ ಕಾಪಾಡುವ ಮತ್ತು ಈ ಅಸಮಾನತೆಯ ವರ್ಣವ್ಯವಸ್ಥೆಗೆ ಧಕ್ಕೆ ಬರದಂತೆ ಕಾಪಾಡುವ ಜವಾಬ್ದಾರಿಯನ್ನು ಈ ಮಠಗಳು ನಿರ್ವಹಿಸತೊಡಗಿದವು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಬಸವಣ್ಣನವರು ಇಲ್ಲಿನ ಅಸಮಾನತೆಯ ವಿರುದ್ಧ ಸಮರ ಸಾರಿ ಮಾನವೀಯ ತಳಹದಿಯ ಮೇಲೆ ಅಲಕ್ಷಿತ ಸಮುದಾಯದ ಜನರನ್ನು ಕೇಂದ್ರವಾಗಿಟ್ಟುಕೊಂಡು ೧೨ನೇ ಶತಮಾನದಲ್ಲಿ ಅನುಭವಮಂಟಪದ ಅಡಿಯಲ್ಲಿ ಅಲಕ್ಷಿತ ವರ್ಗದ ಶರಣರನ್ನು ಪ್ರತಿನಿಧಿಸುವ ವಚನಚಳವಳಿಯೊಂದನ್ನು ರೂಪಿಸಿದರು. ಈ ಚಳುವಳಿಯು ಶರಣರ ಚಳುವಳಿಯೆಂದು ಹೆಸರು ಪಡೆದುಕೊಂಡಿತು. ಇಲ್ಲಿ ಪ್ರತಿಯೊಂದು ಸಮುದಾಯ, ಜನಾಂಗವನ್ನು ಅವರ ವೃತ್ತಿಯ ನೆಲೆಯಲ್ಲಿಯೇ ಎತ್ತಿಹಿಡಿಯುವ ಮೂಲಕ, ಅವರ ವೃತ್ತಿಯ ವೈಶಿಷ್ಟ್ಯತೆಯನ್ನು ಗುರುತಿಸಲಾಯಿತು. ಆ ಮೂಲಕವಾಗಿ ಅಲಕ್ಷಿತ ಸಮುದಾಯಗಳು ಮೂಲ ಶರಣ ಅಡಿಯಲ್ಲಿ ತಮ್ಮದೇ ಆದ ಗುರು ಪರಂಪರೆ ಅಥವಾ ಮಠ ಪರಂಪರೆಯನ್ನು ಅಸ್ತಿತ್ವಕ್ಕೆ ತರಲಾಯಿತು. ಈ ಮಠಗಳನ್ನು ನಾವು ಇಂದು ಅಲಕ್ಷಿತ ಸಮುದಾಯದ ಮಠಗಳೆಂದು ಗುರುತಿಸಿಕೊಂಡು ಅಧ್ಯಯನಕ್ಕೆ ಗುರಿಪಡಿಸಲಾಗಿದೆ.

ಇಂದು ಕರ್ನಾಟಕದಲ್ಲಿ ವಚನ ಚಳವಳಿಯ ಆಶಯವನ್ನು ಕೇಂದ್ರವಾಗಿಟ್ಟುಕೊಂಡು ಪ್ರತಿಯೊಂದು ಸಮುದಾಯ, ಜನಾಂಗವನ್ನು ಪ್ರತಿನಿಧಿಸುವಂತಹ ಅಲಕ್ಷಿತ ಮಠಗಳ ಪರಂಪರೆಯೊಂದು ಜನ್ಮತಾಳಿದೆ. ಈ ಅಲಕ್ಷಿತ ಸಮುದಾಯ ಕೇಂದ್ರಿತ ಮಠಗಳು ಇಂದು ಹಲವಾರು ಸಮಸ್ಯೆ ಮತ್ತು ಸವಾಲುಗಳನ್ನು ತನ್ನ ಮುಂದೆ ಎದುರು ಹಾಕಿಕೊಂಡಿವೆ. ಅವುಗಳನ್ನು ನಾವು ಈ ಮುಂದಿನಂತೆ ಅಧ್ಯಯನದಲ್ಲಿ ಗುರುತಿಸಲಾಗಿದೆ.

೧. ಅಸ್ತಿತ್ವದ ಸಮಸ್ಯೆ ಮತ್ತು ಅಸ್ತಿತ್ವದ ಪ್ರಶ್ನೆ

ಕ್ರಿ.ಶ. ೧೨ನೇ ಶತಮಾನದಲ್ಲಿ ಬಸವಣ್ಣ ರೂಪಿಸಿದ ಅಲಕ್ಷಿತ ಸಮುದಾಯ ಕೇಂದ್ರಿತ

ಶರಣ ಚಳುವಳಿಯ ಆಶಯಗಳನ್ನು ಸಮಕಾಲೀನ ಸಮಾಜ ಜಾರಿಗೆ ತರುವ ಉದ್ದೇಶದಿಂದ ಕರ್ನಾಟಕದಲ್ಲಿ ಮಠ ಪರಂಪರೆಗಳು ಜನ್ಮತಾಳಿದವು. ಈ ಮಠಗಳು ಅಲಕ್ಷಿತ ಸಮುದಾಯದ ಜನತೆಯನ್ನು ಸಾಮಾಜಿಕವಾಗಿ ಜಾಗೃತಗೊಳಿಸುವ ಮೂಲಕ ಧಾರ್ಮಿಕ ತಳಹದಿಯೊಂದನ್ನು ರೂಪಿಸುವ ನೆಲೆಯಲ್ಲಿ ಅಸ್ತಿತ್ವಕ್ಕೆ ಬಂದವು. ಆದರೆ ಅಲಕ್ಷಿತ ಸಮುದಾಯಗಳನ್ನು ಪ್ರತಿನಿಧಿಸುವ ಈ ಮಠಗಳು ಇತ್ತೀಚಿನ ದಿನಗಳ ತನ್ನ ಹೊಸ ಪರಂಪರೆಯನ್ನು ಹುಟ್ಟುಹಾಕಿದ ಸಂದರ್ಭದಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಅಂತಹ ಸಮಸ್ಯೆಗಳಲ್ಲಿ ತಮ್ಮ ಅಸ್ತಿತ್ವದ ಸಮಸ್ಯೆಯೂ ಕೂಡ ಈ ಅಲಕ್ಷಿತ ಮಠಗಳನ್ನು ಪ್ರಬಲವಾಗಿ ಕಾಡುತ್ತಾ ಬಂದಿದೆ. ಇತ್ತೀಚಿಗಷ್ಟೇ ಕರ್ನಾಟಕದಲ್ಲಿ ಜನ್ಮ ತಳೆದಿರುವ ಈ ಅಲಕ್ಷಿತ ಮಠಗಳು ಸ್ವತಂತ್ರವಾಗಿ ತನ್ನ ಸಮುದಾಯದ ಪರವಾದ ಯೋಜನೆಗಳನ್ನು ರೂಪಿಸಿಕೊಳ್ಳುವಷ್ಟು ಪ್ರಬಲವಾಗಿ ಬೆಳೆದಿಲ್ಲ. ಇದಕ್ಕೆ ಪ್ರಮುಖ ಕಾರಣವೆಂದರೆ ಈ ಸಮುದಾಯದ ಜನತೆಯು ಆರ್ಥಿಕವಾಗಿ ಅತ್ಯಂತ ಹಿಂದುಳಿದಿದ್ದು ಬಡತನದ ಬವಣೆಯಲ್ಲಿ ನರಳಾಡುತ್ತಿದ್ದಾರೆ. ಈ ಕಾರಣದಿಂದ ಅಲಕ್ಷಿತ ಮಠಗಳು ಆರ್ಥಿಕವಾಗಿ ಹಿಂದುಳಿದಿವೆ. ಮಠಗಳು ಮತ್ತು ಸಮುದಾಯಗಳ ನಡುವೆ ಒಂದು ಅಂತರ್‌ಸಂಬಂಧವಿದೆ. ಒಂದು ಸಮುದಾಯವು ಆರ್ಥಿಕವಾಗಿ ಹೇಗೆ ಮುಂದುವರೆದಿದೆ ಎಂಬುದನ್ನು ತಿಳಿಯುವುದಕ್ಕೆ ಆ ಸಮುದಾಯ ಕೇಂದ್ರಿತ ಮಠಗಳ ಸ್ಥಿತಿ-ಗತಿಯನ್ನು ಅವಲೋಕಿಸಿದರೆ ಇದು ಸ್ಪಷ್ಟವಾಗಿ ಅರಿವಿಗೆ ಬರುತ್ತದೆ.

ಕರ್ನಾಟಕದಲ್ಲಿ ಅಲಕ್ಷಿತ ಸಮುದಾಯಗಳನ್ನು ಕೇಂದ್ರವಾಗಿದ್ದುಕೊಂಡು ಸ್ಥಾಪನೆಯಾಗಿರುವ ಮಠಗಳನ್ನು ಮುನ್ನಡೆಸುತ್ತಿರುವವರು ಚಿತ್ರದುರ್ಗ ಮುರುಘಮಠದ ಶಿವಶರಣರಾದ ಶಿವಮೂರ್ತಿ ಶರಣರಾಗಿದ್ದಾರೆ. ಇವರು ಸಾಮಾಜಿಕ ಸಮಾನತೆಯ ತಳಹದಿಯ ಮೇಲೆ ಸಮಾಜದಲ್ಲಿನ ಎಲ್ಲ ಅಲಕ್ಷಿತ ಸಮುದಾಯಗಳನ್ನು ಧಾರ್ಮಿಕ ಜಾಗೃತಿ ಮೂಡಿಸುವ ಉದ್ದೇಶದಿಂದ ಪ್ರತಿಯೊಂದು ಸಮುದಾಯಗಳಿಗೂ ತಮ್ಮ ಧರ್ಮಶಾಲೆಯಲ್ಲಿ ಕಲಿತ ಆಯಾ ಸಮುದಾಯದ ಶರಣರನ್ನು ಸಮುದಾಯ ಆಧಾರಿತ ಮಠಗಳಿಗೆ ಪೀಠಾಧಿಪತಿಯಾಗಿ ಪಟ್ಟ ಕಟ್ಟುವ ಮೂಲಕ ಮುನ್ನಡೆಸುತ್ತ ಬಂದಿದ್ದಾರೆ. ಚಿತ್ರದುರ್ಗದ ಮುರುಘ ಶರಣರಿಂದ ದೀಕ್ಷೆ ಪಡೆದು ಅವರ ಸಲಹೆ-ಸಹಕಾರ, ಮಾರ್ಗದರ್ಶನದಂತೆ ಮುನ್ನಡೆಯುತ್ತಿರುವ ಈ ಪೀಠಾಧಿಪತಿಗಳು ಯಾವುದೇ ಕಾರ್ಯವನ್ನು ಅಥವಾ ಜನಪರವಾದ ಯೋಜನೆಯನ್ನು ಕೈಗೊಳ್ಳುವಾಗ ಸ್ವತಂತ್ರವಾಗಿ ತನ್ನ ಸಮುದಾಯದ ಜನತೆಯ ಅಭಿವೃದ್ಧಿಗೆ ಪೂರಕವಾದ ರೀತಿಯಲ್ಲಿ ಮುನ್ನಡೆಯಲು ಸಾಧ್ಯವಿಲ್ಲ. ಈ ಪೀಠಾಧಿಪತಿಗಳು ತಮ್ಮ ಗುರುಗಳಾದ ಮುರುಘ ಮಠದ ಶರಣರ ಸಲಹೆ - ಮಾರ್ಗದರ್ಶನದಂತೆ ಮುನ್ನಡೆಯಬೇಕಾಗಿರುತ್ತದೆ. ಇದಕ್ಕೆ ಕಾರಣವೆಂದರೆ ಈ ಅಲಕ್ಷಿತ ಮಠಗಳ ಪೀಠಾಧೀಶರುಗಳು ಸಂಪೂರ್ಣವಾಗಿ ಮುರುಘ ಶರಣರನ್ನು ಅವಲಂಬಿಸಿವೆ. ಈ ಮಠಗಳಿಗೆ ಬೇಕಾಗಿ ಅಗತ್ಯ

ಪೂರೈಕೆಗಳಾದ ಮಠಕ್ಕೆ ಬೇಕಾದ ಜಾಗ, ಕಟ್ಟಡ ಹಾಗೂ ಆರ್ಥಿಕ ಸಹಕಾರವನ್ನು ಹೀಗೆ ಮುಂದುವರೆದ ಮುರುಘಮಠವು ನೀಡುವ ಮೂಲಕ ಈ ಮಠಗಳನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಂಡಿದೆ. ಹಾಗಾಗಿ ಇಲ್ಲಿ ಈ ಅಲಕ್ಷಿತ ಮಠಗಳ ಪೀಠಾಧಿಪತಿಗಳು ತನ್ನ ಸಮುದಾಯದ ಪರವಾದ ಯೋಜನೆಗಳನ್ನು ರೂಪಿಸುವಲ್ಲಿ ಅಸ್ತಿತ್ವದ ಕಾರಣದಿಂದ ಸ್ವತಂತ್ರ ನಿರ್ಧಾರಗಳನ್ನು ಕೈಗೊಳ್ಳುವಲ್ಲಿ ಹಲವಾರು ಸಮಸ್ಯೆಗಳು ಎದುರಾಗುತ್ತಿರುವುದನ್ನು ಸೂಕ್ಷ್ಮವಾಗಿ ಗಮನಿಸಬಹುದಾಗಿದೆ.

ಕರ್ನಾಟಕದಲ್ಲಿ ಕಂಡುಬರುವ ಎಲ್ಲಾ ಮಠಗಳಿಗೂ ಈ ಅಸ್ತಿತ್ವದ ಪ್ರಶ್ನೆ ಎದುರಾಗುವುದಿಲ್ಲ. ಆರ್ಥಿಕವಾಗಿ ಮುಂದುವರೆದ ಮಠಗಳು ಮತ್ತು ಮುರುಘಶರಣರಿಂದ ಹೊರತುಪಡಿಸಿ ಉಳಿದಂತೆ ಬೆಂಗಳೂರಿನ ಪುರಿ ಮಹಾಸಂಸ್ಥಾನ ಹಾಗೂ ಇತರೆ ಕಡೆಗಳಲ್ಲಿ ದೀಕ್ಷೆ ಪಡೆದು ಕಾರ್ಯ ನಿರ್ವಹಿಸುತ್ತಿರುವ ಪೀಠಾಧಿಪತಿಗಳು ಯಾವುದೇ ಹಂಗಿಲ್ಲದೆ ತಮ್ಮತನವನ್ನು ಕಾಯ್ದುಕೊಂಡು ಸ್ವತಂತ್ರವಾಗಿ ಕಾರ್ಯಪ್ರವೃತ್ತರಾಗಿರುವುದು ಕಂಡುಬರುತ್ತದೆ. ಇಂಥ ಸ್ವತಂತ್ರ ಅಧಿಕಾರವನ್ನು, ಸ್ವಂತ ಅಸ್ತಿತ್ವವನ್ನು ಹೊಂದಿರುವ ಮಠಗಳಲ್ಲಿ ಹೊಸದುರ್ಗ ತಾಲ್ಲೂಕಿನಲ್ಲಿ ಕಂಡುಬರುವ ಶ್ರೀ ಭಗೀರಥ ಮಹಾಸಂಸ್ಥಾನ, ಕಾಗಿನೆಲೆಯ ಶ್ರೀ ಕನಕ ಗುರುಪೀಠ, ಹಿರಿಯೂರಿನ ಸಮೀಪವಿರುವ ಆದಿಜಾಂಬವ ಮಠ ಹಾಗೂ ಪ್ರಸ್ತುತ ರಾಜನಹಳ್ಳಿಯ ಶ್ರೀ ವಾಲ್ಮೀಕಿ ಗುರುಪೀಠದ ಪೀಠಾಧಿಪತಿಗಳಿಗಿಂತ ಪೂರ್ವದಲ್ಲಿ ವಾಲ್ಮೀಕಿ ಪೀಠವನ್ನು ಅಲಂಕರಿಸಿದ್ದ ಶ್ರೀ ಪುಣ್ಯಾನಂದ ಪುರಿ ಮಹಾಸ್ವಾಮಿಗಳು ತಮ್ಮದೇ ಆದ ಸ್ವಂತ ಅಸ್ತಿತ್ವವನ್ನು ಹೊಂದಿದ್ದು, ಸಮುದಾಯವನ್ನು ಮುನ್ನಡೆಸುವಲ್ಲಿ ಸಮುದಾಯದ ಜನತೆಯೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿದ್ದಾರೆ. ಇವರಿಗೆ ಯಾವುದೇ ಅಡ-ತಡೆಗಳು ಎದುರಾಗುವುದು ಕಡಿಮೆ. ಇದಕ್ಕೆ ಕಾರಣ ಇವರು ಸ್ವತಂತ್ರವಾದ ಅಸ್ತಿತ್ವವನ್ನು ಹೊಂದಿರುವುದಾಗಿದೆ. ಇಂದು ಸ್ಥಾಪನೆಯಾಗಿರುವ ಈ ಅಲಕ್ಷಿತ ಮಠಗಳು ಆರ್ಥಿಕವಾಗಿ ಪ್ರಗತಿಯಾಗಿ ಮುಂದೆ ಬಂದಾಗ ಮಾತ್ರ ಈ ಮಠಗಳು ಸ್ವತಂತ್ರವಾಗಿ ಕಾರ್ಯಪ್ರವೃತ್ತವಾಗಲು ಸಹಾಯವಾಗುತ್ತದೆ. ಇದಕ್ಕೆ ಸಮಯವು ಬೇಕಾಗುತ್ತದೆ. ಈ ಕಾರಣದಿಂದಾಗಿ ಹಲವಾರು ಅಲಕ್ಷಿತ ಮಠಗಳು ತಮ್ಮ ಅಸ್ತಿತ್ವಕ್ಕಾಗಿ ಹೋರಾಟ ನಡೆಸುತ್ತಿರುವುದನ್ನು ಕರ್ನಾಟಕದ ಅಲಕ್ಷಿತ ಮಠಗಳ ಆಗುಹೋಗುಗಳಿಂದ ಗುರುತಿಸಬಹುದಾಗಿದೆ.

೨. ಉನ್ನತ ವರ್ಗಗಳ ಮಠಗಳೊಂದಿಗೆ ಪೈಪೋಟಿ

ಕರ್ನಾಟಕದಲ್ಲಿ ಸ್ಥಾಪನೆಯಾಗಿರುವ ಅಲಕ್ಷಿತ ಸಮುದಾಯ ಕೇಂದ್ರಿತ ಮಠಗಳು ಪ್ರಸ್ತುತ ಸಂದರ್ಭದಲ್ಲಿ ಧಾರ್ಮಿಕವಾಗಿ ಉನ್ನತ ವರ್ಗಗಳ ಮಠಗಳೊಂದಿಗೆ ಪೈಪೋಟಿ ನಡೆಸಬೇಕಾದ ಅನಿವಾರ್ಯತೆ ಎದುರಾಗಿದೆ. ಪ್ರಸ್ತುತ ಸಂದರ್ಭವನ್ನು ಸ್ಪರ್ಧಾತ್ಮಕ ಯುಗವೆಂದು ಕರೆಯುತ್ತೇವೆ. ಈ ಮಾತು ಕೇವಲ ವ್ಯಾಪಾರ, ಉದ್ಯೋಗ ಮಾತ್ರ ಇಂದು ಸೀಮಿತವಾಗಿಲ್ಲ. ಸಮಾಜದ

ಪ್ರತಿಯೊಂದು ಕ್ಷೇತ್ರವು ಇಂದು ಜಾಗತೀಕರಣದ ಭರಾಟೆಯಲ್ಲಿ ಸ್ಪರ್ಧೆಗಿಳಿಯುತ್ತಿವೆ. ಇಂತಹ ಕ್ಷೇತ್ರಗಳಲ್ಲಿ ಧಾರ್ಮಿಕ ಕ್ಷೇತ್ರವು ಇಂದು ಸ್ಪರ್ಧೆಯಿಂದ ಹೊರತಾಗಿಲ್ಲ. ಉನ್ನತ ವರ್ಗ ಹಾಗೂ ಸಮುದಾಯವನ್ನು ಪ್ರತಿನಿಧಿಸುವ ಮಠಗಳು ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ಹಾಗೂ ರಾಜಕೀಯವಾಗಿ ಸಾಕಷ್ಟು ಪ್ರಗತಿಯನ್ನು ಕಂಡುಕೊಂಡಿವೆ. ಆದರೆ ಈ ಮಠಗಳ ಎದುರು ಅಲಕ್ಷಿತ ಮಠಗಳು ಸ್ವಾಭಿಮಾನದ ಬದುಕೊಂದನ್ನು ನಿರ್ಮಿಸಿಕೊಳ್ಳಬೇಕಾದ ಅನಿವಾರ್ಯತೆ ಇದೆ. ಇಲ್ಲಿ ಸ್ವಾಭಿಮಾನವೆನ್ನುವುದು ಆ ಮಠದ ಸಮುದಾಯದ ಪ್ರಗತಿಯಲ್ಲಿ ಅಡಗಿದೆ. ಈ ಕಾರಣದಿಂದಾಗಿ ಅಲಕ್ಷಿತ ಮಠಗಳು ತಮ್ಮ ಸಮುದಾಯದ ಜನತೆಯಲ್ಲಿ ಅರಿವು, ಜಾಗೃತಿಯನ್ನು ಮೂಡಿಸುತ್ತ ಶ್ರಮಿಸಬೇಕಾಗಿದೆ. ಆದರೆ ಈ ಅಲಕ್ಷಿತ ಸಮುದಾಯದ ಜನರು ಶೈಕ್ಷಣಿಕವಾಗಿಯೂ ಅತ್ಯಂತ ಹಿಂದುಳಿದಿರುವುದರಿಂದ ಇಲ್ಲಿನ ಹೋರಾಟಗಳಿಗೆ ಹಲವು ಎಡುರು-ತೊಡರುಗಳು ಎದುರಾಗುತ್ತಿರುವುದನ್ನು ಗುರುತಿಸಬಹುದಾಗಿದೆ. ಪ್ರಸ್ತುತ ಸಂದರ್ಭದಲ್ಲಿ ಈ ಎಲ್ಲ ಸಮಸ್ಯೆಗಳನ್ನು ಎದುರು ಹಾಕಿಕೊಂಡು ಬಹುತೇಕ ಅಲಕ್ಷಿತ ಮಠಗಳು ಉನ್ನತ ವರ್ಗಗಳಿಗಿಂತ ಅಲಕ್ಷಿತ ಸಮುದಾಯದ ಮಠಗಳು ಕೂಡ ಕಡಿಮೆ ಇಲ್ಲ ಎಂಬುದನ್ನು ಸಾಧಿಸಲು ಹೊರಟಿರುವುದನ್ನು ಕರ್ನಾಟಕದ ಮಠ ಪರಂಪರೆಯಲ್ಲಿ ಗುರುತಿಸಬಹುದಾಗಿದೆ.

ಭಾರತದ ಸಮುದಾಯ ವ್ಯವಸ್ಥೆಯ ಸೊಂಕು ಸಾಮಾನ್ಯನಿಂದ ಹಿಡಿದು ಧಾರ್ಮಿಕ ಮಠಾಧಿಪತಿಗಳವರೆಗೆ ಒಂದೇ ತೆರನಾಗಿ ಕಂಡುಬರುತ್ತದೆ. ಧಾರ್ಮಿಕ ಸಮಾಜವನ್ನು ಮುನ್ನಡೆಸುವಂತಹ ನಮ್ಮ ಅಲಕ್ಷಿತ ಸಮುದಾಯ ಕೇಂದ್ರಿತ ಮಠಾಧಿಪತಿಗಳಿಗೂ ಈ ಶ್ರೇಷ್ಠ-ಕನಿಷ್ಠ, ಮೇಲು-ಕೀಳು, ಸ್ಪೃಶ್ಯ-ಅಸ್ಪೃಶ್ಯನೆಂಬ ತಾರತಮ್ಯ ಭಾವಗಳು ಕಾಡದೆ ಬಿಟ್ಟಿಲ್ಲ. ಧಾರ್ಮಿಕವಾಗಿ ಉನ್ನತವಾದ ಸ್ಥಾನವನ್ನು ಹೊಂದಿರುವ ನಮ್ಮ ಮಠಾಧಿಪತಿಗಳನ್ನು ಉನ್ನತ ಸಮುದಾಯ ಹಾಗೂ ಸಮುದಾಯಗಳ ಮಠಾಧೀಶರು ಇವರನ್ನು 'ಕೀಳು' ಭಾವನೆಯಿಂದಲೇ ನಡೆಸಿಕೊಳ್ಳುತ್ತಿರುವುದು ಕಂಡುಬರುತ್ತದೆ. ಈ ಕೀಳರಿಮೆ ಭಾವನೆಯನ್ನು ಬಹುತೇಕ ಅಲಕ್ಷಿತ ಮಠಗಳು, ಪೀಠಾಧಿಪತಿಗಳು ತೋರ್ಪಡಿಸುವುದಿಲ್ಲ. ಇದಕ್ಕೆ ಕಾರಣವೆಂದರೆ ಗೌರವ ಹಾಗೂ ಅಂತಸ್ತಿನ ಮತ್ತು ಅಸ್ತಿತ್ವದ ಪ್ರಶ್ನೆಯಾಗಿದೆ. ಆದರೆ ಆರ್ಥಿಕವಾಗಿ ಸದೃಢವಾಗಿ ಬೆಳೆದಿರುವ ಶ್ರೀ ಭಗೀರಥ ಪೀಠದ ಪೀಠಾಧ್ಯಕ್ಷರಾದ ಶ್ರೀ ಪುರುಷೋತ್ತಮಾನಂದ ಸ್ವಾಮಿಗಳು ಉನ್ನತ ಸಮುದಾಯಗಳು ಅಲಕ್ಷಿತ ಮಠಗಳನ್ನು 'ಕೀಳು'ಭಾವದಿಂದ ಕಾಣುತ್ತಿರುವ ಬಗೆಯನ್ನು ಸಂಪೂರ್ಣವಾಗಿ ತಿಳಿಸಿಕೊಟ್ಟಿರುತ್ತಾರೆ. ಇದರಿಂದ ಈ ಅಲಕ್ಷಿತ ಮಠಗಳು ಎದುರಿಸುತ್ತಿರುವ ಸಮಸ್ಯೆಗಳು ಸಂಪೂರ್ಣ ಅರಿವಾಗುತ್ತವೆ.

೩. ಆರ್ಥಿಕ ಸಮಸ್ಯೆ ಅಥವಾ ಆದಾಯದ ಮೂಲಗಳ ಕೊರತೆ

ಕರ್ನಾಟಕದಲ್ಲಿ ಅಲಕ್ಷಿತ ಸಮುದಾಯಗಳನ್ನು ಸಮಾಜದಲ್ಲಿ ಮುಂಚೂಣಿಗೆ ತರುವ ಉದ್ದೇಶದಿಂದ ಸ್ಥಾಪನೆಯಾಗಿರುವ ಅಲಕ್ಷಿತ ಮಠಗಳು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿರುವುದು ಕಂಡುಬರುತ್ತದೆ. ಅವುಗಳಲ್ಲಿ ಆರ್ಥಿಕ ಕೊರತೆಯು ಒಂದಾಗಿದೆ. ಅಲಕ್ಷಿತ ಸಮುದಾಯಗಳು ಬಡತನದ ಬವಣೆಯಲ್ಲಿ ನರಳಾಡುತ್ತಿದ್ದು, ನಿತ್ಯಜೀವನವನ್ನು ನಿರ್ವಹಿಸುವುದೇ ಕಷ್ಟ ಎಂಬ ಹಂತದಲ್ಲಿ ಎಷ್ಟೋ ಸಮುದಾಯಗಳು ಅತಂತ್ರ ಸ್ಥಿತಿಯಲ್ಲಿವೆ. ಇಂತಹ ಸಮುದಾಯಗಳನ್ನು ಮುನ್ನೆಡೆಸಲು ರೂಪಿತವಾಗಿರುವ ಮಠಗಳ ಪ್ರಮುಖ ಆದಾಯದ ಮೂಲವೆಂದರೆ ಈ ಸಮುದಾಯದ ಉಳ್ಳವರು ನೀಡುವ ಕಾಣಿಕೆ ಅಥವಾ ದಾನವೇ ಈ ಮಠಗಳ ಆದಾಯದ ಮೂಲವಾಗಿರುತ್ತದೆ. ಅಲಕ್ಷಿತ ಸಮುದಾಯಗಳಲ್ಲಿ ಉನ್ನತ ಹಂತವನ್ನು ತಲುಪಿರುವ ಕೆಲವರು ತಮ್ಮ ಸಮುದಾಯದ ಪರವಾದ ಕಾಳಜಿಯನ್ನು ತೋರದೆ ಉನ್ನತ ವರ್ಗಗಳ ಪರವಾಗಿರುವುದನ್ನು ನಮ್ಮಲ್ಲಿ ಗುರುತಿಸಬಹುದಾಗಿದೆ. ಹೀಗಾಗಿ ಈ ಸಮುದಾಯಗಳ ಮಠಗಳ ಪ್ರಗತಿಗೆ ಬೇಕಾದ ಆರ್ಥಿಕ ಸವಲತ್ತುಗಳು ಸೂಕ್ತ ರೀತಿಯಲ್ಲಿ ಲಭಿಸುವುದಿಲ್ಲ. ಹಾಗೆಯೇ ಉನ್ನತ ವರ್ಗಗಳ ಮಠಗಳಿಗಿರುವಂತಹ ಚರಾಸ್ತಿ ಮತ್ತು ಸ್ತಿರಾಸ್ಥಿಗಳ ಕೊರತೆಯು ಇಲ್ಲಿ ಎದ್ದು ಕಾಣುತ್ತಿದೆ. ಕರ್ನಾಟಕದಲ್ಲಿ ಮುರುಘ ಶರಣರು ರೂಪಿಸಿರುವ ಬಹುತೇಕ ಮಠಗಳಿಗೆ ಸ್ವಂತ ನಿವೇಶನವು ಇಲ್ಲದ ಕಾರಣ ಮುರುಗ ಶರಣರು ನಿವೇಶನ ನೀಡಿ ಒಂದು ಚಿಕ್ಕ ಕೊಠಡಿಯನ್ನು ನಿರ್ಮಿಸಿ ಮುಂದುವರೆಸುತ್ತಿದ್ದಾರೆ. ಇಂತಹ ಆರ್ಥಿಕ ಮುಗ್ಗಟ್ಟು ಈ ಮಠಗಳನ್ನು ಪ್ರಬಲವಾಗಿ ಕಾಡುತ್ತಿದೆ.

ಉನ್ನತ ವರ್ಗಗಳನ್ನು ಪ್ರತಿನಿಧಿಸುವ ಮಠಗಳು ಸಾಕಷ್ಟು ಪ್ರಮಾಣದಲ್ಲಿ ಆಸ್ತಿಯನ್ನು ಗಳಿಸಿಕೊಂಡು ಮುನ್ನೆಡೆಯುತ್ತಿವೆ. ಇವುಗಳ ಆಶ್ರಯದಲ್ಲಿ ಹಲವಾರು ಶೈಕ್ಷಣಿಕ ಸಂಸ್ಥೆಗಳಿದ್ದು ಇವುಗಳ ಆದಾಯದ ಮೂಲದಿಂದಲೇ ಅವುಗಳು ತಮ್ಮ ಪ್ರಗತಿಯನ್ನು ಸಾಧಿಸುತ್ತಿವೆ. ಆ ಮೂಲಕ ಸಾಮಾಜಿಕವಾಗಿ ಹೆಚ್ಚು ಪ್ರಗತಿಯನ್ನು ಮುನ್ನೆಡೆಯಲು ಸಹಕಾರಿಯಾಗಿದೆ. ಆದರೆ ಅಲಕ್ಷಿತ ಸಮುದಾಯವನ್ನು ಪ್ರತಿನಿಧಿಸುವ ಪ್ರತಿಯೊಂದು ಮಠಗಳು ಕೂಡ ಆರ್ಥಿಕವಾದ ಬಹುದೊಡ್ಡ ಸವಾಲುಗಳನ್ನು ತನ್ನ ಮೇಲೆ ಹಾಕಿಕೊಂಡಿರುವುದು ಕಂಡುಬರುತ್ತಿದೆ. ಈ ಕಾರಣದಿಂದಾಗಿ ಅಲಕ್ಷಿತ ಸಮುದಾಯವನ್ನು ಪ್ರತಿನಿಧಿಸುವಂತಹ ಅಲಕ್ಷಿತ ಮಠಗಳು ಆದಾಯದ ಮೂಲಗಳ ಕೊರತೆಯಿಂದಾಗಿ ಇನ್ನು ಬಡತನದಲ್ಲಿಯೇ ಮುಂದುವರೆಯುತ್ತಿರುವುದನ್ನು ನಾವು ಕಾಣಬಹುದಾಗಿದೆ. ಇದು ಆಯಾ ಸಮುದಾಯದ ಆರ್ಥಿಕತೆಯ ಪ್ರಾತಿನಿಧಿಕವಾಗಿ ಕಂಡುಬರುತ್ತದೆ.

೪. ಮೂಲ ಸಾಂಸ್ಕೃತಿಕ ಪರಂಪರೆ ಮತ್ತು ಮಠದೊಂದಿಗಿನ ಸಂಘರ್ಷ

ಭಾರತದ ಸಂದರ್ಭದಲ್ಲಿ ಇಂದು ನಾವು ಅಲಕ್ಷಿತವೆಂದು ಗುರುತಿಸಿಕೊಂಡಿರುವ ಪ್ರತಿಯೊಂದು

ಸಮುದಾಯವು ಕೂಡ ತನ್ನದೇ ಆದ ಸಾಂಸ್ಕೃತಿಕ ಸಿರಿಮೆಯನ್ನು ಹೊಂದಿದೆ. ಈ ಸಾಂಸ್ಕೃತಿಕ ಸೊಬಗನ್ನು ಪರಂಪರೆಯಿಂದಲೂ ಕಾಪಾಡಿಕೊಂಡು, ಅದನ್ನು ಪಾಲಿಸಿ, ಪೋಷಿಸಿಕೊಂಡು ಬಂದಿರುವುದನ್ನು ಗಮನಿಸಬಹುದಾಗಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಜಾಗೃತಿಯ ಹೆಸರಿನಲ್ಲಿ ಶರಣತತ್ವಗಳನ್ನು ಸಾಕಾರಗೊಳಿಸುವ ನೆಲೆಯಲ್ಲಿ ಜನ್ಮತಾಳಿರುವ ಮಠ ಪರಂಪರೆಯ ಆಚರಣೆಗಳಿಗೂ ಮತ್ತು ವಂಶಪಾರಂಪಾರ್ಯವಾಗಿ ಕಾಪಾಡಿಕೊಂಡು ಬಂದಿರುವ ಆಚರಣೆಗಳಿಗೂ ವೈರುಧ್ಯಗಳಿವೆ. ಪ್ರಸ್ತುತ ಸಂದರ್ಭದಲ್ಲಿನ ಅಲಕ್ಷಿತ ಮಠಗಳ ಪೀಠಾಧಿಪತಿಗಳಿಗೆ ಇದನ್ನು ನಿಭಾಯಿಸಿಕೊಂಡು ಹೋಗುವಂತಹ ಬಹು ದೊಡ್ಡ ಸಮಸ್ಯೆ ಇಲ್ಲಿ ತಲೆದೋರುತ್ತದೆ. ವೈದಿಕರ ಶೋಷಣೆಯಿಂದ ಸಮಾಜದ ಅಂಚಿಗೆ ತಳ್ಳಲ್ಪಟ್ಟಿದ್ದು, ಅದಕ್ಕೆ ಪರ್ಯಾಯ ನೆಲೆಯಲ್ಲಿ ತಮ್ಮದೇ ಆದ ಸಾಂಸ್ಕೃತಿಕ ದೈವಗಳನ್ನು ರೂಪಿಸಿಕೊಂಡು ಬಂದಂತಹ ಜನತೆಯು ವೈದಿಕ ಮಾದರಿಯಲ್ಲಿಯೇ ಜನ್ಮತಾಳಿರುವ ಈ ಮಠ ಪರಂಪರೆಗಳಿಗೆ ಆರಂಭಿಕ ಹಂತದಲ್ಲಿ ವಿಚಾರವಾದಿಗಳಿಂದ ಹಲವಾರು ವಿರೋಧಗಳು ವ್ಯಕ್ತವಾದವು. ಆದರೆ ಚಿತ್ರದುರ್ಗದ ಶಿವಶರಣರು ಹಾಗೂ ಸಮುದಾಯದ ಇತರೆ ಮುಖಂಡರ ಸಹಕಾರದಿಂದ ಪ್ರತಿಯೊಂದು ಸಮುದಾಯಕ್ಕೂ ಮಠಪರಂಪರೆಯೊಂದು ಜನ್ಮತಾಳಿತು. ಆದರೆ ಜನತೆಯು ತಮ್ಮ ಮೂಲ ಪರಂಪರೆಯನ್ನು ಬಿಟ್ಟುಕೊಡದೆ, ಇಲ್ಲಿನ ಪುರೋಹಿತಶಾಹಿ ನೆಲೆಗಳನ್ನು ವಿರೋಧಿಸುತ್ತಲೇ ಬಂದಿರುವುದು ಕಂಡು ಬರುತ್ತದೆ. ಇಂತಹ ಬಿಕ್ಕಟ್ಟನ್ನು ಬಗೆಹರಿಸುವುದು ಇಂದಿನ ಅಲಕ್ಷಿತ ಮಠಗಳಿಗೆ ಎದುರಿಗಿರುವ ಸವಾಲು ಕೂಡ ಹೌದು. ಪ್ರಸ್ತುತದಲ್ಲಿ ನೋಡುವುದಾದರೆ ಚಿತ್ರದುರ್ಗ ಶಿವಶರಣರಿಂದ ರೂಪುಗೊಂಡ ಶ್ರೀ ಬಂಜಾರ ಸೇವಾಲಾಲ ಗುರು ಪೀಠವು ಲಂಬಾಣಿ ಸಮುದಾಯದ ಗುರುಪೀಠವಾಗಿ ಸ್ಥಾಪನೆಯಾಯಿತು. ಆದರೆ ಈ ಸಮುದಾಯದ ಬಹುತೇಕರು ವೈದಿಕಶಾಹಿಯ ಮಾದರಿಯಲ್ಲಿ ಜನ್ಮ ತಳೆದಿರುವ ಈ ಪೀಠವನ್ನು ತಮ್ಮ ಸಂಸ್ಕೃತಿಯ ಧರ್ಮವೆಂದು ಒಪ್ಪಿಕೊಳ್ಳಲು ಮಾನಸಿಕವಾಗಿ ಸಿದ್ಧರಿರಲಿಲ್ಲ. ಇದಕ್ಕೆ ಬಹುಮುಖ್ಯ ಕಾರಣವೆಂದರೆ ತಮ್ಮ ಸಾಂಸ್ಕೃತಿಕ ನಾಯಕ 'ಸೇವಾಲಾಲ' ಗುರುವಾಗಿದ್ದಾನೆ. ಆತನ ಪರಂಪರೆಯನ್ನು ಮುಂದುವರೆಸುವಂತಹ ಗುರು ಪರಂಪರೆ ಹಾಗೂ ಆತನ ತತ್ವ ಸಿದ್ಧಾಂತಗಳ ಅಡಿಯಲ್ಲಿ ಮುನ್ನೆಡೆಯುತ್ತಿದ್ದಾರೆ. ಸೇವಾಲಾಲನ ಶಿಷ್ಯಂದಿರು ಬಿಳಿ ವಸ್ತ್ರವನ್ನು ಧರಿಸುತ್ತಾರೆ. ಇವರನ್ನು ಮಾತ್ರ ಸಾಂಸ್ಕೃತಿಕ ನಾಯಕರೆಂಬುದಾಗಿ ಸ್ವೀಕರಿಸುತ್ತಾರೆ. ಆದರೆ ವೈದಿಕಶಾಹಿ ಮಾದರಿಯಲ್ಲಿ ಶಿವಮೂರ್ತಿ ಶರಣರಿಂದ ದೀಕ್ಷೆ ಪಡೆದುಕೊಂಡು ಮುನ್ನೆಡೆಯುತ್ತಿರುವ ಶ್ರೀ ಬಸವ ಪ್ರಭು ಸೇವಾಲಾಲ ಸ್ವಾಮಿಯನ್ನು ತಮ್ಮ ಧರ್ಮ ಗುರುವೆಂದು ಇದುವರೆಗೂ ಸ್ವೀಕರಿಸಲು ಸಿದ್ಧವಿಲ್ಲ. ಹೀಗಾಗಿ ಈ ಗುರುಪೀಠವು ಅತ್ಯಂತ ಹಿಂದುಳಿದ ಮಠವಾಗಿದ್ದು, ತನ್ನ ಸಮುದಾಯದ ಜನತೆಯಿಂದಲೇ ತಿರಸ್ಕಾರಕ್ಕೆ ಗುರಿಯಾಗಿರುವುದು ಕಂಡುಬರುತ್ತದೆ.

ಶ್ರೀ ಬಂಜಾರ ಗುರುಪೀಠದಂತೆ ಕರ್ನಾಟಕದಲ್ಲಿ ಬಹುತೇಕ ಮಠಗಳು ಈ ತೆರನಾದ ಸಾಂಸ್ಕೃತಿಕ ವೈರುಧ್ಯಗಳನ್ನು ಎದುರು ಹಾಕಿಕೊಂಡು ಮುನ್ನಡೆಯುತ್ತಿರುವುದು ಕಂಡುಬರುತ್ತದೆ. ಇಂತಹ ಸಾಂಸ್ಕೃತಿಕ ಭಿನ್ನಮತಗಳನ್ನು ಮೀರಿ ಜನತೆಯಲ್ಲಿ ಜಾಗೃತಿ ಮೂಡಿಸಬೇಕಾದ ಹೊಣೆಗಾರಿಕೆಯು ನಮ್ಮ ಮುಂದಿರುವ ಅಲಕ್ಷಿತ ಮಠಗಳ ಬಹುದೊಡ್ಡ ಸವಾಲಾಗಿ ಕಂಡುಬರುತ್ತದೆ.

೫. ಮಠಾಧಿಪತಿಗಳ ಐಷಾರಾಮಿ ಜೀವನ ಕ್ರಮ

ಬಸವಣ್ಣನ ಸಾಮಾಜಿಕ ಸಮಾನತೆಯ ತತ್ವಗಳನ್ನು ಆಶಯವಾಗಿಟ್ಟುಕೊಂಡು ಇಂದು ಸ್ಥಾಪನೆಯಾಗಿರುವ ಪ್ರತಿಯೊಂದು ಮಠಗಳು ಪೀಠಾಧ್ಯಕ್ಷರು ಆರ್ಥಿಕ ಸಂಪನ್ಮೂಲವನ್ನು ತನ್ನ ಸಮುದಾಯದ ಜನತೆಯಿಂದ ಸಂಗ್ರಹಿಸಿಕೊಂಡು ಕಾಯಕ ತತ್ವಕ್ಕೆ ವಿರುದ್ಧವಾಗಿ ಐಷಾರಾಮಿ ಜೀವನಕ್ರಮವನ್ನು ಅಳವಡಿಸಿಕೊಂಡಿದ್ದಾರೆ. ಇದು ಜಂಗಮ ತತ್ವಕ್ಕೆ ಸಂಪೂರ್ಣ ವಿರುದ್ಧವಾಗಿದೆ. ಈ ಕಾರಣದಿಂದ ಸಮಾಜದ ಬಹುತೇಕ ಚಿಂತಕರು ಹಾಗೂ ವಿಚಾರವಾದಿಗಳಿಗೆ ಈ ಮಠಗಳ ಕಾರ್ಯವೈಖರಿಯನ್ನು ಕುರಿತು ವಿರೋಧ ವ್ಯಕ್ತಪಡಿಸುತ್ತಾ ಬಂದಿದ್ದಾರೆ. ಅಷ್ಟೇ ಅಲ್ಲದೇ ಮಠ ಪರಂಪರೆಯು ಮತ್ತೆ ಅಲಕ್ಷಿತ ಸಮುದಾಯಗಳನ್ನು ಆಧುನಿಕ ಯುಗದಲ್ಲಿ ದಾಸ್ಯತ್ವಕ್ಕೆ ತಳ್ಳುತ್ತವೆ ಎಂಬುದಾಗಿ ವೈಚಾರಿಕ ಜಾಗೃತಿ ಮೂಡಿಸುವತ್ತ ಶ್ರಮಿಸುತ್ತಿದ್ದಾರೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಜನ್ಮತಾಳಿರುವಂತಹ ಈ ಅಲಕ್ಷಿತ ಮಠಗಳು ಜನತೆಯಲ್ಲಿ ವಿಶ್ವಾಸವನ್ನು ಗಳಿಸಿಕೊಳ್ಳುವುದು ಅತ್ಯಂತ ಮಹತ್ವದ ಸಂಗತಿಯಾಗಿದೆ. ಅಲಕ್ಷಿತ ಮಠಗಳು ಕೇವಲ ಐಷಾರಾಮಿ ಬದುಕು ಮಾಡುವುದಕ್ಕೆ ವಿರೋಧವಿರುವ ಸಂದರ್ಭದಲ್ಲಿ ಇವರು ಸಮಾಜ ಹಾಗೂ ಸಮುದಾಯದ ಜಾಗೃತಿಯತ್ತ ತಮ್ಮನ್ನು ತೊಡಗಿಸಿಕೊಳ್ಳಬೇಕಾದ ಅಗತ್ಯವಿದೆ. ಹೀಗಾಗಿ ಈ ಹಿಂದಿಗಿಂತ ಜನತೆಯು ಇಂದು ತುಂಬ ಜಾಗೃತರಾಗಿದ್ದಾರೆ. ಈ ವಿದ್ಯಾವಂತ ಹಾಗೂ ವೈಚಾರಿಕ ಚಿಂತಕರ ಆಶಯಗಳನ್ನು ಕೇಂದ್ರವಾಗಿಟ್ಟುಕೊಂಡು ಪ್ರತಿಯೊಂದು ಸಮುದಾಯದ ಮಠಾಧಿಪತಿಗಳು ಮುನ್ನಡೆಯಬೇಕಾದ ಅಗತ್ಯತೆ ಹಿಂದಿಗಿಂತಲೂ ಇಂದು ಮಹತ್ವದ್ದಾಗಿದೆ. ಇಂತಹ ಸಮಸ್ಯೆಗಳು ಕೂಡ ಪ್ರಸ್ತುತದಲ್ಲಿ ಅಲಕ್ಷಿತ ಮಠಗಳಿಗೆ ಪ್ರಬಲವಾಗಿ ಎದುರಾಗುತ್ತಿರುವುದಾಗಿ ಕಂಡುಬರುತ್ತದೆ.

೬. ಮೂಲಭೂತವಾದಿ ನೆಲೆ ಹಾಗೂ ಸಂಘ ಪರಿವಾರಗಳಿಂದ ಬಿಡುಗಡೆಗೊಳ್ಳಬೇಕಾದ ಅಗತ್ಯತೆ

ಭಾರತದಲ್ಲಿ ಅಲಕ್ಷಿತ ಸಮುದಾಯಗಳನ್ನು ಮೂಲಭೂತವಾದಿಗಳು ಶೋಷಣೆ ಮಾಡುತ್ತಲೇ ಬಂದಿದ್ದಾರೆ. ಇಷ್ಟೇ ಅಲ್ಲದೆ ತಳಸಮುದಾಯಗಳಿಂದ ಶಿಕ್ಷಣ ಮತ್ತು ಸಮಾನತೆಯ ಅವಕಾಶಗಳನ್ನು ವಂಚಿಸಿ 'ಕೀಳು' ವೃತ್ತಿಯಲ್ಲಿಯೇ ಮುಂದುವರೆಯುವಂತೆ ಪುರೋಹಿತಶಾಹಿಯು ಈ ವರ್ಗಗಳನ್ನು ಮುನ್ನಡೆಸಿಕೊಂಡು ಬಂದಿದೆ. ಈ ಕಾರಣದಿಂದಲೇ ನಾವು ಇಂದು ಈ ಸಮುದಾಯಗಳನ್ನೇ

ಅಲಕ್ಷಿತ ಸಮುದಾಯಗಳೆಂದು ಗುರುತಿಸಿಕೊಂಡಿದ್ದೇವೆ. ಈ ಅಲಕ್ಷಿತ ಮಠಗಳನ್ನು ಪ್ರತಿನಿಧಿಸುವಂತಹ ಮಠಗಳನ್ನು ಅಲಕ್ಷಿತ ಮಠಗಳೆಂದು ಜನ್ಮ ತಾಳಿರುವ ಈ ಮಠಗಳು ಸಮುದಾಯ ಕೇಂದ್ರಿತ ನೆಲೆಯಲ್ಲಿ ತನ್ನ ಸಮುದಾಯದ ಜೀವನ ಕ್ರಮವನ್ನು ಸಾಮಾಜಿಕವಾಗಿ ಮುನ್ನಡೆಸುವಂತಹ ಎಚ್ಚರ ಹಾಗೂ ಅರಿವನ್ನು ಪಡೆದುಕೊಳ್ಳಬೇಕಾಗುತ್ತದೆ. ಆಗ ಈ ಮಠಗಳಿಗೆ ಅರ್ಥ ಬರುತ್ತದೆ. ಇದರ ಉದ್ದೇಶವು ಸಾರ್ಥಕವಾಗುತ್ತದೆ. ಬಲಪಂಥೀಯ ಪರವಾದ ಮೂಲಭೂತವಾದಿ ನೆಲೆಯಲ್ಲಿ ಸಂಘ ಪರಿವಾರದಂತೆ ಮೂಲ ವ್ಯವಸ್ಥೆಯನ್ನು ಕಾಪಾಡುವಂತಿದ್ದರೆ ಈ ಅಲಕ್ಷಿತ ಸಮುದಾಯಗಳಿಗೆ ಈ ಮಠಗಳ ಅಗತ್ಯವಿಲ್ಲ ಎಂಬುದೇ ಎಡಪಂಥೀಯ ವಿಚಾರವಾದಿಗಳ ನಿಲುವಾಗಿದೆ. ಈ ಕಾರಣದಿಂದಾಗಿ ಪ್ರಸ್ತುತದಲ್ಲಿ ಕಂಡುಬರುವಂತಹ ಹಾಗೂ ಈಗ ತಾನೇ ದಾಪುಗಾಲು ಇಡುತ್ತಿರುವಂತಹ ಈ ಮಠಗಳು ಈ ಎಚ್ಚರವನ್ನು ಸೂಕ್ಷ್ಮವಾಗಿ ತಿಳಿದು ಮುನ್ನಡೆದರೆ ಮಾತ್ರ ಆಯಾ ಸಮುದಾಯಗಳು ಪ್ರಗತಿಯನ್ನು ಕಂಡುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದೇ ಹೋದರೆ ಆಯಾ ಸಮುದಾಯದ ಜನರು ನೀಡಿರುವ ಕಾಣಿಕೆಯನ್ನು ಹಾಗೂ ದಾನವನ್ನು ಪಡೆದುಕೊಂಡು ಆ ಸಮುದಾಯವನ್ನೇ ಶೋಷಣೆಗೆ ಗುರುಪಡಿಸಿದಂತಾಗುತ್ತದೆ. ಈ ಸೂಕ್ಷ್ಮತೆಯ ಎಚ್ಚರ ಹಾಗೂ ಅರಿವು ಇಂದಿನ ಅಲಕ್ಷಿತ ಸಮುದಾಯದ ಮಠಪತಿಗಳಿಗೆ ಇರಲೇಬೇಕಾಗಿದೆ. ಇಲ್ಲದೇ ಹೋದರೆ ತಮ್ಮನ್ನು ತಂದು ಕೂರಿಸಿದ ಗುರುಗಳ ಆಶಯದಂತೆ ಮುನ್ನಡೆದರೆ ಇದು ಮುಂದೊಂದು ದಿನ ಪ್ರಬಲವಾಗಿ ಬೆಳೆದು ಮತ್ತೆ ಸಮುದಾಯ ಕಲಾಪವನ್ನು ಪ್ರಬಲವಾಗಿ ಬೆಳೆಸಿದಂತಾಗುತ್ತದೆ.

ಪ್ರಸ್ತುತದಲ್ಲಿ ಅಲಕ್ಷಿತ ಮಠಗಳಿಗೆ ಬುನಾದಿಯನ್ನು ಹಾಕಿ ಬೆಳೆಸುತ್ತಿರುವ ಮುರುಘಶರಣರ ಮೂಲ ಆಶಯಗಳನ್ನು ಅಧೀನ ಮಠಗಳ ಪೀಠಾಧ್ಯಕ್ಷರು ಅರಿತುಕೊಂಡು ಮುನ್ನಡೆದರೆ ಮಾತ್ರ ತಮ್ಮ ಸ್ವಂತತೆಯನ್ನು ಕಾಪಾಡಿಕೊಳ್ಳಲು ಸಹಕಾರಿಯಾಗುತ್ತದೆ. ಗುರುಗಳು ಹೇಳಿದ್ದೆ ಅಂತಿಮವೆಂದು ಸಮುದಾಯದ ಜನತೆಯ ಆಶಯ ಮತ್ತು ಬೇಡಿಕೆಯನ್ನು ಬಿಟ್ಟು ಮುನ್ನಡೆದರೆ ಇದು ಮತ್ತೊಂದು ರೀತಿಯ ಅಪಾಯವನ್ನು ತಂದೊಡ್ಡುವ ಸಾಧ್ಯತೆ ಇದೆ. ಈ ಕಾರಣದಿಂದ ಪ್ರತಿಯೊಂದು ಅಲಕ್ಷಿತ ಮಠಗಳು ಕೂಡ ಈ ಜಾಗೃತಿಯನ್ನು ಸಂಪೂರ್ಣವಾಗಿ ಅರಿತುಕೊಳ್ಳಬೇಕಾದ ಅಗತ್ಯತೆ ಇದೆ.

ಅಲಕ್ಷಿತ ಮಠಗಳನ್ನು ಸಂಶೋಧನೆಗೆ ಒಳಪಡಿಸಿ ಬಹುತೇಕ ಮಠಾಧೀಶರನ್ನು ಸಂದರ್ಶನ ಮಾಡಿದ ಸಂದರ್ಭದಲ್ಲಿ ಸೂಕ್ಷ್ಮವಾಗಿ ಗಮನಿಸಿದ ಒಂದು ಅಂಶವೆಂದರೆ, ಈ ಎಲ್ಲ ಪೀಠಾಧ್ಯಕ್ಷರು ಕೂಡ ತಮ್ಮ ಸಮುದಾಯದ ಜನತೆಯ ಜೀವನ ಕ್ರಮವನ್ನು ನಿರ್ಲಕ್ಷ್ಯಕ್ಕೆ ಗುರಿ ಮಾಡಿರುವಂತೆ ಕಂಡುಬಂದಿದೆ. ಪ್ರಸ್ತುತದಲ್ಲಿ ವೈದಿಕತೆಯು ತನ್ನ ಅಸ್ತಿತ್ವವನ್ನು ಕಾಯ್ದುಕೊಳ್ಳುವುದಕ್ಕೆ ಹಾಗೂ ಧಾರ್ಮಿಕ ರಾಜಕಾರಣಕ್ಕಾಗಿ 'ಗೋಹತ್ಯೆ' ನಿಷೇಧ ಕಾಯ್ದೆಯ ಕುರಿತಾಗಿ ಕಾನೂನು ರೂಪಿಸಲು

ಹವಣಿಸುತ್ತದೆ. ಆದರೆ ಗೋವು ಬಹುತೇಕ ಅಲಕ್ಷಿತ ವರ್ಗದ ಜನತೆಯ ಆಹಾರವಾಗಿದೆ. ಈ ಆಹಾರ ಪದ್ಧತಿಯು ಅನಾದಿಕಾಲದಿಂದಲೂ ಅಸ್ತಿತ್ವದಲ್ಲಿದೆ. ಆದರೆ ಯಾವೊಬ್ಬ ಪೀಠಾಧಿಪತಿಯೂ 'ಗೋಹತ್ಯೆ' ಎಂಬ ಬ್ರಾಹ್ಮಣ ನಿಲುವಿನ ವಿರುದ್ಧವಾಗಿ ಮಾತಾಡದೇ ಗೋಹತ್ಯೆ ನಿಷೇಧ ಕಾನೂನು ಸೂಕ್ತವಾಗಿದೆ. ನಾವು ಅದನ್ನು ಸ್ವಾಗತಿಸುತ್ತೇವೆ ಎಂಬುದಾಗಿ ಹೇಳಿಕೆ ನೀಡಿದ್ದಾರೆ. ಈ ಸೂಕ್ಷ್ಮ ಅಂಶವನ್ನು ಗಮನಿಸಿದರೆ ಈ ಅಲಕ್ಷಿತ ಸಮುದಾಯವನ್ನು ಪ್ರತಿನಿಧಿಸುವ ಮಠಾಧಿಪತಿಗಳಲ್ಲಿ ಮನೆ ಮಾಡಿಕೊಂಡಿರುವ ಬಲಪಂಥಿಯ ಧೋರಣೆ ಹಾಗೂ ಪುರೋಹಿತಶಾಹಿಯ ಅಂಶಗಳು ಸ್ಪಷ್ಟವಾಗುತ್ತವೆ. ಹೀಗಾಗಿ ಅಲಕ್ಷಿತ ಸಮುದಾಯವನ್ನು ಪ್ರತಿನಿಧಿಸುವ ಮಠಾಧೀಶರು ಈ ಸೂಕ್ಷ್ಮ ಸವಾಲುಗಳನ್ನು ಬಲಪಂಥೀಯರ ವಿರುದ್ಧ ಹೋರಾಟ ಮಾಡಬೇಕೇ ಹೊರತು, ಪುರೋಹಿತಶಾಹಿಯ ಪರವಾಗಿ ತುಡಿಯುವುದರಿಂದ ತನ್ನ ಜನತೆಗೆ ದ್ರೋಹ ಬಗೆದಂತಾಗುತ್ತದೆ. ಇದನ್ನು ಪ್ರಸ್ತುತದಲ್ಲಿ ಜಾಗೃತತೆಯಿಂದ ಮುನ್ನಡೆಸಬೇಕಾದ ಅಗತ್ಯತೆ ಇದೆ.

ಪ್ರಸ್ತುತದಲ್ಲಿ ಅಲಕ್ಷಿತ ಸಮುದಾಯವನ್ನು ಸಮಾಜದ ಮುಖ್ಯವಾಹಿನಿಗೆ ತರಬೇಕಾದ ಅಲಕ್ಷಿತ ಮಠಗಳು ಆಯಾ ಸಮುದಾಯದ ಜೀವನಕ್ರಮವನ್ನು ಸುಧಾರಿಸುವುದರ ಜೊತೆಗೆ, ತನ್ನ ಸಮುದಾಯದ ಜನತೆಯ ಮೇಲೆ ಉಳ್ಳವರಿಂದ ನಡೆಯುವಂತಹ ಶೋಷಣೆಯ ವಿರುದ್ಧ ಹೋರಾಟ ಮಾಡಬೇಕಾಗಿದೆಯೇ ಹೊರತು, ಬಲಪಂಥೀಯರ ಪರವಾದ ತುಡಿತವನ್ನು ಹೊಂದಿದ್ದಾರೆ. ಇದರಿಂದ ಆಯಾ ಸಮುದಾಯದ ಜನತೆಗೆ ಯಾವುದೇ ಪ್ರಯೋಜನವಿಲ್ಲ. ಹೀಗಾಗಿ ಜಾಗತೀಕರಣದ ಈ ಸಂದರ್ಭದಲ್ಲಿ ಈ ಮಠಗಳು ಜನತೆಯ ಹಿತಕಾಯುವಂತಹ ನೆಲೆಯಲ್ಲಿ ತಮ್ಮ ಹೋರಾಟವನ್ನು ಕೈಗೊಳ್ಳಬೇಕಾದ ಸವಾಲುಗಳು ತಮ್ಮ ಮುಂದಿವೆ.

ಮುಂದೇನು

ಪ್ರಸ್ತುತ ಸಂದರ್ಭದಲ್ಲಿ ಅಲಕ್ಷಿತ ಮಠಗಳನ್ನು ರಾಜಕಾರಣ ಮತ್ತು ರಾಜಕೀಯ ನೇತಾರರುಗಳು ಯಾವ ರೀತಿ ಬಳಸಿಕೊಳ್ಳುತ್ತಿದ್ದಾರೆ ಹಾಗೂ ಇಂದಿನ ದಿನಮಾನಗಳಲ್ಲಿ ಅಲಕ್ಷಿತ ಮಠಗಳು ತಮ್ಮ ತಮ್ಮ ಸಮುದಾಯಗಳನ್ನು ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಯಾವ ರೀತಿಯಾಗಿ ಮೇಲ್‌ಪಂಕ್ತಿಗೆ ಮತ್ತು ಮುಂದುವರೆದ ಸಮುದಾಯಗಳ ಮುಂದೆ ಮುಖಾಮುಖಿಯಾಗಬೇಕೆಂಬುದು ಬಹುದೊಡ್ಡ ಪ್ರಶ್ನೆಯಾಗಿದೆ ಎಂದೇ ಹೇಳಬಹುದು.

ಇಂದಿನ ದಿನಗಳಲ್ಲಿ ಮೇಲು ಸಮುದಾಯಗಳೆಂದು ಕರೆಸಿಕೊಳ್ಳುವ ಬ್ರಾಹ್ಮಣ, ಲಿಂಗಾಯತ, ವೀರಶೈವ, ಒಕ್ಕಲಿಗ ಮುಂತಾದ ಮಠಗಳ ಹಾಗೂ ಮಠಗಳ ಸ್ವಾಮೀಜಿಗಳಿಗೆ ಕೊಡುವ ಪ್ರಾಮುಖ್ಯತೆ ಗಮನಿಸಿದಾಗ ಈ ಅಲಕ್ಷಿತ ಸಮುದಾಯದ ಮಠಗಳ ಸ್ವಾಮೀಜಿಗಳಿಗೆ ಇರುವ ಪ್ರಾಮುಖ್ಯತೆ ಎಂಥದ್ದು?, ಅವರ ಶಕ್ತಿ ಎಂಥದ್ದು ಎಂಬುದನ್ನು ಕೂಡ ಚರ್ಚಿಸಬೇಕಾಗುತ್ತದೆ.

ಮಠಗಳನ್ನು ಕಟ್ಟುವುದರ ಜೊತೆಗೆ, ಮಠದ ಪೀಠಾಧಿಪತಿಗಳು ಮಾಡಬೇಕಾದ ಬಹುಮುಖ್ಯ ಕಾರ್ಯ ಎಂಥದ್ದು?, ಆಯಾ ಅಲಕ್ಷಿತ ಸಮುದಾಯಗಳಿಗೆ ಮಾಡಬೇಕಾದ ಕಾರ್ಯ ಎಂಥದ್ದು?, ಅಲಕ್ಷಿತ ಸಮುದಾಯದವರ ಶ್ರೇಯೋಭಿವೃದ್ಧಿಗೆ ಬಹುಮುಖ್ಯ ಕರ್ತವ್ಯ ಯಾವುವು? ಎಂಬುದನ್ನು ನೋಡಬೇಕಾಗುತ್ತದೆ.

ಅಲಕ್ಷಿತ ಸಮುದಾಯದ ಮಠಗಳಿಗೆ ಬಹು ಮುಖ್ಯವಾಗಿ ಕಾಡುವ ಸಮಸ್ಯೆ ಎಂದರೆ ಅವುಗಳಿಗೆ ದಾನಿಗಳಿಲ್ಲ. ಸಮುದಾಯಗಳ ಬೆಂಬಲಗಳಿಲ್ಲ. ಬಹುಮುಖ್ಯವಾಗಿ ಒಂದು ನಿರ್ಧಿಷ್ಟವಾದ ಸಾಂಸ್ಕೃತಿಕ ಆಚರಣೆಗಳು, ವಿಧಿವಿಧಾನಗಳು ಈ ಅಲಕ್ಷಿತ ಸಮುದಾಯಗಳ ಮಠಗಳಿಗೆ ಇಲ್ಲ. ಯಾಕೆಂದರೆ ಮೇಲುವರ್ಗದ ಮಠಗಳಾದ ಲಿಂಗಾಯತ, ವೀರಶೈವ, ಬ್ರಾಹ್ಮಣ ಮಠಗಳಿಗೆ ಇರುವ ಹಾಗೆ ಲಿಂಗಪೂಜೆ, ದೀಕ್ಷೆ, ಆಚರಣಾ ವಿಧಾನಗಳು ಈ ಮಠಗಳಿಗೆ ಇಲ್ಲ. ತನ್ನದೇ ಆದ ಈ ತರಹದ ಸಾಂಸ್ಕೃತಿಕ ಚಹರೆಗಳು ಕಾಣಸಿಗುವುದಿಲ್ಲ.

ಹೀಗಾಗಿ ಈ ಅಲಕ್ಷಿತ ಮಠಾಧಿಪತಿಗಳು ತಮ್ಮ ಸಮುದಾಯದ ಜನರಿಗೆ ಯಾವ ತೆರನಾದ ಆಚರಣೆ ವಿಧಾನಗಳನ್ನು ದೀಕ್ಷೆಗಳನ್ನು ನೀಡಬೇಕು ಎಂಬುದು ಪ್ರಶ್ನೆಯಾಗಿದೆ. ಈ ಅಲಕ್ಷಿತ ಸಮುದಾಯದ ಮಠಗಳು ತಮ್ಮದೇ ಆದ ನಂಬಿಕೆ, ಆಚರಣೆ, ದೀಕ್ಷೆ ಮುಂತಾದವುಗಳನ್ನು ಸ್ವತಂತ್ರವಾಗಿ ರಚಿಸದೇ ಇರಲು ಶೈಕ್ಷಣಿಕ ಹಿನ್ನೆಲೆಯ ಕೊರತೆ ಕಂಡುಬರುತ್ತದೆ. ಲಿಂಗಾಯತ, ವೀರಶೈವ, ಬ್ರಾಹ್ಮಣ ಮಠಗಳು ಈ ಅಲಕ್ಷಿತ ಸಮುದಾಯದ ಮಠಗಳ ಬಗ್ಗೆ ಇರುವ ಧೋರಣೆ ತಿರಸ್ಕಾರ. ನಮಗಿಂತ ಕೆಳಗೆ ಎಂಬ ವಿಚಾರಗಳಿಂದ ನಿರ್ಲಕ್ಷಕ್ಕೆ ಒಳಗಾಗಿರುವುದು ಕಂಡು ಬರುತ್ತದೆ. ಈ ಅಲಕ್ಷಿತ ಸಮುದಾಯದ ಮಠಗಳು ತಮ್ಮ ಸಮುದಾಯದವರಿಗೆ ಶೈಕ್ಷಣಿಕವಾಗಿ ಏನಾದರು ಸಂಸ್ಥೆಗಳನ್ನು ಸ್ಥಾಪಿಸಿದ್ದಾರೆಯೇ ಎಂದು ನೋಡಿದಾಗ ಹೇಳಿಕೊಳ್ಳುವಂತಹ ಸಾಧನೆ ಸಾಧಿಸಿಲ್ಲ ಅಂತಾನೇ ಹೇಳಬಹುದು.

ಅಲಕ್ಷಿತ ಸಮುದಾಯಗಳು ಸಾಂಸ್ಕೃತಿಕವಾಗಿ ಏನನ್ನು ಹೇಳಬೇಕಾಗಿದೆ, ಈ ಸಮಾಜಕ್ಕೆ ಮತ್ತು ತಮ್ಮ ಸಮುದಾಯಗಳಿಗೆ ಕೂಡ ಮುಖ್ಯವಾಗುತ್ತದೆ. ಈ ಸಮುದಾಯಗಳಲ್ಲಿ ಇರುವ ಒಳ ಗುಂಪುಗಳು, ಒಳ ಪಂಗಡಗಳು ಇವರ ಒಳ ಜಗಳಗಳು, ಸಂಘರ್ಷಗಳು ಇವರನ್ನು ಒಂದೆಡೆಗೆ ತೆಗೆದುಕೊಂಡು ಹೋಗುವ ಅನಿವಾರ್ಯತೆ ಇದೆ. ಈ ಮಠಗಳಿಗೆ ಇರುವ ಅವಶ್ಯಕತೆ ಎಂಥದ್ದು? ಈ ಸಮಸ್ಯೆ ಮೇಲುವರ್ಗದ ಮಠಗಳಾದ ಲಿಂಗಾಯತ, ವೀರಶೈವ, ಬ್ರಾಹ್ಮಣ, ಒಕ್ಕಲಿಗ ಮಠಗಳಿಗೆ ಇದೆಯಾ ಅಂತ ನೋಡಿದಾಗ ಸಮಸ್ಯೆ ಇದೆ. ಆದರೆ ಸಾಂದರ್ಭಿಕವಾಗಿ ಒಳ ಪಂಗಡಗಳು, ಒಳಗುಂಪುಗಳು ಬೇರೆ ಬೇರೆ ಎನಿಸಿದರು ಸಮುದಾಯಕ್ಕೆ,

ಮಠಕ್ಕೆ ಆಪತ್ತು ಬಂದಾಗ ಎಲ್ಲಾ ಒಳ ಗುಂಪುಗಳು ತಾವೆಲ್ಲ ಒಂದು, ತಮ್ಮ ನಿಷ್ಠೆ ತಮ್ಮ ಸಮುದಾಯದ ಮಠಕ್ಕೆ ಎಂದು ತೋರಿಸಿಕೊಳ್ಳುತ್ತವೆ. ಆದರೆ ಈ ಅಲಕ್ಷಿತ ಸಮುದಾಯದ ಮಠಗಳಲ್ಲಿ ಈ ತೆರೆನಾದ ಒಗ್ಗಟ್ಟು ಕಾಣುವುದಿಲ್ಲ. ಅದು ಗೊಲ್ಲ, ಬೇಡ, ಉಪ್ಪಾರ, ಲಂಬಾಣಿ, ಮಾದಿಗ, ಹೊಲೆಯ ಇನ್ನಿತರ ಸಮುದಾಯಗಳು ಅವರವರಲ್ಲೇ ಮೇಲು ಕೀಳು ಎಂಬ ಮನೋಭಾವಕ್ಕೆ ಒಳಪಡಿಸಿಕೊಂಡಿರುವುದು ಕಂಡುಬರುತ್ತದೆ. ಈ ಸಮುದಾಯಗಳಲ್ಲಿನ ಒಳಪಂಗಡಗಳು ಎಂದೂ ತಾವು ಒಂದೇ ಎಂದು ತೋರಿಸಿಕೊಳ್ಳುವುದಿಲ್ಲ. ಇಂತಹ ಸಂದರ್ಭದಲ್ಲಿ ಈ ಅಲಕ್ಷಿತ ಸಮುದಾಯಗಳು ಈ ಮಠಗಳ ಮೂಲಕ ಒಗ್ಗೂಡುವುದು ಹೇಗೆ?. ಇವರುಗಳು ಸಮಾಜದ ಮುಖ್ಯವಾಹಿನಿಗೆ ಸೇರಿಕೊಳ್ಳುವುದು ಹೇಗೆ? ಎಂಬ ಪ್ರಶ್ನೆಗಳು ಕಂಡುಬರುತ್ತವೆ. ಸಾಧ್ಯಾಸಾಧ್ಯತೆಗಳು ಏನು? ಇವರ ಮುಖ್ಯ ಅಜೆಂಡ ಏನು? ಮೇಲು ಸಮುದಾಯದ ಮಠಗಳಿಗೆ ನಡೆದುಕೊಳ್ಳುತ್ತಿರುವ ಈ ಅಲಕ್ಷಿತ ಸಮುದಾಯಗಳನ್ನು ಈ ಮಠಗಳ ಕಡೆಗೆ ಕರೆದುತರುವ ಪ್ರಯತ್ನಗಳೇನು?.

ಸಮಾಜದಲ್ಲಿ ಇರುವ ಸಾಮಾನ್ಯ ಮಠಗಳಂತೆ ಈ ಮಠಗಳು ತಮ್ಮದೇ ಆದ ಅಸ್ತಿತ್ವ ಉಳಿಸಿಕೊಳ್ಳುವುದು ಹೇಗೆ? ತಮ್ಮ ಸಂಸ್ಕೃತಿಯ ಚಹರೆ ಪಡೆಯುವುದು ಹೇಗೆ? ಈ ಅಲಕ್ಷಿತ ಸಮುದಾಯಗಳು ಸಂಸ್ಕೃತಿಕರಣ, ಬ್ರಾಹ್ಮಣೀಕರಣಗೊಳ್ಳುವುದನ್ನು ತಡೆಯುವ ಪ್ರಯತ್ನಗಳೇನು?. ಈ ಅಲಕ್ಷಿತ ಮಠಗಳಿಗೆ ತಮ್ಮದೇ ಆದ ಮೈನಸ್‌ಗಳು ಇವೆಯೇ. ಕೆಲವರಿಗೆ ಉಪಯೋಗವಾಗುವಂತಹ ಕೆಲಸಗಳನ್ನು ಮಾಡುತ್ತವೆ. ಸಂಘಟಿತ ಮೇಲುವರ್ಗದ ಸಮುದಾಯದ ಮಠಗಳು ತಮ್ಮವರಿಗೆ ಏನು ಬೇಕು ಎಂಬುದನ್ನು ಕಾಲಕಾಲಕ್ಕೆ ಮಾಡುತ್ತಾ ಬಂದಿವೆ. ಇದಕ್ಕೆ ಪರ್ಯಾಯವಾಗಿ ನೋಡಿದಾಗ ದಲಿತ ಸಂಘರ್ಷ ಸಮಿತಿ ಅವರ ಹೋರಾಟ ನೋಡಿದ ಮೇಲೆ ಇತರೆ ಸಮುದಾಯಗಳು ನಾವು ಕೂಡ ಸಂಘ ಮಾಡಬೇಕು ಅಂದಕೊಂಡರು. ಇದು ಒಂದು ಪ್ರೇರಣೆ. ಎರಡನೇ ಪ್ರೇರಣೆ ಲಿಂಗಾಯತ, ವೀರಶೈವ, ಬ್ರಾಹ್ಮಣ, ಪಂಚಾಚಾರ್ಯ ಮುಂತಾದ ಮೇಲ್‌ವರ್ಗದ ಮಠಗಳು ಅದರ ಒಳ ಪಂಗಡದ ಮಠಗಳನ್ನು ನೋಡಿದ. ಪ್ರಗತಿಪರ ಲಿಂಗಾಯತ ಮಠದ ಸ್ವಾಮೀಜಿಗಳು ಅಲಕ್ಷಿತ ಸಮುದಾಯಗಳು ಕೂಡ ಮಠಗಳನ್ನು ಸ್ವಾಮೀಜಿಗಳನ್ನು ಹೊಂದಲಿ ಎಂಬ ಆಶಯವು ಕೂಡ ಮತ್ತೊಂದು ಪ್ರೇರಣೆಯಾಗಿದೆ. ಅದರಲ್ಲಿ ಮುಖ್ಯವಾಗಿ ಮುರುಘರಾಜೇಂದ್ರಸ್ವಾಮಿ, ಒಕ್ಕಲಿಗ ಮಠದ ಬಾಲಗಂಗಾಧರ ಸ್ವಾಮೀಜಿ ಅಲಕ್ಷಿತ ಸಮುದಾಯಗಳಿಗೆ ಸ್ವಾಮೀಜಿಗಳನ್ನು ನೇಮಿಸಿದರು.

ಅಲಕ್ಷಿತ ಸಮುದಾಯದ ಸ್ವಾಮೀಜಿಗಳೂ ಮೇಲುವರ್ಗದ ಮಠಗಳ ವೈದಾನಿಕ, ವಿಧಿವಿಧಾನ ಗಮನಿಸಿ ಅಳವಡಿಸಿಕೊಂಡಿದ್ದಾರೆ. ಆದರೆ ಇವರು ಅಳವಡಿಸಿಕೊಳ್ಳಬೇಕಾದದ್ದು ತಮ್ಮದೇ ಆದ

ಸಾಂಸ್ಕೃತಿಕ ಚಹರೆಯನ್ನು, ವೈಚಾರಿಕ ಹಿನ್ನೆಲೆಯನ್ನು. ಈ ಅಲಕ್ಷಿತ ಸಮುದಾಯಗಳಿಗೆ ಮಠಗಳ ಅವಶ್ಯಕತೆಯನ್ನು ಮನಗಂಡ ಪ್ರಗತಿಪರ ಮಠಾಧೀಶರುಗಳು, ಪ್ರಗತಿಪರ ಚಿಂತಕರು ಈ ಸಮುದಾಯಗಳಲ್ಲಿ ಮಠ ಸ್ಥಾಪಿಸಿರುವುದರಿಂದ ಆಯಾ ವರ್ಗ ಸಮುದಾಯದ ಜನರನ್ನು ಸಂಘಟಿಸಲು, ಧನವನ್ನು ಕ್ರೋಢೀಕರಿಸಲು, ಶಿಕ್ಷಣ, ವ್ಯವಹಾರ ಸ್ಥಾಪನೆಗೆ ಬಳಸಬಹುದು. ಅಲ್ಲದೆ ಸಮುದಾಯ ಸಮುದಾಯಗಳ ಮಧ್ಯ, ಒಳ ಪಂಗಡಗಳ ಮಧ್ಯ ಸಮನ್ವಯ ಸಾಧಿಸಲು, ಅವರ ನಡುವಿನ ವ್ಯವಹಾರಿಕತೆಯನ್ನು ಬೆಳಸಲು ಈ ಮಠಗಳು ಸಹಾಯಕವಾಗುತ್ತವೆ. ಅಲ್ಲದೆ ಸಂಪನ್ಮೂಲ ಕ್ರೋಢೀಕರಿಸಲು ಜನರ ಜೀವನ ಮಟ್ಟವನ್ನು ಸುಧಾರಿಸಲು ಸಹಾಯವಾಗುತ್ತದೆ.

ಅಲಕ್ಷಿತ ಸಮುದಾಯದ ಮಠಗಳ ಸ್ಥಾಪನೆಯ ಉದ್ದೇಶ ಮೇಲುವರ್ಗದ ಮಠಗಳ ಅಂಧಾನುಕರಣೆಯನ್ನು ಮಾಡುವುದಕ್ಕಲ್ಲ. ತಮ್ಮದೇ ಆದ ಸಮುದಾಯದ ಜೀವನ ಮಟ್ಟವನ್ನು ಸುಧಾರಿಸಲು, ಯುವ ಜನಾಂಗವನ್ನು ಸರಿದಾರಿಗೆ ನಡೆಸಲು, ತಮ್ಮ ಸಮುದಾಯದ ಚಾರಿತ್ರಿಕತೆಯ ಬಗ್ಗೆ ಜಾಗೃತಿ ಮೂಡಿಸಲು ಈ ವರ್ಗಗಳ ಅಸ್ಮಿತೆಯನ್ನು ಹುಟ್ಟುಹಾಕುವುದಕ್ಕಾಗಿ ನಮ್ಮ ಸಾಂಸ್ಕೃತಿಕ ಪರಿಕರಗಳಿಗೆ ಸಮಾಜದಲ್ಲಿ ಮಾನ್ಯತೆ ತಂದುಕೊಡುವ ಉದ್ದೇಶ.

ರಾಜಕೀಯ ನೇತಾರರು ಮಠಕ್ಕೆ ಬಂದ ಸಂದರ್ಭದಲ್ಲಿ ಯಾವುದೇ ಪಕ್ಷದ ನೇತಾರ, ಮಂತ್ರಿ, ಸಚಿವರಾಗಿದ್ದಲ್ಲಿ ಮಠಕ್ಕೆ ಬಂದಾಗ ಅವರೊಬ್ಬ ಸಮುದಾಯದ ಪ್ರತಿನಿಧಿ, ಅವರುಗಳಿಂದ ಈ ಅಲಕ್ಷಿತರಿಗೆ ಸರ್ಕಾರದಿಂದ ಸಿಗುವ ಸವಲತ್ತುಗಳು, ಸೌಲಭ್ಯಗಳನ್ನು ಪ್ರಯೋಜನಗಳನ್ನು ಪ್ರಾಮಾಣಿಕವಾಗಿ ದೊರೆಯುವಂತೆ ಮಾಡುವ ಒಂದು ಮಾಧ್ಯಮವಾಗಿ ಬಳಸಿಕೊಳ್ಳುವುದು.

ಇಲ್ಲಿ ಸ್ವಾಮೀಜಿಯು ನಿರ್ಲಿಪ್ತವಾಗಿ ಮತ್ತು ಅಲಿಪ್ತವಾಗಿ ತನ್ನ ಸಮುದಾಯದವರಿಗೆ ಸಿಗುವಂತಹ ಪ್ರಾತಿನಿಧ್ಯವನ್ನು ದೊರಕಿಸಿಕೊಡುವ ಕೆಲಸ ಮಾಡಬೇಕು. ಸಮುದಾಯದ ಪ್ರತಿನಿಧಿಯಾಗಿ ಕೆಲಸ ಮಾಡಬೇಕು. ಮುಖ್ಯವಾಗಿ ಕೆಳಸ್ತರದ ಸಮುದಾಯಗಳಲ್ಲಿ ಕಂಡುಬರುವ ಕೊರತೆ ಎಂದರೆ;

೧. ಸಾಮಾಜಿಕ ಶಿಕ್ಷಣ

೨. ಸಾಂಸ್ಕೃತಿಕ ಸ್ವಾಭಿಮಾನ ಇಲ್ಲದಿರುವುದು ಬಹು ದೊಡ್ಡ ಕೊರತೆಯಾಗಿದೆ.

೧. **ಸಾಮಾಜಿಕ ಶಿಕ್ಷಣ:** ವೈಯಕ್ತಿಕ ಹಿತಾಸಕ್ತಿಗಳಿಗೆ ಸಮುದಾಯ ಹಿತಾಸಕ್ತಿ ಬಲಿ ನೀಡಕೂಡದು. ಬೇರೆ ಸಂದರ್ಭದಲ್ಲಿ ಅಂದರೆ ಕುಲದ ಪ್ರಶ್ನೆ ಬಂದಾಗ, ಪ್ರಾತಿನಿಧ್ಯ ಪ್ರಶ್ನೆ ಬಂದಾಗ, ತಮ್ಮ ತಮ್ಮಗಳಲ್ಲಿ ಇರುವ ಒಳ ಜಗಳಗಳನ್ನು ಮರೆತು ಒಂದಾಗಿ ಶ್ರಮಿಸಬೇಕು. ಇಲ್ಲದಿದ್ದರೆ ಈ ರಾಜಕೀಯ ಪಕ್ಷಗಳು ಒಡೆದು ಆಳುವ ಕೆಲಸ ಮಾಡುತ್ತವೆ.

ಮೇಲ್ ಸಮುದಾಯಗಳು ಯೋಚಿಸುವುದು ಈ ಅಲಕ್ಷಿತ ಸಮುದಾಯದಿಂದ ಬಂದ ರಾಜಕಾರಣಿಯು ಯಾವುದೇ ಕಾರಣಕ್ಕೂ ಭದ್ರ ನಾಯಕನಾಗಿ ಬೆಳೆಯಕೂಡದು. ಸ್ವತಂತ್ರವಾಗಿ ಅಸ್ತಿತ್ವ ಪಡೆಯುವಂತಹ ಈ ಕುಲದ ನಾಯಕರು ತಮ್ಮ ಮಾತುಗಳನ್ನು ಕೇಳುವುದಿಲ್ಲ ಎಂಬ ಉದ್ದೇಶದಿಂದ ಒಡೆದು ಆಳುವ ನೀತಿಯನ್ನು ಪಾಲಿಸುತ್ತವೆ. ಇಂತಹ ಕುತಂತ್ರಗಳಿಗೆ ಈ ಅಲಕ್ಷಿತ ಸಮುದಾಯಗಳು ಬಲಿಯಾಗಬಾರದು ಎಂಬುದು ಉದ್ದೇಶವಾಗಿದೆ.

ಅಲಕ್ಷಿತ ಸಮುದಾಯದ ಮಠಾಧಿಪತಿಗಳು ಮಾಡಬೇಕಾದ ಕೆಲಸ ಎಂದರೆ,

೧. ತಮ್ಮನ್ನು ಯಾವುದೇ ಕಾರಣಕ್ಕೂ ಮಾರಿಕೊಳ್ಳಬಾರದು.

೨. ಈ ಮಠದ ಸ್ವಾಮೀಜಿಗಳು ಮೇಲು ಸಮುದಾಯದ ಸ್ವಾಮಿಗಳನ್ನು ಅನುಕರಿಸಬಾರದು

ಅವರು ವೇದ ಪಾಠಶಾಲೆ ಪ್ರಾರಂಭಿಸಿದ ಹಾಗೆ ಅವರು ಮಾಡುವ ಮಡಿ, ಮೈಲಿಗೆ ಮಾಡದ ಹಾಗೆ ಬೇರೆ ಬೇರೆ ಪಕ್ಷದಲ್ಲಿ ಇರುವ ಒಂದೇ ಅಲಕ್ಷಿತ ಸಮುದಾಯದ ರಾಜಕೀಯ ನಾಯಕರುಗಳನ್ನು ಕುಲದ ಹಿತಾಸಕ್ತಿ ವಿಷಯ ಬಂದಾಗ ಈ ಮಠಗಳು ಒಗ್ಗಟ್ಟು ಪ್ರದರ್ಶಿಸುವ ಕುಲದ ಹಿತಾಸಕ್ತಿ ಕಾಪಾಡುವ ಕೆಲಸ ಮಾಡಬೇಕು.

ಇದಲ್ಲದೆ ಅಲಕ್ಷಿತ ಸಮುದಾಯದ ಮಠಾಧಿಪತಿಗಳ ಕೆಲಸ ಏನೆಂದರೆ ಪ್ರತಿ ಹಳ್ಳಿಗಳಿಗೂ, ಈ ಅಲಕ್ಷಿತರು ನೆಲೆಸಿರುವ ಊರುಗಳಿಗೂ ಪಾದಯಾತ್ರೆ ಮೂಲಕ ಆ ಸಮುದಾಯಗಳನ್ನು ತಲುಪುವ, ಅವರಲ್ಲಿ ಶಿಕ್ಷಣದ ಬಗ್ಗೆ, ಆರೋಗ್ಯದ ಬಗ್ಗೆ, ನೈರ್ಮಲ್ಯದ ಬಗ್ಗೆ, ಜಾಗೃತಿ ಮೂಡಿಸುವುದು. ಒಳ ಪಂಗಡಗಳಲ್ಲಿ ಇರುವ ಅಸಹನೆ, ಜಗಳ ಇತ್ಯಾದಿ ಸಮಸ್ಯೆಗಳನ್ನು ದೂರಮಾಡಿ ಐಕ್ಯತೆ ಪ್ರದರ್ಶಿಸುವುದರ ಬಗ್ಗೆ ತಿಳಿಹೇಳಬೇಕಾಗಿರುವುದು ಈ ಅಲಕ್ಷಿತ ಮಠಗಳ ಕೆಲಸವಾಗಿದೆ.

ಇದಲ್ಲದೆ ಕುಲದ ಬಗ್ಗೆ, ಶಕ್ತಿ ಪ್ರದರ್ಶಿಸುವ ಬಗ್ಗೆ ತಿಳಿ ಹೇಳುವ ಕೆಲಸ ಈ ಮಠಗಳ ಮೂಲಕ ಆಗಬೇಕು. ಈ ಸಮುದಾಯದ ವಿದ್ಯಾರ್ಥಿಗಳಿಗೆ, ಯುವ ಸಮುದಾಯಕ್ಕೆ ವೃತ್ತಿ ಕೌಶ್ಯಲ್ಯ ನೀಡುವ, ಉದ್ಯೋಗ ನೀಡುವ, ಶಿಕ್ಷಣ ಸಂಸ್ಥೆಗಳನ್ನು ಸ್ಥಾಪನೆ ಮಾಡುವುದಕ್ಕಾಗಿ, ಹಣ ಸಂಗ್ರಹಿಸುವ ಕೆಲಸ ಮಾಡಬೇಕಾಗಿದೆ. ಅಲ್ಪ ಮೊತ್ತವಾಗಲಿ, ದೊಡ್ಡಮೊತ್ತವಾಗಲಿ ಈ ಮೊತ್ತವನ್ನು ಈ ಕೆಳಸ್ತರದಲ್ಲಿಯೇ ಸಂಗ್ರಹಿಸುವುದು ಈ ಮಠಗಳ ಕರ್ತವ್ಯವಾಗಿದೆ. ಏಕೆಂದರೆ ಇದು ನಮ್ಮ ಸಂಸ್ಥೆ ಎಂಬ ಅಭಿಮಾನ ಈ ಸಮುದಾಯಗಳಲ್ಲಿ ಮೂಡಬೇಕಾಗಿದೆ. ಯಾವುದೇ ಸ್ವಾಮಿಯು ಮೇಲು ಸಮುದಾಯದ ಸ್ವಾಮೀಜಿಗಳನ್ನು ಅನುಕರಿಸಬಾರದು. ಒಬ್ಬ ಅಲಕ್ಷಿತ ಸಮುದಾಯದ ಸ್ವಾಮೀಜಿಯು ಅನುಕರಿಸಲು ಪ್ರಾರಂಭಿಸಿದರೆ ಉಳಿದ ಅಲಕ್ಷಿತ

ಮಠದ ಸ್ವಾಮೀಜಿಗಳು ಅನುಕರಣೆ ಮಾಡುತ್ತಾರೆ. ಇದು ಆಗಕೂಡದು. ತಮ್ಮದೇ ಆದ ಸ್ವಾಯತ್ತತೆ ಕಾಪಾಡಿಕೊಳ್ಳಬೇಕು.

೨. ಉಪ ಕುಲಗಳ ಪ್ರಶ್ನೆ ಬಂದಾಗ ಬುದ್ಧ, ಪೈಗಂಬರ್‌ರು ಹೇಳಿದ ಮಾರ್ಗ ಅನುಸರಿಸಬೇಕು. ತಮ್ಮ ತಮ್ಮ ಚಿಹ್ನೆಗಳನ್ನು, ಬಣಗಳನ್ನು ಮರೆಯಬೇಕಾಗಿಲ್ಲ. ಕುಲಕ್ಕೆ ಅಪತ್ತು ಬಂದಾಗ ಈ ಬಣಗಳು, ಪಂಗಡಗಳು ಒಟ್ಟಾಗಿ ಎದುರಿಸಬೇಕು. ಹಾಗಾದರೆ ತಮ್ಮ ತಮ್ಮ ಚಿಹ್ನೆ, ಬಣಗಳ ವಿಚಾರಗಳನ್ನು ಕೊಡು ತೆಗೆದುಕೊಳ್ಳುವಿಕೆ ಸಂದರ್ಭದಲ್ಲಿ ಮಾತ್ರ ಬಳಸಬೇಕು. ಸಾಂಸ್ಕೃತಿಕತೆಯ ಪ್ರಶ್ನೆ ಬಂದಾಗ ತಮ್ಮ ಐಕ್ಯತೆಯನ್ನು ತೋರಿಸಬೇಕು.

ಬಣ ಪ್ರಜ್ಞೆ ಇರಬೇಕಾದದ್ದು, ಕುಲಾಚಾರ ಸಂದರ್ಭವನ್ನು ಹಿರಿಯರ ಹಬ್ಬ ಮಾಡುವ ಸಂದರ್ಭದಲ್ಲಿ, ಮದುವೆಯ ಸಂದರ್ಭದಲ್ಲಿ ಮಾತ್ರ ತೋರಿಸಬೇಕು. ಇದಲ್ಲದೆ ಬೇರೆ ಯಾವ ಸಂದರ್ಭದಲ್ಲೂ ತಮ್ಮ ಒಳ ಪಂಗಡ, ಬಣದ ಪ್ರಜ್ಞೆಯನ್ನು ತೋರಿಸಬಾರದು. ಮೇಲು ಸಮುದಾಯದವರು ಬೌದ್ಧಿಕ ಹಿಡಿತವನ್ನು ತಮ್ಮಲ್ಲಿಯೇ ಇಟ್ಟುಕೊಳ್ಳಲು ಬಯಸುತ್ತಾರೆ.

ಮೊದಲಿನಿಂದಲೂ ಸಮಾಜವನ್ನು ನಿಯಂತ್ರಣ ಮಾಡಿರುವ ಸಮುದಾಯಗಳಿಗೆ ಸಾಮಾಜಿಕ ಅನುಭವ ಇದೆ. ಯಾವ ಸಮಯದಲ್ಲಿ ಐಕ್ಯತೆ ಪ್ರದರ್ಶಿಸಬೇಕು, ಯಾವ ಮರ್ಮಘಾತ ಸನ್ನಿವೇಶದಲ್ಲಿ ಪರಸ್ಪರ ಹಿಡಿದುಕೊಳ್ಳಬಾರದು. ತಮ್ಮ ಹಿತಾಸಕ್ತಿಗೆ ಧಕ್ಕೆ ಬಂದ ಸಂದರ್ಭವನ್ನು ಹೇಗೆ ಕಾಪಾಡಿಕೊಳ್ಳಬೇಕು ಎಂಬ ಪ್ರಜ್ಞೆ ಈ ಮೇಲು ಸಮುದಾಯಗಳಲ್ಲಿ ಇದೆ. ಆದರೆ ಈ ಸಾಮಾಜಿಕ ಅನುಭವ ಅಲಕ್ಷಿತ ಸಮುದಾಯಗಳಲ್ಲಿ ಇಲ್ಲದಿರುವುದು. ಈ ವಿಷಯಗಳಲ್ಲಿ ಈ ಅಲಕ್ಷಿತ ಸಮುದಾಯಗಳು ಎಚ್ಚರದಿಂದ ಇರುವುದು, ಎಚ್ಚರಿಕೆ ನೀಡುವುದು ಈ ಮಠಗಳ ಕೆಲಸವಾಗಿದೆ. ಮಠಗಳು ಮಾಡಬೇಕಾದ ಬಹುಮುಖ್ಯ ಕೆಲಸ ಎಂದರೆ ತನ್ನ ಒಳಗಿನ ಕುಲ, ಬಳಿ, ಪಂಗಡಗಳ, ಬಣಗಳ ಜಗಳಗಳನ್ನು ಹದ್ದುಬಸ್ತಿನಲ್ಲಿ ಇಡಬೇಕಾದದ್ದು. ಪೂರ್ಣವಾಗಿ ತಿಳುವಳಿಕೆ ನೀಡುವ ಕೆಲಸ. ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಉನ್ನತವಾದ ಗುರಿಯನ್ನು ನಿಗದಿಪಡಿಸುವುದು.

ಸಾಮಾಜಿಕ ಜಾಗೃತಿ ಮೂಡಿಸುವುದು ಉದಾ: ಕೇರಳದ ನಾರಾಯಣ ಗುರು ಮಾಡಿದ ರೀತಿಯಲ್ಲಿ ಅಸ್ಪೃಶ್ಯರನ್ನು ದೇವಸ್ಥಾನಗಳಲ್ಲಿ ಪ್ರವೇಶಿಸಲು ಅವಕಾಶ ಮಾಡಿಕೊಡುವುದು. ಕೆಳಸ್ತರದ ಮಠಗಳು ತಮ್ಮ ಸಮುದಾಯಗಳನ್ನು ಕುಲಪ್ರಜ್ಞೆಯಲ್ಲಿ ಹಿಡಿದು ಇಟ್ಟುಕೊಂಡಾಗ ಮೇಲುವರ್ಗದ ಮಠಗಳ ಪ್ರಾಬಲ್ಯ ಕಳೆದುಕೊಳ್ಳುತ್ತದೆ.

ಇಂದು ಬಸವಣ್ಣನಂತಹವರು ಹಾಗೂ ಡಾ.ಬಾಬಾಸಹೇಬ್ ಅಂಬೇಡ್ಕರ್‌ರವರು ಆಧುನಿಕ ಪೋಷಾಕಿನಲ್ಲಿ ಇರುವ ಅವತಾರ ಪುರುಷರಾಗಿದ್ದಾರೆ. ಎಷ್ಟೋ ಜನ ಅಲಕ್ಷಿತ ಸಮುದಾಯಗಳಿಗೆ ದಾರಿ ದೀಪವಾಗಿದ್ದಾರೆ. ಇಂದಿನ ಕಾಲ ಪ್ರಜ್ಞೆಯಲ್ಲಿ, ತುರ್ತು ಸಂದರ್ಭದಲ್ಲಿ ಈ ಮಠಗಳ ಪಾತ್ರ ಬಹು ಮುಖ್ಯ ಪಾತ್ರವಾಗಿದೆ. ಆದರೆ ತಮ್ಮನ್ನು ತಾವು ಅರಿಯದೇ ಹೊರತು, ತಮ್ಮ ಸಂಸ್ಕೃತಿಯ ಬಗ್ಗೆ ತಿಳಿಯದೇ ಹೊರತು ಸಾಧ್ಯವಿಲ್ಲ. ಹಾಗಾಗಿ ಅಂದಿನ ಕಾಲಘಟ್ಟದಲ್ಲಿ ತಮ್ಮ ಸಂಸ್ಕೃತಿ ಏನಿತ್ತು ಎಂಬುದನ್ನು ತಿಳಿಯಬೇಕಾಗಿದೆ.

ತಮ್ಮ ಸಮುದಾಯದ ಮೂಲ ಪುರುಷರನ್ನು, ಋಷಿ ಮುನಿಗಳನ್ನು ಯಾವ ರೀತಿಯಾಗಿ ಬ್ರಾಹ್ಮಣತ್ವಕ್ಕೆ ಅಪವಾದಿಸಿದರೋ ಇದರಿಂದ ಹೇಗೆ ಬಿಡುಗಡೆಗೊಳ್ಳಬೇಕು. ವಾಲ್ಮೀಕಿ ಸಮುದಾಯದವರು ಕರ್ನಾಟಕದಲ್ಲಿ ಪಾಳೇಗಾರರು, ಯೋಧರು, ರಕ್ಷಕರು. ಉತ್ತರ ಭಾರತದಲ್ಲಿ ಜಾಡಮಾಲಿಗಳಾಗಿದ್ದರು. ಅತ್ಯಂತ ನಿಕೃಷ್ಟ ಸ್ಥಿತಿಯಲ್ಲಿದ್ದ ವಾಲ್ಮೀಕಿಗಳು ಇಂದು ಆ ಪ್ರಜ್ಞೆಯ ಮೂಲಕ ನಾವು ನಡೆದು ಬಂದ ಸ್ಥಿತಿ ಏನು, ಪಾಳೆಗಾರ, ಯೋಧರು ಇದ್ದಂತಹ ಕಾಲಘಟ್ಟದಲ್ಲಿ ಮಹಿಳೆಯರು ದೇವದಾಸಿಗಳಾಗಿ, ಜೀತದಾಳುಗಳಾಗಿ ಜೀವನ ಸಾಗಿಸುತ್ತಿದ್ದುದು ಬಹುಮುಖ್ಯವಾಗುತ್ತದೆ. ಇಂತಹ ಅನೇಕ ಅಲಕ್ಷಿತ ಸಮುದಾಯಗಳನ್ನು ಸಂಘಟಿತಗೊಳಿಸಲು, ವ್ಯವಸ್ಥಿತಗೊಳಿಸಲು ಸಂಸಾರಿಯಾಗದೆ ಹಣದ ಬಗ್ಗೆ ವ್ಯಾಮೋಹವಿಲ್ಲದ ಒಂದು ಸಂಸ್ಥೆಯ ರೂಪದಲ್ಲಿ ಮಠಗಳನ್ನು ಸ್ಥಾಪಿಸಿ, ಅದರ ಯಜಮಾನಿಕೆಯನ್ನು ವಹಿಸಿ ತಮ್ಮ ಸಮುದಾಯದ ಕಲ್ಯಾಣಕ್ಕೆ ಕಟಿಬದ್ಧರಾಗಬೇಕು.

ಈ ಅಲಕ್ಷಿತ ಸಮುದಾಯದ ಸ್ವಾಮೀಜಿಗಳು ಮೇಲು ವರ್ಗದ ಪ್ರೇರಣೆ ಪಡೆಯದೆ ತಮ್ಮ ಪರಂಪರೆಯ ಪ್ರೇರಣೆ, ಚರಿತ್ರೆಯ ಪ್ರೇರಣೆ ಪಡೆದು ತಮ್ಮ ಸಮುದಾಯವನ್ನು ಸಂಘಟಿಸಬೇಕು. ತಮ್ಮ ಬೇರುಗಳನ್ನು ಅರಿಯದೆ ಸಾಗಲು ಸಾಧ್ಯವಿಲ್ಲ. ತಮ್ಮ ಪರಂಪರೆಯನ್ನು ಗುರುವಾಗಿ ಸ್ವೀಕರಿಸಬೇಕು. ಆಗ ಮಾತ್ರ ಸಮುದಾಯದ ಅಭ್ಯುದಯ ಸಾಧ್ಯ. ಕೂಲಂಕುಶವಾಗಿ ಅಧ್ಯಯನ ಮಾಡಬೇಕು. ಪರಂಪರೆಯ ಗುರುವಾಗಿ ಮುಂದಿನ ಗುರಿಯನ್ನು ತಿಳಿಸುತ್ತೆ. ತಮ್ಮ ಪರಂಪರೆಯ ಸತ್ಯದಿಂದ ಬಂದಂತಹ ಗುರುಗಳು ಪ್ರತಿ ಹಳ್ಳಿ ಹಳ್ಳಿಗಳಿಗೆ ಭೇಟಿನೀಡಿ ತಮ್ಮ ಸಮುದಾಯಗಳಿಗೆ ಪ್ರವಚನ ನೀಡಬೆಕು.

ಇಂದು ಅಲಕ್ಷಿತ ಸಮುದಾಯದ ಮಠಾಧೀಶರು ಮಾಡಬಹುದಾದ ಮೂರು ಮುಖ್ಯ ಕಾರ್ಯಗಳೆಂದರೆ;

೧. ತಮ್ಮ ಸಮುದಾಯದ ಒಳಗಿನ ಜಗಳಗಳನ್ನು ಬುದ್ಧಿಪೂರ್ವಕವಾಗಿ ತಡೆಯೋದು. ಯಾವ ಸನ್ನಿವೇಶದಲ್ಲಿ ಒಂದಾಗಿ ಇರಬೇಕು. ತಮ್ಮ ಸಮುದಾಯದ ಐಕ್ಯತೆಯನ್ನು ಎಂತಹ ಸನ್ನಿವೇಶದಲ್ಲಿ ತೋರಿಸಬೇಕು.

೨. ಬೇರೆ ಸಮುದಾಯದ ಮಠಗಳು ಹೇಗೆ ತಮ್ಮ ಕುಲದ ಬಗ್ಗೆ ವರ್ಚಸ್ಸನ್ನು, ಘನತೆಯನ್ನು ಸಮಾಜದಲ್ಲಿ ಸ್ಥಾಪಿಸುತ್ತಾರೋ ಅದನ್ನು ಗಮನದಲ್ಲಿಟ್ಟುಕೊಂಡು ಈ ಅಲಕ್ಷಿತ ಸಮುದಾಯದ ಮಠಗಳು ತಮ್ಮ ಕಾರ್ಯಾಚರಣೆಯನ್ನು ಮಾಡಬೇಕು.

೩. ಅಲಕ್ಷಿತ ಸಮುದಾಯದ ಮಠಗಳು ಮಠಾಧಿಪತಿಗಳು ಗಮನಿಸಬೇಕಾದದ್ದು ಮೂಲದಲ್ಲಿ ತಮ್ಮ ಪರಂಪರೆ ಏನಾಗಿತ್ತು. ಮುಂದೆ ಮಾಡಬೇಕಾದುದು ಏನು? ಹಾಗೆಯೇ ತಮ್ಮ ಕುಲದ ಹಿರಿಯರು ತಿಳಿಸುತ್ತಿರುವ ಅಂಶಗಳನ್ನು ಬುದ್ಧಿಜೀವಿಗಳು, ಪ್ರಗತಿಪರರ ಜೊತೆ ಸಮಾಲೋಚಿಸಿ, ಅನುಭವ ಮಂಟಪದ ರೀತಿಯಲ್ಲಿ ಚರ್ಚಿಸಿ ಮುಂದಿನ ಐದು ವರ್ಷಗಳವರೆಗಿನ ಯೋಜನೆ ಏನು?. ಶಾಲೆ, ಕಾಲೇಜು, ಹಾಸ್ಟೆಲ್‌ಗಳು, ಸೊಸೈಟಿಗಳ ಸ್ಥಾಪನೆ. ಯಾವ ಪ್ರದೇಶದಲ್ಲಿ, ಸ್ಥಳಗಳಲ್ಲಿ ಸ್ಥಾಪಿಸಬೇಕು? ಎಲ್ಲಿ ತಮ್ಮ ಕುಲಬಾಂಧವರು ಹೆಚ್ಚಾಗಿ ವಾಸಮಾಡುತ್ತಿದ್ದಾರೆ ಅಲ್ಲಿ ಆಗಬೇಕಾದ ಕಾರ್ಯ ಯೋಜನೆಗಳೇನು?. ಅವರ ಜೀವನ ಮಟ್ಟ ಸುಧಾರಿಸಲು, ಕೈಗೊಳ್ಳಬೇಕಾದ ಕ್ರಮಗಳೇನು?. ಇತ್ಯಾದಿ ವಿಷಯಗಳ ಬಗ್ಗೆ ವಿಸ್ತೃತ ಯೋಜನೆಗಳನ್ನು ಸಿದ್ಧಪಡಿಸುವುದು. ಜೊತೆಗೆ ಯಾವ ಪ್ರದೇಶದಲ್ಲಿ ರಾಜಕೀಯವಾಗಿ ತಮ್ಮ ಕುಲದ ಪ್ರಾಮುಖ್ಯತೆ ಇದೆ ಎಂಬುದನ್ನು ಗಮನಿಸುವುದು. ಯಾವ ಪ್ರದೇಶದಲ್ಲಿ ತಮ್ಮ ಕುಲದವರು ಚದುರಿಹೋಗಿದ್ದಾರೆ ಅವರನ್ನು ಸಂಘಟಿಸುವುದು ಹೇಗೆ?. ತಮ್ಮ ಕುಲದ ಜೊತೆಗೆ ಇತರೆ ಸಮೀಕರಿಸಿದ ಕುಲಗಳ ಜೊತೆಗೆ ಪ್ರಾಮಾಣಿಕವಾಗಿ ಬೆರೆಯುವುದು, ಅವರ ನಂಬಿಕೆ ಗಳಿಸುವುದು. ತಮ್ಮ ಸಮುದಾಯದ ಬಗ್ಗೆ ಇತರ ಕುಲಗಳಿಗೆ ಇರುವ ಭಯವನ್ನು ನಿವಾರಿಸುವುದು. ಯಾವ ಸ್ಥಳಗಳಲ್ಲಿ ತಮ್ಮ ಕುಲದವರು ನೆಲೆಸಿರುವರೋ ಅಲ್ಲಿ ತಮ್ಮ ಮಠದ ಪ್ರತಿನಿಧಿಗಳನ್ನು ನೇಮಿಸಿ, ಅವರುಗಳ ಬಗ್ಗೆ ಕಾಲ ಕಾಲಕ್ಕೆ ಮಾಹಿತಿಯನ್ನು ಸಂಗ್ರಹಿಸುವುದು. ಅವರುಗಳಿಗೆ ಎದುರಾಗುವ ಸಮಸ್ಯೆಗಳನ್ನು ಪರಿಹರಿಸುವುದು.

ಮಠದ ಸ್ವಾಮೀಜಿಗಳು ತಾವು ಕೇವಲ ಕಲಿಸುವುದು ಅಲ್ಲದೇ, ತಾವು ಕೂಡ ಕಲಿಯುವುದನ್ನು ಮಾಡಬೇಕಾಗುವುದು. ಮಾಧ್ಯಮ, ಸಾಮಾಜಿಕ ಜಾಲತಾಣಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವುದು.

ಮೇಲು ಸಮುದಾಯದ ಮಠಗಳ ಮಠಾಧೀಪತಿಗಳೇ ಶ್ರೇಷ್ಠರಂತೆ, ತಾವು ಕೂಡ ಶ್ರೇಷ್ಠರು ಎಂಬ ಭಾವನೆಯನ್ನು ಬಿಡಬೇಕು. ಅಲಕ್ಷಿತ ಸಮುದಾಯದ ಸ್ವಾಮೀಜಿಯು ತಮ್ಮ ಕುಲದ ಶ್ರೀಮಂತ, ಮತ್ತು ಬಡವನನ್ನು ಸಮಾನ ರೀತಿಯಲ್ಲಿ ಕಾಣಬೇಕು. ಶ್ರೀಮಂತ ಕೊಡುವ ಲಕ್ಷಾಂತರ ಹಣ, ದವಸಧಾನ್ಯಗಳು ಹೇಗೆಯೋ, ಹಾಗೆಯೇ ಬಡವ ಕೊಡುವ ಹತ್ತು

ಸಾವಿರ ಕೂಡ ಒಂದೇ ಎಂದು ಪರಿಭಾವಿಸಬೇಕು. ಎಲ್ಲರನ್ನೂ ಸಮಾನ ತೆಕ್ಕೆಯಲ್ಲಿ ನೋಡುವುದು ಕರ್ತವ್ಯವಾಗಿದೆ. ಇದರಿಂದಾಗಿ ಕುಲದಲ್ಲಿ ಇರುವ ಅಂತರಗಳು ಕಡಿಮೆಯಾಗುತ್ತವೆ. ಕುಲದಲ್ಲಿ ಇರುವ ಪ್ರತಿ ವ್ಯಕ್ತಿಯನ್ನು ಅವರು ಕೊಡುವ ಹಣದಿಂದ ನೋಡದೇ ಸಮಾನವಾಗಿ ಕಾಣುವುದು ಮುಖ್ಯವಾಗಿದೆ. ಸೀಮಿತವಾಗಿರುವ ಕುಲವನ್ನು ಸಂಘಟನೆ, ಕುಲದ ಲಾಂಛನವನ್ನು ಬಳಸಿ ಸಮಾಜದ ಐಕ್ಯತೆ ಸಾಧಿಸುವುದು. ಜೊತೆಗೆ ಸ್ವಾಮೀಜಿಯಾಗುವಂತವರಿಗೆ ವರ್ಕ್‌ಶಾಪ್ ಆಯೋಜಿಸುವುದು.

ಲೋಕದೃಷ್ಟಿ

ಸ್ವಾಮೀಜಿಯು ತಮ್ಮ ಕುಲದಲ್ಲಿ ಇರುವ ಒಳ ಪಂಗಡಗಳ ಬಗ್ಗೆ ಇರುವ ಭಿನ್ನ ನಿಲುವುಗಳನ್ನು ಮೇಲು ಕೀಳು ಎಂದು ಕಾಣದೆ ಸಮಾನವಾಗಿ ಕಾಣಬೇಕು. ಆಗ ಮಾತ್ರ ಕುಲದವರ ನಂಬಿಕೆಗೆ ಅರ್ಹರಾಗುತ್ತಾರೆ.

ಸ್ವಾಮೀಜಿಗಳು ನಗರ ಪ್ರದೇಶಕ್ಕೆ ಗಮನ ಕೊಡದೆ ಗ್ರಾಮೀಣ ಭಾಗಕ್ಕೆ ಭೇಟಿ ನೀಡಿ ಅಲ್ಲಿರುವ ಅವಿದ್ಯಾವಂತಿಕೆಯನ್ನು ತೊಡೆದುಹಾಕುವ ಕೆಲಸ ಮಾಡಬೇಕು.

ತಮ್ಮ ಕುಲದ ಋಣಭಾರವನ್ನು ತೀರಿಸುವ ಕೆಲಸವನ್ನು ಈ ಅಲಕ್ಷಿತ ಸಮುದಾಯದ ಸ್ವಾಮೀಜಿಗಳು, ಮಠಗಳು ಮಾಡಬೇಕಾಗಿದೆ.

ಕರ್ತವ್ಯ

೧. ಬಹುಜನ ಹಿತ

೨. ಸಾಂಸ್ಕೃತಿಕ ಎಚ್ಚರ

೩. ತಮ್ಮ ಕುಲಕ್ಕೆ ನೀಡಬೇಕಾದ ಶಿಕ್ಷಣ, ಮಾರ್ಗದರ್ಶನ

ಅಲಕ್ಷಿತ ಸಮುದಾಯದ ಸ್ವಾಮೀಜಿಗಳು ಬುದ್ಧ ಮಾರ್ಗವನ್ನು ಅನುಸರಿಸುವುದು. ಅಂದರೆ ಏಕ ವ್ಯಕ್ತಿ ತೀರ್ಮಾನಕ್ಕಿಂತ ಸಾಮೂಹಿಕ ತೀರ್ಮಾನಕ್ಕೆ ಹೆಚ್ಚು ಮಹತ್ವ ಕೊಡುವುದು. ಇದೇ ಬುದ್ಧಮಾರ್ಗ.

ಉದಾಹರಣೆಗೆ: ಬುದ್ಧನು ಯಾವುದಾದರು ಒಂದು ವಿಚಾರಕ್ಕೆ ನಿರ್ಣಯ ತೆಗೆದುಕೊಳ್ಳಬೇಕು ಎಂದಾಗ ತನ್ನ ಸಹವರ್ತಿಗಳು, ಬಿಕ್ಕುಗಳ ಜೊತೆ ಸಭೆ ನಡೆಸಿ ತನ್ನ ತೀರ್ಮಾನಕ್ಕೆ ಯಾರು ಸಹಮತ ವ್ಯಕ್ತಪಡಿಸುವುದಿಲ್ಲವೋ ಅವರು ತಮ್ಮ ವಿಚಾರವನ್ನು ಮಂಡಿಸುತ್ತಿದ್ದರು. ಒಂದು ವೇಳೆ ಬಹುಮತ ತನ್ನ ಕಡೆ ಇದ್ದರು ಬುದ್ಧ ನಿರಾಕಾರಕ್ಕೆ ಮನ್ನಣೆ ನೀಡುತ್ತಾನೆ. ಅವರುಗಳು

ಹೇಳುವ ಮಾತು ಸರಿ ಇದ್ದರೆ ತೆಗೆದುಕೊಂಡ ನಿರ್ಧಾರಗಳನ್ನು ಬದಲಾಯಿಸುತ್ತಿದ್ದನು. ಈ ಬುದ್ಧ ಮಾರ್ಗವನ್ನು ಈ ಅಲಕ್ಷಿತ ಸಮುದಾಯದ ಸ್ವಾಮೀಜಿಗಳು ಅನುಸರಿಸಬೇಕಾಗಿದೆ.

ಸ್ವಾಮೀಜಿಗಳು ತಾವಾಡುವ ಮಾತಿನಿಂದ ಜನರ ನಂಬಿಕೆಯನ್ನು ಗಳಿಸಬೇಕು. ಈ ನಂಬಿಕೆಯು ಸ್ವಾಮೀಜಿಗಳು ಆಚರಿಸುವ ಆಚರಣೆ, ನಡೆ ನೀತಿಯಿಂದ ಬರುತ್ತದೆ. ಸ್ವಾಮೀಜಿಗಳು ತಮ್ಮ ಕುಲದ ಅಭಿವೃದ್ಧಿ ಬಗ್ಗೆ ಸಮಾನ ಮನಸ್ಕರೊಂದಿಗೆ ಚರ್ಚಿಸಿ ಪರಿಹಾರಗಳನ್ನು ಕಂಡುಕೊಳ್ಳಬೇಕು.

ಸೌಲಭ್ಯಗಳನ್ನು ಸಂಗ್ರಹಿಸಿ ಕುಲಕ್ಕೆ ಒದಗಿಸಿಕೊಡಬೇಕು. ಅವನ್ನು ಪಡೆಯಲು ಪಕ್ಷಾತೀತವಾಗಿ ರಾಜಕೀಯವನ್ನು ಬಳಸಿಕೊಳ್ಳುವುದು ಸ್ವಾಮೀಜಿಯ ಜವಾಬ್ದಾರಿ.

ಅಲಕ್ಷಿತ ಸಮುದಾಯದ ಸ್ವಾಮೀಜಿಗಳಿಗೆ ಇರಬೇಕಾದ ಅರ್ಹತೆ ಭಾವ ತೀವ್ರವಾದ ಸ್ಪಂದನೆ ಇರಬೇಕು. ಕುಲದ ಜೊತೆಗೆ ಪ್ರಪಂಚ ಇಂದು ಮಾನವ ಸಂಸ್ಕತಿಯ ಏಕೀಕರಣದ ಕಡೆಗೆ ಸಾಗುತ್ತಿದೆ. ಅಂದರೆ ಈ ಪ್ರಾಪಂಚಿಕ ಸಂಸ್ಕೃತಿಯಲ್ಲಿ ಪ್ರಧಾನವಾಗಿ ಮಾನವನನ್ನು ವೈವಿಧ್ಯಮಯ ಸಂಸ್ಥೆಗಳು ಏಕ ಸೂತ್ರವನ್ನು ಸಾಧಿಸಲು ಪ್ರಯತ್ನಿಸುತ್ತಿವೆ. ಚಿಂತನಾ ಶಕ್ತಿಯುಳ್ಳ ಮನುಷ್ಯ ತನ್ನ ಅಸಾಮಾನ್ಯ ಭೌದ್ಧಿಕ ಸಾಮರ್ಥ್ಯದಿಂದ ವಿವಿಧ ಆಯಾಮಗಳನ್ನು ತನಗಾಗಿ ಸೃಷ್ಠಿಸಿಕೊಂಡಿದ್ದಾನೆ. ಆದರೆ ಸಮುದಾಯ ವ್ಯವಸ್ಥೆ ಬಲವನ್ನು ಮಾತ್ರ ಮನುಷ್ಯನ ಬೌದ್ಧಿಕ ಸಾಮರ್ಥ್ಯಕ್ಕೆ ಮೀರುವುದು ಸಾಧ್ಯವಾಗಿಲ್ಲ. ಭಾರತದ ಸಾಂಸ್ಕೃತಿಕ ಸಂದರ್ಭದಲ್ಲಿ ಶತಮಾನಗಳು ಕ್ರಮಿಸಿದಂತೆ ಮಾನವ ಜೀವನದ ಸಾಮಾಜಿಕ ಮೌಲ್ಯಗಳು ಬದಲಾಗುತ್ತಾ ಹೊರಟಂತೆ ಶಾಶ್ವತ ಮೌಲ್ಯಗಳು ನೂತನ ಸ್ವರೂಪ ಪಡೆದುಕೊಳ್ಳುತ್ತಿವೆ. ಯಾಕೆಂದರೆ ಮನುಷ್ಯ ಇಂದು ಸಂಘರ್ಷದ ಬದುಕಿನಲ್ಲಿ ಬಾಳುತ್ತಿದ್ದಾನೆ. ಪ್ರಭುತ್ವ ಪ್ರಾಯೋಜಿತ ಕೋಮುವಾದ, ಜಾಗತೀಕರಣ, ಪ್ರಾದೇಶಿಕತೆ, ಭಯೋತ್ಪಾದನೆ ಮತ್ತು ಸಮುದಾಯತೆಗಳು ಈ ನೆಲದಲ್ಲಿ ಸಮಸ್ಯೆಗಳಾಗಿ ಬೆಳೆದು ಮನುಕುಲದ ಬುಡವನ್ನೇ ಅಲ್ಲಾಡಿಸುವಷ್ಟು ಶಕ್ತವಾಗಿವೆ.

ನಂಬಿಕೆ ಕತ್ತಲು, ಹುಡುಕಾಟದಿಂದ ಸತ್ಯವನ್ನು ಕಂಡುಕೊಳ್ಳುವುದು ಬೆಳಕು. ನಂಬಿಕೆಯ ಕತ್ತಲನ್ನು ಹರಡುವ ಕಾರ್ಯಗಳಿಗೆ ಈ ದೇಶದಲ್ಲಿ ಬಹುದೊಡ್ಡ ಪರಂಪರೆಯಿದೆ. ದೇವರ–ಧರ್ಮದ ಹೆಸರಿನಲ್ಲಿ ನಂಬಿಕೆಯ ಮೌಢ್ಯವನ್ನು ಬಿತ್ತವ ಕೆಲಸ ಆರಂಭವಾದ ಕಾಲಘಟ್ಟದಲ್ಲಿಯೇ ಅದು ಎಷ್ಟು ಸುಳ್ಳುಗಳಿಂದ ಕೂಡಿದೆ ಎಂದು ತಿಳಿಸುವಂಥ ಲೌಕಿಕತೆಯ ಮೇಲೆ ಬದುಕನ್ನು ಕಟ್ಟಿಕೊಳ್ಳುವ ನಿಜದ ನೆಲೆಯ ನಾಸ್ತಿಕವಾದವೂ ಬೆಳೆದು ಬಂದಿದೆ. ದೇವರ ಪರಿಕಲ್ಪನೆಯನ್ನು ಜನಮಾನಸದಲ್ಲಿ ಅಚ್ಚೊತ್ತಲು ವೇದ ಪುರಾಣಗಳು, ಸ್ಮೃತಿಗಳು ರಚನೆಯಾದ ಕಾಲದಲ್ಲಿ

ದೇವರ ಅಸ್ತಿತ್ವ ನಿರಾಕರಿಸುವ ಜನ ನಂಬಿಕೆಯ ಕೂಪಕ್ಕೆ ಬೀಳದಂತೆ ಎಚ್ಚರಿಸುವ ಮತ್ತು ವೈಚಾರಿಕತೆಯನ್ನು ಪ್ರಚುರಪಡಿಸುವ ದರ್ಶನಗಳ ಚಿಂತನೆಯೂ ಬೆಳಕು ಕಂಡಿದೆ. ದೇವರ ಅಸ್ತಿತ್ವದ ಬಗ್ಗೆ ಮಾತಾಡದೆ ಜೀವನದ ವರ್ತಮಾನದ ಸಂಕಟ ಸಮಸ್ಯೆಗಳ ಬಗ್ಗೆ ಅವುಗಳನ್ನು ದಾಟುವ ಬಗೆಗಳ ಕುರಿತು ಮಾತನಾಡಿದ ಪ್ರಗತಿಪರ ಚಿಂತನೆಗಳು ಬಹುಬೇಗ ಜನಗಳನ್ನು ತನ್ನ ಕಡೆ ಸೆಳೆದವು. ಆದರೆ ಸಮುದಾಯ ವ್ಯವಸ್ಥೆಗೆ ಸಂಬಂಧಿಸಿದಂತೆ ಹಿಂದಿನಿಂದಲೂ ಅವು ವಿಫಲವಾಗುತ್ತಲೇ ಸಾಗಿವೆ.

ಲೋಕದಲ್ಲಿ ತಾರತಮ್ಯ ಸೃಷ್ಟಿಸಿ ಗೋಳಾಟಗಳಿಗೆ ಕಾರಣವಾದವರೇ ತಮ್ಮ ಸುರಕ್ಷತೆಗಾಗಿ ದೇವರನ್ನು, ದೇವರ ಹೆಸರಿನಲ್ಲಿ ಅನೇಕ ಗುಡಿ–ಗುಂಡಾರ, ಮಠ–ಮಾನ್ಯಗಳನ್ನು ಹುಟ್ಟುಹಾಕಿದರೆಂಬ ವಿಷಯ ಬಹು ಚರ್ಚಿತವಾದ ಸಂಗತಿಯೇ. ಈ ಸಂವಾದಗಳ ನಡುವೆ ಅಜ್ಞಾನಕ್ಕೆ ಕಾರಣವಾಗಿರುವ ದೈವ ಭಾವನೆಯನ್ನು ಪುರೋಹಿತಶಾಹಿ/ಮೇಲುವರ್ಗಗಳು ತನ್ನ ಬದುಕಿನ ಉಪಕ್ರಮದ ಭಾಗವಾಗಿ ಜನರನ್ನು ಬೇಕಾದಷ್ಟು ಅಧೋಗತಿಗೆ ಇಳಿಸಿವೆ. ಇದರಿಂದಾಗಿ ಅದೃಷ್ಟ–ದುರಾದೃಷ್ಟ, ಕರ್ಮ–ಪುನರ್ಜನ್ಮ, ಸ್ವರ್ಗ–ನರಕ, ಪಾಪ–ಪುಣ್ಯದ ಪರಿಕಲ್ಪನೆಗಳು ಮಾನವನ ಯೋಚಿಸುವ ನೋಟವನ್ನೇ ಮೊಟಕುಗೊಳಿಸಿದವು.

ಸಮುದಾಯದ ಯುವ ಸಮೂಹದ ತಲೆಯೊಳಗೆ ಮೌಢ್ಯ ತುಂಬುವ ಕೆಲಸ ಅತ್ಯಂತ ವ್ಯವಸ್ಥಿತವಾಗಿ ನಡೆಯುತ್ತಿರುವ ದಿನಗಳಲ್ಲಿ ಅವರೆದುರು ಪ್ರಗತಿಪರ ಪರಂಪರೆಯನ್ನು ಮುನ್ನಲೆಗೆ ತರಬೇಕಾಗಿದೆ. ಆ ಕೆಲಸವನ್ನು ಮಠಾಧೀಶರು, ಸ್ವಾಮಿಗಳು ಮಾಡುತ್ತಿದ್ದಾರಾದರೂ ಅದರ ಮೂಲ ಬೇರುಗಳು ಸಂಪ್ರದಾಯದ ಅಂಧಾಕಾರದೊಳಗೆ ಉಳಿದುಕೊಂಡಿವೆ. ಆರಂಭದಲ್ಲಿ ಮನುಷ್ಯರೇ ಹೊರತು ಆಚಾರದಲ್ಲಿ ಮನುಷ್ಯರಲ್ಲ. ಇದಕ್ಕೆ ಉದಾಹರಣೆ ಎಂಬಂತೆ ದೇಶದಲ್ಲೀಗ ಧರ್ಮಾಂಧರ ಅಟ್ಟಹಾಸ ಮಿತಿ ಮೀರಿದೆ. ಜನರ ನೆಮ್ಮದಿ ಮತ್ತು ದೇಶದ ಐಕ್ಯತೆಗೆ ದಕ್ಕೆಯಾಗುವ ಕೆಲಸಗಳು ಅವರಿಂದಾಗುತ್ತಿವೆ. ದೇವರನ್ನೇ ಮುಂದಿಟ್ಟುಕೊಂಡು ಹೆಣ್ಣನ್ನು ಬಂಧಿಸಿರುವ ಪರಾಧೀನತೆಯನ್ನು ಅಸಮಾನತೆಯನ್ನು ಘೋಷಿಸುವ ಚಟುವಟಿಕೆಗಳು ವ್ಯಾಪಕವಾಗಿ ನಡೆಯತೊಡಗಿವೆ. ಧರ್ಮಗುರುಗಳು ಎನಿಸಿಕೊಂಡವರಿಂದಲೇ ಹೆಣ್ಣು ಅತ್ಯಾಚಾರಕ್ಕೀಡಾಗುತ್ತಿದ್ದಾಳೆ. ಎಲ್ಲವೂ ತನ್ನ ಅಧೀನದಲ್ಲಿರಬೇಕು ಎಂಬ ಸ್ವಾರ್ಥದ ಬೀಜ ಅಸಮಾನತೆಯ ಮರವಾಗಿ ಇಂದು ಸಮಾಜದ ಎಲ್ಲ ಮೂಲೆ ಮೂಲೆಗೂ ಅದರ ರೆಂಬೆಗಳು ವ್ಯಾಪಿಸಿವೆ. ಇಂಥವರೆದುರು ಜನ ಎಚ್ಚೆತ್ತುಕೊಳ್ಳಬೇಕು. ದೇವರು, ಧರ್ಮ ಸಮಾನತೆಯ ಬುಡವನ್ನು ಅಲುಗಾಡಿಸುವ ಚಿಂತನೆಗಳನ್ನು ಜನರ, ಸಮುದಾಯಗಳ ಹತ್ತಿರ ಒಯ್ಯಬೇಕಿದೆ.

ಅನೇಕ ತಲೆಮಾರುಗಳಿಂದ ನಮಗೆ ತಿಳಿಯದ ವಿಷಯವನ್ನು ಅರ್ಥಮಾಡಿಕೊಳ್ಳಲು ಇತರ ಶಕ್ತಿಗಳ ಮೇಲೆ ಭಾರ ಹಾಕಿ ಅವರ ಹೆಜ್ಜೆ ಗುರುತುಗಳನ್ನು ನಾವೇ ನಿರ್ದೇಶಿಸುತ್ತಾ ಆ ಮಾರ್ಗದಲ್ಲಿ ನಡೆಯಲು, ಭಯ ಭಕ್ತಿಗಳನ್ನೂ ಹೆಚ್ಚಿಸಲು ದೈವ ಭಾವನೆ ಬಹಳ ಉಪಯುಕ್ತವಾಗಿದೆ. ಅದರ ಹೆಸರಲ್ಲೇ ಮಠಗಳು ಜನ್ಮ ಪಡೆದು ಮಠಾಧೀಶರು ಸಮುದಾಯ ವ್ಯವಸ್ಥೆಯ ತವರುಮನೆಯ ಅಧಿಕಾರ ವಹಿಸುವಂತಾಯಿತು. ಮಾನವನ ಜ್ಞಾನ, ವಿಜ್ಞಾನ ಹೆಚ್ಚಿದಂತೆಲ್ಲಾ ದೈವದ ರೂಪ ಗುಣ ಸಹ ಬದಲಾಯಿಸುತ್ತಾ ಬಂದವು. ಅಂತೆಯೇ ವರ್ಗವ್ಯವಸ್ಥೆಯಿಂದ ವರ್ಗ, ಸಮುದಾಯ, ಉಪ ಸಮುದಾಯ, ಮೇಲು-ಕೀಳು ಎಂಬ ಅಸಮಾನತೆಯ ಎಲ್ಲ ರೂಪಗಳು ಹೆಚ್ಚು ಪಡೆದವು. ನಿತ್ಯ ಜೀವನಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಸಮುದಾಯವು ಬಹಳ ಮಟ್ಟಿಗೆ ಉಪಯೋಗಿಸಿಕೊಂಡರೂ, ಮನುಷ್ಯನಲ್ಲಿ ಉಂಟಾದ ಈ ಭಾವಕ್ರಾಂತಿಯಿಂದ ಸಮುದಾಯ ಭಾವನೆ ಸಿದ್ಧಾಂತದ ರೀತಿಯಲ್ಲಿ ಮಾನವನಿಗೆ ಕ್ರೂರವಾಗುತ್ತಿರುವುದು. ಏಕೆಂದರೆ ಸಮುದಾಯ ಭಾವನೆ ಸುಳ್ಳಾಗಿರುವ, ಕಲ್ಪಿತವಾದ ನಂಬಿಕೆಯ ಮೇಲೆ ಆಧಾರ ಪಟ್ಟಿಯಿರುವ ಸಮಾಜದಲ್ಲಿ ಮನುಷ್ಯ ತಾನೊಬ್ಬನೇ ಇಲ್ಲ, ತನ್ನೊಂದಿಗೆ ಹತ್ತು ಜನ, ಹತ್ತು ಜನರೊಂದಿಗೆ ತಾನು ವಾಸಿಸುತ್ತಿರುವನು.

ಅನಾಗರಿಕ, ಅರಣ್ಯ ವ್ಯವಸ್ಥೆಯನ್ನು ದಾಟಿ ಸಮಾಜವಾಗಿ ಏರ್ಪಟ್ಟು ತನ್ನ ಅವಶ್ಯಕತೆಗಳನ್ನು ನಾಲ್ಕು ಜನರ ಸಹಕಾರದೊಂದಿಗೆ ಪೂರೈಸಿಕೊಳ್ಳುತ್ತಿರುವಾಗ ಮನುಷ್ಯ ಸಹ ಮಾನವರೊಂದಿಗೆ ಸೌಮ್ಯವಾಗಿ, ಆತನಿಗೆ ಕಷ್ಟ ಉಂಟುಮಾಡದಂತೆ ವ್ಯವಹರಿಸಬೇಕಾಯಿತು. ಆ ಸಂದರ್ಭದ ಯಾವುದೋ ಕೆಲವು ಭಯ, ಭಕ್ತಿಗಳು ಇಲ್ಲದಿದ್ದರೆ ಸಮಾಜದಲ್ಲಿ ನೀತಿ ಇರುವುದಿಲ್ಲವೆಂದು ದೈವ ಭಾವನೆಯನ್ನು ಆಧಾರವಾಗಿಟ್ಟುಕೊಂಡು ನೀತಿ, ನಡತೆ, ಸಂಸ್ಕೃತಿ, ಆಚಾರ, ನಂಬಿಕೆಗಳು, ದೈವ ಭಾವನೆಯ ಮೇಲೆ ಆಧಾರ ಪಟ್ಟಿರುವುದರಿಂದ ಮಾನವ ಜೀವನಕ್ಕೆ ದೈವ ನಂಬಿಕೆಗೆ ಅನ್ಯೋನ್ಯ ಸಂಬಂಧ ಏರ್ಪಟ್ಟಿದೆ. ಈ ಒಂದು ಭಕ್ತಿಯ ಭಯವನ್ನೇ ಬಂಡವಾಳ ಮಾಡಿಕೊಂಡ ಒಂದು ವರ್ಗ ಈಗಾಗಲೇ ಇರುವ ವರ್ಣ ವ್ಯವಸ್ಥೆ, ಅದರ ನಂತರದ ಸಮುದಾಯ, ಉಪಸಮುದಾಯಗಳ ಹಿನ್ನೆಲೆಯಲ್ಲಿ ಅಸಮಾನತೆಯ ಬೀಜ ಭಿತ್ತಿದರು.

ಸಮುದಾಯ ಭಾವನೆ ಅಜ್ಞಾನಕ್ಕೆ ಉತ್ತರವಾಗುಳಿದರೆ, ಮಾನವನ ಜೀವನ ಇಷ್ಟು ಅಧೋಗತಿಗೆ ಇಳಿಯುತ್ತಿರಲಿಲ್ಲ. ದೈವಭಾವನೆಯ ಹಿಂದೆ ಅದೃಷ್ಟ-ದುರಾದೃಷ್ಟಗಳು, ಕರ್ಮ-ಪುನರ್ಜನ್ಮಗಳು, ಸ್ವರ್ಗ-ನರಕಗಳನ್ನು ಊಹಿಸಿ ಮಾನವ ಜೀವನವನ್ನೇ ಒಂದು ಮಾರ್ಗದಲ್ಲಿ ಕೂಡಿಹಾಕಿದರು. ಅದರಂತೆಯೇ ಅಸಮಾನತೆಗಾಗಿ, ಅಧಿಕಾರವನ್ನು ಉಳಿಸಿಕೊಳ್ಳುವುದಕ್ಕಾಗಿ ಸಮುದಾಯ ಭಾವನೆ,

ಅದರ ಶಾಖೋಪಶಾಖೆಗಳು ಉಪಯೋಗವಾಗಿರುವುದು. ಶಾಖೆಗೊಂದರಂತೆ ಮಠಗಳು, ಮಠಾಧೀಶರು ಒಂದೊಂದು ತತ್ವದ ಸಿದ್ಧಾಂತ ಕಟ್ಟಿಕೊಂಡು ಸಂಪ್ರದಾಯ, ಅಧಿಕಾರ ಎಂಬ ಸ್ವಾರ್ಥದ ಖಾವಿ ಧರಿಸಿ ತಲೆ ಎತ್ತಿದರು. ಆದುದರಿಂದಲೇ ಅಸಮಾನತೆ ಮಾನವನ ಬುದ್ಧಿ ವಿಕಾಸಗೊಳ್ಳದ ಸಮಯದಲ್ಲಿ ಏರ್ಪಡಿಸಿದ ಒಂದು ಜೀವನ ವಿಧಾನವೆಂದು ಹೇಳುವೆವು. ಜೀವನದ ಮೌಲ್ಯಗಳು, ಅವಶ್ಯಕತೆಗಳೂ ಬದಲಾಗುತ್ತಿದ್ದಂತೆ ಮನುಷ್ಯ ಮಾನಸಿಕವಾಗಿ ಸಂಕುಚಿತಗೊಳ್ಳತೊಡಗಿದ. ಜೀವನ ವಿಧಾನಗಳಲ್ಲಿ ಬದಲಾವಣೆಗಳಾಗಬೇಕು. ಅಥವಾ ಹಳೆಯ ವಿಧಾನಗಳು ಬದಲಾಗಿ ಹೊಸ ವಿಧಾನಗಳು ಬರಬೇಕು. ಹೊಸ ವಿಧಾನಗಳಿಗೆ ಹೆದರಿಕೊಂಡು ಯಾವುದೋ ಒಂದು ರೀತಿಯಲ್ಲಿ ಹಳೆಯ ವಿಧಾನಗಳನ್ನು ಸಮರ್ಥಿಸುವುದರಿಂದ ಪ್ರಯೋಜನವಿಲ್ಲ.

ಜೀವನ ವಿಧಾನಗಳ ಬದಲಾವಣೆಗಳ ಸಂದರ್ಭದಲ್ಲಿ ಸಮುದಾಯ ಭಾವನೆಯನ್ನು ತೊಲಗಿಸಿದರೆ ಆ ಸ್ಥಳವನ್ನು ರಾಜಕೀಯ ಆಕ್ರಮಿಸುವುದು. ಇದು ಮತ್ತೊಂದು ರೀತಿಯಲ್ಲಿ ಸಮಾಜದ ಮೇಲೆ ಪರಿಣಾಮ ಬೀರುವುದು. ಸಮುದಾಯಕ್ಕಾಗಿ ಇಡೀ ಮನು ಸಂಕುಲವನ್ನೇ ಒಡೆದಾಳುವ ಮನೋವೃತ್ತಿಯ ಗುಣವುಳ್ಳದ್ದು ರಾಜಕೀಯ. ದೇಶದಲ್ಲಿ ಸಮುದಾಯ ವ್ಯವಸ್ಥೆ ಇಷ್ಟೊಂದು ವ್ಯಾಪಿಸಲು ಪುರೋಹಿತಶಾಹಿ ಅಥವಾ ಅಧಿಕಾರದ ಸ್ವಾರ್ಥ ಎಷ್ಟಿದಿಯೋ ಸ್ವಾತಂತ್ರ್ಯ ನಂತರದಲ್ಲಿ ಈ ರಾಜಕೀಯದ ಪ್ರಭಾವವು ಅಷ್ಟೇ ಇದೆ. ಅದರ ಇನ್ನೊಂದು ರೂಪವಷ್ಟೇ. ಈ ರಾಜಕೀಯದಿಂದಲೇ ಇತ್ತೀಚೆಗೆ ದೇಶದಲ್ಲೆಲ್ಲಾ ಈ ಬದಲಾವಣೆ ಕಂಡು ಬರುತ್ತಿರುವುದು. ಸಮುದಾಯ ಭಾವನೆಯ ಪರಿಣಾಮಗಳು ಪರೋಕ್ಷವಾದವುಗಳು.

ಪ್ರಸ್ತುತ ಸಂದರ್ಭದ ಸಮಾಜದಲ್ಲಿ ಬೇರು ಬಿಟ್ಟಿರುವ ಒಂದು ಅನಿಷ್ಟ ಪದ್ಧತಿ ಎಂದರೆ ಸಮುದಾಯ. ಇದಕ್ಕೆ ಸಂಬಂಧಿಸಿದಂತೆ ಮನುಷ್ಯನ ಮನಸ್ಥಿತಿ ಮತ್ತು ಪ್ರಗತಿಪರ ಎಂದು ಹೇಳಿಕೊಳ್ಳುವ ಮಠಾಧೀಶರು ಹಾಗೂ ಇತರೆ ಮಠಾಧೀಶರುಗಳಲ್ಲಿ ಇರುವ ಅಭಿಪ್ರಾಯಗಳೇನು, ಮತ್ತು ಅವರು ಸಮುದಾಯ ವ್ಯವಸ್ಥೆಯ ಕುರಿತು ನೀಡುವ ವ್ಯಾಖ್ಯಾನಗಳೇನು ಎಂದು ಪ್ರಶ್ನಿಸಿದರೆ ಜಾರಿಕೆಯ, ಆರೋಪದ, ವಿಪರ್ಯಾಸದ ಈರ್ಷೆಗಳು ಎದುರಾಗುತ್ತವೆ. ಈ ಮೂವರ ದೃಷ್ಟಿಯಲ್ಲಿ ಸಮುದಾಯ ವ್ಯವಸ್ಥೆಯನ್ನು ಕುರಿತು ಅನಿಸಿಕೆಗಳನ್ನು ಪರಾಮರ್ಶಿಸುವ ಮೂಲಕ ಗಮನಿಸಬಹುದು.

ಪ್ರಗತಿಪರರು ಎಂದು ಹೇಳಿಕೊಳ್ಳುವ ಮಠಾಧೀಶರು ನಮಗೆ ಸಮುದಾಯ ವ್ಯವಸ್ಥೆಯಲ್ಲಿ ನಂಬಿಕೆ ಇಲ್ಲ ಎಂದು ಹೇಳುತ್ತಾರೆ. ಈ ಗುಂಪು ಸಮುದಾಯ, ವರ್ಗ, ವರ್ಣಮುಕ್ತ ಎಂಬುದನ್ನು ಸಾರುತ್ತಾರೆ ಸರಿ. ವಾಸ್ತವದಲ್ಲಿ ಆಗುತ್ತಿರುವುದೇನು ಜಂಗಮಕ್ಕೆ ಸಮುದಾಯವಿಲ್ಲ,

ಲಿಂಗಕ್ಕೆ ಕುಲವಿಲ್ಲ ಎಂದು ಹೇಳಿಕೊಳ್ಳುವ ಇವರೇ, ಮಠಗಳು, ಮಠಾಧೀಶರು ಸಮುದಾಯ ಮುಕ್ತರೇ? ಸಮಾಜದಲ್ಲಿರುವ ಯಾವ ಮಠವೂ, ಮಠಾಧೀಶನೂ ಸಮುದಾಯ ಮುಕ್ತನಲ್ಲ. ಸಮುದಾಯ ಬದಲಾವಣೆಗೆ ಮಾನಸಿಕ ಬದಲಾವಣೆ ಅವಶ್ಯಕ ಎಂದು ಹೇಳುವ ಮನಸ್ಸುಗಳೇ ಇನ್ನೂ ಪ್ರಬುದ್ಧವಾಗಿಲ್ಲ. ಒಂದುಕಡೆ ಮಾನಸಿಕ ಬದಲಾವಣೆ ಎಂದು ಹೇಳುವ ಬಾಯಿಂದಲೇ ಸಮುದಾಯ ನಾಶತೆಯಲ್ಲಿ ನಂಬಿಕೆಯಿಲ್ಲ. ಸಮುದಾಯ ಸಮುದಾಯಗಳಲ್ಲಿ ಸಮಾನತೆ ಕಾಯ್ದುಕೊಳ್ಳಬಹುದು ಅಷ್ಟೇ ಎಂಬ ಮಂತ್ರ ಜಪಿಸುತ್ತಾರೆ.

ರಕ್ತ, ಗಾಳಿ, ನೀರಿಗೆ ಇಲ್ಲದ ಜಾತಿ ಮನುಷ್ಯನಿಗೆ ಯಾಕೆ?. ಯಾಕೆಂದರೆ ಜಾತಿಯತೆಗೆ ಈ ದೇಶದ ವ್ಯವಸ್ಥೆಯೇ ಕಾರಣ. ಅದರಲ್ಲೂ ಇತ್ತೀಚೆಗೆ ಸಮುದಾಯ ಹೈಟೆಕ್ ರೂಪ ಪಡೆದುಕೊಂಡಿದೆ. ಉದಾಹರಣೆಗೆ: ಒಬ್ಬ ವ್ಯಕ್ತಿಯ ಸಮುದಾಯನ್ನು ತಿಳಿಯಬೇಕಾದರೆ ಆತನನ್ನು ವೆಜ್, ನಾನ್‌ವೆಜ್ ಎಂದು ಕೇಳುವ ಮೂಲಕ ಹೈಟೆಕ್ ರೂಪವನ್ನು ನೀಡಲಾಗಿದೆ. ಸಮಾಜದಲ್ಲಿನ ಮನುಷ್ಯ ಸಹ ಸಮುದಾಯ ಜಾಡ್ಯಕ್ಕೆ ಅಂಟಿಕೊಂಡಿದ್ದಾನೆ. ಸಮುದಾಯವನ್ನೇ ಚರ್ಚೆ ಮಾಡಿಕೊಂಡು ಓಡಾಡುತ್ತಿದ್ದಾನೆ. ಯಾರಾದರೂ ಸ್ವಾಮಿ ಕಂಡರೆ ಸಾಕು ಯಾವ ಸ್ವಾಮಿ ಎಂದು ಪರೋಕ್ಷವಾಗಿ ಕೇಳುವ ಮೂಲಕ ಸಮುದಾಯದ ಉಳಿವಿಗೆ ಪರೋಕ್ಷವಾಗಿ ಎಲ್ಲರೂ ಶ್ರಮಿಸುತ್ತಿದ್ದಾರೆ. ವೈಚಾರಿಕವಾದಿಗಳ ದೃಷ್ಟಿಯಲ್ಲಿ ಮಠಗಳು, ಮಠಾಧೀಶರನ್ನು ಅನುಮಾನದಿಂದ ನೋಡುವಂತಾಗಿದೆ. ಸಮುದಾಯತೆಯ ತವರು ನೆಲ ಮಠಗಳು ಎನ್ನುತ್ತಾರೆ ಎಂಬುದು ಮಠಾಧೀಶರ ಆರೋಪ ನಿಜ. ಮಠಾಧೀಶರು ಒಂದು ಸಮುದಾಯ ಚೌಕಟ್ಟಿನಲ್ಲಿ ಕೆಲಸ ಮಾಡುವುದೇ ಇದಕ್ಕೆ ಕಾರಣ.

ಧರ್ಮವೆಂದರೆ ದೇವಸ್ಥಾನದಲ್ಲಿ ಗಂಟೆ, ಚರ್ಚ್‌ನಲ್ಲಿ ಪ್ರಾರ್ಥನೆ, ಮಂದಿರಗಳಲ್ಲಿ ನಮಾಜ್ ಮಾಡುವುದಲ್ಲ. ಮನುಷ್ಯರೆಲ್ಲ ಒಂದಾಗಿ ಪ್ರೀತಿ, ವಿಶ್ವಾಸ, ನಂಬಿಕೆ, ಸೌಹಾರ್ದತೆಯಿಂದ ಬಾಳುವುದು. ವರ್ಣ, ಸಮುದಾಯ ವ್ಯವಸ್ಥೆ ಕೃತಕವಾದವುಗಳು. ಅವು ಶೋಷಣೆಯ ಸೃಷ್ಟಿಗಳು. ಸಮುದಾಯ ಮುಕ್ತ ಮಠಗಳನ್ನಾಗಿಸಿ ಮೊದಲು ಯಾವುದೇ ಸಮುದಾಯವರಿರಲಿ ಲಿಂಗಕಟ್ಟಿ ಮಠದ ಪೀಠಾಧಿಪತಿಗಳನ್ನಾಗಿ ಮಾಡುತ್ತೇವೆ. ಪ್ರಗತಿಪರ ಎಂದು ಹೇಳಿಕೊಳ್ಳುವ ಮಠಾಧೀಶರುಗಳು ಹೇಳುತ್ತಾರೆ. ಮುಂದೆ ಯೋಗ್ಯತೆಯುಳ್ಳ ವ್ಯಕ್ತಿ ಎಂಬ ಅರ್ಹತೆಯನ್ನು ಇಡುತ್ತಾರೆ. ಅರ್ಹತೆಗಳು ಮಾತ್ರ ಗುಪ್ತ. ಹಾಗೆ ನೋಡಿದರೆ ಇಲ್ಲಿಯವರೆಗೆ ಮೇಲು ವರ್ಗದ ಮಠಗಳಿಗೆ ಒಬ್ಬ ದಲಿತರನ್ನೂ ಪೀಠಾಧಿಪತಿಗಳನ್ನಾಗಿ ಮಾಡಿದ ಉದಾಹರಣೆಗಳೇ ಇಲ್ಲ. ಅಲಕ್ಷಿತ ವರ್ಗದ ಮಠಗಳಿಗೆ ಮೇಲುವರ್ಗದ ಪೀಠಾಧಿಪತಿಗಳನ್ನು ಮಾಡಿದ ಉದಾಹರಣೆಗಳು

ಬೇಕಾದಷ್ಟು ಸಿಗುತ್ತವೆ. ಇದು ಕೆಳವರ್ಗದ ಮಠಗಳು ಹಾಗೂ ಆ ಸಮುದಾಯಗಳು ತಮ್ಮ ಅಧೀನದಲ್ಲಿರಬೇಕು ಎಂಬ ಸ್ವಾರ್ಥವಲ್ಲದೇ ಮತ್ತೇನು.

ಪ್ರಾಚೀನ ಭಾರತದಲ್ಲಿ ಧರ್ಮವಿರಲಿಲ್ಲ. ಇದ್ದದ್ದು ಸಮುದಾಯ, ಉಪ ಸಮುದಾಯಗಳು ಎಂದು ಹೇಳುವವರು ಅವುಗಳನ್ನು ಹುಟ್ಟುಹಾಕಿದವರು ಯಾರೆಂದು ಮಾತ್ರ ಹೇಳುವುದಿಲ್ಲ. ಕೆಳವರ್ಗದವರು ಲಿಂಗಾಯತರ ಮಠಕ್ಕೆ ಸ್ವಾಮಿಗಳಾಗಿ ಬಂದಾಗ ಲಿಂಗಾಯತರು ಸ್ವಲ್ಪವಾದರೂ ಗಮನಿಸಿದರಾ? ಲಿಂಗ ಕಟ್ಟಿದ ಮೇಲೂ ಭಂಗಪಟ್ಟರು ಪಾಪ ಭಕ್ತರು. ಹೀಗೆ ನೋಡಿದರೆ ಕೆಟ್ಟಿದ್ದು ಧರ್ಮ ಸಮುದಾಯವಲ್ಲ. ಅದರ ಅನುಯಾಯಾಗಳು.

ಅಲಕ್ಷಿತ ವರ್ಗಗಳು ಮಠಗಳನ್ನು ಮಾಡಿಕೊಳ್ಳಲು ಬೇಡ ಎಂದು ಹೇಳುವುದಿಲ್ಲ. ಆದರೆ ಮಠಗಳ ಆಶಯ ಸಿದ್ಧಾಂತಗಳೇನು? ಯಾವುವು? ಈ ಸಮಾಜದ ಶ್ರೇಣೀಕೃತ ವ್ಯವಸ್ಥೆಯಲ್ಲಿ ಆಶಯ ಸಿದ್ಧಾಂತಗಳು ಉಳಿದಿರುವುದು, ಅನ್ವಯಿಸುವುದು ಕೇವಲ ಅಲಕ್ಷಿತ ವರ್ಗಗಳಿಗೆ ಮಾತ್ರ. ಆ ಕಾರಣಕ್ಕಾಗಿಯೇ ಅವು ಅಲಕ್ಷಿತ ಸಮುದಾಯಗಳಾಗಿ ಅವುಗಳಿಂದ ಹುಟ್ಟುವ ಯಾವುದೇ ಆಗಲಿ ಅಲಕ್ಷಿತವಾಗಿಯೇ ಉಳಿದಿದೆ, ಉಳಿಯುತ್ತದೆ ಸಹ. ಇದೊಂದು ರೀತಿಯಲ್ಲಿ ಶೋಷಿತ ವರ್ಗಕ್ಕೆ ಶೋಷಕರ ಮಾರ್ಗದರ್ಶನ ದೊರೆಯಲಿ ಎಂಬ ಕುತಂತ್ರವಲ್ಲದೇ ಮತ್ತೇನು. ಶೋಷಿತ ಸಮುದಾಯಗಳೆಡೆಗೆ ಮಠಾಧೀಶರ ಪಾತ್ರ ದೊಡ್ಡದು. ಸಮುದಾಯವಾದಿಗಳ ಸಾಂಪ್ರದಾಯಿಕ ಗುಣ ಸಂಕುಚಿತ ಮನದತ್ತ ಈ ಮಠಾಧೀಶರಲ್ಲೆ ಸಮುದಾಯಕ್ಕೆ ಸಂಬಂಧಿಸಿದಂತೆ ಎರಡು ರೀತಿಯನ್ನು ಗುರುತಿಸಬಹುದು. ಒಂದು ಅಂತರಮುಖಿ ಮಠಾಧೀಶ್ವರರು, ಎರಡು ಬಹುಮುಖಿ ಮಠಾಧೀಶ್ವರರು. ಬಹಿರಂಗವಾಗಿ ಸಮುದಾಯವಾದಿಗಳು ಎಂದು ಹೇಳಿಕೊಳ್ಳುವವರ ಒಂದು ಗುಂಪಾದರೆ, ಪರೋಕ್ಷವಾಗಿ ಸಮುದಾಯತೆಯನ್ನು ಮಾಡುವವರದು ಒಂದು. ಒಟ್ಟಾರೆಯಾಗಿ ಎಲ್ಲರೂ ಸಮುದಾಯವಾದಿಗಳೇ, ಸ್ವಾರ್ಥಿಗಳೇ. ಸಮುದಾಯ, ಪೀಠದ ಅಸ್ತಿತ್ವಕ್ಕೆ ಬಡಿದಾಡುವವರೇ ಸಮಾಜದಲ್ಲಿ ಸಮುದಾಯ ವ್ಯವಸ್ಥೆ ಬೇರು ಬಿಟ್ಟಿದೆ. ಅದನ್ನು ತೊಡೆಯಲು ಯಾರೂ ಮಾನಸಿಕವಾಗಿ ಸಿದ್ದರಿಲ್ಲ. ವ್ಯವಸ್ಥೆ ಅಷ್ಟೊಂದು ಭಯ ಭೀತರನ್ನಾಗಿಸಿದೆ. ಅದನ್ನು ಮಾನಸಿಕ ದಾಸ್ಯಕ್ಕೆ ಗುರಿಯಾಗಿಸಿದೆ.

ಸಮುದಾಯ ಅನ್ನುವುದು ಅದೊಂದು ವಾಸನೆ. ಪ್ರಕೃತಿ ಧರ್ಮವಲ್ಲ. ಅದು ಲೌಕಿಕ ವ್ಯವಸ್ಥೆ. ಮನುಷ್ಯ ಪ್ರಜ್ಞೆ, ವರ್ಗ ಪ್ರಜ್ಞೆಯನ್ನು ಜಾಗೃತಗೊಳಿಸಿದಾಗ ಹುಟ್ಟಿಕೊಂಡದ್ದು ಋಗ್ವೇದದ ನಂತರ ಈ ದೇಶಕ್ಕೆ ಅಂದಿನ ಸಮುದಾಯ ಜಾಡ್ಯ ಸೆಕ್ಯೂಲರ್‌ಯಿಸಂನ ಮಾಡಿ ಮುಂದುವರಿಸ್ತಾಯಿದೆ. ದೇವಸ್ಥಾನ, ಮಠಗಳನ್ನು ಬಹಿಸ್ಕರಿಸುವುದರೊಳಗೆ ದಲಿತರನ್ನು ಪ್ರೀತಿಯಿಂದ

ಒಳಗೆ ಕರೆದುಕೊಳ್ಳಬೇಕು ಎಂಬ ಭಯ ಭರಿತ ಎಚ್ಚರಿಕೆ ಅವರಲ್ಲಿದೆ. ಆದರೆ ಪ್ರಶ್ನಿಸಿ ಎದ್ದು ನಿಲ್ಲುವ ಪ್ರಜ್ಞೆ ಮಾನಸಿಕ ಧೈರ್ಯ ಇವರಲ್ಲಿಲ್ಲ. ಇದಕ್ಕೆ ಕಾರಣ ಹುಡುಕ ಹೊರಟರೆ ಮತ್ತೆ ಮುಖ ಅದೇ ಅಧಿಕಾರಶಾಹಿ ವರ್ಗದ ಕಡೆಗೆ ನಿಲ್ಲುತ್ತದೆ.

ದೈವ ನಂಬಿಕೆ ಯಾವುದೋ ಒಂದು ರೀತಿಯಲ್ಲಿ ಇಲ್ಲದಿದ್ದರೆ ಮಾನವರಲ್ಲಿರುವ ಮೇಲು ಕೀಳುಗಳನ್ನು ಸಮರ್ಥಿಸುವುದಿಲ್ಲ. ಆದುದರಿಂದ ಮೂಢನಂಬಿಕೆಯಿಂದಲ್ಲದಿದ್ದರೂ ಪ್ರಕೃತಿಯ ಹೆಸರಿನಿಂದಲಾದರೂ ದೈವ ನಂಬಿಕೆಯನ್ನು ಉಳಿಸಿಕೊಳ್ಳಬೇಕೆಂದು ಕೆಲವರು ಪ್ರಯತ್ನಿಸುವರು. ಯಾಕೆಂದರೆ ಈ ಸಮುದಾಯ ವ್ಯವಸ್ಥೆ ಅಸಮಾನತೆ ಮತ್ತು ಪರಾಧೀನತೆಯನ್ನು ಮುಂದುವರೆಸಬಹುದು ಎಂಬ ದೂರಾಲೋಚನೆಯಿಂದ. ಆದರೆ ಸಮಾನತೆಯನ್ನು ಬಯಸುವವರು ಈ ಮೋಸದಲ್ಲಿಯ ಒಳಗುಟ್ಟನ್ನು ಗ್ರಹಿಸಬಲ್ಲರು. ಈ ರೀತಿ ದೈವ ಎಂಬ ಶಬ್ದ ಯಾವ ರೂಪದಲ್ಲಿ ಬಂದರೂ ಅದು ಸಮುದಾಯತೆಯನ್ನು, ಅಸಮಾನತೆಯನ್ನು, ಪರಾಧೀನತೆಯನ್ನು ಪೋಷಿಸುವುದು. ಮಾನವನನ್ನು ಸ್ವತಂತ್ರನನ್ನಾಗಿ ಇತರರೊಂದಿಗೆ ಸಮಾನನ್ನಾಗಿ ಮಾಡಬೇಕೆಂದರೆ ಸಮುದಾಯತೆ ಮತ್ತು ದೈವ ನಂಬಿಕೆ ಯಾವ ರೂಪದಲ್ಲಿಯೂ ಉಪಯೋಗಮಾಡುವುದಿಲ್ಲ. ಸಂಪೂರ್ಣವಾಗಿ ಸಮುದಾಯತೆ ತೊಲಗಬೇಕು. ನಾಸ್ತಿಕತೆ ಏರ್ಪಡಬೇಕು.

ವೇದಕ್ಕೆ ದಕ್ಕುವ ಗೌರವ ವೈಚಾರಿಕವಾದಿಗಳ ದೃಷ್ಟಿಯಲ್ಲಿ ಸಮುದಾಯತೆ, ಮಠಗಳಲ್ಲೇ ಮಠಾಧೀಶರಲ್ಲೇ ಸಮುದಾಯತೆ, ಅಸ್ಪೃಶ್ಯತೆ ಇರುವಾಗ ಅದನ್ನು ಗಮನಿಸಿದ ವೈಚಾರಿಕವಾದಿಗಳು ಖಾವಿಧಾರಿಗಳನ್ನು ಸಮುದಾಯವಾದಿಗಳು ಎಂದು ಹೇಳುವುದರಲ್ಲಿ ತಪ್ಪೇನು ಇಲ್ಲ. ಪ್ರಸ್ತುತ ಸಮಾಜದಲ್ಲಿ ಕೋಮುವಾದಕ್ಕೆ ಬಹುಮುಖ್ಯ ಕಾರಣ ಎರಡು. ಒಂದು ಖಾವಿ, ಇನ್ನೊಂದು ಖಾದಿ. ಎರಡೂ ಸ್ವಾರ್ಥಕ್ಕಾಗಿಯೇ ಮಾಡುವ ಕೆಲಸ. ಸಮಾಜವು ತನ್ನ ಸ್ವಾಸ್ಥ್ಯವನ್ನು ಕಳೆದುಕೊಂಡಿದೆ. ತಮ್ಮ ಸ್ವಾರ್ಥ, ಅಧಿಕಾರ, ಅಸ್ತಿತ್ವದ ಆಸೆಗಾಗಿ, ಕಾರಣಕ್ಕಾಗಿ ಕೋಮುವಾದವನ್ನು ಬಿತ್ತುವ, ಬೆಳೆಸುವ ಕೆಲವು ಮಠಾಧೀಶರು ಮತ್ತು ರಾಜಕಾರಣಿಗಳನ್ನು ಇಂದು ನೋಡಬಹುದು. ಒಡೆದಾಳುವ ನೀತಿ ಈ ಇಬ್ಬರಲ್ಲಿನ ಕೋಮುವಾದವೇ ಕಾರಣ. ಅಲ್ಲಲ್ಲಿ ಇರುವ ಒಬ್ಬೊಬ್ಬರು ಮಠಾಧೀಶರು ಮತ್ತು ರಾಜಕಾರಣಿಗಳನ್ನು ಈ ಕೋಮುವಾದಿಗಳ ಗುಂಪಿಗೆ ಸೇರಿದವರು ತಮ್ಮ ಅಡಿಯಾಳನ್ನಾಗಿಸಿಕೊಂಡು ಅವರನ್ನು ಸಹ ಜನ ಕೆಟ್ಟ ದೃಷ್ಟಿಯಿಂದ ನೋಡುವಂತೆ ಮಾಡುತ್ತದೆ.

ಕರ್ನಾಟಕದಲ್ಲಿ ಅಯ್ಯಾಗಳು ಅನ್ನೋ ಲೈಸೆನ್ಸ್ ಇದ್ರೆ ಸಾಕು ಏನು ಬೇಕಾದರೂ ಮಾಡಬಹುದು, ದಕ್ಕಿಸಿಕೊಳ್ಳಬಹುದು ಎಂದು ತಿಳಿದಿರುವ ಕೆಲವು ಮಠಾಧೀಶರು ತಮ್ಮ

ಭಾಷಣಗಳಲ್ಲಿ ಕೋಮುವಾದ ಬೇಡ ಬಸವಣ್ಣನ ತತ್ವ ಬೆಳೆಸಿ ಎಂದು ಸಾರುತ್ತಲೇ ಒಳಗೊಳಗೆ ಕೋಮುವಾದದ ಬೀಜ ಬಿತ್ತುತ್ತಿರುತ್ತಾರೆ. ಅದರಂತೆಯೇ ರಾಜಕಾರಣಗಳು ಬಹಿರಂಗ ಸಭೆ ಸಮಾರಂಭಗಳಲ್ಲಿ ಕೋಮುವಾದಿ ವಿರೋಧ ಭಾಷಣ ಮಾಡಿದ್ದರೂ ಸಂಜೆಯೊಳಗೆಲ್ಲ ಕೋಮುವಾದದ ಕಿಡಿ ಹೊತ್ತಿಸಿರುತ್ತಾರೆ. ಇವೆಲ್ಲಕ್ಕೂ ಪ್ರಸ್ತುತ ಸಮಾಜದಲ್ಲಿ ನಡೆಯುತ್ತಿರುವ ಗಲಭೆಗಳೇ ಜ್ವಲಂತ ಸಾಕ್ಷಿಗಳು. ಇದೆಲ್ಲಕ್ಕೂ ಅವರುಗಳ ಸ್ವಾರ್ಥವೇ ಮೂಲ.

'ಲಿಂಗ ಕಟ್ಟುವುದಾದರೆ ನಿಮ್ಮ ಸಮಾಧಾನಕ್ಕೆ, ಸಮುದಾಯ ದಳ್ಳುರಿಗೆ ಬೇಡ'. 'ಮತ' ಎನ್ನುವ ಕೋಮುವಾದವಿದೆ 'ಧರ್ಮದಲ್ಲಿ ಮಾನವೀಯತೆಯಿದೆ' ಎಂದು ಹೇಳುವ, ಪ್ರಗತಿಪರರು ಎಂದು ಕರೆದುಕೊಳ್ಳುವ ಕೆಲವು ಸ್ವಾಮೀಜಿಗಳನ್ನು ಒಳಗೊಂಡ ಎಲ್ಲಾ ಮಠಾಧೀಶರು, ಖಾವಿಧಾರಿಗಳು ಪ್ರಶ್ನಾತೀತರು ಎನ್ನುವ ಮನೋಭಾವನೆಯಲ್ಲಿ ಇನ್ನೂ ಜನರು ಬದುಕಿದ್ದಾರೆ. ಯಾಕೆ ಮಠಾಧೀಶರನ್ನು, ಸ್ವಾಮಿ ಎಂದು ಹೇಳಿಕೊಳ್ಳುವ ಖಾವಿಧಾರಿಗಳನ್ನು ಪ್ರಶ್ನಿಸಬಾರದೇ?. ಅವರು ಪ್ರಶ್ನಾತೀತರೇ?. ಹಾಗೆ ನೋಡಿದರೆ ಖಾದಿ, ಖಾವಿಯಲ್ಲೇ ಅಸ್ಪೃಶ್ಯತೆ, ಸಮುದಾಯತೆಯಿದೆ. ಇದು ಖಾದಿಗೂ ಅನ್ವಯಿಸುತ್ತದೆ. ಪ್ರಸ್ತುತ ಸಮಾಜದಲ್ಲಿನ ಗೊಂದಲಕ್ಕೆ ಸ್ವಾಮಿ ಮತ್ತು ಖಾದಿಧಾರಿಗಳೇ ಕಾರಣ.

ಮೊದಲು ಮಠಾಧೀಶರ ಮನಸ್ಥಿತಿ ಬದಲಾಗಬೇಕು. ಯಾಕೆಂದರೆ ಇನ್ನೂ ಸೈದ್ಧಾಂತಿಕ (ತತ್ವ, ಮಾರ್ಗ) ಅಸ್ಪೃಶ್ಯತೆಯಲ್ಲಿ ಖಾವಿಧಾರಿಗಳಿದ್ದಾರೆ. ನಾಟಕಕ್ಕೆ ಹೊಂದಿಕೊಂಡ ಸ್ವಾಮಿಗಳ ಮನಸ್ಥಿತಿಯೇ ಈ ಅಸ್ಪೃಶ್ಯತೆಗೆ ಕಾರಣ. ಕೋಮುವಾದಿ, ಸಮುದಾಯತೆ ನಡೆಯುವುದು ಮನುಷ್ಯರಿಂದ. ಮಠಾಧೀಶರು ಮನುಷ್ಯರಲ್ಲವೇ?. ನಿರಂತರ ಪ್ರತಿಭಟನೆಯಲ್ಲಿ ಕ್ರಿಯಾಶೀಲತೆಯಿಂದ ಸ್ಪಷ್ಟ ಬದಲಾವಣೆ ಸಾಧ್ಯ. ಆದರೂ ಮಠಾಧೀಶರು ತಮ್ಮ ಒಳಗಿನಿಂದಲೇ ಆರಂಭಿಸಬೇಕು. ದಲಿತರನ್ನು ಅರ್ಚಕರನ್ನಾಗಿ ಮಾಡಿಕೊಳ್ಳಲು ಅಥವಾ ಒಪ್ಪಿಕೊಳ್ಳುವ ಮನಸ್ಥಿತಿ ಇನ್ನೂ ಈ ಸಮಾಜಕ್ಕೆ ಸಾಧ್ಯವಾಗುತ್ತಿಲ್ಲ. ದಲಿತ ಅರ್ಚಕರನ್ನಾಗಿ ತೆಗೆದುಕೊಂಡಾಗ ತೀರ್ಥ ತೆಗೆದುಕೊಳ್ಳೋದು ಬಿಟ್ಟರು, ದೇವಸ್ಥಾನಕ್ಕೆ ಬರುವುದು ಬಿಟ್ಟರು, ಅಂತೆಲ್ಲ ಹೇಳಲಾಗುತ್ತದೆ. ಅಂದರೆ ಕೋಮುವಾದ, ಸಮುದಾಯತೆ, ಅಸ್ಪೃಶ್ಯತೆ ಇರುವುದು ಯಾರಲ್ಲಿ?. ಅವುಗಳನ್ನು ಹುಟ್ಟುಹಾಕಿ ಬೆಳೆಸುತ್ತಿರುವುದು ಯಾರು ಎಂಬುದಕ್ಕೆ ಮೇಲಿನ ಮಾತಿನಲ್ಲಿಯೇ ಉತ್ತರವಿದೆ. ಬದಲಾವಣೆಯನ್ನು ಒಪ್ಪಲು ಸಂಪ್ರದಾಯವಾದಿಗಳು ಸಿದ್ಧರಿಲ್ಲ. ನುಡಿಯಲ್ಲಿರುವ ಆಚಾರ ನಡೆಯಲ್ಲಿಲ್ಲ. ಸಮಾಜಕ್ಕೆ ಬೇಕಾದಂತೆ ಕಾಲಮಾನಕ್ಕೆ ತಕ್ಕಂತೆ ವಿಕಾಸಶೀಲ ಬದಲಾವಣೆಗೆ ಮುಂದಾಗಬೇಕಾದ ಮನಸ್ಥಿತಿಗಳೆ ಸಿದ್ಧವಿಲ್ಲ.

ನನ್ನದು ಎಂಬ ಸ್ವಾರ್ಥ ಆಲೋಚನೆಯಲ್ಲಿ ಹುಟ್ಟುವುದೆಲ್ಲ ಕೋಮುವಾದವೇ. ಗ್ರಾಮೀಣ ಭಾಗದಲ್ಲಿ ಇನ್ನೂ ಭೇದಭಾವಗಳಿಲ್ಲ. ಸಂಸ್ಕೃತಿ ಉಳಿದಿದೆ. ಇತ್ತೀಚೆಗೆ ಅಲ್ಲೂ ಕಲುಷಿತಗೊಳಿಸುವ

ಪ್ರಯತ್ನಗಳು ನಡೆದಿವೆ. ದಲಿತರನ್ನು ಮಠದೊಳಕ್ಕೆ ಬಿಟ್ಟುಕೊಳ್ಳಬೇಕಾದರೆ ಅವರಿಗೆ ಲಿಂಗದೀಕ್ಷೆಯಾಗಬೇಕಂತೆ. ಅಂದರೆ ಅದೊಂದು ರೀತಿಯ ಮತಾಂತರ. ಇಂದಿಗೂ ದಲಿತರನ್ನು ದಲಿತರನ್ನಾಗಿಯೇ ಮಠದೊಳಗೆ ಬಿಟ್ಟುಕೊಳ್ಳಲು ಆಗಿಲ್ಲ. ಪ್ರಶ್ನಿಸಿದರೆ ಅದಕ್ಕವರು ನೀಡುವ ವಿವರಣೆ ಹೀಗಿದೆ. ಮತಾಂತರ(ದೀಕ್ಷೆ) ಮೌಲ್ಯಕ್ಕೆ ಹೊರತು ಮತಕ್ಕಲ್ಲ. ಅದಕ್ಕಾಗಿ ಕನಿಷ್ಟ ನಾಲ್ಕು ಧರ್ಮಗಳನ್ನು ಅನುಸರಿಸಲೇಬೇಕು. ಒಂದು: ಜೀಸಸ್‌ಧರ್ಮವನ್ನು. ಅದು ಬಾಲ್ಯಾವಸ್ಥೆಯಲ್ಲಿ. ಎರಡು: ಬಸವಣ್ಣ, ಮಹಮ್ಮದ್ ಪೈಗಂಬರ್ ಅದು ಯೌವನಾವಸ್ಥೆಯಲ್ಲಿ. ಮೂರು: ಹಿಂದೂ ವೇದಾಂತವನ್ನು ಅದು ಮಧ್ಯಮ ವಯಸ್ಸಿನಲ್ಲಿ. ನಾಲ್ಕು: ಬುದ್ಧನ ಬೌದ್ಧಧರ್ಮವನ್ನು ಅದು ಬದುಕಿನ ಇಳಿಗಾಲದಲ್ಲಿ ಜ್ಞಾನಾರ್ಜನೆಗಾಗಿ. ಇವೆಲ್ಲವನ್ನು ನೋಡಲು, ಆಚರಿಸಲು ಚರ್ಚ್–ಮಸೀದಿ ಮಂದಿರಗಳಿಗೆ ಹೋಗಬೇಕಿಲ್ಲ. ಸಮುದಾಯದೊಳಗೇನೆ ಇದ್ದು ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. ಮೌಲ್ಯಗಳಿಗಾಗಿ ಮತಾಂತರ ನಿಜವಾದ ಧರ್ಮ ಎಂಬುದಾಗಿ ಪ್ರವಚನ ನೀಡುತ್ತಾರೆ. ಇಂದಿನ ಸಮಾಜದಲ್ಲಿ ರಾಜಕೀಯ ಕಾರಣಗಳಿಗಿಂತ ಧಾರ್ಮಿಕ ಕಾರಣಗಳಿಗೆ ನಡೆಯುತ್ತಿವೆ ಹೆಚ್ಚಿನ ಗಲಭೆ, ಯುದ್ಧಗಳು.

ಸ್ತ್ರೀಗೆ ಶಿಕ್ಷಣ ಬೇಡ ಎನ್ನುವುದು(ಗೃಹದಾಸಿ) ಸಹ ಕೋಮುವಾದ ಮತ್ತು ಉಗ್ರವಾದಿ ಮನಸ್ಥಿತಿ. ಸರ್ವ ಸಂಘ ಪರಿತ್ಯಾಗಿ ಅಂದರೆ ನಿನ್ನ ಶ್ರಮವನ್ನು ಸಮಾಜಕ್ಕಾಗಿ ಬಳಸು ಎಂದೇ ಹೊರತು ಧರ್ಮವನ್ನೂ, ಸಮುದಾಯವನ್ನು ತ್ಯಜಿಸು ಅಂತ ಅಲ್ಲ ಎಂದು ಹೇಳುವ ಪ್ರಗತಿಪರ ಎಂದುಕೊಂಡ ಮಠಾಧೀಶರು, ಸಮುದಾಯವನ್ನು ಧರ್ಮವನ್ನು ಬಿಡಲು ಒಪ್ಪದ ಮನಸ್ಥಿತಿಯವರು. ಇನ್ನೂ ಸ್ತ್ರೀ ಶಿಕ್ಷಣ ದೂರ ಉಳಿಯಿತು. ಇದೆಲ್ಲದರ ಮಧ್ಯೆ ರಾಜ್ಯದ ನಾನಾ ಭಾಗಗಳಲ್ಲಿ ಮಹಿಳಾ ಮಠಗಳು ತಲೆಯೆತ್ತಿವೆ. ಅದಕ್ಕೆ ಅನೇಕ ಕಾರಣಗಳಿವೆ. ಅವರೆಲ್ಲ ಸಾಂಸಾರಿಕ ವೈರಾಗ್ಯ ಮತ್ತು ಅನೇಕ ಕಾರಣಗಳಿಂದಾಗಿ ಸಮಾಜದಲ್ಲಿ ಅಲಕ್ಷಿತಗೊಂಡವರು.

ಸ್ವಾಮಿಗಳ ಸೃಷ್ಟಿ, ಸಮಾಜವನ್ನು ಸುಸಂಸ್ಕೃತ ಮಾರ್ಗದಲ್ಲಿ ನಡೆಸಲು ಹೊರತು, ಪಲ್ಲಕ್ಕಿಯಲ್ಲಿ ಮೆರವಣಿಗೆ ಮಾಡಿಸಿಕೊಳ್ಳಲು ಅಲ್ಲವೆಂಬುದನ್ನು ಮರೆತ ಅನೇಕರು ಮಾರ್ಗತೋರುವುದೊಂದನ್ನು ಬಿಟ್ಟು ಉಳಿದ ವೈಭವವನ್ನು ಅನುಭವಿಸುತ್ತಿದ್ದಾರೆ. ಖಾವಿ ಎಂಬುದು ತ್ಯಾಗದ ಸಂಕೇತ. ಆದರೆ ಇಂದು ಅದು ಭೋಗದ ಸಂಕೇತವಾಗಿದೆ. ಯಾವುದೇ ಒಂದು ಸಮುದಾಯ ತನ್ನ ವೃತ್ತಿಯನ್ನು ಕಾಪಾಡಿಕೊಂಡರೆ ಅದು ತಪ್ಪಲ್ಲ. ಆದರೆ ಅದು ಮತ್ತೊಂದು ಸಮುದಾಯ ತನ್ನ ಅಧೀನದಲ್ಲಿರಬೇಕು ಎಂದು ಬಯಸುವುದು ಮಾತ್ರ ತಪ್ಪು. ಅದಲ್ಲದೆ ಇಂದಿನ

ಮಠಗಳು, ಮಠಾಧೀಶರು ರಾಜಕಾರಣಿಗಳ ರಕ್ಷಣೆಯ ಕವಚಗಳಾಗಿ, ಹಣ ಸಂಗ್ರಹಿಸುವ ಕೇಂದ್ರಗಳಾಗಿ ಕಪ್ಪುಹಣ ರಕ್ಷಣೆಯ ಸ್ವಿಸ್ ಬ್ಯಾಂಕ್ ರೀತಿಯಲ್ಲಿ ಕೆಲಸ ಮಾಡುತ್ತಿವೆ.

ಪ್ರಜಾಪ್ರಭುತ್ವದಲ್ಲಿನ ಅವಕಾಶಗಳಿಂದ ಆಯ್ಕೆಯಾದ ಬಹುತೇಕ ರಾಜಕಾರಣಿಗಳು ತಾವು ಸಂಪಾದಿಸಿದ ಅಕ್ರಮ ಹಣ ಹಾಗೂ ಆಸ್ತಿಗಳ ರಕ್ಷಣೆಗೆ ಬಳಸಿಕೊಳ್ಳುತ್ತಿರುವುದು ಪ್ರಸ್ತುತ ನಡೆಯುತ್ತಿದೆ. ಸಮುದಾಯದ ಏಳಿಗೆಗಾಗಿ, ಉತ್ತಮ ಸಮಾಜದ ನಿರ್ಮಾಣದ ಕನಸು ಹೊತ್ತು ಸ್ಥಾಪನೆಗೊಂಡ ಮಠಗಳು, ಪೀಠಾಧಿಪತಿಗಳು ಸಮಾಜಮುಖಿ ಕಾರ್ಯಗಳ ಕಡೆ ಗಮನ ಹರಿಸದೇ ಕೆಲವೇ ಕೆಲವು ಸ್ವಾರ್ಥಪರರ, ರಾಜಕಾರಣಿಗಳ ಹಿತಾಸಕ್ತಿಗೋಸ್ಕರ ಇರುವುದು ನಮ್ಮ ಸಮುದಾಯಗಳ ದುರಂತವೇ ಸರಿ.

ಮಠಗಳು ಅಕ್ಷರವಂಚಿತ ಜನತೆಗೆ ಅಕ್ಷರ ಜ್ಞಾನವನ್ನು ಹಸಿದವರಿಗೆ ಅನ್ನದಾಸೋಹವನ್ನು ನೀಡುವಂತಹ ಮಹತ್ವದ ಕಾರ್ಯಮಾಡುತ್ತಿವೆಯಾದರೂ ಸೂಕ್ಷ್ಮವಾಗಿ ಗಮನಿಸಿದರೆ, ಈ ಮಠ ಸಂಸ್ಕೃತಿ ಒಂದರ್ಥದಲ್ಲಿ ಸಮಾನತೆಯ ತತ್ವಕ್ಕೆ ವಿರೋಧಿಯಾಗಿಯೇ ರೂಪುಗೊಳ್ಳುತ್ತಿವೆ. ಒಂದು ಸಮುದಾಯದ ಹಿಂದೆ ನಿರ್ಮಿತವಾದ ಈ ಮಠಗಳು ಆ ಸಮುದಾಯದವರಲ್ಲಿಯೇ ಮೇಲು ಕೀಳುಗಳ ಸ್ತರಗಳನ್ನು ಉಂಟುಮಾಡುತ್ತಿದೆ. ಈ ಮಠದ ಕಲ್ಪನೆಯಲ್ಲಿ ಒಂದು ಯಜಮಾನ್ಯ ಸಂಸ್ಕೃತಿ ಮತ್ತು ಅಧೀನ ಸಂಸ್ಕೃತಿಯನ್ನು ಹುಟ್ಟು ಹಾಕುತ್ತದೆ. ಮಠದ ಪೀಠಾಧಿಪತಿ ಆದವರ ಆಜ್ಞೆ ಆದೇಶಗಳನ್ನು ಸಮುದಾಯದ ಇತರ ಜನ ಪಾಲಿಸಬೇಕಾಗುತ್ತದೆ. ಹಾಗಾಗಿ ಮಠದ ಅಸ್ಥಿತ್ವವೂ ಕೂಡಾ ಸರ್ವರಿಗೂ ಸಮಬಾಳು ಎಂಬ ಸಮಾನತೆಯ ತತ್ವಕ್ಕೆ ವಿರೋಧವೇ ಆಗಿದೆ.

ಜನನ, ಉಪನಯನ, ಮದುವೆಯಂತಹ ಜೀವನಾವರ್ತನದ ಆಚರಣೆಗಳ ಸಂದರ್ಭದಲ್ಲಿ ಗುರುಪೀಠದವರ ಮುಂದಾಳತ್ವದಲ್ಲಿಯೇ ಅವುಗಳನ್ನು ನಡೆಸುವರು. ಗುರುಪೀಠದವರಿಂದಲೇ ದೀಕ್ಷೆಯನ್ನು ಕೊಡಿಸುವಂತಹದ್ದು ಕಂಡುಬರುತ್ತದೆ. ಇದು ಸಮುದಾಯ ಒಂದರಲ್ಲಿಯೇ ಶ್ರೇಷ್ಠ ಕನಿಷ್ಠ ಎಂಬ ಭಾವನೆಯನ್ನು ಬಿತ್ತರಿಸುವ ನೀತಿಯೂ ಆಗಿ ಪರೋಕ್ಷವಾಗಿ ನಡೆಯುತ್ತಿರುತ್ತದೆ.

ಇವತ್ತಿನ ಪ್ರಜ್ಞಾವಂತರು ಸಮುದಾಯದ ಸಮಸ್ಯೆಗಳನ್ನು ಅರಿತುಕೊಂಡಿದೆಯಾದರೂ ಮತ್ತಷ್ಟು ಸಮುದಾಯತೆಯನ್ನು ಕಟ್ಟುವ, ಸೃಷ್ಟಿಸುವ ಅಪಾಯಕಾರಿ ಹೆಜ್ಜೆ ಹಾಕುತ್ತಿದೆ. ಅದಕ್ಕೆ ಇವತ್ತು ಸಮುದಾಯಕ್ಕೊಂದು ಮಠಗಳು ತಲೆಯೆತ್ತಿ ನಿಂತಿರುವುದೇ ಸಾಕ್ಷಿಯಾಗಿದೆ. ಮೇಲ್ವರ್ಗದವರ ಹಿಡಿತದಿಂದ ತಪ್ಪಿಸಿಕೊಳ್ಳಬೇಕೆಂಬ ಎಚ್ಚರಿಕೆಯಿಂದಲೇ ಅಲಕ್ಷಿತ ಮಠಗಳು ಹುಟ್ಟಿಕೊಂಡವಾದರೂ

ತಮ್ಮ ಸಮುದಾಯದ ನಡುವೆಯೇ ಒಳ ಬೇಧಗಳನ್ನು ಸೃಷ್ಟಿಸುವ ಅಪಾಯಕಾರಿ ಹೆಜ್ಜೆಯನ್ನು ಇಡುತ್ತಿವೆ.

ಮಠಗಳ ನಿರ್ಮಾಣ ಮತ್ತು ಅದರ ಕಾರ್ಯಾಚರಣೆಯಲ್ಲಿ ಶ್ರೇಣೀಕರಣದ ವ್ಯವಸ್ಥೆ ಇರದೆ ಎಲ್ಲರೂ ಸಮಾನರು ಎಂಬ ಶರಣತತ್ವ ಅಳವಡಿಸಿಕೊಂಡರೆ ಒಳ್ಳೆಯದು. ಇಲ್ಲದಿದ್ದರೆ ಮೇಲ್ವರ್ಗದ ಮಠಗಳಂತೆ ಅಲಕ್ಷಿತರ ಮಠದಲ್ಲೂ ಅದಕ್ಕೊಬ್ಬ ಮಠಾಧೀಶರನ್ನು ಮಾಡುವುದು ಆ ಮಠಾಧೀಶ ಸಾಮಾನ್ಯ ಜನರಿಗಿಂತ ವ್ಯತಿರಿಕ್ತವಾದ ರೀತಿಯಲ್ಲಿ ಐಶ್ಯಾರಾಮಿ ಜೀವನ ಸಾಗಿಸುವುದಾದರೆ ಅಲಕ್ಷಿತರ ಮಠಗಳು ನಿರ್ಮಾಣದ ಅವಶ್ಯಕತೆಯಾದರೂ ಏನು? ಎಂಬ ಪ್ರಶ್ನೆಯೂ ಎದುರಾಗದೆ ಇರಲಾರದು.

ಮಠಕ್ಕೆ ಸಮುದಾಯ ಮುನ್ನಡೆಸುವ ಒಬ್ಬ ನೇತಾರ ಬೇಕೆಂಬುದು ತಪ್ಪಲ್ಲ. ಆದರೆ ಆ ನೇತಾರನಿಗೆ ಸಮುದಾಯದ ಏಳಿಗೆಯೇ ಮುಖ್ಯ ಕಾಳಜಿಯಾಗಿರಬೇಕಾಗುತ್ತದೆ. ಮತ್ತು ಆ ಮುಖಂಡ ಜನಸಾಮಾನ್ಯರಂತೆಯೇ ಸರಳ ಜೀವನ ನಡೆಸುವ ಮತ್ತು ಜನರೊಟ್ಟಿಗೆ ಬೆರೆತು ಅವರ ಸಮಸ್ಯೆಗಳಿಗೆ ಸ್ಪಂದಿಸುವ ರೀತಿಯಲ್ಲಿರಬೇಕು. ಅಂದಾಗ ಮಾತ್ರ ಈ ಅಲಕ್ಷಿತ ಮಠಗಳ ಅಸ್ತಿತ್ವಕ್ಕೊಂದು ಮಹತ್ವವಿರುತ್ತದೆ.

ಅಧ್ಯಾಯ: ಎಂಟು

ಸಮಾರೋಪ

ಅಧ್ಯಯನದ ಫಲಿತಗಳು

ಅಧ್ಯಾಯ: ಎಂಟು

ಸಮಾರೋಪ

ಭಾರತವು ಹಲವು ಧರ್ಮ, ಸಮುದಾಯ, ಭಾಷೆ, ಸಂಸ್ಕೃತಿಗಳ ನಾಡು ಎನಿಸಿದೆ. ಅದು ವಿವಿಧತೆಯಲ್ಲಿ ಏಕತೆಯನ್ನು ಅಥವಾ ಭಾವೈಕ್ಯತೆಯನ್ನು ಸಾಧಿಸಲು ಶತಶತಮಾನಗಳಿಂದಲೂ ಅವಿರತವಾಗಿ ಪ್ರಯತ್ನ ನಡೆಸುತ್ತಲೇ ಬಂದಿದೆ. ಆದರೂ ಧಾರ್ಮಿಕ ಮತ್ತು ಸಾಮಾಜಿಕ ಅಂಧಶ್ರದ್ಧೆ, ಕಂದಾಚಾರ, ಮೂಢನಂಬಿಕೆಗಳು ಹೆಚ್ಚಿವೆ; ಮನುಷ್ಯ ಸಂಬಂಧಗಳ ನಡುವೆ ಅಂತರ ಏರ್ಪಟ್ಟಿವೆ. ಧರ್ಮ ಎಂಬುವುದು ಮೇಲ್ವರ್ಗದವರ ಸ್ವತ್ತಾಗಿದೆ. ಅವರೇ ರೂಪಿಸಿದಂತಹ ಧಾರ್ಮಿಕ ಕಂದಾಚಾರಗಳು ಶೋಷಣೆಯ ನೆಲೆಗಳು ಆಗಿವೆ. ಪುರೋಹಿತಶಾಹಿಗಳು ದೇವರು ಮತ್ತು ಧರ್ಮದ ಹೆಸರಿನಲ್ಲಿ ಶತ-ಶತಮಾನಗಳಿಂದಲೂ ವಂಚಿಸುತ್ತ ಬಂದಿದ್ದಾರೆ. ಹೀಗಾಗಿ ಸಮಾಜದಲ್ಲಿ ಮೇಲು-ಕೀಳು ಅಸ್ಪೃಶ್ಯವೆಂಬ ವರ್ಗವೇ ಸೃಷ್ಟಿಯಾಯಿತು. ಹೀಗೆ ವಂಚಿಸುತ್ತಾ ಸಾಗಿದ ಮಾನವನಿಗೆ ಈ ಸಾಮಾಜಿಕ ಬದುಕಿನ ಸುಖ ಮತ್ತು ನೆಮ್ಮದಿ ಪ್ರಮುಖವೆನಿಸುತ್ತವೆ. ಇಂತಹ ಸುಖವನ್ನು ಲಭ್ಯವಿರುವ ಸೌಲಭ್ಯಗಳನ್ನು ಬಳಸಿಕೊಂಡು ಭೋಗಿಸಿ ಪಡೆಯುವುದಾದರೆ, ನೆಮ್ಮದಿ ಸಂಬಂಧಗಳಿಂದ ಸೃಷ್ಟಿಯಾಗುವ ಯಾದೃಚ್ಛಿಕ ಅನುಭವವಾಗಿದೆ. ಮಾನವನು ತನ್ನ ಬದುಕನ್ನು ಕಟ್ಟಿಕೊಳ್ಳುವ ಮತ್ತು ಅನುಭವಿಸುವ ಸಾಮಾಜಿಕ ಕೌಶಲ್ಯದಿಂದಾಗಿ ನೆಮ್ಮದಿಯನ್ನು ಕಂಡುಕೊಳ್ಳತೊಡಗಿದ. ಇಲ್ಲಿ ಕೌಟುಂಬಿಕ ಸಂಬಂಧಗಳಲ್ಲಿ ದೇವರು, ದೈವ, ಆಚರಣೆಗಳು, ನಂಬಿಕೆ ಮತ್ತು ನಿಷೇಧಗಳು ಆತನ ಇಡೀ ಬದುಕಿಗೆ ಒಂದು ಸೈದ್ಧಾಂತಿಕ ಚೌಕಟ್ಟನ್ನು ನಿರ್ಮಿಸಿದವು. ಇಂತಹ ಬದುಕಿನ ಚೌಕಟ್ಟಿನಾಚೆ ತಮ್ಮನ್ನು ವಿಸ್ತರಿಸಿಕೊಂಡು ಹೆಚ್ಚಿನ ನೆಮ್ಮದಿ ಮತ್ತು ಸಾಮಾಜಿಕ ಸ್ಥಾನ ಹಾಗೂ ಸಂರಕ್ಷಣೆಯನ್ನು ಪಡೆಯಲು ಅಪೇಕ್ಷಿಸಿದ. ಈ ಅಪೇಕ್ಷಿತ ಪಯಣದ ಒಂದು ಹಂತವಾಗಿ ಹಿಂದೂಗಳ ಆಧ್ಯಾತ್ಮದ ಇತ್ತೀಚಿನ ಅತ್ಯಂತ ಉದಾತ್ತ ಬೆಳವಣಿಗೆಯಾದ ಸಂಸ್ಥೆಯೇ ಆಶ್ರಮ-ಸನ್ಯಾಸಿಗಳ ತಾಣ. ಪ್ರಾಪಂಚಿಕ ಆಸೆಗಳನ್ನು ತ್ಯಜಿಸಿ ದೈವ ಸಾಕ್ಷಾತ್ಕಾರಕ್ಕಾಗಿ ತಮ್ಮನ್ನು ಸಮರ್ಪಿಸಿಕೊಂಡ ಸನ್ಯಾಸಿಗಳ ತಾಣವೇ ಮಠ. ಇದು

ತಪಸ್ಸಿನ ಜ್ಞಾನಾನ್ವೇಷಣೆಯ ಧಾರ್ಮಿಕ ಕೇಂದ್ರ. ಕ್ರಮೇಣ ಆಶ್ರಮ, ಗುರುಮನೆ, ಗುರುಕುಲಗಳಾಗಿ ಕಾಲ ಕಳೆದಂತೆ ಇದು ವಿದ್ಯಾಪ್ರಸಾರ, ಜ್ಞಾನಪ್ರಸಾರ, ಮತ ಪ್ರಸಾರ ಕೇಂದ್ರಗಳಾಗಿ ಬೆಳೆದಿವೆ. ಪ್ರಾಚೀನ ಕಾಲದಿಂದಲೂ ವಿದ್ಯಾಭ್ಯಾಸಕ್ಕೂ ಮತ್ತು ಗುರುಕುಲಗಳಿಗೂ ನಿಕಟ ಸಂಬಂಧವಿರುವುದನ್ನು ಪುರಾಣೇತಿಹಾಸ ಕಾಲದಿಂದ ಕಾಣುತ್ತಾ ಬಂದಿದ್ದೇವೆ. ಗುರುಕುಲಗಳ ಅಗ್ರಹಾರ, ಘಟಿಕಾಸ್ಥಾನ ಹಾಗೂ ಬ್ರಹ್ಮಪುರಿ ಮುಂತಾದವುಗಳ ಬಗೆಗೆ ಶಾಸನಗಳಲ್ಲಿ ಉಲ್ಲೇಖಗಳಿರುವುದನ್ನು ಗಮನಿಸಬಹುದಾಗಿದೆ. ಗುರುಕುಲ ಪದ್ಧತಿ ವಿದ್ಯಾಭ್ಯಾಸ ವೈದಿಕ ಕಾಲ ಹಾಗೂ ರಾಮಾಯಣ, ಮಹಾಭಾರತ, ಪುರಾಣಗಳಲ್ಲಿ ಇದ್ದುದು ಮುಂದುವರೆದು ಇತ್ತೀಚಿನ ದಿನಗಳಲ್ಲೂ ಇನ್ನೂ ಅಸ್ತಿತ್ವದಲ್ಲಿರುವುದನ್ನು ಕಾಣುತ್ತೇವೆ.

ವೈದಿಕ, ಜೈನ, ಶೈವ ಈ ಪ್ರಮುಖ ಧರ್ಮಗಳು ಧರ್ಮಾಚರಣೆಗಾಗಿ ಮಠಗಳನ್ನು ಕಟ್ಟಿದವು. ಮಠಗಳನ್ನು ಹೋಲುವ ಧರ್ಮಛತ್ರ, ವಿದ್ಯಾಕೇಂದ್ರ, ಆಧ್ಯಾತ್ಮಿಕ ಕೇಂದ್ರ, ವಿಹಾರ, ದೇವಾಲಯ ಮುಂತಾದವುಗಳು ವಿವಿಧ ಧರ್ಮಗಳಲ್ಲಿ ಹುಟ್ಟಿಕೊಂಡವು. ಅವುಗಳ ಮುಖ್ಯಸ್ಥರಾಗಿ ಧರ್ಮಗುರುಗಳು ನೈತಿಕ ಜೀವನವನ್ನು ನಡೆಸುತ್ತಾ ಆಯಾ ಧರ್ಮದ ಅನುಯಾಯಿಗಳಿಗೆ ಪಾರಮಾರ್ಥಿಕ ಮಾರ್ಗದರ್ಶನ ಮಾಡುತ್ತಲಿದ್ದರು. ಈ ಮಠಗಳು ಪ್ರಾಚೀನ ಕಾಲದಿಂದ ಇಂದಿನವರೆಗೂ ನಡೆದುಕೊಂಡು ಮಹತ್ತರ ಸಾಧನೆ ಮಾಡಿರುವುದನ್ನು ಕಾಣಬಹುದು.

ರಾಮಾಯಣದಲ್ಲಿ ಕರ್ನಾಟಕದ ನಾನಾ ಸ್ಥಳಗಳಲ್ಲಿ ಋಷಿಮುನಿಗಳು ತಪಸ್ಸು ಮಾಡಿಕೊಂಡಿದ್ದರೆಂದು ತಿಳಿದುಬರುತ್ತದೆ. ಇವುಗಳ ಜೊತೆಗೆ ಬೌದ್ಧವಿಹಾರಗಳು, ಸಂಘರಾಮಗಳು, ಜೈನ ವಸತಿ(ಬಸದಿ–ಬಸ್ತಿ)ಗಳು ಇದ್ದವು. ಬೌದ್ಧ ಮತ್ತು ಜೈನರ ವಿಹಾರಗಳು ಸುಮಾರು ಇಂದಿನ ಮಠದ ಸ್ವರೂಪವನ್ನೇ ಹೊಂದಿದ್ದವು. ಕ್ರಿಸ್ತಶಕ ಆರಂಭದ ಆಸುಪಾಸಿನ ಶತಮಾನಗಳಲ್ಲಿ ಶ್ರವಣಬೆಳಗೊಳ ಜೈನಧಾರ್ಮಿಕ ಕೇಂದ್ರವಾಗಿತ್ತೆಂದು ಜೈನ ಗ್ರಂಥಗಳಿಂದಲೂ, ಕ್ರಿ.ಪೂ.೩ನೆಯ ಶತಮಾನದಲ್ಲಿಯೇ ಅಶೋಕ ಮಹಿಷಮಂಡಲಕ್ಕೆ ಧರ್ಮ ಪ್ರಚಾರಕರನ್ನು ಕಳುಹಿಸಿದನೆಂದು ಬೌದ್ಧ ಮೂಲಗಳಿಂದಲೂ ತಿಳಿದುಬರುತ್ತದೆಯಾದ್ದರಿಂದ, ಈ ಕಾಲದಲ್ಲಿ ಅವರ ವಿಹಾರ ಮಠಗಳು ಇದ್ದಿರಬೇಕೆಂದು ಊಹಿಸಬಹುದು.

ಎಂಟನೆಯ ಶತಮಾನದ ಕೊನೆಯವರೆಗೂ ಜೈನ, ಬೌದ್ಧ ಸಂನ್ಯಾಸಿಗಳಲ್ಲದೆ, ಕಾಳಾಮುಖರು, ಕಾಪಾಲಿಕರು, ಪಾಶುಪತರು ಶಿವಾಲಯಗಳಲ್ಲಿ ವಾಸಿಸುತ್ತಿದ್ದರು. ಆದರೆ ಮಠಗಳ ಅಗತ್ಯವನ್ನು ಗ್ರಹಿಸಿ ಇಂಡಿಯಾ ದೇಶದ ನಾಲ್ಕು ದಿಕ್ಕುಗಳಲ್ಲಿಯೂ ಮಠಗಳನ್ನು ಸ್ಥಾಪಿಸಿದ ಯಶಸ್ಸು ಶ್ರೀ ಶಂಕರಾಚಾರ್ಯರಿಗೆ ಹೋಗುತ್ತದೆ. ಹಿಂದೂ ಧರ್ಮದ ತತ್ತ್ವಗಳನ್ನು ಜನರಿಗೆ ತಿಳಿಸಲು ಅನೇಕ ಸ್ಥಳಗಳಲ್ಲಿ ಮಠಗಳು ಸ್ಥಾಪಿತವಾದವು.

ಒಂದು ಕಾಲದಲ್ಲಿ ಕೆಲವು ಸಮುದಾಯಗಳು ತಮ್ಮ ಧಾರ್ಮಿಕ ಮತ್ತು ಸಾಂಸ್ಕೃತಿಕ ಅಸ್ಮಿತೆಗಾಗಿ ಸ್ಥಾಪಿಸಿಕೊಂಡ ಧಾರ್ಮಿಕ ಕೇಂದ್ರಗಳೆಲ್ಲವೂ ಮಠಗಳಾಗಲಾರವು. ಅವು ಮಠಗಳಾಗಿದ್ದರೆ, ಈ ಮಠಗಳೂ ಸಹ ಇತರೆ ಮಠಮಾನ್ಯಗಳಂತೆ ಕೇವಲ ಪೂಜೆ, ಯಜ್ಞಯಾಗಗಳನ್ನು ನಡೆಸುವ ಕೇಂದ್ರವಾಗದೇ, ಸಮುದಾಯವನ್ನು ಇಂದಿನ ಸ್ಪರ್ಧಾತ್ಮಕ ಜಗತ್ತನ್ನು ಎದುರಿಸಿ ನಿಲ್ಲುವ ಸದೃಢರನ್ನಾಗಿ ನಿರ್ಮಿಸುವ ತರಬೇತಿ ಕೇಂದ್ರಗಳಾಗಿ ಬೆಳೆಯಬೇಕಾಗಿದೆ. ಇದಕ್ಕೆ ಬಹುಮುಖ್ಯವಾಗಿ ಬೇಕಾದ ಶಿಕ್ಷಣವನ್ನು ತನ್ನ ಸಮುದಾಯಕ್ಕೆ ಕೊಡಿಸುವ ಜ್ಞಾನಕೇಂದ್ರಗಳಾಗಿ ಮಠಗಳು ರೂಪುಗೊಳ್ಳಬೇಕಿದೆ. ಸಾಮಾಜಿಕವಾಗಿ, ಧಾರ್ಮಿಕವಾಗಿ ತುಳಿತಕ್ಕೊಳಪಟ್ಟಿರುವ ಅನೇಕ ಅಲಕ್ಷಿತ ಸಮುದಾಯಗಳು ಇಂದು ಹೊಸ ಆಲೋಚನಾಕ್ರಮಗಳು ಬದುಕಿನ ಬದಲಾವಣೆ ಹಾಗೂ ಸಾಮಾಜಿಕ ಸಮಾನತೆಯ ಬದುಕಿನ ಚಿಂತನೆಗಳನ್ನು ನಡೆಸುತ್ತಿದ್ದಾರೆ. ಬುದ್ಧ, ಬಸವಣ್ಣ, ಗಾಂಧಿ, ಅಂಬೇಡ್ಕರ್ ಅಂತಹ ಅನೇಕ ಮಾನವತಾವಾದಿಗಳ ಚಿಂತನೆ, ವಿಚಾರಧಾರೆಗಳು ಈಗಲಾದರೂ ಅರ್ಥೈಸುವ ನಿಟ್ಟಿನಲ್ಲಿ ಅಲಕ್ಷಿತ ಸಮುದಾಯಗಳು ಸಾಗುತ್ತಿವೆ ಎನ್ನಬಹುದು.

ಈ ಎಲ್ಲ ಅಲಕ್ಷಿತ ಸಮುದಾಯಗಳು ಶತಶತಮಾನಗಳಿಂದಲೂ, ಧಾರ್ಮಿಕ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕವಾಗಿ ದೂರ ತಳ್ಳಲ್ಪಟ್ಟವೂ, ಪ್ರಸ್ತುತ ಸಂದರ್ಭದಲ್ಲಿ ಇಂತಹ ಅಲಕ್ಷಿತ ಸಮುದಾಯಗಳು ತಮ್ಮದೇ ಆದಂತಹ ಗುರುಪೀಠಗಳನ್ನು ಸ್ಥಾಪಿಸುವ ನಿಟ್ಟಿನಲ್ಲಿ ಹೆಜ್ಜೆಹಾಕಿವೆ. ಈಗಾಗಲೇ ಹಲವು ಅಲಕ್ಷಿತ ಸಮುದಾಯದ ಮಠಗಳಾದ ಬೇಡ, ಬೆಸ್ತ, ಮಡಿವಾಳ, ಗೊಲ್ಲ, ಭೋವಿ, ಮಾದಿಗ, ಉಪ್ಪಾರ, ಕುರುಬ ಮುಂತಾದ ಮಠಗಳು ಸ್ಥಾಪನೆಗೊಂಡಿವೆ. ಇಂತಹ ಅಲಕ್ಷಿತ ಸಮುದಾಯದ ಮಠಗಳು, ಸಮುದಾಯದ ಸಾಂಸ್ಕೃತಿಕ ಅನನ್ಯತೆ, ಧಾರ್ಮಿಕ ಹಾಗೂ ಸಾಂಪ್ರದಾಯಿಕ ಅನನ್ಯತೆಯ ಸಂರಕ್ಷಣೆ ಮತ್ತು ಅವುಗಳನ್ನು ಸರಿಯಾದ ರೀತಿಯಲ್ಲಿ ಅರ್ಥೈಸುವ ಮೂಲಕ ಸಮುದಾಯದ ಸ್ವಾಸ್ಥ್ಯವನ್ನು ಕಾಪಾಡಬೇಕಾಗಿದೆ.

ಒಟ್ಟಿನಲ್ಲಿ ಅಲಕ್ಷಿತ ಸಮುದಾಯಗಳು ತಮ್ಮ ಸಮುದಾಯಗಳನ್ನು ಮಠಗಳನ್ನು ಸ್ಥಾಪಿಸಿಕೊಳ್ಳುವುದರ ಮೂಲಕ ಸಾಮಾಜಿಕ ಸಮಾನತೆ, ಆರ್ಥಿಕ ಸಮಾನತೆ, ಶೈಕ್ಷಣಿಕ ಸಮಾನತೆ ಎಡೆಗೆ ಸಾಗಲು ಪ್ರಯತ್ನಿಸುತ್ತಿವೆ. ಧಾರ್ಮಿಕ ಸಮಾನತೆ ಈ ಹಿನ್ನೆಲೆಯಲ್ಲಿ ಅಸ್ತಿತ್ವಕ್ಕೆ ಬರುತ್ತಿರುವ ಈ ಮಠಗಳ ಸ್ಥಿತಿಗತಿಗಳಿಂದ ಮತ್ತು ಅವುಗಳ ಮುಂದಿನ ಕಾರ್ಯಯೋಜನೆಗಳನ್ನು ಮುಂದಿನ ಸಮಸ್ಯೆ ಮತ್ತು ಸವಾಲುಗಳೇನು ಎಂಬ ನಿಟ್ಟಿನಲ್ಲಿ ಹೆಜ್ಜೆಯನ್ನೂ ಇಡಬೇಕಾಗಿದೆ. ಸಮಾಜದಲ್ಲಿರುವ ಜಡ ವ್ಯವಸ್ಥೆಗೆ ಕೊಡಲಿ ಪೆಟ್ಟನ್ನು ನೀಡಿ, ಜೀವನಾದರ್ಶನಗಳನ್ನು ಎತ್ತಿಹಿಡಿಯಬೇಕಾಗಿದೆ.

ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸಿ, ತುಳಿತಕ್ಕೆ ಒಳಗಾದ ಸಮುದಾಯಗಳಲ್ಲಿ ಜಾಗೃತಿ ಮೂಡಿಸಿ, ಸಮಾಜದ ಮುಂಚೂಣಿಗೆ ತರಬೇಕೆಂಬ ಉದ್ದೇಶವನ್ನು ಆಧಾರವಾಗಿಟ್ಟುಕೊಂಡು ರಚನೆಯಾಗಿರುವ ಈ ಮಠಗಳು ಸಾಮಾನ್ಯರ ಹಕ್ಕುಗಳನ್ನು ಕಾಯುವ ಕೆಲಸ ಮಾಡಬೇಕಾಗಿದೆ. ಹಾಗೆಯೇ ಮಾನಸಿಕವಾಗಿ ಶತಶತಮಾನಗಳಿಂದಲೂ ನೊಂದಿರುವ ಈ ಸಮುದಾಯಗಳಿಗೆ ನೈತಿಕ ಸ್ಥೈರ್ಯವನ್ನು ತುಂಬುವ ನಿಟ್ಟಿನಲ್ಲಿ ಕೆಲಸ ಮಾಡಬೇಕಾಗಿದೆ. ಆಚರಣೆಯಲ್ಲಿ ಮಾತ್ರ ಬಸವಣ್ಣನ ಸಿದ್ಧಾಂತಗಳನ್ನು ಬಳಸಿಕೊಂಡು, ಅನುಷ್ಠಾನದಲ್ಲಿ ವಿರುದ್ಧವಾಗಿ ನಡೆದುಕೊಂಡರೆ ಇದರಿಂದ ಯಾವುದೇ ಪ್ರಯೋಜನವಿಲ್ಲ. ಕೆಲವು ಸಮುದಾಯದ ಮಠಗಳು ಈ ನಿಟ್ಟಿನಲ್ಲಿ ಮುನ್ನಡೆದು ತನ್ನ ಸಮುದಾಯದಲ್ಲಿ ಜಾಗೃತಿ ಮೂಡಿಸಲು ಶ್ರಮಿಸುತ್ತಿವೆ. ಆದರೆ ಕೆಲವು ಮಠಗಳಿಗೆ ಸಂಪನ್ಮೂಲದ ಕೊರತೆಯಿಂದಾಗಿ ಹಲವಾರು ಸಂಕಷ್ಟಗಳನ್ನು ಎದುರಿಸುತ್ತಿರುವುದನ್ನು ನಾವು ಕರ್ನಾಟಕದ ಸಂದರ್ಭದಲ್ಲಿ ಗುರುತಿಸಬಹುದಾಗಿದೆ.

ಇಂತಹ ಒಂದು ಅಧ್ಯಯನದಿಂದ ರಾಜ್ಯದಲ್ಲಿರುವ ಅಲಕ್ಷಿತ ಸಮುದಾಯಗಳು ಸಾಂಸ್ಕೃತಿಕ ಮತ್ತು ಧಾರ್ಮಿಕ ಹಾಗೂ ಸಂಪ್ರದಾಯದ ಅನನ್ಯತೆಯ ಕುರಿತಾಗಿ ಸಮುದಾಯ ಮತ್ತು ಮಠಾಧೀಶರ ಕರ್ತವ್ಯ ಹಾಗೂ ಜವಾಬ್ದಾರಿಗಳ ಮೇಲೆ ಬೆಳಕು ಚೆಲ್ಲಿದಂತಾಗುತ್ತದೆ. ಜೊತೆಗೆ ಮುಂದಿನ ಅಲಕ್ಷಿತ ಸಮುದಾಯದ ಮಠಗಳ ಸವಾಲುಗಳು ಮತ್ತು ಪರಿಹಾರ ಮಾರ್ಗಗಳನ್ನು ಸ್ವತಂತ್ರವಾಗಿ ಚರ್ಚಿಸುವುದರ ಜೊತೆಗೆ ಅಲಕ್ಷಿತ ಸಮುದಾಯಗಳಿಗೆ ತಿಳುವಳಿಕೆ, ಐಕ್ಯತೆ, ಒಗ್ಗಟ್ಟು, ಧಾರ್ಮಿಕ ಮನೋಭಾವನೆ, ಅಸ್ತಿತ್ವದ ಪ್ರಶ್ನೆಗಳ ಮೂಲಕ ಜಾಗೃತಿಯನ್ನು ಮೂಡಿಸುವುದಾಗಿದೆ.

ಈ ಅಲಕ್ಷಿತರ ಪಾರಂಪರಿಕ ಕಲೆ ಮತ್ತು ಕುಲಕಸುಬುಗಳನ್ನು ಪ್ರಸ್ತುತ ಸಂದರ್ಭ ಮತ್ತು ಗ್ರಾಹಕನ ಅಭಿರುಚಿಗೆ ತಕ್ಕಂತೆ ಪರಿವರ್ತಿಸಿಕೊಂಡು ಪಾರಂಪರಿಕ ಕಸುಬಿನ ಪೇಟೆಂಟ್ ಹಕ್ಕನ್ನು ತನ್ನದಾಗಿಸಿಕೊಳ್ಳುವ ಉದ್ಯಮಶೀಲತೆಯನ್ನು ಬೆಳೆಸಿಕೊಳ್ಳಬೇಕಿದೆ. ಈ ಸಮಾಜದಲ್ಲಿ ಉತ್ತಮ ಸ್ಥಾನದ ಪದಗ್ರಹಣಕ್ಕೆ ಸಜ್ಜಾಗುವ ಅಲಕ್ಷಿತ, ತನ್ನ ಸಮುದಾಯದಲ್ಲಿ ರೂಢಿಯಲ್ಲಿರುವ ಅನಿಷ್ಟ ಪದ್ಧತಿಗಳಿಂದ ಮುಕ್ತನಾಗುವ ಸಂಕಲ್ಪವನ್ನು ಮಾಡಬೇಕಿದೆ. ವರ್ತಮಾನದ ಶಕ್ತಿರಾಜಕಾರಣದ ಭಾಗವಾಗಿ ಅಪವ್ಯಯವಾಗುವ ಅಲಕ್ಷಿತರ ಶಕ್ತಿಯ ಬಳಕೆ ನಿಲ್ಲಬೇಕಿದೆ. ಅಲಕ್ಷಿತರೇ ರಾಜಕಾರಣದ ಶಕ್ತಿಯಾಗಿ ರೂಪುಗೊಳ್ಳುವುದು ಅವಶ್ಯವಿದೆ. ಜಾಗತೀಕರಣದ ಪ್ರಭಾವ ಅಲಕ್ಷಿತರ ದೈವಾರಾಧನೆ ಮತ್ತು ಆಹಾರ ಸಂಸ್ಕೃತಿಯ ಮೇಲಾಗುತ್ತಿರುವುದನ್ನು ಅಸ್ಮಿತೆಯ ದೃಷ್ಟಿಯಿಂದ ಉಳಿಸಿಕೊಳ್ಳಬೇಕಿದೆ. ಮೌಢ್ಯತೆಯಿಂದ ಯಾವುದೋ ಭ್ರಮೆಗೊಳಗಾಗಿ

ಅಲಕ್ಷಿತ ಸಮುದಾಯಗಳ ಅನೇಕ ಕುಟುಂಬಗಳು ಮತಾಂತರ ಹೊಂದುವುದನ್ನು ನಿಯಂತ್ರಿಸುವುದು ಅಲಕ್ಷಿತರ ಈ ಮಠಗಳ ಬಹುದೊಡ್ಡ ಜವಾಬ್ದಾರಿಯಾಗಿದೆ. ತನ್ನ ಸಮುದಾಯ ಮುಂದೊಂದು ಕಾಲದಲ್ಲಿ ಮತ್ತೆ ಮತ್ತೆ ಒಳಸಮುದಾಯಗಳ ಮಠಗಳಾಗಿ ಛಿದ್ರವಾಗುವಿಕೆಯ ಅಪಾಯವನ್ನು ಯೋಚಿಸಿ ಆ ಕುರಿತು ಇಂದೇ ಈ ಭಿನ್ನತೆಯನ್ನು ಹೋಗಲಾಡಿಸುವ, ಪರಿಹಾರವನ್ನು ಕಂಡುಕೊಂಡು ಇಡೀ ಸಮುದಾಯವನ್ನು ಏಕೀಕರಣಗೊಳಿಸಿ ಕಟ್ಟಬೇಕಾದ ಜವಾಬ್ದಾರಿ ಈ ಮಠಗಳದ್ದಾಗಿದೆ. ತನ್ನ ಸಮುದಾಯದ ಸಾಂಸ್ಕೃತಿಕ ವೀರರ ಮತ್ತು ಮಹಾಪುರುಷರ ಜನ್ಮದಿನಾಚರಣೆ, ಜಾತ್ರೆ ಉತ್ಸವಗಳನ್ನು ಆಚರಿಸುವುದರಿಂದ ಮಾತ್ರ ಸಮುದಾಯದವರನ್ನು ಮಠಗಳೆಡೆಗೆ ಸೆಳೆದುಕೊಳ್ಳುವುದು ಸಾಧ್ಯವಾಗದು. ನೂರಾರು ವರ್ಷಗಳಿಂದ ತನ್ನದಲ್ಲದ ಮಠಗಳೊಂದಿಗೆ ಧಾರ್ಮಿಕ ಸಂಬಂಧವನ್ನಿರಿಸಿಕೊಂಡವರನ್ನು ತನ್ನ ವಾಹಿನಿಗೆ ಕರೆತರುವ ಸೂಕ್ಷ್ಮ ಜವಾಬ್ದಾರಿ ಮಠಗಳದ್ದಾಗಿದೆ. ಹಾಗಾಗಿ ಆತ್ಮವಿಶ್ವಾಸ ಮತ್ತು ನಂಬಿಕೆಯಿಂದ ಸಮುದಾಯದೊಂದಿಗೆ ತನ್ನ ಮಠ ಸಂಬಂಧವನ್ನು ಮುರಿದು ಕಟ್ಟುವ ಹರಿಕಾರನಾಗಿ ಅಲಕ್ಷಿತ ಸಮುದಾಯಗಳ ಮಠಾಧೀಶರು ನಿಲ್ಲಬೇಕಾಗಿದೆ. ಅಲಕ್ಷಿತ ಸಮುದಾಯದ ಎಲ್ಲಾ ಮಠಾಧೀಶರು ತಮ್ಮ ತಮ್ಮಲ್ಲಿಯೇ ಧಾರ್ಮಿಕ ಅಂತಸ್ತನ್ನು ಮರೆಯದೇ ತಾವೆಲ್ಲರೂ ಒಂದೆಂಬ ಭಾವನೆಯನ್ನು ತಾಳಿ ಇಡೀ ಅಲಕ್ಷಿತ ತಳಸಮುದಾಯಗಳನ್ನು ಒಂದುಗೂಡಿಸುವ ಮತ್ತು ಅವುಗಳ ಸಮಗ್ರ ಅಭಿವೃದ್ಧಿಯನ್ನು ಕುರಿತು ಯೋಚಿಸಬೇಕಾಗಿದೆ.

ಪ್ರಸ್ತುತದಲ್ಲಿ ಅಸ್ತಿತ್ವಕ್ಕೆ ಬಂದಿರುವ ಅನೇಕ ಅಲಕ್ಷಿತ ಸಮುದಾಯಗಳ ಮಠಗಳನ್ನೊಳಗೊಂಡಂತೆ ಈ ಸಮುದಾಯಗಳು ಪ್ರತಿನಿತ್ಯ ಒಂದಿಲ್ಲೊಂದು ಸಾಂಸ್ಕೃತಿಕ ಸಂಘರ್ಷಗಳನ್ನು ಎದುರಿಸುತ್ತಿವೆ. ಈ ಸಂಘರ್ಷಗಳು ತನ್ನ ಪಾರಂಪರಿಕ ಅನನ್ಯತೆಯನ್ನು ಉಳಿಸಿ ಬೆಳೆಸಿಕೊಂಡು ಬರುವ ಸಾಂಸ್ಕೃತಿಕ ಜವಾಬ್ದಾರಿ ಒಂದೆಡೆ ಇದ್ದರೆ, ಇನ್ನೊಂದೆಡೆ ಈ ಬೆಳವಣಿಗೆಯನ್ನು ಸಹಿಸಿಕೊಳ್ಳಲಾಗದ ಸಹ ಮಠಗಳ ಸಂಘರ್ಷಗಳನ್ನು ಎದುರಿಸುವುದು ಒಂದು ಸವಾಲಾಗಿದೆ. ಮೇಲ್ವರ್ಗದ ಸಾಂಸ್ಕೃತಿಕ ಆಚರಣೆಗಳ ಅಬ್ಬರದಲ್ಲಿ ತನ್ನ ಅನನ್ಯತೆಯನ್ನು ಕಳೆದುಕೊಳ್ಳುತ್ತಿರುವ ಅನೇಕ ಅಲಕ್ಷಿತ ಸಮುದಾಯಗಳು ಇಂದು ಈ ಮಠಗಳ ಮಾರ್ಗದರ್ಶನದಲ್ಲಿ ತನ್ನ ಪಾರಂಪರಿಕ ಆಚರಣೆಗಳನ್ನು ಮತ್ತು ನಂಬಿಕೆಯ ದೈವಗಳನ್ನು ಯಥಾಸ್ಥಿತಿಯಲ್ಲಿ ಉಳಿಸಿಕೊಳ್ಳುವುದು ಅವಶ್ಯ ಮತ್ತು ಅನಿವಾರ್ಯವಾಗಿದೆ. ಇಲ್ಲವಾದಲ್ಲಿ ಪ್ರಸ್ತುತ ಸಂದರ್ಭದಲ್ಲಿ ಮತಾಂತರದ ಗಾಳಿಯನ್ನು ಎಬ್ಬಿಸುತ್ತಿರುವ ಕ್ರಿಶ್ಚಿಯನ್ ಮತ್ತು ಇಸ್ಲಾಂ ಸಮುದಾಯಗಳ ಧರ್ಮಗಳ ಸುಳಿಗೆ ಅಲಕ್ಷಿತ ಸಮುದಾಯಗಳು ಮತಾಂತರ ಹೊಂದಿ ತನ್ನ ಪಿತ್ರಾರ್ಜಿತ ಪಾರಂಪರಿಕ ಸಂಸ್ಕೃತಿಯನ್ನು ಬಲಿಕೊಟ್ಟು ಮುಂದಿನ ಸಮುದಾಯಕ್ಕೆ ಅನ್ಯಧರ್ಮಿಯರ ಗುಲಾಮಗಿರಿಯಲ್ಲಿ ಬದುಕುವ ಕಾರಾಗೃಹದ ಪರಿಸರವನ್ನು ನಿರ್ಮಿಸಬಹುದಾಗಿದೆ.

ಪ್ರಸ್ತುತ ಅಧ್ಯಯನದ ಪ್ರಮುಖ ಉದ್ದೇಶಗಳನ್ನು ವರ್ತಮಾನದ ತಲ್ಲಣಗಳೊಂದಿಗೆ ಸಮೀಕರಿಸಿಕೊಂಡು ಇಂದು ಸ್ಥಾಪನೆಯಾಗಿರುವ ಹಾಗೂ ಸ್ಥಾಪಿತಗೊಂಡು ಅಸ್ತಿತ್ವದಲ್ಲಿರುವ ಅಲಕ್ಷಿತ ಮಠಗಳ ಕಾರ್ಯವಿಧಾನವನ್ನು ಗುರುತಿಸುವುದು ಇಲ್ಲಿಯ ಪ್ರಮುಖ ಉದ್ದೇಶವಾಗಿದೆ. ಹಾಗೆಯೇ ಈ ಅಧ್ಯಯನವು ಸಮಕಾಲೀನ ಸಂದರ್ಭದಲ್ಲಿ ಕಾರ್ಯಪ್ರವೃತ್ತವಾಗಿರುವ ಅಲಕ್ಷಿತ ಮಠಗಳಿಂದ ಅಲಕ್ಷಿತ ಸಮುದಾಯದ ಜನತೆಗೆ ಹೇಗೆ ಸ್ಪಂದಿಸುತ್ತಿವೆ ಎಂಬುದನ್ನು ಚರ್ಚಿಸಲಾಗಿದೆ.

ಮಠಕ್ಕೆ ಸಮುದಾಯವನ್ನು ಮುನ್ನಡೆಸುವ ಒಬ್ಬ ನೇತಾರ ಬೇಕೆಂಬುದು ತಪ್ಪಲ್ಲ. ಆದರೆ ಆ ನೇತಾರನಿಗೆ ಸಮುದಾಯದ ಏಳಿಗೆಯೇ ಮುಖ್ಯ ಕಾಳಜಿಯಾಗಿರಬೇಕಾಗುತ್ತದೆ. ಮತ್ತು ಆ ಮುಖಂಡ ಜನಸಾಮಾನ್ಯರಂತೆಯೇ ಸರಳ ಜೀವನ ನಡೆಸುವ ಮತ್ತು ಜನರೊಟ್ಟಿಗೆ ಬೆರೆತು ಅವರ ಸಮಸ್ಯೆಗಳಿಗೆ ಸ್ಪಂದಿಸುವ ರೀತಿಯಲ್ಲಿರಬೇಕು. ಅಂದಾಗ ಮಾತ್ರ ಈ ಅಲಕ್ಷಿತ ಮಠಗಳ ಅಸ್ತಿತ್ವಕ್ಕೊಂದು ಮಹತ್ವವಿರುತ್ತದೆ.

ಮಠಗಳ ಪರಂಪರೆಯು ಭಾರತದಲ್ಲಿ ವಿವಿಧ ನೆಲೆಗಳಿಂದ ಬೆಳೆದುಬಂದಿರುವ ಬಗೆಯನ್ನು ಗುರುತಿಸಲಾಗಿದೆ. ಈ ಅಧ್ಯಯನದಲ್ಲಿ ಒಟ್ಟಾರೆಯಾಗಿ ಮಠಗಳು ಪ್ರತಿಯೊಂದು ಸಮುದಾಯದಲ್ಲಿ ಬೆಳೆದು ಬಂದಿರುವ ವಿವಿಧ ಮಠಗಳನ್ನು ಕೇಂದ್ರವಾಗಿಟ್ಟುಕೊಂಡು ಅಧ್ಯಯನವನ್ನು ಕೈಗೊಳ್ಳಲಾಗಿದೆ. ಇದರಿಂದಾಗಿ ಪ್ರಸ್ತುತ ಸಂದರ್ಭದಲ್ಲಿ ಮಠಗಳ ಅರ್ಥ. ಮಠ ಪರಿಕಲ್ಪನೆಯ ಬಗ್ಗೆ ಜನಪದರು ಹೊಂದಿರುವ ನಂಬಿಕೆಗಳನ್ನು ವಿವರಣೆಗೆ ಒಳಪಡಿಸಿಲಾಗಿದೆ. ಹಾಗೆಯೇ ಮಠಗಳನ್ನು ಕುರಿತು ಜನಪದರು ಸೃಷ್ಟಿಸಿರುವ ಕಾವ್ಯಗಳಲ್ಲಿ ಕಂಡುಬರುವ ತಾತ್ವಿಕ ದೃಷ್ಟಿಕೋನಗಳನ್ನು ಇಲ್ಲಿನ ಸಂಶೋಧನಾ ವಿಷಯಕ್ಕೆ ಪೂರಕವಾದ ನೆಲೆಯಲ್ಲಿ ಬಳಸಿಕೊಳ್ಳಲಾಗಿದೆ.

ಮಠಗಳ ಸ್ಥಾಪನೆಗೆ ಕಾರಣ ಹಾಗೂ ಇವುಗಳ ಸ್ಥಾಪನೆಗೆ ಪ್ರೇರಕವಾದ ಪ್ರಮುಖ ಅಂಶಗಳನ್ನು ಗುರುತಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ನಮ್ಮ ಸಮಾಜದಲ್ಲಿ ಕಂಡುಬರುವಂತಹ ಪ್ರತಿಯೊಂದು ಮಠಗಳು ಕೂಡ ತನ್ನದೇ ಆದ ಗುರಿ ಮತ್ತು ಉದ್ದೇಶಗಳನ್ನು ಆಧಾರವಾಗಿಟ್ಟುಕೊಂಡು ಜನಸಮುದಾಯದ ನಡುವೆ ಬೆಳೆದುಬಂದಿರುವುದು ಕಂಡುಬರುತ್ತದೆ. ಆದ್ದರಿಂದ ಇವುಗಳ ಬೆಳವಣಿಗೆಗೆ ಕಾರಣವಾದ ಅಂಶಗಳನ್ನು ನಿರ್ದಿಷ್ಟವಾಗಿ ಗುರುತಿಸಲಾಗಿದೆ.

ಕರ್ನಾಟಕದಲ್ಲಿ ಕಂಡುಬರುವಂತಹ ಅಲಕ್ಷಿತ ಮಠಗಳನ್ನು ಗುರುತಿಸಿಕೊಂಡು ಅವುಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ಸಂಕ್ಷಿಪ್ತವಾಗಿ ಪರಿಚಯಿಸಲಾಗಿದೆ. ಇಲ್ಲಿ ಕಂಡುಬರುವಂತಹ ಪ್ರಮುಖ ಅಲಕ್ಷಿತ ಮಠಗಳಾದ ಮಾದಿಗ ಸಮುದಾಯವನ್ನು ಪ್ರತಿನಿಧಿಸುವ ಶ್ರೀ ಮಾದಾರ ಚನ್ನಯ್ಯ ಗುರುಪೀಠ, ಮಡಿವಾಳ ಸಮುದಾಯವನ್ನು ಪ್ರತಿನಿಧಿಸುವ ಶ್ರೀ ಮಾಚಿದೇವ ಗುರುಪೀಠ,

ಗೊಲ್ಲ ಸಮುದಾಯವನ್ನು ಪ್ರತಿನಿಧಿಸುವ ಶ್ರೀಯಾದವ ಗುರುಪೀಠ, ನಾಯಕ ಸಮುದಾಯವನ್ನು ಪ್ರತಿನಿಧಿಸುವ ಶ್ರೀ ವಾಲ್ಮೀಕಿ ಗುರುಪೀಠ, ಉಪ್ಪಾರ ಸಮುದಾಯವನ್ನು ಪ್ರತಿನಿಧಿಸುವ ಶ್ರೀ ಭಗೀರಥ ಗುರುಪೀಠ, ಲಂಬಾಣಿ ಸಮುದಾಯವನ್ನು ಪ್ರತಿನಿಧಿಸುವ ಶ್ರೀ ಸೇವಾಲಾಲ ಗುರುಪೀಠ ಹಾಗೂ ಇತರೆ ಅಲಕ್ಷಿತ ಗುರುಪೀಠಗಳ ಮಠಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ಪರಿಚಯಾತ್ಮಕವಾಗಿ ಗುರುತಿಸಲಾಗಿದೆ.

ಪ್ರಸ್ತುತ ದಿನಮಾನಗಳಲ್ಲಿ ಅಲಕ್ಷಿತ ಸಮುದಾಯಗಳನ್ನು ಪ್ರತಿನಿಧಿಸುವ ನೆಲೆಯಲ್ಲಿ ರೂಪ ತಳೆದಿರುವ ಅಲಕ್ಷಿತ ಮಠಗಳು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಸವಾಲುಗಳನ್ನು ಕುರಿತು ಇಲ್ಲಿ ಚರ್ಚೆಗೆ ಗುರಿಪಡಿಸಲಾಗಿದೆ. ಈ ಸಂದರ್ಭದಲ್ಲಿ ಈ ಪೀಠಾಧ್ಯಕ್ಷರು ಬೆಳೆದು ಬಂದಿರುವ ಹಾಗೂ ಅವರನ್ನು ಸಿದ್ಧಗೊಳಿಸುವ ಹಿಂದಿನ ಮನೋಧೋರಣೆಗಳನ್ನೆ ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಈ ಗುರುಪೀಠದ ಕಾರ್ಯವೈಖರಿಗಳು ಅಲಕ್ಷಿತ ಸಮುದಾಯದ ಜನತೆಗೆ ಹೇಗೆ ಸ್ಪಂದಿಸುತ್ತಿವೆ, ಇದರಿಂದ ಜನತೆಗೆ ಯಾವ ರೀತಿಯ ಪ್ರಯೋಜನಗಳಾಗುತ್ತಿವೆ ಎಂಬ ಅಂಶಗಳನ್ನು ವಿವರಣೆಗೆ ಒಳಪಡಿಸಲಾಗಿದೆ. ಹಾಗೆಯೇ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ಸಮುದಾಯವನ್ನು ನಂಬಿಕೊಂಡು ಸ್ಥಾಪನೆಯಾಗಿರುವ ಈ ಅಲಕ್ಷಿತ ಮಠಗಳು ಎದುರಿಸುತ್ತಿರುವ ಸಮಸ್ಯೆ ಮತ್ತು ಸವಾಲುಗಳ ಕುರಿತಾಗಿದೆ.

ಅಧ್ಯಯನದ ಫಲಿತಗಳು

೧. ಮಠಗಳಿಗೆ ಸ್ಥಳ ಮತ್ತು ಆದಾಯ ಮೂಲದ ಕೊರತೆ.

೨. ಮಠಗಳಿಗೆ ಹಣಕಾಸಿನ ಕೊರತೆ ಕಂಡು ಬಂದಿದೆ.

೩. ಅಲಕ್ಷಿತ ಸಮುದಾಯದ ಕೆಲವು ಮಠಗಳು ಮುಂದುವರೆದ ಸಮುದಾಯದ ಮಠಗಳ ಕಪಿಮುಷ್ಠಿಯಲ್ಲಿವೆ.

೪. ಜಾತಿಯ ಶೋಷಣೆ ಮಠಾಧೀಶರನ್ನು ಬಿಟ್ಟಿಲ್ಲ.

೫. ಮಠಾಧೀಶರ ಐಶರಾಮಿ ಬದುಕಿನಿಂದ ಮಠಗಳು ಹಿಂದುಳಿಯಲು ಕಾರಣವಾಗಿದೆ ಎಂದು ತಿಳಿದು ಬಂದಿದೆ.

೬. ಸರ್ಕಾರದ ಅನುದಾನ ಸಕಾಲದಲ್ಲಿ ದೊರಕದೇ ಇರುವುದು ಕಂಡುಬರುತ್ತದೆ.

೭. ಅನಿಷ್ಠ ಪದ್ಧತಿ ನಿವಾರಿಸುವಲ್ಲಿ ಮಠಗಳ ವಿಫಲವಾಗಿವೆ.

೮. ಮಠಾಧೀಶರಲ್ಲಿ ಬೌದ್ಧಿಕ ಪ್ರಬುದ್ಧತೆಯ ಕೊರತೆ ಕಂಡುಬರುತ್ತದೆ.

೯. ಸರ್ಕಾರದ ದಿವ್ಯ ನಿರ್ಲಕ್ಷ್ಯಕ್ಕೆ ಒಳಗಾದ ಕೆಲವು ಮಠಗಳು.

೧೦. ಅಲಕ್ಷಿತ ಸಮುದಾಯದ ಮಠಾಧೀಶರ ಮಾತುಗಳನ್ನು ನಿರ್ಲಕ್ಷ್ಯ ಮಾಡುತ್ತಿರುವ ಜನಪ್ರತಿನಿಧಿಗಳು.

೧೧. ಅಲಕ್ಷಿತ ಸಮುದಾಯಗಳ ಮಠಾಧೀಶರಲ್ಲಿ ಐಕ್ಯತೆಯ ಕೊರತೆ ಅಧ್ಯಯನದಿಂದ ಕಂಡುಬಂದಿದೆ.

೧೨. ಕೆಲವು ಮಠಾಧೀಶರು ಮಠಕ್ಕಿಂತ ಮನೆ ಮುಖ್ಯ ಎಂದು ತಿಳಿದು ಸ್ವಾರ್ಥಕ್ಕೆ ಸಮುದಾಯಗಳನ್ನು ಬಳಸಿಕೊಳ್ಳುತ್ತಿರುವುದು ಅಧ್ಯಯನದಲ್ಲಿ ತಿಳಿದುಕೊಳ್ಳಲಾಗಿದೆ.

೧೩. ವಾರ್ಷಿಕ ಲೆಕ್ಕಪತ್ರವಿಲ್ಲದೆ ನಡೆಯುತ್ತಿರುವ ಮಠಗಳು.

೧೪. ಅಲಕ್ಷಿತ ಸಮುದಾಯಗಳ ಕೆಲವು ಮಠಾಧೀಶರು ರಾಜಕಾರಣಿಗಳ ಕೈಗೊಂಬೆಯಾಗಿ ಕೆಲಸ ಮಾಡುತ್ತಿರುವುದು ಕಂಡುಬಂದಿದೆ.

೧೫. ಸಮುದಾಯಗಳಲ್ಲಿ ಇರುವ ಒಳಪಂಗಡಗಳ ಜಗಳಗಳಿಗೆ ಕೆಲವು ಮಠಾಧೀಶರು ಪ್ರೇರಕಶಕ್ತಿ ಯಾಗಿದ್ದಾರೆ.

೧೬. ಕುರುಬ ಮತ್ತು ಉಪ್ಪಾರ ಸಮುದಾಯಗಳ ಮಠಗಳ ಸಮುದಾಯಗಳ ಪ್ರಗತಿಗೆ ಶ್ರಮಿಸುತ್ತಿರುವುದು ಅಧ್ಯಯನದಿಂದ ಕಂಡುಬಂದಿದೆ.

೧೭. ಸಮುದಾಯದ ಬಗ್ಗೆ ಕಳಕಳಿ ಇರುವವರು ಮೂಲೆಗುಂಪು ಆಗಿರುವುದು ಅಧ್ಯಯನದಿಂದ ಕಂಡುಬಂದಿದೆ.

೧೮. ಮೌಢ್ಯತೆಯ ಪ್ರತೀಕವಾಗಿ ಮಠಾಧೀಶರು ತುಲಾಬಾರವನ್ನು ಮಾಡುವುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೧೯. ಮಠಗಳ ಮಠಾಧೀಶರಿಗೆ ಯಾವುದೇ ಸಮುದಾಯಕ್ಕೆ ಸಂಬಂಧಪಟ್ಟಂತೆ ಸಾಂಸ್ಕೃತಿಕ ಮಾಹಿತಿಗಳ ವಿಚಾರದ ಕೊರತೆ ಕಂಡುಬಂದಿದೆ.

ಅನುಬಂಧಗಳು

ಪರಾಮರ್ಶನ ಗ್ರಂಥಗಳು

ವಕ್ತೃಗಳ ವಿವರ

ಪರಾಮರ್ಶನ ಗ್ರಂಥಗಳು

೧. ಅನ್ನದಾನೀಶ್ವರ ಸ್ವಾಮಿಗಳು, ಶ್ರೀ ಶಿವಯೋಗಿ ಮಂದಿರ, ಶ್ರೀ ಜ.ಅನ್ನದಾನೀಶ್ವರ ಸಂಸ್ಥಾನ ಮಠ, ಮುಂಡರಗಿ.

೨. ಉಮಾಪತಿ ಬಿ.ಇ., ೧೯೭೯, 'ಪರಿಶಿಷ್ಟ ಬುಡಕಟ್ಟುಗಳು, ಜಾತಿಗಳು'(ಇದರಲ್ಲಿ ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ(ಸಂ:ಡಾ.ಹಾ.ಮಾ.ನಾಯಕ) ಮೈಸೂರು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.

೩. ಕವಲಿ.ಚೆ.ಎ., ೨೦೦೩, ಸಚಿತ್ರ ಕನ್ನಡ-ಕನ್ನಡ ಕಸ್ತೂರಿ ಕೋಶ, ಧಾರವಾಡ, ರಾಮಾಶ್ರಯ ಪಬ್ಲಿಕೇಷನ್ಸ್.

೪. ಕಿಕ್ಕೇರಿ ಹೊಯ್ಸಳಶರ್ಮ, ೧೯೮೭, ಸರಳಭಾರತ ಸಂವಿಧಾನ, ಬೆಂಗಳೂರು, ಶಾಸನವಾಣಿ ಪ್ರಕಾಶನ.

೫. ಗದ್ದಗಿಮಠ ಬಿ.ಎಸ್., ಗದ್ದಗಿಮಠರ ಬರಹಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೬. ಗದ್ದಗಿಮಠ ಬಿ.ಎಸ್., ೧೯೬೯, ಕನ್ನಡ ಜಾನಪದ ಗೀತೆಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೭. ಗುರುನಾಥ ಜೋಶಿ ಹಾಗೂ ಅಶ್ವತ್ಥನಾರಾಯಣ ಬಿ., ೨೦೦೬, ಕನ್ನಡ-ಕನ್ನಡ ಶಬ್ದಕೋಶ, ಹುಬ್ಬಳ್ಳಿ, ಸಂಕೇಶ್ವರ ಪ್ರಿಂಟರ್ಸ್ ಪ್ರೈವೇಟ್ ಲಿಮಿಟೆಡ್.

೮. ಗುರುಲಿಂಗಯ್ಯ ಎಂ., ೨೦೦೮, ಅಂಚಿನೀಕರಣ ಮತ್ತು ಅಂಚೀಕೃತ ಗುಂಪುಗಳು, ಮಂಗಳೂರು, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ.

೯. ಚಿದಾನಂದಮೂರ್ತಿ ಎಂ., ೧೯೭೯, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೧೦. ಜವಳಿ ಬಿ.ಸಿ., ೧೯೭೩, ಲಿಂಗಾಯತ ಧರ್ಮ ಸ್ಥಾಪಕರಾರು, ಸಮೀದಾನ ಗ್ರಂಥಮಾಲೆ, ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ.

೧೧. ಜವರಯ್ಯ ಮ.ನ., ವಚನವಾಹಿನಿ-೧, ಗದಗ ವೀರಶೈವ ಅಧ್ಯಯನ ಸಂಸ್ಥೆ.

೧೨. ತಿಪ್ಪೇರುದ್ರಸ್ವಾಮಿ ಎಚ್.ಎಂ., ೧೯೬೪, ಪ್ರಸಾದ, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲಾ, ಮೈಸೂರು.

೧೩. ನಾಗೇಗೌಡ ಎಚ್.ಎಲ್., ೧೯೭೯, ವೆರಿಯರ್ ಎಲ್ವಿನ್‌ರ ಗಿರಿಜನ ಪ್ರಪಂಚ, ಬೆಂಗಳೂರು, ಸಾಹಿತ್ಯ ಸದನ.

೧೪. ನಾಯಕ ಹಾ.ಮಾ.(ಸಂ), ೧೯೭೩, ಕನ್ನಡ ವಿಶ್ವಕೋಶ, ಸಂಪುಟ.೬, ಮೈಸೂರು. ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ.

೧೫. ನಾಗಯ್ಯ ಜೆ.ಎಂ., ೧೯೯೨, ಆರನೆಯ ವಿಕ್ರಮಾದಿತ್ಯನ ಶಾಸನಗಳು, ವೀರಶೈವ ಅಧ್ಯಯನ ಅಕಾಡೆಮಿ, ನಾಗನೂರು, ರುದ್ರಾಕ್ಷಿಮಠ, ಬೆಳಗಾವಿ

೧೬. ನಿರಂಜನ(ಸಂ), ೧೯೭೦, ಜ್ಞಾನಗಂಗೋತ್ರಿ ಮನುಕುಲದ ಕಥೆ, ಬೆಂಗಳೂರು, ಕರ್ಣಾಟಕ ಸಹಕಾರಿ ಪ್ರಕಾಶನ ಮಂದಿರ.

೧೭. ಪ್ರಭುಶಂಕರ, ಭಾ.ವೇ.ಶ್ರೀಧರ., ೨೦೦೬, ಕನ್ನಡ-ಇಂಗ್ಲಿಷ್ ನಿಘಂಟು, ಬೆಂಗಳೂರು, ಅಭಿನವ.

೧೮. ಬಸವರಾಜು ಎಲ್., ಅಲ್ಲಮನ ವಚನಗಳು, ಮೈಸೂರು ಗೀತಾ ಬುಕ್ ಹೌಸ್.

೧೯. ಬಸವರಾಧ್ಯ ಎನ್., ೧೯೯೩, ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು(ಸಂಪುಟ ಏಳು), ಬೆಂಗಳೂರು, ಕನ್ನಡ ಸಾಹಿತ್ಯ ಪರಿಷತ್ತು.

೨೦. ಭೈರಪ್ಪ ಕೆ., ೧೯೯೪, ಪಾಶ್ಚಿಮಾತ್ಯ ಹಾಗೂ ಭಾರತೀಯ ಚಿಂತನೆ, ಬೆಂಗಳೂರು, ಎಸ್.ಬಿ.ಎಸ್.ಡಿಸ್ಟ್ರಿಬ್ಯೂಟರ್ಸ್.

೨೧. ಮಂಜುನಾಥ ಬೇವಿನಕಟ್ಟಿ, ೨೦೦೯, ವಾಲ್ಮೀಕಿ ಸಮುದಾಯ, ವಿದ್ಯಾರಣ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೨. ಮಂಜುನಾಥ ಬೇವಿನಕಟ್ಟಿ, ೨೦೦೯, ಸಾಂಸ್ಕೃತಿಕ ಅನನ್ಯತೆ ಮತ್ತು ಹಲಗಲಿ ಬಂಡಾಯ, ವಿದ್ಯಾರಣ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೩. ಮಂಜುನಾಥ ಬೇವಿನಕಟ್ಟಿ, ೨೦೧೬, ತಳಾದಿ, ಬೆಂಗಳೂರು, ಅರುಣ್ ಪ್ರಕಾಶನ.

೨೪. ಮಂಜುನಾಥ ಬೇವಿನಕಟ್ಟಿ, ೨೦೧೬, ಜನ ಜಾನಪದ, ಕಮಲಾಪುರ, ಗೌತಮ್ ಬುಕ್‌ಹೌಸ್, ಅರುಣ್ ಪ್ರಕಾಶನ.

೨೫. ಮಹಾದೇವಯ್ಯ ಟಿ.ಆರ್. (ಲೇ), ೧೯೮೧, ದಾಸೋಹಸಿರಿ(ಸಂಪಾದನೆ ಎರಿಸೀಮೆ ಚೆನ್ನಪ್ಪ ಮತ್ತು ಟಿ.ಆರ್.ಮಹಾದೇವಯ್ಯ), ಶ್ರೀಸಿದ್ಧಗಂಗಾ ಶ್ರೀ ಹಳೇ ವಿದ್ಯಾರ್ಥಿಗಳ ಸಂಘ, ಕ್ಷೇತ್ರ ತುಮಕೂರು.

೨೬. ಮುಗಳಿ ರಂ.ಶ್ರೀ, ಕನ್ನಡ ಸಾಹಿತ್ಯ ಚರಿತ್ರೆ

೨೭. ಮೈತ್ರಿ ಕೆ.ಎಂ., ೨೦೦೨, ಬುಡಕಟ್ಟು ಕುಲಕಸುಬುಗಳು, ವಿದ್ಯಾರಣ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೮. ರಾಮಚಂದ್ರರಾವ್; ದಾಸಸಾಹಿತ್ಯ ಮತ್ತು ಸಂಸ್ಕೃತಿ, ಬೆಂಗಳೂರು, ಬೆಂಗಳೂರು ವಿಶ್ವವಿದ್ಯಾಲಯ.

೨೯. ಲಕ್ಷ್ಮಣ್ ತೆಲಗಾವಿ, ೧೯೯೯, ಹಿಂದುಳಿದ ವರ್ಗಗಳು ಮತ್ತು ದಲಿತ ಚಳುವಳಿಗಳು, ವಿದ್ಯಾರಣ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೦. ಲಿಂಗಯ್ಯ ಸ; ೧೯೯೯, ವಾಲ್ಮೀಕಿ ಗುರುಪೀಠ(ಇದರಲ್ಲಿ: ಭಗೀರಥ ಸಂಕಲ್ಪ(ಸಂ), ಕಮಲೇಶ್ ಕೆ.ಆರ್), ಕುಷ್ಟಗಿ, ಶ್ರೀ ಭಗೀರಥ ಉಪ್ಪಾರ ಧಾರ್ಮಿಕ ಟ್ರಸ್ಟ್, ಬೆಂಗಳೂರು ಮತ್ತು ರಾಜಋಷಿ ಭಗೀರಥ ಜಯಂತಿ ಉತ್ಸವ ಸಮಿತಿ, ಕುಷ್ಟಗಿ.

೩೧. ವಿದ್ಯಾಶಂಕರ ಎಸ್., ೨೦೦೮, ಕೆಳದಿ ಅರಸರು ಮತ್ತು ವೀರಶೈವ ಮಠಗಳು (ಇದರಲ್ಲಿ: ಮಹಾಮಹತ್ತಿನ ಮಠಗಳು(ಸಂ) ಜಯದೇವಪ್ಪ ಜೈನಕೇರಿ ಮತ್ತು ಡಾ.ಜಗದೀಶ). ಕೌಲೇದುರ್ಗ ಮರುಳಸಿದ್ದೇಶ್ವರ ವೀರಶೈವ ಅಧ್ಯಯನ ಕೇಂದ್ರ.

೩೨. ವೆಂಕಟೇಶಮೂರ್ತಿ ಎಚ್.ಎಸ್., ಕೀರ್ತನ ಸಾಹಿತ್ಯ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

೩೩. ವೆಂಕಟಸುಬ್ಬಯ್ಯ ಜಿ., ೨೦೦೬, ಪ್ರಿಸಮ್ ಕನ್ನಡ ಕ್ಲಿಷ್ಟ ಪದಕೋಶ, ಬೆಂಗಳೂರು, ಪ್ರಿಸಮ್ ಬುಕ್ಸ್ ಪ್ರೈ ಲಿ.

೩೪. ಶಿವರಾಮ ಕಾರಂತ ಕೆ., ೨೦೦೯, ಸಿರಿಗನ್ನಡ ಅರ್ಥಕೋಶ, ಬೆಂಗಳೂರು, ಸಪ್ನಬುಕ್‌ಹೌಸ್.

೩೫. ಶ್ರೀಧರ್ ಎಂ.ಕೆ. ಡಾ., ೨೦೧೧, ಸಂಕ್ಷಿಪ್ತ ಕನ್ನಡ–ಇಂಗ್ಲಿಷ್ ನಿಘಂಟು, ಬೆಂಗಳೂರು, ಕನ್ನಡ ಸಾಹಿತ್ಯ ಪರಿಷತ್ತು.

೩೬. ಶ್ರೀನಿವಾಸರಾವ್.ಎಸ್.ವಿ., ೧೯೯೯, ಬ್ರಾಹ್ಮಣ ಮಠಗಳು (ಇದರಲ್ಲಿ; ಭಗೀರಥ ಸಂಕಲ್ಪ, ಸಂ.ಕಮಲೇಶ್.ಕೆ.ಆರ್) ಕುಷ್ಟಗಿ. ಶ್ರೀ ಭಗೀರಥ ಉಪ್ಪಾರ ಧಾರ್ಮಿಕ ಟ್ರಸ್ಟ್ ಬೆಂಗಳೂರು ಮತ್ತು ರಾಜಋಷಿ ಭಗೀರಥ ಜಯಂತಿ ಉತ್ಸವ ಸಮಿತಿ, ಕುಷ್ಟಗಿ.

೩೭. ಶೇಷಗಿರಿರಾವ್ ಎಲ್.ಎಸ್., ೨೦೦೮, ಸುಭಾಷ್ ನಿಘಂಟು, ಬೆಂಗಳೂರು, ಸುಭಾಷ್ ಸ್ಟೋರ್ಸ್ ಬುಕ್ಸ್ ಕಾರ್ನರ್.

೩೮. ಸದಾಶಿವಯ್ಯ ಎಚ್.ಎಂ., ೧೯೮೪, ಅರ್ಚನ(ಸಂಪಾದನೆ: ಮಲ್ಲೇದೇವರು ಎಚ್.ಪಿ.), ಶ್ರೀ ಜ.ಶಿವರಾತ್ರಿ ರಾಜೇಂದ್ರಸ್ವಾಮಿಗಳ ಪಟ್ಟಾಧಿಕಾರ ಸುವರ್ಣ ಮಹೋತ್ಸವ ಸಮಿತಿ, ಮೈಸೂರು

೩೯. ಸಂತೆಬೆನ್ನೂರು ಸುಮತೀಂದ್ರನಾಡಿಗ್; ೨೦೦೮, ಮಧ್ಯ ಕರ್ನಾಟಕದ ಮಹತ್ತಿನ ಮಠಗಳು(ಇದರಲ್ಲಿ: ಮಹಾಮಹತ್ತಿನ ಮಠಗಳು(ಸಂ) ಜಯದೇವಪ್ಪ ಜೈನ್‌ಕೇರಿ ಮತ್ತು ಡಾ.ಜಗದೀಶ). ಕೌಲೇದುರ್ಗ ಮರುಳ ಸಿದ್ದೇಶ್ವರ ವೀರಶೈವ ಅಧ್ಯಯನ ಕೇಂದ್ರ.

೪೦. ಸಂತೆಬೆನ್ನೂರು ಸಮತೀಂದ್ರನಾಡಿಗ್; ೨೦೦೮, ಮಧ್ಯ ಕರ್ನಾಟಕದ ಮಹತ್ತಿನ ಮಠಗಳು(ಇದರಲ್ಲಿ ಮಹಾಮಹತ್ತಿನ ಮಠಗಳು(ಸಂ) ಜಯದೇವಪ್ಪ ಜೈನಕೇರಿ ಮತ್ತು ಜಗದೀಶ). ಮರುಳ ಸಿದ್ದೇಶ್ವರ ವೀರಶೈವ ಅಧ್ಯಯನ ಕೇಂದ್ರ ಕವಲೇದುರ್ಗ, ಶಿವಮೊಗ್ಗ.

೪೧. ಸಿದ್ಧಗಂಗಪ್ಪ ಎಚ್.ಎಸ್., ೨೦೦೮, ಜನಪದರು ಮತ್ತು ಮಹಾಮಹತ್ತಿನ ಮಠಗಳು(ಇದರಲ್ಲಿ: ಮಹಾಮಹತ್ತಿನ ಮಠಗಳು(ಸಂ) ಜಯದೇವಪ್ಪ ಜೈನಕೇರಿ ಮತ್ತು ಡಾ.ಜಗದೀಶ). ಕೌಲೇದುರ್ಗ ಮರುಳಸಿದ್ದೇಶ್ವರ ವೀರಶೈವ ಅಧ್ಯಯನ ಕೇಂದ್ರ.

೪೨. ಸುಗರ್ ಎ.ಕೆ. ಮತ್ತು ಇತರರು., ೨೦೦೭, ಕನ್ನಡ–ಕನ್ನಡ–ಇಂಗ್ಲಿಷ್ ಶಬ್ದಕೋಶ, ಧಾರವಾಡ, ರಾಮಾಶ್ರಯ ಪಬ್ಲಿಕೇಷನ್ಸ್.

೪೩. ಸೂರ್ಯನಾಥ್.ಯು.ಕಾಮತ್(ಪ್ರ.ಸಂ), ೧೯೮೪, ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಬೆಂಗಳೂರು, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ.

೪೪. ಹಿರೇಮಠ ಆರ್.ಸಿ.(ಸಂ)., ಗುಮ್ಮಳಾಪುರದ ಸಿದ್ಧಲಿಂಗೇಶ್ವರರ ಶೂನ್ಯ ಸಂಪಾದನೆ.

೪೫. ಹಿರೇಮಠ ಆರ್.ಸಿ(ಸಂ)., ೧೯೭೧, ಬಸವಪುರಾಣ, ಶ್ರೀ ನಿ.ಪ್ರಸ್ವ ಮಹಾಂತಸ್ವಾಮಿಗಳು, ಶ್ರೀಗುರು ಮೃತ್ಯುಂಜಯ ಸ್ವಾಮಿಗಳು, ಧಾರವಾಡ.

೪೬. ಹಿರೇಮಠ ಬಿ.ಕೆ., ೧೯೯೨, ಕನ್ನಡ ಹಸ್ತಪ್ರತಿಗಳು: ಒಂದು ಅಧ್ಯಯನ, ವೀರಶೈವ ಅಧ್ಯಯನ ವೇದಿಕೆ, ಹಿರೇಮಠ, ಕಸಬಾ, ಜಂಬಂಗಿ, ವಿಜಾಪುರ.

English Reference

1. Amartya Sen, 2004, Social Exclusion: Concept Application Security. New Delhi, Critical Quest.

2. Ambedkar B.R., 1947, Who are the sudras, how they come birth corner, in Hindu-Argons Society. Bombay. Thacker and co.

3. Basu Durga Das, 1999, Introduction to the Constitution of India, Nagpur, Washwa and company.

4. Debal K Singh Roy, 2001, Social-Development and Empowerment of marginalized Groyos, New Delhi, Sage Publishing House.

5. Engineer Arghar Ali, 1991, Mandal commission.

6. Giridhar Gomango, 1992, Constitutional Provisions for the scheduled castes and scheduled Tribes. Bombay. Himalaya.

7. Koravakin F., 1985, History of Ancient worls, Moscow, Progress Publishers.

8. Mahendra Singh, 2003, Dalits in India, New Delhi, Reference Press.

9. Misra P.K., Rajalakshmi C.R., Verghes 1, 1971, Nomads in the Mysore City, Calcutta. Anthropologycal Survey of India.

10. Parvathamma C., 1984, Now Scheduled Castes, New Delhi, Ashis Publications.

11. Paravatamma C., 1999, Reservation, A Pie in sky Hunsur Deed.

12. Ram Nandu, 1988, The Mobile Scheduled caste-Rise of a New Middle class. Delhi Hindustan publishing Corporation.

13. Singh K.S., 1993, The Scheduled caste(People of India Series). New Delhi. A Nandi Publications.

14. Sukant K. Choudhary, 2004, Tribal Identuty, New Delhi Rawat publications.

15. Thurston E., 1906, Ethnographic Notes on southern India. Madras. Government press.

ವಕ್ತೃಗಳ ವಿವರ

೧. ಶ್ರೀ ಪ್ರಸನ್ನಾನಂದಪುರಿ ಮಹಾಸ್ವಾಮಿಗಳು, ವಾಲ್ಮೀಕಿ ಗುರುಪೀಠ, ಪೀಠಾಧ್ಯಕ್ಷರು, ರಾಜನಹಳ್ಳಿ, ಹರಿಹರ(ತಾ), ದಾವಣಗೆರೆ ಜಿಲ್ಲೆ

೨. ಶ್ರೀವರದಾನಂದ ಮಹಾಸ್ವಾಮಿಗಳು, ಗೊಲಪಲ್ಲಿ ವಾಲ್ಮೀಕಿ ಶಾಖಾ ಮಠ, ಯಾದಗಿರಿ ಜಿಲ್ಲೆ.

೩. ಶ್ರೀ ಅಪ್ಪಯ್ಯ ಸ್ವಾಮಿಯವರು, ಹಿರೇಮನ್ನಾಪುರ ವಾಲ್ಮೀಕಿ ಶಾಖಾ ಮಠ, ಕೊಪ್ಪಳ ಜಿಲ್ಲೆ, ಕುಷ್ಟಗಿ(ತಾ).

೪. ಶ್ರೀ ಬಸವ ಸೇವಾಲಾಲ್ ಸರ್ದಾರ್ ಸ್ವಾಮೀಜಿ, ಪೀಠಾಧ್ಯಕ್ಷರು, ಬಂಜಾರ ಮಹಾಸಂಸ್ಥಾನ, ಚಿತ್ರದುರ್ಗ.

೫. ಶ್ರೀ ಬಸವಪ್ರಭು ಮಾದಾರ ಚನ್ನಯ್ಯ ಮಹಾಸ್ವಾಮಿಗಳು, ಪೀಠಾಧ್ಯಕ್ಷರು, ಮಾದಾರ ಚನ್ನಯ್ಯ ಮಹಾಸಂಸ್ಥಾನ, ಚಿತ್ರದುರ್ಗ.

೬. ಶ್ರೀ ಮಾರ್ಕಂಡೇಯ ಸ್ವಾಮಿಗಳು, ಪೀಠಾಧ್ಯಕ್ಷರು, ಆದಿಜಾಂಬವಮಠ, ಕೋಡಿಹಳ್ಳಿ, ಚಿತ್ರದುರ್ಗ ಜಿಲ್ಲೆ. ಹಿರಿಯೂರು ತಾಲೂಕು.

೭. ಶ್ರೀ ಕೃಷ್ಣಯಾದವಾನಂದ ಸ್ವಾಮಿಗಳು, ಪೀಠಾಧ್ಯಕ್ಷರು, ಯಾದವ ಗುರುಪೀಠ, ಚಿತ್ರದುರ್ಗ.

೮. ಶ್ರೀ ಸಿದ್ಧರಾಮೇಶ್ವರ ಸ್ವಾಮಿ, ಪೀಠಾಧ್ಯಕ್ಷರು, ಭೋವಿಗುರುಪೀಠ, ಚಿತ್ರದುರ್ಗ.

೯. ಶ್ರೀ ಬಸವನಾಗಿದೇವ ಸ್ವಾಮಿ, ಪೀಠಾಧ್ಯಕ್ಷರು, ಛಲವಾದಿಗುರುಪೀಠ, ಚಿತ್ರದುರ್ಗ.

೧೦. ಶ್ರೀ ಪುರುಷೋತ್ತಮಾನಂದ ಪುರಿ ಮಹಾಸ್ವಾಮಿಗಳು, ಪೀಠಾಧ್ಯಕ್ಷರು, ಚಿನ್ಮೂಲಾದ್ರಿ ಶಿಲಾಪುರಿ ಮಹಾಸಂಸ್ಥಾನ, ಭಗೀರಥ ಪೀಠ, ಚಿತ್ರದುರ್ಗ, ಹೊಸದುರ್ಗ ತಾಲೂಕು.

೧೧. ಶ್ರೀ ಬಸವ ಹರಳಯ್ಯ ಸ್ವಾಮಿಗಳು, ಪೀಠಾಧ್ಯಕ್ಷರು, ಶರಣ ಹರಳಯ್ಯ ಗುರುಪೀಠ, ಚಿತ್ರದುರ್ಗ.

೧೨. ಪೀಠಾಧ್ಯಕ್ಷರು, ಕಾಗಿನೆಲೆ ಕನಕ ಗುರುಪೀಠ, ಹಾವೇರಿ

೧೩. ತಿಂಥಿಣಿ ಕನಕ ಗುರುಪೀಠ, ಪೀಠಾಧ್ಯಕ್ಷರು, ಶ್ರೀ ವೀರೇಂದ್ರ ಕೇಶವ ಸ್ವಾಮಿಗಳು, ತಿಂಥಿಣಿ, ಯಾದಗಿರಿ.

ಕ್ರಸಂ.	ಹೆಸರು	ಊರು	ವಯಸ್ಸು	ಜಾತಿ	ವೃತ್ತಿ
೦೧.	ರಮೇಶ	ವಾಗೇನಗೇರ	೩೮	ಉಪ್ಪಾರ	ಗ್ರಾ.ಪಂ.ಸದಸ್ಯ
೦೨.	ಸೋಮರಾಯ	ವಾಗನಗೇರಾ	೬೬	ಉಪ್ಪಾರ	ಕೃಷಿ
೦೩.	ರಾಮಣ್ಣ	ಅಮ್ಮಾಪುರ	೫೫	ಉಪ್ಪಾರ	ಕೃಷಿ
೦೪.	ಕುಮಾರನಾಯ್ಕ	ಚನ್ನನಹಟ್ಟಿತಾಂಡ	೪೫	ಲಂಬಾಣಿ	ಕೃಷಿ
೦೫.	ವಸಂತಕುಮಾರ	ಹೊಳಲ್ಕೆರೆತಾಂಡ	೬೫	ಲಂಬಾಣಿ	ಕೃಷಿ
೦೬.	ಲಾಲಾನಾಯ್ಕ	ಚಿತ್ರದುರ್ಗ	೫೮	ಲಂಬಾಣಿ	ಶಿಕ್ಷಕ
೦೭.	ಜಗದೀಶನಾಯ್ಕ	ವಾಡಿಗರಹಟ್ಟಿ	೩೮	ಲಂಬಾಣಿ	ವ್ಯಾಪಾರಿ
೦೮.	ದೇವಪ್ಪ	ದೇವಪುರ	೫೩	ಕುರುಬ	ಒಕ್ಕಲುತನ
೦೯.	ಪರಮಣ್ಣ	ಕಕ್ಕೇರಿ	೩೫	ಕುರುಬ	ಒಕ್ಕಲುತನ
೧೦.	ಮಾರ್ಚಪ್ಪ	ಕಕ್ಕೇರಿ	೪೬	ಕುರುಬ	ಕೃಷಿ
೧೧.	ಶಿವಣ್ಣ	ಹರಳಹಳ್ಳಿ	೪೦	ಕುರುಬ	ಕುರಿಸಾಕಾಣಿಕೆ
೧೧.	ಈರಪ್ಪ ಕವಾಡಿಮಟ್ಟಿ	ಕವಾಡಿಮಟ್ಟಿ	೪೩	ಕುರುಬ	ಒಕ್ಕಲುತನ
೧೨.	ಮಾನಪ್ಪ ಕವಾಡಿಯಪ್ಪ	ಕವಾಡಿಮಟ್ಟಿ	೨೯	ಕುರುಬ	ಒಕ್ಕಲುತನ
೧೩.	ಸುರೇಶ	ಕವಾಡಿಮಟ್ಟಿ	೩೫	ಕುರುಬ	ಹೊಂಗಾರ್ಡ್
೧೪.	ಆನಂದ	ಕವಾಡಿಮಟ್ಟಿ	೨೮	ಕುರುಬ	ಒಕ್ಕಲುತನ
೧೫.	ಮೌನೇಶ ಶಾಂತಪುರ	ಶಾಂತಪುರ	೨೯	ಕುರುಬ	ಒಕ್ಕಲುತನ
೧೬.	ಶಿವಪ್ಪ	ತಿಂಥಿಣಿ	೪೬	ಕುರುಬ	ಕೃಷಿ
೧೭.	ಸೂಲಪ್ಪ	ಕಕ್ಕೇರಿ	೪೯	ಕುರುಬ	ಕಿರಾಣಿವ್ಯಾಪಾರಿ
೧೮.	ಗಂಗಾಧರನಾಯಕ	ತಿಂಥಿಣಿ	೪೬	ನಾಯಕ	ಗ್ರಂಥಪಾಲಕರು
೧೯.	ಚಂದ್ರಪ್ಪ	ಕಕ್ಕೇರಿ	೩೫	ನಾಯಕ	ಅತಿಥಿ ಉಪನ್ಯಾಸಕ
೨೦.	ರಾಜು ಹವಲ್ದಾರರು	ಕಕ್ಕೇರಿ	೪೦	ನಾಯಕ	ಪುರಸಭೆ ಅಧ್ಯಕ್ಷರು
೨೧.	ಸೋಮನಾಥ ನಾಯಕ	ಕುರುದುಂಟ	೩೮	ನಾಯಕ	ರಾಜಕಾರಣಿ

೨೨. ವೆಂಕಟೇಶ ಬೇರೆಗಾರ್	ಕೋಲಾಲ್	ನಾಯಕ	೪೦	ರಾಜಕಾರಣಿ
೨೩. ಹನುಮಂತರಾಯ	ಸುರಪುರ	ನಾಯಕ	೩೬	ಶಿಕ್ಷಕರು
೨೪. ರಾಮಾನಾಯಕ ಹರಳಹಳ್ಳಿ	ಹರಳಹಳ್ಳಿ	ನಾಯಕ	೩೭	ಉಪನ್ಯಾಸಕರು
೨೫. ಮಹಾಂತೇಶ	ಚಿತ್ರದುರ್ಗ	ಉಪ್ಪಾರ	೪೮	ವ್ಯವಸಾಯ
೨೬. ವಿಶ್ವನಾಥ ಸಿ.	ಹೊಸದುರ್ಗ	ಉಪ್ಪಾರ	೩೭	ಹೈನುಗಾರಿಕೆ
೨೭. ಲೋಕೇಶ	ಚಿತ್ರದುರ್ಗ	ಉಪ್ಪಾರ	೪೦	ಹೊಟೆಲ್ ಮಾಲಿಕ
೨೮. ಶಿವು	ಚಿತ್ರದುರ್ಗ	ಉಪ್ಪಾರ	೨೫	ವ್ಯಾಪಾರಿ
೨೯. ವೆಂಕಟೇಶ ಕೆ.	ಚಿತ್ರದುರ್ಗ	ಯಾದವ್	೩೨	ಮೆಕ್ಯಾನಿಕ್
೩೦. ಜಯಣ್ಣ ಕೆ.	ಹೊಸದುಗ	ಗೊಲ್ಲ	೩೫	ಉಪನ್ಯಾಸಕರು
೩೧. ರಂಗಸ್ವಾಮಿ	ಚಿತ್ರದುರ್ಗ	ಗೊಲ್ಲ	೪೦	ಒಕ್ಕಲುತನ
೩೨. ಈರಣ್ಣ	ಗೊಲ್ಲರಹಟ್ಟಿ	ಗೊಲ್ಲ	೬೫	ಒಕ್ಕಲುತನ
೩೩. ರಾಜಣ್ಣ	ಕ್ಯಾಸಾಪುರ	ಗೊಲ್ಲ	೫೬	ಒಕ್ಕಲುತನ
೩೪. ರಾಮಪ್ಪ ಟಿ.	ಹೊಸದುರ್ಗ	ಭೋವಿ	೩೩	ಕೂಲಿ
೩೫. ವೆಂಕಟೇಶ ಭೋವಿ	ಚಿತ್ರದುರ್ಗ	ವಡ್ಡರ	೩೨	ಗಾರೆಕೆಲಸ
೩೬. ಶ್ರೀನಿವಾಸ	ಹೊಳಲ್ಕೆರೆ	ವಡ್ಡರ	೩೫	ಬೇಕರಿ ಮಾಲೀಕರು
೩೭. ಕುಮಾರ ದಾಸಪ್ಪ	ದಾವಣಗೆರೆ	ವಡ್ಡರ	೩೫	ವ್ಯಾಪಾರಿ
೩೮. ನಾಗೇಂದ್ರಪ್ಪ	ಚಿತ್ರದುರ್ಗ	ಮಾದರ್	೫೫	ರಾಜಕಾರಣಿ
೩೯. ರಾಜಣ್ಣ ಹೆಚ್.	ಚಿತ್ರದುರ್ಗ	ಮಾದರ್	೫೪	ರಾಜಕಾರಣಿ
೪೦. ಹುಚ್ಚಂಗಿ	ಚಿತ್ರದುರ್ಗ	ಮಾದಿಗ	೬೭	ಕೂಲಿ
೪೧. ಪ್ರಸನ್ನ ಟಿ.	ಚಿತ್ರದುರ್ಗ	ಮಾದಿಗ	೩೨	ಶಿಕ್ಷಕರು
೪೨. ಮಂಜುನಾಥ ಎಂ.	ಹಿರಿಯೂರು	ಮಾದಿಗ	೪೨	ವ್ಯಾಪಾರಿ

ಜಾನಪದ ಅಧ್ಯಯನ ವಿಭಾಗ